ಆದಿಲಶಾಹಿ ಸಾಹಿತ್ಯ ಸಂಪುಟ : ೧೨

ಮುಹಮ್ಮದ್ ಇಬ್ರಾಹಿಮ್ ಜುಬೇರಿ ವಿರಚಿತ

ರೌಜತುಲ್ ಔಲಿಯಾಯೆ ಬಿಜಾಪುರ

BIJAPUR LIBERAL DISTRICT EDUCATIONAL ASSOCIATION
BIJAPUR
ESTD 1910

ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ. ಸಂಸ್ಥೆ, ವಿಜಯಪುರ

ಆದಿಲಶಾಹಿ ಸಾಹಿತ್ಯ ಸಂಪುಟ : ೧೨

ಮುಹಮ್ಮದ್ ಇಬ್ರಾಹಿಮ್ ಜುಬೇರಿ
ವಿರಚಿತ

ರೌಜತುಲ್ ಔಲಿಯಾಯೆ
ಬಿಜಾಪುರ

ಆದಿಲಶಾಹಿ ಸಾಹಿತ್ಯ ಸಂಪುಟ : ೧೨

ಮುಹಮ್ಮದ್ ಇಬ್ರಾಹಿಮ್ ಜುಬೇರಿ

ವಿರಚಿತ

ರೌಜತುಲ್ ಔಲಿಯಾಯೆ ಬಿಜಾಪುರ

ಅನುವಾದಕರು

ಡಾ. ಅಮೀರುದ್ದೀನ್ ಖಾಜಿ

ವಚನಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ. ಸಂಸ್ಥೆ, ವಿಜಯಪುರ

Ruozat- ul-Auliyaye Bijapur – Persian work of **Muhammad Ibrahim Zuberi**
Kannada Translation by – **Dr. Ameeruddin Qazi**

Published by : **Dr. P.G.Halakatti Research Centre,**
B.L.D.E. Association, Vijayapur, Karnataka

Edition : **2016**

Pages : **xxii + 362 = 394**

Copies : **1000**

Price : **Rs. 300.00**

Typeset : **Dr. P. G. Halakatti Research Centre,** Vijayapur

Printed : **Print Point,** Bengaluru. Mob : 9739067359

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆರ್ಥಿಕ ಅನುದಾನದ ನೆರವಿನಿಂದ ಈ ಪುಸ್ತಕ ಪ್ರಕಟವಾಗಿದೆ.

ರೌಜತುಲ್ ಔಲಿಯಾಯೆ ಬಿಜಾಪುರ : ಮುಹಮ್ಮದ ಇಬ್ರಾಹಿಮ್ ಜುಬೇರಿಯ ಪರ್ಶಿಯನ್ ಕೃತಿ
ಅನುವಾದಕರು : ಡಾ. ಅಮೀರುದ್ದೀನ್ ಖಾಜಿ

ಪ್ರಕಾಶಕರು : ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ,
ಬಿ.ಎಲ್.ಡಿ.ಇ. ಸಂಸ್ಥೆ, ವಿಜಯಪುರ

ಆವೃತ್ತಿ : ಪ್ರಥಮ ೨೦೧೬

ಪುಟಗಳು : xxii + ೩೬೨ = ೩೯೪

ಪ್ರತಿಗಳು : ೧೦೦೦

ಬೆಲೆ : ರೂ. ೩೦೦.೦೦

ಡಿ.ಟಿ.ಪಿ. : ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ, ವಿಜಯಪುರ

ಮುದ್ರಣ : ಪ್ರಿಂಟ್ ಪಾಯಿಂಟ್, ಬೆಂಗಳೂರು
ಮೊ. ೯೭೩೯೦೬೭೩೫೯

*

ಆದಿಲ್‌ಶಾಹಿ ಸಾಹಿತ್ಯ ಅನುವಾದ ಸಮಿತಿ

ಅಧ್ಯಕ್ಷರು

ಡಾ. ಎಂ.ಎಂ. ಕಲಬುರ್ಗಿ

ನಿರ್ದೇಶಕರು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಸದಸ್ಯರು

ಡಾ. ಬಿ.ಜಿ. ಮೂಲಿಮನಿ

ಡಾ. ರಹಮತ್ ತರೀಕೆರೆ

ಶ್ರೀ ರಂಜಾನ್ ದರ್ಗಾ

ಡಾ. ಎಚ್. ಜಿ. ದಡ್ಡಿ

ವಿಶೇಷ ಆಮಂತ್ರಿತ ಸದಸ್ಯರು

ಶ್ರೀ ಶಿವಯೋಗಿ ಎಸ್. ತಂಬಾಕೆ

ಡಾ. ಎಂ. ಎಸ್. ಮದಭಾವಿ

ಮೌಲಾನಾ ಮಹಬೂಬುರ್ ರಹಮಾನ ಮದನಿ

ಪದನಿಮಿತ್ತ ಸದಸ್ಯರು

ಜಿಲ್ಲಾಧಿಕಾರಿಗಳು, ವಿಜಯಪುರ

ಸಹಾಯಕ ನಿರ್ದೇಶಕರು,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಜಯಪುರ

*

ಅಧ್ಯಕ್ಷರ ಮಾತು

ಎಂ. ಎಂ. ಕಲಬುರ್ಗಿ

ವಿಜಾಪುರದ ಬಿ.ಎಲ್.ಡಿ. ಶಿಕ್ಷಣಸಂಸ್ಥೆ ಇತ್ತೀಚಿನ ದಿನಗಳಲ್ಲಿ ಸಾಂಸ್ಕೃತಿಕ ಸಂಸ್ಥೆಯಾಗಿಯೂ ಬೆಳೆಯುತ್ತಲಿದೆ. ಈ ಸಂಸ್ಥೆಯ ಭಾಗವಾಗಿರುವ 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಯ ಇಂದಿನ ಕಾರ್ಯ ಮತ್ತು ಕಾರ್ಯಕ್ರಮಗಳು ಇದಕ್ಕೆ ಉದಾಹರಣೆಯೆನಿಸಿವೆ.

ಡಾ॥ ಫ.ಗು. ಹಳಕಟ್ಟಿಯವರದು ಕೇವಲ ವ್ಯಕ್ತಿಕಲ್ಯಾಣಕೇಂದ್ರಿತ ವ್ಯಕ್ತಿತ್ವವಲ್ಲ, ಸಮಾಜಕಲ್ಯಾಣ ಕೇಂದ್ರಿತ ವ್ಯಕ್ತಿತ್ವ. ಇದಕ್ಕೆ ತಕ್ಕಂತೆ ಅವರ ಹೆಸರಿನ ಈ ಸಂಸ್ಥೆ ಎಲ್ಲ ಸಮಾಜಗಳನ್ನು–ಸಾಮಾಜಿಕರನ್ನು 'ಇವ ನಮ್ಮವ, ಇವ ನಮ್ಮವ, ಇವ ನಮ್ಮವ' ಎಂಬ ಆದರ್ಶದಲ್ಲಿ ಬೆಳೆಯುತ್ತಲಿದೆ. ಇದಕ್ಕೆ ಸಾಕ್ಷಿಯಾಗಿದೆ, ಈ ಸಂಸ್ಥೆ ಕೈಗೆತ್ತಿಕೊಂಡಿರುವ 'ಆದಿಲ್‌ಶಾಹಿ ಸಾಹಿತ್ಯ ಅನುವಾದ ಯೋಜನೆ'.

ಮಧ್ಯಕಾಲೀನ ಭಾರತೀಯ ಇತಿಹಾಸದಲ್ಲಿ ವಿಜಾಪುರದ ಆದಿಲ್‌ಶಾಹಿಗಳ ಹೆಸರು ಪ್ರಸಿದ್ಧವಾದುದು, ಸುಪ್ರಸಿದ್ಧವಾದುದು. ಏಕಕಾಲಕ್ಕೆ ಉತ್ತರದ ಮೊಗಲರೊಂದಿಗೆ, ದಕ್ಷಿಣದ ವಿಜಯನಗರದವರೊಂದಿಗೆ ಸಂಘರ್ಷ–ಸಮನ್ವಯದಿಂದ ೧೪೮೯–೧೬೮೬ರ ವರೆಗೆ ರಾಜ್ಯಭಾರಮಾಡಿದ ರಾಜಮನೆತನವಿದು. 'ದಿನೇ ಇಲಾಹಿ' ಖ್ಯಾತಿಯ ಮೊಗಲ್ ಮನೆತನದ ಅಕಬರನಂತೆ 'ದಾದೇ ಇಲಾಹಿ' ಖ್ಯಾತಿಯ ಆದಿಲ್‌ಶಾಹಿ ಮನೆತನದ ಜಗದ್ಗುರು ೨ನೆಯ ಇಬ್ರಾಹಿಮ್ ಬಾದಶಹನು ಸಮನ್ವಯಸಮಾಜ ಸ್ಥಾಪಿಸಲು ನಿರತನಾದುದು ಗಮನಾರ್ಹವೆನಿಸಿದೆ.

ಈ ಮನೆತನದ ಎಂಟು ಜನ ಅರಸರು ಸಾಹಿತಿಗಳು–ಸಾಹಿತ್ಯಪ್ರೇಮಿಗಳು. ಈ ಸಾಹಿತ್ಯ ಲೌಕಿಕ–ಧಾರ್ಮಿಕ ಎರಡೂ ಆಯಾಮಗಳಲ್ಲಿ ಬಿಚ್ಚಿ ಬೆಳೆದಿದೆ. ಹಿಂದೂಗಳದು ಪುರಾಣಪ್ರಜ್ಞೆಯಾದರೆ, ಮುಸಲ್ಮಾನರದು ಇತಿಹಾಸಪ್ರಜ್ಞೆ. ಈ ಪ್ರಜ್ಞೆಗೆ ಅನುಗುಣವಾಗಿ ಇವರ ಆಸ್ಥಾನದಲ್ಲಿ–ಇವರ ರಾಜ್ಯದಲ್ಲಿ ಸುಮಾರು ೨೦ ಕೃತಿಗಳು ಹುಟ್ಟಿಕೊಂಡಿವೆ.

ಸಮಕಾಲೀನ ರಾಜಕೀಯದೊಂದಿಗೆ ಜೀವನದ ಇತರ ಕ್ಷೇತ್ರಗಳನ್ನೂ ಚಿತ್ರಿಸಿದ ಈ ಸಾಹಿತ್ಯದ ಬಹುಭಾಗ ಪ್ರಕಟವಾಗದೆ, ಕನ್ನಡಕ್ಕೆ ಅನುವಾದವಾಗದೆ ಉಳಿದಿದ್ದಿತು. ಈ ದೊಡ್ಡ ಆಕರವನ್ನು ಕೈಬಿಟ್ಟು ಈವರೆಗೆ ಇತಿಹಾಸ ಬರೆದುದು ವಿಷಾದದ ಸಂಗತಿಯಾಗಿದೆ. ಇದಕ್ಕೆ ಕಾರಣ, ಈ ಸಾಹಿತ್ಯ ಪರ್ಶಿಯನ್, ದಖನಿ–ಉರ್ದು ಭಾಷೆಯಲ್ಲಿರುವುದು ಮತ್ತು ಈ ಅರಸರು ಅನ್ಯರೆಂದು ಭಾವಿಸಿರುವುದು. 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ' ಈ ಯಾವುದೇ ಭಿನ್ನತೆ ಪರಿಗಣಿಸದೆ ಪ್ರಸ್ತುತ ಯೋಜನೆಯನ್ನು ಕೈಗೆತ್ತಿಕೊಂಡಿದೆ.

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆರ್ಥಿಕ ಅನುದಾನದ ನೆರವಿನಿಂದ ಈ ಯೋಜನೆ ಅಸ್ತಿತ್ವಕ್ಕೆ ಬಂದಿದೆ. ಇದನ್ನು ಒದಗಿಸುವಲ್ಲಿ ತೀವ್ರ ಆಸಕ್ತಿ ವಹಿಸಿದವರು ಈ ಹಿಂದೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾಗಿದ್ದ ಶ್ರೀ ಗೋವಿಂದ ಕಾರಜೋಳ ಅವರು. ಈ ಆಸಕ್ತಿಯನ್ನು ಮುಂದುವರಿಸುತ್ತಲಿರುವವರು ಇಂದು ಸಚಿವರಾಗಿರುವ ಶ್ರೀಮತಿ ಉಮಾಶ್ರೀ ಅವರು. ಸಹಕರಿಸಿದವರು ಈ ಇಲಾಖೆಯ ಅಧಿಕಾರಿಗಳು. ಇವರಿಗೆ ನಾವು ಕೃತಜ್ಞರಾಗಿದ್ದೇವೆ.

ಬಿ.ಎಲ್.ಡಿ ಶಿಕ್ಷಣ ಸಂಸ್ಥೆ ನಮಗೆಲ್ಲ ಹೆಮ್ಮೆಯ ಮಾದರಿ. ಈ ರೀತಿಯಲ್ಲಿ ಇದನ್ನು ಬೆಳೆಸುತ್ತಲಿರುವವರು ಅಧ್ಯಕ್ಷರಾದ ಶ್ರೀ ಎಂ.ಬಿ. ಪಾಟೀಲರು. ಈ ಸಂಸ್ಥೆಯ ಅಂಗವಾಗಿರುವ 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಗಾಗಿ ತ್ರಿಕರಣಪೂರ್ವಕ ದುಡಿಯುತ್ತಲಿರುವವರು ಇದರ ಅಧ್ಯಕ್ಷರಾದ ಶ್ರೀ ಶಿವಯೋಗಿ ತಂಬಾಕೆಯವರು. ಇವರಿಬ್ಬರ ಪ್ರೋತ್ಸಾಹ–ನೆರವುಗಳಿಗೆ, ಈ ಯೋಜನೆಯ ಸಲಹಾಮಂಡಳಿಯ ಸದಸ್ಯರ ಮಾರ್ಗದರ್ಶನಕ್ಕೆ, ಅನುವಾದ ಕಾರ್ಯದಲ್ಲಿ ವಿದ್ವಾಂಸರು ನೀಡಿದ ಸಹಕಾರಕ್ಕೆ ಅಭಿನಂದನೆಗಳು.

ಸರಕಾರ ರೂಪಿಸಿದ ಸಲಹಾಮಂಡಳಿಯ ನಿರ್ದೇಶನದಂತೆ ಈ ಯೋಜನೆಗಾಗಿ ಡಾ॥ ಫ.ಗು. ಹಳಕಟ್ಟಿ ಭವನದಲ್ಲಿ ಒಂದು ಸ್ವತಂತ್ರ ಕಾರ್ಯಾಲಯವನ್ನು, ಅಗತ್ಯ ಸಿಬ್ಬಂದಿವರ್ಗವನ್ನು ಅಸ್ತಿತ್ವಕ್ಕೆ ತರಲಾಯಿತು. ಈ ಮಣಿಹಕ್ಕೆ ಡಾ॥ ಕೃಷ್ಣ ಕೊಲ್ಹಾರಕುಲಕರ್ಣಿ ಅವರು ನಿರ್ದೇಶಕರಾಗಿ ಲಭಿಸಿರುವುದು ಒಂದು ಸುಯೋಗವೆಂದೇ ಭಾವಿಸುತ್ತೇವೆ. ಮೊದಲಿನಿಂದಲೂ ಆದಿಲ್‌ಶಾಹಿ ಸಾಹಿತ್ಯ–ಸಂಸ್ಕೃತಿಗಳ ಅಧ್ಯಯನದಲ್ಲಿ ನಿಮಗ್ನರಾದ ಇವರು ಈ ಯೋಜನೆಗಾಗಿ ದುಡಿದ ರೀತಿ ಅನನ್ಯವಾದುದು. ಹಸ್ತಪ್ರತಿ–ಮುದ್ರಿತಪ್ರತಿಗಳ ಸಂಗ್ರಹ, ಸೂಕ್ತ ಅನುವಾದಕರ ಆಯ್ಕೆ, ಅವರಿಂದ ಕೆಲಸಮಾಡಿಸಿಕೊಳ್ಳುವ ರೀತಿ, ಅನುವಾದಗಳ ಪರಿಷ್ಕರಣ–ಪ್ರಕಟಣೆ ಇತ್ಯಾದಿಗಳಿಗಾಗಿ ಇವರು ತ್ರಿವಿಕ್ರಮಪ್ರಜ್ಞೆಯಿಂದ ಶ್ರಮಿಸಿದ್ದಾರೆ. ಇವರೊಂದಿಗೆ ಫಗು. ಹಳಕಟ್ಟಿ ಸಂಶೋಧನ ಸಂಸ್ಥೆಯ ಕಾರ್ಯದರ್ಶಿಗಳಾದ ಡಾ॥ ಎಂ.ಎಸ್. ಮದಭಾವಿ ಅವರು ನಿರಪೇಕ್ಷ ಭಾವದಿಂದ ಹಗಲಿರುಳು ದುಡಿದಿದ್ದಾರೆ. ಇವರೊಂದಿಗೆ ಮಿಕ್ಕ ಸಿಬ್ಬಂದಿವರ್ಗದವರು ಸಹಕರಿಸಿದ ರೀತಿಯೂ ಸ್ಮರಣೀಯವಾಗಿದೆ. ಇವರೆಲ್ಲರಿಗೂ ಕೃತಜ್ಞತೆಗಳು.

■

*

ಪ್ರಸ್ತಾವನೆ

ಸಮಿತಿ ಸದಸ್ಯರು

ಮಧ್ಯಯುಗೀನ ಭಾರತದ ಚರಿತ್ರೆಯಲ್ಲಿ ವಿಜಾಪುರದ ಆದಿಲಶಾಹಿಗಳ ಪಾತ್ರ ಬಹು ಮುಖ್ಯವಾಗಿದೆ. ದಕ್ಷಿಣ ಭಾರತದ ಬಹುಪಾಲು ಪ್ರದೇಶವನ್ನು ಅವರು ವಿಜಾಪುರ ಕೇಂದ್ರದಿಂದ ಆಳಿದರು. ಇಂದಿನ ಅಖಂಡ ಕರ್ನಾಟಕವನ್ನು ಅವರು ಸುಮಾರು ಒಂದು ಶತಮಾನದಷ್ಟು ಕಾಲ ತಮ್ಮ ಅಂಕಿತದಲ್ಲಿ ಇಟ್ಟುಕೊಂಡಿದ್ದರು. ಹೀಗಾಗಿ ಆದಿಲಶಾಹಿಗಳ ಚರಿತ್ರೆಯನ್ನು ಅಭ್ಯಸಿಸದೆ ಕರ್ನಾಟಕದ ಚರಿತ್ರೆ ಪೂರ್ಣಗೊಳ್ಳುವುದಿಲ್ಲ.

ಈ ಆದಿಲಶಾಹಿಗಳ ರಾಜ್ಯವು ಕ್ರಿ.ಶ. ೧೪೮೯ರಿಂದ ೧೬೮೬ರ ವರೆಗೆ ಅಸ್ತಿತ್ವದಲ್ಲಿದ್ದಿತು. ಇಲ್ಲಿ ಆಳಿದ ೮ ಜನ ಬಾದಶಹರುಗಳ ವ್ಯಕ್ತಿತ್ವ ವರ್ಣಮಯವಾಗಿದ್ದಿತು. ಸಾಹಿತ್ಯ, ಸಂಗೀತ, ಕಲೆ, ವಾಸ್ತುಶಿಲ್ಪ, ಧರ್ಮ ಜೊತೆಗೆ ರಾಜಕಾರಣ ಇವುಗಳಲ್ಲೆಲ್ಲ ಇವರು ತಮ್ಮದೇ ಆದ ಮುದ್ರೆಯನ್ನು ಒತ್ತಿ ಹೋಗಿದ್ದಾರೆ.

ಇಂದು ಜಗತ್ತಿನಲ್ಲೆಲ್ಲ ಓದುತ್ತಿರುವ ಗುಲ್ಷನೆ-ಇಬ್ರಾಹಿಮಿ ಇತಿಹಾಸದ ಕರ್ತೃ ಮಹಮ್ಮದ ಕಾಸಿಮ ಫರಿಸ್ತಾ, ಎರಡನೆಯ ಇಬ್ರಾಹಿಮ ಆದಿಲಶಹ(ಕ್ರಿ.ಶ. ೧೫೮೦-೧೬೨೬)ನ ಆಸ್ಥಾನದಲ್ಲಿದ್ದುಕೊಂಡು ಆ ಗ್ರಂಥವನ್ನು ಬರೆದನು. ಅದರಂತೆ ಇನ್ನೂ ಹಲವಾರು ಜನ ಇತಿಹಾಸಕಾರರು, ಕವಿಗಳು ಆದಿಲಶಾಹಿ ಆಸ್ಥಾನದಲ್ಲಿ ಇದ್ದುಕೊಂಡು ಕೃತಿಗಳನ್ನು ರಚಿಸಿದ್ದಾರೆ. ಅವುಗಳೆಲ್ಲ ಅಂದು ಪ್ರಚಲಿತದಲ್ಲಿದ್ದ ಪರ್ಶಿಯನ್ ಇಲ್ಲವೆ ದಖಣಿ ಹಿಂದಿ ಭಾಷೆಗಳಲ್ಲಿ ರಚಿತವಾಗಿವೆ.

ನಾಡಿನ ವಿಶ್ವವಿದ್ಯಾಲಯಗಳು, ಭಾರತೀಯ ಇತಿಹಾಸ ಅನುಸಂಧಾನ ಇತ್ಯಾದಿ ಸಂಸ್ಥೆಗಳು ಇತಿಹಾಸದ ಕೆಲಸ ಮಾಡುತ್ತಿದ್ದರೂ ಬಿಜಾಪುರ ಇತಿಹಾಸದ ವಿಷಯದಲ್ಲಿ ಆಗಬೇಕಾದಷ್ಟು ಆಗಲಿಲ್ಲ. ಅದಕ್ಕೆ ಮೂಲ ಕಾರಣ, ಬಹುಶಃ ಅಧ್ಯಯನಕ್ಕೆ ಬೇಕಾಗುವ

ಮೂಲ ಆಕರಗಳು ವಿಶ್ವದಾದ್ಯಂತ ಚದುರಿ ಹೋಗಿರುವುದು ಮತ್ತು ಅವು ಪರ್ಶಿಯನ್, ದಖಣಿ ಭಾಷೆಗಳಲ್ಲಿರುವುದು. ಈ ಕೊರತೆಯನ್ನು ಗಮನಿಸಿ ಬಿಜಾಪುರ ಆದಿಲಶಾಹಿ ಕಾಲದ ಸಾಹಿತ್ಯವನ್ನು ಕನ್ನಡದ ಮೂಲಕ ಪ್ರಕಟಿಸುವ ಪ್ರಯತ್ನವಾಗಿದೆ. 'ಆದಿಲಶಾಹಿ ಸಾಹಿತ್ಯ ಅನುವಾದ ಯೋಜನೆ'.

ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಸಂಲಗ್ನವಾಗಿರುವ ಬಿಜಾಪುರ ಬಿ.ಎಲ್.ಡಿ.ಇ. ಸಂಸ್ಥೆಯ ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರವು ಕಳೆದ ದಶಕದಿಂದ ಸಂಶೋಧನಕ್ಷೇತ್ರದಲ್ಲಿ ಅಪರೂಪದ ಕೆಲಸವನ್ನು ಮಾಡುತ್ತಿದೆ. ಡಾ. ಫ ಗು ಹಳಕಟ್ಟಿ ಅವರ ಸಮಗ್ರಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಸಂಪಾದಿಸಿ ಪ್ರಕಟಿಸಿದೆ. ೮ ವಿದ್ಯಾರ್ಥಿಗಳು ವಿವಿಧ ವಿಷಯಗಳಲ್ಲಿ ಪಿಚ್.ಡಿ ಪದವಿಗಳನ್ನು ಪಡೆದಿದ್ದಾರೆ. ಇನ್ನು ಹಲವರು ಪದವಿ ಪಡೆಯುವ ದಾರಿಯಲ್ಲಿದ್ದಾರೆ. ಇದಕ್ಕೆಲ್ಲ ಬಿ.ಎಲ್.ಡಿ.ಇ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ.ಬಿ.ಪಾಟೀಲ ಅವರ ನಿರಂತರ ಬೆಂಬಲವೇ ಕಾರಣವಾಗಿದೆ. ಅವರ ಆಸಕ್ತಿಯಂತೆ ಸಂಶೋಧನ ಕೇಂದ್ರವು 'ಆದಿಲಶಾಹಿ ಸಾಹಿತ್ಯ ಅನುವಾದ ಯೋಜನೆ'ಯ ಕರಡು ಪ್ರತಿಯನ್ನು ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳಿಸಿತು. ಯೋಜನೆಯ ಮಹತ್ವವನ್ನು ಗುರುತಿಸಿ ಕರ್ನಾಟಕ ಸರಕಾರವು, ಡಾ. ಎಂ.ಎಂ. ಕಲಬುರ್ಗಿ ಅವರ ಅಧ್ಯಕ್ಷತೆಯಲ್ಲಿ ಡಾ. ಬಿ.ಜಿ.ಮೂಲಿಮನಿ, ಡಾ. ರಹಮತ ತರೀಕೆರೆ. ಶ್ರೀ ರಂಜಾನ್ ದರ್ಗಾ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಡಾ. ಎಚ್.ಜಿ.ದಡ್ಡಿ, ಈ ಸದಸ್ಯರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿ ಯೋಜನೆಗೆ ಅನುಮತಿ ನೀಡಿತು.

ಇದು ಭಾರತದಲ್ಲಿಯೇ ಒಂದು ಅಪರೂಪದ ಯೋಜನೆ. ಮಧ್ಯಯುಗೀನ ಕಾಲದ ಬಿಜಾಪುರ ಆದಿಲಶಾಹಿಗಳ ಕಾಲದಲ್ಲಿ ರಚಿತಗೊಂಡ ಎಲ್ಲ ಸಾಹಿತ್ಯವನ್ನು ಕನ್ನಡಕ್ಕೆ ತರುವುದು ಯೋಜನೆಯ ಮುಖ್ಯ ಉದ್ದೇಶ.

ಪ್ರಾರಂಭದಲ್ಲಿ ಆದಿಲಶಾಹಿ ಚರಿತ್ರೆಗೆ ಸಂಭಂಧಪಟ್ಟ ಈ ಕೆಳಗಿನ ಸಮಕಾಲೀನ ಕೆಲವು ಚರಿತ್ರ ಗ್ರಂಥಗಳ ಪಟ್ಟಿಯನ್ನು ಮಾಡಲಾಯಿತು. ಅವು ದೊರೆಯುವ ಸಂಭಾವ್ಯ ಸ್ಥಳಗಳನ್ನೂ ಗುರುತಿಸಲಾಯಿತು.

೧. **ಮುಹಮ್ಮದ ಕಾಸೀಮ ಫೆರಿಸ್ತಾ : ತಾರೀಖ-ಇ-ಫೆರಿಸ್ತಾ [ಪರ್ಶಿಯನ್]**
ಇಂಗ್ಲೀಷಿಗೆ ಅನುವಾದಿಸಿದ್ದಾರೆ ಕ್ಯಾಪ್ಟನ್ ಬ್ರಿಗ್ಸ [ಕ್ರಿ ಶ ೧೮೯೯]ಮೂಲ ಪರ್ಶಿಯನ್ ಹಸ್ತಪ್ರತಿ ಮುಂಬಯಿ ಅರ್ಕೀವ್ಸ, ಸಾಲಾರ ಜಂಗ ವಸ್ತುಸಂಗ್ರಹಾಲಯ ಹೈದರಾಬಾದ ಇತ್ಯಾದಿಗಳಲ್ಲಿ ಲಭ್ಯ.

೨. **ಅಬ್ದುಲ್ಲಾ ದೆಹಲವಿ : ಇಬ್ರಾಹಿಮನಾಮಾ [ದಖಣಿ]**
ಪ್ರಕಟವಾಗಿದೆ. ಮೂಲ ಹಸ್ತಪ್ರತಿ ಮುಂಬಯಿ ಅರ್ಕೀವ್ಸ ಮತ್ತು ಔಂಧ ಅರ್ಕೀವ್ಸ ಸಾತಾರಾದಲ್ಲಿವೆ.

೩. **ಅಸದಬೇಗ : ವಾಕಾಯತೆ ಅಸದಬೇಗ [ಪರ್ಶಿಯನ್]**

ಚಾಪ್‌ಮನ್‌ನಿಂದ ಇಂಗ್ಲಿಷ್‌ಗೆ ಅನುವಾದವಾಗಿದೆ [೧೮ನೆ ಶತ]. ನಂತರ ಪಿ.ಎಂ.ಜೋಶಿ ಅವರಿಂದಲೂ, ಜೊತೆಗೆ ಇಲಿಯಟ್ ಮತ್ತು ಡೌಸನ್ ಸಂಪುಟ ೬ರಲ್ಲಿ ಭಾಗಶಃ ಅನುವಾದವಾಗಿದೆ. ಇದರ ಹಸ್ತಪ್ರತಿಯು ಆಂಧ್ರಪ್ರದೇಶ ಪ್ರಾಚೀನ ಹಸ್ತಪ್ರತಿಗಳ ಸಂಗ್ರಹ ಹೈದರಾಬಾದಿನಲ್ಲಿ ಲಭ್ಯ.

೪. **ಕಾಜಿ ನೂರುಲ್ಲಾ : ತಾರೀಖೆ ಅಲಿ ಆದಿಲಶಹ [ದಖಣಿ]**
ಮೂಲ ಹಸ್ತಪ್ರತಿಗಳು ಮುಂಬಯಿ ಅರ್ಕೀವ್ಸ, ಇಂಡಿಯಾ ಆಫೀಸ ಲಾಯಬ್ರರಿ ಲಂಡನ್ ಮತ್ತು ಬ್ರಿಟಿಶ್ ಮ್ಯುಜಿಯಮ್ ಲಾಯಬ್ರರಿ ಲಂಡನ್, ಸಾಲಾರಜಂಗ ವಸ್ತುಸಂಗ್ರಹಾಲಯ ಹೈದ್ರಾಬಾದಗಳಲ್ಲಿ ಲಭ್ಯ.

೫. **ಜುಹೂರ್ ಬಿನ್ ಜುಹೂರಿ : ಮಹಮ್ಮದನಾಮಾ [ಪರ್ಶಿಯನ್]**
ಹಸ್ತಪ್ರತಿಯು ಪ್ರಾಚ್ಯ ವಸ್ತುಸಂಗ್ರಹಾಲಯ ಬಿಜಾಪುರದಲ್ಲಿ ಲಭ್ಯ.ಭಾಗಶಃ ಬಿ.ಡಿ.ವರ್ಮಾರಿಂದ ಇಂಗ್ಲಿಷಿನಲ್ಲಿ ಅನುವಾದ.

೬. **ನುಸ್ರತಿ : ಅಲಿನಾಮಾ [ದಖಣಿ]**
ಪ್ರಕಟವಾಗಿದೆ. ಪ್ರತಿ ದುರ್ಮಿಳ.

೭. **ಬಶೀರುದ್ದೀನ ಅಹ್ಮದ : ವಾಕಾತೆ ಮಾಮಲಕತ್ ಬಿಜಾಪುರ [ಉರ್ದು]**
ಕರ್ನಾಟಕ ಉರ್ದು ಅಕಡೆಮಿಯಿಂದ ಪ್ರಕಟ. ಮೂಲಪ್ರತಿ ಸಾಲಾರಜಂಗ ಮ್ಯುಜಿಯಮ್ ಹೈದರಾಬಾದದಲ್ಲಿ ಲಭ್ಯ.

೮. **ಮುಹಮ್ಮದ ಹಾಶೀಮ ಘುಜೂನಿ : ಫುತುಹತೆ ಆದಿಲಶಾಹಿ [ಪರ್ಶಿಯನ್]**
ಮುಂಬಯಿ ಅರ್ಕೀವ್ಸ, ಬ್ರಿಟಿಶ್ ಇಂಡಿಯಾ ಲಾಯಬ್ರರಿ ಲಂಡನ್‌ಗಳಲ್ಲಿ ಹಸ್ತಪ್ರತಿಗಳಿವೆ.

೯. **ಮೀರ್ ರಫೀಯುದ್ದೀನ ಶಿರಾಜಿ : ತದ್ಕಿರಾತ-ಅಲ್-ಮುಲ್ಕ [ಪರ್ಶಿಯನ್]**
ಸಾಲಾರಜಂಗ ವಸ್ತುಸಂಗ್ರಹಾಲಯ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ.

೧೦. **ಶೇಖ್‌ಜೈನುದ್ದೀನ ಅಲ್ ಮಾಬಾರಿ: ತುಹಫತುಲ್ ಮುಜಾಹಿದೀನ [ಪರ್ಶಿಯನ್]**

೧೧. **ಸೈಯದ ಅಲಿ ಬಿಲಗ್ರಾಮಿ : ತಾರೀಖೆ ದಖನ್ ೪ ಸಂಪುಟಗಳು [ಉರ್ದು]**

೧೨. **ಸಯ್ಯದ ಮೊಹಿಯುದ್ದೀನ ಪೀರಜಾದಾ : ಅಹವಾಲೆ ಸಲಾತೀನ ಬಿಜಾಪುರ [ಪರ್ಶಿಯನ್]**
ಬ್ರಿಟಿಶ್ ವಸ್ತುಸಂಗ್ರಹಾಲಯ ಲಂಡನ್, ಹಸ್ತಪ್ರತಿ ಸಂಖ್ಯೆ ೨೬೨೭೦.

೧೩. **ಫಿತೂರಖಾನ ವಲ್ಲದ ಅಸದಖಾನ ಲ್ಯಾರಿಯ : ಹಪ್ತ ಕುರ್ಸೀ [ಪರ್ಶಿಯನ್]**
ಸಾಲಾರಜಂಗ ವಸ್ತು ಸಂಗ್ರಹಾಲಯ ಹೈದ್ರಾಬಾದ, ಇಂಡಿಯಾ ಆಫೀಸ ಲಾಯಬ್ರರಿ ಲಂಡನ್‌ಗಳಲ್ಲಿ ಹಸ್ತಪ್ರತಿ ಲಭ್ಯ.

೧೪. **೨ನೆಯ ಇಬ್ರಾಹಿಮ ಆದಿಲಶಹ : ಕಿತಾಬೆ ನವರಸ [ದಖಣಿ ಹಿಂದಿ]**
ಕರ್ನಾಟಕ ವಿ.ವಿ.ಯಿಂದ ಪುಸ್ತಕ ಪ್ರಕಟವಾಗಿದೆ.

೧೫. **ಜುಬೇರಿ : ರೌಜತ್ ಅಲ್ ಔಲಿಯಾ ಎ ಬಿಜಾಪುರ [ಪರ್ಶಿಯನ್]**
ಆಂಧ್ರಪ್ರದೇಶ ಪ್ರಾಚ್ಯ ಹಸ್ತಪ್ರತಿ ಸಂಗ್ರಹ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ. ಹಸ್ತಪ್ರತಿ ಸಂಖ್ಯೆ ೧೪೮೧೩

೧೬. **ಜುಬೇರಿ : ಬುಸಾತಿನೆ ಸಲಾತೀನ [ಪರ್ಶಿಯನ್]**
ಮರಾಠೀ ಅನುವಾದದಿಂದ ಕನ್ನಡಕ್ಕೆ ಅನುವಾದ ಆಗಿದೆ. ಪರ್ಸಿಯನ್ ಹಸ್ತಪ್ರತಿ ಸಾಲಾರಜಂಗ ವಸ್ತು ಸಂಗ್ರಹಾಲಯ ಹೈದರಾಬಾದದಲ್ಲಿ ಲಭ್ಯ.

೧೭. **ಮೀರ ಅಹಮದ ಅಲಿ ಖಾನ: ಗುಲದಸ್ತಾ ಎ ಬಿಜಾಪುರ [ದಖಣಿ]**
ಆಂಧ್ರಪ್ರದೇಶ ಆರ್ಕೀವ್ಸದಲ್ಲಿ ಹಸ್ತಪ್ರತಿ ಲಭ್ಯ. ಸಂಖ್ಯೆ ೧೯೩.

೧೮. **ಅಬುಲ ಹಸನ ಕಾದಿರಿ : ಶಾಹಿಪತ್ ಇ ಹುದಾ [ಬಿಜಾಪುರ ಸೂಫಿ ಸಂತರ ಚರಿತ್ರೆ ೧೭೫೬] [ಪರ್ಶಿಯನ್]**
ಸಾಲಾರಜಂಗ ವಸ್ತುಸಂಗ್ರಹಾಲಯ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ.

೧೯. **ಆದಿಲಶಾಹಿಕಾಲದ ಫರ್ಮಾನುಗಳು:** ಭಾರತ ಇತಿಹಾಸ ಸಂಶೋಧಕ ಮಂಡಳ [ಸಾವಿರಕ್ಕೂ ಮಿಕ್ಕಿ] **ಮತ್ತು ಸನದುಗಳು** ಪುಣೆ ಮತ್ತು ಇತರ ಸ್ಥಳಗಳಲ್ಲಿ ಲಭ್ಯ.

ಹೀಗೆ ಪಟ್ಟಿ ಮಾಡಿ, ಹಸ್ತಪ್ರತಿಗಳ ಶೋಧಕ್ಕೆ ತೊಡಗಲಾಯಿತು. ಸಾಲಾರಜಂಗ ವಸ್ತು ಸಂಗ್ರಹಾಲಯ, ಆಂಧ್ರಪ್ರದೇಶ ಆರ್ಕೀವ್ಸ ಹೈದರಾಬಾದ, ಭಾರತೀಯ ಪುರಾತತ್ವ ಇಲಾಖೆ ವಸ್ತು ಸಂಗ್ರಹಾಲಯ, ಗೋಳಗುಮ್ಮಟ ಬಿಜಾಪುರ ಈ ಕೇಂದ್ರಗಳಲ್ಲಿ ಕೆಳಗಿನ ಹಸ್ತಪ್ರತಿಗಳು ದೊರೆತವು.

೧. ಕಾಜಿ ನೂರುಲ್ಲಾ : **ತಾರೀಖೆ ಅಲಿ ಆದಿಲಶಹ [ದಖಣಿ]**

೨. ಮೀರ್ ರಫೀಯುದ್ದೀನ ಶಿರಾಜಿ : **ತದ್ಕಿರಾತ-ಅಲ್-ಮುಲ್ಕ [ಪರ್ಶಿಯನ್]**

೩. ಫಿತೂರಖಾನ ವಲ್ಲದ ಅಸದಖಾನ ಲ್ಯಾರಿಯ : ಹಪ್ತ ಕುರ್ಸೀ [ಪರ್ಶಿಯನ್]

೪. ಮೀರ ಅಹಮದ ಅಲಿ ಖಾನ : ಗುಲದಸ್ತಾ ಎ ಬಿಜಾಪುರ [ದಖಣಿ]

೫. ಜುಹೂರ್ ಬಿನ್ ಜುಹೂರಿ : ಮಹಮ್ಮದನಾಮಾ [ಪರ್ಶಿಯನ್]

ಇದಲ್ಲದೆ, ಫೆರಿಸ್ತಾನ ತಾರೀಖ-ಇ-ಫೆರಿಸ್ತಾದ ಇಂಗ್ಲಿಷ್ ಮತ್ತು ಉರ್ದು ಅನುವಾದ, ಅಬ್ದುಲ್ಲಾ ದೇಹಲವಿ ವಿರಚಿತ ಇಬ್ರಾಹೀಮನಾಮಾದ ಹಿಂದಿ ಮತ್ತು ಉರ್ದು ಅನುವಾದ, ಕವಿ ನುಸ್ರತಿಯ 'ಅಲಿನಾಮಾ' ಫುತೂಹತ್ ಅಲಂಗೀರದ ಇಂಗ್ಲಿಶ್ ಅನುವಾದ ಮತ್ತು ಹಲವು ನೂರು ಪರ್ಶಿಯನ್ ಮೂಲ ಮತ್ತು ಮರಾಠೀ ಅನುವಾದದ ಆದಿಲಶಾಹೀ ಫರ್ಮಾನುಗಳು ದೊರೆತವು. ಉಳಿದ ಹಸ್ತಪ್ರತಿಗಳನ್ನು ದೊರಕಿಸಬೇಕಾಗಿದೆ.

ಹೀಗೆ ಸಾಮಗ್ರಿಯನ್ನು ಸಂಗ್ರಹಿಸಿ ಅನುವಾದದ ಕೆಲಸ ಪ್ರಾರಂಭ ಮಾಡಲಾಯಿತು. ಕನ್ನಡ ಭಾಷೆಗೆ ಅನುವಾದ ಮಾಡುವ ಪರ್ಶಿಯನ್, ದಖಣಿ ಮತ್ತು ಉರ್ದು ಭಾಷೆಗಳನ್ನು ಬಲ್ಲ ಈ ಕೆಳಗಿನ ವಿದ್ವಾಂಸರನ್ನು ಅನುವಾದ ಕಾರ್ಯದಲ್ಲಿ ತೊಡಗಿಸಿಕೊಳ್ಳಲಾಯಿತು.

೧. ಮೌಲಾನಾ ಮಹಿಬೂಬುರ್ ರಹಮಾನ ಮದನಿ ವಿಜಯಪುರ.

೨. ಶ್ರೀ ಬಿ. ಜಯಾಚಾರ್ಯ, ನ್ಯಾಯವಾದಿಗಳು ಯಾದಗಿರಿ.

೩. ಶ್ರೀಮತಿ ಬಾನು ಮುಷ್ತಾಕ್ ನ್ಯಾಯವಾದಿಗಳು ಹಾಸನ.

೪. ಡಾ. ಅಬ್ದುಲ್ ಹಮೀದ, ಶಿಕ್ಷಣ ತಜ್ಞರು, ತಿಪಟೂರು.

೫. ಶ್ರೀ ಎಂ.ಎನ್ ನದಾಫ, ವಿಜಯಪುರ.

೬. ಪ್ರೊ ವಸಂತ ಕುಷ್ಟಗಿ, ಸಾಹಿತಿಗಳು ಕಲಬುರಗಿ.

೭. ಶ್ರೀಮತಿ ರತ್ನಾ ಮಣ್ಣೂರ, ಕಲಬುರಗಿ.

೮. ಡಾ. ಅಮೀರುದ್ದೀನ ಕಾಜಿ ವಿಜಯಪುರ.

೯. ಶ್ರೀ ಹಸನ ನಯೀಮ ಸುರಕೋಡ, ರಾಮದುರ್ಗ.

೧೦. ಡಾ. ಬಿ ರಘೋತ್ತಮರಾವ ದೇಸಾಯಿ, ಬೆಂಗಳೂರು.

೧೧. ಶ್ರೀಮತಿ ವಿದ್ಯಾ ಗುಮಾಸ್ತೆ, ವಿಜಯಪುರ.

೧೨. ಡಾ. ಆರ್.ಕೆ.ಕುಲಕರ್ಣಿ, ವಿಜಯಪುರ.

೧೩. ಡಾ. ಮುಹಮ್ಮದ ಸಿಬ್ಘತ್‌ಉಲ್ಲಾಹ್, ಬೆಂಗಳೂರು

೧೪. ಡಾ. ಮಹನೂರ್ ಜಮಾನಿ ಬೇಗಂ, ಬೆಂಗಳೂರು

೧೫. ಪ್ರೊ. ಎ.ಎಚ್. ಮಾಸಾಪತಿ, ಬೆಂಗಳೂರು

೧೬. ಫಕೀರ್ ಮುಹಮ್ಮದ ಕಟ್ಪಾಡಿ, ಬೆಂಗಳೂರು

೧೭. ಮೌಲಾನಾ ಸಯ್ಯದ್ ರಶೀದ್ ಅಲ್ ಖಾಸಿಮಿ, ಬೆಂಗಳೂರು

೧೮. ಶ್ರೀ ಬೋಡೆ ರಿಯಾಜ್ ಅಹ್ಮದ್ ತಿಮ್ಮಾಪುರಿ, ಕಲಬುರಗಿ.

ಈ ಮಹನೀಯರು ಅನುವಾದ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ. ಇವರ ಸಹಕಾರದಿಂದ ಮೊದಲ ಹಂತವಾಗಿ ಈ ಕೆಳಗಿನ

೧. ತಾರೀಖ–ಇ–ಫೆರಿಸ್ತಾ : ೪ ಸಂಪುಟಗಳು.

೨. ಬುಸಾತಿನೆ ಸಲಾತೀನ : ೫ನೆಯ ಸಂಪುಟ.

೩. ಇಬ್ರಾಹೀಮ ನಾಮಾ [ದಖಣಿ], ಗುಲದಸ್ತಾಯೆ ಬಿಜಾಪುರ [ದಖಣಿ], ಹಪ್ತ ಕುರ್ಸಿ [ಪರ್ಶಿಯನ್], ಭಾಗಶಃ ಫುತುಹತೆ ಅಲಂಗೀರ ಮತ್ತು ಕೆಲವು ಫರ್ಮಾನುಗಳು, ಇವೆಲ್ಲ ಸೇರಿ ೬ನೆಯ ಸಂಪುಟ.

೪. ಮೊಹಮ್ಮದನಾಮಾ, ೭ ನೆಯ ಸಂಪುಟ

೫. ಅಲಿನಾಮಾ–ತಾರೀಖೇ ಸಿಕಂದರಿ ೮ ನೆಯ ಸಂಪುಟ

೬. 'ಊರುಸೇ–ಇರ್ಫಾನ್' (ಮನ್ ಲಗನ್) ೯ನೆಯ ಸಂಪುಟ

೭. 'ತಝ್ಕಿರತುಲ್ ಮುಲೂಕ್(ಬಾದಶಾಹರ ಚರಿತ್ರೆ)' ೧೦ ನೆಯ ಸಂಪುಟ

೮. 'ಕಿತಾಬೆ ನವರಸ' ೧೧ ನೆಯ ಸಂಪುಟ

ಹೀಗೆ ೧೧ ಸಂಪುಟಗಳು ಪ್ರಕಟವಾಗಿವೆ. ಇದೀಗ ೧೨ ನೆಯ ಸಂಪುಟವಾಗಿ ಖಾಜಿ ಮುಹಮ್ಮದ ಇಬ್ರಾಹಿಮ ಜುಬೇರಿ ವಿರಚಿತ ಪರ್ಶಿಯನ್ ಕೃತಿ 'ರೌಜತುಲ್ ಔಲಿಯಾಯೆ ಬಿಜಾಪುರ' [ಬಿಜಾಪುರದ ಸೂಫೀಗಳ ಚರಿತ್ರೆ] ಪ್ರಕಟವಾಗುತ್ತಿದೆ. ಇದನ್ನು ಡಾ. ಅಮೀರುದ್ದೀನ ಖಾಜಿ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

'ಆದಿಲಶಾಹಿ ಸಾಹಿತ್ಯ ಅನುವಾದ' ಯೋಜನೆಗೆ ಅನುದಾನ ನೀಡಿದ ಕರ್ನಾಟಕ ಸರ್ಕಾರಕ್ಕೆ, ಯೋಜನೆಯನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸುವಲ್ಲಿ

ಸಹಕರಿಸುತ್ತಿರುವ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಅಧಿಕಾರಿಗಳಿಗೆ ಮತ್ತು ಈ ದಿಶೆಯಲ್ಲಿ ನಿರಂತರ ಸಹಾಯಹಸ್ತ ನೀಡುತ್ತಿರುವ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ.ಬಿ.ಪಾಟೀಲ ಅವರಿಗೆ, ಸಂಶೋಧನ ಕೇಂದ್ರದ ಅಧ್ಯಕ್ಷರಾದ ಶ್ರೀ ಶಿವಯೋಗಿ ತಂಬಾಕೆ ಅವರಿಗೆ ಕೃತಜ್ಞತೆಗಳು.

ಸಂಪುಟಗಳು ಪ್ರಕಟವಾಗುವ ಪ್ರತಿ ಹಂತದಲ್ಲಿ ಸಹಕಾರ ನೀಡಿದ, ಈ ಹಿಂದೆ ವಿಜಯಪುರ ಜಿಲ್ಲಾಧಿಕಾರಿಗಳಾಗಿದ್ದ ಶ್ರೀ ಶಿವಯೋಗಿ ಕಳಸದ, ಶ್ರೀ ರಿತ್ವಿಕ್ ರಂಜನ್ ಪಾಂಡೆ ಮತ್ತು ಇಂದಿನ ಜಿಲ್ಲಾಧಿಕಾರಿಗಳಾದ ಶ್ರೀ ಡಿ. ರಂದೀಪ ಅವರನ್ನು, ಈ ಯೋಜನೆಯ ಸಮಿತಿಯ ಅಧ್ಯಕ್ಷರ ಮಾರ್ಗದರ್ಶನವನ್ನು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ. ಸೋಮಶೇಖರ ವಾಲಿ ಹಾಗೂ ಬಿ.ಎಲ್.ಡಿ.ಇ. ಸಂಸ್ಥೆಯ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಕಾರ್ಯದರ್ಶಿಗಳಾದ ಡಾ. ಎಂ.ಎಸ್. ಮದಭಾವಿ ಅವರ ಶ್ರಮವನ್ನು ಪ್ರೀತಿಯಿಂದ ನೆನೆಯುತ್ತೇವೆ.

ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ. ಮಕಾಳಿ ಹಾಗೂ ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟ್‌ನ ಶ್ರೀ ಬಿ.ಸಿ.ಪಾಟೀಲ (ಹೆಬ್ಬಾಳ) ಮತ್ತು ಅವರ ಸಿಬ್ಬಂದಿಯನ್ನು ನೆನೆಯುತ್ತೇವೆ.

■

*

ನಿರ್ದೇಶಕರ ಮಾತು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಇಸ್ಲಾಮ್ ಧರ್ಮದ ರಾಜ್ಯವೊಂದು ಸ್ಥಾಪನೆಯಾದಾಗ ಆ ಧರ್ಮದ ಗುರುಗಳು, ಸಂತರು ಬಂದು ನೆಲೆಸುವುದು ಸಹಜ. ಅಂತೆಯೇ ಬಿಜಾಪುರದಲ್ಲಿ ಯೂಸುಫ ಆದಿಲಶಹನಿಂದ ಆದಿಲಶಾಹೀ ರಾಜ್ಯ [ಕ್ರಿ.ಶ.೧೪೮೯] ಜನ್ಮ ತಳೆದಾಗ ಇಲ್ಲಿ ಹಲವಾರು ಇಸ್ಲಾಮ್ ಧರ್ಮ ಗುರುಗಳು, ಸೂಫೀಗಳು ಬಂದು ನೆಲೆಸಿದರು. ಹಲವರು ಆ ಮೊದಲೇ ಧರ್ಮ ಪ್ರಸಾರಕ್ಕೆ ಬಂದವರೂ ಉಂಟು. ವಿಜಯನಗರದ ಪತನದ ನಂತರ [ಕ್ರಿ.ಶ. ೧೫೬೫] ದಕ್ಷಿಣ ಭಾರತದಲ್ಲಿ ಬಿಜಾಪುರ ಆದಿಲಶಾಹೀ ರಾಜ್ಯ ತನ್ನ ಉಚ್ಛ್ರಾಯ ಸ್ಥಿತಿಯನ್ನು ಮುಟ್ಟಿತು. ಇಲ್ಲಿಯ ಬಾದಶಹರುಗಳು, ಜನರು ಸುಖದಿಂದ ಬಾಳಲು ನೀರು, ವಸತಿ, ಮತ್ತಿತರ ಸೌಲಭ್ಯಗಳ ವ್ಯವಸ್ಥೆಯನ್ನು ಉದಾರವಾಗಿ ಮಾಡಿದರು. ಮೊದಲನೆಯ ಅಲಿ ಆದಿಲಶಹ [೧೫೫೭-೧೫೮೦], ಎರಡನೆಯ ಇಬ್ರಾಹಿಮ ಆದಿಲಶಾಹ [೧೫೮೦-೧೬೨೬] ಮತ್ತು ಮಹಮ್ಮದ ಆದಿಲಶಾಹರ [೧೬೨೬-೧೬೫೬] ಕಾಲದಲ್ಲಿ ಸುಮಾರು ಒಂದು ನೂರು ವರುಷಗಳ ಕಾಲ ಬಿಜಾಪುರವು ಭಾರತದಲ್ಲಿಯೇ ಸುಖ, ಸಂಪದ್ಭರಿತ ಹಾಗೂ ಶಾಂತಿಯುತ ರಾಜ್ಯವಾಗಿತ್ತು. ಅದರಿಂದಾಗಿ ಪ್ರಪಂಚದ ಮೂಲೆ ಮೂಲೆಗಳಿಂದ ಸೂಫೀಗಳು ಇಲ್ಲಿ ಬಂದು ನೆಲೆಸಿದರು. ಒಂದು ಅಂದಾಜಿನಂತೆ ಪ್ರಪಂಚದಲ್ಲಿ ಬಿಜಾಪುರದಲ್ಲಿ ನೆಲೆಸಿದಷ್ಟು ಸೂಫಿಗಳು ಇನ್ನೆಲ್ಲೂ ನೆಲೆಸಲಿಲ್ಲ. ಸುಮಾರು ನಾಲ್ಕು ನೂರಕ್ಕಿಂತ ಅಧಿಕ ಸೂಫೀಗಳ ಸಮಾಧಿಗಳು ಬಿಜಾಪುರದಲ್ಲಿವೆ. ಧರ್ಮ ಪ್ರಸಾರದ ಜೊತೆಗೆ ಅವರು ಅಂದಿನ ರಾಜ್ಯ ರಾಜಕಾರಣದಲ್ಲೂ ಪ್ರಮುಖ ಪಾತ್ರವನ್ನುವಹಿಸಿದ್ದಾರೆ.

ಬಿಜಾಪುರ ಸೂಫೀಗಳ ಚರಿತ್ರೆಯ ಕುರಿತು ಮಹಮ್ಮದ ಇಬ್ರಾಹೀಮ ಜುಬೇರಿ ವಿರಚಿತ 'ರೌಜತುಲ್ ಔಲಿಯಾಯೆ ಬಿಜಾಪುರ' ಒಂದು ಪ್ರಸಿದ್ಧ ಪರ್ಶಿಯನ್ ಕೃತಿ.

ಅದರಲ್ಲಿ ಆತ ಆದಿಲಶಾಹಿ ಪೂರ್ವ, ಆದಿಲಶಾಹಿಗಳ ಕಾಲದಲ್ಲಿದ್ದ ಪ್ರಮುಖ ಸೂಫೀಗಳ ಜೊತೆಗೆ ಮಹಿಳಾ ಸೂಫೀಗಳ ಪರಿಚಯವನ್ನೂ ಮಾಡಿಕೊಟ್ಟಿದ್ದಾನೆ.

ಫಕೀರ ಮಹಮ್ಮದ ಇಬ್ರಾಹಿಮ ಜುಬೇರಿಯ ಮನೆತನ ಪವಿತ್ರ ಪೈಗಂಬರರ ಕಾಲದ್ದು ಎಂದು ಹೇಳಲಾಗುತ್ತದೆ. ಈತನ ಕುಟುಂಬದ ಮೂಲ ಪುರುಷನ ಶಿಷ್ಯರ ಶಿಷ್ಯ ಅಲ್ ಜುಬೇರಿ ಆದಿಲಶಾಹಿಗಳ ಕಾಲದಲ್ಲಿ [ಬಹುಶಃ ಸುಲ್ತಾನ ಮಹಮ್ಮದ ಆದಿಲಶಹನ ೧೬೨೬–೧೬೫೬ ಕಾಲದಲ್ಲಿ] ಕುಟುಂಬ ಸಹಿತವಾಗಿ ಬಿಜಾಪುರಕ್ಕೆ ವಲಸೆ ಬಂದಿರುವ ಸಾಧ್ಯತೆ ಇದೆ. ಬಾದಶಹನಿಂದ 'ಕಾಜಿ' ಪದವಿಯನ್ನು ಪಡೆದು ಇಲ್ಲಿಯೇ ಉಳಿಯಿತು. ಕಾಜಿ ಎಂದರೆ ನ್ಯಾಯದಾನ ನೀಡುವುದು. ಒಂದರ್ಥದಲ್ಲಿ ನ್ಯಾಯಾಧೀಶ ಪದವಿ. ಆದರೆ ಅದು ಸಂಪೂರ್ಣವಾಗಿ ಕುರ್‌ಆನ್ ಶರೀಫದ ಶಾಸ್ತ್ರಗಳ ಆಧಾರದಿಂದಲೇ ನಡೆಯಬೇಕಾದ್ದರಿಂದ ಧರ್ಮಶಾಸ್ತ್ರಗಳ ಅಧ್ಯಯನವೂ ಅಗತ್ಯವಾಗಿತ್ತು.

ಆದಿಲಶಾಹೀ ಕಾಲದಲ್ಲಿ ಜುಬೇರಿ ಮನೆತನವು ನ್ಯಾಯನಿರ್ಣಯ ಮಾಡುವಲ್ಲಿ ಮಹತ್ವದ ಪಾತ್ರವನ್ನು ವಹಿಸಿತ್ತು. ಇಂದಿಗೂ ಅವರ ಮನೆತನ ಬಿಜಾಪುರದಲ್ಲಿದೆ. ವಲಸೆ ಬಂದ ಮೂಲಪುರುಷನ ಸಮಾಧಿ ಬಿಜಾಪುರದಲ್ಲಿದೆ. ಆತನೂ ಒಬ್ಬ ದೊಡ್ಡ ಸೂಫೀಯಾಗಿದ್ದನು. ಇಂದಿಗೂ ರಂಗೀನ ದರ್ಗಾದಲ್ಲಿ ವಾರ್ಷಿಕ ಉರುಸುತ್ಸವ ನಡೆದುಕೊಂಡು ಬಂದಿದೆ.

ಮುಂದಿನ ಸುಮಾರು ಏಳು ತಲೆಮಾರಿನ ನಂತರ ಹುಟ್ಟಿದವನು ಪ್ರಸ್ತುತ ಗ್ರಂಥಕರ್ತ ಫಕೀರ ಮಹಮ್ಮದ ಇಬ್ರಾಹೀಮ ಜುಬೇರಿ. ಇಂದು ಜಗದಾದ್ಯಂತ ಪ್ರಸಿದ್ಧಿಗೊಂಡಿರುವ ಬಿಜಾಪುರ ಆದಿಲಶಾಹೀಗಳ ಸಮಗ್ರ ಚರಿತ್ರೆ 'ಬಸಾತೀನೆ ಸಲಾತೀನ' ಬರೆದವನು ಈತನೇ. ಇತಿಹಾಸವನ್ನು ಹೇಗೆ ಬರೆಯಬೇಕೆಂಬುದು ಗೊತ್ತಿದ್ದ ಜುಬೇರಿ ಪ್ರಸ್ತುತ ಗ್ರಂಥದಲ್ಲೂ ಅದೇ ಮಾದರಿಯನ್ನು ಅನುಸರಿಸಿದ್ದಾನೆ. ಸಂಯಮದ ಬರವಣಿಗೆ, ವೈಭವೀಕರಣಕ್ಕೆ ಒತ್ತು ಕೊಡದೆ ಬರೆದ ಸೂಫೀಗಳ ಚರಿತ್ರೆ ನಾಡಿನಾದ್ಯಂತ ಜನಪ್ರಿಯವಾಗಿದೆ. ಬಹುಶ ಕ್ರಿ.ಶ.ಸು. ೧೮೫೦ರ ಹೊತ್ತಿಗೆ ಈ ಗ್ರಂಥವನ್ನು ಬರೆದಿರುವ ಸಾಧ್ಯತೆ ಇದೆ.

ಪರ್ಶಿಯನ್ನದಲ್ಲಿದ್ದ ಈ ಗ್ರಂಥವನ್ನು ಹಜ್ರತ್ ಶಾಹ ಸೈಫುಲ್ಲಾ ಸಾಹೇಬ್ ಖಾದ್ರಿ ಎಂಬವರು ರಾಯಚೂರಿನ ಹಾಜೀ ಸೈಯದ್ ಶಾಹ ರೋಶನ್ ಅಲಿ ಖಾದ್ರಿ ಅವರ ಮನೆಯಲ್ಲಿ ಎಂಟು ತಿಂಗಳ ಕಾಲ ಇದ್ದು ಬಹು ಕಷ್ಟಪಟ್ಟು ಇದನ್ನು ಉರ್ದು ಭಾಷೆಯಲ್ಲಿ ತರ್ಜುಮೆ ಮಾಡಿದರು ಎಂದು ರೋಶನ್ ಅಲಿ ಖಾದ್ರಿಯವರು ಹೇಳಿಕೊಂಡಿದ್ದಾರೆ. ಆದ್ದರಿಂದಲೇ ಇದರಲ್ಲಿ ರಾಯಚೂರಿನ ಸೂಫೀಗಳ ಚರಿತ್ರೆಯೂ ಬಂದಿದೆ.

ಉರ್ದು ಕೃತಿಯನ್ನು ಬಿಜಾಪುರದ ಡಾ. ಅಮೀರುದ್ದೀನ ಕಾಜೀ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಅವರಿಗೆ ಕೃತಜ್ಞತೆಗಳು.

ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟ್‌ನ ಶ್ರೀ ಬಿ.ಸಿ.ಪಾಟೀಲ (ಹೆಬ್ಬಾಳ) ಮತ್ತು ಅವರ ಸಿಬ್ಬಂದಿಯನ್ನು ನೆನೆಯುತ್ತೇವೆ.

■

*

ಪರಿವಿಡಿ

೩೫. ಹಜ್ರತ್ ಶಾಹ್ ಅಬ್ದುಲ್ ರಜಾಕ್ ಖಾದ್ರಿ (ಖು)

೩೬. ಹಜ್ರತ್‌ಶಾಹ್ ಹಾಷಿಂ ಹುಸ್ಸೈನಿ ಅಲ್ವಿ ಖುದ್ದುಸ್ಸಲ್ಲಾಹ್ ಸರ್ರಯಿಲ್ ಅಜೀಜ್

೩೭. ಹಜ್ರತ್ ವಜಿಯುದ್ದೀನ್ (ಖು)

೩೮. ಹಜ್ರತ್‌ಷಾಹ್ ಮುರ್ತುಜಾ ಹುಸ್ಸೈನಿ ಅಲ್ವಿ (ಖು)

೩೯. ಹಜ್ರತ್‌ಷಾಹ್ ಮುಸ್ತಫಾ ಹುಸ್ಸೈನಿ ಅಲ್ವಿ (ಖು)

೪೦. ಹಜ್ರತ್‌ಷಾಹ್ ಮುರಾದ್ (ಖು)

೪೧. ಹಜ್ರತ್ ಷಾಹ್ ನಯೀಮುಲ್ಲಾಹ್ (ಖು)

೪೨. ಹಜ್ರತ್ ಷಾಹ್ ಅಹ್ಮದ್ ಮೀರಾಂಜಿ (ಖು)

೪೩. ಹಜ್ರತ್‌ಷಾಹ್ ಬುರ್ಹಾನ್ ಹುಸ್ಸೈನಿ ಅಲ್ವಿ (ಖು)

೪೪. ಹಜ್ರತ್ ಸೈಯ್ಯದ್ ಮುಹಮ್ಮದ್ ಉರ್ಫ್ ಷಾಹ್ ಹಜ್ರತ್ ಹುಸ್ಸೈನಿ ಚಿಷ್ತಿ ಖಾದ್ರಿ (ಖು)

೪೫. ಹಜ್ರತ್ ಷಾಹ್ ಮೀರಾಂಜಿ ಷಮ್ಸುಲ್ ಉಶ್ಶಾಕ್ (ಖು)

೪೬. ಹಜ್ರತ್‌ಷಾಹ್ ಬುರ್ಹಾನುದ್ದೀನ್ ಜಾ[illegible]ಮ್ (ಖು)

೪೭. ಹಜ್ರತ್ ಖ್ವಾಜಾ ಅಮೀನುದ್ದೀನ್ (ಖು)

೪೮. ಹಜ್ರತ್ ಶೇಖ ಮೆಹಮೂದ್ ಖುಷ್‌ದಹಾನ್ (ಖು)

೪೯. ಹಜ್ರತ್ ಜುನ್ಯೈದ್ ಸಾನಿ (ಖು)

೫೦. ಹಜ್ರತ್‌ಷಾಹ್ ಷರೀಫ್ ರಂಗ್‌ರೇಜಾಂ (ಖು)

೫೧. ಹಜ್ರತ್‌ಷಾಹ್ ಗನಿ (ಖು)

೫೨. ಹಜ್ರತ್‌ಶಾಹ್ ಅಬ್ದುಸ್ಸಲಾಮ್ ಶತ್ತಾರಿ (ಖು)

೫೩. ಹಜ್ರತ್‌ಶೇಖ ಸಿರಾಜುದ್ದೀನ್ ಜುನ್ಯೈದಿ (ಖು)

೫೪. ಸೈಯ್ಯದ್ ಮುಹಮ್ಮದ್ ಬುಖಾರಿ (ಖು)

೫೫. ಹಜ್ರತ್ ಸೈಯ್ಯದ್ ಮುಹಮ್ಮದ್ ತಾಜಿಮತರ್ಕ(ಖು)

೫೬. ಹಜ್ರತ್‌ಶಾಹ್ ಮೂಸಾಖಾದ್ರಿ (ಖು)

೫೭. ಹಜ್ರತ್‌ಶಾಹ್ ಮುಸ್ತಫಾ ಖಾದ್ರಿ (ಖು)

೫೮. ಹಜ್ರತ್‌ಶಾಹ್ ನೂರುಲ್ಲಾ ಖಾದ್ರಿ (ಖು)

೫೯. ಹಜ್ರತ್ ಶೇಖ ಅಬ್ದುಲ್ ಲತೀಫ್ ಖಾದ್ರಿ (ಖು)

೬೦. ಹಜ್ರತ್‌ಶಾಹ್ ಕರೀಮುಲ್ಲಾಹ್ ಖಾದ್ರಿ (ಖು)

೬೧. ಷಾಹ್ ಮಂಜಹನ್ ಬುಖಾರಿ (ಖು)
೬೨. ಹಜ್ರತ್ ಶೇಖ ನ್ಯಾಮತುಲ್ಲಾಹ್ (ಖು)
೬೩. ಸೈಯ್ಯದ್ ಜಾಫರ್ ಸಖ್ವಾಫ್ (ಖು)
೬೪. ಹಜ್ರತ್ ಸೈಯ್ಯದ್ ಅಬೂಬಕರ್ ಬಾಫಖಿ (ಖು)
೬೫. ಹಜ್ರತ್ ಸೈಯ್ಯದ್ ಅಹ್ಮದ್‌ನಜೀರ್(ಖು)
೬೬. ಹಜ್ರತ್ ಸೈಯ್ಯದ್ ಜೈನ್ ಮುಕ್ಬಿಲ್ (ಖು)
೬೭. ಹಜ್ರತ್‌ಶೇಖ ಫರೀದ್ (ಖು)
೬೮. ಹಜ್ರತ್ ಶೇಖ ಅಹ್ಮದ್ ಬುರ್ಖಾಪೋಶ (ಖು)
೬೯. ಹಜ್ರತ್ ಮೌಲಾನಾ ಶೇಖ ಸಾಲೆಹ್ ಖಾದ್ರಿ (ಖು)
೭೦. ಹಜ್ರತ್ ಮೌಲಾನಾ ಮುಹಿಯುದ್ದೀನ್ ಖಾದ್ರಿ (ಖು)
೭೧. ಹಜ್ರತ್ ಸೈಯ್ಯದ್ ಮೀರಾಂ ಖಲ್ಫ(ಪುತ್ರ) ಸೈಯ್ಯ[illegible] ಅಸದುಲ್ಲಾಹ್ ಗುಜ್ರಾತಿ (ಖು)
೭೨. ಹಜ್ರತ್ ಖಾಜಿ ಸೈಯ್ಯದ್ ಮುಹಮ್ಮದ್ ಅಲಿ (ಖು)
೭೩. ಹಜ್ರತ್ ಸೈಯ್ಯದ್ ಅಬ್ದುಲ್‌ರೆಹಮಾನ್ ಹುಸೈನಿ (ಖು)
೭೪. ಹಜ್ರತ್ ಸೈಯ್ಯದ್ ಮುಹಮ್ಮದ್ ಮುದರ‍್ರಿಸ್ (ಖು)
೭೫. ಸೈಯ್ಯದ್ ಜೈನುದ್ದೀನ್ ಉರ್ಫ್ ಶಾಸಾಹೇಬ್ (ಖು)
೭೬. ಹಜ್ರತ್‌ಶಾಹ ಸಿಬಗತುಲ್ಲಾಹ ದ್ವಿತೀಯ (ಖು)
೭೭. ಹಜ್ರತ್ ಸೈಯ್ಯದ್ ಅಬ್ದುಲ್ ರೆಹಮಾನ್ ಉರ್ಫ್ ಮಿಯಾಂಸಾಬ್(ಖು)
೭೮. ಹಜ್ರತ್ ಸೈಯ್ಯದ್ ಅಲಿ ಮುಹಮ್ಮದ್(ಖು)
೭೯. ಹಜ್ರತ್ ಸೈಯ್ಯದ್ ಮುಹಮ್ಮದ್ ಸಾನಿ(ಖು) ದಸ್ತಗೀರ ದೋ ಆಲಂ(ಖು) ಎಂದು ಪ್ರಸಿದ್ಧರು
೮೦. ಹಜ್ರತ್ ಸಾನಿ ಶಾಹ್‌ಸಿಬ್ಗತಲ್ಲಾಹ್ ಹುಸೈನಿ (ಖು)
೮೧. ಹಜ್ರತ್ ಸೈಯ್ಯದ್ ಮುಹಮ್ಮದ್ ಹುಸೈನಿ ಉರ್ಫ್ ದಸ್ತಗೀರ್ ದೋ ಆಲಂ ಸಾನಿ
೮೨. ಹಜ್ರತ್ ಸೈಯ್ಯದ್ ಅಲಿ ಮುಹಮ್ಮದ್ ಸಾಸಿ ಅಲ್ ಹುಸೈನಿ (ಖು)
೮೩. ಪೀರ್ ದಸ್ತಗೀರ ಮುರ್ಷದನಾ ವ ಮೌಲಾನಾ ಸೈಯ್ಯದ್ ಶಾಹ್ ಬುರ್ಹಾನುದ್ದೀನ್ ಅಲ್ ಹುಸೈನಿ ಅಲ್‌ಖಾದ್ರಿ ಅಲ್ ಶತ್ತಾರಿ ಸಿಬಗತಲ್ಲಾಹಿ (ಖು)
೮೪. ಹಜ್ರತ್ ಸೈಯ್ಯದ್ ಕರೀಂ ಮುಹಮ್ಮದ್ (ಖು)

೪೮. ಸೈಯದ್ ಶಾಹ್ ಮುಹಿಯುದ್ದೀನ್ ಖಾದ್ರಿ (ಖು)
೪೯. ಹಜ್ರತ್ ಸೈಯದ್ ಶಾಹ್ ಹಾಫೀಜ್ ಹುಸ್ಸೈನ್ (ಖು) ಉರ್ಫ್ ಶಾ ಸಾಹೇಬ್ ಖಾದ್ರಿ
೫೦. ಸೈಯದ್ ಅಬ್ದುಲ್ ಖಾದಿರ್ ಸಬ್ಜಪೋಷ್
೫೧. ಹಜ್ರತ್ ಸೈಯದ್ ಹುಸ್ಸೈನ್ ಉರ್ಫ್ ಫಖ್ರುಲ್ಲಾಹ ಖಾದ್ರಿ (ಖು)
೫೨. ಹಜ್ರತ್ ಸೈಯದ್ ಶಾಹ್ ಹಾಫೀಜ್ ನಬೀ ಮುಹಿಯುದ್ದೀನ್ ಖಾದ್ರಿ (ಖು)
೫೩. ಸೈಯದ್ ಶಾಹ್ ಮುಹಮ್ಮದ್ ಖಾದ್ರಿ (ಖು)
೫೪. ಹಜ್ರತ್ ಸೈಯದ್ ಶಾಹ್ ಮುಹಿಯುದ್ದೀನ್ ಉರ್ಫ್ ನಬೀಶಾಸಾಹೇಬ್ ಖಾದ್ರಿ (ಖು)
೫೫. ಹಜ್ರತ್ ಸೈಯದ್ ಹುಸ್ಸೈನಿ ಪೀರ್ ಖಾದ್ರಿ
೫೫. ಹಜ್ರತ್ ಸೈಯದ್ ಹುಸ್ಸೈನಿ ಪೀರ್ ಖಾದ್ರಿ
೫೬. ಸೈಯದ್ ಶಾಹ ಮುಹಮ್ಮದ್ ಖಾದ್ರಿ ಉರ್ಫ್
ಮುಹಮ್ಮದ್ ಅಲಿ ಸಾಹೇಬ್ (ಖು)
೫೭. ಹಜ್ರತ್ ಶಾಹ್ ಬಡೇ ಸಾಹೇಬ್ (ಖು)
೫೮. ಹಜ್ರತ್ ಸೈಯದ್ ಶಾಹ್ ಮುಹಮ್ಮದ್ ಖಾದ್ರಿ (ಖು) 'ನೂರ್ ದರಿಯಾ' ಬಿರುದಾಂಕಿತರು
೫೯. ಹಜ್ರತ್ ಸೈಯದ್ ಶಾಹ್ ಮುಹಮ್ಮದ್ ಖಾದ್ರಿ ನೂರ್ ದಯಾರ್ (ಖು)
೬೦. ಸೈಯದ್ ಶಾಹ್ ಅಮೀನುದ್ದೀನ್ ಖಾದ್ರಿ ನೂರ್‌ದಯಾರ್ (ಖು)
೬೧. ಸೈಯದ್ ಶಾಹ್ ಸುಲ್ತಾನ ಪೀರ್‌ಖಾದ್ರಿ ನೂರ್‌ದಯಾರ್ (ಖು)
೬೨. ಹಜ್ರತ್ ಸೈಯದ್ ಶಾಹ್ ಮುಹಮ್ಮದ್ ಖಾದ್ರಿ ಮುತ್‌ವಕ್ಕಲಿ ನೂರ್ ದಯಾರ್ (ಖು)
೬೩. ಹಜ್ರತ್ ಸೈಯದ್ ಶಾಹ್ ಮುಹಿಯುದ್ದೀನ್ ಪೀರ್ ಖಾದ್ರಿ
೬೫. ಸೈಯದ್ ಅಮೀನ್ ಪೀರ್ ಖಾದ್ರಿ ನೂರ್ದ್‌ಯಾರ್ (ಖು)
೬೬. ಹಜ್ರತ್ ಸೈಯದ್ ಶಾಹ್ ವಲಿ ಪೀರ್ ಖಾದ್ರಿ ನೂರ್‌ದಯಾರ್ (ಖು)
೬೭. ಹಜ್ರತ್ ಸೈಯದ್ ಶಾಹ್ ಇಮಾಮ್ ಪೀರ್ ಖಾದ್ರಿ ನೂರ್‌ದಯಾರ್ (ಖು)
೬೮. ಹಜ್ರತ್ ಸೈಯದ್ ಶಾಹ್ ಹಾದಿನದೀಮ್ ಖಾದ್ರಿ (ಖು)
೬೯. ಹಜ್ರತ್ ಸೈಯದ್ ಶಾಹ್ ಬಡೇಸಾಹೇಬ್ ಖಾದ್ರಿ (ಖು)
೭೦. ಸೈಯದ್ ಶಾಹ್ ಮೀರಾಂ ಖಾದ್ರಿ (ಖು)

■

*

ಪ್ರಾರ್ಥನೆ- ಬಿಸ್ಮಿಲ್ಲಾಹ್ ಹಿರ್ರಹಿಮಾ ನಿರ್ರಹೀಮ್

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹುವಿನ ನಾಮದೊಂದಿಗೆ ಸರ್ವ ಸ್ತುತಿ-ಸ್ತೋತ್ರಗಳು ಅಲ್ಲಾಹುವಿಗೇ ಮೀಸಲು ಹಾಗೂ ಕೃತಜ್ಞತಾರ್ಪಣೆ, ಧನ್ಯತಾಭಾವದ ಕುಸುಮಗಳು ಅಲ್ಲಾಹುವಿಗೇ ಸಲ್ಲುತ್ತವೆ. ಯಾರಿಂದ ಜಗತ್ತಿನಲ್ಲಿ ಮನುಷ್ಯನ ಅಸ್ತಿತ್ವ ಸ್ಥಾಪಿತಗೊಂಡಿತು ಮತ್ತೆ ಯಾವ ವ್ಯಕ್ತಿಯು ಅಲ್ಲಾಹುವಿನ ಆಜ್ಞೆ ಪಾಲಿಸಿದನು ಆತನಿಗೆ ಅಲ್ಲಾಹುವಿನ ಸಾಮಿಪ್ಯ ಲಭಿಸಿತು ಹಾಗೂ ಆತನು ನೋವು, ಸಂಕಟ ಭಯ ಭೀತಿಗಳಿಂದ ಮುಕ್ತನಾದನು.

'ಅಲಾ ಇನ್ನು ಔಲಿಯಾ ಅಲ್ಲಾಹಿ ಲಾ ಖೌಫುನ್ ಅಲೈಹಿಮ್ ವಲಾಹುಮ್ ಯಹಜನೂನ್'ದ ಶುಭವಾರ್ತೆಯನ್ನು ದಿವ್ಯಕುರ್‌ಆನ್‌ನಲ್ಲಿ ನೀಡಲಾಯಿತು.

ಎಂದರೆ- ಗಮನವಿಟ್ಟು ಕೇಳಿರಿ, ನಿಸ್ಸಂದೇಹವಾಗಿಯೂ ದೇವನ ಆಪ್ತರಿಗೆ ಭಯವೂ ಇಲ್ಲ, ದುಃಖವೂ ಇಲ್ಲ.

ಮತ್ತು ಯಾರು ದೇವನಿಗೆ ದ್ರೋಹ ಬಗೆದನೊ; ಅವನ ವಿಶ್ವಸ್ಥ ನಿಧಿಯನ್ನು ದುರ್ಬಳಕೆಗೈದನೋ, ಅವನ ಆಜ್ಞೆಯನ್ನು ಉಲ್ಲಂಘಿಸಿದನೋ ಆತನು ಪಾಪಿಯಾದನು. ಹಾಗೂ ಅಜ್ಞಾನದ ಹೊಂಡದಲ್ಲಿ ಹೋಗಿ ಬಿದ್ದನು.

'ಬಲ್ ಹುಮ್ ಅಜಲ್ಲು ಸಬೀಲಾ' (ದಿವ್ಯ ಕುರ್‌ಆನ್)

'ಅರ್ಥಾತ್ ಗಾಢಾಂಧಕಾರದಲ್ಲಿ ಮುಳುಗಿದನು.' ದರೂದ್ ಆ ಪವಿತ್ರ ಆತ್ಮದ ಮೇಲೆ ಯಾರ ಕಾರಣದಿಂದ ವಿಶ್ವವು ಅಸ್ತಿತ್ವದಲ್ಲಿ ಬಂದಿತು ಅವರೇ ಮಾನವರ ಹೆಮ್ಮೆಯಾದ ಅಹಮದೇ ಮುಜ್ತಬಾ ಮುಹಮ್ಮದ್ ಮುಸ್ತಫಾ ಸ್ವಲ್ಲಲ್ಲಾಹ್ ಅಲೈ ವ

ಆಲೆ ವ ಅಸಹಾಬ ವ ಸ್ವಲ್ಲಿಮ್‌ರ ಮಾರ್ಗದರ್ಶನದ ಪ್ರಕಾಶದಿಂದ ಅಧರ್ಮಿಗಳಿಗೆ ನೇರಮಾರ್ಗ ಲಭಿಸಿತು ಹಾಗೂ ಅವರು 'ಕುಂತುಮ್ ಖೈರ ಉಮ್ಮತಿ'ಯ ಬಿರುದು ಹೊಂದಿದರು.(ಅತ್ಯುತ್ತಮ ಸಮುದಾಯದವರಾದರು)

ಇದರ ನಂತರ ಶಾಹ್ ಸೈಫುಲ್ಲಾ ಖಾದ್ರಿ ಶತ್ತಾರಿ ಸಿಬಗತುಲ್ಲಾಹಿಯು ವಿನಂತಿಸಿಕೊಳ್ಳುತ್ತಾರೆ. ಆಕಸ್ಮಿಕವಾಗಿ ಈ ಫಕೀರನು ದಖ್ಖನ್ನಿನ ರಾಯಚೂರ ಪ್ರದೇಶಕ್ಕೆ ಆಗಮಿಸಿದನು. ಅಲ್ಲಿ ಆಪ್ತ ಮಿತ್ರರಾದ ಅನುಭಾವಿ ಜನಾಬ್ ಸೈಯ್ಯದ್ ಶಾಹ್ ರೋಶನ ಅಲಿ ಸಾಹೇಬ್ ಖಾದ್ರಿ ಶತ್ತಾರಿ ಸಿಬಗತಲ್ಲಾಹಿಯವರ ಅತಿಥಿಯಾಗಿ ಬಹುದಿನದವರೆಗೆ ಇದ್ದೆನು. ಇದೇ ಅವಧಿಯಲ್ಲಿ ಜನಾಬ್‌ರು ಒಂದು ದಿನ ಬಿಜಾಪುರದ ಸೂಫಿಗಳ ಕುರಿತು ಇರುವ ಗ್ರಂಥ 'ರೌಜತುಲ್ ಔಲಿಯಾ'. ಈ ದಿನಗಳಲ್ಲಿ ಯಾವುದು ಲಭ್ಯವಿಲ್ಲವೋ ಅದನ್ನು ಬಹಳೇ ಕಷ್ಟಪಟ್ಟು ಒಂದು ಪ್ರತಿಯನ್ನು ಪಡೆದು ಸಿಬ್ಗತೆಇಲಾಹಿ ಮುದ್ರಣಾಲಯದಲ್ಲಿ ಪ್ರಕಟಿಸಲಾಗುತ್ತಿದೆ. ಅದರ ಪ್ರಥಮ ಭಾಗವು ಪ್ರಕಟವಾಗಿದೆ. ಈ ಗ್ರಂಥವು ಪರ್ಸಿಯನ್ ಭಾಷೆಯಲ್ಲಿದೆ. ಒಂದು ವೇಳೆ ಆ ಗ್ರಂಥದ ಅನುವಾದವನ್ನು ಉರ್ದು ಭಾಷೆಯಲ್ಲಿ ಮಾಡಿ ಪ್ರಕಟಗೊಳಿಸಿದರೆ, ಎಲ್ಲರಿಗೂ ಅದರಿಂದ ಪ್ರಯೋಜನವಾಗುತ್ತದೆ. ಇದರೊಂದಿಗೆ ಫಕೀರನಿಗೂ ಈ ಯೋಚನೆ ಬಂದಿತು. ಒಂದು ವೇಳೆ ಈ ಕಾರ್ಯವನ್ನು ಕೈಗೆತ್ತಿಕೊಂಡರೆ ಫಕೀರನು ಯಾವ ಸದ್ದುದ್ದೇಶದಿಂದ ಪ್ರಯೋಜನ ಪಡೆಯಬಯುಸುತ್ತಾನೋ ಆ ಸೂಫಿಗಳ ಹೆಸರುಗಳು ಈ ಪುಸ್ತಕದಲ್ಲಿವೆಯೋ ಅವರ ಪರಿಚಯವೂ ಆಗುತ್ತದೆ. ಎರಡನೆಯದಾಗಿ ಆತಿಥ್ಯ ನೀಡಿದ ಈ ಸಹೋದರರಿಗೂ ಸಂತೋಷವನ್ನು ನೀಡಿದಂತಾಗುತ್ತದೆ. ಮೂರನೆಯದಾಗಿ ಯಾರಿಗೆ ಇದನ್ನು ಓದುವದರಿಂದ ಜ್ಞಾನದಲ್ಲಿ ವೃದ್ಧಿಯಾಗುವದು ಅವರು ಈ ಫಕೀರನನ್ನು ತಮ್ಮ 'ದುವಾ' (ಪ್ರಾರ್ಥನೆ)ದಲ್ಲಿ ನೆನಪಿಸುವರು. ಹಾಗೂ ನಾನು ಮಣ್ಣಿನಲ್ಲಿ ಮಣ್ಣಾದ ಬಳಿಕವೂ ಅವರ ಪ್ರಾರ್ಥನೆಯಿಂದಾಗಿ ಸಮೃದ್ಧಿ ಲಭಿಸೀತು ಎಂಬ ಈ ಎಲ್ಲ ಯೋಚನೆಯಿಂದಾಗಿ ಸಂತೋಷದಿಂದ ಈ ಕಾರ್ಯಕ್ಕೆ ಅಣಿಯಾದೆನು. ಯಾವಾಗ ಅನುವಾದಗೈಯ್ಯಲು ಪ್ರಾರಂಭಿಸಿದೆನೋ

ದಿಖ್ಖತೆಂ ಪೇಶ್ ಜೊ ಆಯಿಂ, ಮೇರಾ ಜೀ ಜಾನತಾ ಹೈ ।
ಮೆಹನತೆಂ ಜಿತನಿ ಉಠಾಯಿಂ, ಮೇರಾ ಜೀ ಜಾನತಾ ಹೈ ॥

ಕಷ್ಟಗಳದೆಷ್ಟು ಬಂದವೋ ನನ್ನ ಮನಸ್ಸಿಗೇ ಗೊತ್ತು ।
ಶ್ರಮ ಅದೆಷ್ಟು ಪಟ್ಟೆನೋ ನನ್ನ ಮನಸ್ಸಿಗೇ ಗೊತ್ತು ॥

ಬಹಳಷ್ಟು ರೀತಿಯ ತೊಂದರೆಗಳನ್ನೆದುರಿಸಬೇಕಾಯಿತು. ಮೊದಲನೆಯದಾಗಿ ಲಭ್ಯ ಪುಸ್ತಕದಲ್ಲಿಯೇ ಗುರುತರವಾದ ಅನೇಕ ತಪ್ಪುಗಳು ನುಸುಳಿದ್ದವು. ಅವುಗಳನ್ನು

ತಿದ್ದಿ ತೀಡುವದು ತುಂಬಾ ಕಷ್ಟದಾಯಕ ಕೆಲಸವಾಗಿತ್ತು. ಬೇರೆ ಎರಡು ಮೂರು ಪ್ರತಿ ದೊರೆತಿದ್ದರೆ ಹೋಲಿಕೆಗೈದು ನೋಡಬಹುದಾಗಿತ್ತು. ಆದರೆ ಅದೂ ಸಾಧ್ಯವಿರಲಿಲ್ಲ. ಎರಡನೆಯದಾಗಿ ದಿನಾಂಕ, ಸಮಯ ಹಾಗೂ ಹೆಸರುಗಳ ಉಚ್ಚಾರಣೆಯಲ್ಲಿ ತೊಂದರೆ ಒದಗಿದಾಗ ಆ ಸಮಸ್ಯೆಯನ್ನು ಸ್ವತಃ ಬಿಜಾಪುರದಲ್ಲಿ ಸಂಶೋಧಿಸಿ ಪರಿಹರಿಸಿಕೊಳ್ಳಲಾಯಿತು. ಈ ಗ್ರಂಥದ ಹೊರತಾಗಿ ಬೇರೆಯ ಪುಸ್ತಕಗಳಿಂದ ಅಥವಾ ಬೇರೆಯವರೊಂದಿಗೆ ವಿಚಾರಿಸಿ ತಿಳಿದುಕೊಂಡ ವಿಷಯವನ್ನು ಅನುವಾದಕನ ಟಿಪ್ಪಣೆಯ ಅಡಿಯಲ್ಲಿ ವಿವರಿಸಲಾಗಿದೆ. ಇದರಿಂದ ಓದುಗರಿಗೆ ಈ ವಿಷಯವು ಮೂಲ ಗ್ರಂಥದಿಂದ ಹೊರತುಪಡಿಸಿ ಇದೆಯೆಂದು ತಿಳಿದುಬರುವುದು. ಈ ಆವೃತ್ತಿಯಲ್ಲಿ ಹೆಚ್ಚಿನ ಗಮನ ನೀಡಲಾಗಿದೆ. ಏನೆಂದರೆ ಈ ಗ್ರಂಥದಲ್ಲಿ ಉಲ್ಲೇಖಿಸಲ್ಪಟ್ಟಿರುವ ಮಹಾಪುರುಷರ ಸಂತತಿಯಿಂದ ಈಗ ಯಾರು ಯಾರು ಉಪಸ್ಥಿತರಿರುವರು. ಎಲ್ಲಿಯವರೆಗೆ ತಿಳಿದುಬಂದವೋ ಅಲ್ಲಿಯವರೆಗೆ ಬರೆಯಲಾಗಿದೆ.

ಇಲ್ಲಿ ಫಕೀರನ ಉದ್ದೇಶವೂ ಸಹ ಇದೇ ಆಗಿತ್ತು. ನಮ್ಮ ಮುರ್ಷಿದ್‌ರ ಆತ್ಮಚರಿತ್ರೆಯ ಪರಿಚಯಕ್ಕಾಗಿ ಇನ್ನೊಂದು ಗ್ರಂಥವನ್ನು ಬರೆಯುವುದು ಆದರೆ, ಈ ಕಾರ್ಯಪೂರ್ತಿಗಾಗಿ ಅನ್ಯ ಪುಸ್ತಕಾವಲಂಬನೆಯ ಅವಶ್ಯಕತೆಯಿತ್ತು. ಸಂತೃಪ್ತಿದಾಯಕ ಬರವಣಿಗೆಗೆ ಅದರ ಅವಶ್ಯಕತೆಯಿತ್ತು. ಆದರೆ ಇಲ್ಲಿಯವರೆಗೂ ಅವು ಲಭ್ಯವಾಗಿಲ್ಲ. ಈಗ ಈ ಪುಸ್ತಕದ ಅನುವಾದದ ಅವಶ್ಯಕತೆಯುಂಟಾಯಿತು. ಆಗ ಹಜ್ರತ್ ಸಿಬಗತಲ್ಲಾಹಿಯವರ ವಂಶದ ಮಹಾಪುರುಷರ ವಿವರಣೆಯ ಕುರಿತು ನೆಮ್ಮದಿದಾಯಕವೆನಿಸಲಿಲ್ಲವಾದರೂ ಸಂಕ್ಷಿಪ್ತ ವಿವರದಲ್ಲಿಯೇ ತೃಪ್ತಿಪಡಬೇಕಾಯಿತು. ಒಂದು ವೇಳೆ ಈ ಕಾರ್ಯವು ಮದ್ರಾಸಿನಲ್ಲಿ ನಡೆಯುತ್ತಿದ್ದರೆ ಇನ್ನಷ್ಟು ವಿವರವಾಗಿ ಬರೆಯಬಹುದಾಗಿತ್ತು. ಇಲ್ಲಿ ನಾನು ಒಬ್ಬರ ಅತಿಥಿಯಾಗಿರುವೆನು. ಹಾಗೂ ಎರಡನೆಯದಾಗಿ ನಾನು ಮದೀನಾ ತಯ್ಯಿಬಾಕ್ಕೆ ಹೋಗುವ ಅದಮ್ಯ ಇಚ್ಛೆಯುಳ್ಳವನಾಗಿದ್ದೇನೆ ಆ ಕಾರಣಕ್ಕೆ ಪರಿಸ್ಥಿತಿಗನುಗುಣವಾಗಿ ಎಷ್ಟು ಲಭ್ಯ ಮಾಹಿತಿಯಿತ್ತೊ ಅದನ್ನೇ ಅಳವಡಿಸಲಾಯಿತು. ನಮ್ಮ ಪೀರ್ ಮುರ್ಷಿದ್ ಸೈಯ್ಯದುಸ್ಸಾದಾತ್, ಮಂಮಬಯುಲ್‌ಸಾದಾತ್ ಖುತ್ಬುಲ್ ಮುಹಖ್ಖಿಕೀನ್ ಬುರ್ಹಾನುಲ್ ಹಕ್ ಹಜ್ರತ್ ಸೈಯ್ಯದಶಾಹ್ ಬುರ್ಹಾನುದ್ದೀನ್ ಅಲ್ ಹಸ್ನಿ ಅಲ್ ಖಾದ್ರಿ ಶತ್ತಾರಿ ಸಿಬ್ಗತಲ್ಲಾಹಿ ಖುದ್ದಿಸ್ಸಿರ್ರಹುಲ್‌ಅಜೀಜ್‌ರವರೆಗೆ ನಿರಂತರ ವಿವರಣೆಯನ್ನು ವಿಸ್ತರಿಸಲಾಯಿತು. ಈಗ ಓದುಗರಲ್ಲಿ ಈ ವಿನಂತಿಯಿದೆ. ಈ ಗ್ರಂಥದಲ್ಲಿ ಎಲ್ಲಿಯಾದರೂ ತಪ್ಪು ಕಂಡುಬಂದರೆ ದಯಮಾಡಿ ಅದನ್ನು ಸರಿಗೊಳಿಸಬೇಕು ಹಾಗೂ ಈ ಗ್ರಂಥವು ತಮಗೆ ತೃಪ್ತಿ ನೀಡಿದರೆ ಫಕೀರನ ಒಳತಿಗಾಗಿ 'ದುವಾ' ಮಾಡಿರಿ.

ಬಿಸ್ಮಿಲ್ಲಾಹ್ ಹಿರ್ರಹಮಾ ನಿರ್ರಹೀಮ್

ದಯಾಮಯನೂ, ಕರುಣಾನಿಧಿಯೂ ಆದ ಅಲ್ಲಾಹುವಿನ ನಾಮದೊಂದಿಗೆ ಪ್ರಾರಂಭಿಸುತ್ತೇನೆ.

ಸ್ತುತಿ ಸ್ತೋತ್ರ....

ಸರ್ವ ಸ್ತುತಿಸ್ತೋತ್ರಗಳೂ ಆ ಅಲ್ಲಾಹುವಿಗೇ ಮೀಸಲು ಯಾರು ತನ್ನ ಆಪ್ತರ (ಯಾರ ಮೇಲೆ ಅಲ್ಲಾಹುವಿನ ಶಾಂತಿ, ಕರುಣೆ ವರ್ಷಿಸಿದವೋ) ಅವರ ಅಸ್ತಿತ್ವವನ್ನು ಲೋಕದ ಹಿತಕ್ಕಾಗಿ, ಶಾಂತಿಗಾಗಿ ಕಾರಣೀಭೂತಗೊಳಿಸಿದನೋ ಹಾಗೂ ಜಗಜ್ಯೋತಿಯಾಗಿಸಿದನು ಹಾಗೂ ಅವರ ಮುಖಾಂತರ ಒಳಿತಿನ ಉಪದೇಶ ಹಾಗೂ ಮಾರ್ಗದರ್ಶನದ ದಾರಿ ತೆರೆದನು. ಏಕೆಂದರೆ, ದಾರಿ ತಪ್ಪಿ, ಮೂಢನಂಬಿಕೆಯ ಗೂಡಿನಲ್ಲಿ ಸಿಲುಕಿ ತೊಂದರೆಗೊಳಗಾಗಿದ್ದವರು ಈ ಸೂಫಿಗಳ ಸಂಪರ್ಕದಲ್ಲಿ ಬಂದು ಸನ್ನಡತೆಯನ್ನು ಜೀವನದಲ್ಲಿ ಅಳವಡಿಸಿಕೊಂಡು ನೇರ ಮಾರ್ಗಕ್ಕೆ ತಲುಪಿದರು. ಅಲ್ಲಾಹುವನ್ನು ಪಡೆಯುವ ಅದಮ್ಯ ಇಚ್ಛೆಯುಳ್ಳವರಾಗಿ ಸತ್ಯ ಮಾರ್ಗವನ್ನು ತಲುಪಲು ಯತ್ನಿಸುತ್ತಾ ತಮ್ಮ ಭ್ರಮೆ ಹಾಗೂ ಕಾಲ್ಪನಿಕ ಮಾರ್ಗಗಳನ್ನು ತ್ಯಜಿಸಿ ವಾಸ್ತವಕ್ಕೆ ಮರಳಿದರು ಹಾಗೂ ಉನ್ನತಿ ಹೊಂದುವುದಕ್ಕಾಗಿ ಆ ಮಹಾಪುರುಷರ ಸಾಂಗತ್ಯದಿಂದ ಅನುಭಾವಿಗಳಾದರು. ದೇವನ ಇರುವಿನ ಅರಿವು, ಏಕ ದೇವೋಪಾಸನೆಯಲ್ಲಿ ಸಂಪೂರ್ಣ ನೆಮ್ಮದಿ ಹೊಂದಿದರು. ಇಹಪರ ಎರಡರಲ್ಲಿಯೂ ಮುಕ್ತಿ ಹೊಂದುವ ದಾರಿ ಕಂಡುಕೊಂಡರು ಹಾಗೂ ಸೂಫಿಗಳ ಖಾನ್‌ಖಾಹ್, ದರ್ಗಾಗಳಿಗೆ ಭೇಟಿನೀಡಿ, ಅವರ ಮಾರ್ಗದರ್ಶನ ಪಡೆದು ಜೀವನದ ಸಾರ್ಥಕ್ಯ ಪಡೆದರು. ಭುವಿಯ ಮೇಲೆ ಹಾಗೂ ಆಕಾಶದಿಂದಲೂ ಉಂಟಾಗುವ ವಿಕೋಪದಿಂದ ಉಳಿಯಲು ಅಲ್ಲಾಹುವಿನ ಕರುಣೆ ಬಯಸಿ, ಅವನ ಆಪ್ತರನ್ನು ಗೌರವಿಸಿ ಧಾರ್ಮಿಕ ಹಾಗೂ ಪಾರಲೌಕಿಕ ಯಶಸ್ಸಿಗಾಗಿ ಪ್ರಾರ್ಥಿಸಲು ಕೋರಿಕೊಂಡರು. 'ದರೂದ ಸಲಾಂ'ದ (ಅಲ್ಲಾಹುವಿನ ಕೃಪೆಯು ಅವರ ಮೇಲೆ ವರ್ಷಿಸಲಿ)ಉತ್ತಮ ಮುತ್ತುಗಳು ಹುಜೂರ ಮುಹಮ್ಮದ್ (ಸ)ರಿಗೆ ಅರ್ಪಿತವಾಗಲಿ ಯಾರಿಂದ ಮನುಕುಲಕ್ಕೆ ಮಾರ್ಗದರ್ಶನ ದೊರೆಯಿತು. ಅವರು ಸರ್ವ ಸೃಷ್ಟಿಗಳ ಸರ್ದಾರರು. ಪೈಗಂಬರರ ನಾಯಕರು ನ್ಯಾಯದ ದಿನದಂದು ಸಹಾಯ ಹಸ್ತ ನೀಡುವವರು ರಹಸ್ಯಜ್ಞಾನವನ್ನು ಅರಿಯುವವರ ಮುಖಂಡರು. ಹಾಗೂ ಜನ್ಮದಿಂದ ಪ್ರಥಮರು (ಸೃಷ್ಟಿ, ಸೃಷ್ಟಿಯಾಗುವದಕ್ಕಿಂತ ಮೊದಲು ಅಹ್ಮದ್‌ರ ಪ್ರಕಾಶದ ಅಸ್ತಿತ್ವವಿತ್ತು)

ಜಗತ್ತಿನಲ್ಲಿ ಆಗಮಿಸಿದ ಪೈಗಂಬರರಲ್ಲಿ ಅಂತಿಮ ಪ್ರವಾದಿಗಳು ಹಜ್ರತ್ ಮುಹಮ್ಮದ್ ಸ್ವಲ್ಲಲ್ಲಾಹು ಅಲೈಹಿ ವ ಸ್ವಲ್ಲಮ್‌ರವರ ಪವಿತ್ರ ಸಮಾಧಿಯ ಮೇಲೆ

ಹಾಗೂ ಅವರ ಪಾವನ ಸಂತತಿಯ ಮೇಲೆ ಹಾಗೂ ಅವರ ಸಂಗಾತಿಗಳ ಮೇಲೆ ಯಾರು ರಹಸ್ಯ ಜ್ಞಾನದ ಸೆಲೆಯಾಗಿರುವರು. ಮಾರ್ಗದರ್ಶನದ ಜ್ಯೋತಿಯಾಗಿರುವರು ಅವರೆಲ್ಲರ ಮೇಲೆ 'ದರೂದೋ ಸಲಾಂ' ಸಲ್ಲಲಿ.

ಯಾವ ಸಮಯವು ಅಲ್ಲಾಹುವಿನ ಸ್ಮರಣೆ ಹಾಗೂ ಆತನ ಆಪ್ತರ ನೆನಹು, ಶ್ಲಾಘನೆಯಲ್ಲಿ ಕಳೆಯುವುದೋ ಯಾವ ಕ್ಷಣಗಳು ದೇವನ ಆಪ್ತರ ಆಚರಣೆಯ ಕುರಿತು ಚರ್ಚಿಸಲ್ಪಡುವುದೋ ಆ ಸಮಯವು ಎಲ್ಲ ಕಾಲದಲ್ಲಿಯೂ ಅತ್ಯುತ್ತಮವಾದುದಾಗಿದೆ. ಯಾವ ನಾಲಿಗೆಯು ಸೂಫಿಗಳ ಪವಾಡಗಳನ್ನು ವಿವರಿಸುವುದೋ ಹಾಗೂ ಯಾವ ಸಮಯವು ಪಾವನ, ಪವಿತ್ರಾತ್ಮರ ಚರಿತ್ರೆಯ ಚಿಂತನ-ಮಂಥನದಲ್ಲಿ ನಿಮಗ್ನವಾಗಿರುವುದೋ ಅದು ಎಲ್ಲ ನಾಲಿಗೆಗಳಿಗಿಂತಲೂ ಶ್ರೇಷ್ಠವಾದುದಾಗಿದೆ. ಏಕೆಂದರೆ ಅದರಿಂದ ಹೃದಯಕ್ಕೆ ಅತ್ಯಾನಂದ ಲಭಿಸುವುದು ಹಾಗೂ ಕೇಳುವುದರಿಂದ ಹರ್ಷೋಲ್ಲಾಸ ಉಂಟಾಗುವುದು.

ಮನ್ ಜಕರಾ ವಿಲಾಯತನ್ ಮಿನ್ ವಿಲಾಯತಿಲ್ ಔಲಿಯಾಯಿ, ಫಲಹೂ ಕ ಅಜ್ರಿ ಇಬಾದತಿಸ್ಸಕ್ಲೈನಿ–

ಅರ್ಥ – ಯಾವ ಓರ್ವ ವ್ಯಕ್ತಿಯು ಸೂಫಿಗಳ ವ್ಯಕ್ತಿತ್ವದ ಒಂದು ಗುಣಗಾನ ಮಾಡುವನೋ ಸ್ಮರಿಸುವನೋ ಆ ವ್ಯಕ್ತಿಗೆ ಜಿನ್(ಯಕ್ಷ) ಹಾಗೂ ಎಲ್ಲ ಮನುಷ್ಯರ ಆರಾಧನೆಯ ಸಮಾನ ಪುಣ್ಯ ಲಭಿಸುವುದು. ಇಂತಹ ಪುಣ್ಯಕಾಯಕದಿಂದ ಯಾರೂ ವಂಚಿತರಾಗಬಾರದು.

ಸ್ ಷರೀಫ್ ಮನ್ ಅಹಬ್ಬ ಕೌಮನ್ ಫಹುವ ಮಿನ್‌ಹುಮ್

ಅರ್ಥ – ಯಾವ ವ್ಯಕ್ತಿಯು ಯಾವ ಒಂದು ಸಮುದಾಯವನ್ನು ಪ್ರೀತಿಸುವನೋ ಅಂಥವನನ್ನು ಅದೇ ಸಮುದಾಯದಲ್ಲಿ ಪರಿಗಣಿಸಲಾಗುವುದು.

ಜಗತ್ತನ್ನು ವೈರಾಗ್ಯದಿಂದ ನೋಡುವವರ ದೊರೆ, ಅಲ್ಲಾಹುವಿನ ಸಾಂಗತ್ಯ ಕಲ್ಪಿಸುವವರ ನಾಯಕರು, ಸುಲ್ತಾನ್ ಇಬ್ರಾಹಿಂ ಅದ್ಹಮ್ ಬಲ್ಖಿ (ಖ) ವಿವರಿಸುವರು ಒಂದು ರಾತ್ರಿ ನಾನು ಸ್ವಪ್ನದಲ್ಲಿ ನೋಡಿದೆನು. ಓರ್ವ ದೇವಚರನು ಕೈಯಲ್ಲಿ ಕಾಗದ ಹಿಡಿದಿರುವನು ಹಾಗೂ ಅದರಲ್ಲಿ ಏನನ್ನೋ ಬರೆಯುತ್ತಿರುವನು. ನಾನು ಕೇಳಿದೆನು ಏನನ್ನು ಬರೆಯುತ್ತಿರುವಿರಿ? ಆತನೆಂದನು ಅಲ್ಲಾಹುವಿನ ಸ್ನೇಹಿತರ ಹೆಸರುಗಳು. ನಾನು ಕೇಳಿದೆನು ನನ್ನ ಹೆಸರನ್ನೂ ಕೂಡ ಬರೆದಿದ್ದಿಯಾ? ಆತನೆಂದನು ಇಲ್ಲ! ಮತ್ತೆ ನಾನೆಂದೆನು ಒಂದು ವೇಳೆ ನಾನು ಅವರಲ್ಲಿ ಓರ್ವನಾಗಿರಲಿಕ್ಕಿಲ್ಲ ಆದರೆ ಅಲ್ಲಾಹುವಿನ ಗೆಳೆಯರನ್ನು ಗೆಳೆಯರಾಗಿ ಕಂಡಿದ್ದೇನೆ. ಈ ಸಂಭಾಷಣೆಯಲ್ಲಿ ನಿರತನಾಗಿದ್ದೆನು ಆಗ ಮತ್ತೋರ್ವ ದೇವಚರ ಅಲ್ಲಿ ಆಗಮಿಸಿದನು ಹಾಗೂ ಅಲ್ಲಾಹುವಿನ

ಆಜ್ಞೆಯಾಗಿದೆ. ಪುಸ್ತಕವನ್ನು ಮತ್ತೊಮ್ಮೆ ಪ್ರಾರಂಭಿಸು ಹಾಗೂ ಇಬ್ರಾಹಿಂನ ಹೆಸರನ್ನು ಎಲ್ಲರಿಗಿಂತಲೂ ಮೊದಲು ಬರೆ! ಏಕೆಂದರೆ ಆತನು ನನ್ನ ಸ್ನೇಹಿತರ ಸ್ನೇಹಿತನಾಗಿರುವನು. ಅಬು ಅಬ್ದುಲ್ಲಾಹ್ ಸಂಜರಿ(ಖ) ಹೇಳುವರು, ಜನರಿಗೆ ಅತ್ಯುತ್ಕೃಷ್ಟ ಲಾಭ ತರುವ ವಸ್ತುವೆಂದರೆ ಉತ್ತಮ ಚಾರಿತ್ರ್ಯವಂತರ ಸಾಂಗತ್ಯ, ಆಚರಣೆಯಲ್ಲಿ ಅವರ ನಡೆನುಡಿ ಅಳವಡಿಸಿಕೊಳ್ಳುವುದು ಹಾಗೂ ಅಲ್ಲಾಹುವಿನ ಗೆಳೆಯರ ಸಮಾಧಿಗಳ ದರ್ಶನ ಮಾಡುವುದು ಇರುವದು. ಆ ಕಾರಣಕ್ಕೆ ಮುಹಮ್ಮದ್ ಇಬ್ರಾಹಿಂ ಅಫಿ ಅಲ್ಲಾಅನಹು (ಮುಹಮ್ಮದ್ ಇಬ್ರಾಹಿಂ ಉರ್ಫ್ ಸಾಹೇಬ್ ಬಾದಶಹ ಖಲೀಫಾ ಸೈಯ್ಯದ್ ಶಾಹ್ ಅಬ್ದುಲ್ಲಾಹ್ ಹುಸೈನಿ ಅಲ್‌ಖಾದ್ರಿ ಹಾಷ್ಮಿ ವ ಶತ್ತಾರಿ) ಯಾವ ಮಹಾಪುರುಷರು ಸೂಫಿಗಳು ಪವಿತ್ರ ಭೂಮಿಯಾದ ಬಿಜಾಪುರಕ್ಕೆ ತಮ್ಮ ಆಗಮನದಿಂದ ಗೌರವ ಹಾಗೂ ಘನತೆ ನೀಡಿದರು ಹಾಗೂ ಜನಸಾಮಾನ್ಯರಿಗೆ ಮಾರ್ಗದರ್ಶನ ಹಾಗೂ ಉಪದೇಶ, ರಹಸ್ಯಜ್ಞಾನ (ಆಧ್ಯಾತ್ಮಿಕ) ಹಾಗೂ ಲೌಕಿಕ ಜ್ಞಾನವನ್ನು ನೀಡಿ ಇಲ್ಲಿಯೇ ಸಮಾಧಿಸ್ಥರಾದರು. ಅವರ ಸಂಕ್ಷಿಪ್ತ ಜೀವನ ಚರಿತ್ರೆ, ಅವರಿಂದ ಜರುಗಿದ ಪವಾಡಗಳನ್ನು ಬರೆದು ಲೌಕಿಕ ಹಾಗೂ ಪಾರಲೌಕಿಕ ಯಶಸ್ಸನ್ನು ಪಡೆಯುವ ಬಯಕೆಯಿಂದ ಪ್ರಾರಂಭಿಸಿದೆನು. ಆದರೆ ಅನಿವಾರ್ಯ ಕಾರಣಗಳಿಂದ ಆ ಬಹಳಷ್ಟು ಸೂಫಿಗಳ ವಿವರವು (ಸ್ಥಳ, ದಿನಾಂಕ, ಬರೆಸಿದ ಕಾಲ, ಇತ್ಯಾದಿ) ಕಾಲಾನುಕ್ರಮವಾಗಿ ದೊರೆಯಲಿಲ್ಲ. ಈ ಮಹಾಪುರುಷರ ತಂಡದ ಬಹಳಷ್ಟು ಸಮಾಧಿಗಳು ಅಜ್ಞಾತವಾಗಿಯೇ ಉಳಿದಿವೆ. ಔಲಿಯಾಯೀ ತಹತ್ ಕಬಾಯೀ ಲಾ ಯಾರಿಫುಹುಮ್ ಗೈರಿ (ಅಂದರೆ ನನ್ನ ಸ್ನೇಹಿತರು ನನ್ನ ಉಡಿಯಲ್ಲಿ ಅಡಗಿರುವರು ಅವರಿಗೆ ನನ್ನ ಹೊರತಾಗಿ ಯಾರೂ ಅರಿಯುವುದಿಲ್ಲ.) ಅವರ ಬದುಕಿನ ಘಟನೆ ಹಾಗೂ ಅವರ ನಿಧನದ ದಿನಾಂಕ, ಅವರ ಸಮಾಧಿಗಳ ಸ್ಥಳವು ಯಾರಿಗೂ ತಿಳಿದಿಲ್ಲ. ಆದರೆ ಕೆಲವು ಐತಿಹ್ಯ, ಪವಾಡಗಳು ಹಾಗೂ ಕೆಲ ಪ್ರಸಿದ್ಧ ಸೂಫಿಗಳ ಪವಾಡಗಳು, ಸಮೃದ್ಧಿಯು ಇಂದಿನವರೆಗೂ ಮುಂದುವರೆದು ಬಂದಿದೆ. ಆ ವಿವರಗಳನ್ನು ಶಿಜರಯೇ ಜುನೈದಿಯಾ (ಜುನೈದಿಯವರ ವಂಶಾವಳಿ) ಹಾಗೂ ಪುಸ್ತಿಕೆ 'ಖಿದವತಲ್ ಇಕ್ರಾಮ' 'ಖುತ್ಬುಲ್ ಅನಾಮ' ಹಜ್ರತ್ ಹು ಮೌಲಾನಾ ಹಬೀಬುಲ್ಲಾಹ್ ಸಿಬಗತಲ್ಲಾಹ್ ಇವರು ಬರೆದಿರುವರು ಇವುಗಳಿಂದ ಹಾಗೂ ಕೆಲ ವಿಷಯ ಗಂಜುಲ್ ಅಸ್ರಾರ್ ಮಲ್ಫೂಜ್ (ಪುಸ್ತಿಕೆ) ಅಖ್ತಾಬ್ ಖತ್ತಾಬ್ ಫರೀದುಲ್ ಅಹ್‌ಬಾಬ್ ಪೀರ್ ವ ದಸ್ತಗೀರ್ ಹಜ್ರತ್ ಹಾಷಿಂ ಹುಸೈನಿ ಅಲ್ವಿ (ಖ) ಖುದ್ದಿಸ್ಸಿರ್ರೂಹುಲ್‌ಅಜೀಜ್‌ರವರು ಬರೆದ ಪುಸ್ತಿಕೆಯಿಂದ ಆಯ್ದು ಹಾಗೂ ಜನಾಬ್ ಮುರ್ಷಿದಿ ಸೈಯ್ಯದಿ ಖುತ್ಬಿ ಹಜ್ರತ್‌ಶಾಹ್ ಅಬ್ದುಲ್ಲಾಹ್ ಹುಸೈನಿ ಅಲ್ವಿಅಬಖಾ ಉಲ್ಲಾಹು ಮುತಮಕ್ಕಿನನ್ ಅಲಾ ರಾಅಸಿ ವ ರೂಊಸಿಲ್‌ಉನಾಸೀ ಅಲ್ಲಾಹುವು ಅವರನ್ನು ಸದಾಕಾಲ ನನ್ನ ಹಾಗೂ ಉಳಿದವರ ಮನಸ್ಸಿನಲ್ಲಿ ನೆಲೆಯಿಡಲಿ. ಜನಾಬ್

ವಲಿ ನ್ಯಾಮಿ ಖಿಬ್ಲಾ ಮುಹಮ್ಮದ್ ಮುರ್ತುಜಾ ಅವರಿಂದ ಅಬಖಾ ಉಲ್ಲಾಹು ವ ಅಮದ್ದ ಜಿಲಾಲ ಬರಕಾತಿಹೀ (ಅಲ್ಲಾಹುವು ಅವರನ್ನು ದೀರ್ಘಾಯುವಾಗಿಸಲಿ) ಹಾಗೂ ಸಮೃದ್ಧಿಯನ್ನು ಇನ್ನಷ್ಟು ಸುದೀರ್ಘವಾಗಿಸಲಿ. ಸಾಹೇಬ್ ಹಜ್ರತ್‌ರ ಮಾತು ಕೇಳಿ ಧಾರ್ಮಿಕ ಸಮೃದ್ಧಿ ಹಾಗೂ ಮರಣೋತ್ತರ ಲಭಿಸುವ ನಿರಂತರ ಪುಣ್ಯದ ಇಚ್ಛೆಯಿಂದ ಈ ಸುಕಾರ್ಯಕ್ಕಾಗಿ ಸನ್ನದ್ಧನಾದೆನು. ಹಾಗೂ ಸಮೃದ್ಧಿ ಹೊಂದುವ ಬಯಕೆಯಿಂದ ಪ್ರಪ್ರಥಮವಾಗಿ ಹಜ್ರತ್ ಮುಹಮ್ಮದ್ ಸ್ವಲ್ಲಲ್ಲಾಹು ಅಲೈಹಿ ವ ಸ್ವಲ್ಲಮ್‌ರ ಅತ್ಯಮೂಲ್ಯ ಕುರುಹುಗಳು ಬಿಜಾಪುರಕ್ಕೆ ಬಂದು ತಲುಪುವುದರಿಂದ ಹಿಡಿದು ಅದರ ದರ್ಶನ ಮಾತ್ರದಿಂದ ಉಂಟಾದ ಲಾಭಗಳು ಹಾಗೂ ಪವಾಡಗಳ ವಿವರಣೆಯಿಂದ ಪ್ರಾರಂಭಿಸಿದ ಸೂಫಿಗಳ ಗ್ರಂಥಕ್ಕೆ 'ರೌಜವತಲ್ ಔಲಿಯಾ' ಎಂದು ಹೆಸರಿಸಲಾಯಿತು. ವಲ್ಲಾಹು ಹುವಲ್ ಮುವಫ್ಫಿಕು ವಲ್ ಮೊಯೀನು, ಅಲ್ಲಾಹುಮ್ಮನ್ ಫನಾ ಮಿನ್ ಬರಕಾತ್ತಿಹಿಮ್। ಅಲ್ಲಾಹುವೇ ಸಮೃದ್ಧಿ ನೀಡುವವನು ಹಾಗೂ ಸಹಾಯ ಮಾಡುವವನಾಗಿದ್ದಾನೆ. ಅಲ್ಲಾಹು! ನೀನು ಈ ಸೂಫಿಗಳ ಸಮೃದ್ಧಿಯಿಂದ ನಮ್ಮನ್ನು ಧನ್ಯನಾಗಿಸು.

■

*

'ಆಸಾರ್ ಷರೀಫ್'ದ ವಿವರಣೆ

ತಮಗೆ ತಿಳಿದಿರಲಿ, ಆಸಾರೆ ಖುದ್ಸಿ ಅನ್ವಾರ್ ಎಂದರೆ ಹಜ್ರತ್ ರ ಪವಿತ್ರ ಗಡ್ಡದ ಕೇಶಕಸ್ತೂರಿಗಳಾಗಿರುವವು. ಹಜ್ರತ್ ಮುಹಮ್ಮದ್(ಸ)ಪ್ರವಾದಿ ಲೋಕಾನುಗ್ರಹಿ, ಮನುಕುಲದ ಪ್ರಸ್ತುತ ಜಗತ್ತಿನಲ್ಲಿರುವ ಸರ್ವ ಜನರ ನಾಯಕರು ಆಗಿರುವರು.

ಇವುಗಳ ಅಧಿಕೃತತೆಯು ಹಾಗೂ ಪವಾಡಗಳು ಹಿಂದೂಸ್ಥಾನ ಹಾಗೂ ದಖ್ಖನ್ನಿನಲ್ಲಿ ಪ್ರಸಿದ್ಧವಾಗಿವೆ. ಸಂಶೋಧಕರು ಅದರ ಅಧಿಕೃತತೆಯನ್ನು ವಿಶ್ವಸ್ಥ ಮೂಲಗಳಿಂದ ಪಡೆದುಕೊಂಡರು ಹಾಗೂ ಸುಪ್ರಸಿದ್ಧ ಸೂಫಿವರ್ಯರು ಅದರ ರಹಸ್ಯವನ್ನು ಹಾಗೂ ಅಲ್ಲಾಹುವಿನಿಂದ ಹೃದ್ಗತವಾದ ಮಾತನ್ನು, ಸ್ವಪ್ನದಲ್ಲಿ ಪಡೆದ ದರ್ಶನ, ಆಕಾಶವಾಣಿಯ ಮೂಲಕ ಗ್ರಹಿಸಿ ಅದರ ಸತ್ಯತೆಯನ್ನು ತಿಳಿದು ಸದಾಕಾಲ ಆ ಕೇಶಕಸ್ತೂರಿ ದರ್ಶನಕ್ಕಾಗಿ ಹಾತೊರೆದು ಅವುಗಳ ದರ್ಶನದಿಂದ ಸಮೃದ್ಧಿಯನ್ನು ಪಡೆದರು ಹಾಗೂ ಅದರ ಅಧಿಕೃತತೆಯನ್ನು ಪ್ರಮಾಣ ಪತ್ರದಲ್ಲಿ ನಮೂದಿಸುವ ಮೂಲಕ ದೃಢಪಡಿಸಿದರು. ಈ ಪ್ರಸಿದ್ಧ ಸೂಫಿವರ್ಯರಲ್ಲಿ ಓರ್ವರಾದ ಸೈಯ್ಯದುಸ್ಸಾದಾತ್, ಖುತ್ಬುಲ್ ಔಲಿಯಾ ಹಜ್ರತ್ ಶಾಹ್ ಸಿಬಗತಲ್ಲಾಹ್ ಅಲ್ ಹುಸೈನಿ ಅಲ್ ಭರೋಚಿ ಅಲ್ ಮದ್ನಿ(ಖು)ರವರು ಆ ಪವಿತ್ರ ಕೇಶಕಸ್ತೂರಿಯ ದರ್ಶನದ ನಂತರ ಅದರ ಅಧಿಕೃತತೆಯನ್ನು ತಮ್ಮ ಸ್ವಹಸ್ತಾಕ್ಷರದಿಂದ ಈ ಸನದನ್ನು ಬರೆದು ಕೊಟ್ಟಿರುವರು. ಫಕೀರನಿಗೆ (ಬಷಾರತ್)ದೈವಿಸಂಜ್ಞೆಯಿಂದ ತಿಳಿದುಬಂದಿದೆ. ಈ ಪವಿತ್ರ ಕೇಶಕಸ್ತೂರಿಗಳು ಹಜ್ರತ್ ಸರ್ವರೆ ಆಲಮ್ ಮುಹಮ್ಮದ್ (ಸ) ಅವರ ಗಡ್ಡದ ಕೇಶಕಸ್ತೂರಿಗಳಾಗಿವೆ ಹಾಗೂ ಈ ಸನದವು ಆಸಾರ ಷರೀಫ್‌ದ ಧರ್ಮದರ್ಶಿಗಳ ಬಳಿ ಇರುವುದು. ಈ ಆಸಾರ ಷರೀಫ್ (ಕೇಶಕಸ್ತೂರಿ)ಗೆ ಇಬ್ರಾಹಿಂ ಆದಿಲ್‌ಶಾಹ್‌ನು ತನ್ನ ಸೌಭಾಗ್ಯದಿಂದ ಬಹಳಷ್ಟು ಧನವನ್ನು ವ್ಯಯಿಸಿ, ತುಂಬಾ ಆಸ್ಥೆಯೊಂದಿಗೆ ಮೀರ್ ಸ್ವಾಲೆಹ್ ಹಮ್ದಾನಿಯವರಿಂದ ಪಡೆದು ಒಂದು ಬೃಹತ್ ಅರಮನೆಯಲ್ಲಿ ಇರಿಸಿದನು. ಅದನ್ನು ತುಂಬಾ ಗೌರವ

ಪೂರ್ವಕವಾಗಿ ನೋಡಿಕೊಳ್ಳುತ್ತಿದ್ದನು. ಸೇವಕರು, ಹಾಫೀಜರು (ಕುರ್‌ಆನ್ ಕಂಠಸ್ಥಗೊಳಿಸಿದವರು) ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಲಂಗರ್ (ದಾಸೋಹ)ದ ಖರ್ಚಿಗಾಗಿ ಸಾಕಷ್ಟು ಮೊಬಲಗನ್ನು ತೆಗೆದಿರಿಸಿದನು. ಜೊತೆಗೆ ಆಸಾರೆ ಅಹಲೆ ಬೈತ್ (ಎಂದರೆ ಮುಹಮ್ಮದ್‌ರ ಕುಟುಂಬದ ಜನರು–ಹಜ್ರತ್ ಫಾತಿಮಾ, ಹಜ್ರತ್ ಅಲಿ, ಹಜ್ರತ್ ಹಸನ, ಹುಸೈನರ ಕುರುಹುಗಳು) ಅವರ ಸಮೃದ್ಧಿದಾಯಕ ವಸ್ತುಗಳನ್ನು ಬಹಳ ಪರಿಶ್ರಮಪಟ್ಟು ಪಡೆದುಕೊಂಡು ಅಲ್ಲಿಯೇ ಇರಿಸಿದನು. ಅದರ ನಂತರ ಆತನ ಮಗನಾದ ಸುಲ್ತಾನ್ ಮುಹಮ್ಮದ್ ಆದಿಲ್‌ಶಾಹನ ಅವಧಿಯಲ್ಲಿಯೂ ಇದೇ ಸಂಪ್ರದಾಯವು ಮುಂದುವರಿಯಿತು ಹಾಗೂ ಸಿಕಂದರ್ ಆದಿಲ್‌ಶಾಹನ ಕಾಲದಲ್ಲಿ ಅಂದರೆ ಆದಿಲ್‌ಶಾಹಿಗಳ ಅವನತಿಯ ಕಾಲದಲ್ಲಿ ಬಿಜಾಪುರದಲ್ಲಿ ಇದರ ರಕ್ಷಣೆಗಾಗಿ ವ್ಯಯಿಸುವ ಪರಂಪರೆಯು ಜಾರಿಯಲ್ಲಿತ್ತು. ಅದು ಫರ್ಮಾನಿನಲ್ಲಿ ಈ ರೀತಿ ವಿವರಿಸಲ್ಪಟ್ಟಿದೆ. ಪ್ರತಿವರ್ಷವೂ ಪವಿತ್ರ ಮಾಸ ರಬ್ಬಿವುಲ್ ಅವ್ವಲ್‌ನಲ್ಲಿ ಮೊದಲನೆಯ ದಿನ ಒಂದು ಸಾವಿರ ಹುನ್, ಎರಡನೆಯ ದಿನ ಎರಡು ಸಾವಿರ ಹುನ್, ಮೂರನೆಯ ದಿನ ಮೂರು ಸಾವಿರ ಹುನ್ ಈ ತೆರನಾಗಿ ಪ್ರತಿದಿನ ೧೦೦೦, ಹುನ್ ಅಧಿಕಗೊಳಿಸುತ್ತ ಹಂಚಲ್ಪಡುತ್ತಿದ್ದವು. ೧೨ನೆಯ ದಿನ ೧೨೦೦೦ ಹುನ್ ಹಂಚಲ್ಪಡುತ್ತಿದ್ದವು. ಒಟ್ಟು ೭೮,೦೦೦ ಹುನ್ ಆಗುವುದು. ಇದೇ ತೆರನಾಗಿ ಮೊಹರ್ರಮ್ಮಿನ ದಿನಗಳಲ್ಲಿ ಮೊದಲನೆಯ ದಿನ ಒಂದು ಸಾವಿರ ಹುನ್, ಹಾಗೂ ಎರಡನೆಯ ದಿನ ಅದರ ದುಪ್ಪಟ್ಟು ಹೀಗೆಯೇ ಪ್ರತಿದಿನ ೧೦೦೦ ಹುನ್ ಅಧಿಕಗೊಳ್ಳುತ್ತ ಖರ್ಚಾಗುತ್ತಿದ್ದವು. ಅವುಗಳ ಒಟ್ಟು ಮೊತ್ತವು ೫೫೦೦೦ ಹುನ್ ಆಗುವುದು. ಇದನ್ನು ಹೊರತುಪಡಿಸಿ ಅಲ್ಲಿಯ ಸೇವಕರಿಗಾಗಿ, ಅಧಿಕಾರಿಗಳಿಗಾಗಿ, ಇನಾಮ (ಕೊಡುಗೆ) ಹಾಗೂ ಪಿಂಚಣಿ ಹಾಗೂ ಜಾಗೀರು ರೂಪದಲ್ಲಿ ೪ ಹಳ್ಳಿಗಳನ್ನು ಮೀಸಲು ಇಡಲಾಗಿತ್ತು. ಈ ಫರ್ಮಾನೆ ಸಿಕಂದರಿಯೂ ಸಹ ಇಂದಿಗೂ ಮುತವಲ್ಲಿ (ಧರ್ಮದರ್ಶಿ)ಯ ಬಳಿ ಇರುವುದು. ಯಾವಾಗಿನವರೆಗೆ ಆದಿಲ್‌ಶಾಹಿಗಳ ಸಾಮ್ರಾಜ್ಯವು ಅಸ್ತಿತ್ವದಲ್ಲಿತ್ತು ಈ ಸಂಪ್ರದಾಯವು ಜಾರಿಯಲ್ಲಿತ್ತು. ಈ ಪುಸ್ತಕವು ಸಂಗ್ರಹಗೊಳ್ಳುವ ಸಮಯದವರೆಗೆ ಅಂದರೆ ಹಿಜ್ರಿಶಕೆ ೧೨೪೧ ಇರುವುದು. ಈ ಅವಧಿಯವರೆಗೂ ಅವಶ್ಯ ಕಾರ್ಯಗಳು, ಪ್ರಾರ್ಥನೆ, ಪ್ರವಾದಿವರ್ಯರ ಗುಣಗಾನದ ಪರಂಪರೆಯು ಫಾತೆಹಾ ಹಾಗೂ ಭೋಜನದ ವ್ಯವಸ್ಥೆಯು ಹಾಗೂ ಬೆಳಕಿನ ವ್ಯವಸ್ಥೆಯು ಖರ್ಚುವೆಚ್ಚ ನಡೆಯುತ್ತಿತ್ತು. ಹನ್ನೊಂದನೆಯ ರಾತ್ರಿ ವಿಶೇಷ ಕೋಣೆಯ ಬಾಗಿಲನ್ನು ತೆರೆಯಲಾಗುತ್ತದೆ. ಸಾರ್ವಜನಿಕರು ಕೇಶಕಸ್ತೂರಿಯುಳ್ಳ ಪೆಟ್ಟಿಗೆಯ ದರ್ಶನದ ಲಾಭ ಪಡೆಯುವರು. ಪೆಟ್ಟಿಗೆಯು ಭದ್ರವಾಗಿ ಮುಚ್ಚಲ್ಪಟ್ಟಿದೆ. ಅದನ್ನು ತೆರೆಯುವ ಸಂಪ್ರದಾಯವಿರುವದಿಲ್ಲ. ಆದರೆ ಪೆಟ್ಟಿಗೆಯಲ್ಲಿಯ ಕೇಶಕಸ್ತೂರಿಗಳ ಅಧಿಕೃತತೆಯ ಕುರಿತು ಜನರಲ್ಲಿ ದೃಢವಿಶ್ವಾಸವಿರುವುದು. ಆದರೆ ಬಹಳಷ್ಟು ಸ್ಥಳಗಳಲ್ಲಿ ಆಸಾರ

ಷರೀಫ್ ಹಾಗೂ ಸಮೃದ್ಧಿದಾಯಕ ವಸ್ತುಗಳು ಅಂದರೆ ಕೇಶಕಸ್ತೂರಿ ಹಾಗೂ ಪೈಗಂಬರ(ಸ)ರ ಪಾದದ ಗುರುತುಗಳು ಲಭ್ಯವಿರುವುವು. ಕೋಚಿನ್‌ದ ಕಲ್ಲಿನಲ್ಲಿರುವ ಪೈಗಂಬರರ ಪಾದದ ಗುರುತು ಯಾವುದು? ದೆಹಲಿಯಲ್ಲಿ ಫೈರೋಜ್‌ಶಾಹ್ ಬಾದಶಹನ ಪುತ್ರನಾದ ಯುವರಾಜ ಫತೇಹ್‌ಖಾನ್‌ನ ಸಮಾಧಿಯ ಮೇಲೆ ಆತನ ಎದೆಯ ಮೇಲೆ ಬರುವಂತೆ ಇಡಲಾಗಿದೆಯೋ ಅದು ಹಾಗೂ ಕೇಶಕಸ್ತೂರಿ ಯಾವುದು? ಬಿಜಾಪುರದಲ್ಲಿದೆಯೋ ಅದು, ಇವುಗಳಂತೆ ಬೇರೆಡೆಗೆ ಇರುವ ಗುರುತುಗಳ ಅಧಿಕೃತತೆಯು ಧೃಡಪಟ್ಟಿಲ್ಲ ಹಾಗೂ ಈ ಪವಿತ್ರ ಕೇಶಕಸ್ತೂರಿಯ ಪವಾಡಗಳು ಅದರ ಅಧಿಕೃತತೆಗೆ ಸಾಕ್ಷಿಯಾಗಿವೆ.

ಯಾರು ಗುಣವಂತರು ಹಾಗೂ ಅದೃಷ್ಟವಂತರು ಆಗಿರುವರೋ, ಹಜ್ರತ್ ಮುಹಮ್ಮದ್(ಸ)ರ ಕೃಪೆ ಹಾಗೂ ಗಮನ ಯಾರ ಮೇಲಿರುವುದೋ ಅವರ ಎದುರಲ್ಲಿ ಮಾತ್ರ ಆ ಪವಿತ್ರ ಕೇಶ ಕಸ್ತೂರಿಗಳು ಆ ಪವಿತ್ರ ರಂಧ್ರರಹಿತ ನಳಿಕೆಯಿಂದ ಹೊರಬಂದು ಒಂದು ಪ್ರಕಾಶಿತ ಮರದ ಹಾಗೆ ಕಂಡುಬಂದು ಮತ್ತೆ ಮರಳಿ ಪವಿತ್ರ ನಳಿಕೆ ಸೇರುವವು.

ಮುಹಮ್ಮದ್ ಕಾಸಿಂ ಫರಿಸ್ತಾ ಹೀಗೆ ನಮೂದಿಸಿರುವರು. ಹಿಜ್ರಿ ಶಕೆ ೧೦೦೫ರಲ್ಲಿ ಮೊಹರಮ್ ತಿಂಗಳ ಮೊದಲನೆಯ ದಿನದಂದು "ಗೌರವಾನ್ವಿತರಾದ ಹಜ್ರತ್ ಮೀರ್ ಮುಹಮ್ಮದ್ ಸ್ವಾಲೆಹ್ ಹಮ್ದಾನಿಯವರು ಬಿಜಾಪುರಕ್ಕೆ ಆಗಮಿಸಿದರು. ಆಗ ಅವರು ತಮ್ಮೊಂದಿಗೆ ಹಜ್ರತ್ ಪ್ರವಾದಿ ಮುಹಮ್ಮದ್ ಮುಸ್ತಫಾ ಸ್ವಲ್ಲಲ್ಲಾಹು ಅಲೈಹಿ ವ ಅಲೆ ವ ಸ್ವಲ್ಲಮ್‌ರ ಕೆಲವು ಪವಿತ್ರ ಗಡ್ಡದ ಕೇಶ ಕಸ್ತೂರಿಗಳನ್ನು ತಂದಿದ್ದರು.

ಈ ವಿಷಯವು ಸುಲ್ತಾನ್ ಇಬ್ರಾಹಿಂ ಆದಿಲ್‌ಶಾಹನಿಗೆ ತಲುಪಲು, ತುಂಬಾ ಸಂತಸಗೊಂಡನು. ಅಲ್ಲದೇ ತುಂಬು ಗೌರವಾದರಗಳೊಂದಿಗೆ ಅವರನ್ನು ಭೇಟಿಯಾಗಿ ಪವಿತ್ರ ಕೇಶ ಕಸ್ತೂರಿಗಳುಳ್ಳ ನಳಿಕೆಯನ್ನು ಕಂಡು ಧನ್ಯನಾದನು. ಇದರಿಂದಾಗಿ ಬಾದಶಾಹನ ನಿಜವಾದ ಧಾರ್ಮಿಕ ಅಸ್ಥೆಯು ಬಹಿರಂಗಗೊಂಡಿತು. ಅದಕ್ಕಿಂತಲೂ ಮೊದಲು ಅನೇಕ ದೊರೆಗಳು ಕೇಶ ಕಸ್ತೂರಿಯ ದರ್ಶನಗೈಯಲು ಪ್ರಯತ್ನಿಸಿದ್ದರಾದರೂ ಸಫಲರಾಗಿರಲಿಲ್ಲ. ಆ ಪವಿತ್ರ ಕೇಶಕಸ್ತೂರಿಗಳು ಮುಚ್ಚಲ್ಪಟ್ಟ ರಂಧ್ರರಹಿತ ನಳಿಕೆಯಿಂದ ಹೊರಬಂದು ದರ್ಶನ ನೀಡಿರಲಿಲ್ಲ. ಆದರೆ ಇಬ್ರಾಹಿಂ ಆದಿಲ್‌ಶಾಹನು ಅತ್ಯಂತ ವಿನೀತನಾಗಿ ಕಟ್ಟುನಿಟ್ಟಾದ ಷರಿಯತ್ತಿನ ಶಿಸ್ತನ್ನು ಪಾಲಿಸುತ್ತಾ, ಹಜ್ರತ್‌ರಿಗೆ 'ದರೂದ್ ವ ಸಲಾಂ' ಅರ್ಪಿಸುತ್ತಾ ಗೌರವ ಸಲ್ಲಿಸುತ್ತಿರಲು ಆತನೆದುರು ಆ ಪವಿತ್ರ ಕೇಶಕಸ್ತೂರಿಗಳು ಆ ಬೆಳ್ಳಿಯ ನಳಿಕೆಯಿಂದ ಹೊರಬಂದು ಪ್ರಕಟಗೊಂಡವು. ಅವುಗಳ ದರ್ಶನ ಪಡೆದು ಬಾದಶಹನು ಭಾಗ್ಯವಂತನಾದನು.

ಈ ಸಂದರ್ಭದಲ್ಲಿ ಸಂತಸದ ಸಂಭ್ರಮದ ಕ್ಷಣಗಳಲ್ಲಿ ಬಾದಶಹನು ಹಜ್ರತ್ ಮೀರ್ ಮುಹಮ್ಮದ್ ಸ್ವಾಲೇಹ್ ಹಮ್ದಾನಿಯವರಿಗೆ ಗೌರವಾದರದೊಂದಿಗೆ ಅತ್ಯಂತ ನಮ್ರನಾಗಿ ಕಾಣಿಕೆ-ಕೊಡುಗೆಗಳನ್ನು ಮನಸಾಪೂರ್ವಕವಾಗಿ ಅರ್ಪಿಸಿದನು. ನಂತರ ಬಾದಶಹನು ತಮ್ಮ ಪರಂಪರೆಯಂತೆ ಸಂಪ್ರದಾಯದಂತೆ ಮೊಹರಂ ತಿಂಗಳ ಹತ್ತುದಿನ 'ಇಮಾಮ್ ಹುಸೈನ್'ರ ಶೋಕಾಚರಣೆಯಲ್ಲಿ ತೊಡಗಿದನು ಹಾಗೂ ಅದೇ ವೇಳೆಯಲ್ಲಿ ಮೀರ್ ಮುಹಮ್ಮದ್ ಸ್ವಾಲೆಹ್‌ರಿಗೆ ಸಂದೇಶ ಕಳುಹಿಸಿದನು. ಏನೆಂದರೆ ನಾವು ಇಲ್ಲಿ ನಿಮ್ಮ ಪೂರ್ವಜರ ಶೋಕಾಚರಣೆಗೈಯ್ಯುತ್ತಿದ್ದೇವೆ. ತಾವೂ ಸಹ ಆಗಮಿಸಿ ಭಾಗಿಯಾಗಲು ಕೋರುತ್ತೇನೆ. ಹಾಗೂ ತಾವು ಇಲ್ಲಿಯೇ ಇರಬಯಸುತ್ತೀರಾದರೆ ಇದು ನಮ್ಮ ಸೌಭಾಗ್ಯವೆಂದು ಬಗೆಯುತ್ತೇವೆ. ಇದನ್ನು ಆಲಿಸಿದ ಹಮ್ದಾನಿಯವರು "ಇಜಾದುಯೀ ತುಮ್ ಫಜ್ತಜೀಬೂ" 'ಯಾವಾಗ ನಿಮಗೆ ಯಾರಿಂದಲಾದರೂ ಆಮಂತ್ರಣ ನೀಡಲಾಗುತ್ತದೆಯೋ ಅದನ್ನು ಸ್ವೀಕರಿಸಿರಿ' ಹೀಗಾಗಿ ಅವರು ಬಾದಶಾಹನ ಮಮತೆಯ ಕರೆಗೆ ಓಗೊಟ್ಟು, ಪವಿತ್ರ ಕೇಶ ಕಸ್ತೂರಿಗಳೊಂದಿಗೆ ಕೋಟೆಯೊಳಗೆ ಆಗಮಿಸಿದರು.

ಸುಲ್ತಾನ ಇಬ್ರಾಹಿಂ ಆದಿಲ್‌ಶಾಹನು ತುಂಬು ಗೌರವಾದರಗಳೊಂದಿಗೆ ಬರಮಾಡಿಕೊಂಡು ಅಲ್ಲಾಹುವಿಗೆ ಕೃತಜ್ಞತೆ ಅರ್ಪಿಸಿದನು ಹಾಗೂ ಅತಿಥಿಯ ಸೇವೆಯಲ್ಲಿ ಯಾವುದೇ ವಿಧದ ಕುಂದು ಕೊರತೆಯುಂಟಾಗಬಾರದೆಂದು ಸೇವಕರಿಗೆ ಆದೇಶಿಸಿದನು. ಹಲವಾರು ಸಲ ಸ್ವತಃ ಬಾದಶಹನೇ ಮೀರ್‌ಮುಹಮ್ಮದ್ ಸ್ವಾಲೆಹ್ ಅವರಿಗೆ ಭೇಟಿಯಾಗಿ ಕೊಡುಗೆ-ಕಾಣಿಕೆ ಅರ್ಪಿಸುತ್ತಿದ್ದನು. ಯಾವಾಗ ಮೊಹರ್ರಂ ತಿಂಗಳು ಗತಿಸಿ ಸಫರ್ ತಿಂಗಳು ಪ್ರಾರಂಭಗೊಂಡಿತೋ ಆಗ ಅತಿಥಿಯವರಾದ ಮೀರ್ ಸ್ವಾಲೇಹ್ ಅವರು ಪವಿತ್ರ 'ಮಕ್ಕಾ-ಮದೀನಾ'ಕ್ಕೆ ಹೋಗಲು ಧೃಢ ನಿಶ್ಚಯ ಮಾಡಿದರು. ಇದನ್ನರಿತ ಬಾದಶಹನು ತನ್ನ ಘನತೆಗೆ ತಕ್ಕಂತೆ ೨೦೦೦ ಹುನ್,(ಚಿನ್ನದ ನಾಣ್ಯಗಳು) ಹಾಗೂ ಅತ್ಯುತ್ಕೃಷ್ಟವಾದ ಉತ್ತಮ ಉಡುಗೆಗಳು, ಶ್ರೇಷ್ಠತಮವಾದ ಕೊಡುಗೆ-ಕಾಣಿಕೆಗಳಿಂದ ಸಮೃದ್ಧಗೊಳಿಸಿ ಪವಿತ್ರ ಮಕ್ಕಾ-ಮದೀನಾಕ್ಕೆ ಹೋಗಲು ಅನುವು ಮಾಡಿಕೊಟ್ಟನು.

ಮೀರ್ ಸ್ವಾಲೆಹ್ ಹಮ್ದಾನಿಯವರು ಬಾದಶಹನ ಈ ಅಮೂಲ್ಯ ಕಾಣಿಕೆ ಕೊಡುಗೆ ಹಾಗೂ ಆತನ ನಮ್ರತೆ, ಆಸ್ಥೆ, ಶ್ರದ್ಧೆಯನ್ನು ಗಮನಿಸಿ ಅಲ್ಲಿಂದ ಹೊರಡುವಾಗ ಬಾದಶಹನ ಕಾಣಿಕೆಗಳ ಪ್ರತಿಯಾಗಿ ತಮ್ಮಲ್ಲಿಯ ಹಜ್ರತ್ ಮುಹಮ್ಮದ್(ಸ)ರ ಎರಡು ಪವಿತ್ರ ಕೇಶ ಕಸ್ತೂರಿಗಳನ್ನು ನೀಡಿದರು. ಈಗ ಆ ಪವಿತ್ರ ಕೇಶ ಕಸ್ತೂರಿಗಳು ಬೆಳ್ಳಿಯ ನಳಿಕೆಯಲ್ಲಿ ಸುರಕ್ಷಿತವಾಗಿವೆ. ಗುರುವಾರದ ರಾತ್ರಿಯಲ್ಲಿ ಹಾಗೂ ಪವಿತ್ರ ದಿನಗಳ 'ಜಿಯಾರತ್' (ದರ್ಶನಕ್ಕೆ) ಮಾಡಲಾಗುತ್ತದೆ. ಇವುಗಳ ಸಮೃದ್ಧಿಯಿಂದಾಗಿ ಬಾದಶಹನು ಉತ್ತರೋತ್ತರವಾಗಿ ಅಭಿವೃದ್ಧಿಯನ್ನು ಹೊಂದುತ್ತಿರುವನು.

ಇನ್ತಹಾ ಕಲಾಮುಹು ಇಲ್ಲಿಗೆ ಈ ಬಾದಶಹನ ವಿವರಣೆ ಮುಕ್ತಾಯಗೊಂಡಿತು.

ಹಜ್ರತ್ ಮೌಲಾನಾ ಹಬೀಬುಲ್ಲಾಹ್ ಸಿಬ್ಗತುಲಾಹಿ(ಖು) ತಮ್ಮ ಪುಸ್ತಿಕೆಯಲ್ಲಿ ಹೀಗೆ ಬರೆಯುತ್ತಾರೆ.

ಸೈಯದುಸ್ಸಾದಾತ್ ಹಜ್ರತ್‌ಶಾಹ್ ಸಿಬ್ಗತಲ್ಲಾಹ್ ಅಲ್ ಹುಸೈನಿ ಅಲ್ ಮದನಿ ಅಲ್ ಭೈರೂಚಿ(ಖು) ಇಲ್ಲಿಂದ ನಿರ್ಗಮಿಸುತ್ತಿರುವಾಗ ಸುಲ್ತಾನ್ ಇಬ್ರಾಹಿಂ ಆದಿಲ್‌ಶಾಹ್ ದ್ವಿತೀಯನು ವಿನಂತಿಸಿಕೊಂಡನು. ಹಜ್ರತ್‌ರೆ ಆಸಾರ್ ಷರೀಫ್‌ದ ದರ್ಶನಗೈದು ಇಲ್ಲಿಂದ ಹೊರಡಿರಿ ಎಂದಾಗ, ಹಜ್ರತ್‌ರು ದರ್ಶನಕ್ಕಾಗಿ ಆಸಾರ್‌ಷರೀಫ್‌ಕ್ಕೆ ಆಗಮಿಸಿದರು. ಬಾದಶಹನ ಸಂಜ್ಞೆಯಂತೆ ಸೇವಕನು ಹಜ್ರತ್ ಮುಹಮ್ಮದ್(ಸ) ರ ಪವಿತ್ರ ಕೇಶ ಕಸ್ತೂರಿಗಳುಳ್ಳ ಬೆಳ್ಳಿಯ ನಳಿಕೆಯನ್ನು ಜಿಯಾರತ್‌ಗಾಗಿ ಹಜ್ರತ್‌ರ ಎದುರಲ್ಲಿ ಇರಿಸಿದನು. ಆಗ ಹಜ್ರತ್‌ರು ಹೀಗೆಂದರು ಆ ನಳಿಕೆಯನ್ನು ಬಿಚ್ಚಿರಿ, ನಾನು ದರ್ಶನಗೈಯ್ಯುವೆನು ಆಗ ನಮ್ರರಾಗಿ ಹೀಗೆಂದರು ಹಜ್ರತ್‌ರೆ ಮುಚ್ಚಲ್ಪಟ್ಟ ನಳಿಕೆಯನ್ನು ಬಿಚ್ಚುವ ಅಧಿಕಾರ ನಮಗಿಲ್ಲ. ಆಗ ಆ ಪವಿತ್ರ ನಳಿಕೆಯನ್ನು ತಮ್ಮ ಹಸ್ತದಲ್ಲಿ ತೆಗೆದುಕೊಂಡು ಕೆಲಕಾಲದವರೆಗೆ 'ದರೂದ್‌ಷರೀಫ್' ಜಪಿಸಿದರು. ಅಲ್ಲಿ ಕೆಲವು ದೀಪಗಳು ಪ್ರಕಾಶಿತವಾಗಿದ್ದವು ಹಾಗೂ ಸುಮಾರು ಐವತ್ತರಷ್ಟು ಜನರು ಸುತ್ತಮುತ್ತಲೂ ನೆರೆದಿದ್ದರು. ಹಜ್ರತ್ ಮೌಲಾನಾ ಹೀಗೆ ಹೇಳುತ್ತಾರೆ. ನಾನೂ ಸಹ ಅಲ್ಲಿ ಹಾಜರಿದ್ದೆನು. ಹಜ್ರತ್ ಶಾಹ್(ಖು) ಆ ವೇಳೆ ನನಗೆ ಸಮೀಪ ಕರೆದು ಆ ಪವಿತ್ರ ನಳಿಕೆಯ ಮೇಲೆ ಏಕಾಗ್ರಚಿತ್ತರಾಗಿ ಗಮನಿಸಬೇಕು ಎಂದರು. ಆಕಸ್ಮಿಕವಾಗಿ ಆ ಪವಿತ್ರನಳಿಕೆಗೆ ರಂಧ್ರಗಳು ಮೂಡಿ ಪವಿತ್ರ ಕೇಶ ಕಸ್ತೂರಿಗಳು ಬಹಳ ದಪ್ಪವಾಗಿಯೂ ಇರಲಿಲ್ಲ. ತೆಳುವಾಗಿಯೂ ಇರಲಿಲ್ಲ, ಗಾಢ ಕಪ್ಪಾಗಿಯೂ ಇರಲಿಲ್ಲ ಹಾಗೂ ತುಂಬು ಶ್ವೇತ ವರ್ಣದವೂ ಇರಲಿಲ್ಲ. ಒಂದು ಅಂಗುಲದಷ್ಟು ಇದ್ದವು. ಆ ಪವಿತ್ರ ನಳಿಕೆಯಿಂದ ಹೊರಬಂದವು, ಪವಿತ್ರ ನಳಿಕೆಯ ಊದುಬತ್ತಿಯ ಗಿಡದಂತೆ ಕಂಡು ಬರುತ್ತಿತ್ತು ಹಾಗೂ ರಂಧ್ರಗಳೂ ಸಹ ಇದ್ದವು. ಮತ್ತೆ ಒಂದು ಕ್ಷಣದ ನಂತರ ಆ ಪವಿತ್ರ ಕೇಶ ಕಸ್ತೂರಿಗಳು ಆ ರಂಧ್ರಗಳಿಂದ ಒಳಗೆ ಹೋದವು ಹಾಗೂ ರಂಧ್ರಗಳೂ ಕೂಡ ಮಾಯವಾದವು. ಇಷ್ಟು ವಿವರಣೆ ಇರುವದು.

ಮತ್ತೆ ಅದೇ ಪುಸ್ತಿಕೆಯಲ್ಲಿ ಬೇರೆಯ ಕಡೆಯಲ್ಲಿ ಹಜ್ರತ್ ಮೌಲಾನಾರಿಂದ ವಿವರಿಸಲ್ಪಟ್ಟಿದೆ. ಹಜ್ರತ್ ಶಾಹ್ ಸಿಬ್ಗತ್‌ಲ್ಲಾಹ್‌ರ ಸೇವೆಯಲ್ಲಿ ಓರ್ವ ವ್ಯಕ್ತಿ ಇದ್ದರು. ಅವರು ಕುರುಡರಾಗಿದ್ದರು. ಆದರೆ ಅವರಿಗೆ ಹಜ್ರತ್ ಶಾಹ್(ಖು)ರ ಬರವಣಿಗೆಯ ಹೊರತಾಗಿ ಏನನ್ನೂ ಕಾಣುತ್ತಿರಲಿಲ್ಲ. ಆದ ಕಾರಣ ಹಜ್ರತ್‌ರು ತಮ್ಮ ಸ್ವಹಸ್ತದಿಂದ ಬರೆದು ಕೊಡುತ್ತಿದ್ದರು. ಆ ಬರವಣಿಗೆಯ ಕೆಲ ಪವಿತ್ರ ಪ್ರತಿಗಳು ನನ್ನ ಬಳಿ ಇರುವವು. ಒಂದು ದಿನ ಅವುಗಳಲ್ಲಿಂದ ಮೊದಲ ಪುಟವು ಕಳೆದುಹೋಯಿತು.

ಎಲ್ಲ ಕಡೆಗೆ ಹುಡುಕಿದರೂ ಸಿಗಲಿಲ್ಲ. ಆ ಕಾರಣಕ್ಕೆ ಸದಾಕಾಲ ವಿಷಾದದ ಛಾಯೆ ಆವರಿಸಿತ್ತು, ಏಕೆಂದರೆ ಅದು ಹಜ್ರತ್‌ಶಾಹ್‌ರ ಸ್ವಹಸ್ತದಿಂದ ಬರೆಯಲ್ಪಟ್ಟ ಪವಿತ್ರ ಪುಟವಾಗಿತ್ತು. ಆಕಸ್ಮಿಕವಾಗಿ ನಾನು ಆಸಾರ್‌ಮಹಲನಲ್ಲಿ ಒಂದು ದಿನ ಪವಿತ್ರ ಪೆಟ್ಟಿಗೆಯ ಬಳಿ ಕುಳಿತಿದ್ದೆನು. ಒಂದು ಕಾಗದದ ತುಂಡು ಗಾಳಿಯಲ್ಲಿ ತೇಲುತ್ತಾ ನನ್ನ ಮಡಿಲಲ್ಲಿ ಬಂದು ನೆಲೆನಿಂತಿತು. ನಾನು ನೋಡುತ್ತೇನೆ. ಆ ಕಾಗದವು ಕಳೆದುಹೋಗಿದ್ದ ಹಜ್ರತ್‌ರ ಕೈಯಿಂದ ಬರೆಯಲ್ಪಟ್ಟ ಪವಿತ್ರ ಹಾಳೆಯೇ ಆಗಿತ್ತು.

ಮತ್ತೊಂದು ಕಡೆ ಅದೇ ಪುಸ್ತಿಕೆಯಲ್ಲಿ ಹಜ್ರತ್ ಮೌಲಾನಾರಿಂದ ಉಲ್ಲೇಖಿಸಲ್ಪಟ್ಟಿದೆ. ಜನರು ನಿಲುವಂಗಿಗೆ ಅಲಂಕಾರಕ್ಕಾಗಿ ಎರಡೂ ಕಡೆ ಅಲಂಕೃತ ವಸ್ತುವನ್ನು ಹೊಲಿಯುತ್ತಾರೆ ಹಾಗೂ ಇದಕ್ಕಾಗಿ ರೇಶ್ಮೆಯನ್ನು ಬಳಸುತ್ತಾರೆ. ನನಗೆ ಈ ರೇಶ್ಮೆಯಿಂದ ಅಲಂಕರಿಸಲ್ಪಟ್ಟ ಗುಂಡಿಗಳ ಕುರಿತು ಚಿಂತೆಯಾಯಿತು. ಇವು ನಮಗೆ ಧರ್ಮಬದ್ಧವೋ ಇಲ್ಲ ನಿಷಿದ್ಧವೋ? ಇದರ ಕುರಿತು(ಫಿಕ್ಷ) ಇಸ್ಲಾಮಿ ಕರ್ಮಶಾಸ್ತ್ರದ ಗ್ರಂಥಗಳಲ್ಲಿ ಹುಡುಕಾಡಿದೆ. ಆದರೆ ಎಲ್ಲಿಯೂ ಇದರ ಪರಿಹಾರ ಸಿಗಲಿಲ್ಲ. ಅಲ್ಲಾಹುವಿಗೆ ಧನ್ಯವಾದಗಳು. ಇದರ ಕುರಿತು ಅಲ್ಲಾಹುವು ನನಗೆ ಈ ತೆರನಾಗಿ ಜಾಹೀರುಗೊಳಿಸಿದನು. ಒಂದು ದಿನ ನಾನು ಆಸಾರ್ ಮಹಲಿನಲ್ಲಿ ಕುಳಿತಿದ್ದೆನು. ಆಗ ಆಕಸ್ಮಿಕವಾಗಿ ಓರ್ವ ವ್ಯಕ್ತಿಯು ಪ್ರತ್ಯಕ್ಷನಾದನು ಹಾಗೂ ಹೀಗೆಂದನು. ನಿಲುವಂಗಿಯ ಮೇಲೆ ಈ ತೆರನಾಗಿ ರೇಶ್ಮೆಯಿಂದ ಅಲಂಕೃತ ಗುಂಡಿಗಳನ್ನು ಹಚ್ಚಿಕೊಳ್ಳುವದು. ಹರಾಮ್(ನಿಷಿದ್ಧ)ವಾಗಿದೆ. ಈ ಪುಸ್ತಿಕೆಯನ್ನು ಬರೆದಿರುವ ಹಜ್ರತ್ ಮೌಲಾನಾ(ಖು) ಅಂದರೆ ಶೇಖ ಅಬ್ದುಲ್ ಫತಃ ಹಬೀಬೆ ಇಲಾಹಿ ಹೀಗೆನ್ನುವರು. ಈ ಘಟನೆಯ ನಂತರ ಹಜ್ರತ್ ಮೌಲಾನಾರು ತಮ್ಮ ಸೇವಕನಿಗೆ ಹೀಗೆ ಹೇಳಿದರು. ಈ ಸಮಸ್ಯೆಯ ಪರಿಹಾರಕ್ಕಾಗಿ ಮಕ್ಕಾ ಮದೀನಾದವರೆಗೆ ಹೋದರೂ ಪರಿಹಾರ ದೊರೆಯಲಾರದು. ಆ ಅಲಂಕೃತ ರೇಶ್ಮೆಯ ಗುಂಡಿಗಳನ್ನು ನಿಲುವಂಗಿಯಿಂದ ತೆಗೆಯಲಾಯಿತು. ಒಂದೊಂದು ಗುಂಡಿಯೂ ತೆಗೆದಂತೆ ಹೃದಯವೂ ಪರಿಶುದ್ಧಗೊಂಡಿತು. ದೇವನ ಕೃಪೆಯಿದೆ. ಇಂದು ಮನಸ್ಸಿನ ಮೇಲೆ ನಿಗ್ರಹ ಹೊಂದಿದೆನು.

ನಂಬಲರ್ಹ ವ್ಯಕ್ತಿಗಳಿಂದ ಉಲ್ಲೇಖವಿದೆ. ಮೊದಮೊದಲು ಪವಿತ್ರ ಕೇಶ ಕಸ್ತೂರಿಗಳನ್ನು ಗಗನ ಮಹಲ (ಈ ಮಹಲವು ಹಿಜ್ರಿಶಕೆ-೯೬೧ರಲ್ಲಿ ನಿರ್ಮಿಸಲ್ಪಟ್ಟಿತು)ನಲ್ಲಿ ಇರಿಸಲಾಗಿತ್ತು ಹಾಗೂ ಈ ಗಗನ ಮಹಲನ್ನು ಅರ್ಕಕಿಲ್ಲಾದ ಒಳಭಾಗದಲ್ಲಿ ಅಲಿ ಆದಿಲ್‌ಶಾಹ್ ಪ್ರಥಮನು ನಿರ್ಮಿಸಿದ ಒಂದು ಭವ್ಯವಾದ ಹವೇಲಿಯಾಗಿತ್ತು. ಅದರ ಮಾಳಿಗೆ ಹಾಗೂ ಕಂಬಗಳು ಮತ್ತು ಗೋಡೆಗಳನ್ನು ಚಿನ್ನದ ಲೇಪಗೈದ ಕಲಾಕೃತಿಯಿಂದ ಅಲಂಕರಿಸಲಾಗಿತ್ತು. ಅಗಣಿತ ಧನ ವ್ಯಯಿಸಿ ಆ ಹವೇಲಿಯನ್ನು ನಿರ್ಮಿಸಲಾಗಿತ್ತು. ಅದರಲ್ಲಿ ಎಲ್ಲ ತೆರನಾದ ಬಾದಶಾಹಿ ವಜ್ರ

ವೈಢೂರ್ಯಗಳು ಅಮೂಲ್ಯ ಕೊಡುಗೆ ಕಾಣಿಕೆಗಳನ್ನು ಇರಿಸಲಾಗಿತ್ತು. ಆಕಸ್ಮಿಕವಾಗಿ ಸುಲ್ತಾನ ಮುಹಮ್ಮದ್ ಆದಿಲ್‌ಶಾಹನ ಕಾಲದಲ್ಲಿ ಯಾವುದೇ ಕಾರಣವಿಲ್ಲದೇ ಅಗ್ನಿ ಪ್ರಜ್ವಲಿಸಿತು. ಎಲ್ಲ ಕಡೆಯಿಂದ ಬೆಂಕಿಯ ಕೆನ್ನಾಲಿಗೆ ಚಾಚಿಕೊಳ್ಳತೊಡಗಿತು. ಗೋಡೆಗಳು, ಬಾಗಿಲುಗಳು, ಮೇಲ್ಮಾಳಿಗೆ, ಕಂಬಗಳು ಅಗ್ನಿಗಾಹುತಿಯಾಗತೊಡಗಿದವು. ಬಾದಶಾಹಿ ಖಜಾನೆ(ಭಂಡಾರ) ಹಾಗೂ ಅತ್ಯಮೂಲ್ಯ ವಸ್ತುಗಳುಳ್ಳ ಕೋಣೆಯೂ ಸಹ ಅಗ್ನಿಯ ಕೆನ್ನಾಲಿಗೆಯ ಒಳಗಾಯಿತು ಹಾಗೂ ಅದಕ್ಕಂಟಿದ ಒಂದು ಕೋಣೆಯಲ್ಲಿ ಪವಿತ್ರ ಕೇಶ ಕಸ್ತೂರಿಗಳನ್ನು ಇಡಲಾಗಿತ್ತು. ಅಗ್ನಿಯು ಅಲ್ಲಿಯೂ ಪಸರಿಸತೊಡಗಿತು. ಅಗ್ನಿಯ ತೀವ್ರತೆಯಿಂದಾಗಿ ಮೇಲ್ಮಾಳಿಗೆಯಿಂದ ಬೆಂಕಿ ಹೊಗೆ ಕಾಣಿಸತೊಡಗಿದೊಡನೆ ಬಾದಶಹನಿಗೂ ಸುದ್ದಿ ತಲುಪಿತು. ಬಾದಶಹ ಹಾಗೂ ಅಧಿಕಾರಿಗಳು ಈ ಆಕಸ್ಮಿಕ ಘಟನೆಯಿಂದ ವಿಚಲಿತರಾಗಿ ಓಡುತ್ತೋಡುತ್ತಾ ಬಂದರು. ಈಗ ಬೆಂಕಿಯ ತೀವ್ರತೆಯು ಎಷ್ಟಾಗಿತ್ತೆಂದರೆ ೨೦-೨೦ ಗಜಗಳವರೆಗೆ ಯಾರೂ ಸುಳಿಯಲು ಸಾಧ್ಯವಿರಲಿಲ್ಲ. ಎಲ್ಲರೂ ಆತಂಕಿತರಾಗಿದ್ದರು. ಯಾರಿಂದಲೂ ಸಹಾಯದ ನಿರೀಕ್ಷೆಯಿರಲಿಲ್ಲ. ಅತ್ಯಮೂಲ್ಯ ವಸ್ತುಗಳನ್ನು ಹೊರತೆಗೆಯಲು ಎಲ್ಲ ರೀತಿಯಿಂದ ಪ್ರಯತ್ನಿಸಿದರಾದರೂ ಸಫಲರಾಗಲಿಲ್ಲ. ಯಾವ ಯುಕ್ತಿಯೂ ಪ್ರಯೋಜನಕ್ಕೆ ಬರಲಿಲ್ಲ. ಬೆಂಕಿಯು ಎಷ್ಟು ತೀವ್ರವಾಗಿತ್ತೆಂದರೆ ಅದರ ಬಳಿ ಸುಳಿಯಲು ಯಾರಿಗೂ ಸಾಧ್ಯವಿರಲಿಲ್ಲ. ಆಗ ಬಾದಶಹನು ತನ್ನ ಭಂಡಾರ, ಅಮೂಲ್ಯ ವಸ್ತುಗಳ ಕುರಿತು ಯೋಚಿಸಲಿಲ್ಲ. ಆದರೆ ಆ ಪವಿತ್ರ ಕೇಶಕಸ್ತೂರಿಗಳ ಕುರಿತು ಚಿಂತಿಸಿ ಅಶ್ರು ಹರಿಸತೊಡಗಿದನು. ತುಂಬಾ ವಿಚಲಿತಗೊಂಡು ತನ್ನ ಹಿಂದೆ ದೃಷ್ಟಿ ಹಾಯಿಸಿದಾಗ ತನ್ನ ಪರಮಾಪ್ತ ವ್ಯಕ್ತಿಯಾದ ಅಲಿಖಾನ್ ನಿಂತಿದ್ದನು. ಬಾದಶಹನ ದೃಷ್ಟಿ ಬಿದ್ದಕೂಡಲೆ ಆತನು ಏನನ್ನೂ ಯೋಚಿಸದೇ ಅಗ್ನಿಪ್ರವೇಶಕ್ಕೆ ಸಿದ್ಧನಾದನು ಹಾಗೂ ತಕ್ಷಣವೇ ಗಗನ ಮಹಲಿನಲ್ಲಿ ಓಡಿದನು. ಆಗ ಬೆಂಕಿಯುಂಡೆಗಳು ನಾಲ್ಕು ಕಡೆಯಿಂದ ಬೀಳತೊಡಗಿದ್ದವು. ಅಂತಹದರಲ್ಲಿಯೇ ಅಲಿಖಾನ್‌ನು ಆ ಪವಿತ್ರ ಕೇಶ ಕಸ್ತೂರಿಗಳನ್ನಿಟ್ಟ ಕೋಣೆ ಪ್ರವೇಶಿಸಿ ಆ ಪವಿತ್ರ ಪೆಟ್ಟಿಗೆಯನ್ನು ತಲೆ ಮೇಲೆ ಹೊತ್ತು ಯಾವುದೇ ತೊಂದರೆಗೊಳಗಾಗದೇ ಹೊರಬಂದನು. ಆತನ ಅರಿವೆಗಳಿಗೂ ಕೂಡ ಬೆಂಕಿ ಸೋಕಲಿಲ್ಲ. ಪ್ರವಾದಿ ಮುಹಮ್ಮದ್(ಸ)ರ ಕೃಪೆಯಿಂದ ಹಾಗೂ ಪವಿತ್ರ ಕೇಶಕಸ್ತೂರಿಗಳ ಸಮೃದ್ಧಿಯಿಂದ ಹಾಗೂ ಅವುಗಳ ಅಧಿಕೃತತೆಯ ಅಚಲ ನಂಬಿಕೆಯಿಂದ ಆ ಬೆಂಕಿಯುಗುಳುತ್ತಿರುವ ಅಗ್ನಿಯು ಆತನ ಮೇಲೆ ಉದ್ಯಾನದಂತೆ ("ಪ್ರವಾದಿ ಇಬ್ರಾಹಿಂ'ರ ಮೇಲೆ ಜರುಗಿದಂತೆ) ಶಾಂತವಾಯಿತು. ಇದು ಕೇವಲ ಪವಿತ್ರ ಕೇಶ ಕಸ್ತೂರಿಗಳಿಂದ ಜರುಗಿದ ಪವಾಡವಾಗಿದೆ. ಆ ಹವೇಲಿಯಲ್ಲಿಯ ಉಳಿದೆಲ್ಲ ವಸ್ತುಗಳು ಅಗ್ನಿಗಾಹುತಿಯಾದವು. ಸಮೃದ್ಧಿದಾಯಕವಾದ ಪವಿತ್ರ ಕೇಶಕಸ್ತೂರಿಗಳು ಯಾವುದೇ ಹಾನಿ ತಟ್ಟದೆ ಮರಳಿ ಲಭಿಸಲು ಸುಲ್ತಾನನು

ತುಂಬಾ ಸಂತಸಗೊಂಡು ಅಲ್ಲಾಹುವಿಗೆ ಕೃತಜ್ಞತಾರ್ಪಣೆಗೈಯ್ಯಲು ಸಜ್ದಾ(ಸಾಷ್ಟಾಂಗ) ಎರಗಿದನು.

ಸಜ್ದಯೇ ಶುಕ್ರಾನಾ ಹಾಫೀಜೆ ಮುತ್‌ಆಲ್ ।
ವ ಮುನ್ ಇಮೆ ಜುಲ್ ಜಲಾಲ್ ಬಜಾಲಾಯಾ ॥

ರಕ್ಷಣೆಗೈಯುವ ಅಲ್ಲಾಹುವು ಎಲ್ಲರಿಗಿಂತಲೂ ಮಹಾನ್ ಹಾಗೂ ಕರುಣಾಮಯಿಯಾಗಿರುವನು ಹಾಗೂ ಅವನ ಘನವಂತಿಕೆಯು ಅತ್ಯುತ್ಕೃಷ್ಟವಾಗಿದೆ.

ದೊರೆಯು ಅಲ್ಲಾಹುವಿನ ಎದುರು ಕೃತಜ್ಞತಾರ್ಪಣೆಯ ಸಜ್ದಾಗೈದನು. ಹಾಗೂ ಆ ಪವಿತ್ರ ಕೇಶ ಕಸ್ತೂರಿಗಳುಳ್ಳ ಪೆಟ್ಟಿಗೆಯನ್ನು ಸುರಕ್ಷಿತವಾಗಿ ದಾದ್‌ಮಹಲ್(ಅದಾಲತ್ ಮಹಲ್) ಯಾವುದು. ಅರ್ಕಕಿಲ್ಲಾದ ಹೊರಗಡೆ ಇತ್ತು- ಅದರಲ್ಲಿರಿಸಿದನು. ಈ ಮಹಲನ್ನು ಸುಲ್ತಾನ್ ಮುಹಮ್ಮದ್ ಆದಿಲ್‌ಶಾಹ್‌ನು ಹಿಜ್ರಿಶಕೆ ೧೦೫೬ರಲ್ಲಿ ನಿರ್ಮಿಸಿದನು. ಅಲಿಖಾನ್‌ನಿಗೆ ಈ ಆಸಾರ್ ಮಹಲಿನ ಹವಾಲ್ದಾರನೆಂದು ನೇಮಿಸಲಾಯಿತು. ಆ ದಿನದಿಂದ ಅಲಿಖಾನ್ ಆಸಾರಿ ಎಂದು ಪ್ರಸಿದ್ಧರಾದರು.

ನಂಬಲರ್ಹ ವ್ಯಕ್ತಿಗಳಿಂದ ಉಲ್ಲೇಖವಿದೆ, ಸುಲ್ತಾನ್ ಮುಹಮ್ಮದ್ ಆದಿಲ್‌ಶಾಹನು ತನ್ನ ಅವಧಿಯಲ್ಲಿದ್ದ ಔಲಿಯಾಗಳಲ್ಲಿ ವಿನಂತಿಸಿದನು. ತಾವು ಸದಾಕಾಲ ಪವಿತ್ರ ಕೇಶಕಸ್ತೂರಿಗಳನ್ನು ನೋಡಿ ಧನ್ಯರಾಗುತ್ತೀರಿ. ನನಗೆ ಈ ಸಮೃದ್ಧಿ ಲಭ್ಯವಾಗಲೆಂದು ತಾವುಗಳು ನನ್ನ ಈ ಉದ್ದೇಶಪೂರ್ತಿಗಾಗಿ ಅಲ್ಲಾಹುವಿನ ದರ್ಬಾರ್‌ದಲ್ಲಿ ಹಾಗೂ ಮುಹಮ್ಮದ್(ಸ)ರ ಕೃಪೆಗಾಗಿ ಪ್ರಾರ್ಥಿಸಿರಿ. ಆದರೆ ಅಲ್ಲಿ ನೆರೆದಿದ್ದ ಸೂಫಿಗಳಲ್ಲಿ ಯಾರೂ ಸಹ ಬಾದಶಾಹನ ವಿನಂತಿಯನ್ನು ಮನ್ನಿಸಲಿಲ್ಲ. ಆದರೆ ಈರ್ವರು ಮಹಾಪುರುಷರು- ಸೈಯದುಸ್ಸಾದಾತ್ ಹಜ್ರತ್‌ಶಾಹ್ ಹಾಷಿಂ ಹುಸೈನಿ ಅಲ್ವಿ ಹಾಗೂ ಖುತ್ಬೆ ಆರಿಫೀನ್ ಹಜ್ರತ್ ಶಾಹ್ ಮುರ್ತುಜಾ ಖಾದ್ರಿ (ಖು)ರು ಹೇಳಿದರು. ಹಜ್ರತ್ ಮುಹಮ್ಮದ್ (ಸ)ರ ಸನ್ನಿಧಿಯಲ್ಲಿ ಪ್ರಾರ್ಥಿಸುವೆವು. ಒಂದು ವೇಳೆ ನೀನು ಅದೃಷ್ಟವಂತನಾಗಿದ್ದರೆ ಅದರ ಸಮೃದ್ಧಿಯು ಲಭ್ಯವಾಗುವದು. ಈ ಕಾರಣದಿಂದ ಒಂದು ದಿನ ಈರ್ವರೂ ಹಜ್ರತ್‌ರು ಆಸಾರ್‌ಮಹಲಿನ ಆ ಕೋಣೆಯಲ್ಲಿ ಪ್ರವೇಶಿಸಿ ಪವಿತ್ರ ಪೆಟ್ಟಿಗೆಯನ್ನು ತೆರೆದು ಆ ಪವಿತ್ರ ಕೇಶಕಸ್ತೂರಿಗಳುಳ್ಳ ನಳಿಕೆಯನ್ನು ಹೊರತೆಗೆದು ಅದನ್ನು ಪೆಟ್ಟಿಗೆಯ ಮೇಲೆ ಇರಿಸಿದರು. ಹಾಗೂ ತಾವುಗಳು ಕೋಣೆಯಿಂದ ಹೊರಬಂದು ಉದ್ದೇಶದ ಈಡೇರಿಕೆಗಾಗಿ ಶುದ್ಧ ಮನಸ್ಸಿನಿಂದ ಪ್ರಾರ್ಥಿಸಿದರು.

ಖಿ ಮಕ್ಬೂಲ್ ರಾ ರದ್ದ ನ ಬಾಶದ್ ಸುಖನ್

'ಏನೆಂದರೆ ಔಲಿಯಾಗಳ ವಿನಂತಿ ತಿರಸ್ಕರಿಸಲ್ಪಡುವುದಿಲ್ಲ.' ಈ ಈರ್ವರು ಮಹಾಪುರುಷರ ಪ್ರಾರ್ಥನೆಯು ಹಜ್ರತ್ ಮುಹಮ್ಮದ್(ಸ)ರ ಸನ್ನಿಧಿಯಲ್ಲಿ

ಸ್ವೀಕರಿಸಲ್ಪಟ್ಟಿತು. ಸುಲ್ತಾನ್ ಮುಹಮ್ಮದ್ ಆದಿಲ್‌ಶಾಹ್ ಹಾಗೂ ಕೆಲ ಸೂಫಿಗಳು ಕೋಣೆಯ ಎದುರಲ್ಲಿ ನಿಂತುಕೊಂಡರು. ಕೆಲವು ಆಪ್ತರು ಮಹಲಿನ ಕಿಡಕಿಯ ಹಿಂದುಗಡೆ ನಿಂತುಕೊಂಡರು ಹಾಗೂ ಅಧಿಕಾರಿಗಳು ಮಹಲಿನಲ್ಲಿ ಹಾಗೂ ಉಳಿದ ಎಲ್ಲರೂ ಹೊಂಡದ ಸುತ್ತಲೂ ತಮ್ಮ ತಮ್ಮ ಅಂತಸ್ತಿಗೆ ತಕ್ಕಂತೆ ನಿಂತುಕೊಂಡು ಎಲ್ಲರೂ ಲಾ ಇಲಾಹ್ ಇಲ್ಲಲ್ಲಾಹುವಿನ ಜಪ ಮಾಡತೊಡಗಿದರು. ಹಾಗೂ ಅಲ್ಲಾಹುವಿನ ಮಹಾನತೆಯನ್ನು ಹೊಗಳತೊಡಗಿದರು. ಮತ್ತು ಪ್ರವಾದಿ ಮುಹಮ್ಮದ್(ಸ)ರ ಮೇಲೆ ದರೂದೋ ಸಲಾಂ ಓದತೊಡಗಿದರು. ಆಗ ಆ ಪವಿತ್ರ ಕೋಣೆಯಿಂದ ಹೃನ್ಮನ ತಣಿಸುವಂತಹ ಸುಗಂಧವು ಹೊರಬಂದು ಸರ್ವರಿಗೂ ಸಂತೃಪ್ತಿಯ ಅನುಭವ ನೀಡುತ್ತಾ ಆತ್ಮಕ್ಕೆ ಚೈತನ್ಯ ಒದಗಿಸಿತು. ಒಂದು ಕ್ಷಣದ ನಂತರ ಕೋಣೆಯಿಂದ ಒಂದು ಉಜ್ವಲ ಪ್ರಕಾಶ ಹೊರಹೊಮ್ಮಿ ಮಹಲಿನಲ್ಲಿ ಹಾಗೂ ಸುತ್ತಲು ಎಲ್ಲೆಲ್ಲಿ ಜನರು ನಿಂತಿದ್ದರೋ ಅಲ್ಲೆಲ್ಲ ಪಸರಿಸಿತು. ಆ ಉಜ್ವಲ ಪ್ರಕಾಶದ ಕಿರಣಗಳನ್ನು ಎದುರಿಸಲಾಗದೇ ದೃಷ್ಟಿಗಳು ತಾವೇ ತಾವಾಗಿ ಮುಚ್ಚಿಕೊಂಡವು. ಪ್ರತಿಯೊಬ್ಬ ವ್ಯಕ್ತಿಯು ಸಮ್ಮೋಹಿತನಾದನು ಹಾಗೂ ಎಲ್ಲರೂ ತಮ್ಮ ಹಣೆಯನ್ನು ನೆಲಕ್ಕೂರಿದರು.

"ಫಲಮ್ಮಾ ತಜ ಲ್ಲಿ ರಬ್ಬ ಹೂ ಲಿಲ್ ಜಬ್‌ಲಿ ಜಾಲಹೂ ದಕ್ಕನ್ ವಖರ್ರ ಮೂಸಾ ಸಬ್ ಈ ಖಾ"

ಯಾವಾಗ ಅಲ್ಲಾಹುವಿನ ಬೃಹದ್ ಪ್ರಕಾಶವು ತೂರ್‌ಬೆಟ್ಟದ ಮೇಲೆ ಪ್ರಕಟಗೊಂಡಿತೋ, ಆಗ ಆ ಬೆಟ್ಟವು ಛಿದ್ರವಿಚ್ಛಿದ್ರಗೊಂಡಿತು. ಇದನ್ನು ಕಂಡ ಮೂಸಾ ಪ್ರವಾದಿಯು ಮೂರ್ಛಿತರಾಗಿ ಬಿದ್ದುಕೊಂಡರು.

ಈ ನಿಮಗ್ನತೆಯು ಸ್ವಲ್ಪ ಸಮಯದವರೆಗೆ ಜಾರಿ ಇತ್ತು. ಬಾದಶಹ ಹಾಗೂ ಸಾರ್ವಜನಿಕರೆಲ್ಲರೂ ಜಿಯಾರತ್ ವ ಕರಾಮತ್ (ದರ್ಶನ ಹಾಗೂ ಪವಾಡ)ದಿಂದ ಸಮೃದ್ಧರಾದರು. ಇನ್ನೊಂದು ಕರಾಮತ್ ಮೇಲೆ ಕರಾಮತ್ ಜರುಗಿತು. ಏನೆಂದರೆ ಪ್ರಾರಂಭದಲ್ಲಿ ಉಂಟಾದ ಸುಗಂಧವು ಪಸರಿಸಿ ಜನರ ಬಟ್ಟೆಗಳಿಗೆಲ್ಲ ಎಷ್ಟು ಅಂಟಿಕೊಂಡಿತ್ತೆಂದರೆ ೩-೪ ಸಲ ತೊಳೆದರೂ ಹಾಗೆಯೇ ಉಳಿದಿತ್ತು.

ಅಲ್ಲಾಹುಮ್ಮ ಸ್ವಲ್ಲಿ ವ ಸ್ವಲ್ಲಿಮ್ ಅಲೈಹಿ ಐತ್ರ ಅಲ್ಲಹುಮ್ಮ ಕಬ್ರವೆಲ್ ಕರೀಮ್ ।

ಓ ಅಲ್ಲಾಹು ಮುಹಮ್ಮದ್ (ಸ)ರ ಮೇಲೆ ಕರುಣೆಯನ್ನು ವರ್ಷಿಸು ಹಾಗೂ ಅವರ ಪವಿತ್ರ ಸಮಾಧಿಯನ್ನು ಸುಗಂಧದಿಂದ ತುಂಬು.

ಈ ವಿವರವನ್ನು ನಂಬಲರ್ಹ ವಿದ್ವಾಂಸರು ಬೇರೆ ವಿಧದಲ್ಲಿ ವಿವರಿಸಿರುವರು.

ಸುಲ್ತಾನ್ ಮುಹಮ್ಮದ್ ಆದಿಲ್‌ಶಾಹನ ಕಾಲದಲ್ಲಿ ಕೆಲ ಸೂಫಿಗಳು ಪ್ರತಿದಿನ

ಆಸಾರದಲ್ಲಿ ಪವಿತ್ರ ಕೇಶ ಕಸ್ತೂರಿಯ ದರ್ಶನಕ್ಕಾಗಿ ಸೇರಿಕೊಂಡು ಅಲ್ಲಾಹುವಿನ ಸ್ತುತಿ ಹಾಗೂ ಪ್ರವಾದಿ ಮುಹಮ್ಮದ (ಸ)ರ ಮೇಲೆ ದುರೂದ್ ವ ಸಲಾಂ ಸಲ್ಲಿಸುವಲ್ಲಿ ನಿಮಗ್ನರಾಗಿರುತ್ತಿದ್ದರು. ಪವಿತ್ರ ಕೇಶಕಸ್ತೂರಿಗಳು ಆ ಮುಚ್ಚಲ್ಪಟ್ಟ ನಳಿಕೆಯಿಂದ ಹೊರಬಂದು ಉಜ್ವಲಪ್ರಕಾಶ ಬೀರುತ್ತಿದ್ದವು ಹಾಗೂ ಈ ಸೂಫಿವರ್ಯರು ಹೃನ್ಮನ ತಣಿಸಿಕೊಳ್ಳುತ್ತಿದ್ದರು. ಹೀಗೆ ನಿತ್ಯನಿರಂತರವಾಗಿ ಈ ಸೂಫಿಗಳು ಸಮೃದ್ಧಿ ಹೊಂದುತ್ತಿದ್ದರು. ಇದನ್ನರಿತ ಸುಲ್ತಾನ್ ಮುಹಮ್ಮದ್ ಆದಿಲ್‌ಶಾಹನು ತಾನೂ ಸಹ ಆ ಪವಿತ್ರ ಕೇಶ ಕಸ್ತೂರಿಗಳ ದರ್ಶನ ಪಡೆಯುವ ಹೆಬ್ಬಯಕೆಯನ್ನು ಹೊಂದಿ ಸೂಫಿವರ್ಯರ ಎದುರು ತನ್ನ ಅಳಲನ್ನು ತೋಡಿಕೊಂಡನು. ಹಜ್ರತ್‌ರೆ ನಿಮಗೆ ಸದಾಕಾಲವು ಪವಿತ್ರ ಕೇಶಕಸ್ತೂರಿಗಳ ದರ್ಶನದ ಭಾಗ್ಯವು ಲಭಿಸುತ್ತಿರುತ್ತದೆ. ಆದರೆ ಈ ನಿಮ್ಮ ಸೇವಕನಿಗೆ ಒಂದು ಅದಮ್ಯ ಇಚ್ಛೆಯಿದೆ, ಏನೆಂದರೆ ನಿಮ್ಮ ಮಧ್ಯಸ್ತಿಕೆ ಹಾಗೂ ಪ್ರಾರ್ಥನೆಯ ಫಲರೂಪದಲ್ಲಿ ನಾನೂ ಸಹ ಆ ಪವಿತ್ರ ಕೇಶ ಕಸ್ತೂರಿಗಳ ದರ್ಶನ ಪಡೆದು ಸಕಲ ವಿಧದ ಸೌಭಾಗ್ಯ, ಸಮೃದ್ಧಿ ಹೊಂದಬಯಸುತ್ತೇನೆ. ಆಗ ಆ ಸೂಫಿವರ್ಯರು ದೊರೆಯ ವಿನಂತಿಯನ್ನು ಮನ್ನಿಸಿ ಹೀಗೆ ಹೇಳಿದರು. ಯಾವಾಗ ನಾವು ಆ ಪವಿತ್ರ ಕೋಣೆಯಲ್ಲಿ ಅಲ್ಲಾಹುವಿನ ಸ್ತುತಿಯಲ್ಲಿ ನಿರತರಾಗಿ, ಹಾಗೂ ಮುಹಮ್ಮದ್(ಸ)ರ ಮೇಲೆ ಶಾಂತಿ ವರ್ಷಿಸುವುದಕ್ಕಾಗಿ 'ದರೂದ್ ವ ಸಲಾಂ' ಪಠಿಸುತ್ತಿರುವಾಗ ಆ ವೇಳೆಯಲ್ಲಿ ಓ ದೊರೆಯೇ ನೀನು ಅಲ್ಲಿ ಆಗಮಿಸಿ 'ದರ್ಶನದ ಭಾಗ್ಯ' ಹೊಂದು ಎಂದರು.

ಒಂದು ದಿನ ಆ ಸೂಫಿಗಳ ಗುಂಪು ಆಸಾರಮಹಲಿನಲ್ಲಿ ಸೇರಿ ವಿಶೇಷ ಕೋಣೆಯಲ್ಲಿ ದಾಖಲಾಗಿ ವಿನಮ್ರರಾಗಿ ನಿಂತುಕೊಂಡು ಅಲ್ಲಾಹುವಿನ ಸ್ತುತಿಯಲ್ಲಿ ತೊಡಗಿದರು ಹಾಗೂ ಆಸಾರಷರೀಫಿನ ಸೇವಕನಿಗೆ ಕರೆದು ಆ ಪವಿತ್ರ ಪೆಟ್ಟಿಗೆಯಿಂದ ಪವಿತ್ರ ಕೇಶಕಸ್ತೂರಿಗಳುಳ್ಳ ಪವಿತ್ರ ನಳಿಕೆಯನ್ನು ಹೊರತೆಗೆಯಲು ಆದೇಶಿಸಿದರು. ಸೇವಕನು ಅವರ ಆದೇಶವನ್ನು ಅಕ್ಷರಶಃ ಪಾಲಿಸಿ ಅತ್ಯಂತ ವಿನೀತಭಾವದಿಂದ ಆ ಪವಿತ್ರ ನಳಿಕೆಯನ್ನು ಹೊರತೆಗೆದು ಬೆಳ್ಳಿಯ ತಟ್ಟೆಯಲ್ಲಿ ಇರಿಸಿದನು. ಆಗ ಸೂಫಿವರ್ಯರು ಉಚ್ಚಸ್ವರದಲ್ಲಿ ಜಪದಲ್ಲಿ ನಿರತರಾದಾಗ ತಕ್ಷಣ ಪವಿತ್ರ ಕೇಶಕಸ್ತೂರಿಗಳು ನಳಿಕೆಯಿಂದ ಹೊರಬಂದು ಉಜ್ವಲಪ್ರಕಾಶ ಬೀರುತ್ತ ದೃಷ್ಟಿಗೋಚರವಾದವು. ಆಗ ಸಮಸ್ತ ಸೂಫಿವರ್ಯರ ಧ್ವನಿ ಮಾಧುರ್ಯವು ಇನ್ನಷ್ಟು ಮತ್ತಷ್ಟು ಉಚ್ಚವಾಗುತ್ತ ತಾರಕಕ್ಕೇರಿದವು. ಸುಲ್ತಾನ ಮುಹಮ್ಮದ್ ಆದಿಲ್‌ಶಾಹನು ಆ ಸೂಫಿಗಳ ಆದೇಶದಂತೆ ಕಿಡಕಿಯಲ್ಲಿ ನಿಂತಿದ್ದನು. ಇದೇ ಅದೃಷ್ಟವೆಂದು ಬಗೆದು ಬೇಗಬೇಗನೆ ಮಹಲಿನಲ್ಲಿ ಬಂದನು. ಆಗ ಆತನಿಗೆ ಆ ಉಜ್ವಲ ಪ್ರಕಾಶಮಾನವಾಗಿ ಬೆಳಗುತ್ತಿರುವ ಪವಿತ್ರಕೇಶ ಕಸ್ತೂರಿಗಳ ದರ್ಶನವಾಯಿತು. ಬಾದಶಹನ ಒಳಬರುವಿಕೆ ಹಾಗೂ ದೃಷ್ಟಿಬೀರುವಿಕೆಯ

ಜೊತೆಗೆ ಪವಾಡಯುಕ್ತ ಪವಿತ್ರ ಕೇಶಕಸ್ತೂರಿಗಳು ಬೆಳ್ಳಿಯ ತಟ್ಟೆಯಲ್ಲಿದ್ದವು. ಒಂದು ಪ್ರಕಾಶದ ರೂಪತಾಳಿ ಪೂರ್ವದಿಕ್ಕಿನ ಕಿಡಕಿಯಿಂದ ಹೊರಹೊರಟು ಮಹಲಿನಿಂದ ಸಾಗಿ ಆಕಾಶದತ್ತ ಗಮನ ಮಾಡಿದವು. ಮಹಾಪುರುಷರು ಈ ಘಟನೆಯಿಂದ ತುಂಬಾ ವಿಚಲಿತಗೊಂಡರು. ಹಾಗೂ ಧ್ಯಾನಸ್ಥರಾಗಿ ಇಂದು ಮುಹಮ್ಮದ್(ಸ)ರ ಮನಸ್ಸಿನ ವಿರುದ್ಧ ಕಾರ್ಯ ಜರುಗಿದೆ. ಇದು ಮರ್ಯಾದೆಯ ಸ್ತರ ದಾಟಿದೆ. ಹೀಗಾಗಿ ವಿಷಾದದ ಮಡುವಲ್ಲಿ ಮುಳುಗಿ ರೋದನಗೈಯುತ್ತ ಅಲ್ಲಾಹುವಿನ ಸನ್ನಿಧಿಯಲ್ಲಿ ಹಾಗೂ ಲೋಕಾನುಗ್ರಹಿ ಮುಹಮ್ಮದ(ಸ)ರ ಎದುರು ಕ್ಷಮೆ ಯಾಚಿಸಲು ತೊಡಗಿದರು. ಈ ವ್ಯಾಖ್ಯೆಯಂತೆ–

ಅಲ್ ಉಜ್ರೂ ಇಂದ್ ಕಿರಾಮಿನ್ನಾಸಿ ಮಕ್ಬೂಲು (ಮಹಾಪುರುಷರ ಕ್ಷಮೆಯಾಚನೆಯು ಸ್ವೀಕರಿಸಲ್ಪಡುತ್ತದೆ). ಮತ್ತೇನಿತ್ತು ಆ ಪವಿತ್ರ ಕೇಶಕಸ್ತೂರಿಗಳು ಆಕಾಶದಿಂದ ಇಳಿದು ಯಾವ ದಿಶೆಯಿಂದ ಹೊರ ಹೋಗಿದ್ದವೋ ಅಲ್ಲಿಂದಲೇ ಮರಳಿ ಅದೇ ಕಿಡಕಿಯಿಂದ ಪವಿತ್ರ ಕೋಣೆಯಲ್ಲಿ ಆಗಮಿಸಿ ಹಜ್ರತ್‌ಷಾಹ್ ಮುರ್ತುಜಾಖಾದ್ರಿ(ಖು)ರ ಗಡ್ಡಕ್ಕೆ ಸ್ಪರ್ಶಿಸುತ್ತಾ ಪವಿತ್ರ ನಳಿಕೆಯಲ್ಲಿ ಪ್ರವೇಶಿಸಿದವು. ಆ ವೇಳೆ ಎಲ್ಲ ಸೂಫಿವರ್ಯರು ಸಂತೋಷದಿಂದ ಅಲ್ಲಾಹುವಿಗೆ ಕೃತಜ್ಞತೆ ಅರ್ಪಿಸುತ್ತಾ ಸೇವಕನಿಗೆ ಆ ಪವಿತ್ರ ನಳಿಕೆಯನ್ನು ಪವಿತ್ರ ಪೆಟ್ಟಿಗೆಯಲ್ಲಿರಿಸಲು ಆದೇಶಿಸಿದರು ಹೇಳಲಾಗುತ್ತದೆ ಆ ಸಮಯದಲ್ಲಿ ಹಾಜರಿದ್ದ ಎಲ್ಲ ಸೂಫಿವರ್ಯರು ಕಸ್ತೂರಿ ಹಾಗೂ ಸುಗಂಧದಿಂದ ಲೇಪಿಸಿ ಪೆಟ್ಟಿಗೆಯನ್ನು ಭದ್ರಪಡಿಸಿದರು. ಮತ್ತೆ ಆ ದಿನದಿಂದ ಪವಿತ್ರ ನಳಿಕೆಯನ್ನು ತೆರೆಯಲಾಗಲಿಲ್ಲ ಹಾಗೂ ದರ್ಶನವೂ ಆಗಲಿಲ್ಲ.

ಹೇಳಲಾಗುತ್ತದೆ, ಆಸಾರಷರೀಫದಲ್ಲಿ ಎರಡು ಕೇಶಕಸ್ತೂರಿಗಳು ಎರಡು ಬೇರೆ ಬೇರೆಯ ನಳಿಕೆಯಲ್ಲಿದ್ದವು ಒಂದು ಕೇಶ ಕಸ್ತೂರಿಯನ್ನು ಯಾವುದು ಅತ್ಯಂತ ಅಧಿಕೃತತೆಯ ಪ್ರಸಿದ್ಧಿ ಹೊಂದಿತ್ತು. ಅದನ್ನು ಸ್ಫಟಿಕವರ್ಣದ ನಳಿಕೆಯಲ್ಲಿ ಇರಿಸಲಾಗಿತ್ತು. ಇನ್ನೊಂದು ಕೇಶ ಕಸ್ತೂರಿಯು, ಅದೂ ಸಹ ಅಧಿಕೃತತೆಯ ಮುದ್ರೆ ಪಡೆದಿತ್ತು. ಅದನ್ನು ಬೆಳ್ಳಿಯ ನಳಿಕೆಯಲ್ಲಿ ಇರಿಸಲಾಗಿತ್ತು. ಯಾವಾಗ ಆಲಂಗೀರ ಬಾದಶಹನು ಬಿಜಾಪುರವನ್ನು ಗೆದ್ದುಕೊಂಡನೋ ಆಗ ಸಿಕಂದರ್ ಆದಿಲ್‌ಶಾಹನು ಅನಿವಾರ್ಯವಾಗಿ ಆಲಂಗೀರ್ ಬಾದಶಹನ ಭೇಟಿಗಾಗಿ ಹೋಗಲು ನಿರ್ಧರಿಸಿ ತಮ್ಮ ಅಧಿಕಾರಿಗಳು ಹಾಗೂ ಆಡಳಿತವರ್ಗಕ್ಕೆ ಹೀಗೆ ಹೇಳಿದನು ಈಗಾಗಲೇ ಆಲಂಗೀರ ಬಾದಶಹನು ಈ ಪ್ರದೇಶವನ್ನು ತನ್ನ ವಶಕ್ಕೆ ತೆಗೆದುಕೊಂಡಿರುವನು ಮತ್ತು ಈಗ ಆದಿಲಶಾಹಿ ವಂಶಕ್ಕೆ ಗೌರವ ನೀಡಲಾರನು. ಇಂತಹ ಯುಕ್ತಿಯನ್ನು ತೋರಿಸಿರಿ ಇದರಿಂದಾಗಿ ನಮ್ಮ ಘನತೆ ಗೌರವಕ್ಕೆ ಚ್ಯುತಿ ಬರದಿರಲಿ ಹಾಗೂ ನಮ್ಮೊಂದಿಗೆ ಸದ್ವರ್ತನೆಯೊಂದಿಗೆ ವರ್ತಿಸಲಿ. ಆಗ ದೊರೆಯ ಆಪ್ತಸಲಹೆಗಾರರು ಈ ಯುಕ್ತಿಯನ್ನು

ಹೇಳಿದರು. ಏನೆಂದರೆ ಆಸಾರ ಮಹಲಿನಲ್ಲಿಯ ಪವಿತ್ರ ಪೆಟ್ಟಿಗೆಯನ್ನು ತಲೆಯ ಮೇಲೆ ಹೊತ್ತುಕೊಂಡು ಭೇಟಿಗೆ ಹೋಗಬೇಕು ಆಗ ಬಾದಶಹನು ಪವಿತ್ರ ಪೆಟ್ಟಿಗೆಗೆ ಗೌರವ ತೋರಲು ನಿಮ್ಮೊಂದಿಗೆ ಸದ್ವರ್ತನೆಯಿಂದ ವರ್ತಿಸುವನು. ಸಿಕಂದರ ಆದಿಲಶಾಹನು ಈ ಸಲಹೆಯನ್ನು ಸೂಕ್ತವೆಂದು ಬಗೆದು ಆಸಾರ್‌ಷರೀಫಿನ ಸೇವಕನಿಗೆ ಕರೆದು ಹೀಗೆ ಹೇಳಿದನು. ಆಸಾರಮಹಲಿನಲ್ಲಿಯ ಪವಿತ್ರ ಪೆಟ್ಟಿಗೆಯನ್ನು ತನ್ನಿರಿ ಆಲಂಗೀರ ಬಾದಶಹನಿಗೆ ಕಾಣಿಕೆಯ ರೂಪದಲ್ಲಿ ಅರ್ಪಿಸಲು ಬೇಕಾಗಿದೆ. ಸೇವಕನು ಬಹಳೇ ಚತುರನಿದ್ದನು. ಅವನು ಹೀಗೆ ವಿಚಾರಿಸಿದನು. ಈ ಬಾದಶಹನು ತನ್ನ ಅವಿವೇಕತನದಿಂದ ಸಾಮ್ರಾಜ್ಯವನ್ನಂತೂ ಕಳೆದುಕೊಂಡನು. ಈಗ ಈ ಪವಿತ್ರ ಕೇಶ ಕಸ್ತೂರಿಗಳನ್ನು ಯಾವುದರ ಅಧಿಕೃತತೆಯ ಮೇಲೆ ಅರಬ ಹಾಗೂ ಅರಬೇತರರು ಧೃಢವಿಶ್ವಾಸ ಹಾಗೂ ಅಚಲನಂಬಿಕೆ ಹೊಂದಿದ್ದಾರೆ. ಈತನ ಪೂರ್ವಜರು ಅದಮ್ಯ ಇಚ್ಛೆ ಹಾಗೂ ತೀವ್ರ ಬಯಕೆಯಿಂದ ಲಕ್ಷಗಟ್ಟಲೇ ಧನವ್ಯಯಿಸಿ ಈ ಅಮೂಲ್ಯ ಪವಿತ್ರ ಕೇಶಕಸ್ತೂರಿಗಳನ್ನು ಹೊಂದಿದರು. ಯಾವುದು ಈ ಪ್ರದೇಶಕ್ಕೆ ಸಮೃದ್ಧಿದಾಯಕವಾಗಿದೆ. ಅದನ್ನೂ ಸಹ ಈ ಬಾದಶಹನು ಆಲಂಗೀರ ಬಾದಶಹನಿಗೆ ನೀಡಬಯಸುತ್ತಾನೆ. ಹೀಗೆ ಬಗೆದು ಆ ಪವಿತ್ರ ಕೇಶಕಸ್ತೂರಿಗಳನ್ನು ಬದಲಾಯಿಸಿದನು. ಸ್ಫಟಿಕವರ್ಣದ ನಳಿಕೆಯಿಂದ ಬೆಳ್ಳಿಯ ನಳಿಕೆಗೆ ಹಾಗೂ ಬೆಳ್ಳಿಯ ನಳಿಕೆಯಿಂದ ಸ್ಫಟಿಕ ವರ್ಣದ ನಳಿಕೆಗೆ ಅದಲು ಬದಲು ಮಾಡಿ ಬೆಳ್ಳಿಯ ನಳಿಕೆಯನ್ನು ಆಸಾರ್‌ಮಹಲಿನಲ್ಲಿ ಇರಿಸಿ, ಸ್ಫಟಿಕವರ್ಣದ ನಳಿಕೆಯನ್ನು ಸಿಕಂದರ್ ಆದಿಲಶಾಹನಿಗೆ ಒಪ್ಪಿಸಿದನು. ಆತನು ಆ ಪವಿತ್ರ ಕೇಶಕಸ್ತೂರಿಗಳನ್ನು ತಲೆ ಮೇಲೆ ಹೊತ್ತುಕೊಂಡು ಕೋಟೆಯಿಂದ ಆಲಂಗೀರನ ಸಂದೇಶವಾಹಕರು ಆಲಂಗೀರ ಬಾದಶಹನಿಗೆ ಈ ಸಂದೇಶವನ್ನು ಮುಟ್ಟಿಸಿದರು. ಏನೆಂದರೆ ಸಿಕಂದರ ಆದಿಲ್‌ಶಾಹನು ಹಜ್ರತ್ ಮುಹಮ್ಮದ್(ಸ)ರ ಪವಿತ್ರ ಕೇಶಕಸ್ತೂರಿಗಳನ್ನು ತಲೆಮೇಲೆ ಹೊತ್ತುಕೊಂಡು ತಮ್ಮ ಭೇಟಿಗೆ ಬರುತ್ತಿರುವನು. ಆಗ ಆಲಂಗೀರ ಬಾದಶಹನು ತನ್ನ ಸೇವಕರಿಗೆ ತಕ್ಷಣ ಸಿಕಂದರನ ಹಾದಿಯಲ್ಲಿ ರತ್ನಗಂಬಳಿ ಹಾಸಬೇಕು ಹಾಗೂ ಒಂದು ತಂಗುದಾಣ ನಿರ್ಮಿಸಬೇಕು ಮತ್ತು ಕುರ್‌ಆನ್ ಕಂಠಸ್ಥಗೈದವರನ್ನು(ಹಾಫೀಜ್‌ರನ್ನು) ದೇವಸ್ತುತಿಯಲ್ಲಿ ತೊಡಗಿದವರನ್ನು ಹಾಗೂ ಸಮಸ್ತ ಅಧಿಕಾರವರ್ಗವು ಹಾಜರಿದ್ದು ಸಿಕಂದರ ಬಾದಶಹನಿಂದ ಆ ಪವಿತ್ರ ಕೇಶಕಸ್ತೂರಿಗಳನ್ನು ಸ್ವೀಕರಿಸಬೇಕು. ಹಾಗೂ ಅದನ್ನು ತುಂಬು ಗೌರವದಿಂದ ತಂಗುದಾಣದಲ್ಲಿರಿಸಿ ಲೋಭಾನದ ಸುಗಂಧವನ್ನು ಪಸರಿಸಬೇಕು ಹಾಗೂ ಕುರ್‌ಆನ್ ಪಠಣ, ದರೂದ್‌ವ ತಸ್ಬಿಯಲ್ಲಿ ನಿರತರಾಗಬೇಕು. ಯಾವಾಗ ಸಿಕಂದರ್ ಆದಿಲಶಾಹನು ಆ ತಂಗುದಾಣದ ಬಳಿ ಬಂದಾಗ ಆಲಂಗೀರ ಬಾದಶಹನ ಆದೇಶದಂತೆ ಆ ಪವಿತ್ರ ಕೇಶಕಸ್ತೂರಿಗಳನ್ನು ಆತನಿಂದ ಸ್ವೀಕರಿಸಿ ತಂಗುದಾಣದಲ್ಲಿ ತುಂಬು ಗೌರವದೊಂದಿಗೆ ಇರಿಸಲಾಯಿತು. ಕೊನೆಗೆ ಸಿಕಂದರ್ ಆದಿಲ್‌ಶಾಹನು

ತನ್ನ ಯುಕ್ತಿಯು ಫಲಿಸದಿರುವದರಿಂದ ಶೋಕತಪ್ತನಾಗಿ ಆಲಂಗೀರ್ ಬಾದಶಹನ ಬಳಿ ಹೋದನು.

ಆಲಂಗೀರ ಬಾದಶಹನು ಆ ಪವಿತ್ರ ಕೇಶಕಸ್ತೂರಿಗಳನ್ನು ದೆಹಲಿಗೆ ಕಳುಹಿಸಿಕೊಟ್ಟನು. ತಿಳಿದು ಬರುವುದೇನೆಂದರೆ ಆ ಪವಿತ್ರ ಕೇಶಕಸ್ತೂರಿಗಳು ಅಲ್ಲಿಯೂ ಉಳಿಯಲಿಲ್ಲ. ಮುಂದೆ ಬಂದಂತಹ ಮಹಾಪುರುಷರಾದ ಸೈಯದ್ ಮುಸ್ತಫಾ ಬುರೂಮ್(ಖು) ಇವರು ಈ ಗ್ರಂಥಕರ್ತನ ತಂದೆಯ ಮುರ್ಷಿದ್(ಗುರು)ವಾಗಿದ್ದಾರೆ. ಹಾಗೂ ಮುಹಮ್ಮದ್‌ಪುರ ಅರ್ಕಾಟ್‌ಕ್ಕೆ ಪ್ರವಾಸಕ್ಕೆ ಹೋಗಿದ್ದರು. ಅಲ್ಲಾಮಾ ಅಮೀನುದ್ದೀನ್ ಅಹ್ಮದ್‌ಖಾನ್‌ರಿಂದ ಉಲ್ಲೇಖಿಸುತ್ತಾರೆ. ಏನೆಂದರೆ ಆಲಂಗೀರ ಬಾದಶಹನು ಯಾವೆಲ್ಲ ಸಮೃದ್ಧಿರೂಪದಲ್ಲಿ ಬಿಜಾಪುರದಿಂದ ಪಡೆದಿದ್ದನು ಹಾಗೂ ದೆಹಲಿಗೆ ಕಳುಹಿಸಿ ಕೊಟ್ಟಿದ್ದನು. ಅವು ಅರ್ಕಾಟಿನ ಮಸೀದೆಯಲ್ಲಿ ಸುರಕ್ಷಿತವಾಗಿ ಇರಿಸಲಾಗಿತ್ತು. ಒಂದು ದಿನ ನಾನು ಈ ಸ್ಥಳದಲ್ಲಿ ಹಾಜರಿದ್ದೆನು. ಬಹಳಷ್ಟು ಜನರು ಸೇರಿದ್ದರು. ಆಕಸ್ಮಿಕವಾಗಿ ಒಂದು ದೊಡ್ಡದಾದ ಶಬ್ದವುಂಟಾಗಿ ಮಸೀದೆಯ ಮಾಳಿಗೆಯು ಛಿದ್ರವಾಯಿತು ಹಾಗೂ ಪ್ರಕಾಶದ ಒಂದು ಕಿರಣವು ಆಗಸದತ್ತ ಪ್ರಯಾಣಿಸಿತು. ನಾವೆಲ್ಲ ವಿಚಲಿತರಾಗಿ ಏನಾಯಿತೆಂದು ತಿಳಿಯಲು ಮಸೀದೆಯೊಳಗೆ ಹೋದೆವು. ನೋಡಲಾಗಿ ಅಲ್ಲಿ ಇಟ್ಟಿದ್ದ ಆ ಪವಿತ್ರ ಕೇಶ ಕಸ್ತೂರಿಗಳುಳ್ಳ ಪೆಟ್ಟಿಗೆಯು ಮಾಯವಾಗಿದೆ. ಜನರು ಅದನ್ನು ಹುಡುಕಲೆಂದು ಅತ್ತಿತ್ತ ಹೋದರು. ೨-೩ ಕೋಸಿನ ಅಂತರದಲ್ಲಿ ಅರಣ್ಯಪ್ರದೇಶದಲ್ಲಿ ಖಾಲಿ ಪೆಟ್ಟಿಗೆಯು ಸಿಕ್ಕಿತು. ಜನರು ಮರಳಿ ಬಂದರು. 'ವಲ್ಲಾಹು ಆಲಮು' (ಅಲ್ಲಾಹುವೇ ಬಲ್ಲನು).

ಆಸಾರಮಹಲಿನಲ್ಲಿರುವ ಆ ಪವಿತ್ರ ಕೇಶಕಸ್ತೂರಿಗಳ ದರ್ಶನವು ಕೆಲವು ಸಲ ಆಗಿದೆ. ಮಾಮುರ್‌ಖಾನ್ ಎಂಬ ಆಡಳಿತಗಾರನು ಆಲಂಗೀರ ಬಾದಶಹನಿಂದ ಅನುಮತಿ ಪಡೆದು ಹಜ್ರತ್ ಸೈಯದ್‌ಶಾಹ್ ಮುಸ್ತಫಾ ಖಾದ್ರಿ ಇವರು ಒಂದು ಕಡೆಯಿಂದ ಹಜ್ರತ್ ಷಾಹ್ ಮುರ್ತುಜಾ ಖಾದ್ರಿಯವರ ಖಲೀಫಾ ಇರುವರು. ಇವರನ್ನು ಜೊತೆಗೆ ಕರೆದುಕೊಂಡು ಹೋಗಿ ಪವಿತ್ರ ಕೇಶ ಕಸ್ತೂರಿಗಳ ದರ್ಶನ ಪಡೆದನು. ಇದರ ನಂತರ ಸುಬೇದಾರ್‌ಸನಾ ಅಲ್ಲಾಹ್‌ಖಾನ್‌ನು ತನ್ನ ಆಡಳಿತಾವಧಿಯಲ್ಲಿ ಹಜ್ರತ್‌ಶಾಹ ಹಾಷಿಂ ಹುಸೈನಿ ಅಲ್ವಿ(ಖು)ರ ಮೊಮ್ಮಗರಾದ ಹಾಗೂ ಪೀಠಾಧಿಕಾರಿಗಳಾದ ಹಜ್ರತ್‌ಶಾಹ ಮುರ್ತುಜಾ(ಖು)ರ ಉಪಸ್ಥಿತಿಯಲ್ಲಿ ಪವಿತ್ರ ಕೇಶಕಸ್ತೂರಿಗಳ ದರ್ಶನ ಹೊಂದಿದನು. ಮತ್ತೆ ಮುಹಮ್ಮದ್‌ಶಾಹ ಬಾದಶಹನ ದೆಹಲಿಯ ಅವಧಿಯಲ್ಲಿ ಹಿಜ್ರಿಶಕೆ ೧೧೪೨ದಲ್ಲಿ ಖಾಜಿ ಸೈಯದ್ ಅಬ್ದುಲ್ಲಾಹ್ ಮುಖ್ಬಿಲ್‌ರಿಗೆ ನವಾಬ್ ಆಹಸಿಫ್‌ಝೂರ ಆದೇಶವಾಯಿತು. ಆಸಾರಮಹಲಿನ ಪವಿತ್ರ ಕುರುಹುಗಳನ್ನು ಕಂಡುಕೊಳ್ಳಬೇಕು. ಆಗ ಆತನು ಸಮಸ್ತ ಸೂಫಿವರ್ಯರಿಗೆ ಹಾಗೂ

ಗುಣವಂತರಿಗೆ ಸೇರಿಸಿ ಪವಿತ್ರ ಪೆಟ್ಟಿಗೆಯಿಂದ ಪವಿತ್ರಕೇಶ ಕಸ್ತೂರಿಗಳ ನಳಿಕೆ ಹೊರತೆಗೆದು ದರ್ಶನ ಪಡೆದರು. ಅದರ ನಂತರದ ಅವಧಿಯಲ್ಲಿ ಯಾರಿಗೂ ಸಹ ದರ್ಶನ ಭಾಗ್ಯ ಲಭಿಸಿಲ್ಲ. ಆದರೆ ಈ ಮೂರು ದರ್ಶನಭಾಗ್ಯಗಳಲ್ಲಿ ಆ ಪವಿತ್ರ ಕೇಶ ಕಸ್ತೂರಿಗಳು ಹೊರಬಂದು ದರ್ಶನ ನೀಡಲಿಲ್ಲ.

ಆಲಂಗೀರ್ ಬಾದಶಹನ ಕಡೆಯಿಂದ ಸೈಯದ್ ವಂಶಸ್ಥರಾದ ಓರ್ವರು ಸುಬೇದಾರನಾಗಿ ನಿಯುಕ್ತರಾದರು. ಆಸಾರ್ ಷರೀಫಿನಲ್ಲಿ ಗುರುವಾರದಂದು ಹಾಗೂ ಇನ್ನಿತರ ವಿಶೇಷ ದಿನಗಳಲ್ಲಿ ಅಸಂಖ್ಯ ದರ್ಶನಾರ್ಥಿಗಳು ಹಾಗೂ ಬಿಜಾಪುರದ ನಾಗರಿಕರು ದರ್ಶನ ಪಡೆಯುತ್ತಾರೆ. ತಮ್ಮ ಸುಬೇದಾರಿಕೆಯ ಅಧಿಕಾರದ ಅಮಲಿನಲ್ಲಿ ದುರ್ವರ್ತನೆಯೊಂದಿಗೆ ನಾಲಿಗೆಯಿಂದ ಅವಾಚ್ಯ ಶಬ್ದಗಳನ್ನು ಬಳಸಿದರು.

ಈ ಜನರು ಪವಿತ್ರ ಕೇಶಕಸ್ತೂರಿಗಳಿಗೆ ತುಂಬು ಗೌರವ ಅರ್ಪಿಸುತ್ತಾರೆ ಹಾಗೂ ಅದರ ದರ್ಶನ ಪಡೆಯುತ್ತಾರೆ. ಆದರೆ ನಾವು ಸೈಯದ್ ವಂಶಸ್ಥರಾಗಿದ್ದು ನಮಗೆ ಏನೊಂದೂ ಗೌರವ ನೀಡುವುದಿಲ್ಲ. ಹೀಗೆ ನಾಲಿಗೆಯಿಂದ ಉಚ್ಚರಿಸಿದೊಡನೆಯೇ ಅವರಿಗೆ ಮೂತ್ರಬಂಧವಾಗಿ ಮೂತ್ರ ಕಟ್ಟಿಹೋಯಿತು ಹಾಗೂ ಸ್ವಲ್ಪ ಹೊತ್ತಿನಲ್ಲಿಯೇ ನರಳಾಡಿ ತೀರಿಹೋದರು.

ಬಜರ್‌ಗುಸ್ತಾಖಿ ಕುಸೂಫ್ ಆಫ್ತಾಬ್ ।
ಶುದ್ ಅಜಾಜೀಲಿ ಜ ಜುರಾತ್ ರದ್ದ ಬಾಬ್ ॥
ಅಜ್ ಅದಬ್ ಮಾಸೂಮ್ ವ ಪಾಕ್ ಆಮದ್ ಮಲಕ್ ।
ವ ಜ ಅದಬ್ ಪುರನೂರ್ ಗಷ್ತ ಇಂ ಫಲಕ್ ॥

ಮುಹಮ್ಮದ್ (ಸ)ರ ಘನತೆಗೆ ಅಗೌರವ ತೋರಿದರೆ ಸೂರ್ಯನಿಗೂ ಗ್ರಹಣ ಹಿಡಿಯುತ್ತದೆ ।

ಅಜಾಜೀಲ್ ಎಂಬ ದೇವಚರನು ಅಗೌರವ ತೋರಿ ಅಲ್ಲಾಹುವಿನ ಕರುಣೆಯಿಂದ ದೂರವಾದನು ॥

ದೇವಚರರು ಅಲ್ಲಾಹುವಿನ ಆಜ್ಞೆ ಅನುಸರಿಸಿ ಮುಗ್ಧ ಹಾಗೂ ಪವಿತ್ರರಾದರು ।
ಹಾಗೂ ನಮ್ರತೆಯ ಕಾರಣದಿಂದಾಗಿ ಈ ಆಕಾಶವು ಪ್ರಕಾಶಮಾನವಾಯಿತು ॥

■

*

ಬಿಜಾಪುರದ ಸೂಫಿಗಳ ವಿವರಣೆ

ಆದಿಲ್‌ಶಾಹಿ ಪೂರ್ವಕಾಲದ ಸೂಫಿಗಳು

೧. ಶೇಖ ನಸೀರುದ್ದೀನ್ ನಸ್ರುಲ್ಲಾಹ್ ವಲಿ ಖುದ್ದಿಸ್ಸಿರ್ರಾಹ್

ಇವರು ಬಿಜಾಪುರದ ಪುರಾತನ ಸೂಫಿಗಳಲ್ಲೊಬ್ಬರಾಗಿದ್ದಾರೆ. ಹಾಗೂ ಅವರ ತಂದೆಯವರಾದ ಸುಲ್ತಾನುಲ್ ವಾಸಿಲಿನ್ ಜುಬದ್‌ತುಲ್ ಆರಿಫೀನ್ ಹಜ್ರತ್ ಶೇಖ ಫರೀದುದ್ದೀನ್ ಮಸೂದ್ ಅಜ್ವಧನಿ ಅವರು 'ಶಕರ್‌ಗಂಜ್' ಎಂಬ ಬಿರುದಿನಿಂದ ಪ್ರಸಿದ್ಧರಾಗಿದ್ದಾರೆ. ಇವರು ಅವರ ಜೇಷ್ಠಪುತ್ರ ಹಾಗೂ ಖಲೀಫಾ ಆಗಿರುವರು.

ಆ ಕಾಲದ ಬಹುಮುಖ್ಯ ವಲಿಯಾಗಿದ್ದರು. ಸೀದಾ ಸಾದಾಜೀವನ ಕೊಡುಗೈ ದೊರೆ, ನಿತ್ಯ ನಿರಂತರವಾಗಿ ಆರಾಧನೆಯಲ್ಲಿ ತೊಡಗಿರುತ್ತಿದ್ದರು. ಅಲ್ಲಾಹುವಿನಲ್ಲಿ ಅಚಲ ನಿಷ್ಠೆ ಹೊಂದಿದ್ದರು ಹಾಗೂ ಬಡವರ ದೀನದಲಿತರ ನೋವನ್ನು, ತೊಂದರೆಯನ್ನು ಮನಗಾಣುತ್ತಿದ್ದರು. ಹಾಗೂ ಅವರಿಗಾಗಿ ಪ್ರಾರ್ಥಿಸುತ್ತಿದ್ದರು. ಪಾರಲೌಕಿಕ ಜೀವನಕ್ಕೆ ಮಹತ್ವ ನೀಡಿ, ಲೌಕಿಕ ಜೀವನದ ಕುರಿತು ನಿರ್ಲೋಭಿಯಾಗಿದ್ದರು. ಉಲ್ಲೇಖವಿರುವಂತೆ ಪೀರ್ ನಸ್ರುಲ್ಲಾಹ್‌ವಲಿ ಖುದ್ದಾಸ್ಸಿರಾಹ ಅವರು ತಮ್ಮ ತಂದೆಯವರ ಕಾಲದಲ್ಲಿಯೇ ಹಜ್‌ಯಾತ್ರೆ ಕೈಗೊಂಡು ಮಕ್ಕಾಮದೀನಾದ ಜಿಯಾರತ್ ಮಾಡಿ ಮರಳಿ ದಕ್ಷಿಣ ಭಾರತಕ್ಕೆ ಬಂದು ಬಿಜಾಪುರ ಪಟ್ಟಣದಲ್ಲಿ ವಾಸಿಸತೊಡಗಿದರು. ಇಲ್ಲಿ ಧಾರ್ಮಿಕ ಶಿಕ್ಷಣವನ್ನು ಪಡೆಯಲು ಇಚ್ಛೆಯುಳ್ಳವರಿಗಾಗಿ ಜ್ಞಾನ ಪ್ರಸಾರ ಮಾಡತೊಡಗಿದರು. ಇವರ ಉಪದೇಶಾಮೃತದಿಂದ ಬಹಳಷ್ಟು ಜನರು ಸತ್ಯವಿಶ್ವಾಸಿಗಳಾಗಿ, ಅಲ್ಲಾಹುವಿನ ಪಥದಲ್ಲಿ ಸಾಗಿ ಮಹಾಮಹಾ ವಿದ್ವಾಂಸರಾಗಿ ಪರಿವರ್ತಿತರಾದರು. ಇವರ ಆಗಮನದ ಸಮೃದ್ಧಿಯಿಂದಾಗಿ ಅಲ್ಪ ಅವಧಿಯಲ್ಲಿಯೇ ದಕ್ಷಿಣ ಪ್ರದೇಶವು ಹಾಗೂ ಬಿಜಾಪುರವು

ಮುಸ್ಲಿಮ್ ದೊರೆಗಳ ಆಡಳಿತಕ್ಕೊಳಪಟ್ಟಿತು ಹಾಗೂ ಈ ಕಾಲದಲ್ಲಿ ಔಲಿಯಾ ಅಲ್ಲಾಹ್ ಹಾಗೂ ಇಸ್ಲಾಂಧರ್ಮದ ವಿದ್ವಾಂಸರುಗಳು ಬಹುಸಂಖ್ಯೆಯಲ್ಲಿ ಆಗಮಿಸಿದರು ಹಾಗೂ ಬಿಜಾಪುರದಲ್ಲಿ ನೆಲೆಸತೊಡಗಿದರು. ಇದರಿಂದಾಗಿ ಇಡೀ ದಕ್ಷಿಣ ಸಾಮ್ರಾಜ್ಯವೇ ಹೆಮ್ಮೆಯಿಂದ ತಲೆದೂಗತೊಡಗಿತು.

ಒಂದು ಉಲ್ಲೇಖದಂತೆ-ಪ್ರಾರಂಭದಲ್ಲಿ 'ಹಜ್ರತ್ ಬಖ್ತಿಯಾರ್ ಔಸಿ'(ಖು)ರವರ ಮರಣದ ನಂತರ ಅವರ ಮೇಲಿನ ಅಪಾರ ವಿಶ್ವಾಸದಿಂದಾಗಿ ಅವರ ಸಮಾಧಿಯ ಬಳಿ ಧ್ಯಾನಸ್ಥರಾಗಿ ಅವರಿಂದ ಬೈಯ್ಯತ್ ಪಡೆದರು. ಇವರ ತಂದೆಯವರಾದ ಹಜ್ರತ್ ಶೇಖ ಫರೀದುದ್ದೀನ್ ಶಕರ್‌ಗಂಜ್(ಖು) ಈ ವಿಶೇಷಸುದ್ದಿ ಆಲಿಸಿ ಹೀಗೆ ಉಚ್ಛರಿಸಿದರು. ಪ್ರಿಯ ಪುತ್ರನೇ, ನೀವು ಅವರಿಂದ ಬೈಯ್ಯತ್ ಪಡೆದಿರುವದಕ್ಕಿಂತಲೂ ದೈಹಿಕವಾಗಿ ನಿಮ್ಮೆದುರು ಇರುವವರ ಅನುಸರಣೆ ಮಾಡಿದರೆ ಬಹುಬೇಗನೆ ನಿಮ್ಮ ಗುರಿಯನ್ನು ತಲುಪಬಹುದು. ಹಾಗೂ ಈ ಮಾತಿನಂತೆ ಅವರು ತಮ್ಮ ತಂದೆಯವರಾದ ಶೇಖ ಶಕರ್‌ಗಂಜ್‌ರಿಂದಲೇ ಶಿಕ್ಷಣ ಪಡೆದರು. ಹೀಗೆನ್ನುತ್ತಾರೆ. ಸೈಯ್ಯದುಸ್ಸಾದಾತ್, ಗೌಸುಲ್ ಉಶ್ಮಾಖ್ ಬಂದಾನವಾಜ್ ಗೇಸೂದರಾಜ್ ಹಜ್ರತ್ ಸೈಯ್ಯದ್ ಮುಹಮ್ಮದ್‌ಹುಸೈನಿ(ಖು) ದೆಹಲಿಯಿಂದ ದಕ್ಷಿಣಕ್ಕೆ ಆಗಮಿಸಿದಾಗ ಬಿಜಾಪುರಕ್ಕೆ ತಲುಪಿದರು ಹಾಗೂ ಹಜ್ರತ್‌ಶೇಖ ನಸ್ರುಲ್ಲಾಹ್ ವಲಿ ಖುದ್ದುಸಲ್ಲಾಹ್‌ರ 'ದರ್ಗಾ'ದ ಜಿಯಾರತ ಮಾಡಿದರು ಹಾಗೂ ಆ ಮನೆಯಲ್ಲಿ ಹಜ್ರತ್ ಖ್ವಾಜಾ ಬಂದಾನವಾಜ್‌ರು ಹಜ್ರತ್ ಶೇಖ್‌ರ ಜಿಯಾರತ್ ನಂತರ ಸ್ವಲ್ಪ ಕಾಲದವರೆಗೆ ವಿಶ್ರಾಂತಿ ಪಡೆದಿದ್ದರು. ಅದು ಇಂದಿಗೂ ಉಪಸ್ಥಿತವಿದೆ. ಅದು ಹಜ್ರತ್ ಶೇಖರ ದರ್ಗಾಹ್ ಷರೀಫ್‌ದ ಪಶ್ಚಿಮದಲ್ಲಿ ಇರುವದು.

"ಅಲ್ಲಾಹುಮ್ಮನ್‌ಫ ಅನಾ ಬೀ ಬರ್ಕಾತಿಹಿಂಫಿದ್ದುನಿಯಾವಲ್ ಆಖಿರಾತಿ ..

"ಅಲ್ಲಾಹು ನಮಗೆ ಅವರ ಸಮೃದ್ಧಿಯಿಂದಾಗಿ ಇಹಪರಗಳೆರಡರಲ್ಲೂ ಫಲವನ್ನು ನೀಡು"

ಅವರ ಉರುಸ್‌ಷರೀಫ್‌ವು ರಜ್ಜಬಿನ ೨೪ನೆಯ ದಿನಾಂಕದಂದು ಇರುವುದು ಹಾಗೂ ದರ್ಗಾಹ್‌ಷರೀಫ್‌ವು ಶಹಾಪುರ ಗೇಟಿನ ಪಶ್ಚಿಮ ಭಾಗದಲ್ಲಿರುವದು ಹಾಗೂ ಸಮಾಧಿಯ ಮೇಲೆ ಒಂದು ಪುಟ್ಟದಾದ ಗುಂಬಜ್ ನಿರ್ಮಿಸಲಾಗಿದೆ. ಜನರು ಜಿಯಾರತ್ ಮಾಡುವುದು ತಮಗೆ ಸಮೃದ್ಧಿದಾಯಕವೆಂದು ಬಗೆಯುತ್ತಾರೆ. ಹಜ್ರತ್‌ಶಾಹ್ ನಯೀಮಲ್ಲಾಹ್ ಖುದ್ದುಸ್ಸಿರಾಹ್ ಯಾರು ತನ್ನ ಕಾಲದ ಬಹುಮುಖ್ಯ ಸೂಫಿಗಳಲ್ಲೊಬ್ಬರಾಗಿದ್ದರೊ. ಹಾಗೂ ಯಾರ ಪ್ರಸ್ತಾಪವು ಜನಾಬ್ ಹಜ್ರತ್ ಶಾಹ್ ಹಾಷಿಂ ಹುಸೈನಿ ಅಲ್ ಅಲ್ವಿ(ಖು) ಅವರ ಅವಧಿಯಲ್ಲಿ ಬರುವುದೊ ಅವರ

ಸಮಾಧಿಯು ಹಜ್ರತ್ ಶೇಖ ನಸ್ರುಲ್ಲಾಹ್ ದರ್ಗಾದ ಸಮೀಪ ಪೂರ್ವದ ಕಡೆಗೆ ಇರುವುದು. ಇವರ ಸಮಾಧಿಯ ಮೇಲೆಯೂ ಗುಂಬಜ್ ಕಟ್ಟಲ್ಪಟ್ಟಿದೆ ಹಾಗೂ ಬಿಜಾಪುರದ ಕೊನೆಯ ಆದಿಲ್‌ಶಾಹಿ ದೊರೆಯಾದ ಸಿಕಂದರ್ ಆದಿಲ್‌ಶಾಹ್‌ನು ಹಜ್ರತ್‌ಶಾಹ್ ನಯಿಮುಲ್ಲಾ ಖುದ್ದುಸ್ಸಿರ್ರೂಹ್‌ರ "ಮುರೀದ್"ನಾಗಿದ್ದನು. ಹಾಗೂ ಅವರ ಸಮಾಧಿಯ ಅಡಿ ಭಾಗದಲ್ಲಿಯೇ ದಫನ್ ಮಾಡಲ್ಪಟ್ಟಿರುವನು.

■

೨. ಹಜ್ರತ್ ಪೀರ್ ಮೀಠೆ ಖುದ್ದುಸ್ಸಿರ್ರೂಹ್

ಇವರೂ ಸಹ ಬಿಜಾಪುರದ ಆದಿಕಾಲದ ಸೂಫಿಗಳಲ್ಲಿ ಓರ್ವರಾಗಿದ್ದಾರೆ. ಯಾವ ಕಾಲದಲ್ಲಿ ಮುಸ್ಲಿಮೇತರರ ಆಡಳಿತವಿತ್ತು. ಈ ಜನರು ಏಕದೇವಾರಾಧನೆಯನ್ನು ಮಾಡದೇ ಬಹುದೇವತಾರಾಧನೆಯಲ್ಲಿ ತೊಡಗಿ ವಿಗ್ರಹ ಪೂಜೆಯಲ್ಲಿ ನಿರತರಾಗಿದ್ದರು ಹಾಗೂ ಸೃಷ್ಟಿಕರ್ತನನ್ನು ಅರಿಯದೆ, ಆರಾಧಿಸದೇ ಸೃಷ್ಟಿಗಳ ಆರಾಧನೆಯನ್ನು ಮಾಡುವುವರಾಗಿದ್ದರು ಹಾಗೂ ಮುಹಮ್ಮದ್ ಪೈಗಂಬರ್‌ರ ಸಂದೇಶವು ಇವರಿಗೆ ತಲುಪಿರಲಿಲ್ಲ. ಆಗ ಆಗಮಿಸಿದ ಈ ಪಾವನ ಸೂಫಿಗಳು ಇಲ್ಲಿಯೇ ನೆಲೆಸುವ ನಿರ್ಧಾರ ತೆಗೆದುಕೊಂಡರು. ದಾರಿ ತಪ್ಪಿದವರಿಗೆ, ನೇರ ಮಾರ್ಗವನ್ನು ತೋರುವ, ಧರ್ಮದತ್ತ ಆ ಜನರಮನವನ್ನು ಪರಿವರ್ತಿಸುವ ಹಾಗೂ ಏಕದೇವಾರಾಧನೆಯನ್ನು (ಕಲ್ಮಯೇ ತೌಹಿದ್) ತಿಳಿಹೇಳತೊಡಗಿದರು ಹಾಗೂ ಕೆಲ ಸಮಯದ ನಂತರ ದಕ್ಷಿಣ ಪ್ರದೇಶವು ಇಸ್ಲಾಮ್ ಧರ್ಮದ ಉನ್ನತಿಯನ್ನು ಕಂಡಿತು. ಇದರಲ್ಲಿ ಅಲ್ಲಾಹುವಿನ ಇಚ್ಛೆಯಂತೆ ದೂರದೂರ ದೇಶಗಳಿಂದ ಆಗಮಿಸಿದ ಸೂಫಿಗಳು ಧರ್ಮ ಪ್ರಸಾರ ಹಾಗೂ ಪ್ರಚಾರದಿಂದ ಜನರಲ್ಲಿಯ ಮೌಢ್ಯಗಳನ್ನು ಕಿತ್ತುಹಾಕಿ ಧರ್ಮದ ಮುಖ್ಯವಾಹಿನಿಗೆ ತರಲು ಕಾರಣೀಭೂತರಾದರು ಹಾಗೂ ಮುಹಮ್ಮದ್(ಸ) ಪೈಗಂಬರರ ಸಂದೇಶವು ಜನರಿಗೆ ತಲುಪಿಸಿದರು. ಹಜ್ರತ್ ಪೀರ್ ಮೀಠೆ ಖುದ್ದುಸ್ಸಿರ್ರೂಹ್‌ರು ರಜ್ಜಬ್ ತಿಂಗಳ ಹನ್ನೊಂದನೆಯ ತಾರೀಖಿನಂದು ಈ ಲೋಕಕ್ಕೆ ವಿದಾಯ ಹೇಳಿದರು. ಹಜ್ರತ್‌ರ ದರ್ಗಾ ಷರೀಫವು ಪಟ್ಟಣದ ಹೊರಗೆ ಪೂರ್ವದಿಕ್ಕಿನ ಫತೇಪುರದಲ್ಲಿ ಇರುವುದು. ಇಂದಿಗೂ ಜನರ 'ಜಿಯಾರತ್‌ದ ಪವಿತ್ರ ಸ್ಥಳ'ವಾಗಿರುವುದು.

ಹಜ್ರತ್‌ರ ಸಂತಾನವಿಲ್ಲ ಆದರೆ ಸರಕಾರದಿಂದ ಹಜ್ರತ್‌ರ "ಉರೂಸ್"ಕ್ಕಾಗಿ ಪ್ರತಿವರ್ಷ ೧೦೦ (ಒಂದು ನೂರು ರೂಪಾಯಿ) ಫತೇಹಪುರ್‌ದವರಾದ ಸೈಯ್ಯದ್ ಯೂಸುಫ್ ಸಾಹೇಬರಿಗೆ ನೀಡಲಾಗುತ್ತಿದೆ. ಅವರೇ ಹಜ್ರತ್‌ರ ವಾರ್ಷಿಕ ಫಾತೇಹಾ' ಜರುಗಿಸುವರು.

೩. ಹಜ್ರತ್ ಪೀರ್ ಜಮ್ನಾ ಖುದ್ದುಸ್ಸಿರ್ರೂಹ್

ಇವರು ಬಿಜಾಪುರಕ್ಕೆ ಆಗಮಿಸಿದ ಮೊದಲ ಸೂಫಿಗಳಲ್ಲಿ ಓರ್ವರಾಗಿರುವರು. ಇವರು ಬಿಜಾಪುರವನ್ನು ಪ್ರವೇಶಿಸಿದಾಗ ಇಲ್ಲಿ ಅಜ್ಞಾನ ತಾಂಡವವಾಡುತ್ತಿತ್ತು. ಜನ ಧರ್ಮವಿಮುಖರಾಗಿದ್ದರು. ಸರಿ–ತಪ್ಪುಗಳ ವಿವೇಚನೆ ಇರಲಿಲ್ಲ. ವಿಗ್ರಹ ಪೂಜೆ ಸಾಮಾನ್ಯವಾಗಿತ್ತು. ಇಂತಹ ಹಲವಾರು ಮೂಢನಂಬಿಕೆಗಳ ಹಾಗೂ ತಪ್ಪುಕಲ್ಪನೆಗಳ ವಿರುದ್ಧ ಹಜ್ರತ್‌ರು ಸಮರವನ್ನೇ ಸಾರಬೇಕಾಯಿತು. ಧರ್ಮವನ್ನು ಅರುಹಲು ಜನರಲ್ಲಿ ಜ್ಞಾನಪ್ರಸಾರ ಮಾಡುವುದಕ್ಕಾಗಿ ತಮಗೆ ತಾವು ಅರ್ಪಿಸಿಕೊಂಡರು.

ವಕುಲ್ ಜಾ ಅಲ್ ಹಕ್ಕು
ವ ಜಹಕಲ್ ಬಾತಿಲ್
ಇನ್ನಲ್ ಬಾತಿಲ್ ಕಾನ ಜಹೂಕಾ

"ಸತ್ಯದ ಸೂರ್ಯನುದಯಿಸಿದಾಗ ಸುಳ್ಳಿನ ಕತ್ತಲೆ ತಾನೆ ತಾ ಮಾಯವಾಗುತ್ತದೆ. ಸತ್ಯ ಬಂದಾಗ ಸುಳ್ಳಿಗೆಲ್ಲಿ ತಾವು.?"

ಕೆಲವೇ ದಿನಗಳಲ್ಲಿ ಬಿಜಾಪುರದ ಜನರು ಧರ್ಮವನ್ನರಿವುದರ ಕಡೆಗೆ ತುಡಿತ ತೋರತೊಡಗಿದರು. ಹಾಗೂ ಸೂಫಿಗಳು ಜನಮನಗೆದ್ದು ಅವರಲ್ಲಿ ಧಾರ್ಮಿಕ ವಿಚಾರಗಳನ್ನು ಬಿತ್ತ ತೊಡಗಿದರು. ಈ ಮೂಲಕ ಬಿಜಾಪುರ ಪ್ರದೇಶವು ಆಧ್ಯಾತ್ಮಿಕ ಕೇಂದ್ರವಾಗಿ ಸೂಫಿಗಳ ಭದ್ರನೆಲೆಯಾಗಿ ಪರಿವರ್ತಿತವಾಯಿತು.

ಇವರ ದರ್ಗಾ ಷರೀಫ್‌ವು ಪಟ್ಟಣದ ಒಳಗೆ ಮುಹಮ್ಮದ ಆದಿಲ್‌ಶಾಹ ಸುಲ್ತಾನನ ಮಂತ್ರಿಯಾದ ನವಾಬ್ ಮುಸ್ತಫಾಖಾನ್‌ನ ಹವೇಲಿಯ ಬಳಿ ಪೂರ್ವದ ಕಡೆಗೆ ಉಪಸ್ಥಿತವಿರುವುದು. ಉರುಸೆ ಷರೀಫ್ ರಂಜಾನಿನ ೨೭ಕ್ಕೆ ಬರುತ್ತದೆ. ಇವರ ಪಾದದಡಿಯಲ್ಲಿ ಕೆಲ ಸಮಾಧಿಗಳು ಇವರ ಆಪ್ತರ ಹಾಗೂ ಸಹಚರರದ್ದಾಗಿವೆ. ಯಾರು ಹಜ್ರತ್‌ರೊಂದಿಗೆಯೇ ಧರ್ಮ ವಿರೋಧಿಗಳಿಂದ ಹುತಾತ್ಮರಾದರು.

ಟಿಪ್ಪಣಿ : ಇವರ ಸಂತಾನದಿಂದ ಯಾರೂ ಇರುವದಿಲ್ಲ ಆದರೆ ನವಾಬ್ ಮುಸ್ತಫಾಖಾನ್ ಸಂತತಿಯಿಂದ ಜೈನುಲ್ ಆಬದೀನ್‌ರು ವಾರ್ಷಿಕ ಉರುಸ ಆಚರಿಸುವರು.

■

೪. ಪೀರ್ ಮಹಾಬರಿ ಖಂಡಾಯತ್ ಖುದ್ದುಸ್ಸಿರ್ರೂಹ್

ಇವರ ನಿಜನಾಮವು ಶೇಖ ಮುಹಮ್ಮದ್ ಎಂದು ಇರುವುದು. ಇವರು ಇಲ್ಲಿಯ ಪ್ರಾರಂಭ ಕಾಲದ ಮೊದಲ ಸೂಫಿಗಳಲ್ಲಿ ಓರ್ವರಾಗಿರುವರು. ಅವರ ಏಕದೇವನಿಷ್ಠೆ, ದೇವಾರಾಧನೆ, ಪವಾಡಸದೃಶ ಕಾರ್ಯಕೆಲಸಗಳಿಂದಾಗಿ ಸಮಾಜೋನ್ನತಿಗೆ ಕಾರಣೀಭೂತರಾಗಿರುವ ಇವರು ಬಹು ಜನಪ್ರಿಯ ಸೂಫಿಗಳಾಗಿರುವರು. ಹಗಲಿರುಳು ದೇವಾರಾಧನೆಯಲ್ಲಿ ತೊಡಗಿಕೊಂಡಿರುತ್ತಿದ್ದರು. ಇವರ ಅನನ್ಯ ಉಪದೇಶ ಹಾಗೂ ಮಾರ್ಗದರ್ಶನದಿಂದಾಗಿ ಹಲವಾರು ಜನರು ಉನ್ನತ ಮಟ್ಟದ ವಿದ್ವಾಂಸರಾಗಿ ಮಿಂಚಿದರು ಎಂದು ಹೇಳಲಾಗುತ್ತದೆ. ಯಾವ ಕಾಲದಲ್ಲಿ ರಾಯರಾಜರ ಆಡಳಿತವಿತ್ತೋ ಆಗ ಆಗಮಿಸಿದ ಇವರು ಯೋಧರೂ ಆಗಿದ್ದರು. ಯುದ್ಧದಲ್ಲಿ ಭಾಗಿಯಾಗಿ ತಮ್ಮಲ್ಲಿಯ ಲೋಹದ ಖಂಡ್ವಾ (ಲೋಹದ ತುಂಡಿನಿಂದ)ದಿಂದ ರಾಯಲೂನರ ರುಂಡಗಳನ್ನು ಮುಂಡದಿಂದ ಬೇರ್ಪಡಿಸಿದ್ದರು ಹಾಗೂ ಯಾರ ಅದೃಷ್ಟದಲ್ಲಿ ಧರ್ಮದ ಬೆಳಕನ್ನು ಕಾಣುವ ಯೋಗವಿತ್ತೋ ಅವರು ಹಜ್ರತ್‌ರ ಕೈಯಲ್ಲಿ ಪ್ರಮಾಣ ಮಾಡಿ ಇಸ್ಲಾಂಧರ್ಮ ಸ್ವೀಕರಿಸಿದರು. ಒಂದು ತಂಡವು ಯಾವುದರಲ್ಲಿ ಹಜ್ರತ್‌ರ ಪುತ್ರರು ಹಾಗೂ ಸ್ನೇಹಿತರು ಇದ್ದರೋ ಅವರನ್ನು ಬಹುದೇವಾರಾಧಕರು ಕೊಂದರು. ಹೀಗೆ ಅವರೆಲ್ಲ ಹುತಾತ್ಮರಾದರು. ಅರ್ಕಕಿಲ್ಲೆಯಲ್ಲಿ ಆ ಹುತಾತ್ಮರ (ಗಂಜೇ ಶಹೀದಾನ್‌ರ) ಸಮಾಧಿಗಳು ಇಂದಿಗೂ ಇರುವವು. ಅವರ ಪಾವನ ಗೋರಿಯು (ದರ್ಗಾಷರೀಫ್‌ವು) ಅರ್ಕಕಿಲ್ಲೆಯಲ್ಲಿಯೇ ಇರುವುದು. ಅವರ ಸಮಾಧಿಯ ಮೇಲ್ಗಡೆ ಕಟ್ಟಿಗೆಯ ಮಾಳಿಗೆ ಇರುವುದು. ಇವರ ದರ್ಗಾಷರೀಫ್‌ದ ಸಮೀಪವೇ ಇಬ್ರಾಹಿಂ ಆದಿಲ್‌ಷಾಹ್ ಜಗದ್ಗುರುವು ಆನಂದ ಮಹಲ್‌ನ್ನು ನಿರ್ಮಿಸಿದನು. (ಈ ಮಹಲವು ಹಿಜ್ರಿಶಕೆ ೯೯೮ರಲ್ಲಿ ನಿರ್ಮಿಸಲ್ಪಟ್ಟಿದೆ) ಹಜ್ರತ್‌ರು ಮಹಾಬರಿ ಎಂದು ಪ್ರಸಿದ್ಧಿಹೊಂದಿದ. ಕಾರಣವು ಏನು? ಎಂಬುದು ತಿಳಿದುಬರುವುದಿಲ್ಲ. ಸಾಧ್ಯತೆಯ ಅನುಗುಣವಾಗಿ ಪರಿಗಣಿಸಿದರೆ 'ಮಹಾಬರ್' ಎಂಬ ಸ್ಥಳವು ಇವರ ಜನ್ಮಸ್ಥಳವಾಗಿರಲು ಸಾಧ್ಯತೆಯಿದೆ. ಅದಕ್ಕಾಗಿ ಮಹಾಬರ್ ಹಾಗೂ ದಹೂರ್‌ಗಳು ಷೋರ್ ಸಮುದ್ರದ ಎರಡು ಬಂದರುಗಳಾಗಿದ್ದವು. ಯಾವುವು ಹಿಜ್ರಿಶಕೆ ೭೧೦ರಲ್ಲಿ ಸುಲ್ತಾನ್ ಅಲ್ಲಾವುದ್ದೀನ್ ಖಿಲ್ಜಿ ದೆಹಲ್ವಿಯ ಅವಧಿಯಲ್ಲಿ ಮುಸ್ಲಿಂ ಸೈನಿಕರ ವಶಕ್ಕೆ ಬಂದವು ಹಾಗೂ ಇಸ್ಲಾಂ ಧರ್ಮವು ಮೇಲುಗೈ ಸಾಧಿಸಿತು. ಹಲವು ಜನರು ಹೀಗೆ ಯೋಚಿಸುತ್ತಾರೆ. ನಿಜವಾದ ಶಬ್ದವು 'ಮಹಾಬಲಿ' ಎಂದಿರುವುದು. ದಖನಿಯಲ್ಲಿ ಇದರ ಅರ್ಥವು 'ಬಲಿಷ್ಠ ಕುಸ್ತಿಪಟು' ಎಂದಾಗುವುದು. ಆದರೆ ಈ ಪದವು ಮೂಲವಾಗಿ ಸಂಸ್ಕೃತದಿಂದ ಬಂದಿರುವುದು. ಅದರ ಅರ್ಥವು ಹೆಚ್ಚು

ಬಲಶಾಲಿಯಾದ ಎಂದು ಆಗುವುದು. ಅವರ ದೇಹಬಲ ಅದೆಷ್ಟು ಸಾಮರ್ಥ್ಯವುಳ್ಳದ್ದಾಗಿತ್ತೆಂದರೆ ಅವರು ತಮ್ಮ ಕೈಯಲ್ಲಿ ಒಂದು ಕಾಲು ಮಣಭಾರದ ಲೋಹದ ಗದೆಯನ್ನು ಇಡುತ್ತಿದ್ದರು. ಆ ಕಾರಣಕ್ಕಾಗಿ ಈ ಸೂಫಿಯವರನ್ನು 'ಮಹಾಬಲಿ' ಎಂದು ಕರೆಯುತ್ತಿದ್ದರು. ಅದು ಜನರ ಬಾಯಲ್ಲಿ ಮಾಬರಿ ಎಂದಾಯಿತು. ಇವರ ಉರುಸ್ ಷರೀಫ್‌ವು ರಜ್ಜಬ್ ತಿಂಗಳ ದಿನಾಂಕ : ೨೧ ರಂದು ಜರುಗುವುದು. ಇವರ ದರ್ಗಾ ಷರೀಫ್‌ದಲ್ಲಿ ಇವರ ಸಾಂಸ್ಥಿಕರ ಸಮಾಧಿಗಳೂ ಇರುವವು. ಹಜ್ರತ್‌ರ ಪವಾಡಗಳು ಹಾಗೂ ಸಮೃದ್ಧಿಯೂ ಇಂದಿನವರೆಗೂ ಜಾರಿಯಿರುವವು. ವರ್ತಮಾನದ ಕಾಲದಲ್ಲಿ ಇಪ್ಪತ್ತೆರಡು ವರ್ಷದ ಹಿಂದೆ ಶೇಖ ಮುಹಮ್ಮದ್ ಬಕ್ಷಿಯವರ ಪುತ್ರನಾದ ಮುಹಮ್ಮದ್ ಹಸನ್‌ರು ದರ್ಗಾಷರೀಫವನ್ನು ನಿರ್ಮಿಸಿ ಸುತ್ತಲೂ ಕಂಪೌಂಡ್‌ಗೋಡೆ ಕಟ್ಟಿಸಿದರು. ಬುನಾದಿ ಅಗೆಯುತ್ತಿರುವಾಗ ಅವರ ಸಮಾಧಿಗೆ ಅಂಟಿಕೊಂಡಿದ್ದ ಹುಣಸೆಹಣ್ಣಿನ ಮರದ ಬೇರು ಹತ್ತಿತ್ತು. ಯಾವದು ಪವಿತ್ರ ಗೋರಿಯ ಪಾದದಡಿಯಲ್ಲಿ ಪೂರ್ವ ಭಾಗದಲ್ಲಿತ್ತೊ ಅದನ್ನು ಕತ್ತರಿಸುತ್ತಿರುವಂತೆಯೇ ಅದರಿಂದ ನೆತ್ತರ ಕಾರಂಜಿಯು ಪುಟಿದೆದ್ದಿತು. ಈ ಅಪೂರ್ವ ಘಟನೆಯು ಜನರ ಬಾಯಲ್ಲಿ ಸಾಮಾನ್ಯವಾಗಿ ಇಂದಿಗೂ ಚರ್ಚಿಸಲ್ಪಡುತ್ತಿದೆ.

ಇವರ ಸಂತಾನದಲ್ಲಿ ಅಬ್ದುಲ್ಲಾ ಸಾಹೇಬ್ ಹಾಗೂ ಗೇಸುದರಾಜ್ ಸಜ್ಜಾದೆಯವರು ಪೀಠಾಧಿಪತಿಗಳಾಗಿರುವರು. ಅವರು ಇಂಡಿ ತಾಲೂಕಿನ ತೆನ್ನಳ್ಳಿ ಗ್ರಾಮದಲ್ಲಿ ನೆಲೆಸಿರುವರು. ಆ ಹಳ್ಳಿಯನ್ನು ಇವರ ಲೋಬಾನ ಹಾಗೂ ಇತರ ಖರ್ಚುಗಳಿಗಾಗಿ ಬಿಜಾಪುರದ ಬಾದಶಹನು ಜಹಗೀರ ನೀಡಿರುವನು.

■

೫. 'ಹಜ್ರತ್ ಪೀರ್ ಮಕ್ಸೂದ್ ಖುದ್ದುಸಿರ್ರೂಹ್'

ಇವರೂ ಸಹ ಪುರಾತನ ಸೂಫಿಗಳಲ್ಲಿ ಓರ್ವರಾಗಿದ್ದು ಬಿಜಾಪುರಕ್ಕೆ ಆಗಮಿಸಿದರು. ಆಗ ಇಲ್ಲಿ ಇಸ್ಲಾಮಿನ ಕುರುಹೂ ಕೂಡ ಇರಲಿಲ್ಲ. ಬಹುದೇವಾರಾಧಕರು, ನಾಸ್ತಿಕರು ತಮ್ಮ ತಮ್ಮ ರೀತಿಯಲ್ಲಿ ಬದುಕುತ್ತಿದ್ದರು. ಅವರಲ್ಲಿ ಆಸ್ತಿಕತೆ ಹಾಗೂ ದೇವನಿಷ್ಠೆ ಜಾಗೃತಗೊಳಿಸಿ, ಮೂಢನಂಬಿಕೆ ತಪ್ಪುಕಲ್ಪನೆ ನೀಗಿಸಿ, ಇಸ್ಲಾಮಿನ ಪ್ರಚಾರ ಪ್ರಸಾರ ಮಾಡಿ, ಅವರಲ್ಲಿ ಏಕದೇವಾರಾಧನೆಯ ಬೀಜವನ್ನು ಬಿತ್ತಿದ್ದರು. ಇವರ ಸಮಾಧಿಯು ಬಿಜಾಪುರ ಪಟ್ಟಣದ ಒಳಗಡೆ ಅಲ್ಲಾಪುರ ಅಗಸಿಯ ಕೋಟೆ ಬಾಗಿಲ ಬಳಿಗೆ ಇರುವುದು ಹಾಗೂ ಇವರ ಉರುಸ್‌ಷರೀಫ್‌ವು ರಂಜಾನಿನ ೬ನೆಯ ತಾರೀಖಿನಂದು ಜರುಗುವುದು. ಇವರನ್ನು ಹೊರತುಪಡಿಸಿ ಇನ್ನೂ ಹಲವಾರು ಜನ ಸೂಫಿಗಳಿರುವರು.

ಅವರಲ್ಲಿ ಪೀರ್ ಭಡಾಭಡ, ಪೀರ್‌ಬೂದೆ, ಪೀರ್‌ಬಾಲೆ, ರಹ್ಮತುಲ್ಲಾ, ಅಲೈಹಿಮ್ ಅಜ್ಜಯೀನ್‌ರು ಸಹ ಅದೇ ಅವಧಿಯಲ್ಲಿ ಬಿಜಾಪುರಕ್ಕೆ ಆಗಮಿಸಿ ಇಲ್ಲಿಯೇ ನೆಲೆಸಿದರು. ಅವರ ಸಮಾಧಿಗಳೂ ಸಹ ಪ್ರಸಿದ್ಧವಾಗಿರುವವು.

■

೬. ಹಜ್ರತ್ ಶೇಖ ಇಬ್ರಾಹಿಂ ಸಂಕಾನಿ ಖುದುಸ್ಸಿರ್‍ರೂಹ್

ಇವರು ಬಿಜಾಪುರ ನಗರಕ್ಕೆ ಆಗಮಿಸಿದ ಪುರಾತನ ಸೂಫಿಗಳಲ್ಲಿ ಪ್ರಮುಖರಾಗಿರುವರು. ದೇವನಿಷ್ಠೆಯಲ್ಲಿ ಅಪಾರ ಸಾಧನೆಗೈದು ದೇವನನ್ನೊಲಿಸಿಕೊಂಡವರಾಗಿದ್ದು ಜನಸೇವೆಯಲ್ಲಿ ಸದಾಕಾಲ ನಿರತರಾಗಿದ್ದರು. ಸೂಫಿಸ್ತರದಲ್ಲಿಯೇ ಉನ್ನತ ಮಟ್ಟವನ್ನು ಮುಟ್ಟಿದವರಾಗಿದ್ದರು. ಜನರು ಅವರಿಂದ ಬಹಳಷ್ಟು ಸಮೃದ್ಧಿಯನ್ನು ಪಡೆಯುತ್ತಿದ್ದರು. ಹಜ್ರತ್‌ಶೇಖ್ ಐನುದ್ದೀನ್ ಗಂಜುಲ್‌ಉಲ್ಮ ಖುದ್ದುಸಿರ್‍ರೂಹ್ ತಮ್ಮ ಗ್ರಂಥವಾದ ಕಿತಾಬುಲ್ ಅನ್ಸಾಬ್‌ದಲ್ಲಿ ಇವರನ್ನು "ಅಧಹವ್‌ಸಾನಿ" ಎಂದು ವಿವರಿಸಿರುವರು. ಪ್ರಾರಂಭ ಕಾಲದಲ್ಲಿ ಲೌಕಿಕ ಕಾರ್ಯಗಳಲ್ಲೂ ಹಾಗೂ ಪಾರಲೌಕಿಕ ಉನ್ನತಿ ಸಾಧಿಸುವದರಲ್ಲಿಯೂ ತೊಡಗಿರುತ್ತಿದ್ದರು ನಂತರ ಲೌಕಿಕ ಕೆಲಸಕಾರ್ಯ ಬಿಟ್ಟು ಕೇವಲ ಪಾರಲೌಕಿಕ ಸಾಧನೆಯಲ್ಲಿ ತೊಡಗಿದರು. ಹಾಗೂ ದೌಲತಾಬಾದ್ ಪಟ್ಟಣದಲ್ಲಿ ಸೈಯ್ಯದುಸ್ಸಾದಾತ್ ಹಜ್ರತ್ ಶೇಖ ಅಲ್ಲಾವುದ್ದೀನ್ ಖ್ವಾಂದ್‌ಖಾನ್ ಮೀರ್‌ಹುಸೈನಿ ಜವೇರಿ ಖುದ್ದುಸ್ಸಿರ್‍ರೂಹ್‌ರು ಯಾರು ದೆಹಲಿಯ ಔಲಿಯಾಗಳಲ್ಲಿಯ ಓರ್ವರಾಗಿದ್ದರು. ಹಾಗೂ ಹಜ್ರತ್ ಗಂಜುಲ್ ಉಲ್ಮ (ಜ್ಞಾನ ನಿಧಿ)ರ ಪೀರೆ ತರೀಖತ್ (ಒಂದೇ ಗುರುವಿನ ಶಿಷ್ಯರು) ಆಗಿದ್ದರು. ಅವರ ಸೇವೆಯಲ್ಲಿ ತಲುಪಿ ಲೌಕಿಕ ಹಾಗೂ ಆಧ್ಯಾತ್ಮಿಕ ಜ್ಞಾನದ ರಹಸ್ಯವನ್ನು ಮನಗಂಡರು ಹಾಗೂ ಶೇಖುಲ್ ಕಬೀರ್ ಹಜ್ರತ್ ಶೇಖ ಷಮಶುದ್ದೀನ್ ಲಾಮ ಆಲಿ ಖುದ್ದುಸ್ಸಿರ್‍ರೂಹ್ ಅವರು ಆ ಅವಧಿಯ ಸೂಫಿಗಳಲ್ಲೋರ್ವರಾಗಿದ್ದರು. ಅವರಿಂದಲೂ ಜ್ಞಾನ ಸಮೃದ್ಧಿ ಪಡೆದರು ಹಾಗೂ ಸೈಯ್ಯರುಲ್ ಆರಿಫೀನ್ ಹಜ್ರತ್ ಶೇಖ ಮಿನ್ಹಾಜುದ್ದೀನ್ ತಮೀಮಿಲ್ ಅನ್ಸಾರಿ ಖುದ್ದುಸ್ಸಿರ್ರಹೂರವರು ಅವರು ಆ ಸಮಯದ ಕುತುಬ್‌ರಾಗಿದ್ದರು. ಅವರು. ಹಜ್ರತ್ ಶೇಖಸೈಯ್ಯದ್ ಖ್ವಾಂದ್‌ಮೀರ್ ಅಲ್ಲಾವುದ್ದೀನ್ ಜವೇರಿ ಖುದ್ದುಸ್ಸಿರ್‍ರೂಹ್‌ರವರ ಖಲೀಫಾ ಆಗಿದ್ದರು. ಅವರ ದರ್ಗಾ ಷರೀಫವು ಅಹಸನಾಬಾದ್ (ಗುಲ್ಬರ್ಗಾದಲ್ಲಿ) ಇರುವುದು. ಅವರಿಂದಲೂ ಜ್ಞಾನ ಸಂಪಾದಿಸಿದರು. ಹಾಗೂ ಹಜ್ರತ್ ಶೇಖುಲ್‌ಆಲಿಮ್ ಗಂಜುಲ್ ಉಲುಮ್ ಖುದ್ದುಸಿರ್‍ರೂಹ್‌ರ ಜೊತೆಯೂ ಸಾಂಗತ್ಯ ಹೊಂದಿದ್ದರು ಹಾಗೂ ಅವರಿಂದಲೂ ಜ್ಞಾನಸಂಪಾದನೆ

ಮಾಡಿದರು. ಹಜ್ರತ್ ಶೇಖ ಶಮಶುದ್ದೀನ್ ಖುದ್ದುಸ್ಸರ್ರೂಹ್‌ರ ಕುರಿತು ಬರೆಯುವಾಗ ಅತ್ವಾರುಲ್ ಅಬ್ರಾರ್ ಗ್ರಂಥದ ಲೇಖಕರು ಹೀಗೆ ಬರೆದಿರುವರು. ಹಜ್ರತ್ ಇಬ್ರಾಹಿಂ ಸಂಕಾನೆಯವರು ಬಹಳೇ ಅಶಕ್ತರಾಗಿದ್ದು ನಡೆಯಲು ಸಾಧ್ಯವಾಗುತ್ತಿರಲಿಲ್ಲ. ಆದರೂ ಅವರು ಎಂದೂ ಜುಮಾ ನಮಾಜ್ ಹಾಗೂ ಜಮಾಅತ್‌ನಿಂದ ವಂಚಿತರಲಾಗುತ್ತಿರಲಿಲ್ಲ. ಶುಕ್ರವಾರದ ದಿನ ಸೇವಕರು ಪಾಲಕಿಯಲ್ಲಿ ಕೂಡ್ರಿಸಿ ಮಸೀದೆಗೆ ಒಯ್ಯುತ್ತಿದ್ದರು.

ಹಜ್ರತ್ ಶೇಖ ಇಬ್ರಾಹಿಂ ಸಂಕಾನೆ ಖುದ್ದುಸ್ಸಿರ್ರೂಹ್ ದೌಲತಾಬಾದ್‌ನಿಂದ ಹೊರಟು ಬಿಜಾಪುರಕ್ಕೆ ಆಗಮಿಸಿದರು. ಮೊಹರ್ರಮ್ ತಿಂಗಳ ದಿನಾಂಕ : ೧೪ರಂದು ಹಿಜ್ರಿಶಕೆ ೭೫೩ರಲ್ಲಿ ಅಲ್ಲಾಹುವಿನ ಸನ್ನಿಧಿಗೆ ಮರಳಿದರು. ಅವರ ಪಾವನ ಸಮಾಧಿಯು ಬಿಜಾಪುರ ಪಟ್ಟಣದ ಹೊರಗಡೆಗೆ ಬೊಮ್ಮನಳ್ಳಿಯ (ಬಹುಮನಿ ದರವಾಜಾ) ಅಗಸಿ ಬಾಗಿಲ ಕಡೆಗೆ ಉತ್ತರದಿಕ್ಕಿನಲ್ಲಿ ಇರುವುದು. ಅವರ ಈರ್ವರು ಪುತ್ರರು ಶೇಖ ಸಅದುದ್ದೀನ್ ಹಾಗೂ ಹಜ್ರತ್ ಶೇಖ ಸದ್ರುದ್ದೀನ್ ಖುದ್ದುಸ್ಸಲ್ಲಾಹ್ ಅಸ್ರಾರ್‌ಹುಮಾ ಯಾರು ಧಾರ್ಮಿಕ ವಿದ್ವಾಂಸರಾಗಿದ್ದರು. ತಮ್ಮ ತಂದೆಯವರಾದ ಹಜ್ರತ್ ಶೇಖ ಇಬ್ರಾಹಿಂ ಸಂಕಾನೆಯವರ ಸಮಾಧಿಯ ಉತ್ತರ ದಿಕ್ಕಿನಲ್ಲಿ ಇವರ ಸಮಾಧಿಗಳು ಇರುವವು.

ಅಲಿ ಆದಿಲ್‌ಶಾಹ್‌ರ ಕಾಲದಲ್ಲಿ ಓರ್ವ ಷಿಯಾ ಪಂಥದ ಭಿನ್ನಮತೀಯ ಬಂಡಾಯಗಾರರ ಗುಂಪು "ರಾಫಜಿ"ಯ ಮನೆಯು ಹಜ್ರತ್ ಶೇಖ ಇಬ್ರಾಹಿಂ ಸಂಕಾನಿಯವರ ದರ್ಗಾದ ಸಮೀಪದಲ್ಲಿತ್ತು. ಆತನು ಹೀಗೆ ಇಚ್ಚಿಸಿದನು. ಹಜ್ರತ್‌ರ ದರ್ಗಾ ಷರೀಫ್‌ವನ್ನು ಕೆಡವಿ ನೆಲಸಮಗೊಳಿಸಬೇಕು. ಹಜ್ರತ್‌ರು ಸಮಾಧಿಸ್ತರಾಗಿ (ನಿಧನರಾಗಿ) ಆಗಲೇ ಎರಡು ನೂರು ವರ್ಷಗಳ ಮೇಲ್ಪಟ್ಟು ಸಮಯ ಕಳೆದಿತ್ತು. ತಾಬೂತ್ ಹಾಗೂ ಅವರ ಪವಿತ್ರ ಶವವನ್ನು ಬಿಜಾಪುರದಿಂದ ದೂರಕ್ಕೆ ಒಯ್ದು ಇಲ್ಲಿಂದ ಸುಮಾರು ಎರಡು ಕೋಸ್ ದೂರದಲ್ಲಿರುವ ಅರಕೇರಿ ಗ್ರಾಮದಲ್ಲಿ ದಫನ್ ಮಾಡಲಾಯಿತು. ಈಗ ಅವರ ದರ್ಗಾ ಷರೀಫವು ಅರಕೇರಿ ಗ್ರಾಮದಲ್ಲಿರುವುದು.

■

೭. ಹಜ್ರತ್ ಶೇಖ ಅಬ್ದುಲ್ಲಾಹ್ ಘಜನಿ (ಖು)

ಇವರ ವಂಶಸ್ಥ ಹೆಸರು 'ಅಬುಲ್‌ಕಾಸಿಂ' ಎಂದಿರುವುದು. ಇವರ ಜನನವು ದಯಾಬಘತಹದಾಲ್‌ದಲ್ಲಿ ಆಯಿತು. ಇದು ಬಸ್ರಾ ನದಿಯ ದಡದಲ್ಲಿ ಬರುವ ಒಂದು ಗ್ರಾಮವಾಗಿದೆ. ಇವರು ಅಪ್ರತಿಮ ವಿದ್ವಾಂಸರು, ಧರ್ಮವಂತರು ಹಾಗೂ

ನಿರಂತರವಾಗಿ ದೇವಾರಾಧನೆಯಲ್ಲಿ ತೊಡಗಿಕೊಂಡಿರುತ್ತಿದ್ದರು ಹಾಗೂ ಹಿಜ್ರಿಶಕೆ ೭೭೩ರಲ್ಲಿ ಬಿಜಾಪುರಕ್ಕೆ ಆಗಮಿಸಿದರು. ಹಾಗೂ ಹಜ್ರತ್ ಶೇಖ ಐನುದ್ದೀನ್ ಗಂಜುಲ್ ಉಲುಮ್ ಖುದ್ದುಸ್ಸರ್ರೂಹ್‌ರಿಂದ ಬೈಯ್ಯತ್ ಹಾಗೂ ಖಿಲಾಪತ್ ಪಡೆದರು. ಅವರಿಂದ ಆಧ್ಯಾತ್ಮಿಕ ರಹಸ್ಯಗಳನ್ನು ಜೀರ್ಣಿಸಿಕೊಂಡರು. ರಜ್ಜಬ ತಿಂಗಳ ೨೭ನೇ ತಾರೀಖಿನಂದು ಹಿಜ್ರಿಶಕೆ ೭೯೩ರಲ್ಲಿ ನಿಧನರಾದರು.

■

೮. ಹಜ್ರತ್ ಶೇಖುಲ್ ಶಯ್ಯೂಖ್ ಅಬೂಲ್‌ಜೌನ್ ಐನುದ್ದೀನ್ ಗಂಜುಲ್ ಇಲ್ಮ ಜುನೈದಿ ಖುದ್ದುಸಲ್ಲಾಹ್ ಸಿರ್ರುಹುಅಲ್ ಅಜೀಜ್

ಇವರು ಬಿಜಾಪುರಕ್ಕೆ ಮೊದಲು ಆಗಮಿಸಿದ ಸೂಫಿಗಳ ಸಾಲಿನಲ್ಲಿ ಬರುತ್ತಾರೆ. ಇವರು ಏಕನಿಷ್ಠೆಯಿಂದ ದೇವನನ್ನೊಲಿಸಿಕೊಂಡವರು. ಅಲ್ಲಾಹುವಿನ ನೇರಮಾರ್ಗದಲ್ಲಿ ನಡೆದವರು. ಇವರು ಸೂಫಿವಂಶಸ್ಥರಾಗಿದ್ದಾರೆ. ಶರಿಯತ್ ಪಾಲಿಸಿ ಅವರು ಮಾರ್ಗದರ್ಶಕ ಹಾಗೂ ತಮ್ಮ ಕಾಲದ ಕುತುಬ್, ಅಪ್ರತಿಮ ಗುರು, ಹಾಗೂ ಪವಾಡಪುರುಷರಾಗಿದ್ದರು. ಬಹಮನಿ ಸಾಮ್ರಾಜ್ಯದ ಪ್ರಥಮ ಸುಲ್ತಾನನಾದ ಸುಲ್ತಾನ್ ಅಲ್ಲಾವುದ್ದೀನ್ ಹಸನ ಗಾಂಗ್ವಿಯು ಇವರ ಕಾಲಾವಧಿಯಲ್ಲಿ ಸಿಂಹಾಸನಾಧೀಶನಾದನು ಹಾಗೂ ಆತನ ಪೀಳಿಗೆಯ ಐವರು ಬಾದಶಹರು ಇವರ ಎದುರು ಸಾವನ್ನಪ್ಪಿದರು. ಆ ಕಾಲದ ಬಾದಶಹರು ಹಾಗೂ ಅಮೀರರು ಹಜ್ರತ್‌ರ ಅನುಯಾಯಿಗಳಾಗಿದ್ದರು. ಹಜ್ರತ್‌ರು ಆ ಕಾಲದ ಸಮಸ್ತ ಔಲಿಯಾ ಅಲ್ಲಾಹ್‌ರೊಂದಿಗೆ ಭೇಟಿಯಾಗುತ್ತಿದ್ದರು ಹಾಗೂ ಅವರ ಸಾಂಗತ್ಯದಲ್ಲಿದ್ದರು. ಅತಿರಥ ಮಹಾರಥರಾದ ವಿದ್ವಾಂಸರು ಇವರ ಶಿಷ್ಯತ್ವವನ್ನು ಪ್ರಾಪ್ತಿಗೊಳಿಸಲಿಕ್ಕಾಗಿ ಹೆಣಗಾಡುತ್ತಿದ್ದರು. ಧಾರ್ಮಿಕಜ್ಞಾನ ಹಾಗೂ ಇನ್ನಿತರ ಜ್ಞಾನಧಾರೆಗಳಲ್ಲಿ ಇವರು ಉತ್ಕೃಷ್ಟಜ್ಞಾನವುಳ್ಳವರಾಗಿದ್ದು ಸುಮಾರು ೧೩೨(ಒಂದುನೂರಾ ಮೂವತ್ತೆರಡು) ಗ್ರಂಥಗಳನ್ನು ಬರೆದ ಖ್ಯಾತಿ–ಇವರ ಹೆಸರಿಗಿದೆ. ಇವರು ಖ್ವಾಜಾ ಬಂದೆನವಾಜ್ ಗೇಸುದರಾಜ್‌ರ ಗುರುಗಳಾಗಿರುವ ಕುರಿತು ಅನೇಕ ಉಲ್ಲೇಖಗಳಿವೆ. ಖುತ್ಬಲ್ ಶಂಯ್ಯೂಕ್ ಹಜ್ರತ್‌ಶಾಹ್ ಜೈನುಲ್‌ಹಕ್ ದೌಲತಾಬಾದಿಯವರ ತಂದೆಯವರು ಹಜ್ರತ್‌ಶೇಖ ಹುಸೈನ್ ಖುದ್ದುಸ್ಸಿರ್ರಾಹ್‌ರು ಅವರ ಶಿಷ್ಯೋತ್ತಮರಲ್ಲಿ ಪರಿಗಣಿಸಲ್ಪಡುತ್ತಾರೆ ಹಾಗೂ ಬಹಳಷ್ಟು ಹಿರಿಯರು ಹಾಗೂ ಔಲಿಯಾ ಅಲ್ಲಾಹ್ ಹಾಗೂ ಪವಾಡಪುರುಷರು ಇವರ "ಖಲೀಫಾ" ಹಾಗೂ ಶಿಷ್ಯವೃಂದದಲ್ಲಿರುವರಾಗಿದ್ದಾರೆ. ಇವರು ಮುರ್ಷದ್(ಗುರು)ಗಳು ಹಜ್ರತ್ ಸೈಯ್ಯದ್‌ಖ್ವಾಂದ್ ಮೀರ್ ಅಲ್ಲಾವುದ್ದೀನ್ ಹುಸೈನಿ ಜವೇರಿ ಇರುವರು. ಯಾರು

ದೆಹಲಿಯ ಪುರಾತನ ಸೂಫಿಗಳಲ್ಲೋರ್ವರಾಗಿದ್ದಾರೆ ಹಾಗೂ "ಕುತುಬ್"ರಾಗಿರುವರು. ಗಂಜುಲ್‌ಉಲೂಮ್ ಅವರು ತಮ್ಮ ಚಿಕ್ಕ ವಯಸ್ಸಿನಲ್ಲಿಯೇ ಹಜ್ರತ್ ಶೇಖ ಶಮಶುದ್ದೀನ್ ಮುಹಮ್ಮದ ಲಾಮಾನಿ (ಖ) ಅವರು ತಮ್ಮ ಕಾಲದ ಮಾರ್ಗದರ್ಶಕರು ಹಾಗೂ ಪವಾಡ ಪುರುಷರಾಗಿದ್ದರು ಹಾಗೂ ಇನ್ನೋರ್ವರಾದ ಕುತುಬೆಔಲಿಯಾ ತಮ್ಮ ಚಿಕ್ಕ ವಯಸ್ಸಿನಲ್ಲಿಯೇ ಶೇಖಬಹಾವುದ್ದೀನ್ ಜಿಕ್ರಿಯಾರನ್ನು ನೋಡಿರುವರು ಹಾಗೂ ಅವರಿಂದ ಸಮೃದ್ಧಿ ಶಾಂತಿಯನ್ನು ಪಡೆದರು ಹಾಗೂ ಅಸದುಲ್‌ಔಲಿಯಾ ಸೈಯ್ಯದುಲ್ ಆರಿಫೀನ್, ಶೇಖ ಮಿನ್ಹಾಜುದ್ದೀನ್ ತಮೀಮಿಲ್ ಅನ್ಸಾರಿ ಅಫ್ಸನಾಬಾದಿಯೂ ಸಹ ಹಜ್ರತ್‌ರೊಂದಿಗೆ ಸಾಂಗತ್ಯ ಹೊಂದಿದ್ದರು. ಹಜ್ರತ್ ಗಂಜೂಲ್ ಉಲೂಮ್ ದೆಹಲಿಯ ನವನಗರದಲ್ಲಿ ಹಿಜ್ರಿಶಕೆ ೭೦೬ರಲ್ಲಿ ಜನಿಸಿದರು. ಅವರು ದೆಹಲಿಯಿಂದ ಹೊರಟು ದೆಹಲಿ, ಜೈಪುರ, ಗುಜರಾತ್‌ದಲ್ಲಿ ಧಾರ್ಮಿಕ ಜ್ಞಾನ ಹೊಂದುತ್ತಾ ದೌಲತಾಬಾದ್‌ಕ್ಕೆ ತಲುಪಿದರು. ಈ ನಗರವು ಆ ಕಾಲದಲ್ಲಿ ಸುಲ್ತಾನ್‌ಮುಹಮ್ಮದ್ ತುಘಲಕ್‌ನ ಆಳ್ವಿಕೆಯಲ್ಲಿತ್ತು. ಸುಲ್ತಾನನು ತನ್ನ ರಾಜಧಾನಿಯಾದ ದೆಹಲಿಯನ್ನು ತ್ಯಜಿಸಿ ಸರ್ವ ಅಧಿಕಾರಿ, ಸೈನ್ಯದೊಂದಿಗೆ ದೌಲತಾಬಾದಕ್ಕೆ ಆಗಮಿಸಿದ್ದನು ಹಾಗೂ ಎಲ್ಲ ಔಲಿಯಾ ಅಲ್ಲಾಹ್‌ರು, ಧಾರ್ಮಿಕ ವಿದ್ವಾಂಸರು ಹಾಗೂ ಗುಣವಂತರು ಆತನೊಂದಿಗೆ ದೆಹಲಿಯಿಂದ ದೌಲತಾಬಾದ್‌ಕ್ಕೆ ಆಗಮಿಸಿದ್ದರು. ಅಲ್ಲಿ ಹಜ್ರತ್ ಸೈಯ್ಯದ್ ಖ್ವಾಂದಮೀರ್ ಅಲ್ಲಾವುದ್ದೀನ್ ಹುಸ್ಸೈನಿ ಜವೇರಿಯವರಿಂದ ಶಿಷ್ಯತ್ವ ಹಾಗೂ "ಖಿಲಾಫತ್" ಸ್ವೀಕರಿಸಿದರು. ಹಿಜ್ರಿಶಕೆ ೭೩೭ರಲ್ಲಿ ಐನಾಬಾದ್ ಸಕ್ಕರ ನಗರಕ್ಕೆ ಆಗಮಿಸಿದರು ಹಾಗೂ ಒಂದು ದೀರ್ಘಾವಧಿಯ ನಂತರ ೭೭೩ರಲ್ಲಿ ಬಿಜಾಪುರಕ್ಕೆ ಆಗಮಿಸಿ ಇಲ್ಲಿಯ ಜನಸಾಮಾನ್ಯರ ಮನಸ್ಸಿನ ಕಲ್ಮಶಗಳನ್ನು ದೂರೀಕರಿಸಿ ಸತ್ಯವಿಶ್ವಾಸಿಗಳನ್ನಾಗಿ ಪರಿವರ್ತಿಸಿದರು. ಹಜ್ರತ್ ಮೌಲಾನಾ ಹಬೀಬುಲ್ಲಾಹ್ ಸಿಬಗತುಲ್ಲಾಹರ ಪುಸ್ತಿಕೆಗಳಲ್ಲಿ ಬರೆಯಲ್ಪಟ್ಟಿದೆ. ಅವರು ಶೇಖ ಐನುದ್ದೀನ್ ಗಂಜುಲ್ ಉಲೂಮರ ಕಾಲದ ಘಟನೆಗಳನ್ನು ಹಾಗೂ ನಡೆದ ಪವಾಡಗಳನ್ನು ಹೇಗೆ ಬರೆಯುತ್ತಿದ್ದರೆಂದರೆ ಓದುಗರಿಗೆ ಅವರು ಅವರ ನೆರೆಯವರಾಗಿದ್ದಾರೆ ಎಂದು ಅನಿಸುತ್ತದೆ. ಆದರೆ ಅವರು ಎಂದೂ ಅವರ ದರ್ಶನಕ್ಕಾಗಿ ಹೋಗಲಿಲ್ಲ ಹಾಗೂ ಅವರನ್ನು ಭೇಟಿಯಾಗಲಿಲ್ಲ ಹಾಗೂ ಹೀಗೆ ಹೇಳಲಾಗುತ್ತದೆ. ಹಜ್ರತ್ ಗಂಜೂಲ್ ಉಲೂಮ್ ಖುದ್ದುಸ್ಸರ್ರಾಹ್‌ರು ತಮ್ಮ ಸಂಪೂರ್ಣ ಸಾಮರ್ಥ್ಯದಿಂದ ಅಮವಾಸ್ಯೆ ರಾತ್ರಿಯಲ್ಲಿ ಚಂದ್ರನನ್ನು ಕರೆಯಲು ಅದು ಹಾಜರಾಯಿತು. ಸಾರ್ವಜನಿಕರೂ ತಮ್ಮ ಕಣ್ಣುಗಳಿಂದ ಚಂದ್ರದರ್ಶನ ಮಾಡಿದರು. ವಿಜ್ಞಾನಿಗಳ ಹೇಳಿಕೆಯಂತೆ ಚಂದ್ರಕಿರಣಗಳು ಸೂರ್ಯನ ಕಿರಣಗಳ ಛಾಯೆಯಾಗಿದೆ. ಯಾವಾಗ ಚಂದ್ರನು ಕನ್ನಡಿಯಂತೆ ಸೂರ್ಯನ ಎದುರು ಇರುವನೋ ಅದರ ರಶ್ಮಿಗಳೆದುರು ಬಂದಾಗ ಚಂದ್ರನ ಪ್ರಕಾಶ ಹಾಗೂ ಬೆಳಕು ಬೇರೆಯಾಗಿ ಇರುವುದಿಲ್ಲ. ಇದೇ ಪುಸ್ತಿಕೆಯಲ್ಲಿ

ಹೀಗೆಯೂ ಬರೆಯಲಾಗಿದೆ. ಒಂದು ದಿನ ಹಜ್ರತ್ ಮೌಲಾನಾ ಹಬೀಬುಲ್ಲಾಹ್ ಖುದ್ದುಸ್ಸಿರ್ರಾಹ್‌ರು ಹಜ್ರತ್ ಶೇಖ ಐನುದ್ದೀನ್ ಗಂಜೂಲ್ ಉಲುಮ್‌ರ 'ಜಿಯಾರತ್'ಕ್ಕಾಗಿ ಹಾಗೂ ಅವರ ಪೀಠಾಧಿಪತಿಯಾದ ಹಜ್ರತ್ ಶೇಖಮುಸ್ತಫಾರನ್ನು ಭೇಟಿಯಾಗಲೆಂದು ಆ ಮಸೀದೆಗೆ ಹೋದರು. ಎಲ್ಲಿ ಹಜ್ರತ್ ಗಂಜುಲ್ ಉಲೂಮ್‌ರು ತಮ್ಮ ಜೀವನದಲ್ಲಿ ಬಹಳಷ್ಟು ಸಮಯ ತೆಹಜ್ಜೂದ್ ನಮಾಜ್(ರಾತ್ರಿಯ ವೇಳೆಯ ನಮಾಜ್) ಸಲ್ಲಿಸುತ್ತಿದ್ದರು. ಅಲ್ಲಿ ಎರಡು ರಕಾಅತ್ "ತೆಹತೂಲ್ ಮಸ್ಜಿದ್" (ಮಸೀದಿಯಲ್ಲಿ ಪ್ರವೇಶಿಸಿದ ನಂತರ "ರಕಾಅತ್" ನಮಾಜ್‌ನ್ನು ಮಾಡುವದು) ಸಲ್ಲಿಸಿದ ನಂತರ ದರ್ಗಾಕ್ಕೆ ಹೋಗಿ ಫಾತೇಹ ಓದಿ ಬಹಳಷ್ಟು ಸಮಯದವರೆಗೆ ಕೂತಿದ್ದರು. ಆ ವೇಳೆ ಅವರ ಕೈಯಲ್ಲಿ 'ಕಿತಾಬೆ ಖಾತಿಮಾ' ಇತ್ತು. ಅದರಲ್ಲಿ ಹೀಗೆ ಬರೆಯಲಾಗಿದೆ. ತಮ್ಮ ಪೀರ್ ಮುರ್ಷಿದ್ ಹಾಗೂ ಪೈಗಂಬರ್ ಅಲೈಹಿಸ್ಸಲಾಮ್ ಹಾಗೂ ಅಲ್ಲಾಹುವಿನ ನಡುವೆ ತಾರತಮ್ಯ ಮಾಡಕೂಡದು. ಅದರ ಕುರಿತು ಆ ಉಲ್ಲೇಖ ನೋಡಬಯಸಿದರು ಹಾಗೂ ಅದು ಎಲ್ಲಿರುವುದು? ಶೇಖ ಅಬ್ದುಲ್ ಫತಾಹ್ ಹಬೀಬುಲ್ಲಾಹ್‌ರ ಕೈಯಲ್ಲಿ ಹಜ್ರತ್ ಶೇಖಿಲ್ ಶೇಖ ಐನುದ್ದೀನ್‌ರ ಪುಸ್ತಿಕೆಯಿತ್ತು. ಅದನ್ನು ಅವರು ತೆರೆದಾಗ ಈ "ಬೈತ" ಹೊರಟಿತು.

ತಾತೂ ನ ರಸಿ ಬಶೇಖೆ ಹಖ್ ನ ರಸೀ ।
ಜೀರಾಕೆ ಮಿಯಾನೇಶೇಖ್ ವ ಹಖ್ ನೇಸ್ತ್‌ದುಯಿ ॥

*** ಎಲ್ಲಿಯವರೆಗೆ ನೀನು ನಿನ್ನನ್ನು ಅರಿಯಲಾರೆಯೋ ನೀನು ದೇವನನ್ನು ತಲುಪಲಾರೆ. ಗುರುವನ್ನು ತಲುಪಲಾರೆ. ಏಕೆಂದರೆ ಗುರು ಹಾಗೂ ದೇವನ ನಡುವೆ ಪರದೆ ಇಲ್ಲ.**

ಈ ತೆರನಾಗಿ ಶೇಖಅಬ್ದುಲ್ ಫತಃ ಖುದ್ದುಸ್ಸರ್ರಾಹ್‌ರು ಈ ಮೇಲಿನ ದ್ವಿಪದಿಯನ್ನು ಹಜ್ರತ್ ಮೌಲಾನಾ ಖುದ್ದುದಸ್ಸಿರ್ರಾಹರ ಎದುರು ಪ್ರಸ್ತುತಪಡಿಸಿದರು. ಆಗ ಹಜ್ರತ್‌ರು ಬಹಳ ಸಂತುಷ್ಟರಾದರು ಹಾಗೂ ಹೀಗೆಂದರು ಇವತ್ತು ಶೇಖ ಐನುದ್ದೀನ್‌ರಿಂದ ನಮಗೆ ಈ ಫಲ ದೊರೆಯಿತು! ಹಾಗೂ ಅದೇ "ಮಲ್ಫೂಜ್"ನಲ್ಲಿ ಹೀಗೆ ಬರೆಯಲಾಗಿದೆ. ಏನೆಂದರೆ ಶೇಖ ಮುಸ್ತಫಾ ಸಜ್ಜಾದಾ ಶೇಖಿಲ್ ಆಲಮ್ ಹಜ್ರತ್ ಹಬೀಬುಲ್ಲಾಹ್ ಸಿಬಗತುಲ್ಲಾಹ್‌ರ ಮೇಲೆ ಅಪ್ರತಿಮ ವಿಶ್ವಾಸವಿಡುವುವರಾಗಿದ್ದರು. ಆ ಕಾರಣದಿಂದ ಒಂದು ರಾತ್ರಿ ಹಜ್ರತ್ ಮೌಲಾನಾ ಖುದ್ದುಸ್ಸಿರ್ರಾಹ್‌ರ ಬಳಿಗೆ ಮುರೀದ್‌ರಾಗುವ ಇಚ್ಛೆಯಿಂದ ಬಂದರು ಹಾಗೂ ಯಾವಾಗ ಅವರ ಸಮೀಪ ತಲುಪಿದರೋ ಆಗ ಅವರ ನಾಲಿಗೆ ಚಲಿಸಲಿಲ್ಲ. ತಮ್ಮ ಇಚ್ಛೆಯನ್ನು ವ್ಯಕ್ತಪಡಿಸದಾದರು. ಆ ವೇಳೆಯಲ್ಲಿ ಹಜ್ರತ್ ಮೌಲಾನಾ ಹಬೀಬುಲ್ಲಾಹ್‌ರ ಕೈಯ ಹಿಂಭಾಗದಲ್ಲಿ ಒಂದು ನಕ್ಷತ್ರ ಹೊಳೆಯುವುದನ್ನು ಕಂಡರು. ಅವರು ಕೇಳಿದರು. ಈ ವಸ್ತು ಏನಿದೆ? ಶಾಹ್ ಸಾಹೇಬರು ಉತ್ತರಿಸಿದರು. ನೀವು ನೋಡಿದಿರಿ? ಹಾಗೂ ಮತ್ತೇನನ್ನೂ ಹೇಳಲಿಲ್ಲ.

ಅದೇ ರಾತ್ರಿ ಹಜ್ರತ್ ಶೇಖ ಮುಸ್ತಫಾ ಖುದ್ದುಸ್ಸಿರ್ರಾಹ್‌ರು ಸ್ವಪ್ನದಲ್ಲಿ ತಮ್ಮ ತಂದೆಯವರಾದ ಹಜ್ರತ್ ಶೇಖುಲ್ ಆಲಿಮ್ ಖುದುಸ್ಸರ್ರಾಹರವರನ್ನು ಕಂಡರು. ಅವರು ಇವರ ನಿಲುವಂಗಿಯನ್ನು ಗಟ್ಟಿಯಾಗಿ ಹಿಡಿದು, ಒಂದು ವೇಳೆ ನೀನು ಹೋಗುವವನಿದ್ದರೆ ನಮ್ಮ ನಿಲುವಂಗಿಯನ್ನು ಇಳಿಸಿ ಹೋಗು. ಆ ಕಾರಣಕ್ಕೆ ಶೇಖ ಮುಸ್ತಫಾ ಅವರು ತಮ್ಮ ಇಚ್ಛೆಯನ್ನು ಅದುಮಿಟ್ಟರು. ಹೀಗೆನ್ನುತ್ತಿದ್ದರು. ಒಂದು ವೇಳೆ ನಾನು ಹಜ್ರತ್‌ಶಾಹ್ ಸಿಬಗ್‌ತುಲ್ಲಾಹ್‌ರನ್ನು ಮೆಚ್ಚುವುವರಲ್ಲಿ ಇದ್ದೇನೆ. ಆದರೆ ವಾಸ್ತವದಲ್ಲಿ ನಾನು ಶೇಖುಲ್‌ಆಲಮ್‌ರ ಕೈಯಲ್ಲಿ ಬೈತ್ ಮಾಡಿದೆನು. ಹಜ್ರತ್ ಶೇಖ ಮುಸ್ತಫಾ ಖುದ್ದುಸ್ಸರ್ರಾಹ್ ತಮ್ಮ ವಂಶಾವಳಿಯಲ್ಲಿ ಹೀಗೆ ಬರೆದಿರುತ್ತಾರೆ. ನಾನು ಸಣ್ಣ ವಯಸ್ಸಿನಲ್ಲಿ ಖಾಜಿ ಅಬ್ದುಲ್ ಲತೀಫ್‌ರಿಂದ ಯಾರು ಧಾರ್ಮಿಕ ವಿದ್ವಾಂಸರಾಗಿದ್ದರೋ ಅವರಿಂದ ಪಾಠ ಕೇಳುತಿದ್ದೆನು. ಒಂದು ದಿನ ಹೋಗಲು ತಡವಾದಾಗ ಖಾಜಿ ಅಬ್ದುಲ್ ಲತೀಫರು ನಿರ್ಲಕ್ಷ್ಯ ಮಾಡಿದರು ಹಾಗೂ ಪಾಠ ಕಲಿಸಲಿಲ್ಲ. ಶೇಖ ಮುಸ್ತಫಾ ಅವರು ದುಃಖಿತಪ್ತರಾಗಿ ಮರಳಿ ಬಂದರು. ಅದೇ ರಾತ್ರಿ ಅಬ್ದುಲ್ ಲತೀಫ್ ಸಾಹೇಬರ ಸ್ವಪ್ನದಲ್ಲಿ ಶೇಖುಲ್ ಆಲಮ್‌ರು ಆಗಮಿಸಿ ಹೀಗೆಂದರು. ಓ ಖಾಜಿಯೇ ನನ್ನ ಪುತ್ರ ನಿಮ್ಮ ಬಳಿ ಪಾಠ ಕಲಿಯಲೆಂದು ಬರುತ್ತಿರುವನು ಆದರೆ ನೀನು ಗುರುವಾಗಿ ನಿರ್ಲಕ್ಷ್ಯ ಮಾಡಿರುವುದು ಆಶ್ಚರ್ಯದಾಯಕವಾಗಿದೆ. ನಮಗೆ ಗೌರವವನ್ನು ಮಾಡಲಾರೆಯೋ ! ಇದೇ ರೀತಿಯಲ್ಲಿ ಪದೇ ಪದೇ ಹೇಳತೊಡಗಿದರು. ಆ ದಿನದಿಂದಲೇ ಖಾಜಿಯವರಿಗೆ ಅವರ ವಂಶಾವಳಿಯ ಕುರಿತು ತಿಳಿಯಿತು ಹಾಗೂ ನಂತರ ಸದ್ವರ್ತನೆಯೊಂದಿಗೆ ನಡೆಯತೊಡಗಿ ಅವರ ಕಡೆಗೆ ಹೆಚ್ಚಿನ ಗಮನ ನೀಡಿದರು.

ಹಜ್ರತ್ ಗಂಜುಲ್ ಉಲೂಮ್(ಖು)ರವರು ಜಮಾದಿಲ್ ಆಖಿರ್ ೨೭ನೆಯ ದಿನಾಂಕದಂದು ಹಿಜ್ರಿಶಕೆ ೭೯೫ರಲ್ಲಿ ನಿಧನರಾದರು. ಅವರ ಸಮಾಧಿಯು ಮೊದಲು ಅವರ ಪುತ್ರಿಯಾದ ಮಾಖಾತೂನ್ ಉರ್ಫ್ ಹಜ್ರತ್ ಬೀಬಿ ಖ್ವಾಂದಮಾ ಹಾಫೀಜಾರ(ರ) ದರ್ಗಾದಲ್ಲಿ ಇತ್ತು. ಅವರು ಕಾಮಿಲ್‌ವಲಿ ಹಾಗೂ ಹಾಫೀಜೆ ಕುರ್‌ಆನ್ ಷರೀಫ್ ಹಾಗೂ ತನ್ನ ಕಾಲದ "ರಾಬಿಯಾ" ಆಗಿದ್ದರು. ಉನ್ನತ ದರ್ಜೆಗೆ ತಲುಪಿದವರಾಗಿದ್ದರು. ಅವರು ಬಹಳ ಉನ್ನತದರ್ಜೆಯ ಪವಾಡಗಳನ್ನು ತೋರಿದ್ದರು. ಆದರೆ ಕೆಲ ವರ್ಷಗಳು ಕಳೆದ ನಂತರ ಹಜ್ರತ್ ಗಂಜುಲ್ ಉಲೂಮ್‌ರ ಆದೇಶದಂತೆ ಗುಂಬಜ್ ಹಾಗೂ ಸಮಾಧಿಯನ್ನು ಫತೇಃಹ ದರವಾಜಾ (ಮನಗೂಳಿ ಅಗಸಿ)ಯ ಹತ್ತಿರ ನಿರ್ಮಿಸಲಾಯಿತು. ಅದರ ಕಾರಣವನ್ನು ಹೀಗೆ ವಿವರಿಸುವರು. ಓರ್ವ ವ್ಯಕ್ತಿಯು ಹಜ್ರತ್‌ರ ಜಿಯಾರತ್‌ಗಾಗಿ ಆಗಮಿಸಿದನು ಹಾಗೂ ತಮ್ಮ ಪಕ್ಕದಲ್ಲಿ ಹಜ್ರತ್ ಖ್ವಾಂದಮಾರವರ ಸಮಾಧಿಯನ್ನು ಕಂಡು ಹೀಗೆ ತಿಳಿದನು. ಬಹುಶಃ ಈ ಗೋರಿಯು ಹಜ್ರತ್‌ರ ಪತ್ನಿಯವರ ಸಮಾಧಿ ಇರಬಹುದು. ಈ ಮಾತು ಹಜ್ರತ್‌ರಿಗೆ

ಹಿಡಿಸಲಿಲ್ಲ. ಅದೇ ರಾತ್ರಿ ಓರ್ವ ಸೇವಕನ ಕನಸಿನಲ್ಲಿ ಬಂದು ಹೀಗೆ ಹೇಳಿದರು. ಈಗ ನಾವು ಇಲ್ಲಿಂದ ಬೇರೆ ಕಡೆಗೆ ವರ್ಗವಾಗುತ್ತೇವೆ. ಆ ಸ್ಥಳವನ್ನು ತೋರಿಸಿದರು. ಈಗ ಮನಗೂಳಿ ಅಗಸಿಯ ಬಳಿ ಅವರ ಸಮಾಧಿಯು ಇದೆ. ಸೇವಕನು ಹೀಗೆ ಕೇಳಿದನು. ನಾವು ಹೇಗೆ ಗುರುತಿಸುವದು ಹಾಗೂ ನಮಗೆ ವಿಶ್ವಾಸವುಂಟಾಗುವದು ಹೇಗೆ? ತಾವು ಇಲ್ಲಿಂದ ಹೊರಟು ಬೇರೆ ಕಡೆಯ ವಾಸಸ್ಥಳದಲ್ಲಿ ಇರುವಿರಿ, ಅವರು ಹೀಗೆಂದರು ಒಂದು ರಾತ್ರಿ ಆ ಸ್ಥಳಕ್ಕೆ ತಲುಪಿ ಐದು ಕೊಡಗಳನ್ನು ನೀರಿನಿಂದ ತುಂಬಿಸಿ ನಾಲ್ಕೂ ಮೂಲೆಯಲ್ಲಿ ನಾಲ್ಕು ಹಾಗೂ ಒಂದನ್ನು ಮಧ್ಯದಲ್ಲಿ ಇರಿಸಿ ಹಾಗೂ ಬೆಳಿಗ್ಗೆ ಎದ್ದು ನೋಡಿರಿ ಒಂದು ವೇಳೆ ಆ ಕೊಡಗಳು ಹೂಗಳಿಂದ ತುಂಬಿಕೊಂಡಿದ್ದರೆ ಇಷ್ಟು ತಿಳಿಯಿರಿ. ನಾನು ಅಲ್ಲಿ ವಾಸಿಸಿರುವೆನು. ಹಾಗೆಯೇ ನಡೆಯಿತು. ಅಲ್ಲಿಯೇ ಪಾವನ ಸಮಾಧಿ ನಿರ್ಮಿಸಲಾಯಿತು. ಮತ್ತೆ ಒಂದು ದೀರ್ಘಾವಧಿಯ ನಂತರ ಖ್ವಾಜಾಜಹಾಂ ಮೆಹಮೂದ್ ಗಾಂವಾಗಿಲಾನಿ ಬೀದರಿನ ದೊರೆಗಳ ಮಂತ್ರಿಯಾಗಿದ್ದನು ಹಾಗೂ ಸಚ್ಚಾರಿತ್ರದ ವ್ಯಕ್ತಿಯಾಗಿದ್ದನು. ಹಜ್ರತ್ ಶೇಖುಲ್ ಉಲುಮ್ ಖುದ್ದುಸ್ಸರಾಹ್‌ರ ಪಾವನ ಸಮಾಧಿಯ ಮೇಲೆ ಗುಂಬಜ್ ನಿರ್ಮಿಸಿದನು. ಅಲ್ಲಿ ಜನರು ಬಂದು ಸಮೃದ್ಧಿ ಹೊಂದುವರು. ಈ ಪವಾಡಪುರುಷರ ಸಮೃದ್ಧಿಯು ಇಂದಿಗೂ ಜಾರಿಯಲ್ಲಿದ್ದು ಯಾರಾದರೂ ಹುಡುಗರು ಮಂದ ಬುದ್ಧಿ, ಕಡಿಮೆ ಸ್ಮರಣಶಕ್ತಿ, ಹೊಂದಿದ್ದರೆ ಆತನು ಕೆಲದಿನಗಳವರೆಗೆ ಇವರ ಸಮಾಧಿಯ ದರ್ಶನ ಪಡೆದರೆ ಅಲ್ಲಾಹುವಿನ ಕೃಪೆಯಿಂದ ಬುದ್ಧಿವಂತನೂ ತಿಳಿವಳಿಕಸ್ತನೂ ಹಾಗೂ ಸ್ಮರಣಶಕ್ತಿಉಳ್ಳವನೂ ಆಗುವನು ಹಾಗೂ ಜ್ಞಾನದ ಗಣಿಯಾಗುವನು. ಸುಲ್ತಾನ ಔರಂಗಜೇಬ್ ಆಲಂಗೀರ್‌ರ ಸಹವರ್ತಿಗಳಲ್ಲಿ ಓರ್ವ ವಿದ್ವಾಂಸರು ಪಲ್ಲಕ್ಕಿಯಲ್ಲಿ ಕುಳಿತು ಒಂದು ಕಡೆ ಹೊರಟಿದ್ದರು. ಆಕಸ್ಮಿಕವಾಗಿ ಅವರು ಹಜ್ರತ್‌ರ ದರ್ಗಾದ ಎದುರಿನಿಂದ ಸಾಗಿದ್ದರು. ಎಲ್ಲಿ ಹಜ್ರತ್‌ರ ದರ್ಗಾ ಇದೆ ಎಂದು ಕೇಳಿದರು. ಈ ದರ್ಗಾಷರೀಫವು ಯಾವ ಔಲಿಯಾರದಿದೆ ಎಂದು ಕೇಳಿದರು. ಅದಕ್ಕುತ್ತರವಾಗಿ ಜನರು ಹೀಗೆಂದರು. ಹಜ್ರತ್ ಮಖ್ದುಮ್ ಗಂಜುಲ್‌ಇಲ್ಮ ಖುದ್ದುಸ್ಸಿರ್ರಾಹ್‌ರ ಪಾವನ ದರ್ಗಾ ಇರುವದು. ಅದನ್ನು ಕೇಳುತ್ತಿದ್ದಂತೆಯೇ ಆತನು ತನ್ನ ಜ್ಞಾನದ ಗರ್ವದಿಂದ ತಮಾಷೆಯಾಗಿ ಹೀಗೆ ಹೇಳಿದನು. "ಮೀಜಾನ್" ಹಾಗೂ "ಔಜಾನ್"(ವ್ಯಾಕರಣವನ್ನು) ಓದಿ 'ಗಂಜೂಲ್ ಉಲೂಮ್' ಎಂದು ಅನ್ನಿಸಿಕೊಳ್ಳುವುದು ಸುಲಭವಾಗಿದೆ. ಈ ವಾಕ್ಯವು ಆತನ ನಾಲಿಗೆಯಿಂದ ಪೂರ್ತಿಯಾಗಿರಲಿಲ್ಲ. ಆತನ ಹೃದಯವು ಜ್ಞಾನರಹಿತವಾಯಿತು. ಸ್ವಲ್ಪ ದೂರ ಹೋಗಿ ಏನೇ ಯೋಚಿಸಿದರೂ ತನಗೆ ತಾನು ಶೂನ್ಯನಾಗಿ ಕಂಡನು. ಅದೇ ವೇಳೆ ಮೂಲಕಾರಣವನ್ನು ಅರಿತು ಹುಚ್ಚನಂತೆ ವೇಗವಾಗಿ ಓಡುತ್ತಾ ಮರಳಿ ಬಂದು ಹಜ್ರತ್‌ರ ಸಮಾಧಿ ಎದುರು ವರಾಂಡಾದಲ್ಲಿ ಮೊಳಕಾಲೂರಿ ಅಳಹತ್ತಿದನು. ಗಂಜುಲ್ ಇಲ್ಮ ಗಂಜೂಲ್ ಇಲ್ಮ ಎಂದು ತನ್ನ

ತಪ್ಪಿಗೆ ಕ್ಷಮೆ ಯಾಚಿಸುತ್ತಾ ಪಶ್ಚಾತ್ತಾಪ ಪಟ್ಟನು. ಅಲ್ಪ ಸಮಯದಲ್ಲಿಯೇ ಆಕಸ್ಮಿಕವಾಗಿ ಹೃದಯದೆಡೆಗೆ ಗಮನ ಹರಿಸಿದನು. ಆಗ ಸರ್ವವಿಧದ ಜ್ಞಾನವು ಮರಳಿದ ಅನುಭವ ಪಡೆದನು ಹಾಗೂ ಕೃತಜ್ಞತೆಯೊಂದಿಗೆ ಅಲ್ಲಿಂದ ಹೊರಟನು. ವಲ್ಲಾಹ್ ಆಲಮ್ (ಅಲ್ಲಾಹುವೇ ಬಲ್ಲವನು)

ಹಜ್ರತ್‌ರಿಗೆ ಪುತ್ರಿಯರು ಹಾಗೂ ಪುತ್ರರು ಬಹಳ ಜನ ಇದ್ದರು. ಅವರ ಸಂತಾನದಿಂದ ಬಹಳಷ್ಟು ಪವಿತ್ರ ಜ್ಞಾನಿಗಳು ಔಲಿಯಾಗಳು ಆಗಿ ಹೋಗಿದ್ದಾರೆ. ಅವರ ಪುತ್ರಿ ಹಜ್ರತ್ ಬೀಬಿ ಖ್ವಾಂದಮಾ ಹಾಫೀಜಾ ರಹ್ಮತುಲ್ಲಾ ಅಲೈ ಅವರ ಕರಾಮತ್ತುಗಳು ಪ್ರಸಿದ್ಧವಾಗಿವೆ. ಇದೇ ಪಟ್ಟಣದಲ್ಲಿ ಹಜ್ರತ್‌ರ ಸಮಾಧಿಯ ಪೂರ್ವದಿಕ್ಕಿಗೆ ಸ್ಥಿತವಿದೆ. ದೂರದಲ್ಲಿ ದಕ್ಷಿಣದ ಸುಲ್ತಾನರಿಂದ ಅವರ ಉರುಸಿಗಾಗಿ ಹಾಗೂ ಖರ್ಚಿಗಾಗಿ ಬಹಳಷ್ಟು ಗ್ರಾಮಗಳು ಜಹಗೀರನಲ್ಲಿ ನೀಡಲ್ಪಟ್ಟಿದ್ದವು. ಜನರು ದರ್ಶನ ಮಾಡಿ ಸಮೃದ್ಧಿ ಹೊಂದುವರು.

ಹಜ್ರತ್ ಶೇಖ ಮುಸ್ತಫಾ ಜುನೈದಿ ಹಬೀಬುಲ್ಲಾಹ್ ಅವರುಸಹ ಹಜ್ರತ್‌ರ ಪಾದದಡಿಯ ಸಾಲಿನ ಕೊನೆಯಲ್ಲಿ ಬಾಗಿಲಬಳಿ ದಫನ ಮಾಡಲ್ಪಟ್ಟಿದ್ದಾರೆ. ಅವರು ಹಜ್ರತ್‌ರ ಸಂತಾನವಾಗಿದ್ದಾರೆ ಹಾಗೂ ಅವರ ಪೀಠಾಧಿಪತಿಯೂ ಆಗಿದ್ದಾರೆ. ಈ ಹಿರಿಯರು ಕಾಮಿಲ್‌ವಲಿಯಾಗಿದ್ದರು. ಅವರಿಗೆ ಮೌಲಾನಾ ಹಬೀಬುಲ್ಲಾಹ್ ಸಿಬಗ್‌ತುಲ್ಲಾಹ್‌ರಿಂದ ಆಂತರ್ಯಜ್ಞಾನ ಲಭಿಸಿತ್ತು. ಹಜ್ರತ್‌ರಿಗೆ ಖುತ್ಬೆಆರೀಫೀನ್ ಶಾಹ್ ಮುರ್ತುಜಾ ಖಾದ್ರಿಯವರಿಂದ ಖಾದ್ರಿ ಪರಂಪರೆಯ ಖಿಲಾಫತ್‌ವು ಇತ್ತು. ತಮ್ಮ ಕಾಲದ ಬಹಳಷ್ಟು ಸೂಫಿವರ್ಯರಿಂದ ಅಗಣಿತ ಸಮೃದ್ಧಿಯನ್ನು ಪಡೆದಿದ್ದರು. ಹಜ್ರತ್‌ರ ಎರಡು ವಂಶಾವಳಿ ಬರೆಯಲಾಗಿದೆ. ಒಂದು ತಮ್ಮ ಪೂರ್ವಜರ ಪರಂಪರೆ ಹಾಗೂ ಎರಡನೆಯದು ಹಜ್ರತ್ ಮೌಲಾನಾ ಹಬೀಬುಲ್ಲಾಹ್‌ರಿಂದ ಗುರುಶಿಷ್ಯ ಪರಂಪರೆಯದ್ದಾಗಿದೆ. ಅವರು ಹಿಜ್ರಿಶಕೆ ೧೧೬೮ರಲ್ಲಿ ನಿಧನರಾದರು.

ಹಜ್ರತ್ ಶೇಖ ಗಂಜುಲ್‌ಉಲೂಮ್‌ರ ಸಂತಾನವೂ ಉಳಿದಿಲ್ಲ. ಅವರ ವಾರ್ಷಿಕ ಉರುಸ್‌ಉತ್ಸವವನ್ನು ಸೈಯ್ಯದ್ ರುಕ್ನುದ್ದೀನ್ ಉರ್ಫ್ ಪೆಹುತ್ರುಮಿಯಾರ ಪುತ್ರ ಸಾಕೀನ್ ಹೈದ್ರಾಬಾದ್ ಹಾಗೂ ಅವರ ಸಹೋದರ ಸೈಯ್ಯದ್ ಶಮಶುದ್ದೀನ್ ಖತೀಬೆಈದ್ಗಾಹ್ ಬಿಜಾಪುರ ಇವರು ಆಚರಿಸುವರು.

■

೯. ಹಜ್ರತ್ ಸುಲ್ತಾನ್‌ಪೀರ್ ಶೇಖ ಜಿಯಾವುದ್ದೀನ್ ಗಜ್ನವಿ (ಖು)

ಇವರು ಬಿಜಾಪುರದ ಪುರಾತನ ಸೂಫಿಗಳಲ್ಲೊಬ್ಬರಾಗಿದ್ದಾರೆ. ಇವರು ಗಜನಿಯ ಯುವರಾಜರಲ್ಲೋರ್ವರಾಗಿದ್ದರು. ಯಾವಾಗ ಅಲ್ಲಾಹುವಿನ ಸಂಪ್ರೀತಿಯ ಬಯಕೆಯು ಮನದಲ್ಲಿ ಮೊಳಕೆಯೊಡೆಯಿತೋ ಆಗ ಅವರು ಲೌಕಿಕ ದೊರೆಯ ಉಡುಪನ್ನು ತೆಗೆದುಹಾಕಿದರು. ಆಡಂಬರದ ಬದುಕನ್ನು ತೊರೆದು, ಎಲ್ಲ ಅಲಂಕಾರಗಳನ್ನು ತ್ಯಜಿಸಿ ದೇವಮಾರ್ಗದಲ್ಲಿ ದೃಢವಾದ ಹೆಜ್ಜೆಗಳನ್ನಿಟ್ಟು ದರವೇಶಿಯ ಬಾಳನ್ನಪ್ಪಿ ಸೂಫಿಗಳ ತಂಡದಲ್ಲಿ ಸೇರಿದರು ಹಾಗೂ ಹಜ್ರತ್‌ಶೇಖ ಮುಹಮ್ಮದ್ ಬಿನ್ ಸಿರಾಜ್-ಜುನೈದಿ ಅಹ್ಸನಾಬಾದಿ(ಖು) ಪರಮಶಿಷ್ಯರಾದರು. ಅವರಿಂದ ಸೂಫಿತ್ವದ ಎಲ್ಲ ರಹಸ್ಯಗಳನ್ನು ಅರಿತರು. ಸತ್ಯದ ಧ್ವಜವಾಹಕರಾದರು ಹಾಗೂ ಮಾರ್ಗದರ್ಶಕರಾಗಿ ಶಿಷ್ಯವೃಂದಕ್ಕೆ ಆತ್ಮಜ್ಞಾನ ದಯಪಾಲಿಸಿದರು. ಹಜ್ರತ್ ಶೇಖುಲ್ ಆಲಮ್ ಮಖ್ದುಮುಲ್ ಖಲ್ಕಗಂಜುಲ್ ಉಲೂಮ್(ಖು), ಸಾಂಗತ್ಯದಲ್ಲಿದ್ದು ಅವರಿಂದಲೂ ಸೂಫಿತತ್ವ ಜ್ಞಾನದ ಅಂತರಂಗ ಅರಿತರು. ಇವರ ಸಮಾಧಿಯ ಮೇಲೆ ಚಿಕ್ಕದಾದ ಗುಂಬಜ್‌ನ್ನು ನಿರ್ಮಿಸಲಾಗಿದೆ. ಉರೂಸೆಷರೀಫ್‌ವು ಶಾಬಾನ್ ತಿಂಗಳ ೨೨ನೆಯ ದಿನಾಂಕದಂದು ಇರುವುದು, ಮರಣದ ಇಸ್ವಿಯು ತಿಳಿದುಬಂದಿಲ್ಲ.

ಅವರ ಮೊಮ್ಮಗರಾದ ಶೇಖುಲ್‌ಕಾಮಿಲ್ ಶೇಖ ಐನುದ್ದೀನ್(ಖು) ಹಜ್ರತ್ ಶೇಖ ಅವೈಸ್ ಉರ್ಫ್ ಖ್ವಾಂದ್‌ಮಿಯಾ ಜುನೈದಿ ಖಿದ್ದಿಸ್ಸಿರಾರಿಂದ ಯಾರು ಹಜ್ರತ್ ಶೇಖ ಮುಹಮ್ಮದ್ ಬಿನ್ ಸಿರಾಜ ಜುನೈದಿ ಅಹ್ಸನಾಬಾದಿಯ(ಖು) ಸಂತಾನ ಹಾಗೂ ಪೀಠಾಧಿಕಾರಿಯೂ ಆಗಿದ್ದರು. ಅವರಿಂದ ಪ್ರಮಾಣ ಹಾಗೂ ಖಿಲಾಫತ್ ಪಡೆದು ಆಧ್ಯಾತ್ಮಿಕ ಜ್ಞಾನವನ್ನು ಗಳಿಸಿದರು.

■

೧೦. ಹಜ್ರತ್ ಅಬುಲ್ ಬರ್ಕಾತ್ ಶಾಹ್ ಹಾಫೀಜ್ ಹುಸೈನಿ (ಖು)

ಇವರು ಜನಾಬ್ ಸೈಯ್ಯದುಸ್ಸಾದಾತ್ ಸೈಯದ್ ಅಶ್ರಫ್ ಜಹಾಂಗೀರ ಸಮ್‌ನಾನಿ(ಖು) ಸಹೋದರನ ಪುತ್ರರಾಗಿದ್ದಾರೆ. ಯಾವ ಕಾಲದಲ್ಲಿ ಇವರು ಆಗಮಿಸಿದರೋ ಆಗ ಇಸ್ಲಾಂ ಧರ್ಮದ ಪರಿಚಯವು ಪರಿಪೂರ್ಣ ರೀತಿಯಲ್ಲಿ ಆಗಿರಲಿಲ್ಲ. ಬಹುದೇವಾರಾಧನೆ, ಮೂರ್ತಿಪೂಜೆ ಹಾಗೂ ಇನ್ನಿತರ ಸಂಪ್ರದಾಯಗಳು ರೂಢಿಯಲ್ಲಿದ್ದವು. ಧರ್ಮದ ಪ್ರಸಾರ, ಪ್ರಚಾರವನ್ನು ಮಾಡುತ್ತಾ ಜನರನ್ನು

ಮೂಢನಂಬಿಕೆಗಳಿಂದ ಮುಕ್ತರನ್ನಾಗಿಸಿ ನೇರಮಾರ್ಗಕ್ಕೆ ತರಲು ನಿರಂತರವಾಗಿ ಶ್ರಮಿಸಿದರು. ಇವರ ಸಾಂಗತ್ಯದಿಂದ ಜನರು ಇವರೆದುರು ಪ್ರಮಾಣ ಮಾಡಿ ಮೂಢನಂಬಿಕೆಗಳಿಂದ ಮುಕ್ತರಾದರಲ್ಲದೇ ಬಹುದೇವಾರಾಧನೆ, ಮೂರ್ತಿಪೂಜೆ ಇತ್ಯಾದಿ ತ್ಯಜಿಸಿ ಏಕದೇವಾರಾಧನೆ ರೂಢಿಸಿಕೊಂಡರು. ಯಾವಾಗ ಇವರು ಇಲ್ಲಿ ಆಗಮಿಸಿದರೊ, ಆಗ ಬಹುದೇವಾರಾಧಕರು ಅವರನ್ನು ಪಟ್ಟಣದಲ್ಲಿ ಬರಗೊಡಲಿಲ್ಲ. ಅವರಿಗೆ ಅನೇಕ ತೆರನಾದ ಕಷ್ಟಗಳನ್ನು ನೀಡಿ ಜನವಸತಿಯಿಂದ ದೂರಕ್ಕೆ ಕಳುಹಿಸಿದರು. ಅವರು ತಮ್ಮ ಹಿತೈಷಿ ಹಾಗೂ ಶಿಷ್ಯರೊಂದಿಗೆ ಪಟ್ಟಣದಿಂದ ದೂರದಲ್ಲಿ ಉಳಿದರು. ಆ ದಿನ ಆಕಸ್ಮಿಕವಾಗಿ ಮಳೆಯು ಸುರಿಯತೊಡಗಿತು. ಆದರೆ ಇವರಿಳಿದ ಸ್ಥಳವು ನಿರ್ಜನ ಹಾಗೂ ಕಾಡು ಪ್ರದೇಶವಾಗಿತ್ತು. ಹಜ್ರತ್‌ರ ಸೇವಕರು ತಲ್ಲಣಗೊಂಡರು. ಆಗ ಹಜ್ರತ್‌ರು ತಮ್ಮ ಕೈಯಲ್ಲಿಯ ಪವಿತ್ರ ಕೋಲಿನಿಂದ ತಾವಿಳಿದ ಪ್ರದೇಶದ ಸುತ್ತಲೂ ಒಂದು ರೇಖೆಯನ್ನು ಎಳೆದರು. ಅದರೊಂದಿಗೆಯೇ ಇವರು ಗೆರೆಯೆಳೆದು ನಿರ್ಬಂಧಿಸಿದ ಪ್ರದೇಶವು ಮಳೆಯಿಂದ ಸುರಕ್ಷಿತ ಉಳಿಯಿತು ಹಾಗೂ ಆಶ್ಚರ್ಯವೆಂದರೆ ಅದರ ಹೊರಭಾಗದಲ್ಲಿ ಮಳೆಯಾಗುತ್ತಿತ್ತು. ಈ ಘಟನೆಯನ್ನು ಗಮನಿಸಿದ ಜನರು ಅದ್ಭುತಾಶ್ಚರ್ಯ ಚಕಿತರಾಗಿ ಹಜ್ರತ್‌ರ ಸೇವೆಯಲ್ಲಿ ಹಾಜರಾಗಿ ಗೌರವಪೂರ್ವಕವಾಗಿ ಅವರನ್ನು ಅವರ ಶಿಷ್ಯರೊಂದಿಗೆ ಪಟ್ಟಣದಲ್ಲಿ ಕರೆದುಕೊಂಡು ಹೋದರು.

ಇನ್ನೊಂದು ಉಲ್ಲೇಖದಂತೆ ಹಜ್ರತ್ ಶಾಹ್ ಹಾಫೀಜ್‌ಹುಸೈನಿ ಶಾಹ್(ಖು) ತಮ್ಮ ಮರಣದ ಕಾಲದಲ್ಲಿ ತಮ್ಮ ಸುಪುತ್ರರಾದ ಹಜ್ರತ್ ಶಾಹ್ ಹಂಜಾಹುಸೈನಿ(ಖು)ರಾರಿಗೆ ಈ ಅಂತಿಮ ಅಪೇಕ್ಷೆ ತಿಳಿಸಿದರು. ತಮ್ಮ ನಿಧನಾನಂತರ ಸ್ನಾನಾದಿ ಕರ್ಮಮಾಡಿಸಿ, ಕಫನ್ ತೊಡಿಸಿ ಇಡಿರಿ ಆದರೆ "ಜನಾಜಾ" ನಮಾಜ್‌ನ್ನು ಮಾತ್ರ ಮಾಡಬೇಡಿರಿ ಹಾಗೂ ದೇವನಿಂದ ಜರುಗುವ ಕಾರ್ಯಕ್ಕೆ ಕಾಯಿರಿ. ಆ ಕಾಲದಲ್ಲಿ ಅಲ್ಲಿ ಗಿಡಗಂಟಿಗಳಿದ್ದವು. ಸಂಜ್ಞೆ ಮಾಡಿ ಹೇಳಿದರು. ಅತ್ತಲಿಂದ ಓರ್ವರು ಮುಖವಾಡ ಧರಿಸಿ ಪ್ರತ್ಯಕ್ಷವಾಗುವರು. ಅವರ ನಾಯಕತ್ವದಲ್ಲಿ ನಮಾಜೆ ಜನಾಜವನ್ನು (ಶವವನ್ನು ಮುಂದಿಟ್ಟು ಸಲ್ಲಿಸುವ ಪ್ರಾರ್ಥನೆ) ನಿರ್ವಹಿಸಿರಿ. ಹಾಗೆಯೇ ಹಜ್ರತ್ ಶಾಹ್ ಹಂಜಾಖಿದ್ದಿಸ್ಸಿರಾ ತಮ್ಮ ತಂದೆಯವರ ವಸಿಯತ್ತಿನಂತೆ ಪವಿತ್ರ ಶವವನ್ನು ಸ್ನಾನಾದಿ ಕರ್ಮಮಾಡಿಸಿ "ಕಫನ್" ತೊಡಿಸಿ "ಜನಾಜಾ" ನಮಾಜ್‌ಕ್ಕಾಗಿ ಕಾಯತೊಡಗಿದರು. ಒಮ್ಮೆಲೆ ಆ ಗಿಡಗಂಟಿಗಳ ಕಡೆಯಿಂದ ಮುಖವಾಡ ಧರಿಸಿದ ಓರ್ವರು ಆಗಮಿಸಿದರು ಹಾಗೂ ಜನಾಜದ ನಮಾಜನ್ನು ನಿರ್ವಹಿಸಿ ಬೇಗಬೇಗನೆ ಯಾವ ಕಡೆಯಿಂದ ಆಗಮಿಸಿದ್ದರೋ ಅತ್ತ ಹೋದರು. ಹಜ್ರತ್ ಶಾಹ್ ಹಂಝಾ ಖುದ್ದಿಸ್ಸಿರಾರು ಈ ರಹಸ್ಯವು ರಹಸ್ಯವಾಗಿಯೇ ಉಳಿಯಬಾರದೆಂದು ಬಯಸಿ ವೇಗವಾಗಿ ಅವರ ಹಿಂದೆಹಿಂದೆಯೇ ಹೋದರು. ಅವರೆದುರಾಗಿ ಮುಖವಾಡ ಸರಿಸಲು ವಿನಂತಿಸಿದರು.

ಮೊದಮೊದಲಿಗೆ ವೃದ್ಧರು ನಿರಾಕರಿಸಿದರು. ಆದರೆ ಅವರ ವಿನಯಪೂರ್ವಕವಾದ ವಿನಂತಿಯನ್ನು ಮನ್ನಿಸಿ ಒಂದು ಮೂಲೆಯ ಭಾಗವನ್ನು ಹಿಂದೆ ಸರಿಸಿದರು. ಹಜ್ರತ್‌ಶಾಹ್ ಹಂಝೂರು ಏನು ನೋಡುತ್ತಾರೆ? ಅವರು ಸ್ವತಃ ಅವರ ತಂದೆಯವರೇ ಆಗಿದ್ದರು. ಹಾ ! ಎಂದುಚ್ಚರಿಸಿ ಹಿಂದಿರುಗಿದರು.

ಶಿರ್‍ಗುರ್ಬೆ ಔಲಿಯಾ ದಾದಂಡ ।

ಈ ರಹಸ್ಯಮಯ ಅದ್ಭುತವನ್ನು ಸೂಫಿಗಳೇ ಬಲ್ಲರು !! ಅವರ ನಿಧನದ ಇಸ್ವಿಯು ಲಭ್ಯವಿರುವದಿಲ್ಲ. ಆದರೆ ಉರೂಸ್‌ಷರೀಫ್‌ವು ಸಫರ್ ತಿಂಗಳ ಹದಿಮೂರನೆಯ ದಿನಾಂಕದಂದು ಆಚರಿಸಲಾಗುತ್ತದೆ.

■

೧೧. 'ಅಬುಲ್ ಫಜಲ್' ಷಾಹ್ ಹಂಝಾ ಹುಸೈನಿ(ಖು)

ಈ ಸೂಫಿವರ್ಯರು ಬಿಜಾಪುರದ ಶ್ರೇಷ್ಠ ಸೂಫಿ ಹಾಗೂ ಪುರಾತನ ಸೂಫಿಗಳಲ್ಲೋರ್ವರಾಗಿದ್ದಾರೆ ಹಾಗೂ ತಮ್ಮ ತಂದೆಯವರಾದ ಹಜ್ರತ್ ಹಾಫೀಜ್ ಹುಸೈನಿಯವರ ಶಿಷ್ಯರೂ ಹಾಗೂ ಖಲೀಫಾಗಳು ಆಗಿರುವರು. ಹಜ್ರತ್‌ಶಾಹ್ ಹಂಝಾಹುಸೈನಿಯವರು ಖಿಲಾಫತ್ ಪಡೆದ ನಂತರ ತಮ್ಮ ಅಮೂಲ್ಯ ಸಮಯವನ್ನು ಶರೀಯತ್‌ದಂತೆ ಜನರ ಬದುಕನ್ನು ಹಸನಗೊಳಿಸಲು, ಆತ್ಮ ಪರಿಶುದ್ಧಗೊಳಿಸಲು ಶಿಷ್ಯ ಸಮೂಹಕ್ಕೆ ನೇರ ದಾರಿ ತೋರಲು ಮುಡುಪಾಗಿ ಇಟ್ಟರು. ಇವರ ಉನ್ನತ ದರ್ಜೆಯ ಕರಾಮತ್‌ಗಳು ಸುಪ್ರಸಿದ್ಧವಾಗಿವೆ. ಇವರು ಷಾಬಾನ್ ತಿಂಗಳ ೯ನೆಯ ದಿನಾಂಕದಂದು ಇಹಲೋಕ ತ್ಯಜಿಸಿದರು. ಒಂದು ಉಲ್ಲೇಖದಲ್ಲಿರುವಂತೆ ಅವರನ್ನು ಅವರ ತಂದೆಯವರ ಮಗ್ಗುಲಲ್ಲಿಯೇ ದಫನ್ ಮಾಡಲಾಗಿತ್ತು. ಆ ರಾತ್ರಿಯೇ ಅವರ ಪವಿತ್ರಗೋರಿಯು ತಮ್ಮ ತಂದೆಯವರ ಗೋರಿಗಿಂತ ಒಂದು ಅಡಿಯಷ್ಟು ಕೆಳಕ್ಕೆ ಸರಿಯಿತು. ಇದು ತಂದೆಯವರಿಗೆ ತೋರಿದ ಗೌರವವಾಗಿತ್ತು. ವಲ್ಲಾಹು ಆಲಮ್ (ಅಲ್ಲಾಹನಿಗೆ ಇದರ ರಹಸ್ಯ ಗೊತ್ತು) ಈ ಎರಡೂ ಸಮಾಧಿಗಳ ಮೇಲೆ ಒಂದು ಗುಮ್ಮಟವನ್ನು ನಿರ್ಮಿಸಲಾಗಿದೆ. ಇವರ ಸಂತಾನದಲ್ಲಿ ತುಂಬು ಸಮೃದ್ಧಿಯುಂಟಾಯಿತು. ಇವತ್ತಿಗೂ ಅವರ ಸಂತಾನವು ಹೈದರಾಬಾದ್ ದಖ್ಖನ ಹಾಗೂ ರಾಯಚೂರ, ಬೋರಿಗ್ರಾಮ ಪರಗಣಾ ಸಂಸ್ಥಾನ ಜತ್ ಪ್ರದೇಶ ಹಾಗೂ ಬೆಳಗಾಂದಲ್ಲಿ ಇರುವರು. ಇವರ ಸಮಾಧಿಯ ಸಮೀಪ ಸುತ್ತಲೂ ಬಹಳಷ್ಟು ವಿದ್ವಾಂಸರ ಸಮಾಧಿಗಳಿರುವವು. ಪ್ರಸ್ತುತದಲ್ಲಿ ಮುಹಮ್ಮದ್ ಇಬ್ರಾಹಿಂ ಖತೀಬ್ ಈದ್ಗಾಹ್‌ದ ಖತೀಬ್‌ರು ಹಾಗೂ ಅವರ ತಂದೆಯವರಾದ ಶೇಖಅಹ್ಮದ್ ಅವರನ್ನು

ಅಲ್ಲಿಯೇ ದಫನ್ ಮಾಡಲ್ಪಟ್ಟಿದ್ದಾರೆ. ಅನುವಾದಕರಾದ ಸೈಫುಲ್ಲಾ ಸಾಹೇಬರ ಉಲ್ಲೇಖದಂತೆ ಹೈದರಾಬಾದ್‌ದಲ್ಲಿ ಸೈಯ್ಯದ್ ಗೌಸ್ ಸಾಹೇಬ ಹುಸೈನಿ ಮನ್ಸಬ್‌ದಾರ್, ಸೈಯ್ಯದ್ ಗುಲಾಮ ದಸ್ತಗೀರ ಸಾಹೇಬ ಹುಸೈನಿ ಸಾಕೀನ್ ಸೂಪಾ ಜಿಲ್ಲಾ ಪರಭಣಿ ಇವರ ಸಂತಾನದಲ್ಲಿಯೇ ಬರುವರು. ಬೋರಿಗ್ರಾಮದಲ್ಲಿ ಸಾಹೇಬ ಹುಸೈನಿ ಸಾಹೇಬ್ ಹಾಗೂ ಶಿವಣಗಿ ಗ್ರಾಮದಲ್ಲಿ ಸೈಯ್ಯದ್ ಅಬ್ದುಲ್‌ಖಾದಿರ್ ಸಾಹೇಬರು ಇರುವರು. ■

೧೨. ಹಜ್ರತ್ ಶಾಹ್ ಹಬೀಬುಲ್ಲಾಹ್ ಕಿರ್ಮಾನಿ ಖುದ್ದಿಸ್ಸಿರ್ರೂಹ್

ಇವರು ಹಜ್ರತ್ ಖುತ್ಬುಲ್ ಔಲಿಯಾ ಶಾ ನ್ಯಾಮತಲ್ಲಾಹ್ ವಲಿ ಖುದ್ದಿಸ್ಸಿರಾಹರ ಮೊಮ್ಮಗ ಹಾಗೂ ಹಜ್ರತ್‌ಶಾಹ್ ಖಲೀಲುಲ್ಲಾಹ್ ಬುತ್‌ಶಿಕನ್ ಖುದ್ದಿಸ್ಸಿರಾರ ಸುಪುತ್ರರಾಗಿದ್ದಾರೆ. ಸುಲ್ತಾನ್ ಅಹ್ಮದ್‌ಶಾಹ್ ಬಹಮನಿ ದೊರೆಯು ಸೂಫಿಸಂತರನ್ನು ಬಹಳೇ ಗೌರವಿಸುತ್ತಿದ್ದರು ಹಾಗೂ ಯಾವಾಗಲೂ ಅವರ ಆಗಮನದ ನಿರೀಕ್ಷೆಯಲ್ಲಿರುತ್ತಿದ್ದರು. ಅದೇ ಕಾಲದಲ್ಲಿ ಹಜ್ರತ್‌ಶಾಹ್ ನ್ಯಾಮತುಲ್ಲಾಹ್ ಕಿರ್ಮಾನಿ ಖುದ್ದಿಸ್ಸಿರ್ರಾಹ್‌ರ ಕರಾಮತ್ ಹಾಗೂ ಪವಾಡಗಳು ಜಗತ್ಪ್ರಸಿದ್ಧ ಹೊಂದಿದ್ದವು. ದೊರೆಯು ತನ್ನ ಸಲಹೆಗಾರರಲ್ಲಿಯ ಓರ್ವರನ್ನು ಹಾಗೂ ಜೊತೆಗೆ ವಿದ್ವಾಂಸರ ಹಾಗೂ ಸೂಫಿಗಳ ಒಂದು ತಂಡವನ್ನು ತನ್ನ ಘನತೆಗೆ ತಕ್ಕಂತೆ ಅಮೂಲ್ಯ ಕೊಡುಗೆ ಕಾಣಿಕೆಗಳೊಂದಿಗೆ ಗೌರವಪೂರ್ವಕವಾಗಿ ಕಿರ್ಮಾನ್‌ಕ್ಕೆ ಕಳುಹಿಸಿದನು. ಅವರು ತನಗಾಗಿ ಪ್ರಾರ್ಥಿಸಬೇಕೆಂದು ಬಯಸಿದನು. ಹಜ್ರತ್‌ರು ಆ ತಂಡವನ್ನು ಸಂತಸದೊಂದಿಗೆ ಬರಮಾಡಿಕೊಂಡರು ಹಾಗೂ ಒಂದು ಹಸಿರು ಕಿರೀಟವು ಯಾವುದು ಹನ್ನೆರಡು ಕೋನಗಳನ್ನುಳ್ಳದ್ದಾಗಿತ್ತು ಅದನ್ನು ಪೆಟ್ಟಿಗೆಯಲ್ಲಿಟ್ಟು ತಮ್ಮ ಶಿಷ್ಯರಾದ ಮುಲ್ಲಾಕುತ್ಬುದ್ದೀನ್ ಕಿರ್ಮಾನಿ ಅವರು ಸ್ವತಃ ವಿದ್ವಾಂಸರಾಗಿದ್ದರು. ಅವರಿಗೆ ದಖ್ಖನಿಗೆ ಕಳುಹಿಸಿದರು ಹಾಗೂ ಹೀಗೆಂದರು–ಇದು ಸುಲ್ತಾನ್ ಅಹ್ಮದ್‌ಶಾಹ್‌ನ ಅಮಾನತ್ತಾಗಿದೆ. (ವಿಶ್ವಸ್ಥನಿಧಿ) ಅವನಿಗೆ ತಲುಪಿಸಿರಿ. ಸುಲ್ತಾನ್ ಅಹ್ಮದ್ ಆಗ ಸುಲ್ತಾನ್ ಫೈರೋಜ್‌ಶಾಹ್‌ರೊಂದಿಗೆ ಯುದ್ಧ ನಿರತನಾಗಿದ್ದನು. ಕನಸಿನಲ್ಲಿ ಹೀಗೆ ಕಂಡನು. ಓರ್ವ ವ್ಯಕ್ತಿಯು ಹನ್ನೆರಡು ಕೋನಗಳುಳ್ಳ ಹಸಿರು ಕಿರೀಟವನ್ನು ಆತನಿಗೆ ತಲುಪಿಸಿ ಹೀಗೆಂದನು. ಈ ಕಿರೀಟವು ಸಾಮ್ರಾಟನದ್ದಾಗಿದೆ. ಓರ್ವ ಸೂಫಿಯೂ ನೀಡಿರುವರು. ಯಾವಾಗ ಮೌಲಾನಾ ಖುತ್ಬುದ್ದೀನ್ ಹಜ್ರತ್‌ಶಾಹ್ ನ್ಯಾಮತುಲ್ಲಾಹ್ ವಲಿ ಖುದಿಸ್ಸಿರಾರು ಆದೇಶದಂತೆ ಸುಲ್ತಾನ್ ಅಹ್ಮದ್‌ನ ಬಳಿ ತಲುಪಿದರು. ಆಗ ಸುಲ್ತಾನನು ಮೈಮೇಲೆ ಎಚ್ಚರವಿಲ್ಲದಂತೆ ಚೀರಿದನು. ಇವರು ಆ ಸೂಫಿಗಳೇ ಆಗಿರುವರು ಅವರು ಆಯಾ ಗಿಡದ ಕೆಳಗೆ,

ಆಯಾ ಸಮಯದಲ್ಲಿ ಯಾವಾಗ ನಾನು ಫೈರೋಜ್‌ಶಾಹ್ ಸೈನ್ಯದೊಂದಿಗೆ ಯುದ್ಧ ಮಾಡುತ್ತಿದ್ದೆನೊ ಆಗ ಹನ್ನೆರಡು ಕೋನವುಳ್ಳ ಹಸಿರು ಕಿರೀಟವನ್ನು ನನಗೆ ನೀಡಿದ್ದರು. ಅದಕ್ಕಾಗಿ ಮೌಲಾನಾ ಖುತ್ಬುದ್ದೀನ್‌ರು ಸಮೀಪ ಬಂದಾಗ ಸುಲ್ತಾನ್ ಅಹ್ಮದ್ ಎದ್ದು ನಿಂತು ಗೌರವಿಸಿ ತನ್ನ ಪಕ್ಕದಲ್ಲಿ ಕೂಡ್ರಿಸಿಕೊಂಡನು ಹಾಗೂ ಪೆಟ್ಟಿಗೆ ತೆರೆದು ನೋಡಿದರೆ ಕನಸಿನಲ್ಲಿ ಕಂಡಿದ್ದ ಕಿರೀಟವೇ ಇದಾಗಿತ್ತು. ಅದನ್ನು ತನ್ನ ಶಿರದ ಮೇಲೆ ತೊಟ್ಟುಕೊಂಡನು. ಅದೇ ವೇಳೆ ತನ್ನ ಅಧಿಕಾರಿಗಳಿಗೆ ಹ಼ಜ್ರತ್‌ಶಾಹ್ ನ್ಯಾಮತುಲ್ಲಾಹ್ ಸೇವೆಯಲ್ಲಿ ಕಳುಹಿಸಿದನು. ಜೊತೆಗೆ ಹಜ್ರತ್‌ರಲ್ಲಿ ಬಾದಶಾಹನು ಹೀಗೆ ವಿನಂತಿಸಿದನು. ಏನೆಂದರೆ ತಮ್ಮ ಸಂತಾನದಲ್ಲಿದ್ದ ಓರ್ವರಿಗೆ ಇಲ್ಲಿ ಕಳುಹಿಸಬೇಕು. ಆದರೆ ಹಜ್ರತ್‌ರಿಗೆ ಓರ್ವನೇ ಪುತ್ರ ಹಜ್ರತ್‌ಶಾಹ್ ಖಲೀಲುಲ್ಲಾಹ್ (ಖು) ಇದ್ದರು. ಅವರ ವಿರಹವು ಹ಼ಜ್ರತರಿಗೆ ಸಹನೀಯವಿರಲಿಲ್ಲ. ಅದಕ್ಕಾಗಿ ತಮ್ಮ ಮೊಮ್ಮಗನಾದ ಹಜ್ರತ್‌ಶಾಹ್‌ನೂರುಲ್ಲಾಹ್ ಬಿನ್ ಶಾಹ್ ಖಲೀಲುಲ್ಲಾಹ್ ಖುದ್ದಿಸ್ಸಿರ್ರಾಹ್‌ರನ್ನು ಕಳುಹಿಸಿದರು. ಯಾವಾಗ ಅವರು ಮುಹಮ್ಮದಾಬಾದ್ ಬೀದರ್‌ಗೆ ತಲುಪಿದರೋ ಆಗ ಸುಲ್ತಾನ್‌ನು ಅವರನ್ನು ಬಹಳೇ ಗೌರವದೊಂದಿಗೆ ಬರಮಾಡಿಕೊಂಡು ತನ್ನ ಪುತ್ರಿಯೊಂದಿಗೆ ವಿವಾಹ ಜರುಗಿಸಿಕೊಟ್ಟನು. ಹಜ್ರತ್‌ಶಾಹ್ ನ್ಯಾಮತುಲ್ಲಾಹ್ ವಲಿ(ಖು) ಅವರು ಕಿರ್ಮಾನದ ಹಾಮಾನ್ ಗ್ರಾಮದಲ್ಲಿ ೮೩೪ ಹಿಜ್ರಿಶಕೆಯಲ್ಲಿ ಇಹಲೋಕ ತ್ಯಜಿಸಿದರು. ಆಗ ಹಜ್ರತ್‌ಶಾಹ್ ಖಲೀಲುಲ್ಲಾಹ್ ಖುದ್ದಿಸ್ಸಿರಾರು ತಮ್ಮ ಈರ್ವರು ಪುತ್ರರೊಂದಿಗೆ ಅಂದರೆ ಹಜ್ರತ್‌ಶಾಹ್ ಹಬೀಬುಲ್ಲಾಹ್ ಹಾಗೂ ಹಜ್ರತ್‌ಶಾಹ್ ಮುಹಿಬ್ಬುಲ್ಲಾಹ್ ಖುದ್ದಿಸ್ಸಿರಾಹುಮಾರೊಂದಿಗೆ ಮುಹಮ್ಮದಾಬಾದಕ್ಕೆ ಆಗಮಿಸಿದರು. ಹಜ್ರತ್‌ಶಾಹ್ ಹಬೀಬುಲ್ಲಾಹ್ ಖುದ್ದಿಸ್ಸಿರ್ರಾಹ್‌ರು ಸುಲ್ತಾನ್ ಅಹ್ಮದ್‌ಶಾಹನ ಅಳಿಯರಾದರು ಹಾಗೂ ಹಜ್ರತ್‌ಶಾಹ್ ಮುಹೀಬುಲ್ಲಾಹ್(ಖು) ಸುಲ್ತಾನ್ ಅಲ್ಲಾವುದ್ದೀನ್ ಇಬ್ನ ಸುಲ್ತಾನ್ ಅಹ್ಮದ್‌ಶಾಹ್‌ರ ಅಳಿಯರಾದರು.

ಹಜ್ರತ್‌ಶಾಹ್ ಹಬೀಬುಲ್ಲಾಹ್(ಖು)ರು ತಮ್ಮ ತಂದೆಯವರ ಜೇಷ್ಠ ಪುತ್ರರಾಗಿದ್ದರು. ಆದರೆ ಅವರಿಗೆ ಯೋಧರಾಗುವ ಬಯಕೆಯಿತ್ತು. ಈ ಕಾರಣದಿಂದ ಪೀಠಾಧಿಪತಿಯನ್ನಾಗಿ ತಮ್ಮ ಚಿಕ್ಕ ಸಹೋದರರಾದ ಹಜ್ರತ್‌ಶಾಹ್ ಮುಹೀಬುಲ್ಲಾಹ್ ಖುದ್ದಿಸ್ಸಿರ್ರಾರನ್ನು ಮಾಡಿದರು ಹಾಗೂ ತಾವು ಸಾಮ್ರಾಜ್ಯದ ಕಾರ್ಯದಲ್ಲಿ ತೊಡಗಿದರು ಮತ್ತು ಅಲ್ಲಾವುದ್ದೀನ್ ಬಹಮನಿಯ ಪುತ್ರರಾದ ಹಿಮಾಯೂಶಾಹ್‌ನ ಕಾಲದಲ್ಲಿ ಬಾದಶಾಹ್‌ನ ಚಿಕ್ಕ ಸಹೋದರನಾದ ಹಸನ್‌ಖಾಂನೊಂದಿಗೆ ಸಾಂಗತ್ಯ ಹೊಂದಿರುವುದರಿಂದ ಅವರು ಬಂಧನಕ್ಕೊಳಗಾದರು. ಕೆಲ ದಿನಗಳ ನಂತರ ಶಿಷ್ಯರ ಪ್ರಯತ್ನದಿಂದ ಬಂದೀಖಾನೆಯಿಂದ ಮುಕ್ತರಾಗಿ ಬಿಜಾಪುರಕ್ಕೆ ಆಗಮಿಸಿದರು. ಶಿರಾಜ್‌ಖಾನ್ ಜುನ್ನೈದಿ ಥಾನೇದಾರ್‌ನು ಮೋಸ ಹಾಗೂ ವಂಚನೆಯಿಂದ

ವರ್ತಿಸಿದನು ಹಾಗೂ ಅವರನ್ನು ಬಂಧಿಸಿ ಆ ಶೋಷಣೆಗೈವ ಹಿಮಾಯೂಶಾಹ್‌ನ ಬಳಿಗೆ ಕಳುಹಿಸಲು ನಿರ್ಧರಿಸಿದನು. ಹಜ್ರತ್‌ಶಾಹ್ ಹಬೀಬುಲ್ಲಾಹ್ ಖುದ್ದಿಸ್ಸಿರ್‍ರಾಹ್‌ರು ಬಿಲ್ಲುಬಾಣಗಳನ್ನೆತ್ತಿ ಯುದ್ಧ ಮಾಡಿದರು. ಹಾಗೂ ಹುತಾತ್ಮರಾದರು. ಈ ಘಟನೆಯು ಹಿಜ್ರಿಶಕೆ ೮೬೪ರಲ್ಲಿ ಜರುಗಿತು.

ಇವರ ಸಂತಾನವು ಮುಹಮ್ಮದಾಬಾದ್ ಬೀದರನಲ್ಲಿ ಇರುವುದು ಹಾಗೂ ಗುಲ್ಬರ್ಗಾ ಜಿಲ್ಲೆಯ ಸೇಡಂನಲ್ಲಿ ಸೈಯ್ಯದ್‌ಶಾಹ್‌ನ್ಯಾಮತುಲ್ಲಾಹ್ ಹುಸೈನಿ ಹಾಗೂ ಸೈಯ್ಯದ್‌ಶಾಹ್ ಮುಹಮ್ಮದ್‌ಔಲಿಯಾ ಮುಹಮ್ಮದ್ ಹುಸೈನಿ ಇರುವರು.

■

೧೩. ಹಜ್ರತ್ ಸೈಯ್ಯದ್ ಅಲಿಶಹೀದ್ (ಖು)

ಇಲ್ಲಿಯ ಪ್ರಸಿದ್ಧ ಯೋಧ ಹಾಗೂ ಹುತಾತ್ಮರಲ್ಲಿ ಓರ್ವರಾಗಿರುವರು. ಅವರು ಇಲ್ಲಿ ಆಗಮಿಸಿದಾಗ ಅಧರ್ಮಿಗಳ ಆಡಳಿತವಿತ್ತು ಹಾಗೂ ವಿಗ್ರಹ ಆರಾಧನೆ ಸಾಮಾನ್ಯವಾಗಿತ್ತು. ಇವರು ಆಗಮಿಸಿ ಅಧರ್ಮಿಗಳೊಂದಿಗೆ ಯುದ್ಧ ಸಾರಿ ರಣರಂಗದಲ್ಲಿ ಹುತಾತ್ಮರಾದರು. ಹೀಗೆ ಪ್ರಸಿದ್ಧಿಯಿದೆ, ಯುದ್ಧದಲ್ಲಿ ವೈರಿಯ ಮೇಲುಗೈಯಾಯಿತು ಹಾಗೂ ಇವರ ರುಂಡವನ್ನು ಮುಂಡದಿಂದ ಬೇರ್ಪಡಿಸಲಾಯಿತು ಹಾಗೂ ಮುಂಡವು ರುಂಡವಿಲ್ಲದೆಯೇ ತಮ್ಮ ವೈರಿಯೊಂದಿಗೆ ಹೋರಾಡುತ್ತಾ ಆ ಸ್ಥಳದವರೆಗೂ ತಲುಪಿತು. ಅಲ್ಲಿ ಈಗ ಅವರ ಸಮಾಧಿಯಿದೆ. ಅವರ ರುಂಡದ ಸಮಾಧಿಯು ಖಾಜಿ ಮುಹಮ್ಮದ್ ಬಾಖರ್‌ರ ಮನೆಯ ಹಿಂದುಗಡೆ ಉತ್ತರ ದಿಕ್ಕಿನಲ್ಲಿ ಮಸೀದೆಯ ಬಳಿ ಇರುವುದು. ಹಾಗೂ ಅವರ ಮುಂಡವು ಶಾಹ್ ಹಜ್ರತ್‌ಖಾದ್ರಿ(ಖು)ಯವರ ಸಮಾಧಿಯ ಬಳಿ ಅವರ ಹವೇಲಿಯ ಬಾಗಿಲ ಬಳಿ ಪೂರ್ವ ದಿಕ್ಕಿನಲ್ಲಿ ದಫನ ಹೊಂದಿರುವದು. ಅಲ್ಲಿ ಹುತಾತ್ಮರ ಬಹಳಷ್ಟು ಸಮಾಧಿಗಳಿರುವುವು. ಅವರ ತಲೆಯಿಂದ ಏನು ನೆತ್ತರು ಹರಿದಿತ್ತೋ ಆ ರಕ್ತದ ಪರಿಣಾಮವು ಹಾಗೂ ಅವರ ಬೆರಳುಗಳ ಗುರುತು ಇಂದಿನವರೆಗೂ ಕಲ್ಲಿನ ಮೇಲೆ ಉಪಸ್ಥಿತ ಇರುವುದು.

■

೧೪. ಹಾಜಿರೂಮಿ ಖುದ್ದಿಸಿರ್ರೂಹ್

ಗೌರವಾನ್ವಿತರಾದ ಹಾಜಿ ರೂಮಿಯವರು ಬಿಜಾಪುರದ ಅತೀ ಪುರಾತನರಾದ ಸೂಫಿಗಳಲ್ಲಿ ಮೊದಲಿಗರಾಗಿದ್ದಾರೆ. ಅವರು ಪಟ್ಟಣವನ್ನು ಪ್ರವೇಶಿಸಿದಾಗ ಅಜ್ಞಾನ ತಾಂಡವವಾಡುತ್ತಿತ್ತು. ನಾಸ್ತಿಕರ, ಬಹುದೇವಾರಾಧಕರ, ದೇವಧಿಕಾರಿಗಳ ನೆಲೆಯಾಗಿತ್ತು. ಇಲ್ಲಿಯ ಆಡಳಿತಗಾರರು ಹಿಂದೂ ಧರ್ಮಾನುಯಾಯಿಗಳಾಗಿದ್ದರು. ಆಗ ಬಿಜಾಪುರಕ್ಕೆ ಆಗಮಿಸಿ ಇಲ್ಲಿಯೇ ವಾಸ ಹೂಡಿದರು. ಅವರ ಆಗಮನದ ಸಮೃದ್ಧಿಯಿಂದಾಗಿ ಅಜ್ಞಾನದ ಕತ್ತಲೆ ಅಳಿದು ಸುಜ್ಞಾನದ ಬೆಳಕು ಪಸರಿಸಿತು. ನಿಧಾನವಾಗಿ ಇಸ್ಲಾಮಿನ ಪ್ರಸಾರವಾಗುತ್ತ ಇಸ್ಲಾಮಿನ ಕಾನೂನಿನಂತೆ ಎಲ್ಲಕಡೆ ಮಸೀದೆ ಕಟ್ಟಲ್ಪಟ್ಟು ನಮಾಜ್ ಪ್ರಾರಂಭವಾಗಿ ಅಜಾನ್ ಕೇಳತೊಡಗಿದವು. ಬಿಜಾಪುರವು ಮುಸ್ಲಿಮ್ ದೊರೆಗಳ ಅಧೀನಕ್ಕೆ ಬಂದಿತು. ಧಾರ್ಮಿಕ ವಿದ್ವಾಂಸರ ಹಾಗೂ ಸೂಫಿಗಳ ನೆಲೆಯಾಯಿತು. ಒಂದು ಉಲ್ಲೇಖದಂತೆ-ಯಾವ ಕಾಲದಲ್ಲಿ ಹಜ್ರತ್ ಹಾಜಿರೂಮಿ ಖುದ್ದಿಸ್ಸಿರುಹ್ ತನ್ನ ಕೆಲ ಶಿಷ್ಯರೊಂದಿಗೆ ಬಿಜಾಪುರಕ್ಕೆ ಆಗಮಿಸಿದ್ದರೋ ಆಗ ಇಲ್ಲಿ ಹಿಂದೂ ದೊರೆಗಳ ಆಡಳಿತವಿತ್ತು. ಹಜ್ರತ್‌ರಿಗೆ ನಗರದಲ್ಲಿ ವಾಸಿಸಲು ಅನುಮತಿ ನೀಡಲಿಲ್ಲ. ಆಗ ಅವರು ಪಟ್ಟಣದಿಂದ ಸ್ವಲ್ಪ ದೂರದಲ್ಲಿ ಜನವಸತಿಯ ಸಮೀಪ ನೆಲೆಸಿದರು. ಜನರು ಅಜ್ಞಾನದಿಂದಾಗಿ ಹಾಗೂ ಅವಿಶ್ವಾಸ ಅಪನಂಬಿಕೆಯಿಂದಾಗಿ ಅವರ ಶಿಷ್ಯ ಆಪ್ತರಿಗೆ ತರತರದ ತೊಂದರೆ ನೀಡತೊಡಗಿದರು. ಆದರೆ ಅವರು ಇವರ ಯಾವುದೇ ತೊಂದರೆಗೂ ಸಹನೆಯಿಂದಲೇ ವರ್ತಿಸುತ್ತಾ ಎಲ್ಲ ತರದ ಕಷ್ಟಗಳನ್ನು ಸಹಿಸಿದರು. ಅವಿಶ್ವಾಸಿಗಳು ಇವರ ಸಹನೆಯನ್ನು ಗಮನಿಸಿ ಇವರು ಎಲ್ಲ ತೆರನಾಗಿ ತೊಂದರೆ ಅನುಭವಿಸುತ್ತಾರೆ ಆದರೆ ಈ ಸ್ಥಳದಿಂದ ಕದಲುವದಿಲ್ಲ ಎಂದು ಇನ್ನಷ್ಟು ಕ್ರೂರವಾಗಿ ವರ್ತಿಸತೊಡಗಿದರು. ಪಟ್ಟಣ ಹಾಗೂ ಅದರ ಸುತ್ತಲಿನ ಎಲ್ಲ ಗ್ರಾಮಗಳಲ್ಲೂ ಈ ಸೂಚನೆ ನೀಡಲಾಯಿತು. ಏನೆಂದರೆ ಯಾರೊಬ್ಬರೂ ಮುಸ್ಲಿಮ್‌ರೊಂದಿಗೆ ಸದ್ವರ್ತನೆ ತೋರಬಾರದು ಹಾಗೂ ಅವರೊಂದಿಗೆ ಆಹಾರ ಭಂಡಾರದ ಹಾಗೂ ಇನ್ನಿತರ ದಿನನಿತ್ಯ ಅವಶ್ಯಕ ವಸ್ತುಗಳ ವ್ಯಾಪಾರವನ್ನು ಮಾಡಕೂಡದು. ಇದರಿಂದಾಗಿ ಅವರಿಗೆ ಅನ್ನ ಆಹಾರ ಸಿಗದೇ ಇರುವುದರಿಂದ ತಾವೇ ತಾವಾಗಿ ಇಲ್ಲಿಂದ ಹೊರಟು ಹೋಗುವರು. ಅದಕ್ಕಾಗಿ ಎಲ್ಲರೂ ಅವರೊಂದಿಗೆ ಎಲ್ಲ ತೆರನಾದ ಸಂಬಂಧಗಳನ್ನು ಮುರಿದುಕೊಂಡರು. ಇದರಿಂದಾಗಿ ಮುಸ್ಲಿಮ್‌ರು ಮೂರು ದಿನಗಳವರೆಗೆ ಉಪವಾಸದಲ್ಲಿಯೇ ಕಳೆದರು. ನಂತರ ಅವರು ಹಜ್ರತ್ ಹಾಜಿ ರೂಮಿಯವರ ಬಳಿ ವಿನಂತಿಸಿದರು. ಏನೆಂದರೆ ನಾವು ಮೂರು ದಿನಗಳಿಂದ ಉಪವಾಸ ಮಾಡುತ್ತಲಿದ್ದೇವೆ. ಈಗ ನಿತ್ರಾಣರಾಗಿದ್ದೇವೆ ಹಾಗೂ ಹಸಿವೆಯನ್ನು ತಡೆಯದಾಗಿದ್ದೇವೆ

ಅದೇ ವೇಳೆ ಅಕಸ್ಮಿಕವಾಗಿ ಒಂದು ದಷ್ಟಪುಷ್ಟವಾದ ಹಸು ಯಾವುದನ್ನು ಇಲ್ಲಿಯ ದೊರೆಯು ಪೂಜಿಸುತ್ತಿದ್ದನೋ ಅದು ಅಲ್ಲಿಗೆ ಬಂದಿತು. ಹಜ್ರತ್‌ರ ದೃಷ್ಟಿಯು ಅದರ ಮೇಲೆ ಬಿದ್ದಿತು. ಆಗ ಅವರು ಅನುಯಾಯಿಗಳಿಗೆ ಆದೇಶ ನೀಡಿದರು. ಈ ಹಸುವನ್ನು ಅಲ್ಲಾಹುವಿನ ಹೆಸರಿನಲ್ಲಿ ಬಲಿ ನೀಡಿ ನಿಮ್ಮ ಆಹಾರವಾಗಿಸಿಕೊಳ್ಳಿರಿ. ಆದರೆ ಅದರ ಚರ್ಮ ತಲೆ ಹಾಗೂ ಕಾಲುಗಳನ್ನು ಒಂದು ಕಡೆ ತೆಗೆದಿಡಿರಿ. ಶಿಷ್ಯರು ಮೂರು ದಿನಗಳಿಂದ ಉಪವಾಸದಿಂದಿದ್ದವರು ಹಸಿವೆಯನ್ನು ತಡೆಯದೇ ಗುರುವಿನ ಆದೇಶ ಪಾಲಿಸಿ ತಮ್ಮ ಹೊಟ್ಟೆಯನ್ನು ತುಂಬಿಸಿಕೊಂಡರು ಹಾಗೂ ಆದೇಶದಂತೆ ತಲೆ, ಚರ್ಮ ಹಾಗೂ ಕಾಲುಗಳನ್ನು ಒಂದು ಬದಿಯಲ್ಲಿ ತೆಗೆದಿಟ್ಟರು. ಸಂಜೆಯ ವೇಳೆಗೆ ಯಾವಾಗ ರಾಜನ ಹಸುವನ್ನು ಪೂಜಿಸುವ ಸಮಯವಾಯಿತೋ ಅದನ್ನು ಹುಡುಕಲು ಪ್ರಾರಂಭಿಸಿದಾಗ ಅದು ಎಲ್ಲಿಯೂ ಸಿಗಲಿಲ್ಲ. ಕೊನೆಗೆ ಸುತ್ತಮುತ್ತಲಿನ ಹಳ್ಳಿಗಳು ಹಾಗೂ ಕಾಡಿನಲ್ಲಿ ಹುಡುಕಲಿಕ್ಕಾಗಿ ಜನರು ಓಡಿದರು. ಕೊನೆಗೆ ಎಲ್ಲಿಯೂ ಕಾಣದೇ ನಿರಾಶರಾಗಿ ಮರಳಿದರು. ಮರುದಿನ ತುಂಬಾ ವಿಹ್ವಲರಾಗಿ ಹೀಗೆ ಯೋಚಿಸತೊಡಗಿದರು. ಈ ಮುಸಲ್ಮಾನರ ಹೊರತಾಗಿ ಬೇರೆ ಯಾರು ಈ ಕೆಲಸ ಮಾಡಬಲ್ಲರು? ಯಾರು ನಮ್ಮ ಎಲ್ಲ ತೊಂದರೆಗಳನ್ನು ಸಹಿಸಿದರೊ ಹಾಗೂ ಮೂರು ದಿನಗಳಿಂದ ಉಪವಾಸದಿಂದ ಇದ್ದಾರೊ ಅವರಲ್ಲದೇ ಈ ಹಸುವನ್ನು ಜೀರ್ಣಿಸಿಕೊಳ್ಳುವವರು ಇನ್ನಾರಿದ್ದಾರೆ? ನಿಶ್ಚಯವಾಗಿಯೂ ಇದೇ ಜನರು ಹಸುವನ್ನು ತಿಂದು ಹಸಿವೆಯನ್ನು ಈಡೇರಿಸಿಕೊಂಡಿದ್ದಾರೆ. ಅವರನ್ನು ಕೇಳಿ ಅವರ ಮೇಲೆ ದಬ್ಬಾಳಿಕೆ ಮಾಡಿ ಅವರನ್ನು ಇಲ್ಲಿಂದ ಹೊರತೆಗೆಯುವುದು. ಅದಕ್ಕಾಗಿ ಈ ನಿರ್ಧಾರವನ್ನು ತೆಗೆದುಕೊಂಡು ಹಜ್ರತ್‌ರ ಶಿಷ್ಯರ ಬಳಿ ಆಗಮಿಸಿ ವಿಚಾರಿಸಿದರು. ಹಲವಾರು ರೀತಿಯಲ್ಲಿ ಒತ್ತಾಯಿಸಿದಾಗ ಶಿಷ್ಯರು ಹಜ್ರತ್‌ರ ಬಳಿಗೆ ಬಂದು ವಿಷಯವನ್ನು ಅರುಹಿದಾಗ ಹಜ್ರತ್‌ರು ಆ ಜನರನ್ನು ತಮ್ಮ ಬಳಿಗೆ ಕರೆದು ಹೀಗೆ ಹೇಳಿದರು. ನೀವು ನಮ್ಮ ಮೇಲೆ ಆಹಾರ, ನಿತ್ಯೋಪಯೋಗಿ ವಸ್ತುಗಳ ವ್ಯಾಪಾರವನ್ನು ನಿಷೇಧಿಸಿದ್ದೀರಿ, ಶೋಷಿತರಾದ ಇವರು ನಿಮ್ಮ ಹಸುವನ್ನು ಆಹಾರವನ್ನಾಗಿಸಿಕೊಂಡರು ಈಗ ಆ ಹಸುವನ್ನು ನಿಮಗೆ ನೀಡುವೆನು, ಆದರೆ ಒಂದು ಷರತ್ತಿದೆ. ನೀವು ಅವರಿಗೆ ಯಾವುದೇ ತೆರನಾಗಿ ತೊಂದರೆ ನೀಡಬಾರದು. ಆ ಕೋಮಿನವರು ಹಜ್ರತ್‌ರ ಷರತ್ತನ್ನು ಒಪ್ಪಿಕೊಂಡರು. ಮತ್ತೆ ಹಜ್ರತ್‌ರು ತಮ್ಮ ಅನುಯಾಯಿಗಳಿಗೆ ಸಂಜ್ಞೆ ನೀಡಿದರು. ಸಂರಕ್ಷಿಸಿಟ್ಟ ಹಸುವಿನ ತಲೆ, ಚರ್ಮ ಹಾಗೂ ಕಾಲುಗಳನ್ನು ತಮ್ಮೆದುರು ತರಲು ಹೇಳಿದರು. ಹಜ್ರತ್‌ರು ಆ ಚರ್ಮವನ್ನು ಹಾಸಿ ತಲೆ ಹಾಗೂ ಕಾಲುಗಳನ್ನು ಅವುಗಳ ಸ್ಥಳಗಳಲ್ಲಿಟ್ಟು ತಮ್ಮ ದಂಡದಿಂದ ತಟ್ಟಿ ಹೀಗೆ ಉಚ್ಚರಿಸಿದರು ಏಳು !

ಮತ್ತೇನಿತ್ತು? ಆ ಹಸುವು ಒಮ್ಮೆಲೆ ಕೂಗುತ್ತಾ ಎದ್ದು ಹೊರಟು ನಿಂತಿತು. ಅದನ್ನು ನೋಡಿದ ಇವರೆಲ್ಲರೂ ಆಶ್ಚರ್ಯಚಕಿತರಾಗಿ ಸ್ತಂಭಿಭೂತರಾದರು ಮತ್ತು ಹಜ್ರತ್‌ರಿಗೆ ಗೌರವಸಲ್ಲಿಸಿ ಅಲ್ಲಿಂದ ಮರಳಿದರು. ಮತ್ತೆ ಅಂದಿನಿಂದ ಎಂದಿಗೂ ತಮ್ಮ ಪ್ರಮಾಣದಿಂದ ಹಿಂದೆ ಸರಿಯಲಿಲ್ಲ. ಮತ್ತು ಮುಸ್ಲಿಮ್‌ರಿಗೆ ತೊಂದರೆ ನೀಡಲಿಲ್ಲ. ಹೀಗೆ ಉಲ್ಲೇಖಿಸಲಾಗಿದೆ-ಏನೆಂದರೆ ಹಜ್ರತ್ ಹಾಜಿರೂಮಿಯವರು ಹಜ್ರತ್ ಖ್ವಾಜಾ ಉಸ್ಮಾನ್ ಹಾರೂನಿರವರ ಶಿಷ್ಯರಾಗಿದ್ದಾರೆ. ಹಜ್ರತ್ ಖ್ವಾಜಾ ಮೊಹಿನುದ್ದೀನ್ ಚಿಷ್ತಿ(ರ)ಯವರ ಗುರುಗಳಾಗಿದ್ದಾರೆ.

ಹಜ್ರತ್‌ರ ನಿಧನದ ದಿನಾಂಕ 'ಆಫ್ತಾಬ್ ಲಾವಲ್ದ' ಎಂದರೆ ೫೫೫ ಹಿಜ್ರಿಶಕೆ. ಎಂದು ಹೊರಡುತ್ತದೆ.

ಹಲವಾರು ವಿದ್ವಾಂಸರಿಂದ ತಿಳಿದು ಬರುವುದೇನೆಂದರೆ ಹಜ್ರತ್ ಹಾಜಿರೂಮಿ, ಹಾಜಿ ಮಕ್ಕಿ, ಹಾಜಿ ಸೈಫುಲ್ ಮಲಿಕ್ ಹಾಗೂ ಶೇಖ ಸಲಾವುದ್ದೀನ್ ಖುದ್ದಸಲ್ಲಾ ಅಸ್ರಾರ್‌ಹಮ್ ಇವರಲ್ಲಿ ಪ್ರತಿಯೊಬ್ಬರು ಪವಾಡ ತೋರಿದವರು, ಹಾಗೂ ಜನಪ್ರಿಯ ಸೂಫಿಗಳಾಗಿರುವರು ಹಾಗೂ ಎಲ್ಲರೂ ಒಂದೇ ಪಂಥದ ಸಹೋದರರಾಗಿರುವರು ಹಾಗೂ ಹಜ್ರತ್ ಖ್ವಾಜಾ ನಿಜಾಮುದ್ದೀನ್ ಔಲಿಯಾ ಖುದ್ದುಸ್ಸಲ್ಲಾಹ್‌ರಿಂದ ಖಿಲಾಫತ್ ಪಡೆದವರಾಗಿದ್ದಾರೆ. ಹಾಜಿರೂಮಿಯವರ ನಿಜವಾದ ಹೆಸರು ತಿಳಿದುಬಂದಿಲ್ಲ. ಅವರ ಸಂತಾನದ ಬಳಿಯಿರುವ ವಂಶಾವಳಿಯನ್ನು ಗಮನಿಸಿದಾಗ ಅದರಲ್ಲಿ ಅಧಿಕೃತ ಸೂಫಿವಂಶಸ್ಥರ ಸಹಿಗಳಿವೆ ಹಾಗೂ ಅದರಲ್ಲಿ ಹೀಗೆ ಬರೆಯಲ್ಪಟ್ಟಿದೆ. ಪರಗಣ ಕರಂಜಗಿಯಲ್ಲಿ ಬರುವ ಬಬಲಾದ ಗ್ರಾಮವನ್ನು ಅಲಿ ಆದಿಲ್‌ಶಾಹ್‌ನಿಂದ ಅವರ ಸಂತಾನದ ಉಪಜೀವನಕ್ಕಾಗಿ ಹಾಗೂ ಉರುಸಿನ ವೆಚ್ಚಕ್ಕಾಗಿ ಬಳುವಳಿಯಾಗಿ ನೀಡಲಾಯಿತು. ಆ ಗ್ರಾಮದಲ್ಲಿ ಅವರ ಸಂತಾನ, ಶಿಷ್ಯಂದಿರು ಹಾಗೂ ಹಿತೈಷಿಗಳು ಸುಮಾರು ಐದು ಸಾವಿರದಷ್ಟು ಜನ ಸಮಾಧಿಸ್ಥರಾಗಿರುವರು ಆಲಂಗೀರ್ ಔರಂಗಜೇಬರ ಪುತ್ರನಾದ ಯುವರಾಜನಾದ ಮುಹಮ್ಮದ್ ಕಾಮ್‌ಬಕ್ಷರು ಹಾಜಿರೂಮಿಯವರ ದರ್ಗಾ ಷರೀಫಕ್ಕೆ ಬಂದು ದರ್ಶನ ಪಡೆದು ಕೃತಕೃತ್ಯನಾದನು. ಹಜ್ರತ್ ಹಾಜಿ ರೂಮಿಯವರ ಉರಿಸಿನುತ್ಸವದ ದಿನಾಂಕ : ೨೨ ಜಿಲ್‌ಹಿಜ್ಜಾ ಇರುವದು. ಅವರ ದರ್ಗಾಷರೀಫವು ಕೋಟೆಯ ಒಳಗಡೆ ಶಹಾಪೇಟದಲ್ಲಿ ಅರ್ಕಕಿಲ್ಲೆಯ ಕಂದಕ್ಕಿನ ಉತ್ತರ ದಿಕ್ಕಿನಲ್ಲಿದೆ. ಹಾಗೂ ಹಾಜಿಮಕ್ಕಿ ಖುದ್ದುಸಿರ್ರಹಯವರ ದರ್ಗಾಷರೀಫವು ಬಿಜಾಪುರದ ಪಶ್ಚಿಮ ದಿಕ್ಕಿನಲ್ಲಿರುವ ತಿಕೋಟಾ ಗ್ರಾಮದ ಹೊರಭಾಗದಲ್ಲಿದ್ದು ಅದು ಬಿಜಾಪುರ ನಗರದಿಂದ ಐದು ಕೋಸ್‌ದಲ್ಲಿದೆ. ಹಾಗೂ ಹಾಜಿ ಸೈಫುಲ್ ಮಲಿಕ್‌ಖುದ್ದುಸ್ಸಿರಾಹ್ ಬಿಜಾಪುರದ ಪೂರ್ವ ದಿಕ್ಕಿನಲ್ಲಿರುವ

ಹೈದ್ರಾ ಗ್ರಾಮದಲ್ಲಿದೆ. ಇದು ಭೀಮಾನದಿಯಿಂದ ೨ ಕೋಸ್ ದೂರದಲ್ಲಿರುವುದು ಹಾಗೂ ಹಜ್ರತ್ ಶೇಖ ಸಲಾವುದ್ದೀನ್ (ಖು)ರ ದರ್ಗಾವು ಪೂನಾದಲ್ಲಿ ಪ್ರಸಿದ್ಧವಾಗಿದೆ.

ಅನುವಾದಕರ ಟಿಪ್ಪಣಿ : ಸಂಶೋಧನೆಯಿಂದ ತಿಳಿದು ಬಂದದ್ದೇನೆಂದರೆ ಹಜ್ರತ್ ಹಾಜಿರೂಮಿ ಖುದಸ್ಸಿರ್ರಾಹ್‌ರ ಸಂತಾನ ಈಗ ಉಳಿದಿರುವುದಿಲ್ಲ.

■

*

ಆದಿಲ್‌ಶಾಹಿ ಕಾಲದಲ್ಲಿ ಬಿಜಾಪುರಕ್ಕೆ ಆಗಮಿಸಿದ ಸೂಫಿ ಹಾಗೂ ಮಹಾಪುರುಷರ ವಿವರ

೧೫. ಹಜ್ರತ್‌ಶಾಹ್ ಅಸಗರಲ್ಲಾಹ್ ಹುಸೈನಿ (ಖ)

ಇವರ ವಂಶಾವಳಿಯು ಐದನೆಯ ಪೀಳಿಗೆಯಲ್ಲಿ ಹಜ್ರತ್ ಖ್ವಾಜಾ ಬಂದಾನವಾಜ್ ಗೇಸುದರಾಜ್, ಹಜ್ರತ್‌ಖ್ವಾಜಾ ಸೈಯ್ಯದ್ ಮುಹಮ್ಮದ್ ಹುಸೈನಿ(ಖ) ಅವರ ಮೊಮ್ಮಗ ಹಜ್ರತ್‌ಶಾಹ್ ಸಫೀರಲ್ಲಾಹ್ ದಖ್ಖಿನ್ ಮೇಕ್ ತಲುಪುತ್ತದೆ. ಈ ಮಹಾಪುರುಷರು ಖಿಲಾಫತ್‌ವನ್ನು ತಮ್ಮ ಪೂರ್ವಜರಿಂದ ಹೊಂದಿರುವರು. ತಮ್ಮ ವಂಶದಲ್ಲಿಯೇ ಅತ್ಯಂತ ವಿದ್ವಾಂಸರೂ ಪ್ರಸಿದ್ಧರೂ ಆಗಿರುವರು ಹಾಗೂ ಸೂಫಿತ್ವದಲ್ಲಿ ಪರಿಪೂರ್ಣರಾಗಿದ್ದರು. ಶಿಷ್ಯರ ಉನ್ನತಿಗಾಗಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಸುಲ್ತಾನ್ ಇಬ್ರಾಹಿಂ ಆದಿಲ್‌ಶಾಹ್‌ನ ಕಾಲದಲ್ಲಿ ಬಿಜಾಪುರಕ್ಕೆ ಆಗಮಿಸಿದರು ಹಾಗೂ ಜಿಲ್‌ಹಿಜ್ಜಾ ತಿಂಗಳ ಹದಿನೇಳನೆಯ ದಿನಾಂಕದಂದು ಇಹಲೋಕ ತ್ಯಜಿಸಿದರು. ಇವರ ಸಮಾಧಿಯು ಮೆಕ್ಕಾ ದರ್ವಾಜಾದ ಬಳಿ ಇರುವುದು.

ಇವರ ಸಂತತಿಯಿಂದ ಈಗ ಬಿಜಾಪುರದಲ್ಲಿ ಸೈಯ್ಯದ್ ಸಫಿಯುಲ್ಲಾಹ್ ಹುಸೈನಿ, ಸೈಯ್ಯದ್‌ಸೈಯ್ಯದ್ ಅಸದುಲ್ಲಾಹ್ ಹುಸೈನಿ ಇರುವವರು ಹಾಗೂ ಅವರ ವಾರ್ಷಿಕ ಉರುಸ್ ಉತ್ಸವ ಜರುಗಿಸುವರು.

■

೧೬. ಹಜ್ರತ್‌ಶಾಹ್ ಹಿದಾಯತುಲ್ಲಾಹ್ ಹುಸೈನಿ (ಖು)

ಇವರು ಹಜ್ರತ್ ಖ್ವಾಜಾ ಬಂದಾನವಾಜ್ ಸೈಯ್ಯದ್ ಮುಹಮ್ಮದ್ ಹುಸೈನಿ ಗೇಸುದರಾಜ್(ಖು)ರ ಸಂತತಿಯವರು. ಆದಿಲ್‌ಶಾಹಿ ಬಾದಶಾಹ್‌ರ ಕಾಲದಲ್ಲಿ ಇವರು ಬಿಜಾಪುರಕ್ಕೆ ಆಗಮಿಸಿದರು. ಹಾಗೂ ತಮ್ಮ ಪೂರ್ವಜರ ಸಂಪ್ರದಾಯದಂತೆ ಗುರುಸ್ಥಾನದಲ್ಲಿದ್ದು ತಮ್ಮ ಶಿಷ್ಯವೃಂದಕ್ಕೆ ಅರಿವಿನ ಬೆಳಕನ್ನು ನೀಡಲು ನಿರತರಾಗಿದ್ದರು. ಇವರ ಸಮಾಧಿಯು ಪಟ್ಟಣದ ಹೊರಗೆ ಜೋಹರಾಪುರದಲ್ಲಿ ಇಬ್ರಾಹಿಂ ಆದಿಲ್‌ಶಾಹ್ ಜಗದ್ಗುರುವಿನ ಸಮಾಧಿಯ ಬಳಿ ಪಶ್ಚಿಮ ಭಾಗಕ್ಕೆ ಇರುವುದು. ಸಮಾಧಿಯ ಮೇಲೆ ಗುಂಬಜ್ ಇರುವುದು.

■

೧೭. ಖುತ್ಬುಲ್ ಅಖ್ತಾಬ್ ಹಜ್ರತ್ ಶೆಹಬಾಜ್ ಹುಸೈನಿ(ಖು)

ಇವರು ತಮ್ಮ ಕಾಲದ ಬಹು ಪ್ರಸಿದ್ಧ ಹಾಗೂ ಮಹಾಪುರುಷರಲ್ಲಿ ಓರ್ವರಾಗಿದ್ದಾರೆ ಹಾಗೂ ಹಜ್ರತ್‌ಶಾಹ ಹಿದಾಯತುಲ್ಲಾಹ್ ಹುಸೈನಿ(ಖು) ಅವರ ಮೊಮ್ಮಗರಾಗಿರುವರು. ಇವರ ಸಮಾಧಿಯು ಪಟ್ಟಣದ ನಡುವೆ ಶಹಾಪೇಟ ಬಳಿ ಇರುವುದು. ಹಾಗೂ ಊರೂಸಷರೀಫವು ಜಿಲ್‌ಖಾಯಿದಾ ತಿಂಗಳ ೨೦ನೆಯ ದಿನಾಂಕದಂದು ಜರಗುವುದು.

ಇವರಿಗೆ ಸಂತಾನವಿರುವದಿಲ್ಲ. ಪುತ್ರಿಯ ಕಡೆಯಿಂದ ದಾದೇಪೀರಾಂ ಸಾಹೇಬ್ ಅವರು ಸೈಯ್ಯದ್ ಶಾಹ್‌ಕರೀಮ್ ಮುಹಮ್ಮದ್ ಸಾಹೇಬರ ಸಂತತಿಯಿಂದಿರುವರು. ವಾರ್ಷಿಕ ಉರುಸುತ್ಸವ ಆಚರಿಸುವರು.

■

೧೮. ಹಜ್ರತ್‌ಶಾಹ್ ಅಬುಲ್‌ಹಸನ್ ಘಖರಾಬಾದಿ (ಖು)

ಇವರು ಖ್ವಾಜಾ ಸೈಯ್ಯದ್ ಮುಹಮ್ಮದ್ ಹುಸೈನಿ ಗೇಸುದರಾಜ್‌ರ ಸಂತತಿಯಿಂದಿರುವರು. ಸೂಫಿತ್ವದಲ್ಲಿ ಪರಿಪೂರ್ಣತೆ ಹೊಂದಿದ್ದರು. ಶಿಷ್ಯರಿಗೆ ಮಾರ್ಗದರ್ಶನ ಹಾಗೂ ಉಪದೇಶದಿಂದ ಜೀವನ ಪಾವನಗೊಳಿಸುತ್ತಿದ್ದರು. ಸುಲ್ತಾನ್ ಇಬ್ರಾಹಿಂ ಆದಿಲ್‌ಶಾಹ್ ಜಗದ್ಗುರು ಹಾಗೂ ಅವರ ಪುತ್ರ ಸುಲ್ತಾನ್ ಮುಹಮ್ಮದ್ ಆದಿಲ್‌ಶಾಹ್‌ರು ಇವರನ್ನು ಬಹಳೇ ಗೌರವಪೂರ್ವಕವಾಗಿ ಆದರಿಸುತ್ತಿದ್ದರು. ಇವರು 'ಘಖರಾಬಾದಿ'ಯೆಂದು ಪ್ರಸಿದ್ಧಿಯಾದುದರ ಕಾರಣ ಹೀಗೆ ವಿವರಿಸುತ್ತಾರೆ. ಇವರು

ಜೆಹರಾಪುರದಲ್ಲಿ 'ಸಮಾಧಿಯನ್ನು' ಮೊದಲೇ ನಿರ್ಮಿಸಿ 'ಫಖರಾಬಾದ್' ಎಂದು ಹೆಸರನ್ನಿಟ್ಟು ಮತ್ತು ಅಲ್ಲಿಯೇ ಸಮಾಧಿಸ್ಥರಾದರು.

■

೧೯. ಹಜ್ರತ್‌ಶೇಖ ಮುಂತಜಿಬುದ್ದೀನ್ ಖಾದ್ರಿ ಅಲ್‌ಸಿದ್ದೀಖಿ ಅಲ್‌ಘೋಲ್ಕಿ ಪ್ರಸಿದ್ಧಿಯಾದ ಮಿಯಾಬಾ ಸಾಹೇಬ್(ಖ)

ಇವರು ಬಿಜಾಪುರದ ಮಹಾಪುರುಷರಲ್ಲಿ ಓರ್ವರಾಗಿದ್ದಾರೆ ಹಾಗೂ ಇವರು ಹಜ್ರತ್‌ಶಾಹ್ ಅಲಿಖತೀಬ್ ಗುಜ್ರಾತಿ(ಖ)ಯವರ ಸಂತತಿಯವರು. ಇವರ ವಂಶಾವಳಿಯು ಪ್ರಥಮ ಖಲೀಫಾರಾದ ಯಾರೆಗಾರ್, ಶಫೀರೋಜೆಮೆಹಷರ್ ಅಮೀರುಲ್ ಮೋಮಿನೀನ್ ಸಿದ್ದೀಖೆ ಅಕ್ಬರ್ ರಜಿಯುಲ್ಲಾಹ್ ಅನಹು ಇವರಿಗೆ ತಲುಪುತ್ತದೆ. ಹಜ್ರತ್ ಶೇಖ ಮುಂತಜಿಬುದ್ದೀನ್ ಖಾದ್ರಿ(ಖ) ತಮ್ಮ ಜನ್ಮಸ್ಥಳವಾದ ಘೋಲ್ಬಾವನ್ನು ತ್ಯಜಿಸಿ ಮುಹಮ್ಮದಾಬಾದ್ ಬೀದರಕ್ಕೆ ಆಗಮಿಸಿದರು ಹಾಗೂ ಹಜ್ರತ್ ಶೇಖ ಇಬ್ರಾಹಿಂ ಮಗ್ಧುಮ್‌ಜಿ ಶೇಖುಲ್‌ವಾಶಾಯಿಖ್ ಹಜ್ರತ್ ಶಂಶುದ್ದೀನ್ ಮುಹಮ್ಮದ್ ಮುಲ್ತಾನಿ ಬಿದರಿ(ಖ)ಯವರ ಪುತ್ರರಾಗಿದ್ದರು. ಅವರಿಂದ ಬೈಯ್ಯತ್ ಪಡೆದು ಖಿಲಾಫತ್ ಹೊಂದಿ ಖಾದ್ರಿಯಾ ಪರಂಪರೆಯನ್ನು ಪಡೆದರು. ಅವರಿಂದ ಅತ್ಯುತ್ಕೃಷ್ಟ ಜ್ಞಾನನಿಧಿ ಹೊಂದಿ ಬಿಜಾಪುರಕ್ಕೆ ಆಗಮಿಸಿ ಶಿಷ್ಯವೃಂದವನ್ನು ಸಮೃದ್ಧಗೊಳಿಸಿದರು ಹಾಗೂ ಷರೀಯತ್‌ನ್ನು ಪರಿಪೂರ್ಣ ರೀತಿಯಲ್ಲಿ ಪಾಲಿಸಿ, ಧರ್ಮವಂತ ನಡೆಯಲ್ಲಿ ತಮಗೆ ತಾವೇ ಸಾಟಿಯಾಗಿದ್ದರು. ಹಾಗೂ ಲೌಕಿಕ ಲೋಭಿ ಜನರ ಸಾಂಗತ್ಯವನ್ನು ಸಂಪೂರ್ಣವಾಗಿ ತ್ಯಜಿಸಿದ್ದರು. ಇವರು ಸುಲ್ತಾನ್ ಇಬ್ರಾಹಿಂ ಆದಿಲ್‌ಶಾಹ್ ದ್ವಿತಿಯರ ಸಮಕಾಲೀನರಾಗಿದ್ದಾರೆ. ಇವರ ಸಮಾಧಿಯು ಬಿಜಾಪುರ ಪಟ್ಟಣದಿಂದ ಹೊರಗೆ ಇಬ್ರಾಹಿಂಪುರ ದರ್ವಾಜಾದ ಬಳಿ ಉತ್ತರ ದಿಕ್ಕಿನಲ್ಲಿ ಇರುವುದು. ಇವರು ಹೇಳುತ್ತಾರೆ ಯಾವ ವ್ಯಕ್ತಿಯು ನನ್ನ ಸಮಾಧಿಯೆದುರು ದಫನ್ ಹೊಂದುವನೋ ಮುಹ್ಮದ್(ಸ) ಅವರ ಕೃಪೆಯಿಂದ ಆತ ನನ್ನ ವಶದಲ್ಲಿರುವನು ಹಾಗೂ ಆತನು ನರಕಾಗ್ನಿಯಿಂದ ಉಳಿಯುವನು. ವಲ್ಲಾಹ್ ಅಲಮ್ ಈ ವಿಷಯದ ರಹಸ್ಯವನ್ನು ಅಲ್ಲಾಹುವೇ ಬಲ್ಲನು. ಇವರ ಸುಪುತ್ರ ಶೇಖ ಮುಹಿಂಯುದ್ದೀನ್(ರ) ಅವರು ಮಹಾನ್ ವಿದ್ವಾಂಸರಾಗಿದ್ದರು ಹಾಗೂ ವಾಗ್ಮಿಗಳಾಗಿದ್ದರು.

ಇವರ ಉಪದೇಶ ಹಾಗೂ ಉತ್ತಮ ನುಡಿಗಳಿಂದಾಗಿ ಕಲ್ಲು ಹೃದಯಗಳೂ ಕರಗಿ ಮಾನವೀಯತೆಯನ್ನು ಮೆರೆಯುತ್ತಿದ್ದವು. ಇವರು ತಮ್ಮ ತಂದೆಯವರ

ಸಮಾಧಿಯ ಬಳಿಯೇ ಸಮಾಧಿಸ್ಥರಾಗಿರುವರು. ಇವರ ಸಂತತಿಯವರು ಬಿಜಾಪುರ ಹಾಗೂ ಬಿಜಾಪುರದ ಗೊಳಸಂಗಿ ಗ್ರಾಮದಲ್ಲಿ ಇರುವರು.

ಹಜ್ರತ್‌ರ ಸಂತಾನದಿಂದ ಗೊಳಸಂಗಿ ಗ್ರಾಮದಲ್ಲಿ– ಶಾಹ್ ವಜಿಯುದ್ದೀನ್ ಖಾದ್ರಿಸಾಹೇಬ್ ಜಹಗೀರದಾರ ಹಾಗೂ ಅವರ ಪುತ್ರರಾದ ನೂರುಲ್ಲಾಹ್ ಸಾಹೇಬ್ ಖಾದ್ರಿ, ರಹ್ಮತುಲ್ಲಾಹ್ ಸಾಹೇಬ ಖಾದ್ರಿ, ಗೇಸುದರಾಜ್ ಖಾದ್ರಿ ಹಾಗೂ ಮುಹಮ್ಮದ್ ಅಕ್ರಮ್ ಉರ್ಫ ಮುರ್ಶಿದ್‌ಪೀರಾಂ ಹಾಗೂ ಅವರ ಸಹೋದರರಾದ ಮುಂತಜ್ಜಿಬ್ ಸಾಹೇಬರ ಪುತ್ರರಾದ ಸಾಹೇಬ್ ಹುಸ್ಯೆನಿ ಹಾಗೂ ಇನ್ನಿತರ ಸಹೋದರರು ಮಿಯಾನ್ ಸಾಹೇಬರ ಪುತ್ರ ಅಬ್ದುಲ್ ಹಮೀದ್ ಹಾಗೂ ಮೂರನೆಯ ಸಹೋದರ ರಹಿಮುದ್ದೀನ್‌ರ ಪುತ್ರರಾದ ಮಹಿಯುದ್ದೀನ್‌ರು ಇರುವರು. ಅವರು ತಿಗಣಿಬಿದರಿ ಗ್ರಾಮದಲ್ಲಿ ಇರುವರು. ಬಿಜಾಪುರದಲ್ಲಿ ಶೇಖ ಮುಹಿಯುದ್ದೀನ್ ವಾಯಿಜ್‌ಯವರ ಸಂತಾನ ಹಾಜಿ ಇಬ್ರಾಹಿಂಸಾಹೇಬ್ ಮುತವಲ್ಲಿ ಆಸಾರ್ ಷರೀಫ್‌ರ ಪುತ್ರರಾದ ಮುಹಮ್ಮದ್ ಗೌಸ್ ಮೀರಾಂ ಸಾಹೇಬ್ ಹಾಗೂ ಶೇಖ ಮೀರಾಂ ಸಾಹೇಬ್ ಹಾಗೂ ಶೇಖ ಮುಹಮ್ಮದ್ ಸಾಹೇಬ್ ಇರುವರು.

■

೨೦. ಹಜ್ರತ್‌ಶೇಖ ಹಮೀದ್‌ಖಾದ್ರಿ (ಖು)

ಬಿಜಾಪುರದ ಪ್ರಸಿದ್ಧ ಸೂಫಿಗಳಲ್ಲಿ ಪ್ರಮುಖರಾಗಿ ಹಜ್ರತ್ ಶೇಖ ಹಮೀದ್‌ಖಾದ್ರಿ(ಖು)ಯವರು ಪರಿಗಣಿಸಲ್ಪಟ್ಟಡುತ್ತಾರೆ. ಇವರು ಕುರ್‌ಆನ್ ಕಂಠಪಾಠಸ್ಥರು ಹಾಗೂ ಸುಮಧುರ ಸ್ವರವುಳ್ಳವರಾಗಿದ್ದರು. ತಮ್ಮ ಕಾಲದಲ್ಲಿಯ ಜ್ಞಾನಿ, ವಿದ್ವಾಂಸರ ಬೆಳಕಾಗಿದ್ದರು. ಜ್ಞಾನದಲ್ಲಿ ತಮಗೆ ತಾವೇ ಸಾಟಿಯಾಗಿದ್ದರು. ಮುಹಮ್ಮದ್(ಸ) ಅವರ ಚರ್ಯೆಯು ಇವರ ಜೀವನದಲ್ಲಿ ಉನ್ನತ ದರ್ಜೆಯನ್ನು ತಲುಪಿತ್ತು.

ಶರ್ತೆ ಅವ್ವಲ್ ದರ್ ತರೀಖೆ ಮಾರೀಫತ್ ದಾನೀಕೆ ಚಿಸ್ತ।
ತರ್ಕ್ ಕರ್ದನ್ ಹರ್ ದೋ ಆಲಂ ರಾಬ ಪುಸ್ತ ಪಾ ಜದನ್ ॥

ಮಾರೀಫತ್‌ದ ಜ್ಞಾನ ಗಳಿಕೆಯಲ್ಲಿ ಮೊದಲನೆಯ ಷರತ್ತೇನೆಂದು ತಿಳಿ

ಹಾಗಾದರೆ ಕೇಳು, ಇಹಪರಗಳೆರಡನ್ನೂ ಬಿಡಬೇಕು ಹಾಗೂ ಇವುಗಳನ್ನು ಕಾಲಕೆಳಗೆ ತುಳಿಯಬೇಕು. ಸ್ವೇಚ್ಛೆಗಳನ್ನು ನಿಗ್ರಹಗೊಳಿಸಿ, ಜಗತ್ತಿನ ಎಲ್ಲಾ ಆಮಿಷಗಳನ್ನು ಬದಿಗಿರಿಸಿ

ಏಕದೇವನಿಷ್ಠೆಯೊಂದಿಗೆ ತಮ್ಮ ಬದುಕನ್ನು ಪಾವನಗೊಳಿಸಿಕೊಂಡು ಶಿಷ್ಯೋತ್ತಮರ ಏಳಿಗೆಗಾಗಿ ತಮ್ಮ ಸರ್ವಸ್ವವನ್ನು ಮುಡಿಪಾಗಿಟ್ಟಿದ್ದರು.

ಇವರು ತಮ್ಮ ಸಿಂಧ್ ಪ್ರಾಂತದಿಂದ ಹೊರಟು ಮುಹಮ್ಮದಾಬಾದ್‌ಕ್ಕೆ ಆಗಮಿಸಿದರು ಹಾಗೂ ಹಜ್ರತ್ ಶೇಖ ಮಖ್ದೂಮ್‌ಜಿ ಖಾದ್ರಿಯವರ ಖಲೀಫಾರಾದ ಹಜ್ರತ್‌ಶೇಖ ಮುಹಮ್ಮದ್‌ಗಂಜ ಬಕ್ಷರ ಶಿಷ್ಯತ್ವವನ್ನು ಸ್ವೀಕರಿಸಿ ಆತ್ಮೋನ್ನತಿಯನ್ನು ಗಳಿಸಿದರು ಹಾಗೂ ಕೆಲ ಸಮಯದ ನಂತರ ಜಗದ್ಗುರು ಇಬ್ರಾಹಿಂ ಆದಿಲ್‌ಶಾಹ್ ದ್ವಿತೀಯನ ಆರಂಭದ ಕಾಲದಲ್ಲಿ ಬಿಜಾಪುರಕ್ಕೆ ಆಗಮಿಸಿದರು. ಸೂಫಿವರ್ಯರನ್ನು ಬಹಳೇ ಗೌರವಿಸುತ್ತಿದ್ದ ಇಬ್ರಾಹಿಂ ಆದಿಲ್‌ಷಾಹ್‌ನು ಹಜ್ರತ್ ಹಮೀದ್ ಖಾದ್ರಿಯವರನ್ನು ಬಹಳೇ ಆದರದೊಂದಿಗೆ ಬರಮಾಡಿಕೊಂಡು ಅವರನ್ನು ಭೇಟಿಯಾಗಿ ಸಮೃದ್ಧಿಯನ್ನು ಪಡೆದನು. ಇದಲ್ಲದೇ ಅವರಿಗೆ ಬಿಜಾಪುರದ ಕೋಟೆಗೆ ಸನಿಹವಿರುವ ಪ್ರಸಿದ್ಧ ನೌಬಾಗ್ ಪ್ರದೇಶವನ್ನು ಕಾಣಿಕೆಯಾಗಿ ಅರ್ಪಿಸಿದನು. ಆದರೆ ಇವರು ಜನರಿಂದ, ಗದ್ದಲದಿಂದ ದೂರವಿರುವ ಏಕಾಂತಪ್ರಿಯರಾಗಿದ್ದರಿಂದ 'ನೌಬಾಗ್'ದ ಕಾಣಿಕೆ ನಿರಾಕರಿಸಿದರು. ಆದರೆ ಮಲಿಕಾಯೆ ಜಹಾಂ ಫಾತಿಮಾ ಸುಲ್ತಾನಾ ಆದಿಲ್‌ಶಾಹ್ ಪ್ರಥಮನ ಮಹಾರಾಣಿಯು ಯಾವ ಮಸೀದೆ, ಗುಂಬಜ್ ಹಾಗೂ ಬಾವಿ ಯಾವುದಕ್ಕೆ ಗುಮ್ಮಟ ಬಾವಡಿ ಎನ್ನುವರು ಅದನ್ನು ವಕ್ಫ ಮಾಡಲಾಗಿತ್ತು. (ದೇವನ ಸಂಪ್ರೀತಿ ಗಳಿಸುವದಕ್ಕೋಸ್ಕರ ಸಾರ್ವಜನಿಕರ ಹಿತದೃಷ್ಟಿಯಿಂದ ಜನರಿಗೆ ಅರ್ಪಿಸಲಾಗಿತ್ತು). ಮಸೀದೆಯ ಬಳಿ ತಮ್ಮ ಮಕ್ಕಳಿಗಾಗಿ ಎರಡು ಗುಂಬಜ್‌ಗಳನ್ನು ನಿರ್ಮಿಸಿದ್ದರು. ಇವರು ಏಕಾಂತ ಬಯಸಿ ಆ ಮಸೀದೆಯ ಮೂಲೆಯಲ್ಲಿ ಇರತೊಡಗಿದರು. ಬಾದಶಹನು ಹೀಗೆಂದನು. ಈ ಭೂಮಿಯು ಪುಣ್ಯದಾಯಕವಾಯಿತು. ತಾವು ಸ್ವೀಕರಿಸಿರುವುದರಿಂದ ಆ ಭೂಮಿಯೊಂದಿಗೆ ಇನ್ನೂ ವಿಸ್ತರಿಸಿ ಕೋಟೆಗೋಡೆಯವರೆಗೆ ಯಾವುದು ಶಾಹೀ ಭೂಮಿಯಾಗಿತ್ತೋ ಅದನ್ನು ಸಹ ತಮ್ಮ ಸೇವಕರಿಗೆ ಹಾಗೂ ಫಕೀರರಿಗೆ ಇರುವುದಕ್ಕಾಗಿ ನೀಡಲಾಗಿದೆ ಎಂದು ಸಾರಿದನು.

ಹಜ್ರತ್‌ರು ಇದನ್ನು ಪಡೆದು ಒಪ್ಪಿ ಫಕೀರರಿಗಾಗಿ ಒಂದು ಗುಡಿಸಲನ್ನು ಹಾಕಿ ದೇವಾರಾಧನೆಯಲ್ಲಿ ತೊಡಗಿಕೊಂಡರು ಹಾಗೂ ಈ ಗುಂಬಜ್‌ಗಳಲ್ಲಿ ಬಹಳಷ್ಟು ಆರಾಧನೆಯನ್ನು ಮಾಡಲಾಯಿತು. ಕೊನೆಯುಸಿರಿರುವರೆಗೆ ಅದೇ ಸ್ಥಳವು ಅವರ ಇರುವಿನ ಸ್ಥಳವಾಗಿತ್ತು ಹಾಗೂ ಅಲ್ಲಿಯೇ ಸಮಾಧಿಸ್ಥರಾದರು.

ತರಾಅಜ್ ಕಂಗೂರಯೇ ಅರ್ಷ ಮೀ ಜನಂದ್ ಸಫೀರ್ ।
ನದಾನಮತ್ ಕೆ ಬದಿಂ ದಾಮಗಾಹ್‌ಚೆ ಉಫ್ತಾದಸ್ತ ॥

ಏ ತುಝುಕೋ ಅರ್ಷಕೆ ಉಪರಸೆ ದೇತೆ ಹೈಂ ಆವಾಜ್ ।
ಖಬರ್ ನಹೀ ತುಝೆ ಇಸ್ ದಾಮಗಾಹ್ ಮೆ ಕ್ಯಾ ಹೈ ॥

"ಓ! ನಿನಗೆ ನೀಡುವೆವು ಆಕಾಶದಿಂದ ಈ ಕರೆ! ನಿನಗೆ ತಿಳಿದಿಲ್ಲ. ಈ ಸಮಾಧಿಯಲ್ಲಿ ಇರುವುವರು ಯಾರೆಂದು?" ಜಿಲ್‌ಹಿಜ್ಜಾದ ೨೨ನೆ ದಿನಾಂಕದಂದು ೧೦೧೧ ಹಿಜ್ರಿಶಕೆಯಲ್ಲಿ ಅವರ ಆತ್ಮವು ದೇಹದಿಂದ ಬೇರ್ಪಟ್ಟು ಅಲ್ಲಾಹನ ಸನ್ನಿಧಿಗೆ ಮರಳಿತು.

ಹಜ್ರತ್‌ರ ನಿಧನದ ದಿನಾಂಕವು 'ಶಫಿಯೇ ಕಯಾಮತ್' ಎಂದರೆ ೧೦೧೧ ಎಂದಾಗುವುದು ಇವರ ಸಮಾಧಿಯು ಎಲ್ಲಿ ಅವರ ಗುಡಿಸಲು ಇತ್ತೋ ಅಲ್ಲಿಯೇ ಇರುವುದು.

■

೨೧. ಹಜ್ರತ್ ಶೇಖ ಲುತ್ಫಲ್ಲಾಹ್ ಖಾದ್ರಿ (ಖು)

ಇವರು ಈ ನಗರದ ಪ್ರಸಿದ್ಧ ಹಾಗೂ ಪ್ರಮುಖ ಸೂಫಿಗಳಲ್ಲೋರ್ವರಾಗಿದ್ದಾರೆ. ಹಜ್ರತ್ ಶೇಖ ಹಮೀದ್ ಖಾದ್ರಿ(ಖು)ರ ಖಲೀಫಾ (ಉತ್ತರಾಧಿಕಾರಿ) ಹಾಗೂ ಪೀಠಾಧಿಪತಿ (ಸಜ್ಜಾದ ನಶೀನ್)ರಾಗಿದ್ದಾರೆ. ಅವರಂತೆಯೇ ಇವರೂ ಸಹ ನಿರಾಡಂಬರಿ, ಏಕಾಂತಪ್ರಿಯ, ಅಲ್ಲಾಹುವಿಗೆ ಸಮರ್ಪಿತ, ಮನೋನಿಗ್ರಹ ಇಂದ್ರಿಯ ನಿಗ್ರಹಗಳಲ್ಲಿ ಅಚ್ಚೊತ್ತಿದಂತಿದ್ದರು. ಅವರ ಗುರುವಿನ ಸರ್ವಗುಣಗಳೂ ಇವರಲ್ಲಿಯೂ ಸಂಪನ್ನವಾಗಿದ್ದವು. ಜನಸೇವೆ, ಶಿಷ್ಯವೃಂದದ ಉನ್ನತಿ ಆಧ್ಯಾತ್ಮದ ಪರಿಮಳದ ಪರಿಚಯವನ್ನು ಮನಗಾಣಿಸುವುದಕ್ಕಾಗಿ ತಮ್ಮ ಬದುಕನ್ನು ಮುಡುಪಾಗಿಟ್ಟ ಮಹನೀಯರು ಇವರಾಗಿದ್ದರು. ಇವರ ಮಾರ್ಗದರ್ಶನದಲ್ಲಿ ಇವರ ಶಿಷ್ಯರೂ ಸಹ ಆಧ್ಯಾತ್ಮದ ಮೇರು ಶಿಖರದ ತುತ್ತತುದಿಯನ್ನು ತಲುಪಿದರು. ಸುಜನರಿಂದ ತಿಳಿದು ಬರುವದೇನೆಂದರೆ ಆ ಅವಧಿಯಲ್ಲಿ ಖುತ್ಬುಲ್ ಔಲಿಯಾ, ನಾಯಿಬೆರಸೂಲಲ್ಲಾಹ್ ಹಜ್ರತ್ ಶಾಹ್ ಸಿಬ್‌ಗತುಲ್ಲಾಹ್ ಹುಸೈನಿ ಮದನಿ ಭೆಹ್‌ರೂಚಿ–(ಖು) ಬಿಜಾಪುರದಲ್ಲಿದ್ದರು. ಹಜ್ರತ್ ಶೇಖ ಲುತ್ಫುಲ್ಲಾಹ್(ಖು)ರನ್ನು ಆಧ್ಯಾತ್ಮಿಕ ಜ್ಞಾನದಲ್ಲಿ ಉನ್ನತಿ ಸಾಧಿಸಿರುವುದನ್ನು ಕಂಡು ಅವರನ್ನು ತಮ್ಮ ಅಂತಃಶಕ್ತಿಯ ಮುಖಾಂತರ ತಮ್ಮತ್ತ ಸೆಳೆದುಕೊಂಡರು. ಹಜ್ರತ್ ಶೇಖ ಹಮೀದ್ ಖಾದ್ರಿ(ಖು)ರಿಗೆ ಯಾವಾಗ ಈ ವಿಷಯವು ತಿಳಿಯಿತೋ ಆಗ ಹಜ್ರತ್‌ಶಾಹ್ ಸಿಬ್‌ಗತುಲ್ಲಾಹ್(ಖು)ರ ಬಳಿ ಈ ಸಂದೇಶವನ್ನು ಕಳುಹಿಸಿದರು. ಹಜ್ರತ್‌ರಿಗೆ ಸಾವಿರಾರು ಅತಿರಥ ಮಹಾರಥರಾದ ಶಿಷ್ಯಗಣವಿದ್ದು ಈ ವೃದ್ಧನಿಗೆ ಸಹಾಯಕನಾಗಿ ಶೇಖ ಲುತ್ಫುಲ್ಲಾಹ್(ಖು) ಓರ್ವರೇ ಇರುವರು. ಆಗ ಹಜ್ರತ್ ಶಾಹ್ ಸಿಬಗತುಲ್ಲಾಹ್‌ರು ಹೀಗೆ ಹೇಳಿದರು. ನಾವು ಶೇಖ ಲುತ್ಫುಲ್ಲಾಹ್(ಖು)ರನ್ನು ತಮಗೆ ಬಿಟ್ಟುಕೊಟ್ಟೆವು. ಯಾವಾಗ ಹಜ್ರತ್‌ಶೇಖ ಹಮೀದ್

ಖಾದ್ರಿಯವರು ತಮ್ಮ ಒಳಗಣ್ಣಿನಿಂದ ಶೇಖ ಲುತ್ಫಲ್ಲಾಹ್(ಖು)ರ ಆಂತರ್ಯವನ್ನು ಅರಿತರೋ ಆಗ ಅವರಿಗೆ ತಿಳಿದದ್ದು ಹಜ್ರತ್ ಸಿಬಗತಲ್ಲಾಹರು ಇವರನ್ನು ಪರಿಪೂರ್ಣವಾಗಿಯೇ ತಮ್ಮವರನ್ನಾಗಿಸಿ ನನ್ನ ಬಳಿ ಮರಳಿಸಿದ್ದಾರೆ.

ಹಜ್ರತ್ ಶೇಖ ಹಮೀದ್‌ಖಾದ್ರಿಯುವರು ಹಜ್ ಹಾಗೂ ಮದೀನಾ ದರ್ಶನಗೈಯುವ ಸಂಕಲ್ಪ ತೊಟ್ಟು ಹಜ್ರತ್‌ರ ಭೇಟಿಗೆಂದು ಬಂದರು ಹಾಗೂ ಕಾಬಾ ದರ್ಶನಕ್ಕೆ ಹೋಗುತ್ತಿರುವೆನೆಂದು ತಮ್ಮ ಮನದಿಚ್ಛೆಯನ್ನು ವ್ಯಕ್ತಪಡಿಸಿದರು ಹಾಗೂ ಆ ಕಾರಣಕ್ಕಾಗಿ ತಾವು 'ಫಾತೆಹ್' (ಪ್ರಾರ್ಥನೆ) ಮಾಡಬೇಕು. ಹಜ್ರತ್‌ರು ಸ್ಪಷ್ಟವಾಗಿ ಹೇಳಿದರು. ನೀವು ಹೋಗಲಾರಿರಿ ಆದರೆ ನಿಮ್ಮ ಒಳತಿಗಾಗಿ ಪ್ರಾರ್ಥಿಸುವೆನು. ಆನಂತರ ಹಜ್ರತ್‌ಶೇಖ ಹಮೀದ್ ಖಾದ್ರಿ ಹಾಗೂ ಹಜ್ರತ್ ಲುತ್ಫುಲ್ಲಾಹ್(ಖಿ)ರು ಬಂದರ್ ವಾಬಲ್‌ದವರೆಗೂ ತಲುಪಿದರು. ಕೊನೆಗೂ ಹಜ್ರತ್ ಶೇಖ ಹಮೀದ್‌ಖಾದ್ರಿಯವರಿಗೆ ಪವಿತ್ರ ಮಕ್ಕಾ, ಮದೀನಾಕ್ಕೆ ಹೋಗಲಾಗಲಿಲ್ಲ ಹಾಗೂ ಹಜ್ರತ್ ಲುತ್ಫುಲ್ಲಾಹ್(ಖು) ಹಜ್ ಹಾಗೂ ಜಿಯಾರತೆನಬವಿ ಯಾತ್ರೆ ಮುಗಿಸಿ ಮರಳಿಬಂದರು. ಅಲ್ಲಿಯವರೆಗೂ ಹಜ್ರತ್ ಶೇಖ್ ಹಮೀದಖಾದ್ರಿ(ಖು)ಯವರು ಬಂದರ್‌ವಾಬಲ್‌ದಲ್ಲಿಯೇ ಉಳಿದುಕೊಂಡಿದ್ದರು. ನಂತರ ಇರ್ವರೂ ಸೇರಿ ಬಿಜಾಪುರಕ್ಕೆ ಮರಳಿ ಬಂದರು. ಹಜ್ರತ್ ಶೇಖ ಲುತ್ಫುಲ್ಲಾಹ್(ಖು) ರಬ್ಬಿಲ್ ಆಖಿರ್‌ದ ೧೧ನೆಯ ದಿನಾಂಕದಂದು ಹಿಜ್ರಿಶಕೆ ೧೦೨೧ರಲ್ಲಿ ಇಹಲೋಕ ತ್ಯಜಿಸಿ, ಪರಲೋಕಕ್ಕೆ ಪ್ರಯಾಣ ಬೆಳೆಸಿದರು. ಇವರ ಸಮಾಧಿ ಸ್ಥಳವು ಹಜ್ರತ್‌ಶೇಖ ಹಮೀದ್ ಖಾದ್ರಿಯವರ ಸಮಾಧಿಯ ಮಗ್ಗುಲಲ್ಲಿ ಇರುವದು. ಇವರ ದತ್ತುಪುತ್ರ ಖಲೀಫಾ ಹಾಗೂ ಪೀಠಾಧಿಪತಿಯುವರಾದ ಸೈಯ್ಯದ್ ಮುಸ್ತಫಾ ಖಾದ್ರಿ(ಖು) ತಾವು ಪೀಠಾಧಿಪತಿಯಾಗಿರುವ ಅವಧಿಯಲ್ಲಿ ಈರ್ವರ ಗುಮ್ಮಟಗಳನ್ನು ನಿರ್ಮಿಸಿದರು. ಈ ಪವಿತ್ರ ದರ್ಗಾವು ಸಾರ್ವಜನಿಕರ ದರ್ಶನಕ್ಕೆ ಸುಪ್ರಸಿದ್ಧವಾಗಿವೆ. ಅವರ ಖಾನ್‌ಖಾದಲ್ಲಿ ನಿರಂತರವಾಗಿ ವಿದ್ಯಾಪ್ರಸಾರ, ಧಾರ್ಮಿಕ ಜ್ಞಾನ ಪ್ರಸಾರ ನಡೆದು ಅನೇಕರು ವಿದ್ವತ್ ಸಂಪತ್ತಿನಿಂದ ಸಮೃದ್ಧರಾದರು. ಜನಾಬ್ ಹಜ್ರತ್‌ಶಾಹ್ ಅಬ್ದುರ್ರಜಾಕ್ ಖಾದ್ರಿ(ಖು)ಯವರ ಪ್ರಾರಂಭ ಕಾಲದಲ್ಲಿ ಹನ್ನೆರಡು ವರ್ಷದವರೆಗೆ ಈ ಖಾನ್‌ಖಾದಲ್ಲಿ ಶಿಕ್ಷಣವೇತ್ತರಾದರು. ಈ ಖಾನ್‌ಖಾಹ್‌ದಲ್ಲಿ ಪ್ರತಿ ಮಂಗಳವಾರ 'ಕುರ್‌ಆನ್‌ಷರೀಫ್'ದ ಓದು ಪೂರ್ಣಗೊಳಿಸಲಾಗುತ್ತಿತ್ತು ಹಾಗೂ ಪವಿತ್ರ ಸಮಾಧಿಗಳ ದರ್ಶನ ನಡೆಯುತ್ತಿತ್ತು ಹಾಗೂ ಪ್ರಸಾದ ರೂಪದಲ್ಲಿ ಭೋಜನವು ಸಾರ್ವಜನಿಕರಿಗೆ ತಲುಪುತ್ತಿತ್ತು. ಇವರ ಸಂತಾನದಿಂದ ಯಾರೂ ಉಳಿಯಲಿಲ್ಲ. (ಅನುವಾದಕ)

■

೨೨. ಹಜ್ರತ್ ಶೇಖ ಅಬ್ದುಸ್ಸಮದ್ ಖಾದ್ರಿ ಕನ್‌ಆನಿ (ಖು)

ಇವರು ತಮ್ಮ ಕಾಲದ ಶ್ರೇಷ್ಠ ಸೂಫಿಗಳಾಗಿದ್ದರು. ಧರ್ಮಜ್ಞಾನದಲ್ಲಿ ಇವರಿಗೆ ಇವರೇ ಸಾಟಿಯಾಗಿದ್ದರು ಹಾಗೂ ಸತ್ಯಧರ್ಮದತ್ತ ಜನರನ್ನು ದಿಟ್ಟವಾಗಿ ಕರೆ ನೀಡುವುವರಾಗಿದ್ದರು. ಇವರಿಗೆ ಹಜ್ರತ್ ಶೇಖ ಲುತ್ಫುಲ್ಲಾಹ್ ಖಾದ್ರಿಯವರಿಂದ ಖಿಲಾಫತ್ ಹಾಗೂ ಉತ್ತರಾಧಿಕಾರತ್ವ ಲಭಿಸಿತು. ಇವರ ಕೆಲವು ವಂಶಾವಳಿಯಲ್ಲಿ ನೇರವಾಗಿ ಹಜ್ರತ್ ಶೇಖ ಹಮೀದ್ ಖಾದ್ರಿ(ಖು) ಇವರಿಂದ ಖಿಲಾಫತ್ ಲಭಿಸಿದ ವಿವರ ಸಿಗುತ್ತದೆ. ಇವರು ಷರೀಯತ್‌ಜ್ಞಾನದಲ್ಲಿ ಉತ್ತುಂಗತೆಯನ್ನು ಪ್ರಾಪ್ತಿಮಾಡಿ ದೃಢಚಿತ್ತರಾಗಿದ್ದು, ಶಿಷ್ಯವೃಂದವನ್ನು ಈ ಧಾರ್ಮಿಕ ಶಿಕ್ಷಣದಲ್ಲಿ ಅತ್ಯುನ್ನತ ಮಟ್ಟಕ್ಕೊಯ್ಯುತ್ತಿದ್ದರು. ಇವರು ಹಜ್ರತ್ ಸೈಯ್ಯದ್ ಮುಹಮ್ಮದ್ ಉರ್ಫ್ ಶಾಹ್ ಹಜ್ರತ್ ಹುಸೈನಿ (ಖು) ಹಜ್ರತ್ ಖ್ವಾಜಾ ಬಂದಾನವಾಜ್ ಗೇಸುದರಾಜ್‌ರ ಸಂತಾನದವರು. ಇವರು ತಮ್ಮ ಕಾಲದ ಶ್ರೇಷ್ಠ ಸೂಫಿವರ್ಯರಾಗಿದ್ದರು ಹಾಗೂ ಹಜ್ರತ್ ಶೇಖ ಅಬ್ದುಸ್ಸಮದ್‌ರ ಆಪ್ತ ಉತ್ತರಾಧಿಕಾರಿಯಾಗಿದ್ದರು.

ಒಂದು ದಿನ ಹಜ್ರತ್ ಶೇಖ ಅಬ್ದುಸ್ಸಮದ್(ಖು)ರವರು ಒಂದು 'ನಖ್ಷ' (ತಾಯಿತ) ತಯಾರಿಸಿ ಗೆರೆಗಳನ್ನು ಎಳೆದು ಎಲ್ಲ ಸ್ಥಳಗಳಲ್ಲಿ ಸಂಖ್ಯೆಗಳನ್ನು ಬರೆದು ಒಂದು ಪ್ರಮುಖ ಖಾನೆಯನ್ನು ಮಾತ್ರ ಹಾಗೆಯೇ ಬಿಟ್ಟು ಪ್ರಾತಃಕರ್ಮಕ್ಕೆಂದು ಹೋದರು. ಆಗ ಅಲ್ಲಿ ಪ್ರವೇಶಿಸಿದ ಹಜ್ರತ್ ಶಾಹ್ ಹಜ್ರತ್ ಹುಸೈನಿ ಆ ತಾಯಿತವನ್ನು ಎತ್ತಿಕೊಂಡು ವೀಕ್ಷಿಸಿದರು ಹಾಗೂ ಒಂದು ಸ್ಥಳದಲ್ಲಿ ಸಂಖ್ಯೆಯಿರದಿದ್ದನ್ನು ಕಂಡು ಲೇಖನಿ ಹಾಗೂ ದವಾತ್ ಅಲ್ಲಿಯೇ ಇದ್ದುದನ್ನು ನೋಡಿ ಆ ಸ್ಥಳದಲ್ಲಿ ಯಾವ ಸಂಖ್ಯೆಗಳ ಅವಶ್ಯಕತೆಯಿತ್ತೋ ಅದನ್ನು ತುಂಬಿದರು. ತಕ್ಷಣ ಅದರ ಪರಿಣಾಮವು ಸ್ಪಷ್ಟ ಗೋಚರವಾಗತೊಡಗಿತು. 'ಹುನ್' ಹಾಗೂ ಅಶ್ರಫಿ (ಚಿನ್ನದ ನಾಣ್ಯಗಳ) ಸುರಿಮಳೆಯಾಗತೊಡಗಿತು. ಹಜ್ರತ್‌ಶಾಹ್ ಹಜ್ರತ್ ಹುಸೈನಿ ಈ ಸ್ಥಿತಿ ಕಂಡು ಆಶ್ಚರ್ಯಚಕಿತರಾದರು. ಸ್ವಲ್ಪ ಸಮಯದ ನಂತರ ಅಲ್ಲಿಗೆ ಆಗಮಿಸಿದ ಹಜ್ರತ್ ಶೇಖ ಅಬ್ದುಸ್ಸಮದ್ ಅವರು ಈ ದೃಶ್ಯವನ್ನು ಕಂಡು ಕೋಪಗೊಂಡು ಕೇಳಿದರು. ಈ ಅನವಶ್ಯಕ ಕಾರ್ಯ ಯಾರಿಂದ ಜರುಗಿತು? ಹಜ್ರತ್‌ಶಾಹ್ ಹಜ್ರತ್ ಹುಸೈನಿ ಹೆದರುತ್ತ ಕಂಪಿಸುತ್ತ ಹೇಳಿದರು. ಈ ಕಾರ್ಯವು ನನ್ನಿಂದಾಗಿದೆ. ಆಗ ಮುರ್ಶಿದ್ ಹೀಗೆ ಹೇಳಿದರು. ಏನು? ನಮ್ಮ ಬಳಿ ಈ ಶಕ್ತಿಯಿರಲಿಲ್ಲವೇ ನೀವು ಹೀಗೆ ಮಾಡಿದಿರಿ? ಮತ್ತೆ ಈ ತಾಯಿತ ಎತ್ತಿಕೊಂಡು ಆ ಸಂಖ್ಯೆಗಳನ್ನು ತೆಗೆದುಹಾಕಿದರು. ತಕ್ಷಣವೇ ಆ ಚಿನ್ನದ ನಾಣ್ಯಗಳು ಮಾಯವಾದವು. ಇವರ ಪವಾಡಗಳು ಅಸಂಖ್ಯವಿರುವುವು. ಇವರು ಮೊಹರ್‍ರಮ್ ತಿಂಗಳ ೫ನೆಯ ದಿನಾಂಕದಂದು ಹಿಜ್ರಿಶಕೆ ೧೧೬೧ರಲ್ಲಿ ಈ

ಲೋಕಕ್ಕೆ ವಿದಾಯ ಹೇಳಿದರು. ಇವರ ಸಮಾಧಿಸ್ಥಳವು ಹಜ್ರತ್ ಶೇಖ ಹಮೀದ್ ಖಾದ್ರಿ (ಖ) ಹಾಗೂ ಹಜ್ರತ್ ಲುತ್ಫುಲ್ಲಾಹ್ ಖಾದ್ರಿ(ಖ) ಅವರ ಸಮಾಧಿಗಳ ಬಳಿ ಪೂರ್ವದಿಕ್ಕಿನಲ್ಲಿ ಇರುವುದು ಅಲ್ಲಿ ದರ್ಶನಾರ್ಥಿಗಳು ಆಗಮಿಸಿ ಗೌರವ ಸಲ್ಲಿಸುತ್ತಾರೆ.

ಹಜ್ರತ್ ಶೇಖ ಅಬ್ದುಲ್ ಕರೀಂ ಅನ್ಸಾರಿ ಲಾಹೋರಿ ಅವರು 'ಲಮ್‌ಆತ್' ಪುಸ್ತಿಕೆಯ ಮೇಲೆ ಟಿಪ್ಪಣಿ ಮಾಡಿರುವರು. ಅವರು ಹಜ್ರತ್‌ರ ಉತ್ತರಾಧಿಕಾರಿಗಳಾಗಿದ್ದಾರೆ. ಹಜ್ರತ್‌ರ ಜ್ಞಾನವಾಹಕರಾಗಿ ಅವರ ಪರಂಪರೆಯನ್ನು ಮುಂದುವರಿಸಿದವರಾಗಿದ್ದಾರೆ.

■

೨೩. ಹಜ್ರತ್ ಸೈಯ್ಯದುಸ್ಸಾದಾತ್, ನಾಯಿಬೆ ರಸೂಲುಲ್ಲಾಹ್ ಶಾಹ್ ಸಿಬ್‌ಗತುಲ್ಲಾಹ್ ಹುಸೈನಿ ಭೈರೂಚಿ ಮದನಿ (ಖ)

ಇವರ ಸಮಾಧಿ ಸ್ಥಳವು ಪವಿತ್ರ ಮದೀನಾ ಮುನವ್ವರಾದಲ್ಲಿರುವುದು ಹಾಗೂ ಈ ರೋಜವತುಲ್ ಔಲಿಯಾ ಗ್ರಂಥದಲ್ಲಿ ಆ ಸೂಫಿಗಳ ವಿವರವಿರುವುದು ಅವರು ಬಿಜಾಪುರದಲ್ಲಿ ಸಮಾಧಿಸ್ಥರಾಗಿದ್ದಾರೆ. ಆದರೆ ಹಜ್ರತ್ ಸಿಬಗತುಲ್ಲಾಹ್‌ರು ಈ ಪಟ್ಟಣದಲ್ಲಿ ಆಗಮಿಸಿದ್ದರು. ಇವರ ಸಾಂಗತ್ಯದಿಂದ ಇಲ್ಲಿಯ ಜನರಿಗೆ ಸಮೃದ್ಧಿ ಲಭಿಸಿತ್ತು. ಹಲವಾರು ಸೂಫಿಗಳು ಇವರ ಮಾರ್ಗದರ್ಶನ ಹೊಂದಿ ಆತ್ಮೋನ್ನತಿ ಪಡೆದರು. ಅವರ ಪವಾಡಗಳನ್ನಿಲ್ಲಿ ಪ್ರಸಾದ ರೂಪದಲ್ಲಿ ವಿವರಿಸಲಾಗುತ್ತದೆ. ಮೌಲಾನಾ ಹಜ್ರತ್ ಹಬೀಬುಲ್ಲಾಹ್ (ಖ) ಅವರ ಉತ್ತರಾಧಿಕಾರಿಗಳಲ್ಲಿ ಒಬ್ಬರಾಗಿದ್ದಾರೆ. ತಮ್ಮ ಪುಸ್ತಕದಲ್ಲಿ ಹೀಗೆ ಉಲ್ಲೇಖಿಸುತ್ತಾರೆ. ಹಜ್ರತ್ ಸಿಬಗತುಲ್ಲಾಹ್‌ರವರು ತಮ್ಮ ಪ್ರೌಢವಯಸ್ಸಿಗೆ ತಲುಪಿದಾಗ ಲೌಕಿಕ, ಪಾರಲೌಕಿಕ ಹಾಗೂ ಆತ್ಮಜ್ಞಾನ ಅರಿಯುವ ಸದಿಚ್ಛೆಯಿಂದ ತಮ್ಮ ಸ್ವನಗರವಾದ ಭೈರೂಚ್‌ನಿಂದ ಅಹ್ಮದಾಬಾದ್‌ಕ್ಕೆ ಆಗಮಿಸಿದರು. ಅಲ್ಲಿ ಹಜ್ರತ್ ಉಸ್ತಾದುಲ್‌ಬಶರ್, ತಾಜುಲ್ ಔಲಿಯಾ ಮುರ್ಶಿದುಲ್ ಅರ್ಫ ಸೈಯ್ಯದುಸ್ಸಾದಾತ್ ಹಜ್ರತ್‌ಶಾಹ್ ವಜಿಯುದ್ದೀನ್ ಹುಸೈನಿ ಅಲ್ವಿ (ಖ)ರ ಬಳಿ ತಲುಪಿದರು ಹಾಗೂ ಒಂಭತ್ತು ವರ್ಷದ ಅವಧಿಯವರೆಗೆ ಅವರಲ್ಲಿ ಉಳಿದರು. ಸಮಸ್ತ ಆತ್ಮಜ್ಞಾನವನ್ನು ಗಳಿಸಿದರು. ಹಾಗೂ ಹದೀಸೇನಬ್ವಿಯಲ್ಲಿ ಪರಿಣಿತಪತ್ರ ಪಡೆದರು. ಚಿಷ್ತಿಯಾ ಪರಂಪರೆಯಲ್ಲಿ ಅವರಲ್ಲಿ ಖೈಯ್ಯತ್ ಮಾಡಿ ಆಧ್ಯಾತ್ಮಿಕ ಜ್ಞಾನ, ಜಪ ಮತ್ತು ಧರ್ಮದತ್ತ ಕರೆ ಹಾಗೂ ಸರ್ವ ಪಂಥ ಹಾಗೂ ಪರಂಪರೆಗಳ ಖಿಲಾಫತ್ ಹಾಗೂ ಅನುಮತಿ ಪಡೆದರು. ಉಲ್ಲೇಖವಿದೆ. ಜನಾಬ್ ಶಾಹ್ ವಜಿಯುದ್ದೀನ್(ಖ)ರವರ ನಿತ್ಯದ ರೂಢಿ ಇದಾಗಿತ್ತು. ಪ್ರತಿದಿನ ಮಧ್ಯಾಹ್ನ ಹಾಗೂ ರಾತ್ರಿ ಸಮಸ್ತ ವಿದ್ಯಾರ್ಥಿವೃಂದ,

ಶಿಷ್ಯವೃಂದ ಹಾಗೂ ಅನುಸರಣೆಗೈಯುವವರ ಕೋಣೆಗಳಿಗೆ ಭೇಟಿಕೊಟ್ಟು ಪ್ರತಿಯೊಬ್ಬರು ವೈಯಕ್ತಿಕವಾಗಿ ಏನು ಮಾಡುತ್ತಿದ್ದಾರೆ ಎಂಬುದನ್ನು ಗಮನಿಸುತ್ತಿದ್ದರು. ಅದರ ನಂತರ ಹಜ್ರತ್‌ರು ಹಜ್ರತ್‌ಶಾಹ್ ಸಿಬಗತುಲ್ಲಾಹ್(ಖು)ರ ಕೋಣೆಗೆ ಆಗಮಿಸಿ ಸ್ವಲ್ಪ ಸಮಯ ಅಲ್ಲಿ ಕಳೆಯುತ್ತಿದ್ದರು. ಈ ತೆರನಾಗಿ ಯಾವಾಗ ಹಜ್ರತ್‌ಶಾಹ್ ಸಿಬಗತುಲ್ಲಾಹ್(ಖು)ರು ಮುರ್ಶಿದ್‌ರ ಸಾಂಗತ್ಯದಲ್ಲಿ ಲೌಕಿಕ, ಪಾರಲೌಕಿಕ ಜ್ಞಾನಾರ್ಜಿಸಿ ಎಲ್ಲ ಹಂತಗಳಲ್ಲಿ ಉನ್ನತೋನ್ನತಿ ಹೊಂದುತ್ತಾ, ಜ್ಞಾನದಾಗರವನ್ನು ತಮ್ಮದಾಗಿಸಿಕೊಂಡು ಮುರ್ಶಿದ್‌ರ ಮನದಾಳದಂತೆ ರೂಪಗೊಂಡರು ಆಗ ಮುರ್ಶಿದ್‌ರಿಂದ ಈ ಆದೇಶ ಪಡೆದು ತಮ್ಮ ಸ್ಥಳಕ್ಕೆ (ಭೈರೂಚಿಗೆ) ಹೋಗಿ ಅಲ್ಲಿಯ ಜನರಿಗೆ ಧರ್ಮಜ್ಞಾನದ ಫಲವುಣಿಸಿ ಅವರನ್ನೂ ನೇರದಾರಿಗೆ ತರಬೇಕೆಂದು ಹಜ್ರತ್‌ರು ಭೈರೂಚಿಗೆ ಮರಳಿದರು. ಅಲ್ಲಿ ಕೆಲ ಸಮಯದವರೆಗೆ ಜನರಿಗೆ ಮಾರ್ಗದರ್ಶನ ಮಾಡಿದರು.

ಒಂದು ದಿನ ಹಜ್ರತ್‌ರು ಗಾಡಿಯಲ್ಲಿ ಸವಾರರಾಗಿ ತಮ್ಮ ಶಿಷ್ಯರೊಂದಿಗೆ ಉದ್ಯಾನವನಕ್ಕೆ ಹೊರಟರು. ಹಾದಿಯಲ್ಲಿ ಅವರ ಮನದಾಳದಲ್ಲಿ ಒಂದು ಬಯಕೆ ಉದಯಿಸಿತು. ಅದೆಂದರೆ, ಪವಿತ್ರ ಮದೀನಾ ಮುನವ್ವರಾಕ್ಕೆ ಹೋಗಬೇಕು. ಅದರ ಜೊತೆಗೆಯೇ ಹೀಗೆಂದರು, ಉದ್ಯಾನಕ್ಕೆ ಹೋಗುವ ಅವಶ್ಯಕತೆಯಿಲ್ಲ. ಮದೀನಾ ಮುನವ್ವರಾದ ಕಡೆಗೆ ಹೊರಟರು ಮತ್ತು ಅದೇ ದಿನ ಒಂದು ದಿನದ ಹಾದಿ ಸವೆಸಿದರು. ಯಾವಾಗ ಈ ಸುದ್ದಿಯು ಅವರ ಮನೆಯಲ್ಲಿ ಅವರ ಪತ್ನಿ ಬೀಬಿ ಹಜ್ರತ್ ರಾಜಿ ದೌಲತ್(ಖು) ಅವರು ಚಂಗೇಜ್‌ಖಾನ್ ಗುಜರಾತಿನ ಮಂತ್ರಿವರ್ಯನ ಪುತ್ರಿಯಾಗಿದ್ದರು. ಅವರಿಗೆ ಈ ಸುದ್ದಿಯು ತಲುಪಿತು. ಆಗ ಅವರೂ ಸಹ ಅಲ್ಪ ಸಮಯದಲ್ಲಿಯೇ ಪ್ರವಾಸದ ಅವಶ್ಯವಸ್ತುಗಳನ್ನು ಕಳಿಸಿಕೊಟ್ಟರು. ಹಜ್ರತ್‌ಶಾಹ್(ಖು)ರು ಹಜ್‌ಯಾತ್ರೆ ಮುಗಿಸಿ ಮದೀನಾ ಮುನವ್ವರಾ ತಲುಪಿ ಅಲ್ಲಿ ವಾಸಿಸತೊಡಗಿದರು ಹಾಗೂ ಪ್ರತಿದಿನ ಬೆಳಿಗ್ಗೆ ಹಾಗೂ ಸಾಯಂಕಾಲ ಹಜ್ರತ್ ಸೈಯ್ಯದುಲ್ ಅಂಬಿಯಾ ಅಲೈ ಅಫಜಲುಸ್ಸಲ್ವಾತ್ ವ ಅಕ್ಮಲೂಲ್ ಅತ್ತೈಯ್ಯಾತ್ ಹಜ್ರತ್ ಮುಹಮ್ಮದ್ (ಸ)ರ ಜಿಯಾರತ್‌ಗಾಗಿ ಹೋಗುತ್ತಿದ್ದರು. ಬಹಳೇ ಗೌರವಪೂರ್ವಕವಾಗಿ ಅವರ ಪಾದದಡಿಯಲ್ಲಿ ನಿಂತು 'ದರೂದ್‌ಷರೀಫ್'-ಜಪಿಸುತ್ತಿದ್ದರು ಹಾಗೂ ಅಪಾರ ಗೌರವದಿಂದಾಗಿ ಯಾವತ್ತೂ ಶಿರಭಾಗದ ಕಡೆ ಹೋಗಲಿಲ್ಲ. ಯಾವಾಗ ಅವರ ಉನ್ನತ ವ್ಯಕ್ತಿತ್ವ ಹಾಗೂ ಅವರ ಶ್ರೇಷ್ಠತೆ ಮದೀನಾದ ಜನರಿಗೆ ತಿಳಿಯಿತೋ ಆಗ ಅವರೆಲ್ಲ ಸಾಲುಗಟ್ಟಿ ಇವರನ್ನು ಗೌರವ ಸಲ್ಲಿಸಲು ಬಂದರು. ಆದರೆ ಹಜ್ರತ್‌ರು ಇದನ್ನು ಇಷ್ಟಪಡದೇ ಮಧ್ಯಾಹ್ನದ ಪ್ರಾರ್ಥನೆಯ (ಜೋಹರ್ ನಮಾಜ್) ನಂತರ "ಜಿಯಾರತ್"ಗಾಗಿ ಹೋಗಹತ್ತಿದರು. ಆಗ ಜನರ ಗದ್ದಲವಿರುತ್ತಿರಲಿಲ್ಲ.

ಹಜ್ರತ್ ಮೌಲಾನಾ ಹಬೀಬುಲ್ಲಾಹ್‌ರಿಂದ ಉಲ್ಲೇಖವಿದೆ, ಹಜ್ರತ್

ಸಿಬ್‌ಗತುಲ್ಲಾಹ್‌ರು ಒಂದು ದಿನ ನಿತ್ಯದ ರೂಢಿಯಂತೆ ಪೈಗಂಬರರ ಪವಿತ್ರ ಸಮಾಧಿಯ ಜಿಯಾರತ್‌ಗಾಗಿ ನಿಂತಿದ್ದರು. ತಕ್ಷಣ ರಹಸ್ಯೋತ್ಪಾಟನೆಯಾಯಿತು. ಹಜ್ರತ್ ಮುಹಮ್ಮದ್(ಸ)ರು ಸ್ವತಃ ಪ್ರಕಟವಾಗಿ "ರೋಜೆ ಮುನವ್ವರಾ"ದಿಂದ ಹೊರಬಂದರು. ಅವರ ಪವಿತ್ರ ಹಸ್ತದಲ್ಲಿ ಐದು, ಮೂರು ಮೂಲೆಯ 'ಸಮೋಸೆ' ಇದ್ದವು. ಅವುಗಳನ್ನು ನೀಡಿ ನನಗೆ ಹೀಗೆ ಹೇಳಿದರು, ಇವುಗಳನ್ನು ತಿನ್ನಿರಿ ಹಾಗೂ ದಖ್ಖನಕ್ಕೆ ಹೋಗಿರಿ ಮತ್ತೆ ನಿಮ್ಮನ್ನು ಕರೆಯುವೆನು. ಆಗ ಅವೆಲ್ಲವನ್ನು ತಕ್ಷಣ ಹುಜೂರ್‌ರ ಎದುರಲ್ಲೆ ತಿಂದು ಅಲ್ಲಿಂದ ಮರಳಿದರು ಹಾಗೂ ಹಡಗು ಹತ್ತಿ ಬಂದರ್ ದಾಬಲ್‌ಕ್ಕೆ ಬಂದರು. ಅಲ್ಲಿಂದ ಬಿಜಾಪುರಕ್ಕೆ ಇಬ್ರಾಹಿಂ ಆದಿಲ್‌ಶಾಹ್ ಬಾದಶಹ್‌ರ ಪ್ರಾರಂಭ ಕಾಲದಲ್ಲಿ ಅಂದರೆ ಹಿಜ್ರಿಶಕೆ ೧೦೦೦ದಲ್ಲಿ ಬಂದರು. ಈ ಪಟ್ಟಣದಲ್ಲಿ ೫ ವರ್ಷದವರೆಗೆ ಉಳಿದುಕೊಂಡರು.

ಯಾವಾಗ ಹಜ್ರತ್‌ರು, ಸೈಯ್ಯದ್ ಮುಹಮ್ಮದ್ ಹುಸೈನಿ ಗೇಸುದರಾಜ್‌ರ ಜಿಯಾರತ್ತಿನ ಬಯಕೆಯಿಂದ ಬಂದರ್‌ದಾಬಲ್‌ಕ್ಕೆ ಬಂದರು. ಅವರು ಮತ್ತೆ ಈ ದೇಶಕ್ಕೆ ಬರಲಾರೆನೆಂದು ತಿಳಿಸಿದ್ದರು. ಪ್ರವಾದಿಗಳ ಗೌರವವು ಅವರನ್ನು ಹೇಗೆ ತಡೆಯಿತೆಂದರೆ ಇವರು ಹಜ್ರತ್ ಸೈಯ್ಯದ್ ಮುಹಮ್ಮದ್ ಹುಸೈನಿ ಗೇಸುದರಾಜ್‌ರನ್ನು ನನ್ನ ಬಳಿಗೆ ಕಳುಹಿಸಲಿಲ್ಲ ಹಾಗೂ ನಾನು ಅವರ ಬಳಿಗೆ ಹೋಗಲಿಲ್ಲ. ಐದು ವರ್ಷದವರೆಗೆ ನನಗೆ ತಡೆಹಿಡಿದರು. ಈಗ ನಾನು ಮದೀನಾ ಮುನವ್ವರಾದ ಹೊರತಾಗಿ ಎಲ್ಲಿಯೂ ಹೋಗಲಾರೆ. ಹೀಗೆನ್ನಲಾಗುತ್ತದೆ. ಹಜ್ರತ್‌ಶಾಹ್ (ಖು) ಹಜ್ರತ್ ಮಖ್ದೂಮ್(ಖು)ರ ಸಮಾಧಿಗೆ ಓರ್ವ ಫಕೀರನನ್ನು ಕಳುಹಿಸಿದರು. ಏಕೆಂದರೆ ಅದರಿಂದ ಅವರಿಗೆ ಆತ್ಮಸಾಂಗತ್ಯವಿತ್ತು. ಸಲಾಂ ವ ಕಲಾಂ ತಲುಪಿಸಲಾಯಿತು. ಯಾವಾಗ ಆ ಫಕೀರನು ಉತ್ತರ ತಂದನೋ ಆಗ ಮದೀನಾಮುನವ್ವರಾಕ್ಕೆ ಹೊರಟರು.

ಸುಲ್ತಾನ ಮುಜಫ್ಫರ್‌ನು ಗುಜರಾತಿನ ಅಂತಿಮ ದೊರೆಯಾದಾಗ ಆವಾಗ ಖುತ್ಬುಲ್ ಅಖ್ತಾಬ್ ಹಜ್ರತ್‌ಶಾಹ್ ವಜೀಯುದ್ದೀನ್ ಹುಸೈನಿ ಅಲ್ವಿಯವರ ಸಾನಿಧ್ಯದಲ್ಲಿ ಬಂದು ಅವರ ಅಮೃತಹಸ್ತದಿಂದ ಖಡ್ಗವನ್ನು ಕಟ್ಟಿಸಿಕೊಂಡನು. ಆಗ ಹಜ್ರತ್‌ರು ಹೀಗೆ ಹೇಳಿದರು. ಹಜ್ರತ್‌ಶಾಹ್ ಸಿಬಗತುಲ್ಲಾಹ್‌ರೊಂದಿಗೆ ಅಗೌರವದಿಂದ ಹಾಗೂ ದುರ್ವರ್ತನೆಯಿಂದ ನಡೆದುಕೊಳ್ಳಬಾರದು. ಇಲ್ಲದಿದ್ದರೆ ನಾನು ಮಧ್ಯ ಬರುವದಿಲ್ಲ. ಕೆಲ ದಿನಗಳ ನಂತರ ಯಾವಾಗ ಆತನ ವಿನಾಶ ಕಾಲ ಸಮೀಪಿಸಿತೋ ಜಂಗೇಜಖಾನ್‌ನ ಪುತ್ರಿಯಾಗಿದ್ದ ಹಜ್ರತ್‌ರ ಪತ್ನಿಯವರಲ್ಲಿ ಚಂಗೇಜ್‌ಖಾನ್‌ನ ವಸ್ತುಗಳನ್ನು ಹುಡುಕುವ ನೆಪದಿಂದ ಅವರನ್ನು ಅಗೌರವಿಸಿದನು. ಹಜ್ರತ್ ಶಾಹ್ (ಖು)ರ ಪವಿತ್ರ ನಾಲಿಗೆಯಿಂದ, ಈ ಶಬ್ದಗಳು ಹೊರಟವು. 'ಸುಲ್ತಾನ ಮುಜಫ್ಫರ್' ನಿಗದಿತ ದಿನ ಹಜ್ರತ್ ಸಾಹೇಬರ ಹಸ್ತದಿಂದ ಕಟ್ಟಲ್ಪಟ್ಟ ಖಡ್ಗದಿಂದಲೇ ಹತನಾಗುವನು.

ಯಾವಾಗ ಈ ಸುದ್ದಿಯು ಸುಲ್ತಾನ್ ಮುಜಫರ್‌ನಿಗೆ ತಲುಪಿತೋ ವಿಹ್ವಲಗೊಂಡು ಹಜ್ರತ್‌ಶಾಹ್ ವಜೀಯುದ್ದೀನ್‌ರ ಬಳಿ ಬಂದನು ಹಾಗೂ ಹೀಗೆ ವಿನಂತಿಸಿದನು. ಹಜ್ರತ್ ಸಿಬಗತುಲ್ಲಾಹ್‌ರ ಕುರಿತು ನನ್ನಿಂದ ತಪ್ಪಾಗಿದೆ. ಕ್ಷಮಿಸಲು ತಿಳಿಸಿರಿ ಹಜ್ರತ್‌ಶಾಹ್ ವಜೀಯುದ್ದೀನ್‌ರು ಹಜ್ರತ್‌ಶಾಹ್ ಸಿಬಗತುಲ್ಲಾಹ್‌ರಿಗೆ ಈ ಸಂದೇಶ ಕಳುಹಿಸಿದರು. 'ಸುಲ್ತಾನ್ ಮುಜಫ್ಫರ'ನಿಗೆ ಕ್ಷಮಿಸಿರಿ ಏಕೆಂದರೆ ನಾನು ಆತನಿಗೆ ಖಡ್ಗವನ್ನು ಕೊಟ್ಟಿದ್ದೇನೆ.

ಹಜ್ರತ್‌ಶಾಹ್ ಸಿಬಗತುಲ್ಲಾಹ್‌ರು ಹೀಗೆ ಹೇಳಿದರು. ನನ್ನಲ್ಲಿ ಬೇರೆಯ ಖಡ್ಗವೆಲ್ಲಿದೆ. ಅದೆ ತಾವು ಕಟ್ಟಿದ ಖಡ್ಗವು ಅವನ ಕೆಲಸ ಮುಗಿಸುವುದು ಅದರ ನಂತರ ಸುಲ್ತಾನನು ಅಸಹಾಯಕನಾಗಿ ತಲ್ಲಣಗೊಂಡು ಅಹ್ಮದಾಬಾದ್‌ದ ಸಮಸ್ತ ಸೂಫಿಗಳಿಗೆ ಹಾಗೂ ಫಕೀರರಿಗೆ ಒಟ್ಟುಗೂಡಿಸಿದನು ಹಾಗೂ ತನ್ನ ಸಂರಕ್ಷಣೆಗಾಗಿ ಪ್ರಾರ್ಥಿಸಲು ವಿನಂತಿಸಿದನು. ಪ್ರತಿಯೋರ್ವರು ಆತನ ಸುರಕ್ಷೆಗಾಗಿ ಪ್ರಾರ್ಥಿಸಿದರು ಹಾಗೂ ಆತನಿಗೆ ಧೈರ್ಯ ನೀಡಿದರು. ನಾವು ಇಷ್ಟೆಲ್ಲ ಜನರು ನಿನಗಾಗಿ ಪ್ರಾರ್ಥಿಸಲು ನಿರತರಾಗಿದ್ದೇವೆ. ನೀನು ನಿಶ್ಚಿಂತನಾಗಿರು! ಹಜ್ರತ್‌ಶಾಹ್ ಸಿಬಗತುಲ್ಲಾಹ್‌ರು ನೀಡಿದ ಅವಧಿಯ ದಿನಗಳು ಬಹಳ ಕಡಿಮೆ ಉಳಿದಿದ್ದವು. ಆಗ ಸೇವಕರು ಹೀಗೆ ಹೇಳಿದರು. ಹಜ್ರತ್‌ರ ನುಡಿಯು ಜನರಲ್ಲಿ ಪ್ರಸಿದ್ಧಗೊಂಡಿದೆ ಹಾಗೂ ನಿರ್ಧರಿತ ದಿನವೂ ಬಂದಿದೆ. ಇಲ್ಲಿಯವರೆಗೆ ಯಾವುದೇ ತೊಂದರೆಯಾಗಿಲ್ಲ. ಆಗ ಹಜ್ರತ್‌ರು ಹೀಗೆ ಹೇಳಿದರು. ಇನ್ನೂ ಮೂರು-ನಾಲ್ಕು ದಿನಗಳು ಉಳಿದಿವೆ. ಆತನ ಹೊಡೆದುರುಳುವಿಕೆಯು ಒಂದು ಕ್ಷಣದಲ್ಲಿ ಜರುಗುತ್ತದೆ. ಒಂದು ಐತಿಹ್ಯವಿದೆ. ಅದೇ ದಿನಗಳಲ್ಲಿ ಇವರ ಓರ್ವ ಮುರೀದನಾದ (ಶಿಷ್ಯನಾದ) ಇಬ್ರಾಹಿಂ ಕಹಲೈಸಿಯು ಯಾರು ಇಸ್ಲಾಮಿ ಕಾನೂನಿನಲ್ಲಿ ಪರಿಣಿತನಾಗಿದ್ದನು. ಸ್ವಪ್ನದಲ್ಲಿ ಹೀಗೆ ಕಂಡನು. ಹಜ್ರತ್‌ಶಾಹ್ ಖುದ್ದಿಸ್ಸಿರ್ರರು ೭ನೇ ಆಗಸದ ಬಾಗಿಲಲ್ಲಿ ದಂಡ ಕೈಯಲ್ಲಿ ಹಿಡಿದು ನಿಂತಿರುವದು ಹಾಗೂ ದೇವಚರರು ಪ್ರಾರ್ಥನೆಯ ತತ್ವಗಳನ್ನು ತಂದು ಹೀಗೆ ಇವು ಮುಜಫ್ಫರನ ಪ್ರಾರ್ಥನೆಯ ತತ್ವಗಳಿರುವವು ಎಂದು ಹೇಳಿದರು. ಹಜ್ರತ್‌ಶಾಹ್ ಖುದ್ದಿಸ್ಸಿರ್ರಾಹು ಈ ತತ್ವಗಳನ್ನೆ ದಂಡದಿಂದ ಹೊಡೆದಾಗ ಅವು ಒಂದಕ್ಕೊಂದು ತಟ್ಟಿ ಕೆಳಗೆ ಬೀಳುವವು. ಮುರೀದನು ಈ ಸ್ವಪ್ನದ ಕುರಿತು ಹಜ್ರತ್ ಸಿಬ್‌ಗತುಲ್ಲಾಹ್‌ರ ಎದುರಲ್ಲಿ ನಿವೇದಿಸಿದನು. ಅವರು ಮುಗಳ್ನಕ್ಕು ಸುಮ್ಮನಾದರು.

ಪ್ರಮುಖ ವಿಷಯವೆಂದರೆ ಅಕ್ಬರ್ ಬಾದಶಾಹ್‌ನು ದೆಹಲಿಯ ಸೈನ್ಯದ ಮುಖಾಂತರ ಮುಜಫ್ಫರ್ ಸುಲ್ತಾನನ ಮೇಲೆ ದಾಳಿ ಮಾಡಿದನು. ಆತನ ಸೈನ್ಯವು ಮೊಘಲ ಸೈನ್ಯದೊಂದಿಗೆ ಸಂಚು ನಡೆಸಿತು. ಕೊನೆಗೆ ಮುಜಫ್ಫರನು ಬೇರೆ ದಾರಿ ಇಲ್ಲದೆ ಅದೇ ನಿಗದಿತ ಸಮಯದಲ್ಲಿ ಯಾವುದನ್ನು ಹಜ್ರತ್‌ಶಾಹ್(ಖು)ರು ಹೇಳಿದ್ದರು. ಅದೇ ಖಡ್ಗದಿಂದ ತನ್ನ ಕೊರಳನ್ನು ಕತ್ತರಿಸಿಕೊಂಡನು. ಹಜ್ರತ್ ಮೌಲಾನಾ

ಹಬೀಬುಲ್ಲಾಹರು ಹೇಳುತ್ತಾರೆ. ಹಜ್ರತ್‌ಶಾಹ್ ಸಿಬಗ್‌ತುಲ್ಲಾಹ್‌ರು ಬಿಜಾಪುರ ಪಟ್ಟಣದಲ್ಲಿ ಐದು ವರ್ಷದ ಅವಧಿಯನ್ನು ಕಳೆದ ಸಮಯದಲ್ಲಿ ಇವರಿಂದ ೩–೪ ಪವಾಡಗಳು ಜರುಗಿದವು. ಇವುಗಳಲ್ಲಿ ಒಂದು ಹೀಗಿದೆ. ಒಂದು ದಿನ ಯಾವನೋ ಅರಬನು ಒಂದು ಮುಷ್ಟಿಯಷ್ಟು ಕಾಫಿಯ ಸುಲಿದ ಬೀಜಗಳನ್ನು ಹಜ್ರತ್‌ರ ಪವಿತ್ರ ಕೈಯಲ್ಲಿರಿಸಿದನು. ಅವರು ನನ್ನತ್ತ ಈ ಸಂಜ್ಞೆ ಮಾಡಿದರು. ನಾನು ನನ್ನ ಎರಡೂ ಕೈಗಳನ್ನು ಮುಂದಕ್ಕೆ ಚಾಚಿ ಹೋದೆನು. ಅವರು ಆ ಎಲ್ಲ ಕಾಫಿಯ ಬೀಜಗಳನ್ನು ನನ್ನ ಕೈಯಲ್ಲಿ ನೀಡಿದರು. ಅವರ ಕೈಯಲ್ಲಿ ಒಂದು ಬೀಜವೂ ಇರಲಿಲ್ಲ. ಮತ್ತೆ ನಾನು ಮುಂದೆ ಹೋದೆನು. ಎಲ್ಲರಲ್ಲಿ ಅವುಗಳನ್ನು ವಿತರಿಸಬೇಕೆಂದಿದ್ದೆನು ಏಕೆಂದರೆ, ಯಾವಾಗಲೂ ಹಜ್ರತ್‌ರ ನಿತ್ಯದ ರೂಢಿಯಾಗಿತ್ತು. ಸಭೆಯಲ್ಲಿ ಏನೇ ತಂದರೂ ಅದನ್ನು ಎಲ್ಲರಲ್ಲಿ ಹಂಚುತ್ತಿದ್ದರು. ಆದರೆ ಇಂದು ಹಜ್ರತ್‌ರು ನನ್ನ ಕೈಯಿಂದ ಹಂಚದಂತೆ ತಡೆದರು ಹಾಗೂ ನನ್ನ ಕೈಯಿಂದ ಒಂದು ಬೀಜವನ್ನೂ ತೆಗೆದುಕೊಳ್ಳಲಿಲ್ಲ ಹಾಗೂ ನಾನು ನನ್ನ ಸ್ಥಳದಲ್ಲಿ ಕುಳಿತುಕೊಂಡೆನು. ನಂತರ ನೋಡಿದೆನು ಸಭೆಯಲ್ಲಿ ಎಷ್ಟು ಜನ ಹಾಜರಿದ್ದರೋ ಎಲ್ಲರನ್ನೂ ಒಬ್ಬೊಬ್ಬರನ್ನಾಗಿ ಕರೆದು ನನ್ನ ಕೈಯಲ್ಲಿ ಹೇಗೆ ಮುಷ್ಟಿ ತುಂಬ ಬೀಜಗಳಿದ್ದವೋ ಹಾಗೆಯೇ ಎಲ್ಲರಲ್ಲಿಯೂ ಹಂಚಿದರು. ಅಂದಾಜಿಸಿದರೆ ಅದು ಎರಡು ಸೇರಿಗಿಂತಲೂ ಹೆಚ್ಚಾಗುತ್ತಿತ್ತು ಹಾಗೂ ಒಂದು ಬೀಜವು ಅವರ ಹಸ್ತದಲ್ಲಿ ಉಳಿದಿತ್ತು. ಮುಲ್ಲಾ ಅಹ್ಮದ್ ಮಜಜೂಬ (ಖ) ಆಪ್ತಶಿಷ್ಯರು ಗುರುಗಳ ಪಾದರಕ್ಷೆಗಳನ್ನು ಬಗಲಲ್ಲಿ ಹಿಡಿದುಕೊಂಡು ಒಂದೆಡೆಗೆ ನಿಂತಿದ್ದರು. ಹೀಗೆ ವಿನಂತಿಸಿದರು. ಸಾಹೇಬ್! ಆ ಕಾಫಿಯ ಬೀಜವನ್ನು ನನಗೂ ನೀಡಿರಿ ನಾನೂ ತಿನ್ನುವೆ ಹಜ್ರತ್‌ರು ಹೀಗೆಂದರು – ನೀನು ಉಪವಾಸ (ರೋಜಾ)ದಲ್ಲಿದ್ದೀಯ ಹೇಗೆ ತಿನ್ನುವೆ. ಅವರು ಹೀಗೆಂದರು ಒಂದು ವೇಳೆ ತಾವು ನೀಡಿದರೆ ನಾನು ತಿನ್ನುವೆ, ಆಗ ಹಜ್ರತ್‌ರು ಆ ಒಂದು ಬೀಜವನ್ನು ಹೀಗೆ ಎಸೆದರು. ಅದು ಅವರ ಬಾಯಿಯಲ್ಲಿ ಹೋಗಿ ಬಿದ್ದಿತು. ಮುಲ್ಲಾ ಅಹ್ಮದ್(ಖ) ಸ್ವಲ್ಪವೇ ಹೊತ್ತು ಜಗಿದು ಅದನ್ನು ಹೊರಗೆ ತೆಗೆದರು. ಸಭೆಯಲ್ಲಿಯ ಎಲ್ಲ ಜನರೂ ಅದನ್ನು ನೋಡಿದರು. ಆ ಕಾಫಿಯ ಬೀಜವು ನಡುವೆ ಬಿರಿದು ಹೇಗೆ ಕಾಫಿಬೀಜದ ರೂಪವಿರುವುದೋ ಹಾಗೆಯೇ ಇತ್ತು.

ಇಬ್ರಾಹಿಂ ಆದಿಲ್‌ಶಾಹ ದ್ವಿತೀಯನ ಮಂತ್ರಿಯಾದ ಐನುಲ್‌ಮುಲ್ಕನು ಬಹಳ ದೊಡ್ಡ ಸೈನ್ಯ ಹಾಗೂ ಅರವತ್ತು ಬಲಾಢ್ಯ ಆನೆಗಳನ್ನು ಹೊಂದಿದ್ದನು. ಆತನು ಬಾದಶಾಹ್‌ನಿಂದ ಬಂಡಾಯವೆದ್ದು ಆಡಳಿತಗಾರರನ್ನು ತನ್ನವರನ್ನಾಗಿಸಿಕೊಂಡು, ತನ್ನ ಸಹೋದರನನ್ನು ಸಿಂಹಾಸನದ ಮೇಲೆ ಕೂಡ್ರಿಸಬೇಕೆಂದು ಇಚ್ಛಿಸಿದನು. ಇಬ್ರಾಹಿಂ ಆದಿಲ್‌ಶಾಹ್ ಹಜ್ರತ್ ಶಾಹ್(ಖ)ರ ಸೇವೆಯಲ್ಲಿ ಹಾಜರಾದನು. ಹಾಗೂ ವಿನಂತಿಸಿಕೊಂಡನು. ಹಜ್ರತ್‌ಶಾಹ್‌ರು ಆತನ ವಿನಂತಿಯನ್ನು ಪರಿಗಣಿಸಿ ಆ

ಬಂಡಾಯಗಾರನಾದ ಐನುಲ್‌ಮುಲ್ಕನ ಕುರಿತು ಹೀಗೆ ಹೇಳಿದರು. ಏನೆಂದರೆ, ಆಯಾ ದಿನ ಆಯಾ ಸಮಯದಲ್ಲಿ ನಿಗದಿತ ವೇಳೆಯಲ್ಲಿ ಆತನ ತಲೆ ವಿಚ್ಛೇದಿಸಲಾಗುವುದು. ಅವರು ಹೇಳಿದಂತೆಯೇ ಆತನ ಸೈನ್ಯವು ಹಾಳಾಯಿತು. ಹಾಗೂ ಆತನ ರುಂಡವನ್ನು ಮುಂಡದಿಂದ ಬೇರ್ಪಡಿಸಲಾಯಿತು.

ಯಾವಾಗ ಹಜ್ರತ್‌ಶಾಹ್(ಖ)ರು ಇಬ್ರಾಹಿಂಪುರದಲ್ಲಿ ಯಾವುದು ಪಟ್ಟಣದ ದಕ್ಷಿಣ ಭಾಗದಲ್ಲಿ ಸ್ಥಿತವಿರುವದು ಅಲ್ಲಿ ಮಸೀದೆಯನ್ನು ನಿರ್ಮಿಸಿದರು. ಆ ಮಸೀದೆಯ ಬುನಾದಿ ಶಿಲೆಯನ್ನು ಇಡುವಾಗ ತಮ್ಮ ಅಂತಃಶಕ್ತಿಯಿಂದ, ಗೌಂಡಿಗೆ, 'ಕಾಬಾ' ಆತನ ಕಣ್ಣೆದುರು ತಂದರು. ಗೌಂಡಿಯು ಕಾಬಾದರ್ಶನದ ನಂತರ ಕಾಬಾದ ದಿಕ್ಕಿನೆಡೆಗೆ ಬುನಾದಿ ಹಾಕಿದನು ಹಾಗೂ ಮಸೀದೆಯು ಸಿದ್ಧಗೊಂಡಿತು. ಈ ಘಟನೆಯ ವಿವರವು ಬಿಜಾಪುರದಲ್ಲಿ ಪ್ರತಿಯೊಬ್ಬರ ನಾಲಿಗೆಯ ಮೇಲೆ ನಲಿಯುತ್ತಿದೆ. ಬಹಳಷ್ಟು ಮಸೀದೆಗಳು ಸಂಪೂರ್ಣವಾಗಿ ಕಾಬಾಭಿಮುಖವಾಗಿ ಇಲ್ಲ. ಹಾಗೆ ನೋಡಿದರೆ ದಿಕ್ಸೂಚಿಯನ್ನು ಇಟ್ಟೆ ಕಟ್ಟಡಗಳನ್ನು ಕಟ್ಟಲಾಗುತ್ತದೆ. ಆದರೂ ಸಹ ಸ್ವಲ್ಪ ವ್ಯತ್ಯಾಸವಾಗುತ್ತದೆ ಆದರೆ ಈ ಮಸೀದೆಯು ಕಿಬ್ಲಾಭಿಮುಖವಾಗಿದೆ.

ಹಜ್ರತ್ ಮೌಲಾನಾ(ಖ)ರ ಪುಸ್ತಿಕೆಯಲ್ಲಿ ಹೀಗೆ ಹೇಳಲಾಗಿದೆ. ಏನೆಂದರೆ, ಬಿಜಾಪುರದಲ್ಲಿ ಓರ್ವ ಫಕೀರರಿದ್ದರು, ಹಜ್ರತ್‌ಶಾಹ್ ಸಿಬ್‌ಗತುಲ್ಲಾಹರ(ಖ) ಮದರಸಾದಲ್ಲಿ ಹಾಜರಾಗಿ ಲೌಕಿಕ ಜ್ಞಾನದ ಸರ್ವ ಗ್ರಂಥಗಳನ್ನು ಅಲ್ಪ ಸಮಯದಲ್ಲಿಯೇ ತಮ್ಮ ಒಂದು ದೃಷ್ಟಿಯಲ್ಲಿ ಓದುತ್ತಿದ್ದರು. ಓರ್ವ ವ್ಯಕ್ತಿಯು ಅವರನ್ನು ಕೇಳಿದನು. ಎಲ್ಲ ವಿಭಿನ್ನ ವಿಷಯದ ಪುಸ್ತಕಗಳನ್ನು ಅಲ್ಪ ಸಮಯದಲ್ಲಿ ಒಂದೇ ದೃಷ್ಟಿಯಲ್ಲಿ ಹೇಗೆ ಅರ್ಥವಾಗುತ್ತವೆ? ಫಕೀರರು ಹೀಗೆ ಹೇಳಿದರು. ಎಲ್ಲ ಪುಸ್ತಕಗಳ ವರ್ಣಮಾಲೆಯು ಒಂದೆ ತೆರನಾಗಿವೆ. ವಾಕ್ಸರಣಿಯಾಗಿ ಮುಂದೆ ಬರುತ್ತವೆ.

ಈರ್ವರು ಫಕೀರರಿದ್ದರು. ಗುರೂಪದೇಶದ ಸಮಯದಲ್ಲಿ ಹಾಜರಾಗುತ್ತಿದ್ದರು. ಅವರೀರ್ವರಲ್ಲಿ ಓರ್ವರು ಬಹಳೇ ಉತ್ಸುಕತೆಯೊಂದಿಗೆ ಕೂಡ್ರುತ್ತಿದ್ದರು. ಒಂದು ದಿನ ಆ ಫಕೀರರು ಆಗಮಿಸಲಿಲ್ಲ. ಆಗ ಹಜ್ರತರು ಆತನ ಸಹವರ್ತಿಯನ್ನು ಕೇಳಿದರು. ನಿನ್ನ ಸ್ನೇಹಿತನಿಗೆ ಏನಾಯಿತು? ಇವತ್ತು ಬಂದಿರುವುದಿಲ್ಲ. ಆಗ ಆತ ಹೇಳಿದರು. ನನ್ನ ಸ್ನೇಹಿತನಿಗೆ ಈ ಸ್ಥಳದ ಮೇಲೆ ಹಜ್ರತ್ ಸೈಯ್ಯದುಲ್‌ಅಬ್ರಾರ್(ಸ)ರ ದರ್ಶನವಾಗುತ್ತದೆ ಆತನು ನೋಡುತ್ತಾನೆ ಹಜ್ರತ್(ಸ)ರು ನಿಮ್ಮೊಂದಿಗೆ ಕುಳಿತು ನೀವು ಹೇಳುವುದನ್ನು ಗಮನಿಸುತ್ತಾರೆ ಹಾಗೂ ಕೆಲವು ಸಲ ಅದೃಶ್ಯರಾಗುತ್ತಾರೆ ಮತ್ತು ತಮ್ಮ ಮುಖಚಂದಿರ ಕಾಣುವುದಿಲ್ಲ. ಆಗ ಆತನು ಅರಣ್ಯಕ್ಕೆ ಹೋಗಿ ವಿಹ್ವಲಗೊಳ್ಳುತ್ತಾನೆ. ಇವತ್ತೂ ಆತನು ಅರಣ್ಯಕ್ಕೆ ಹೋಗಿದ್ದಾನೆ. ಈ ತೆರನಾಗಿ ಇವರ ಪವಾಡಗಳು ಅಸಂಖ್ಯ ಇರುವವು.

ಫಜಾ ಇಲು ಶೇಖಿ ಸಿಬಗತುಲ್ಲಾಹಿ ಮೈಯ್ಯಾಹ್‌ಸುರು ।
ಸಿವಾರಬ್ಬಹೂ ಮೈಯ್ಯಾಸುರುಹಾ ವಯಾಹ್‌ಸುರು ॥

ನನ್ನ ಗುರುವಿನ ಸಮೃದ್ಧಿ ಹಾಗೂ ಪವಾಡಗಳು ಎಷ್ಟೊಂದು ಇವೆಯೆಂದರೆ ಅವುಗಳನ್ನು ಎಣಿಸುವವರಾರಿದ್ದಾರೆ! ಕೇವಲ ಅಲ್ಲಾಹನೇ ಬಲ್ಲನು.

ವಜಾಲಿಕ್ ಫಜ್ಜುಲ್ಲಾಹಿ ಯುತಿಹೀ ಮೈಯ್ಯಷಾಹು।
ಫ ಮನ್ ಶಾಅ ಫಲಯುಮನ್ ವ ಮನ್ ಶಾಅ ಫಲ್‌ಯಕ್ಫುರ್॥

ಇದೆಲ್ಲವೂ ಅಲ್ಲಾಹುವಿನ ದಯೆಯಾಗಿದೆ. ಅವನು ಯಾರಿಗೆ ಬಯಸುತ್ತಾನೆಯೋ ಅವರಿಗೆ ನೀಡುತ್ತಾನೆ. ಯಾರು ಬೇಕಾದರೂ ಇದನ್ನು ಒಪ್ಪಲಿ ಅಥವಾ ಬಿಡಲಿ.

ಹಜ್ರತ್‌ಶಾಹ್ ಸಿಬ್‌ಗತುಲ್ಲಾಹ್(ಖು) ಹಿಜರಿಶಕೆ೧೦೦೫ರಲ್ಲಿ ಬಿಜಾಪುರದಿಂದ ಮದೀನಾ ಮುನವ್ವರಾಕ್ಕೆ ಮರಳಿದರು. ಹಾಗೂ ಮುಹಮ್ಮದ್(ಸ)ರ ಪವಿತ್ರ ಸಮಾಧಿಯ ಸೇವಕರಾದರು. ಎರಡನೆಯ ಸಲ ಅವರು ಈ ಸೇವೆಯಲ್ಲಿ ತೊಡಗಿದರು ಹಾಗೂ ೧೦ ವರ್ಷದವರೆಗೆ ಅಲ್ಲಿದ್ದರು. ಹಿ.ಶ.೧೦೧೫ರಲ್ಲಿ ಇಹಲೋಕ ತ್ಯಜಿಸಿದರು.

ಹಜ್ರತ್ ಮಿಯಾಂ ಶಾಹ ವಜಿಯುದ್ದೀನ್ ಹುಸೈನಿ ಅಲ್ವಿ (ಖು)ರು ಯಾವಾಗ ಹಜ್ರತ್‌ಶಾಹ್(ಖು)ರಿಗೆ ಪತ್ರ ಬರೆಯುತ್ತಿದ್ದರೋ ಆಗ ಅವರು ಈ ಬಿರುದುಗಳನ್ನು ಪ್ರಯೋಗಿಸುತ್ತಿದ್ದರು. ಮುಜೀದುದ್ದೀನ್ (ಧರ್ಮವನ್ನು ಪುನಃನವಗೊಳಿಸುವವ) ಹಾಗೂ ವ ಮುಖ್ದುಮಲ್ ಆಲಮ್ (ಸರ್ವ ಜಗತ್ತು ಅವರ ಸೇವೆಯಲ್ಲಿ ತೊಡಗಿರುವುದು) ಇವರ ನಿಧನದ ಇಸ್ವಿಯನ್ನು ಹೀಗೆ ಬರೆಯಲಾಗಿದೆ. "ಮುಖ್ದುಮಲ್ ಆಲಮ" ಎಂದರೆ ಹಿಜ್ರಿ ೧೦೧೪ ಎಂದೂ ಸಹ ಆಗುವುದು. ಇವೆರಡೂ ಈ ಹಜ್ರತ್‌ರ ಪವಾಡಗಳಾಗಿವೆ. ಇವರ ಜನನದ ದಿನಾಂಕವು "ಖೈರುನ್ನಾಸ್" ಎಂದರೆ ಹಿಜಿ ೯೫೨ ಎಂದಾಗುವುದು.

ಹಜ್ರತ್‌ರ ನಿಧನದ ನಂತರ ಮದೀನಾ ಮುನವ್ವರಾದ ಜನರು ಅವರ ದೇಹವನ್ನು ಹಜ್ರತ್(ಸ)ರ ಪವಿತ್ರ ಸಮಾಧಿ ಸ್ಥಳದಿಂದ ದೂರದಲ್ಲಿ ದಫನ್ ಮಾಡಬಯಸಿದರು. ಏಕೆಂದರೆ ಗುಂಬಜ್ ಕಟ್ಟಬಹುದು. ಇದೇ ವಿಚಾರದಲ್ಲಿದ್ದರು. ಓರ್ವ ಅಪರಿಚಿತ ವ್ಯಕ್ತಿಯು ಅದೃಶದಿಂದ ಅಲ್ಲಿಗೆ ಬಂದರು ಹಾಗೂ ಹೀಗೆಂದರು. ಒಂದು ವೇಳೆ ನೀವು ಶಾಹ್ ಸಾಹಬ್(ಖು)ರ ಇಚ್ಛೆಯಂತೆ ನಡೆಯಬಯಸುತ್ತಿದ್ದರೆ ನಾನು ಆ ಸ್ಥಳವನ್ನು ತೋರಿಸುವೆನು. ಮತ್ತೆ ಹೀಗೆಂದರು. ಒಂದು ದಿನ ಶಾಹ್‌ಸಾಹಬ್(ಖು)ರು ಹಜ್ರತ್ ಇಬ್ರಾಹಿಂ ಹಜ್ರತ್ ಮುಹಮ್ಮದ್(ಸ)ರ ಸುಪುತ್ರರಾಗಿದ್ದರು. ಅವರ ಪವಿತ್ರ ಸಮಾಧಿಯ ಬಳಿ ನಿಂತು 'ಫಾತೇಹ್' ಓದಿದರು ಹಾಗೂ 'ಸಿಬಗ್‌ತುಲ್ಲಾಹ್'ರಿಗೆ ಈ ಸ್ಥಳವು ಲಭಿಸಲಿ ಎಂದು ಬಯಸಿದ್ದರು. ಅಲ್ಲಿಯೇ ಅವರನ್ನು ದಫನ್ ಮಾಡಲಾಯಿತು.

ಅಮೃತಶಿಲೆ ಮೇಲೆ ಹಜ್ರತ್‌ಶಾಹ್ ಸಿಬಗ್‌ತುಲ್ಲಾಹ್(ಖು)ರ ಹೆಸರನ್ನು ಕೆತ್ತಿ ಅವರ ತಲೆಯ ಬಳಿ ನೆಡಲಾಯಿತು ಹಾಗೂ ಅವರ ವಯಸ್ಸು ೬೩ ವರ್ಷವಿತ್ತು. ಹಜ್ರತ್ ಮುಹಮ್ಮದ್(ಸ)ರ ವಯಸ್ಸು ಸಹ ೬೩ ವರ್ಷವೇ ಆಗಿತ್ತು. ಉಲ್ಲೇಖವಿದೆ, ಯಾವಾಗ ಇವರ ಪೇಟ(ರುಮಾಲು) ಹಾಗೂ ಪವಿತ್ರ ನಿಲುವಂಗಿಯನ್ನು ಮದೀನಾ ಮುನಾನವ್ವರಾದಿಂದ ಭೈರೂಚಿನಲ್ಲಿರುತ್ತಿದ್ದ ಅವರ ಸುಪುತ್ರರಿಗೆ ತೆಗೆದುಕೊಂಡು ಬಂದರು. ಅವರ ಜೇಷ್ಠಪುತ್ರ ಹಜ್ರತ್‌ಶಾಹ್ ಅಬುಲ್ ಮುಆಲ್ಲಿ(ಖು)ರು ಹೇಳಿದರು. ನಾನು ಈ ನಿಲುವಂಗಿಯನ್ನು ತೊಡಲು ಅರ್ಹನಿಲ್ಲ. ನನ್ನ ತಮ್ಮ ಅಬುಲ್‌ಅಲಾ ಅವರು ಅರ್ಹರು ಆಗಿದ್ದಾರೆ ಹಾಗೂ ಹಜ್ರತ್‌ಶಾಹ್ ಅಬುಲ್‌ವಲಾ(ಖಿ)ರು ಧಾರ್ಮಿಕ ವಿದ್ವಾಂಸರು ಹಾಗೂ ಷರೀಯತ್ತನ್ನು ಕಟ್ಟುನಿಟ್ಟಾಗಿ ಪಾಲಿಸುವರಿದ್ದರು. ಈ ನಿಲುವಂಗಿಯನ್ನು ಅವರು ತಲೆಯ ಮೇಲೆ ಹೊತ್ತು ಸ್ವೀಕರಿಸಿದರು. ಹಾಗೂ ಜ್ಞಾನಾರ್ಥಿಗಳಿಗೆ ಉಪದೇಶ ನೀಡತೊಡಗಿದರು.

ಹಜ್ರತ್‌ಶಾಹ್(ಖು)ರ ಕರಾಮತ್ತುಗಳು ಎಷ್ಟಿವೆಯೆಂದರೆ ಅದರ ಸಂಗ್ರಹಕ್ಕೆ ತೊಡಗಿದ್ದರೆ ಒಂದು ಗ್ರಂಥವೇ ಆಗುತ್ತದೆ. ಒಂದು ವೇಳೆ ನಾನು ನನ್ನ ಊರಿನಲ್ಲಿ (ಮದ್ರಾಸಿನಲ್ಲಿ) ಇದ್ದಿದ್ದರೆ ಈ ಕಾರ್ಯ ಸುಗಮವಾಗುತ್ತಿತ್ತು. ಆದರೆ ನಾನು ಈಗ ಪ್ರವಾಸದಲ್ಲಿದ್ದೇನೆ ಹಾಗೂ ಮದೀನಾ ಮುನವ್ವರಾಕ್ಕೆ ಹೋಗುವ ಇಚ್ಛೆಯಿದೆ. ಅದಕ್ಕಾಗಿ ಸಧ್ಯಕ್ಕೆ ಎಷ್ಟು ಲಭ್ಯವಾದವೋ ಅಷ್ಟನ್ನು ಬರೆಯಲಾಗಿದೆ.

ಯಾವ ಕಾಲದಲ್ಲಿ ಹಜ್ರತ್‌ಶಾಹ್(ಖು)ರು ಭೈರೂಚನಲ್ಲಿ ಉಪದೇಶ ನೀಡುತ್ತಿದ್ದರೊ ಆಗ ಅವರ ಪತ್ನಿಯವರಾದ ಹಜ್ರತ್ ರಾಜಿ ದೌಲತ್ ಸಾಹಬಾ(ಖು) ಒಂದು ದಿನ ಅವರ ಮದರಸಾದಲ್ಲಿ ದೃಷ್ಟಿ ಹಾಯಿಸಿದಾಗ ಒಂದು ಬಹು ದೊಡ್ಡ ಶ್ವೇತವಸ್ತ್ರಾಧಾರಿಗಳ ಸಮೂಹವು ತಲೆಯ ಮೇಲೆ ದೊಡ್ಡ ದೊಡ್ಡ ಪೇಟಾಗಳನ್ನು ಸುತ್ತಿರುವವರನ್ನು ನೋಡುತ್ತಾರೆ. ಮುಖ ಚರ್ಯೆಗಳಿಂದ ಅವರು ಇಲ್ಲಿಯ ಜನರೆಂದು ಅನ್ನಿಸುತ್ತಿರಲಿಲ್ಲ. ಅವರು ಹಾಜರಾಗಿದ್ದರು. ಈ ಘಟನೆಯನ್ನು ಅವರು ಹಜ್ರತ್‌ಶಾಹ(ಖು)ರಿಗೆ ಹೇಳಿದರು. ಆಗ ಹಜ್ರತ್ ತಮ್ಮ ಪತ್ನಿಗೆ ಯಾರಲ್ಲಿಯೂ ಇದರ ಕುರಿತು ಹೇಳಬಾರದೆಂದು ಹೇಳಿದ್ದರಲ್ಲದೇ ಹೇಳಿದರೆ ನಿಮ್ಮ ಈರ್ವರೂ ಸುಪುತ್ರರು ಮೃತ್ಯು ಹೊಂದುವರು ಎಂದರು.

ಭರೋಚನಲ್ಲಿ ಓರ್ವ ರಜಪೂತನು ತನ್ನ ಸ್ವಇಚ್ಛೆಯಿಂದ ಹಜ್ರತ್‌ಶಾಹ್(ಖು)ರ ಉಪಸ್ಥಿತಿಯಲ್ಲಿ ಇಸ್ಲಾಮ್‌ಧರ್ಮ ಸ್ವೀಕರಿಸಿದನು. ಆತನ ತಂದೆಯು ಬಾದಶಾಹನ ಬಳಿ ದೂರಿದನು. ಬಾದಶಹನು ಹಜ್ರತ್‌ರಲ್ಲಿ ಕೇಳಿದನು. ಏಕೆ ಆ ಯುವಕನನ್ನು ಒತ್ತಾಯಪೂರ್ವಕವಾಗಿ ಇಸ್ಲಾಮ ಧರ್ಮಕ್ಕೆ ಸೇರಿಸಿದಿರಿ. ಆಗ ಹಜ್ರತರು ಅವನಿಗೇ ಕೇಳಿರಿ ಎಂದರು. ಅವನಿಗೆ ಕೇಳಿದಾಗ ಯುವಕನು ಸ್ಪಷ್ಟವಾಗಿ ನಾನು ನನ್ನ ಸ್ವಇಚ್ಛೆಯಿಂದ

ಮುಸ್ಲಿಮ್‌ನಾಗಿರುವೆನು. ಬಾದಶಾಹ್‌ನು ಹಜ್ರತ್‌ರನ್ನು ಸುಳ್ಳಾಗಿಸಬಯಸಿದ್ದನು ಅದಕ್ಕಾಗಿ ಆ ಯುವಕನನ್ನು ಒಂದು ಬದಿಗೆ ಕರೆದೊಯ್ದು ಹುದ್ದೆ ನೀಡುವ ಆಮಿಷ ಒಡ್ಡಿ ಹೀಗೆ ಕಲಿಸಿದನು. 'ಒತ್ತಾಯ ಪೂರ್ವಕವಾಗಿ ನನ್ನನ್ನು ಮುಸ್ಲಿಂ ಮಾಡಿದ್ದಾರೆ' ಎಂದು ಹೇಳೆಂದನು. ಯಾವಾಗ ಆತನು ಹಜ್ರತ್‌ರ ಎದುರಲ್ಲಿ ಬಂದನೊ ಆಗ "ನಾನು ನನ್ನ ಸ್ವಇಚ್ಛೆಯಿಂದ ಇಸ್ಲಾಂ ಸ್ವೀಕರಿಸಿರುವೆನು" ಇದೇ ತೆರನಾಗಿ ಮೂರು ಸಲ ಪ್ರಯತ್ನಿಸಿದರು. ಯಾವುದೇ ರೀತಿಯ ಬದಲಾವಣೆಯಾಗಲಿಲ್ಲ. ಬಾದಶಾಹನು ಲಜ್ಜಿತನಾದನು. ಇಂಥದ್ದರಲ್ಲಿ ಬಾದಶಾಹನ ಪ್ರೀತಿಯ ಆನೆಯು ಬಾದಶಾಹನ ಮೇಲೆಯೇ ಓಡಿ ಬಂದಿತು. ಆತನು ದಿಕ್ಕಾಪಾಲಾಗಿ ಓಡಿ ಹೋದನು. ನಂತರ ಹಜ್ರತ್‌ಶಾಹ್ (ಖ)ರಿಗೆ ಗೌರವಪೂರ್ವಕವಾಗಿ ಮರಳಿ ಕಳುಹಿಸಿದನು.

ಯಾವ ತೆರನಾಗಿ ಹಜ್ರತ್‌ಶಾಹ್ ವಜಿಯುದ್ದೀನ್ ಅಲ್ವಿ(ಖ)ರು ಬೋಧನೆ ನೀಡಿದ ಬಳಿಕ ಹಲವಾರು ಬಾರಿ ಹಜ್ರತ್ ಖ್ವಾಜಾ ಖಿಜರ್(ಅ)ರ ಭೇಟಿಯಾಗುತ್ತಿತ್ತು ಹಾಗೂ ಆಪ್ತ ಮಾತುಕತೆ ರಹಸ್ಯಮಯ ವಿಷಯಗಳ ವಿದ್ವತ್ ಚರ್ಚೆಯಾಗುತ್ತಿತ್ತು. ಅದೇ ತೆರನಾಗಿ ಹಜ್ರತ್‌ಶಾಹ್ ಸಿಬಗ್‌ತುಲ್ಲಾರೊಂದಿಗೂ ಜರುಗುತ್ತಿತ್ತು.

ಹಜ್ರತ್‌ಶಾಹ್ ಖುದ್ದಿಸ್ಸಿರ್ರಹು ಕೆಲವು ಕಾಲದವರೆಗೆ ಜಾಮಿಯಾ ಮಸೀದೆ ಬಿಜಾಪುರದಲ್ಲಿ ಶುಕ್ರವಾರದ ನಮಾಜ್ ಸಲ್ಲಿಸಿದರು. ಒಂದು ದಿನ ರಸ್ತೆಯಲ್ಲಿ ಮದ್ಯ ಮಾರಾಟದ ಅಂಗಡಿಗಳನ್ನು ನೋಡಿದರು. ಆಗ ಶುಕ್ರವಾರದ ಪ್ರಾರ್ಥನೆಗೈಯ್ಯದೇ ಹೀಗೆ ಹೇಳಿದರು. ಈ ಪಟ್ಟಣದಲ್ಲಿ ಜುಮ್ಮಾ ನಮಾಜ್‌ವು ಅಲ್ಲಾಹನಿಂದ ಸ್ವೀಕರಿಸಲ್ಪಡುವದಿಲ್ಲ.

ಒಂದು ದಿನ ಹಜ್ರತ್(ಖ)ರು ತಮ್ಮ ಸಭೆಯಲ್ಲಿ ಹೀಗೆ ಹೇಳಿದರು. ಈ ಪ್ರಾಂತ್ಯದ ದೊರೆಯು ಲೌಕಿಕತೆಗೆ ಶರಣಾಗಿದ್ದಾನೆ. ಒಂದು ವೇಳೆ ಆತನು ಒಳಿತಿನ ಆದೇಶ ನೀಡಿ ಹಾಗೂ ಕೆಡುಕಿನಿಂದ ತಡೆದರೆ ಮೂರು ಒಳ್ಳೆಯ ಕೆಲಸಗಳನ್ನು ಮಾಡಿದರೆ ಅಲ್ಲಾಹು ದೊರೆಗೆ ಒಂದು ಒಳ್ಳೆಯ ಕೆಲಸದ ಬದಲಾಗಿ ಒಂದು ಸಾಮ್ರಾಜ್ಯದ ಅಧಿಕಾರ ದಯಪಾಲಿಸುವನು. ಮೊದಲನೆಯ ಕೆಲಸವು ತನ್ನ ಸಾಮ್ರಾಜ್ಯವನ್ನು ಮದ್ಯಮುಕ್ತ ಪ್ರದೇಶವನ್ನಾಗಿಸುವದು ಅದಕ್ಕೆ ಬದಲಾಗಿ ಗುಜರಾತಿನ ಸಿಂಹಾಸನ ಕೊಡಿಸುವೆನು ಅದೂ ಯುದ್ಧರಹಿತ ಸ್ನೇಹಮಯಿಯಾಗಿ ಆತನೊಂದಿಗೆ ಕುದುರೆಯ ಥಡಿ ಹಿಡಿದು ನಡೆದು ಜೊತೆಗೆ ಸಿಂಹಾಸನದ ಮೇಲೆ ಕೂಡ್ರಿಸುವೆನು. ಒಂದು ವೇಳೆ ಇದರ ವಿರುದ್ಧವಾದರೆ ಒಂದರ ಮಧ್ಯದ ಮೂರು ಅಂಗಡಿಯ ಬದಲಾಗಿ ಹತ್ತು ಅಂಗಡಿಗಳನ್ನು ಹೆಚ್ಚಿಸಲಿ ಎರಡನೆಯ ಕಾರ್ಯವು ಇದಾಗಿದೆ. ವೇಶ್ಯೆಯರಿಗೆ ಮದುವೆಯ ಆಜ್ಞೆ ನೀಡಲಿ ಅದರ ಬದಲಾಗಿಯೂ ಒಂದು ಪ್ರಾಂತ್ಯದ ಅಧಿಕಾರವನ್ನು ಕೊಡಿಸುವೆನು ಮೂರನೆಯ ಕಾರ್ಯವಿದಾಗಿದೆ. "ರಾಫಜಿ"ಗಳಿಗೆ

(ಬಂಡಾಯಗಾರರಿಗೆ) ಯಾವುದೇ ಪ್ರದೇಶದ ನಾಯಕತ್ವ ನೀಡದಿರಲಿ ಅದರ ಬದಲಾಗಿಯೂ ಒಂದು ಸಾಮ್ರಾಜ್ಯವು ಸಿಗುವದು. ಈ ಮಾತುಗಳನ್ನು ಪರೀಕ್ಷಿಸುವದು. ಅಷ್ಟೇನು ಕಷ್ಟದಾಯಕ ಕೆಲಸವಲ್ಲ. ಸಭೆಯಲ್ಲಿ ಹಾಜರಿದ್ದ ಜನರು ಹಜ್ರತ್‌ರಿಗೆ ತಾವು ಒಂದು ವೇಳೆ ಮನಸ್ವೀ ಇಚ್ಛಿಸಿದರೆ ಈ ಕಾರ್ಯವು ಪೂರ್ಣವಾಗುವದು. ಆಗ ಹಜ್ರತ್‌ರು ಹೀಗೆಂದರು ನಾನು ಇಚ್ಛಿಸುವ ಕೆಲಸವೇನಿದೆ? ಒಂದು ವೇಳೆ ದೊರೆಯು ಈ ಮೂರು ಸಾಮ್ರಾಜ್ಯಗಳನ್ನು ಪಡೆಯ ಬಯಸುತ್ತಾನೆಂದರೆ ಒಳಿತೆನ್ನುವ ಕೆಲಸಗಳನ್ನು ಮಾಡಲಿ ಹಾಗೂ ಕೆಡುಕುಗಳನ್ನು ತಡೆಯಲಿ. ಈ ವಿಷಯವು ಬಾದಶಹನಿಗೆ ತಿಳಿದಾಗ ಈ ವಿಷಯದಲ್ಲಿ ಓರ್ವ ರಾಫಜಿಯೊಂದಿಗೆ ಯಾರು ಬಾದಶಹನ ಆಪ್ತನಾಗಿದ್ದನು ಅವನೊಂದಿಗೆಯೇ ವಿಚಾರಿಸಿದನು. ಆಗ ಆ ರಾಫಜಿಯು ಹಜ್ರತ್‌ಶಾಹ(ಖು)ರು ಏನು ಹೇಳಿರುವರೋ ಅದಾಗಿ ಬಿಡುತ್ತದೆ. ಇದರಲ್ಲಿ ಯಾವುದೇ ತಪ್ಪಾಗುವದಿಲ್ಲ. ಆದರೆ ಸಾಮ್ರಾಜ್ಯದ ಶಾಂತಿ, ಗರಿಮೆ ಉಳಿಯುವುದಿಲ್ಲ. ಒಂದು ವೇಳೆ ಹಜ್ರತ್‌ರು ಹೇಳಿದ್ದನ್ನು ಪಾಲಿಸದಿದ್ದರೆ ಅವರಿಗೆ ವ್ಯಥೆಯುಂಟಾಗುವದು. ಇದರಿಂದ ಸಾಮ್ರಾಜ್ಯ ನಡೆಸಲು ತೊಂದರೆಯುಂಟಾಗಬಹುದು. ಅದಕ್ಕಾಗಿ ಈ ಯುಕ್ತಿಯನ್ನು ಮಾಡಬೇಕು. ಅವರನ್ನು ಇಲ್ಲಿಂದ ಕಳುಹಿಸಬೇಕು. ಕೊನೆಗೆ ಈ ಕೆಡಕು ಬಯಸುವ ರಾಫಜಿಯ ಮಾತಿಗೆ ಮರುಳಾಗಿ ಬಾದಶಹನು ದುರ್ದೈವಿಯಾದನು. ಒಂದು ದಿನ ಸಭೆಯಲ್ಲಿ ಹೀಗೆ ಹೇಳಿದನು. ಹಜ್ರತ್ ಶಾಹ್(ಖು)ರು ಮದೀನಾ ಮುನವ್ವರಾಕ್ಕೆ ಮರಳುತ್ತಾರೆಂದರೆ ಗೌರವಪೂರ್ವಕವಾಗಿ ಕಳುಹಿಸಿಕೊಡುವೆನು. ಹಜ್ರತ್‌ರ ಓರ್ವ ಶಿಷ್ಯನು ಸಾದಿಕ್ ಅಬ್ದುಲ್‌ಖಾದಿರ್ ಚಾಷ್ತಿ ಅಲ್ಲಿ ಹಾಜರಿದ್ದನು. ಈ ಮಾತುಗಳನ್ನು ಕೇಳಿ ತಕ್ಷಣ ಹಜ್ರತ್‌ರ ಸೇವೆಯಲ್ಲಿ ಹಾಜರಾಗಿ ಇದನ್ನು ತಿಳಿಸಿದನು. ಆಗ ಹಜ್ರತ್‌ರು ಸಾಯಂಕಾಲದ ನಮಾಜ್ ಸಲ್ಲಿಸಿ ಅದೇ ತೊಟ್ಟ ಬಟ್ಟೆಯಲ್ಲಿಯೇ ಬಾದಶಹನ ಬಳಿ ಹೋಗಿ ಇಲ್ಲಿಂದ ನಿರ್ಗಮಿಸಿದರು.

ಮೊಹರಮ್ಮದ ೨ನೆಯ ದಿನಾಂಕವಿತ್ತು. ಹಾಗೂ ಶರೀಯತ್‌ದ ವಿರುದ್ಧದ ಕಾರ್ಯವು ಜರುಗಿತು. ತಾಂಬೂಲವನ್ನು ಕಳುಹಿಸಿದನು. ಹಜ್ರತ್‌ರು ಅದನ್ನು ಸೇವಿಸಿದರು. ಆ ಮತ್ಸರ ಬುದ್ದಿಯ ವ್ಯಕ್ತಿಯು ಹೀಗೆಂದನು. ಅವರಿಗೆ ನಮಾಜ್ ಓದಿಸಲು ಹೇಳಬೇಕು. ಪಠಣ ಮಾಡುವಾಗ ನಿಜ ಹೊರ ಬರುವುದು. ಮತ್ತೆ ಸಾಯಂಕಾಲದ ಸಮಯ ಬಂದಿತು. ಹಜ್ರತ್‌ರಿಗೆ ಇಮಾಮತ್ ಮಾಡಲು (ನಮಾಜಿನ ನಾಯಕರ ನಿರ್ವಹಿಸಲು) ಹೇಳಲಾಯಿತು. ಪಠಣದಲ್ಲಿ ಯಾವ ತೆರನಾದ ತೊಂದರೆಯೂ ಉಂಟಾಗಲಿಲ್ಲ. ಆಗ ಆ ಈರ್ವರೂ ಲಜ್ಜಿತರಾದರು.

ಅದೇ ಶಾಹ್‌ನವಾಜ್‌ಖಾನ್‌ನು ಇವರ ಪರೀಕ್ಷೆ ಮಾಡಲು ತನ್ನ ಸೇವಕನಿಗೆ ಹೇಳಿದನು. ಹಜ್ರತ್‌ಶಾಹ್(ಖು) ಇಬ್ರಾಹಿಂಪುರದಲ್ಲಿ ಮಸೀದೆಯನ್ನು ನಿರ್ಮಿಸಿರುವರು.

ನಿನಗೆ ನೀನು ಶವವಾಗಿಸಿಕೋ ನಾನು ನಿನ್ನನ್ನು ಕಫನ್ ತೊಡಿಸಿ ಶವ ಮಂಚದ ಜೊತೆ ಹಜ್ರತ್‌ಶಾಹ್(ಖ)ರ ಬಳಿ "ನಮಾಜೆ ಜನಾಜಾ" ಅಂತಿಮ ಪ್ರಾರ್ಥನೆಗಾಗಿ ಒಯ್ಯುವೆನು. ಯಾವಾಗ ಅವರು ನಮಾಜ್‌ನ್ನು ಮುಗಿಸುವರೋ ಆಗ ನೀನು ಶವಮಂಚದಿಂದ ಏಳು ! ಹಾಗೂ ತಮಾಷೆ ಮಾಡು. ಆ ವ್ಯಕ್ತಿಯು ಒಪ್ಪಿಕೊಂಡನು. ಹಾಗೂ ಹಾಗೆಯೇ ಮಾಡಿದನು. ಆತನಿಗೆ ಕಫನ್ ತೊಡಿಸಿ "ಕಲ್ಮಯೇ ಶಹಾದತ್" ಓದುತ್ತಾ ಮಸೀದೆ ಇಬ್ರಾಹಿಂಪುರಕ್ಕೆ ಕರೆತಂದರು ಹಾಗೂ ಹಜ್ರತ್‌ರಲ್ಲಿ ವಿನಂತಿಸಿದರು. ನಮಾಜ್‌ಜನಾಜಾ ಓದಿಸಿರಿ. ಹಜ್ರತ್‌ಶಾಹರ ಮನೆಯ ಬಳಿಯಲ್ಲಿದ್ದ ಅಲಾವಿಯ ಸುತ್ತ ಅಹ್ಮದ್‌ಖಾನ್‌ನ ದಾಯಿಯ ಮಕ್ಕಳ ಸದ್ದು ಗದ್ದಲವಿತ್ತು. ಮೊದಲು ಹಜ್ರತ್‌ರು ನಿರಾಕರಿಸಿದರು. ನಂತರ ಬಹಳೆ ವಿನಂತಿಸಲಾಗಿ ಹಜ್ರತರು ಮಸೀದೆಯಿಂದ ಹೊರ ಬಂದರು. ಹಾಗೂ ಕೇಳಿದರು. ಏನು ಜೀವಂತ ವ್ಯಕ್ತಿಯ ನಮಾಜ್ ಮಾಡಲೇ ಇಲ್ಲ, ಮೃತನ ಕುರಿತು...? ಖಾನ್‌ನೆಂದನು ಮೃತನಿದ್ದಾನೆ ಜೀವಂತನ ನಮಾಜ್ ಹೇಗೆ! ಹಜ್ರತ್‌ರು ಎದ್ದು ಅಲ್ಲಾಹು ಅಕ್ಬರ್ ಎಂದರು. ಆ ಕಡೆ ಆ ವ್ಯಕ್ತಿಯ ಪ್ರಾಣಪಕ್ಷಿ ಹಾರಿಹೋಯಿತು. ಯಾವಾಗ ನಮಾಜ್ ಮುಗಿಯಿತೋ ಆಗ ಶವಪಂಜರವನ್ನೆತ್ತಿ ಹೇಳಿದರು. ಈ ಶವವನ್ನು ಒಯ್ಯಿರಿ ಹಾಗೂ ಬೇಗನೆ ದಫನ್ (ಅಂತ್ಯಕ್ರಿಯೆ) ಮಾಡಿರಿ. ಆಗ ಆ ದುರ್ಬುದ್ಧಿಯ ಖಾನ್‌ನು ಏನು ನೋಡುತ್ತಾನೆ. ಸೇವಕನು ಏಳುತ್ತಲೇ ಇಲ್ಲ. ಅಲುಗಾಡುತ್ತಲೂ ಇಲ್ಲ. ಸ್ವತಃ ತಾನೇ ಅವನ ಬಳಿ ಹೋಗಿ ನೋಡಿದನು. ಅದು ಶವವೇ ಇತ್ತು. ಲಜ್ಜಿತನಾಗಿ ಬೇರೆದಾರಿ ಇಲ್ಲದೆ ಸೇವಕನ ಶವಸಂಸ್ಕಾರ ಮಾಡಿಸಿದನು.

ಹಜ್ರತ್ ಶಾಹ್(ಖ)ರ ದ್ವಾರಪಾಲಕ ಮಿಯಾಂನೂರ್ ಮುಹಮ್ಮದ್ ಶುದ್ಧ ಮನಸ್ಸಿನ ಪವಾಡಪುರುಷರಾಗಿದ್ದರು. ಅವರೆನ್ನುತ್ತಿದ್ದರು. ಹಜ್ರತ್‌ಖಿಜರ್(ಅ)ರು ಅಪರಾಹ್ನದ ಸಮಯದಲ್ಲಿ ಆಗಮಿಸಿ, ಹಜ್ರತ್‌ರಿಗೆ ಬೋಧನೆಗೈಯ್ಯುತ್ತಿದ್ದರು. ಈ ದ್ವಾರಪಾಲಕರು ಯಾವಾಗ ನಮಾಜಿನ ಸಮಯವಾಗಿ ಬಾಂಗಿಯು ಆಜಾನ್ ನೀಡುತ್ತಿದ್ದನು. ಇವರು ತನ್ಮಯರಾಗುತ್ತಿದ್ದರು. ಹಾಗೂ ತಲ್ಲೀನರಾಗಿ ದೇಹವು ಕಂಪಿಸಲು ಪ್ರಾರಂಭಿಸಿ ಕೈಯಿಂದ ದಂಡವು ಕುಸಿದು ಬೀಳುತ್ತಿತ್ತು. ಆ ಸಮಯದಲ್ಲಿ ಯಾರು ಒಳಹೊರಗೆ ತಿರುಗಾಡಿದರು ತಿಳಿದುಬರುತ್ತಿರಲಿಲ್ಲ. ಈ ಸ್ಥಿತಿಯು ನಮಾಜ್ ಪೂರ್ತಿಯಾಗುವವರೆಗೂ ಇರುತ್ತಿತ್ತು. ತದನಂತರವೇ ಮರಳಿ ಮೊದಲಿನ ಸ್ಥಿತಿಗೆ ಬರುತ್ತಿದ್ದರು. ಯಾವಾಗಲೂ ಅವರದು ಇದೇ ಸ್ಥಿತಿ ಇರುತ್ತಿತ್ತು.

ಯಾವಾಗ ಹಜ್ರತ್ ಶಾಹ್(ಖ)ರು ಬಿಜಾಪುರಕ್ಕೆ ಆಗಮಿಸಿದರು. ಆವಾಗ ಪಟ್ಟಣದ ವಿದ್ವಾಂಸರು, ತತ್ವಶಾಸ್ತ್ರಜ್ಞರು ಹಾಗೂ ಧಾರ್ಮಿಕ ಪಂಡಿತರು ಇವರ ವ್ಯಕ್ತಿತ್ವಕ್ಕೆ ಮರಳಾದರು ಹಾಗೂ ಇವರ ವಿದ್ವತ್‌ನ್ನು ಒಪ್ಪಿಕೊಂಡರು. ಮಿಯಾ

ಹಬೀಬ್‌ರು ಪಟ್ಟಣದ ಮಹಾಗುರುವಾಗಿದ್ದರು ಅವರೂ ಸಹ ಹಜ್ರತ್‌ಶಾಹರ ವಿದ್ವತ್ತಿಗೆ ಶರಣಾದರು. ಇಬ್ರಾಹಿಂ ಆದಿಲ್‌ಶಾಹ್‌ನು ಕೇಳಿ ಹೀಗೆಂದನು. ಬೇರೆಯವರು ಏನೆ ಮಾಡಲಿ ಆದರೆ ಪಟ್ಟಣದ ಮಹಾಗುರುವಾದ ಮಿಯಾ ಹಬೀಬ್‌ರ ಯೋಗ್ಯತೆಯ ಮೇಲೆ ಬಹಳೇ ಭರವಸೆಯಿತ್ತು. ಆದರೆ ಅವರೂ ಸಹ ಹಜ್ರತ್‌ರ ಶಿಷ್ಯರಾದರು. ಮಹಾಗುರುವು ಈ ಮಾತು ಕೇಳಿ ಹೀಗೆ ಹೇಳಿದರು. ನಾನು ಏನನ್ನೂ ಅರಿತಿರುವುದಿಲ್ಲ. ಮತ್ತೆ ನನಗೆ ಅವರಲ್ಲಿ ವಿದ್ಯಾರ್ಜನೆಗೈಯ್ಯಲು ತೊಂದರೆ ಏನು?

ಓರ್ವ ವ್ಯಕ್ತಿಯು ಹಜ್ರತ್‌ಶಾಹ್‌ರ ಎದುರಲ್ಲಿ ವಿನಂತಿಸಿಕೊಂಡನು. ನನಗೆ ಓರ್ವ ಅವಿವಾಹಿತ ಮಗಳಿರುವಳು. ಅವಳ ವಿವಾಹದ ಕುರಿತು ತುಂಬಾ ಚಿಂತಿತನಾಗಿದ್ದೇನೆ. ಸ್ವಲ್ಪ ಧನದ ಅವಶ್ಯಕತೆಯಿದೆ. ನನ್ನ ಮೇಲೆ ದಯೆ ತೋರಿ ಯಾರ ಬಳಿಯಾದರು ಶಿಫಾರಸ್ಸು ಮಾಡಿ ಕಾಣಿಕೆಯ ರೂಪದಲ್ಲಿ ಕೊಡಿಸಬೇಕು. ಇಲ್ಲದಿದ್ದರೆ ಸಾಲದ ರೂಪದಲ್ಲಿಯಾದರೂ ಕೊಡಿಸಬೇಕು ನಾನು ಅದನ್ನು ಮುಂದೆ ಮರಳಿಸುವೆನು. ಹಜ್ರತ್‌ಶಾಹ್‌ರು ಕೇಳಿದರು. ನೀನು ಎಷ್ಟು ಅವಧಿಯಲ್ಲಿ ಹಿಂತಿರುಗಿಸುವಿ ಆತನು ಆಯಾ ಸಮಯಕ್ಕೆ ಹಿಂತಿರುಗಿಸುವೆನು ಮತ್ತೆ ಹಜ್ರತ್‌ರು ಹೀಗೆ ಹೇಳಿದರು. ಅದನ್ನೇ ಬರೆದುಕೊಂಡು ಬನ್ನಿ ಅವನು ಬರೆದುಕೊಂಡು ಬಂದ ನಂತರ ಹೀಗೆಂದರು, ಆ ಮಾಡಿನಲ್ಲಿ ಇಡಿರಿ ಹಾಗೂ ಅಲ್ಲಿ ಏನೇನಿದೆಯೋ ತೆಗೆದುಕೊಳ್ಳಿರಿ. ಈ ವ್ಯಕ್ತಿಯು ಯಾವಾಗ ಸಮೀಪ ಬಂದನೋ ಆ ಸಾಲ ಮರಳಿಸುವ ಒಪ್ಪಿಗೆ ಪತ್ರವನ್ನು ಇಟ್ಟನು. ಆಗ ತನಗೆ ಬೇಕಾದ ಮೊತ್ತದಷ್ಟು ದುಡ್ಡಿನ ಚೀಲವು ಅಲ್ಲಿತ್ತು. ಅದನ್ನು ತೆಗೆದುಕೊಂಡು ಹೊರಟು ಹೋದನು ಹಾಗೂ ತನ್ನ ಕಾರ್ಯವನ್ನು ಯಶಸ್ವಿಯಾಗಿ ಪೂರ್ತಿಗೊಳಿಸಿದನು. ನಿಗದಿತ ಸಮಯದಲ್ಲಿ ಆ ದುಡ್ಡನ್ನು ಮರಳಿತಂದಾಗ ಆಗ ಹಜ್ರತ್‌ರು ಅದೇ ಮಾಡಿನಲ್ಲಿಟ್ಟು ನಿನ್ನ ಒಪ್ಪಿಗೆ ಪತ್ರವನ್ನು ಮರಳಿ ತೆಗೆದುಕೋ ಎಂದರು. ಆ ವ್ಯಕ್ತಿಯು ಹಾಗೆಯೇ ಮಾಡಿದನು. ತನ್ನ ಒಪ್ಪಿಗೆ ಪತ್ರವನ್ನು ಮರಳಿ ತೆಗೆದುಕೊಂಡನು.

ಒಂದು ದಿನ ಮೌಲಾನಾ ಹಬೀಬುಲ್ಲಾಹ್(ಖು)ಅವರು ಹಜ್ರತ್‌ಶಾಹ್‌ರ ಮುಖಚಂದಿರವು ತುಂಬಾ ಕಾಂತಿಯುಕ್ತವಾಗಿರುವುದನ್ನು ಕಂಡರು. ಆಗ ಅವರ ಸೇವಕರಿಗೆ ಕಾರಣವನ್ನು ಕೇಳಿದರು. ಇಂದಿಗೆ ಹದಿಮೂರು ದಿನಗಳಾದವು. ಹಜ್ರತ್‌ರು ಏನನ್ನೂ ತಿಂದಿರುವದಿಲ್ಲ.

ಹಜ್ರತ್‌ಶಾಹ್(ಖು)ರು ಶೇಖ್ ಇಬ್ರಾಹಿಂರಿಗೆ ಹೈದರಾಬಾದಿನ ಖುತುಬ್‌ಶಾಹ್ ಬಾದಶಾಹ್ ಬಳಿ ಕಳುಹಿಸಿ ಹೀಗೆ ತಾಕೀತು ಮಾಡಿದರು. ಯಾವ ಮಧ್ಯವರ್ತಿಯ ಸಹಾಯವಿಲ್ಲದೇ ನಾನು ನಿಮಗೆ ಏನು ಹೇಳಿರುವೆನೋ ಅದನ್ನು ಆತನಿಗೆ ತಿಳಿಸಬೇಕು. ಆದರೆ ಅವರು ಮಧ್ಯವರ್ತಿಯನ್ನು ಭೇಟಿಯಾಗಿ ಹೇಳಿದರು. ಕುತುಬ್‌ಶಾಹ್‌ನು

ತಕ್ಷಣ ಅವರ ನಾಲಿಗೆಯನ್ನು ಕತ್ತರಿಸಿದನು. ಯಾವಾಗ ಅವರು ಹಜ್ರತ್‌ಶಾಹ್(ಖು)ರನ್ನು ಭೇಟಿಯಾದರು ಆಗ ಅವರು ಹೇಳಿದರು. ಆದೇಶದ ವಿರುದ್ಧ ಏಕೆ ನಡೆದುಕೊಂಡಿರಿ? ಆದರೂ ನಾಲಿಗೆ ಕತ್ತರಿಸಲ್ಪಟ್ಟರೂ ಮಾತಿನಲ್ಲಿ ಏನೂ ತೊಂದರೆಯಾಗಲಿಲ್ಲ.

ಮುಲ್ಲಾ ಅಹ್ಮದ್ ಮಜಜೂಬ್(ಖು)ರು ಪ್ರಾರಂಭ ಕಾಲದಲ್ಲಿ ಲೌಕಿಕ ಪ್ರೇಮದಲ್ಲಿ ಮುಳುಗಿದ್ದರು. ಅಲ್ಲಾಹುವಿನಲ್ಲಿ ಪರಿಪೂರ್ಣರಾಗಿ ಸಮರ್ಪಿತರಾಗಿರಲಿಲ್ಲ. ಒಂದು ದಿನ ಅವರ ತಂದೆಯವರು ಹಜ್ರತ್(ಖು)ರ ಬಳಿ ಅವರ ವಿಷಯವಾಗಿ ಚರ್ಚಿಸಿದರು. ಹಜ್ರತ್‌ರು ಹೇಳಿದರು. ಅವರನ್ನು ನನಗೊಪ್ಪಿಸಿರಿ. ಇದೇ ಸುದೈವವೆಂದು ಬಗೆದು ಹಜ್ರತ್‌ರ ಬಳಿ ಅವರನ್ನು ತಂದು ತಲುಪಿಸಿದರು. ಹಜ್ರತ್‌ರು ಅವರನ್ನು ಶಿಷ್ಯರನ್ನಾಗಿಸಿ ಕೆಲವು ಜಪ ಮಾಡಬೇಕಾದ "ಆಯತ್" "ವಜೀಪಾ"ಗಳನ್ನು ಅರುಹಿದರು ಹಾಗೂ ಏಕಾಂತದಲ್ಲಿ ಅವರನ್ನು ಕೂಡ್ರಿಸಿದರು. ಅವರು ಅದೆಷ್ಟು ಮಗ್ನರಾದರೆಂದರೆ ಜಗತ್ತನ್ನೇ ಮರೆತರು ಹಾಗೂ ಆ ಸ್ಥಾನದಲ್ಲಿ ಕೂಡಲೊಲ್ಲೆ ಎಂದರು. ಆಗ ಹಜ್ರತ್‌ರು ಅದೇ ಸ್ಥಳದಲ್ಲಿ ಕೂಡ್ರು ಎಂದು ತಾಕೀತ್ ಮಾಡಿದರು. ಏಕಾಂತವಾಸದ ಅವಧಿಯು ಪೂರ್ತಿಯಾದ ಮೇಲೆ ಅವರಿಂದ ಬಹಳಷ್ಟು ಕರಾಮತ್ತುಗಳು ಜರುಗಿದವು. ಹಜ್ರತ್‌ರು ಹೀಗೆ ಹೇಳಿದರು. ಈಗ ಇದೇ ರುಚಿಯನ್ನು ಅನುಭವಿಸುತ್ತ ಕೂಡ್ರಬೇಡ ಇಲ್ಲದಿದ್ದರೆ ಬೇರೆ ವಿದ್ಯೆಗಳನ್ನು ನಿನಗೆ ಕಲಿಸುವದಿಲ್ಲ.

ಯಾರಾದರೂ ಮುಲ್ಲಾ ಅಹ್ಮದ್ ಮಜಜೂಬ್‌ರಿಂದ ಕಲ್ಲುಸಕ್ಕರೆ ಬೇಡಿದರೆ ಅವರು ಸಣ್ಣಕಲ್ಲಿನ ತುಂಡು ಎತ್ತಿ ಕೊಡುತ್ತಿದ್ದರು. ಅವು ಕಲ್ಲುಸಕ್ಕರೆಯಾಗಿ ಪರಿವರ್ತಿತವಾಗುತ್ತಿದ್ದವು.

ಮುಲ್ಲಾ ಅಹ್ಮದ್ ಮಜಜೂಬ್ ಹಜ್ರತ್‌ರು ನೀಡುವ ಬೋಧನೆಯ ಸಮಯದಲ್ಲಿ ಹಜ್ರತ್‌ಶಾಹ್(ಖು)ರ ಪಾದರಕ್ಷೆಗಳನ್ನು ಕಂಕುಳಲ್ಲಿ ಹಿಡಿದು ಧ್ಯಾನದಲ್ಲಿಯೇ ಮಗ್ನರಾದರು. ಸೇವಕರು ಅಸಹಾಯಕರಾಗಿ ಇವರು ಕುಳಿತ ಚಾಪೆಯ ಮೂಲೆಗಳನ್ನು ಹಿಡಿದು ಅವರನ್ನು ಹೊರತಂದರು. ಹಜ್ರತ್‌ರು ಮತ್ತೆ ಅಲ್ಲಿಯೇ ಹೋಗಿ ಕುಳಿತರು. ಮೂರು ಸಲ ಓ ನನ್ನ ಮುತ್ತಾತರೆ ! ಎಂದುಸಿರಿದರು ಹಾಗೂ ಮೂರು ಸಲವೂ ಓ ನನ್ನ ಮಗುವೇ ಎಂದು ಪ್ರತ್ಯುತ್ತರ ಬಂದಿತು. ಆ ಸಮಯದಲ್ಲಿ ಅವರು ಏನೊಂದನ್ನೂ ಅನ್ನದೇ ಧ್ಯಾನಸ್ಥರಾದರು. ಸೇವಕರು ವಿಹ್ವಲರಾಗಿ ಬೇರೆಯ ಚಾಪೆಯನ್ನು ಹಾಸಿದರು. ರಾತ್ರಿಯಲ್ಲಿ ಸೇವಕರ ಸ್ವಪ್ನದಲ್ಲಿ ಪ್ರವಾದಿ ಹಜ್ರತ್ ಮುಹಮ್ಮದ್‌ಶಾಹರು ಆಗಮಿಸಿ ಸೇವಕರ ಮೇಲೆ ಕೋಪಗೊಂಡರು ಹಾಗೂ ಹೀಗೆಂದರು ನನ್ನ ಮೊಮ್ಮಗನು ನನ್ನ ಭೇಟಿಗೆ ಬಂದಿದ್ದನು ಅವನಿಗೆ ಏಕೆ ತೊಂದರೆ ನೀಡಿದಿರಿ. ಬೆಳಗ್ಗೆ ಬೆಳಗ್ಗೆಯೇ ಸೇವಕರು ಹಜ್ರತ್‌ಶಾಹ್‌ರ ಸನ್ನಿಧಿಗೆ ಬಂದು ಕ್ಷಮೆ ಯಾಚಿಸಿದರು. ಹಾಗೂ ಅವರ

ಸೇವೆಯಲ್ಲಿ ತೊಡಗಿಕೊಂಡರು. ಈ ವಿಷಯವು ಇಡೀ ಮದೀನಾದವರಲ್ಲಿ ಪ್ರಸಿದ್ಧಗೊಂಡಿತು.

ಹಜ್ರತ್‌ಶೇಖ ಅಬುಲ್‌ಫತಹ್ ಹಬೀಬುಲ್ಲಾಹಿ(ಖ)ರು ತಮ್ಮ ಪುಸ್ತಿಕೆಯಲ್ಲಿ ಹೀಗೆ ಹೇಳುತ್ತಾರೆ. ತಾವು ಬಹಳಷ್ಟು ಮಹಾಪುರುಷರಿಂದ ಹೀಗೆ ಕೇಳಿರುವದು ಯಾವಾಗ ಹಜ್ರತ್‌ಶಾಹ್(ಖ)ರು ಮದೀನಾದಲ್ಲಿದ್ದರು. ಆಗ ಅಲ್ಲಿಯ ಹಜ್ರತ್(ಸ)ರ ವಂಶಸ್ಥರೊಂದಿಗೆ ಧಾರ್ಮಿಕ ಚರ್ಚೆಯಾಯಿತು. ಹಜ್ರತ್‌ಶಾಹ್‌ರು ಮುಹಮ್ಮದ್(ಸ)ರ ರೋಜಾದಲ್ಲಿ ನಿಂತುಕೊಂಡು ಸಲಾಮ ಹೇಳಬೇಕು ಹಾಗೂ ವಿನಂತಿಸಬೇಕು. ಆಗ ಮದೀನಾದವರು ಮೊದಲು ನಿಂತುಕೊಂಡು ಮೂರು ಸಲ 'ಅಸ್ಸಲಾಮು ಅಲೈಕುಂ ಯಾ ಜದ್ದಿ... !' (ಅಸ್ಸಲಾಮು ಅಲೈಕುಮ್ ನನ್ನ ಮುತ್ತಾತರೆ...) ಎಂದರು ಆದರೆ ಒಂದು ಸಲವೂ ಪ್ರತ್ಯುತ್ತರ ಸಿಗಲಿಲ್ಲ. ಮತ್ತೆ ಹಜ್ರತ್‌ಶಾಹ್(ಖ)ರು ಮುಂದೆ ಬಂದು ಅಸ್ಸಲಾಮು ಅಲೈಕುಂ ಯಾ ಜದ್ದಿ ಎಂದು ಹೇಳಿದರು. ಅದಕ್ಕೆ ಪ್ರತ್ಯುತ್ತರವಾಗಿ ವಾಲೈಕುಂ ಅಸ್ಸಲಾಂ ಯಾ ವಲ್ದಿ(ಓ ನನ್ನ ಮಗುವೆ ನಿನ್ನ ಮೇಲೆ ಶಾಂತಿಯಿರಲಿ) ಎಂದು. ಹೀಗೆಯೇ ಮೂರು ಸಲವೂ ಉತ್ತರ ಲಭಿಸಿತು. ಇದರಿಂದ ಮದೀನಾದವರು ತುಂಬಾ ವಿಹ್ವಲರಾಗಿ ವಿನಂತಿಸಿಕೊಳ್ಳತೊಡಗಿದರು. ಯಾವಾಗ ರಾತ್ರಿ ಆಯಿತೋ ಆಗ ಅವರೊಂದಿಗಿನ ಓರ್ವ ಮದೀನಾದವರ ಸ್ವಪ್ನದಲ್ಲಿ ಹಜ್ರತ್ ಮುಹಮ್ಮದ್(ಸ)ರು ಆಗಮಿಸಿ ಹೀಗೆಂದರು. ಯಾವಾಗ ಮದೀನಾದ ನನ್ನ ವಂಶಸ್ಥರು ಸಲಾಂ ಮಾಡಿದರೋ ಆಗ ನಾನು ವುಜೂ (ಅಂಗಶುದ್ಧಿ) ಮಾಡುತ್ತಲಿದ್ದೆ. ಯಾವಾಗ ಸಿಬಗ್‌ತುಲ್ಲಾಹ್‌ರು ಸಲಾಂ ಅರ್ಪಿಸಿದರೋ ಆಗ ನಾನು ಅಂಗಶುದ್ಧಿ ಮುಗಿಸಿದ್ದೆ. ಅದಕ್ಕಾಗಿ ನಿಮ್ಮ ಸಲಾಮಗೆ ಪ್ರತಿಕ್ರಿಯಿಸಲಿಲ್ಲ. ಅವರ ಸಲಾಂಗೆ ಪ್ರತಿಕ್ರಿಯಿಸಿದೆ.

'ಹಜರುಲ್ ಆಶಿಕೀನ್' ಗ್ರಂಥಕರ್ತರು ಹೀಗೆ ಹೇಳುತ್ತಾರೆ. ಹಜ್ರತ್‌ಶಾಹ್(ಖ) ಹತ್ತು ವರುಷ ಮದೀನಾದಲ್ಲಿ ವಾಸಿಸಿದರು ಯಾವಾಗಲೂ ಪವಿತ್ರ ರೋಜಾದಲ್ಲಿ ಬಹಳೇ ಉತ್ಸುಕತೆಯೊಂದಿಗೆ ಕೂಡ್ರುತ್ತಿದ್ದರು. ಯಾವಾಗ ಇರುಳಾಗುತ್ತಿತ್ತೋ ಮತ್ತು ಸೇವಕರು ಬಾಗಿಲನ್ನು ಭದ್ರಪಡಿಸಿ ಮನೆಗೆ ಮರಳುವ ಸಮಯವಾಗುತ್ತಿತ್ತೋ ಆಗಲೂ ಹಜ್ರತ್‌ಶಾಹ್(ಖ)ರು ಅಲ್ಲಿಯೇ ಕೂಡ್ರುತ್ತಿದ್ದರು. ಸೇವಕರು ಅವರನ್ನು ಯಾವುದೊಂದು ನೆಪಮಾಡಿ ಅಲ್ಲಿಂದ ಎಬ್ಬಿಸುತ್ತಿದ್ದರು. ಅವರು ಕೆಲವು ಸಲ ಚಾಪೆಯನ್ನು ಬಿಗಿ ಹಿಡಿಯುತ್ತಿದ್ದರು. ಏಕೆಂದರೆ ತಮ್ಮನ್ನು ಯಾರೂ ಹೊರಗೆ ಕಳುಹಿಸದಿರಲಿ ಆದರೆ ಆ ಜನರು ಚಾಪೆಯೊಂದಿಗೆಯೇ ಅವರನ್ನು ಹೊರತಂದು ಬಿಡುತ್ತಿದ್ದರು. ಯಾವಾಗ ಮತ್ತೆ ಮುಂಜಾವಿನಲ್ಲಿ ಅವರು ಮರಳಿ ಬರುತ್ತಿದ್ದರೋ ಆಗಲೂ ಹಾಗೆಯೇ ಹಜ್ರತ್‌ರನ್ನು ನಮಾಜಿನಲ್ಲಿ ತೊಡಗಿರುವುದನ್ನು ಕಾಣುತ್ತಿದ್ದರು. ಒಂದು ದಿನ ಪವಿತ್ರ ರೋಜಾದಲ್ಲಿ ಸಾರ್ವಜನಿಕರು ಸೇರಿದ್ದರು. ಹಜ್ರತ್‌ಶಾಹ(ಖ)ರು ಹೇಳಿದರು. ಅಸ್ಸಲಾಮು ಅಲೈಕುಂ

ಯಾ ಜದ್ದಿ ಹಾಗೂ ರೋಜೆ ಮುಬಾರಕ್‌ದಿಂದ ಪ್ರತ್ಯುತ್ತರ ಬಂದಿತು. ವಾಲೈಕುಂ ಅ ಸ್ಸಲಾಂ ಯಾ ವಲ್ದಿ... ಸಾರ್ವಜನಿಕರು ಈ ಕರಾಮತ್ತನ್ನು ಕಂಡು ಹಜ್ರತ್‌ಶಾಹ್‌ರ ಅನುಯಾಯಿಗಳಾದರು ಹಾಗೂ ಅವರ ಶಿಷ್ಯತ್ವವನ್ನು ಸ್ವೀಕರಿಸಿದರು. ಇದೇ ವಿಷಯದ ಕುರಿತು ಹಾಮಿದ್‌ಸಾಹೇಬ್ ಖಲೀಫಾ ಹಜ್ರತ್‌ಶಾಹ್ ಕರೀಮ್ ಮುಹಮ್ಮದ್ ಸಿಬಗತುಲ್ಲಾಹ್‌ರ 'ಗಜಲ್'ನಲ್ಲಿ ಹೀಗೆ ವಿವರಿಸಲ್ಪಟ್ಟಿದೆ.

ಸಿಬಗ್‌ತುಲ್ಲಾಹ್ ವಲಿ ಮುಅತಮದೇ ಆಶಿಕ್‌ಪಾಕ್ ವ ವಾಸಿಲೇ ಸಮದೀ, ಗುಫ್ತ ರೋಜಯೇ ಬರ್ರೋಜಯೇ ಅಹ್ಮದ್ ಅಸ್ಸಲಾಮಅಲೈಕ ಯಾ ಜದ್ದೀ ಬಾಜ ಆಮದ್‌ಜವಾಬ್ ಜಾನಿಬೆಊ ವಾಲೈಕುಮ ಅಸ್ಸಲಾಂ ಯಾ ಕೈ ತವಾನದ್ ಕಸೆ ಬರಾಬರೀಶ್ ಕೆ ಮುರಾದರ್ ಅಸ್ತ್ ಸಿಯಾದತ್ ಸನದಿ ಬಾಷ್‌ಹಾಮಿದ್ ಗುಲಾಂ ದರಗಾಹಷ್ ತಾ ಬಯಾಬಿ ಸಆದತ್ ಅಬದಿ ।

"ಸಿಬಗತುಲ್ಲಾಹ ಇವರು ಬಹಳೇ ಭರವಸೆಯ ಸೂಫಿಗಳಾಗಿದ್ದಾರೆ. ಅಲ್ಲಾಹುವಿನ ಪ್ರೇಮಿಯಾಗಿದ್ದಾರೆ ಹಾಗೂ ಅಲ್ಲಾಹುವಿನೇ ಸೇರಿದ್ದಾನೆ. ಒಂದುದಿನ ಅವರು ಹಜ್ರತ್ ಮುಹಮ್ಮದ್(ಸ) ರ ಪವಿತ್ರ ಸಮಾಧಿಯ ಬಳಿ ಹೋಗಿ ಹೀಗೆಂದರು.

ಅಸ್ಸಲಾಮು ಅಲೈಕುಂ ಓ ನನ್ನ ಪೂರ್ವಜರೆ ।

ಆ ಕಡೆಯಿಂದ ಅವರಿಗೆ ಹೀಗೆ ಉತ್ತರ ಲಭಿಸಿತು.

ವಾಲೈಕುಂ ಅಸ್ಸಲಾಮು ಓ ನನ್ನ ಮಗುವೆ ॥

ಯಾವ ವ್ಯಕ್ತಿಯು, ಆ ವ್ಯಕ್ತಿಗೆ ಸಮನಾಗಬಲ್ಲನು, ಯಾರಿಗೆ ನಾನು ನಾಯಕತ್ವದ ಸನದನ್ನು ನೀಡಿರುವೆನು. ಓ! ಹಾಮಿದ್ ನೀನು ಇವರ ದರ್ಗಾದ ಗುಲಾಮನಾಗು ಏಕೆಂದರೆ ನೀನು ನಿರಂತರ ಸಮೃದ್ಧಿಯನ್ನು ಹೊಂದು.

ಹಜ್ರತ್‌ಶಾಹ್ ತಾಜುಲ್‌ಹಕ್(ಖು) ಅವರು ಅಂತರ್ಜ್ಞಾನಿಯಾಗಿದ್ದರು. ಯಾವ ಮಹಾಪುರುಷರ ಪವಿತ್ರ ಸಮಾಧಿಯ ದರ್ಶನಗೈಯುತ್ತಿದ್ದರೋ ಆ ಮಹಾ ಪುರುಷರೊಡನೆ ಆತ್ಮಸಂಗಾತ ಹೊಂದುತ್ತಿದ್ದರು ಹಾಗೂ ಸಂಭಾಷಣೆಯೂ ಜರುಗುತ್ತಿತ್ತು ಮತ್ತು ಅವರಿಂದ ಸಮೃದ್ಧಿ ಪ್ರಾಪ್ತಿಯಾಗುತ್ತಿತ್ತು. ಅವರು ಹಜ್ರತ್‌ಶಾಹ್(ಖು)ರ ಖಲೀಫಾರಾದ ಹಜ್ರತ್ ಸೈಯದ್ ಅಸ್‌ಅದ್‌ಬಲ್ಖಿ ಅವರ ಕಾಲದಲ್ಲಿ ಮದೀನಾ ಮುನವ್ವರಾಕ್ಕೆ ಆಗಮಿಸಿದರು ಹಾಗೂ ಮುಹಮ್ಮದ್(ಸ)ರ ಪವಿತ್ರ ಸಮಾಧಿಯ ಬಳಿಯೂ ತಮ್ಮ ಎಂದಿನ ರೂಢಿಯಂತೆ ಧ್ಯಾನಸ್ಥರಾಗಿ ಕುಳಿತರು. ಆದರೆ ಏನೂ ಪ್ರತಿಕ್ರಿಯೆ ದೊರೆಯಲಿಲ್ಲ. ಯಾವ ಅಂತರ್ಜ್ಞಾನ ಅವರಿಗಿತ್ತೋ ಅದರಲ್ಲಿಯೂ ವ್ಯತ್ಯಯ ಉಂಟಾಯಿತು. ಆ ಮಹಾಪುರುಷರು ವಿಹ್ವಲಿತರಾಗಿ

ತಮ್ಮ ಅವಸ್ಥೆಯನ್ನು ಹಜ್ರತ್‌ಸೈಯದ್ ಅಸ್‌ಅದ್ ಬಲ್ಬಿ (ಖು)ರಿಗೆ ಮನಗಾಣಿಸಿದರು. ಅವರೆಂದರು ನಿಮಗೆ ಅರಿವಿಲ್ಲ. ಹಜ್ರತ್ ಮುಹಮ್ಮದ್(ಸ)ರ ದರ್ಗಾದಲ್ಲಿ ಹಜ್ರತ್‌ಶಾಹ್(ಖು)ರ ಮಾತು ನಡೆಯುತ್ತದೆ. ಆಗ ಇಲ್ಲಿ ಹಜ್ರತ್‌ಶಾಹ್‌ರ "ವಸೀಲಾದ" ಅವಶ್ಯಕತೆಯಿದೆ ಎಂದಾಗ ಮತ್ತೆ ಹಜ್ರತ್‌ಶಾಹ್(ಖು)ರ ಸಮಾಧಿಯ ಬಳಿ ಧ್ಯಾನಮಗ್ನರಾದರು. ಆಗ ಅವರಿಗೆ ಹಜ್ರತ್ ಮುಹಮ್ಮದ್(ಸ) ಹಾಗೂ ಹಜ್ರತ್‌ಶಾಹ್(ಖು)ರ ಆತ್ಮದರ್ಶನವಾಯಿತು. ತಮ್ಮ ಅಂತರ್ಜ್ಞಾನವೂ ಜಾಗೃತವಾಗಿ ಸಮೃದ್ಧಿ ಹೊಂದಿದರು. ಉಳಿದ ಆಯುಷ್ಯ ಪೂರ್ತಿ ಪವಿತ್ರ ಮಕ್ಕಾದಲ್ಲಿ ಕಳೆದರು.

ಹಜ್ರತ್‌ಶಾಹ್(ಖು)ರಿಂದ ಅವರ ಓರ್ವ ಶಿಷ್ಯನು ಹೀಗೆ ವಿನಂತಿಸಿದನು. ಸೇವಕನಿಗೆ ಮುಹಮ್ಮದ್(ಸ)ರ ಮುಖ ದರ್ಶನದ ಬಯಕೆಯಿದೆ. ಒಂದು ವೇಳೆ ಹಜ್ರತ್‌ರ ಕೃಪೆಯಾದರೆ ಈ ಸೇವಕನು ತನ್ನ ಇಚ್ಛೆ ಪೂರೈಸಿಕೊಳ್ಳುವಲ್ಲಿ ಯಶಸ್ವಿಯಾಗುವನು. ಹಜ್ರತ್‌ರು ಒಂದು ಸೂಕ್ತವನ್ನು ಜಪಿಸಲು ಆದೇಶಿಸಿದರು. ಆ ಶಿಷ್ಯನು ಸ್ವಸಂತೋಷದೊಂದಿಗೆ ತಕ್ಷಣ ಅಂಗಶುದ್ಧಿಗೈದು ಒಂದು ಕೋಣೆಯಲ್ಲಿ ಕುಳಿತು ಸೂಕ್ತದ ಜಪದಲ್ಲಿ ತೊಡಗಿದರು. ಸ್ವಲ್ಪವೇ ಸಮಯದಲ್ಲಿ ಸಂಮ್ಮೋಹ ಸ್ಥಿತಿಯಲ್ಲಿ ಕಂಡದ್ದೇನೆಂದರೆ ಹಜ್ರತ್ ಮುಹಮ್ಮದ್(ಸ)ರು ಆಗಮಿಸಿದರು ಹಾಗೂ ಶಿಷ್ಯನ ಉದ್ದೇಶಪೂರ್ತಿಯಾಯಿತು. ಅದೇ ಸಂತೋಷದಲ್ಲಿ ಅವರು ಹೀಗೆಂದರು.

"ಸಿಬಗತುಲ್ಲಾಹಿ ಶವಾರಖ್ವಾಹಿ ಮುರಾದ್‌ಕೆ ಓ ಮುಸಾಹಿಬ್‌ರಾ ಸಹಾಬಿ ರುತ್ಬಾದಾದ್

ಸಿಬ್ಗತುಲ್ಲಾಹ್ ದರ್ಮಿಯಾನೆ ಔಲಿಯಾ ಚ್ಯೂಂ ಮುಹಮ್ಮದ್(ಸ) ದರ್ಮಿಯಾನೆ ಅಂಬಿಯಾ ॥

ಸಿಬಗತುಲ್ಲಾಹ್‌ರಿಂದ ನೀನು ಏನೇನು ಅಪೇಕ್ಷಿಸುತ್ತೀಯೋ ಅದನ್ನೆಲ್ಲ ಪಡೆದುಕೋ। ಏಕೆಂದರೆ ಅವರ ಘನಸ್ಥಾನವು ಪ್ರವಾದಿ ಸಂಗಾತಿಗಳ ಸ್ಥಾನಮಾನ ಹೊಂದಿದೆ. ಸಮಸ್ತ ಔಲಿಯಾಗಳಲ್ಲಿ ಸಿಬಗತಲ್ಲಾಹರ ಸ್ಥಾನ ಹೇಗಿದೆಯೆಂದರೆ ಸಮಸ್ತ ಪ್ರವಾದಿಗಳ ನಡುವೆ "ಮುಹಮ್ಮದ"(ಸ)ರ ಸ್ಥಾನಮಾನವಿದೆ.

ಹಜ್ರತ್‌ಶಾಹ್(ಖು)ರು ಮದೀನಾ ಮನ್ವರಾದ ಮಹಾಪೌರರಿಗೆ ಹೆಚ್ಚಿನ ಗಮನ ನೀಡುತ್ತಿರಲಿಲ್ಲ. ಸೇವಕರು ಹೀಗೆಂದರು ತಮಗೆ ಇಲ್ಲಿ ಇರಬೇಕಾಗಿದೆ. ಅದಕ್ಕಾಗಿ ಮಹಾಪೌರರೊಂದಿಗೆ ಸಂಬಂಧವಿರಿಸಿಕೊಳ್ಳುವುದು ಉಚಿತವಾಗಿದೆ. ಆಗ ಹಜ್ರತ್‌ರು ಹೀಗೆಂದರು ನಾನು ಇಲ್ಲಿ ಸಾಯಲು ಬಂದಿದ್ದೇನೆ ನನಗೆ ಮಹಾಪೌರರೊಂದಿಗೆ ಏನು ಕೆಲಸ?

ಮದೀನಾ ಮುನವ್ವರಾದಲ್ಲಿ ಓರ್ವವ್ಯಕ್ತಿ ಮುಲ್ಲಾ ಆಶಿಕ್ ಎಂಬುವುವರಿದ್ದರು. ಅವರು ಅಜಾನ್ ಹಾಗೂ ಐದು ಹೊತ್ತಿನ ನಮಾಜಿನ ಸುಮಧುರ ಧ್ವನಿಯನ್ನು

ಮುಹಮ್ಮದ್(ಸ) ಪವಿತ್ರ ಸಮಾಧಿಯೊಳಗಿನಿಂದ ಆಲಿಸಿ ಪಾವನ ಮದೀನಾದ ಪವಿತ್ರ ಮಸೀದೆಯಲ್ಲಿ ನಮಾಜ್ ಸಲ್ಲಿಸುತ್ತಿದ್ದರು. ಆ ಧ್ವನಿಯನ್ನು ತುಂಬಾ ಆತ್ಮೀಯವಾಗಿ ಬಲ್ಲವರಾಗಿದ್ದರು. ಯಾವಾಗ ಹಜ್ರತ್‌ಶಾಹ್(ಖು)ರು ಮದೀನಾ ಮುನವ್ವರಾಕ್ಕೆ ತಲುಪಿದರು. ಅದೇ ದಿನದಿಂದ ಆ ಧ್ವನಿಯು ಆಲಿಸುವಿಕೆಯು ನಿಂತು ಹೋಯಿತು. ಈ ಘಟನೆಯಿಂದ ಅವರು ತುಂಬಾ ವಿಹ್ವಲಿತಗೊಂಡು ಬಹುಬೇಗನೆ ಸಾವನ್ನಪ್ಪಿದರು. ಅವರ ನಿಧನದ ಸುದ್ದಿಯು ಹಜ್ರತ್‌ಶಾಹ್(ಖು)ರಿಗೆ ತಲುಪಿದಾಗ ಅವರು ಅಲ್ಲಾಹನ ಸಂಪ್ರೀತಿಗೆ ಪಾತ್ರರಾದರು. ಅಲ್ಲಾಹನು ಅವರನ್ನು ಬಹುಬೇಗನೆ ಕರೆದುಕೊಂಡನು. ವರದಿಯಿದೆ ಎಂದರು, ಒಂದು ದಿನ ಮದೀನಾ ಮುನವ್ವರಾದಲ್ಲಿ ಹಜ್ರತ್‌ಶಾಹ್(ಖು)ರು ಕುಳಿತುಕೊಂಡಿದ್ದರು. ಮುಲ್ಲಾ ಅಹ್ಮದ್ ಮಜಜೂಬ್(ಖು) ಹಾಗೂ ಇನ್ನಿತರ ಸೇವಕರು ಇದ್ದರು. ಮಹಾಪೌರರು ಕುದುರೆಯ ಮೇಲೆ ಸವಾರನಾಗಿ ಹಜ್ರತ್‌ಶಾಹ್(ಖು)ರನ್ನು ಗಮನಿಸದೆ ಮುಂದೆ ಸಾಗಿದರು. ಈ ವಿಷಯವು ಮುಲ್ಲಾ ಅಹ್ಮದ್ ಮಜಜೂಬ್(ಖು)ರಿಗೆ ಹಿಡಿಸಲಿಲ್ಲ. ತೀಕ್ಷ್ಣ ದೃಷ್ಟಿಯಿಂದ ಅವನತ್ತ ನೋಡಿದರು. ಅದೇ ಸಮಯದಲ್ಲಿ ಆತನು ಕುದುರೆಯಿಂದ ಕೆಳಗೆ ಬಿದ್ದನು. ಹಜ್ರತ್‌ಶಾಹರು ಈ ಕಾರ್ಯದಿಂದ ಮುನಿಸು ಹೊಂದಿ ಹೀಗೆ ಹೇಳಿದರು. ಮುಲ್ಲಾ ಅಹ್ಮದ್ ನೀನು ಈ ಸ್ಥಳದಲ್ಲಿರಲು ಯೋಗ್ಯನಲ್ಲ, ನಿನ್ನ ಜನ್ಮಭೂಮಿಗೆ ಮರಳು. ಅಲ್ಲಿ ನಿನ್ನ ತಾಯಿಯು ಜೀವಂತವಿರುವಳು ಹಾಗೂ ನಿನ್ನ ನಿರೀಕ್ಷೆಯಲ್ಲಿದ್ದಾಳೆ. ಅವಳ ಸೇವೆಯನ್ನು ಮಾಡು, ಆಗ ಅವರು ಮನಸ್ಸಿಲ್ಲದೇ ಬಿಜಾಪುರಕ್ಕೆ ಮರಳಿದರು.

ಒಂದು ವರದಿಯಂತೆ ಹಜ್ರತ್‌ಶಾಹ್(ಖು)ರು ತಮ್ಮ ಅಂತಿಮ ವಯಸ್ಸಿನಲ್ಲಿ ಎರಡು ವರ್ಷದವರೆಗೆ ಉಹದ್ ಬೆಟ್ಟದ ಮೇಲೆ ಏಕಾಂತವಾಸ(ಚಿಲ್ಲಾ) ಮಾಡಿದರು. ಅದರ ಪೂರ್ಣವಿವರವು ಹಜ್ರತ್‌ಶೇಖ್ ಅಲಿ ಕಷಾಯಿಷ್(ಖು)ರ ಪುಸ್ತಿಕೆಯಲ್ಲಿ ಉಲ್ಲೇಖಗೊಂಡಿದೆ. ಹಜ್ರತ್‌ಶೇಖ ಅಬ್ದುಲ್ ಅಜೀಮ್ ಮುಹಮ್ಮದ್ ಮಕ್ಕಿ ಹನ್ಫಿ(ಖು)ರೂ ಸಹ ತಮ್ಮ ಪತ್ರಗಳಲ್ಲಿ ಹಜ್ರತ್‌ರ ಚಿಲ್ಲಾದ ಬಹಳಷ್ಟು ವಿವರಗಳನ್ನು ದಾಖಲಿಸಿರುವರು. ಆ ಪತ್ರಗಳಲ್ಲಿ ಹೀಗೆ ಬರೆದಿರುವರು. ಯಾವಾಗ ಹಜ್ರತ್(ಖು)ರು ಉಹೂದ್‌ಬೆಟ್ಟದ ಮೇಲೆ ಎರಡು ವರ್ಷದವರೆಗೆ ಚಿಲ್ಲಾ(ಏಕಾಂತವಾಸ)ದಲ್ಲಿದ್ದರು. ನಿತ್ಯ ಉಪವಾಸ(ರೋಜಾ) ಹಾಗೂ ಇಡೀ ರಾತ್ರಿ ಆರಾಧನೆಯಲ್ಲಿ ತೊಡಗಿಕೊಂಡಿರುತ್ತಿದ್ದರು. ಬಹಳಷ್ಟು ಕಾಡುಪ್ರಾಣಿಗಳು ಹಜ್ರತ್‌ರ ಜೊತೆಗೆ ಸ್ನೇಹದಿಂದ ವರ್ತಿಸುತ್ತಿದ್ದವು. ಇರುಳಿನಲ್ಲಿ ತೋಳಗಳು ರಕ್ಷಣೆಗೆ ನಿಲ್ಲುತ್ತಿದ್ದವು. ಮದೀನಾ ಮುನವ್ವರಾದ ಬಹಳಷ್ಟು ಜನರು ಎರಡು.....(ತೋಳ)ಗಳು ಅವರ ರಕ್ಷಣೆಗೆ ನಿಲ್ಲುತ್ತಿದ್ದುದನ್ನು ನೋಡಿದ್ದರು. ಹಜ್ರತ್‌ಶಾಹ್(ಖು)ರು ಅಲ್ಲಿಯ ಜನರೊಂದಿಗೆ ಹೀಗೆ ಹೇಳುತ್ತಿದ್ದರು. ರಾತ್ರಿ ಇಲ್ಲಿ ಯಾರೂ ಇರಕೂಡದು. ಅದರ ಕಾರಣ ಇದಾಗಿತ್ತು. ಏನೆಂದರೆ ರಾತ್ರಿ ಕಾಡಿನಿಂದ ತೋಳಗಳು ಇವರ ರಕ್ಷಣೆಗೆ ಬಂದು ನಿಲ್ಲುವ ರಹಸ್ಯ ಸ್ಫೋಟವಾಗಬಾರದು.

ಹಾಗೂ ಆ ತೋಳಗಳು ಯಾರಿಗೂ ಹಾನಿಯನ್ನುಂಟು ಮಾಡಬಾರದು ಎಂಬುದಾಗಿತ್ತು. ಅದರಲ್ಲಿ ಇದನ್ನೂ ಕೂಡ ನಮೂದಿಸಿದ್ದಾರೆ ಒಂದು ದಿನ ನಿದ್ರೆಯ ಅವಸ್ಥೆಯಲ್ಲಿ ಸ್ವಪ್ನದಲ್ಲಿ ಹಜ್ರತ್ ಮುಹಮ್ಮದ್(ಸ)ರು ಹಜ್ರತ್‌ಶಾಹ್(ಖು)ರೊಂದಿಗೆ ಭೇಟಿ ಮಾಡಿ ಹೀಗೆಂದರು ಓ ನನ್ನ ಮಗುವೆ ! ಈಗ ಈ ಚಿಲ್ಲಾ ನಿಲ್ಲಿಸು ! ನಿಲ್ಲಿಸು. ನಿಲ್ಲಿಸು !! ಹಾಗೂ ಬಹುಬೇಗನೆ ಈ ಬೆಟ್ಟದಿಂದಿಳಿದು ಮದೀನಾಮುನವ್ವರಾಕ್ಕೆ ಮರಳಿ ಹೋಗು ! ನಿನ್ನ ಆಯುಷ್ಯ ತೀರಿದೆ. ಹಾಗೂ ಮೃತ್ಯು ಸಮೀಪವಿದೆ. ಆಗ ಅವರು ಮದೀನಾ ಮುನವ್ವರಾಕ್ಕೆ ಮರಳಿ ಬಂದರು.

ಮೀರ್‌ಗುಲಾಂ ಅಲಿಆಜಾದ್(ರ) ತಮ್ಮ ಪುಸ್ತಕವಾದ "ಮುಆಸಿರುಲ್" "ಕಿರಾಮ್"ದಲ್ಲಿ ಹೀಗೆ ಬರೆಯುತ್ತಾರೆ. ಸೈಯ್ಯದ್ ಸಿಬಗತುಲ್ಲಾಹ್ ಬಿನ್ ಸೈಯ್ಯದ್ ರುಹುಲ್ಲಾಹ್ ಭೈರೋಚಿಯವರು ಹಜ್ರತ್ ಶೇಖ ವಜೀಯುದ್ದೀನ್ ಗುಜರಾತಿಯವರ ಖಲೀಫಾ ಹಾಗೂ ಶಿಷ್ಯರಲ್ಲಿ ಓರ್ವರಾಗಿದ್ದರು. ಮುರ್ಷಿದ್‌ರ ಆದೇಶದಂತೆ ಕೆಲವರ್ಷಗಳವರೆಗೆ ತಮ್ಮ ಹುಟ್ಟೂರಿನಲ್ಲಿ ತಮ್ಮ ಸಾಂಗತ್ಯಕ್ಕೆ ಬಂದವರಿಗೆ ಸಮೃದ್ಧಿಯನ್ನೂ ಹಾಗೂ ಒಳಿತನ್ನು ಗೈಯಲು ಉಪದೇಶವನ್ನು, ಕೆಡಕನ್ನು ಅಳಿಸಲು ನಿರ್ದೇಶನಗಳನ್ನು ನೀಡುತ್ತಿದ್ದರು. ಆಕಸ್ಮಿಕವಾಗಿ ಹಜ್ರತ್‌ರಿಗೆ ಪವಿತ್ರ ಮಕ್ಕಾ-ಮದಿನಾದರ್ಶನದ ಬಯಕೆಯುಂಟಾಯಿತು ಹಾಗೂ ಅದನ್ನು ಯಶಸ್ವಿಯಾಗಿ ಪೂರ್ತಿಗೊಳಿಸಿ ಆತ್ಮ ಸಂತಸದೊಂದಿಗೆ ತಮ್ಮ ಜನ್ಮಭೂಮಿಗೆ ಮರಳಿದರು. ಮತ್ತೆ ಹಿಜ್ರಿಶಕೆ ೯೯೯ರಲ್ಲಿ ವಿರಾಗ ಹೊಂದಿ ಆಗ ಮತ್ತೊಮ್ಮೆ ಮೆಕ್ಕಾಮದಿನಾದರ್ಶನದ ಇಚ್ಛೆ ಜಾಗೃತವಾಗಲು ಖಾಂದೇಶ ಮಾರ್ಗದ ಮುಖಾಂತರ ಅಹ್ಮದ್‌ನಗರಕ್ಕೆ ತಲುಪಿದರು. ಅಲ್ಲಿಯ ಬಾದಶಾಹನಾದ ಬುರ್ಹಾನುಲ್ ಮುಲಕ್‌ನು ತೊಂದರೆಗೊಳಗಾಗಿ ಒಂದು ವರ್ಷದ ಅವಧಿ ಅಲ್ಲಿ ಇದ್ದರು ಎರಡನೆಯ ವರ್ಷದಲ್ಲಿ ಸಮುದ್ರಯಾನದ ಇಚ್ಛೆ ಹೊಂದಿದರು. ಬಿಜಾಪುರಕ್ಕೆ ಆಗಮಿಸಿದಾಗ ಅಲ್ಲಿಯ ಬಾದಶಹನು ಅವರನ್ನು ತುಂಬಾ ಗೌರವಪೂರ್ವಕವಾಗಿ ಆದರದೊಂದಿಗೆ ಅವರ ಕಾಳಜಿವಹಿಸಿದನು. ಅದರ ನಂತರ ಪ್ರಯಾಣಕ್ಕೆ ಬೇಕಾಗುವ ಸಕಲ ಸೌಲಭ್ಯಗಳನ್ನು ಒದಗಿಸಿ ತನ್ನ ವಿಶೇಷವಾದ ಹಡಗನ್ನು ಅರ್ಪಿಸಿದನು. ಈ ಕಾರಣದಿಂದ ಹಜ್ರತ್‌ರ ಜೊತೆಗೆ ಫಕೀರರು, ಸೂಫಿಗಳು ಹಾಗೂ ದರ್ವೇಶಿರು ನೆಮ್ಮದಿಯೊಂದಿಗೆ ಪ್ರಯಾಣ ಬೆಳೆಸಿ ತಮ್ಮ ಗುರಿಯನ್ನು ತಲುಪಿದರು. ಅವರು ಪವಿತ್ರ ಸ್ಥಳಗಳಿಗೆ ತಲುಪಿ ದರ್ಶನದ ಭಾಗ್ಯಪಡೆದು ಉಹೂದ್ ಬೆಟ್ಟದ ಮೇಲೆ ವಾಸಿಸತೊಡಗಿದರು. ಶಿಷ್ಯರಿಗೆ, ಆಧ್ಯಾತ್ಮಿಕ ಜ್ಞಾನವನ್ನು ದಯಪಾಲಿಸತೊಡಗಿದರು. ಹಾಗೂ 'ಜವಾಹಿರೆ ಖಮ್ಸಾ' ಗ್ರಂಥವನ್ನು ಅರೇಬಿಕ್ ಭಾಷೆಯಲ್ಲಿ ಅನುವಾದ ಮಾಡಿದರು. ಇವರ ಉತ್ತರಾಧಿಕಾರಿ (ಖಲೀಫಾ) ಅಹ್ಮದ್‌ಶನಾವಿ(ರ) ಅವರು ಅದರ ಅಡಿಟಿಪ್ಪಣಿ ಬರೆದರು. ಈ ಅರಬ್ಬಿ ಭಾಷೆಯಲ್ಲಿಯ

'ಜವಾಹರೆ ಖಮ್ಸಾ' ಅಡಿಟಿಪ್ಪಣಿಯೊಂದಿಗೆ ಅರಬ್‌ದೇಶದಲ್ಲಿ ಬಹಳೇ ಪ್ರಖ್ಯಾತಿ ಹೊಂದಿದೆ. ಬಹಳಷ್ಟು ಜನರು ಇವರಿಂದ ಬೈಯ್ಯತ್ ಪಡೆದರು. ಹಾಗೂ ತಮ್ಮ ಗುರಿಯನ್ನು ತಲುಪಿದರು. ಶೇಖ ಮುಹಮ್ಮದ್ ಅಖ್ವಲಾ ಮಕ್ಕಿ(ಖ) 'ಲಿಸ್ಸಾನುಜ್ಜಮಾ' ಪುಸ್ತಕದಲ್ಲಿ ಹೀಗೆ ಬರೆದಿರುವರು ಶಾಹ್(ಖ)ರು ಶುತ್ತಾರಿ ಪಂಥವನ್ನು ಅನುಸರಿಸುವವರಾಗಿದ್ದರು. ಹಾಗೂ ಆ ಪಂಥದ ಸಮಗ್ರಜ್ಞಾನವನ್ನು ಹೊಂದಿದ್ದರು. ಅದರಿಂದ ಸರ್ವರಿಗೂ ಸದುಪಯೋಗವಾಯಿತು. ಅವರು ಶತ್ತಾರಿಯಾ ಪಂಥದ ಆಚರಣೆಯ ಜ್ಞಾನವನ್ನು ಸೈಯ್ಯದ್ ವಜಿಯುದ್ದೀನ್(ಖ)ರಿಂದ ಪಡೆದರು. ಹಜ್ರತ್ ಸಿಬಗತುಲ್ಲಾಹರ ಗ್ರಂಥಗಳು–ಕಿತಾಬುಲ್ ವಹದತ್ ಹಾಗೂ ರಿಸಾಲಾಯೇ ಇರಾದತುಅದ ಖಾಯಿಕ್ ಟಿಪ್ಪಣಿಯೊಂದಿಗೆ, ಫೀ ಷರಹೀ ಹ ಮಿರಾತುಲ್ ಹಖಾಯಿಕ್ ಹಾಗೂ ಮಾಲಾಯಸಿಉಲ್ ಮುರೀದು ತರಕುಕುಲ್ಲಿ. ಯೌಮಿನ್ ಸುನನಿಲ್‌ಕೌಮ್ ।

ಯಾವಾಗ ಹಜ್ರತ್‌ಶಾಹ್(ಖ)ರು ಮೃತ್ಯುವಿಗೆ ಸಮೀಪವಾದರು ಅವರು ಜಮಾದಿಲ್ ಅವಲ್‌ದ ೧೫ನೆಯ ದಿನಾಂಕದಂದು ಕ್ಷಯರೋಗದಿಂದ ಬಹಳೇ ನಿತ್ರಾಣರಾದರು ಹಾಗೂ ೨೬ನೆಯ ದಿನಾಂಕದಂದು ಮೃತ್ಯುವನ್ನಪ್ಪಿದರು. ಆಗ ಅವರ ಈರ್ವರು ಖಲೀಫರು ಶೇಖ ಅಬ್ದುಲ್ ಅಜೀಮ್ ಹಾಗೂ ಶೇಖ ಅಲಿ ಕಷಾಯಿಷ್(ಖ) ಅಲ್ಲಿಯೇ ಇದ್ದರು. ಈ ಈರ್ವರು ಹಾಗೂ ಮದೀನಾದ ಮಹಾಪುರುಷರು ಸೇರಿ ಅವರು ಹಜ್ರತ್ ಇಬ್ರಾಹಿಂ ಯಾರು ಮುಹಮ್ಮದ್ (ಸ)ರ ಪುತ್ರರಾಗಿದ್ದರು. ಅವರ ಸಮಾಧಿಯ ಬದಿಯಲ್ಲಿ ಈ ತೆರನಾಗಿ ದಫನ್ ಮಾಡಿದರು. ಹಜ್ರತ್ ಇಬ್ರಾಹಿಂರ ಪವಿತ್ರ ನಾಭಿಯ ಮಟ್ಟಕ್ಕೆ ಹಜ್ರತ್‌ಶಾಹ್(ಖ)ರ ತಲೆಯು ಇತ್ತು. ಆ ದಿನ ಶುಕ್ರವಾರದ ದಿನವಾಗಿತ್ತು. ಹಾಗೂ ಜಮಾದಿಲ್ ಅವ್ವಲ್‌ದ ೨೭ನೆಯ ದಿನಾಂಕವಾಗಿತ್ತು. ಹಜ್ರತ್‌ರ ನಿಧನದ ದಿನಾಂಕವು ಹಜ್ರತ್ ಹಬೀಬುಲ್ಲಾ(ಖ)ರ ಪುಸ್ತಿಕೆಯಲ್ಲಿ ೨೫ನೆಯ ದಿನಾಂಕವೆಂದೇ ದಾಖಲಾಗಿದೆ ಹಾಗೂ ಐರಾಸ ಪತ್ರಿಕೆಯಲ್ಲಿ ೧೮ನೆಯ ದಿನಾಂಕವೆಂದು ಹಾಗೂ ಬಹಳಷ್ಟು ಕಡೆ ೧೭ಎಂದು ಬರೆದಿದ್ದಾರೆ. ಹಜ್ರತ್ ಸೈಯ್ಯದ್ ಅಬ್ದುಲ್ಲಾಹ್ ಸಿಬಗತುಲ್ಲಾಹಿ ಯಾರು 'ಖುಲಾಸಯೆ ಸಿಬಗತುಲ್ಲಾಹಿ'ಯ ಗ್ರಂಥಕರ್ತರು ಹೀಗೆ ಉಲ್ಲೇಖಿಸುತ್ತಾರೆ. ಅವರು ಮದೀನಾದವರಿಂದ ಹಾಗೂ ಹಜ್ರತ್ ಶೇಖ ಅಲಿ ಕಷಾಯಿಷ್(ಖ)ರ ಸಂತಾನದೊಂದಿಗೆ ವಿಚಾರಿಸಲಾಗಿ ಅದು ೨೮ನೆಯ ದಿನಾಂಕ, ಶುಕ್ರವಾರದ ದಿನವೆಂದು ಪುರಾವೆ ದೊರಕಿತು. ಇದರಲ್ಲಿ ಯಾವುದೇ ಸಂದೇಹವಿಲ್ಲ. ಅದಕ್ಕಾಗಿ ಮದೀನಾ ಮುನವ್ವರಾದಲ್ಲಿ ಶೇಖ ಅಲಿ ಕಷಾಯಿಷ್‌ರ ಸಂತಾನವು ಪ್ರತಿವರ್ಷ ಹಜ್ರತ್‌ಶಾಹ್(ಖ)ರ ಉರುಸನ್ನು ಆಚರಿಸುವರು.

ವಾಸ್ತವದಲ್ಲಿ ಹಜ್ರತ್‌ಶಾಹ್ ಸಿಬಗತುಲ್ಲಾಹ್ ಹುಸೈನಿ(ಖ) ಅರಬ್‌ದಲ್ಲಿ,

ಪ್ರಮುಖವಾಗಿ ಮದೀನಾದಲ್ಲಿ 'ಬುವ್ವಾಬೆ ರಸೂಲುಲ್ಲಾಹ್' ಅಂದರೆ ದರ್ಬಾನೆ ರಸೂಲಲ್ಲಾಹ್ ಎನ್ನುವರು. 'ರಸೂಲಲ್ಲಾಹ್‌ರ ದ್ವಾರಪಾಲಕ' ಎಂದು ಅರ್ಥವಾಗುತ್ತದೆ.

ಯಾವಾಗ ಹಜ್ ಯಾತ್ರಿಕರು ಪವಿತ್ರ ಮದೀನಾದ ಮುನವ್ವರಾಕ್ಕೆ ದರ್ಶನಾರ್ಥಿಗಳಾಗಿ ಹೋಗುವರೋ ಆಗ ಅಲ್ಲಿಯ ಸೇವಕರು ಮೊದಲು ಸಲ್ಲಾಂನ್ನು ಜನ್ನತೆ ಬಖಿ ಕಬರಸ್ತಾನದಲ್ಲಿಯ ಹುತಾತ್ಮರಿಗೆ ಸಲ್ಲಿಸುತ್ತಾರೆ ಅದರ ನಂತರ ಹಜ್ರತ್‌ಶಾಹ್ ಸಿಬಗತುಲ್ಲಾಹರಿಗೆ, ಅವರ ನಂತರ ಹಜ್ರತ್ ಮುಹಮ್ಮದ್(ಸ)ರ ಪುತ್ರ ಹಜ್ರತ್ ಇಬ್ರಾಹಿಂರ ಮೇಲೆ ಸಲಾಂ ಸಲ್ಲಿಸುವರು. ಅವರ ಶ್ರೇಷ್ಠತೆಯಲ್ಲಿ ಈ ಮಾತೂ ಕೂಡ ತುಂಬಾ ಮಹತ್ವವನ್ನಿಡುತ್ತದೆ. ಇಲ್ಲಿಯವರೆಗೆ ಹಿಂದೂಸ್ಥಾನದ ಹಾಗೂ ಬೇರೆ ದೇಶಗಳ ಬಹಳಷ್ಟು ಮಹಾಪುರುಷರು ಅಲ್ಲಿ ಅಂದರೆ ಜನ್ನತೆಬಖಿ ಕಬರಸ್ತಾನದಲ್ಲಿ ದಫನ್‌ರಾಗಿರುವರು. ಆದರೆ ಹಜ್ರತ್‌ಶಾಹ್ ಸಿಬಗತುಲ್ಲಾಹ್(ಖ)ರನ್ನು ಹೊರತುಪಡಿಸಿ ಬೇರೆ ಯಾರಿಗೂ ವಿಶೇಷವಾಗಿ ಸಲಾಂ ಓದಲಾಗುವುದಿಲ್ಲ. ಹಾಗೂ ರೋಮ್ ಬಾದಶಾಹನ ಕಡೆಯಿಂದಲೂ ವರ್ಷಂಪ್ರತಿ ಹಜ್ರತ್‌ರ ಉರುಸು ಆಚರಣೆಯಲ್ಲಿರುವದು.

ಹಜ್ರತ್‌ಶಾಹ್(ಖ)ರ ವಂಶಾವಳಿ

ಹಜ್ರತ್‌ಶಾಹ್ ಸಿಬ್ಗತುಲ್ಲಾಹ್ ಹುಸೈನಿ ಬಿನ್ ಶಾಹ್‌ರೂಹುಲ್ಲಾಹ್ ಹುಸೈನಿ ಬಿನ್ ಸೈಯ್ಯದ್ ಅಹ್ಮದ್ ಬಿನ್ ಸೈಯ್ಯದ್ ಅಬ್ದುಲ್ ಫತಹ ಮಗರಬಿ ಬಿನ್ ಸೈಯ್ಯದ್ ಮೆಹಮೂದ್ ಬಿನ್ ಸೈಯ್ಯದ್ ಬರ್ಕಾತ್ ಬಿನ್ ಸೈಯ್ಯದ್ ತಾಹಿರ್ ಬಿನ್ ಸೈಯ್ಯದ್ ಖಾಸಿಂ ಬಿನ್ ಸೈಯ್ಯದ್ ಮೊಹಸಿನ್ ಬಿನ್ ಸೈಯ್ಯದ್ ಮುಹಮ್ಮದ್ ಬಿನ್ ಸೈಯ್ಯದ್ ಅಬ್ದುಸ್ಸಲಾಂ ಬಿನ್ ಸೈಯ್ಯದ್ ಖಾಲಿದ್ ಬಿನ್ ಸೈಯ್ಯದ್ ಮುಹಮ್ಮದ್ ಬಿನ್ ಸೈಯ್ಯದ್ ಮೆಹಮೂದ್ ಬಿನ್ ಸೈಯ್ಯದ್ ಫಜಲುದ್ದೀನ್ ಬಿನ್ ಸೈಯ್ಯದ್‌ಈಸಾ ಬಿನ್ ಸೈಯ್ಯದ್ ಹಸನಅಲ್ ಮುಖಾತಿಬ್ ಬಿನ್ ಇಮಾಮ್ ಮೂಸಾ ಕಾಜಿಂ ಬಿನ್ ಇಮಾಮ್ ಜಾಫರ್ ಸಾದಿಕ್ ಬಿನ್ ಇಮಾಮ್ ಮುಹಮ್ಮದ್ ಬಾಖರ್ ಬಿನ್ ಇಮಾಮ್ ಜೈನುಲ್ಲಾಬ್ದಿನ್ ಬಿನ್ ಇಮಾಮ್ ಹುಸೈನ್ ಬಿನ್ ಅಮೀರುಲ್ ಮೋಮಿನಿನ್ ಅಲಿ ಇಬ್ನೆ ಅಬಿತಾಲಿಬ್ ಕರಮುಲ್ಲಾಹ್‌ವಜಿಹಿ.

ಹಜ್ರತ್‌ಶಾಹ್(ಖ)ರ ಖಲೀಫಾಗಳು

ಹಜ್ರತ್‌ಶೇಖ ಅಬ್ದುಲ್ ಅಜೀಮ್ ಮುಹಮ್ಮದ್ ಮಕ್ಕಿ ಹನ್ಫಿ-

ಹಜ್ರತ್ ಶೇಖ ಅಲಿ ಕಷಾಯಿಷ್

ಹಜ್ರತ್ ಶೇಖ ಅಬ್ದುಸ್ಸಮದ್

ಹಜ್ರತ್‌ಶೇಖ ಇಬ್ರಾಹಿಂ

ಹಜ್ರತ್‌ಶೇಖ ಸನು

ಹಜ್ರತ್ ಸೈಯ್ಯದ್ ಅಸದ್ ಬಲ್ಖಿ
ಹಜ್ರತ್ ಮೌಲಾನಾ ಹಬೀಬುಲ್ಲಾಹ್ ಬಿಜಾಪುರಿ
ಹಜ್ರತ್ ಶೇಖ ಅಬ್ದುಲ್ ಹಕಿಂ
ಹಜ್ರತ್ ಮಿಯಾ ಯೂಸುಫ್
ಹಜ್ರತ್ ಸೈಯ್ಯದ್ ಅಬ್ದುಲ್ಲಾಹ್
ಹಜ್ರತ್ ಶಾಹ್ ಮುರ್ತುಜಾಖಾದ್ರಿ
ಹಜ್ರತ್ ಸೈಯ್ಯದ್ ಮುಹಮ್ಮದ್ ಬುಖಾರಿ

ವಾಸ್ತವದಲ್ಲಿ "ಮುಆಸಿರುಲ್ ಕರಾಮ್" ಗ್ರಂಥದ ಮುಖಾಂತರ ತಿಳಿದು ಬರುವದೇನೆಂದರೆ ಹಜ್ರತ್ ಸೈಯ್ಯದ್ ಮೀರ್ ಹಾಗೂ ಹಜ್ರತ್ ಶೇಖ ಅಹಮ್ಮದ್ ಸನಾವಿ(ಖು) ಅವರೂ ಸಹ ಹಜ್ರತ್‌ಶಾಹ್ ಸಾಹೇಬರ ಖಲೀಫಾಗಳಾಗಿದ್ದರು ಹಾಗೂ ಅನುವಾದಕನು "ಶರಾಯೆ ಜವಾಹಿರೆ ಖಮ್ಸಾ" ಅಹ್ಮದ ಅರಬ್ಬಿ ಭಾಷೆಯಲ್ಲಿಯ ಗ್ರಂಥವನ್ನು ಅವಲೋಕಿಸಿದ್ದನು. ಶೇಖ ಅಹ್ಮದ್ ಸನಾವಿ ಯಾರು ಹಜ್ರತ್‌ರ ಖಲೀಫಾರಾಗಿದ್ದಾರೆ ಆದರೆ ಮುಖ್ಯ ಪಟ್ಟಿಯಲ್ಲಿ ಈ ಎರಡು ಹೆಸರುಗಳು ಕಂಡು ಬರುವದಿಲ್ಲ. ಆದರೆ ಹಜ್ರತ್ ಶೇಖ ಸನು ಯಾವ ಹೆಸರು ಬರೆಯಲ್ಪಟ್ಟಿದೆಯೋ ಅದು ಹಜ್ರತ್‌ಶೇಖ ಅಹ್ಮದ್ ಸನಾವಿ(ಖು) ರೇ ಇರಬಹುದು.

■

೨೪. ಮೌಲಾನಾ ಹಬೀಬುಲ್ಲಾಹ್ ಸಿಬಗತುಲ್ಲಾಹಿ(ಖು)

ಇವರು ಜ್ಞಾನ ಸಮುದ್ರವಾಗಿದ್ದರು. ಪ್ರಸಿದ್ಧ ಸೂಫಿ ಹಾಗೂ ಪರಿಪೂರ್ಣ ಗುರುವಾಗಿದ್ದರು. ಇವರು ಹಜ್ರತ್ ಅಬೂಬಕರ್ ಸಿದ್ದಿಕ್(ರ) ಯಾರು ಮೊದಲನೆಯ ಖಲೀಫಾ ಆಗಿದ್ದರು. ಅವರ ಮಟ್ಟಕ್ಕೆ ಮುಟ್ಟುವಷ್ಟು ದರ್ಜೆಯ ಸೂಫಿಗಳಾಗಿದ್ದರು. ಪಾರಲೌಕಿಕ ಜ್ಞಾನದಲ್ಲಿ ಅತ್ಯುನ್ನತ ದರ್ಜೆಯ ಪರಿಪೂರ್ಣತೆಯನ್ನು ಹೊಂದಿದ್ದರು ಹಾಗೂ ಶರೀಯತ್ ಮತ್ತು ತರೀಖತ್‌ವನ್ನು ಸಂಪೂರ್ಣವಾಗಿ ಪರಿಪಾಲಿಸುತ್ತಿದ್ದರು. ಹಾಗೂ ಮುಹಮ್ಮದ್(ಸ್)ರನ್ನು ಸ್ವಪ್ನದಲ್ಲಿ ದರ್ಶನ ಪಡೆದು ಅಗಣಿತ ಸಮೃದ್ಧಿಯನ್ನು ಹೊಂದಿದ್ದರು. ಖಿಜರ್, ಇಲಿಯಾಸ್(ಅ) ಶೇಖ ಅಲಿ ಕಲಾ ಲಾರಿ, ಶೇಖ ಮುಹಮ್ಮದ್‌ಗೌಸ್ ಗವಾಲಿಯಾರಿ, ಹಜ್ರತ್ ಶಾಹ್ ವಜಿಯುದ್ದೀನ್ ಅಲ್ವಿ ಗುಜರಾತಿಯವರನ್ನು ಆತ್ಮ ಸಂಗಾತದಿಂದ ಭೇಟಿಗೈದು ಪಾರಲೌಕಿಕ ಅನುಭವವನ್ನು ಪಡೆದರು. ವಲಿಯಲ್ಲಾಹ್ ಶೇಖ ಮುಹಮ್ಮದ್ ಮಿರ್ಜಾ ಉರ್ಫ ಮೀರಾಸಾಬ್

ಬಾಬಾನಗರ ಹಾಗೂ ಖಾಜಿ ಮುಹಮ್ಮದ್ ಕಲ್ಯಾಣಿ ಶೇಖ ಬಾಬೂಜಿ, ಖಲೀಫಾ ಶಾಹ್ ಹಸನ್ ವಡ್ಡು ಶೇಖ ತಾಜುಲ್ ಹಕ್‌ರಿಂದ ಹಾಗೂ ತಮ್ಮ ಅವಧಿಯ ಬಹಳಷ್ಟು ಔಲಿಯಾ, ಮಹಾಪುರುಷರು ಮತ್ತು ಮಜಜೂಬ್‌ರೊಂದಿಗೆ ಭೇಟಿಯಾಗಿ ಬಹಳಷ್ಟು ಸಮೃದ್ಧಿ ಪಡೆದರು. ಅವರ ಕರಾಮತ್ತುಗಳು ಅಸಂಖ್ಯವಿರುವವು. ಇವರು ಹಜ್ರತ್‌ಶಾಹ್ ಸಿಬಗತುಲ್ಲಾಹ್ ಹುಸೈನಿ ಭೈರೂಚಿ ಮದನಿ(ಖು)ರಿಂದ ಆಧ್ಯಾತ್ಮಿಕ ಜ್ಞಾನವನ್ನು ಪರಿಪೂರ್ಣ ರೀತಿಯಲ್ಲಿ ಹೊಂದಿ ಖಿಲಾಫತ್ ಪಡೆದು ಹಜ್ರತ್‌ರಿಂದ ಅನುಮತಿ ಪಡೆದರು ಹಾಗೂ ಇವರು ಅವರ ಎಲ್ಲ ಗುಣಗಳನ್ನು ಹೊಂದಿ ಅವರ ಪ್ರತಿರೂಪವೇ ಆಗಿ ಬಿಟ್ಟರು. ಹಜ್ರತ್‌ಶಾಹ್‌ರಿಗೆ ಇವರು ಎಷ್ಟೊಂದು ಅನ್ಯೋನ್ಯರಾಗಿದ್ದರೆಂದರೆ ಹಜ್ರತ್ ತಮ್ಮ ಪವಿತ್ರ ಸ್ವಹಸ್ತದಿಂದ ಅವರ ವಂಶಾವಳಿಯಲ್ಲಿ "ಫರ್ಜಂದೆ ಹಕೀಕಿ" ಅಂದರೆ ವಾಸ್ತವದಲ್ಲಿ ಸುಪುತ್ರ" ಎಂದು ಬರೆದರು ಹಾಗೂ ಈ ಅನುಮತಿಯನ್ನು ನೀಡಿದರು. ಏನೆಂದರೆ ತಮ್ಮ ಶಿಷ್ಯ ಹಾಗೂ ಅನುಯಾಯಿಗಳ ವಂಶಾವಳಿಯಲ್ಲಿ ಸಿಬಗತುಲ್ಲಾಹ್ ಎಂದು ಬರೆಯುವ ಅನುಮತಿಯನ್ನು ನೀಡಿದರು. ಹಾಗೂ ಹೀಗೆಂದರು "ನನ್ನ ಹೆಸರನ್ನು ನೀಡಿರುವೆನು" ಹಾಗೂ ನನಗೆ ಅಲ್ಲಾಹುವಿನಿಂದ ಏನೆಲ್ಲವೂ ದಕ್ಕಿದೆಯೋ ಅದೆಲ್ಲವೂ ನಿನಗೂ ಸಹ ಲಭ್ಯವಾಗುವದು ಹಾಗೂ ಹಜ್ರತ್ ವಮೌಲಾನಾ(ಖು)ರು ಹಜ್ರತ್ ಸಿಬಗ್‌ತುಲ್ಲಾಹ್‌ರ ಬಯಕೆಯನ್ನು ಸಂಪೂರ್ಣವಾಗಿ ಈಡೇರಿಸಿದರು. ಹಾಗೂ ಅವರಂತೆಯೇ ಜನರನ್ನು ಸನ್ಮಾರ್ಗದತ್ತ ಒಯ್ಯುವಲ್ಲಿ ಸಫಲರಾದರು.

ಬಾಲ್ಯದಲ್ಲಿ ಅಂದರೆ ೫ ವರ್ಷದ ವಯಸ್ಸಿನಲ್ಲಿ ಅವರು ಕುರ್‌ಆನ್ ಷರೀಫ್‌ನ್ನು ಓದುತ್ತಿದ್ದರು. ಆದರೆ ಅದು ಬಾಯಿಪಾಠ ಆಗುತ್ತಿರಲಿಲ್ಲ. ನೆನಪಿನಲ್ಲಿ ಉಳಿಯದಿರುವದಕ್ಕೆ ವಿಷಾದಿಸಿ ಅಳುತ್ತಿದ್ದರು. ಇವರ ತಂದೆಯವರಾದ ಮುಲ್ಲಾ ಅಹ್ಮದ್‌ಬಿನ್ ಖಲೀಲುಲ್ಲಾಹ್ ಖಾದ್ರಿ ಅವರಿಗೆ ಈ ವಿಷಯ ತಿಳಿದಾಗ ಅವರೆಂದರು ಮೊದಮೊದಲಲ್ಲಿ ಕುರ್‌ಆನ್ ಓದುವಾಗ ಅಲ್ಪ ಸ್ವಲ್ಪ ತೊಂದರೆಯಿದ್ದು ಶ್ರಮವಹಿಸುವ ಅವಶ್ಯಕತೆಯಿದೆ. ಅದರ ನಂತರ ಸರ್ವವಿಧದ ಜ್ಞಾನವು ಸಹಜವಾಗಿ ಸಿದ್ಧಿಗೊಳ್ಳುವುದು ಕೊನೆಗೆ ಅವರಂದಂತೆಯೇ ಆಯಿತು. ಉಲ್ಲೇಖವಿದೆ ಇವರು ಹಜ್ರತ್ ಖಿಜರ್(ಅ)ರಿಂದ ಇವರಿಗೆ ಜ್ಞಾನ ಪಡೆಯುತ್ತಿರುವಾಗ ಇವರನ್ನು ಉದ್ದೇಶಿಸಿ ಹೀಗೆ ಭವಿಷ್ಯ ನುಡಿದಿದ್ದರು. 'ನೀವು ಉತ್ತಮ ಜ್ಞಾನವಂತರು ಆಗುವಿರಿ ಆದರೆ ಬಹಳಷ್ಟು ಓದಲಾರಿರಿ'.

ತಾವು ಹಜ್ರತ್‌ರಿಗೆ ಅಲ್ಲಾಹುವಿನಿಂದ ದೇವದತ್ತವಾದ ಜ್ಞಾನಪ್ರಾಪ್ತಿಯಾಗಿದ್ದುದರಿಂದ, ಶ್ರೇಷ್ಠ ವಿದ್ವಾಂಸರು, ಶಿಕ್ಷಕರು ಇವರಿಗೆ ಶಿಕ್ಷಣ ನೀಡುವಲ್ಲಿ ಅಸಮರ್ಥರಾಗಿದ್ದರು. ಈ ಪ್ರಶ್ನೆ ಮುಗಿಯುವ ಮೊದಲೇ ಸರಿಯಾದ ಉತ್ತರವನ್ನು ನೀಡುತ್ತಿದ್ದ ಇವರಿಗೆ ಉದ್ದೇಶಿಸಿ ಇವರು ನಮ್ಮನ್ನೇ ಪರೀಕ್ಷಿಸಲು ಬಂದವರಾಗಿದ್ದಾರೆ ಎನ್ನುತ್ತಿದ್ದರು.

ಹಜ್ರತ್ ಮೌಲಾನಾ ಖುದ್ದಿಸ್ಸಿರಾಹ್‌ರು ಪ್ರಾರಂಭದ ಅವಸ್ಥೆಯಲ್ಲಿ ಮುಲ್ಲಾ ಹಸನ್ ಬಹಘಿಯವರ ಬಳಿ ಯಾರು ತಮ್ಮ ಕಾಲದ ಶ್ರೇಷ್ಠ ವಿದ್ವಾಂಸರಾಗಿದ್ದರು ಹಾಗೂ "ಶಿಫಾ ಬುಅಲಿ' ಹಕಿಂ" ಗ್ರಂಥವನ್ನು ಆರಂಭದಿಂದ ಅಂತ್ಯದವರೆಗೆ ಮೂರು ಬಾರಿ ಗಹನ ಅಧ್ಯಯನಗೈದಿದ್ದರು. ವೈದ್ಯಕೀಯ ವಿಷಯದ ಕುರಿತು ಆಳವಾಗಿ ವಿಶ್ಲೇಷಿಸುತ್ತಿದ್ದರು ಹಾಗೂ 'ಇಮಾಮಿಯಾ ಪಂಥ'ದವರಾಗಿದ್ದರು ಹಾಗೂ ತಮ್ಮ ಪಂಥದಲ್ಲಿ ಶ್ರೇಷ್ಠಜ್ಞಾನ ಹೊಂದಿದ್ದು, ನಿಷ್ಠರಾಗಿದ್ದರು ಹಾಗೂ ಪ್ರಾರಂಭದಲ್ಲಿ ಶರಾ ಹಿಕ್ಮತ್ ಓದುವ ಬಯಕೆ ಹೊಂದಿದ್ದರು. ಆದರೆ ಮುಲ್ಲಾ ಹಸನ್ ಬಹಘಿಯವರು ಇವರ ತೀಕ್ಷ್ಣಬುದ್ಧಿ ಹಾಗೂ ಚತುರತೆಯನ್ನು ಅರಿತು ಇವರಿಗೆ "ಶರಯೇ ಹಿಕ್ಮತುಲ್ ಐನ್" ಓದಲು ಹೇಳಿದರು ಹಾಗೂ 'ಶರಯೇ ಹದಾಯಾ' ಬರೆಯಿರಿ. ಏಕೆಂದರೆ ಮೀರ್ ಶರೀಫ್ ಜರ್ಜಾನಿ ತಮ್ಮ ಓದಿನ ಸಮಯದಲ್ಲಿ ವಿವರಣೆ ಹಾಗೂ ಅಡಿಟಿಪ್ಪಣಿ ಬರೆಯುತ್ತಿದ್ದರು. ಅದಕ್ಕಾಗಿ ಹಜ್ರತ್ ಮೌಲಾನಾರು ಗುರುಗಳ ಆದೇಶದಂತೆ 'ಶರಾ ಹಿಕ್ಮತುಲ್ ಐನ್' ಪ್ರಾರಂಭಿಸಿದರು ಹಾಗೂ ದಿನನಿತ್ಯ ಅದರ ಮೇಲೆ ಟಿಪ್ಪಣಿ ಬರೆಯುತ್ತಿದ್ದರು ಹಾಗೂ ಶೇಖಹಸನ್‌ರು ಇವರ ಟಿಪ್ಪಣಿಯನ್ನು ಓದಿ ಅತ್ಯಂತ ಪರಿಪೂರ್ಣ ಹಾಗೂ ನ್ಯೂನ್ಯ ರಹಿತವಾಗಿದೆಯೆಂದು ಹೇಳುತ್ತಿದ್ದರು. ಹಜ್ರತ್ ಮೌಲಾನಾ(ಖು)ರು ಮೌಲಾನಾ ಮುಲ್ಲಾ ಹಬೀಬುಲ್ಲಾಹ್ ಎಂಬ ಸುಪ್ರಸಿದ್ಧ ಗುರುಗಳ ಮುಖ್ಯೋಪಾಧ್ಯಾಯರ ಬಳಿ ಲೌಕಿಕ ವಿದ್ಯೆ ಕಲಿಯುವದಕ್ಕಾಗಿ ಪುಸ್ತಿಕೆಗಳಿಂದ ಮುಅಷ್ಷುಹ್ ಖಬಸೀ, ಷರಯೇ ಕಾಫಿಯಾ, ಇಲ್ಮೆನೌಹ್'ವನ್ನು ಓದಿದರು. ಹಾಗೂ ಅದರಲ್ಲಿ ನಿಷ್ಣಾತರಾದರು. ತಮ್ಮ ತೀಷ್ಣ ಬುದ್ಧಿಯಿಂದಾಗಿ ವ್ಯಾಕರಣದ ಸಮಸ್ಯೆಗಳನ್ನು ಸಹಜವಾಗಿ ಪರಿಹರಿಸುತ್ತಿದ್ದರು. ಗುರುಗಳು 'ಸರಿಯಾಗಿದೆ' ಎಂದು ಮೆಚ್ಚಿಕೊಳ್ಳುತ್ತಿದ್ದರು. ಇನ್ನೂ ಹೆಚ್ಚಿನ ಅಧ್ಯಯನಕ್ಕಾಗಿ ಅಲಂಕಾರಿಕ ಭಾಷೆಯಲ್ಲಿ ವಾಗ್ಮಿಯಾಗಲು 'ಕಿತಾಬೆ ಮುತವ್ವಲ್' ಪ್ರಾರಂಭಿಸಿದರು.

ಓದುವಾಗ ಮೌಲಾನಾರವರು ಇಂಥಿಂಥ ವಿವರಣೆಯನ್ನು ನೀಡತೊಡಗಿದರು. ಹಾಗೂ ಇವರ ಚತುರಬುದ್ಧಿಯನ್ನು ಗಮನಿಸಿ ಮುಲ್ಲಾ ಹಬೀಬುಲ್ಲಾರವರು ಗ್ರಂಥ ಮತೂಲ್‌ದ ಓದು ನಿರುಪಯುಕ್ತವೆಂದು ಬಗೆದು ಇದಕ್ಕಿಂತಲೂ ಹೆಚ್ಚಿನ ವಿವರಣೆಯ 'ತಫ್ಸೀರೆ ಬೈಜಾವಿ' ಪ್ರಾರಂಭಿಸಿದರು. ಇದರಲ್ಲಿಯೂ ಮೌಲಾನಾರವರು ಟಿಪ್ಪಣಿ ವಿಮರ್ಶೆಗೈಯ್ಯಲು ಗುರುಗಳು ನಿಮಗೆ ಸರ್ವವಿಧದ ಜ್ಞಾನವೂ ಲಭಿಸಿದೆ ಇನ್ನು ಓದುವ ಅವಶ್ಯಕತೆಯಿಲ್ಲ. ಯಾವಾಗ ಗುರುಗಳು ಹೀಗೆಂದರೋ ಆಗ ಓದನ್ನು ನಿಲ್ಲಿಸಿ, ತಮ್ಮನ್ನು ತಾವು ಪ್ರಯಾಣದಲ್ಲಿ ತೊಡಗಿಸಿಕೊಂಡರು. ಪರಿವ್ರಾಜಕರಾಗಿ ಪನೋನದಿ ಎಂಬ ಹಳ್ಳಿಗೆ ಹೋದರು. ಮಿಯಾ ಖಾಜಿ ಮುಹಮ್ಮದ್ ಕಲ್ಯಾಣಿ ಯಾರು ಮಹಾವಿದ್ವಾಂಸರು ಹಾಗೂ ಪವಾಡ ಪುರುಷರಾಗಿದ್ದರು. ಅವರ ಪರಿಚಯವು

ಹಜ್ರತ್‌ರಿಗೆ ಇನಿತೂ ಇರಲಿಲ್ಲ. ಆದರೂ ಅವರ ತಂದೆಯ ಹೆಸರಿನೊಂದಿಗೆ ಇವರನ್ನು ಕರೆದರು. ಹಾಗೂ ಅವರೊಂದಿಗೆ ಬಹಳೇ ಗೌರವಪೂರ್ವಕವಾಗಿ ನಡೆದುಕೊಂಡರು. ಹಾಗೂ ಹೀಗೆಂದರು ಕಯಾಮತ್ (ಅಂತಿಮ ನಿರ್ಣಾಯಕದಿನದಂದು) ನನ್ನನ್ನು ತಮ್ಮ ಜೊತೆಗೆ ಸ್ವರ್ಗಕ್ಕೊಯ್ಯಬೇಕು ಎಂದರು. ಆ ಸಮಯದಲ್ಲಿ ಮೌಲಾನಾ ಹಬೀಬುಲ್ಲಾಹ್(ಖು)ರ ವಯಸ್ಸು ಹದಿನೇಳು ವರ್ಷವಿತ್ತು. ಮತ್ತೆ ಗ್ರಂಥ 'ಬುರ್ಹಾಯಿನ್'ನಿಂದ ಮೂರು ಪಾಠಗಳನ್ನು ವಿವರಿಸಿ ಹೀಗೆಂದರು ಈ ಸಂಬಂಧವೂ ಜೊತೆಗಿರಲಿ ಎಂದರು. ಆ ಗ್ರಾಮದ ವಿದ್ವಾಂಸರು, ಶಿಕ್ಷಕರು ಇವರ ವ್ಯಕ್ತಿತ್ವವನ್ನು ಗಮನಿಸಿ ಈ ವ್ಯಕ್ತಿಯು ಸರ್ವವಿಧದ ಜ್ಞಾನಪ್ರಾಪ್ತಿ ಮಾಡಿಕೊಂಡಿದ್ದಾರೆ ಹಾಗೂ ನಮ್ಮ ಪರೀಕ್ಷೆಗಾಗಿ ಇಲ್ಲಿಗೆ ಬಂದಿದ್ದಾರೆ ಎಂದರು. ಇದಕ್ಕಿಂತ ಮೊದಲೂ ಓರ್ವ ವ್ಯಕ್ತಿ ನಮ್ಮ ಪರೀಕ್ಷೆ ತೆಗೆದುಕೊಂಡಿದ್ದರು. ಅಲ್ಲಿಂದಲೂ ಮೌಲಾನಾರು ತಮಗೆ ವಿದ್ಯೆ ನೀಡಬಹುದಾದ ಮಹಾ ಗುರುಗಳನ್ನು ಕಾಣದೆ ತಮ್ಮ ವಾಸಸ್ಥಾನವಾದ ಬಿಜಾಪುರಕ್ಕೆ ಮರಳಿದರು. ವಿವಿಧ ಜ್ಞಾನಸ್ರೋತಗಳಲ್ಲಿ ವಿದ್ಯಾದಾನ ಮಾಡತೊಡಗಿದರು. ಹಾಗೂ ಮಶಾಯಿಕೀನ್‌ರಿಂದ ಸಂಬಂಧ ಬೆಳೆಸಿ ಅವರಿಂದಲೂ ಜ್ಞಾನ ಪಡೆದುಕೊಂಡರು. ಹಜ್ರತ್‌ಶಾಹ್ ಮುಹಮ್ಮದ್ ಮಿರ್ಜಾ ಉರ್ಫ್ ಮೀರಾಸಾಬ್ ಬಾಬಾನಗರರವರು ಮಹಾಪುರುಷರು. ವಿದ್ವಾಂಸರು ಹಾಗೂ ಸದಾಕಾಲ ಅಲ್ಲಾಹುವಿನ ನಾಮದ ಜಪತಪಗಳಲ್ಲಿರುತ್ತಿದ್ದರು. ಅವರ ಬಳಿಯೂ ಹಜ್ರತ್ ಮೌಲಾನಾ ಹಬೀಬುಲ್ಲಾಹ್‌ರವರು ಜ್ಞಾನಪ್ರಾಪ್ತಿ ಮಾಡಿಕೊಂಡರು. ಆ ಸಮಯದಲ್ಲಿಯೇ ಮೌಲಾನಾರ ಮನದಲ್ಲಿ ದೇವನನ್ನು ಪಡೆಯುವ ಇಚ್ಛೆ ಜಾಗೃತವಾಯಿತು. ಹಾಗೂ ಅಂತರ್ಜ್ಞಾನ ಹಾಗೂ ಪಾರಲೌಕಿಕ ಜ್ಞಾನದಲ್ಲಿ ಮಹಾರಥರಾದವರ ಶಿಷ್ಯರಾಗಬೇಕು. ಇಂಥ ಪರಿಪೂರ್ಣ ಮಹಾಗುರುವನ್ನು ಹುಡುಕಲು ಹಿಂದೂಸ್ಥಾನ, ರೋಮ್ ಹಾಗೂ ಶಾಮ್ ಸಂಪೂರ್ಣ ಅರಬ್ ಹಾಗೂ ಮಕ್ಕಾ ಮದೀನಾಕ್ಕೆ ಹೋಗುವ ದೃಢನಿರ್ಧಾರ ಕೈಗೊಂಡರು. ಈ ವಿಷಯದ ಕುರಿತು ಚರ್ಚಿಸುವದಕ್ಕಾಗಿ ಬಾಬಾನಗರಕ್ಕೆ ಮೀರಾಸಾಹೇಬರ ಬಳಿಗೆ ಹೋದರು. ಅವರು ಇವರ ಬಯಕೆಯನ್ನು ಅರಿತು ಮರುದಿನ ಅವರ ಕೈ ಹಿಡಿದುಕೊಂಡು ಒಂದು ಕೋಸ್ ಹಾದಿಯನ್ನು ನಡೆದು ಅರಣ್ಯದಲ್ಲಿ ಕರೆದುಕೊಂಡು ಹೋದರು ಹಾಗೂ ನಿಂತು ಹೀಗೆ ಹೇಳಿದರು. ಯಾವ ವ್ಯಕ್ತಿಯನ್ನು ತಾವು ಹುಡುಕುತ್ತಿದ್ದಿರೋ ಅವರು ಇಲ್ಲಿ ಇರುವರು. ಹಜ್ರತ್ ಮೌಲಾನಾ(ಖು)ರು ಹೀಗೆ ಹೇಳಿರುವರು ನಾನು ನೋಡಿದಾಗ ಈ ಭೂಮಿಯು ಮರಭೂಮಿ–ಅರಬ್‌ಪ್ರದೇಶವಾಗಿ ಕಂಡುಬಂದಿತು ಹಾಗೂ ಇವರು ಬಯಸಿದ ಎಲ್ಲ ಪ್ರದೇಶಗಳ ದರ್ಶನವನ್ನು ಮಾಡಿಸಿದರು. ಅದರ ನಂತರ ಹೀಗೆಂದರು ನೀವು ಯಾವ ವ್ಯಕ್ತಿಯನ್ನು ಬಯಸುತ್ತಿದ್ದೀರೋ ಆ ವ್ಯಕ್ತಿಯನ್ನು ನಿಮ್ಮ ಬಳಿಯೇ ಅಲ್ಲಾಹನು ಕಳಿಸಿಕೊಡುವನು. ಆ ಮಹಾಪುರುಷರ ಇಚ್ಛೆಯಂತೆ ಮರುವರುಷ ಎಂದರೆ ಹಿಜ್ರಿಶಕೆ ೧೦೦೦ದಲ್ಲಿ

ಸೈಯದುಸ್ಸಾದಾತ್ ಹಜ್ರತ್‌ಶಾಹ್ ಸಿಬಗತುಲ್ಲಾಹ್ ಹುಸೈನಿ(ಖು) ಮದೀನಾ ಮುನವ್ವರಾದಿಂದ ಬಿಜಾಪುರಕ್ಕೆ ಆಗಮಿಸಿದರು. ಪಟ್ಟಣದ ವಿದ್ವಾಂಸರು ಹಾಗೂ ಸಾದಾತ್‌ರು ಹಾಗೂ ಮಶಾಯಿಕಿನ್ ಅಮೀರರು ಹಾಗೂ ಅಧಿಕಾರಿವರ್ಗದವರು ಇವರ ಭೇಟಿಗಾಗಿ ಹೋದರು. ಅವರು ಪಟ್ಟಣದ ವಿಸ್ಮಯ ಹಾಗೂ ಅದ್ಭುತಗಳ ಕುರಿತು ವಿಚಾರಿಸಿದರು. ಆಗ ಸಭಿಕರಲ್ಲಿ ಕೆಲವರು ಹೀಗೆಂದರು ಈ ಪಟ್ಟಣದಲ್ಲಿ ಓರ್ವ ವಿಸ್ಮಯಗೊಳಿಸಬಲ್ಲ ವ್ಯಕ್ತಿ ಇದ್ದಾರೆ ಅವರಿಗೆ 'ವಿಸ್ಮಯದ ಭಂಡಾರ'ವೆಂದರೂ ಸಲ್ಲುವದು ಅವರ ತೀಕ್ಷ್ಣಬುದ್ಧಿ ಎಷ್ಟೊಂದು ಇದೆಯೆಂದರೆ ಅವರು ಓದಿದ ವಿಷಯಗಳಲ್ಲೂ ಪರಿಣಿತರಾಗಿದ್ದಾರೆ ಹಾಗೂ ಯಾರ ವಿದ್ಯಾರ್ಥಿಯಾಗುವ ಅವಶ್ಯಕತೆ ಇಲ್ಲ. ಇಲ್ಲಿಯ ವಿದ್ವಾಂಸರು ನಮ್ಮ ಪರೀಕ್ಷೆ ತೆಗೆದುಕೊಳ್ಳಲೆಂದು ಇವರು ನಮ್ಮ ಬಳಿ ಬರುತ್ತಾರೆ ಎನ್ನುತ್ತಿದ್ದರು. ಇದೇ ಕಾರಣಕ್ಕೆ ಅವರು ವಿದ್ಯಾರ್ಜನೆಯನ್ನು ಬಿಟ್ಟುಕೊಟ್ಟರು. ಹಜ್ರತ್‌ಶಾಹ್(ಖು)ರು ಇದನ್ನು ಕೇಳಿ ಹೀಗೆಂದರು ಅವರಿಗೆ ನಮ್ಮ ಸಲಾಂ ತಿಳಿಸಿರಿ ಹಾಗೂ ಇಲ್ಲಿಗೆ ಬಂದು ನಮಗೆ ಭೇಟಿ ಮಾಡಿ ತಿಳಿಯಲು ಹೇಳಿರಿ. ಒಂದು ವೇಳೆ ಸಸಂತೋಷದೊಂದಿಗೆ ಕಲಿಯುವದಿದ್ದರೆ ಕಲಿಯಲಿ, ಒತ್ತಾಯವಿಲ್ಲ. ಮತ್ತೆ ಮರುದಿನ ಹಜ್ರತ್ ಮೌಲಾನಾ(ಖು) ಹಜ್ರತ್ ಶಾಹ್(ಖು)ರ ಸೇವೆಯಲ್ಲಿ ಹಾಜರಾದರು. ಹಾಗೂ ಹಜ್ರತ್ ಮೌಲಾನಾ ಹೀಗೆನ್ನುತ್ತಾರೆ. ಅವರ 'ಜ್ಞಾನಭಂಡಾರವನ್ನು ತಿಳಿದು ವಿಸ್ಮಿತರಾದರು. ಹೀಗನಿಸುತ್ತದೆ ಅವರೆದುರು ನನ್ನ ಜ್ಞಾನವು ಏನೇನೂ ಅಲ್ಲ. ಅದಕ್ಕಾಗಿ ಶಾಹ್(ಖು)ರಿಂದ ಜ್ಞಾನ ಪಡೆಯುತೊಡಗಿದರು. ಪ್ರತಿನಿತ್ಯ ಮದರಸಾದಲ್ಲಿ ೧೫ ಪುಸ್ತಕಗಳ ಅಧ್ಯಯನವಿರುತ್ತಿತ್ತು. ಅದನ್ನು ಅಭ್ಯಸಿಸತೊಡಗಿದರು. ಹಾಗೂ ಅಧ್ಯಯನದ ನಂತರ ಹಜ್ರತ್‌ಶಾಹ್(ಖು)ರ ಆದೇಶದಂತೆ ಎಲ್ಲ ಶಿಷ್ಯರೊಂದಿಗೆ ತದ್ವಿದ್ ಸಂಭಾಷಣೆ ಹಾಗೂ ಸಂವಾದದಲ್ಲಿ ತೊಡಗುತ್ತಿದ್ದರು. ಹಜ್ರತ್‌ಶಾಹ್(ಖು), ತಮ್ಮ ಶಿಷ್ಯರೊಂದಿಗೆ ಹೀಗೆ ಹೇಳುತ್ತಿದ್ದರು. ಯಾವ ವ್ಯಕ್ತಿಯು ಅವರೊಂದಿಗೆ ಸಂವಾದಕ್ಕಿಳಿಯುವನೋ ತನ್ನ ಪಾಠ ತಿಳಿಯುವನು ಇಲ್ಲದಿದ್ದರೆ ತಿಳಿಯಲಾರನು.

ಎಷ್ಟೋ ಸಲ ಹಜ್ರತ್‌ಶಾಹ್(ಖು)ರು ಉತ್ಕೃಷ್ಟ ಭಾಷೆಯಲ್ಲಿ ಉಪನ್ಯಾಸ ನೀಡುತ್ತಿದ್ದರು. ವಿದ್ಯಾರ್ಥಿಗಳು ಅದರ ಅರ್ಥವನ್ನು ಗ್ರಹಿಸದೆ ಮೌನವಹಿಸುತ್ತಿದ್ದರು. ಆದರೆ ಮೌಲಾನಾ(ಖು)ರು ಅರ್ಥವತ್ತಾಗಿ ತಿಳಿದುಕೊಂಡು ಸೂಕ್ಷ್ಮಗಳನ್ನು ಗ್ರಹಿಸುತ್ತಿದ್ದರು. ಕೆಲವೊಂದು ವಿಷಯಗಳು ಗುರುಗಳ ಸಂಜ್ಞೆಯಿಂದಲೇ ಅರಿಯುತ್ತಿದ್ದರು. ಹಜ್ರತ್‌ರು ಹೇಳಿದರು ಹಾಂ! ಹೀಗೆಯೇ ಇದೆ.

ಹಜ್ರತ್‌ಶಾಹ್(ಖು)ರ ಹವ್ಯಾಸವಿತ್ತು. ರಾತ್ರಿಯ ಅಂತಿಮ ಘಟ್ಟದಲ್ಲಿ ಚಿಕ್ಕಪುಟ್ಟ ಪುಸ್ತಕಗಳು ಹಾಗೂ ಬೃಹತ್ ಗ್ರಂಥಗಳ ಮೇಲೆ ತಮ್ಮ ಸ್ವಂತ ಮುದ್ರೆಯೊತ್ತಿ ಟಿಪ್ಪಣಿ ಬರೆದು ವಿಮರ್ಶೆನಡೆಸಿ, ಅಧ್ಯಯನದ ವೇಳೆಯಲ್ಲಿ ವಿದ್ಯಾರ್ಥಿಗಳಿಗೆ ವಿವರಿಸುತ್ತಿದ್ದರು.

‘ತಫ್ಸಿರೆ ಬೈಜಾವಿ’ಯ ಮೇಲೆ ವಿಮರ್ಶೆ ಬರೆದಿರುವದು ಯಾವಾಗ ಹಜ್ರತ್ ಮೌಲಾನಾ (ಖು) ಯಾವುದೇ ವಿಷಯ ಮಂಡನೆ ಮಾಡುತ್ತಿದ್ದರೋ ಹಜ್ರತ್‌ಶಾಹ್(ಖು)ರು ಅದನ್ನು ಅಧಿಕೃತಗೊಳಿಸುತ್ತಿದ್ದರು. ಯಾವಾಗಲೂ ಹೇಳುತ್ತಿದ್ದರು ನಿಮ್ಮ ಜ್ಞಾನವು ಸೂಕ್ಷ್ಮಗ್ರಾಹಿ ಹಾಗೂ ಸಂತಸ ಉಕ್ಕಿಸುವಂಥದ್ದಾಗಿದೆ. ಇರುಳಿನಲ್ಲಿ ಬರೆಯುವಾಗ ಇದನ್ನು ಉಲ್ಲೇಖಿಸುವೆನು. ಹಜ್ರತ್ ಮೌಲಾನಾ(ಖು) ‘ಮುಶ್ಕಾತುಲ್ ಮಿಸ್ಬಾ:’ದಲ್ಲಿ ಬಹಳಷ್ಟು ಸೂಕ್ಷ್ಮ ವಿಚಾರಗಳನ್ನು ಕೇಳಲಾಗಿ ಹಜ್ರತ್‌ರು ಹೀಗೆಂದರು ನೀವು ಏನನ್ನು ಬಯಸುತ್ತಿದ್ದೀರೋ ಹಾಗೂ ಈ ಟಿಪ್ಪಣಿಗಳಲ್ಲಿದೆಯೋ ಅದೆಲ್ಲವೂ ಈ ‘ಅರಬ್ಬಿಶರಾ’ದಲ್ಲಿರುವುದು. ಅದನ್ನು ನಾನು ಟಿಪ್ಪಣಿ ರೂಪದಲ್ಲಿ ಬರೆದು ಮನೆಯಲ್ಲಿಯೇ ಬಿಟ್ಟು ಬಂದಿರುವೆನು.

ಹಜ್ರತ್ ಮೌಲಾನಾ(ಖು)ರು ಹೇಳಿರುವುದೇನೆಂದರೆ ಹಜ್ರತ್‌ಶಾಹ್(ಖು)ರು ನನ್ನ ಕುರಿತು ಹೀಗೆಂದರು. ನಿಮಗೆ ಎಲ್ಲ ತೆರನಾದ ಲೌಕಿಕ–ವಿದ್ಯೆಯಲ್ಲಿ ಗುರುವಿನ ಅವಶ್ಯಕತೆ ಇಲ್ಲ. ಆದರೆ ‘ಉಲೂಮೆ ಗರೀಬಾ’ ಯಾವ ವಿದ್ಯೆಗಳು ಸಂಖ್ಯೆಯಲ್ಲಿ ಎರಡು ನೂರರಷ್ಟು ಇರುವವು. ಆ ವಿದ್ಯೆಯನ್ನು ಗಳಿಸುವದಕ್ಕಾಗಿ ತಮ್ಮಂಥಹ ಜ್ಞಾನಿಗೆ ಕನಿಷ್ಟ ಎರಡು ವರ್ಷಗಳ ಅವಧಿ ಬೇಕಾಗುವುದು. ಆ ರಹಸ್ಯವಿದ್ಯೆಯು ಬರಹರೂಪದಲ್ಲಿ ಇರುವದಿಲ್ಲ. ಗುರುಮುಖೇನವೇ ಕಲಿಯಬೇಕು. ಹಾಗೂ ಮತ್ತೆ ಹೀಗೆ ಹೇಳಿದರು. ಆ ಲೌಕಿಕ ವಿದ್ಯೆಯು ಜೋತಿಷ್ಯಶಾಸ್ತ್ರ, ಖಗೋಳಶಾಸ್ತ್ರ, ರೇಖಾಗಣಿತ, ರಸಶಾಸ್ತ್ರ, ಮಾಯಾವಿದ್ಯೆ, (ಜಾದೂ) ಇತ್ಯಾದಿ ರೂಪದಲ್ಲಿದ್ದು ಅದರ ಸಂಗ್ರಹವು ಲಭ್ಯವಿರುವದು ಹಾಗೂ ಈ ವಿದ್ಯೆಯನ್ನು ಕೆಲವು ಜನರೇ ಬಲ್ಲವರಾಗಿದ್ದಾರೆ. ಹಾಗೂ ನಾನು ಜೋತಿಷ್ಯಶಾಸ್ತ್ರದಲ್ಲಿ ಇಂಥಿಂಥಹ ಹೊಸಮಾರ್ಗಗಳನ್ನು ಅನ್ವೇಷಿಸಿ ಟಿಪ್ಪಣಿ ಮಾಡಿರುವೆನು. ಈ ಮೊದಲು ಅದನ್ನು ಯಾರೂ ಮಾಡಿರುವದಿಲ್ಲ ಹಾಗೂ ಅಲ್ಲಾಹು ನನಗೆ ಎಲ್ಲ ಜ್ಞಾನಶಾಖೆಗಳಲ್ಲಿ ಪ್ರಭುತ್ವ ನೀಡಿರುವನು. ಎಲ್ಲ ಪುಸ್ತಕಗಳ ಮೇಲೆ ಅಲ್ಲಲ್ಲಿ ವಿಮರ್ಶಾತ್ಮಕ ಟಿಪ್ಪಣಿ ಬರೆದಿರುವೆನು ಹಾಗೂ ‘ಷರಯೇ ತಜರೀದ್’ ಕುರಿತು ವಿವರವಾಗಿ ಬಲ್ಲೆನು ಮನಸ್ಸು ಮಾಡಿದ್ದರೆ ಒಂದು ಗ್ರಂಥವನ್ನೇ ಬರೆಯಬಹುದಾಗಿತ್ತು. ಆದರೆ ಬರೆಯಲಿಲ್ಲ.

ಯಾವಾಗ ಮೌಲಾನಾ ಹಬೀಬುಲ್ಲಾಹ್(ಖು)ರು ಹಜ್ರತ್‌ಶಾಹ್(ಖು)ರ ಶಿಷ್ಯತ್ವ ಸ್ವೀಕರಿಸಿದರು. ಮೊದಲನೆಯ ಭೇಟಿಯಲ್ಲಿ ಏನನ್ನೂ ಹೇಳದೇ ಉಪದೇಶಿಸದೇ ಅವರು ‘ಫನಾಫಿಲ್‌ಶೇಖ’ (ಗುರುವಿನ ಪ್ರಕೃತಿಯಲ್ಲಿ ಲೀನರಾದರು) ಹಾಗೂ ‘ಮುಕಾಮೆ ಫನಾಫಿಲ್ ರಸೂಲ’ ಪ್ರವಾದಿಯವರಲ್ಲಿ ಲೀನರಾಗುವುದು. ಅವರು ತಮ್ಮ ಮುರ್ಷಿದೆ ಕಾಮಿಲ್(ಮಹಾಗುರು)ವಿನ ಸ್ತುತಿಯಲ್ಲಿ ಈ ಗೀತೆಯನ್ನು ಹೇಳಿದರು.

ಸಿಬಗತುಲ್ಲಾಹಿ ಶವಾರಖ್ವಾಹಿ ಮುರಾದ್।
ಕೋ ಮಸಾಹಿಬ್‌ರಾ ಸಹಾಬಿ ಮೀ ಕುನದ್॥
ಕರ್ದ ಖ್ವಾಹದ್ ಕರ್ದ ಖ್ವಾಹದ್ ಕರ್ದ ಕರ್ದ।
ಜಲ್ವಯೆ ಹಕ್ ಬೇ ಹಿಜಾಬಿ ಮೀ ಕುನದ್।

ನೀನು ಸಿಬಗತುಲ್ಲಾಹ್‌ನವನಾಗು. ಒಂದುವೇಳೆ ನೀನು ನಿನ್ನ ಉದ್ದೇಶವನ್ನು ಪೂರ್ತಿಕರಿಸುವುದಿದ್ದರೆ, ಏಕೆಂದರೆ ಅವರು ತಮ್ಮ ಶಿಷ್ಯರಿಗೆ ಪ್ರವಾದಿಸಂಗಾತಿಯಂತೆ ಮಾಡಿಬಿಡುತ್ತಾರೆ ! ಒಂದು ವೇಳೆ ಅವರು ಇದನ್ನು ಬಯಸಿದರೆ ಇದೆಲ್ಲವನ್ನೂ ಮಾಡಿಬಿಡುತ್ತಾರೆ. ಅಲ್ಲಾಹುವಿನ ಉಜ್ವಲ ಪ್ರಕಾಶವನ್ನೂ ಬಹಿರಂಗಗೊಳಿಸಿಬಿಡುತ್ತಾರೆ.

ಇವರ ಪುಸ್ತಿಕೆಯಲ್ಲಿ ಹೀಗೆ ಬರೆಯಲಾಗಿದೆ. ಯಾವ ದಿನ ಮೌಲಾನಾ(ಖು) ಪ್ರಮಾಣ ಹಾಗೂ ಖಿಲಾಫತ್ (ಉತ್ತರಾಧಿಕಾರಿ) ಪಡೆದುಕೊಂಡು(ಬೈತ್) ಸಮೃದ್ಧರಾದರೋ ಆ ಸಮಯದಲ್ಲಿ ಹಜ್ರತ್‌ಶೇಖ ಮೆಹಮೂದ್ ಜುನ್ಯೆದಿ(ಖು)ರವರು ಆ ಸಭೆಯಲ್ಲಿ ಉಪಸ್ಥಿತರಿದ್ದರು. ಹಜ್ರತ್‌ಶಾಹ್(ಖು) ಹಜ್ರತ್ ಮೌಲಾನಾ(ಖು)ರಿಂದ ಕೇಳಿದರು. ತಮಗೆ ಯಾವ ಪಂಥದಲ್ಲಿ (ಪರಂಪರೆ)ಯಲ್ಲಿ ಶಿಷ್ಯತ್ವ ನೀಡಲಿ ಆಗ ತಾವು ಹೇಳಿದರು. ನನಗೆ ಪರಂಪರೆಯಿಂದ ಏನು ಕೆಲಸ? ನಿಮ್ಮವರನ್ನಾಗಿಸಿ ಸಾಕು, ಮತ್ತೆ ಮತ್ತೆ ಕೇಳಿದರೂ ಇದೇ ಉತ್ತರವನ್ನು ನೀಡಿದರು. ಹಜ್ರತ್‌ಶೇಖ ಮೆಹಮೂದ್ ಜುನ್ಯೆದಿ (ಖು)ರು ಹೇಳಿದರು ಅವರ ತಂದೆಯುವರು ಖಾದ್ರಿಯು ಪರಂಪರೆಯವರಾಗಿದ್ದರು. ಹಜ್ರತ್ ಶಾಹ್(ಖು)ರು ಈ ಮಾತನ್ನು ಆಲಿಸಿ ಖಾದ್ರಿಯ ಪರಂಪರೆಯು ಘನತೆವೆತ್ತ ಪಂಥವಾಗಿದ್ದು ಶೇಖ ಮೌಲಾನಾರನ್ನು ಅದೇ ಪಂಥದ ಶಿಷ್ಯರನ್ನಾಗಿಸಿದರು. ಕೆಲದಿನಗಳ ನಂತರ ಯಾವಾಗ ಹಜ್ರತ್‌ಶಾಹ(ಖು)ರು ಮದಿನಾ ಮುನವ್ವರಾದ ದರ್ಶನದ ನಿರ್ಧಾರಗೈದು ಆಸಾರ್ ಶರೀಫ್‌ದ ದರ್ಶನ ಮಾಡಿ ಶಾಹಪುರದ ಹವೇಲಿಯಲ್ಲಿ ತಂಗಿದರು. ಮತ್ತೆ ಅಲ್ಲಿಂದ ಹೊರಟು ಬಿಜಾಪುರದಿಂದ ೫ ಕೋಸ್ ದೂರವಿರುವ ತಿಕೋಟಾದಲ್ಲಿ ತಂಗಿದರು. ಆ ಸ್ಥಳದಲ್ಲಿ ಹಜ್ರತ್ ಮೌಲಾನಾರಿಗೆ ಅಲ್ಲಾಹನ ಸ್ಮರಣೆ ಜಪತಪ ವಿಧಿವಿಧಾನ ಕುರಿತು ಉಪದೇಶ ನೀಡಿದರು ಹಾಗೂ ಹಜ್ರತ್ ಮೌಲಾನಾ(ಖು)ರು ದ್ವಿಪದಿಯನ್ನು ಹೇಳಿದರು.

ತಲಖೀನೆ ಷಾಹ್ ಚ್ಯೂಂ ಶುದಾಃ ಅಂಜಾಮ್ ದಸ್ತಗೀರ್।
ತಾರೀಖ್ ಯಿಂ ಖುಷ್ ಅಸ್ತಕೆ ತಲಖೀನ್‌ಗ ಹೇ ಫಕೀರ॥

ಷಾಹ್ ಸಾಹೇಬರ ಉಪದೇಶದಿಂದ ಅಂತಿಮ ಯಶಸ್ಸು ಲಭ್ಯವಾಗುತ್ತದೆ. ಈ ದಿನಾಂಕವು ಅದೆಷ್ಟು ಶುಭಕರವಾಗಿದೆ ಎಂದರೆ ಫಕೀರನಿಗೆ ಇಂದು ಉಪದೇಶ ಲಭ್ಯವಾಗುತ್ತಿದೆ.

ಮೌಲಾನಾರು ಹಜ್ರತ್ ಶಾಹ್‌ರೊಂದಿಗೆ ಹೋಗಲು ಇಚ್ಛಿಸಿದರು. ಆದರೆ ಹಜ್ರತ್‌ರು

'ನೀನು ಈ ಪಟ್ಟಣದಲ್ಲಿರು' ಎಂದು ಆದೇಶಿಸಿದರು. ಏಕೆಂದರೆ ನಿನ್ನಿಂದ ಇಲ್ಲಿ ಬಹಳ ಕೆಲಸಕಾರ್ಯಗಳು ಜರುಗಲಿರುವವು. ಯಾವಾಗ ಕರೆಯುವೆನೋ ಆಗ ಮದೀನಾ ಮುನವ್ವರಾಕ್ಕೆ ಬಂದು ಬಿಡು' ಹಜ್ರತ್ ಮೌಲಾನಾ(ಖು)ರು ಹೇಳಿರುವರು. ಹಜ್ರತ್‌ಶಾಹ್‌ರು ಖಿಲಾಫತ್ ನೀಡಿದ ಬಳಿಕ ಯಾವ ತೆರನಾಗಿ ಹಲವಾರು ಶಿಷ್ಯರನ್ನು ಹಾಗೂ ಖಲೀಫಾರನ್ನು ಏಕಾಂತದಲ್ಲಿ ಧ್ಯಾನಸ್ಥರಾಗುವ, ಜಪತಪ ಮಾಡುವ ಆರಾಧನೆಗೈಯ್ಯುವ ಹಾಗೂ ಕಠಿಣ ವೃತಪಾಲಿಸುವ ಕುರಿತು ಹೇಳುವದು ಸಾಮಾನ್ಯ ಆದರೆ ಇಲ್ಲಿ ಹಜ್ರತ್‌ರು ನನಗೆ ಏನೊಂದನ್ನು ಹೇಳಲಿಲ್ಲ. ಒಂದು ದಿನ ನನ್ನ ಮನಸ್ಸಿನಲ್ಲಿ ಈ ವಿಚಾರ ಬಂದಿತು ಏನೆಂದರೆ ನಾನು ಈ ಕಾರ್ಯಕ್ಕೆ ಯೋಗ್ಯನಲ್ಲ ತಕ್ಷಣವೇ ಹಜ್ರತ್‌ರು ನನ್ನೊಂದಿಗೆ ಮುರ್ಷಿದ್‌ರ ಒಂದು ದೃಷ್ಟಿಯು ನೂರು ಏಕಾಂತವಾಸದ ಜಪತಪಗಳಿಗಿಂತ ಮಿಗಿಲು ಎಂದರು.

ಮೌಲಾನಾರ ಪವಾಡಗಳು ಅಸಂಖ್ಯ ಇರುವವು. ಆದರೆ ಅವುಗಳಲ್ಲಿ ಕೆಲವನ್ನು ಅವರ ಪುಸ್ತಕದಿಂದ ಆಯ್ದು ಪ್ರಾತಿನಿಧಿಕವಾಗಿ ಸಮೃದ್ಧಿ ರೂಪದಲ್ಲಿ ಇಲ್ಲಿ ಪ್ರಸ್ತುತಪಡಿಸಲಾಗಿದೆ.

ಒಂದು ಇರುಳು "ಹಾಷಿಯಾಯೆ ಖಯಾಲಿ ಜೊ ಶರಹೀ ಅಕಾಯಿದೆ ತಫ್ತಾಜಾನಿ' ಓದುತ್ತಿದ್ದೆನು" ಆಕಸ್ಮಿಕವಾಗಿ ಓರ್ವ ವ್ಯಕ್ತಿಯು ಅದೃಶ್ಯದಿಂದ ಪ್ರಕಟವಾಗಿ ಹೀಗೆ ಕೇಳಿದರು. ಏನನ್ನು ಓದುತ್ತಿರುವಿರಿ? ಪುಸ್ತಕವನ್ನು ಎಸೆಯಿರಿ ಯಾವಾಗ ಆ ವ್ಯಕ್ತಿಯು ಎರಡನೆಯ ಸಲವೂ ಇದೇ ವಿಧವಾಗಿ ಹೇಳಲು ನಾನು ಈ ಪುಸ್ತಕವನ್ನು ಮುಚ್ಚಿಟ್ಟೆನು. ಆ ಕಡೆ ನೋಡಿರಿ. ನೋಡಿದರೆ ಆಕಾಶದ ಬಾಗಿಲು ತೆರೆಯಲ್ಪಟ್ಟಿದೆ. ಅದರಲ್ಲಿ ಒಂದು ದೊಡ್ಡ ಉದ್ಯಾನ ಕಂಡುಬರುತ್ತದೆ ಹಾಗೂ ಅದರ ಎಲೆಗಳು 'ಯಾಕೂತ್'ದಂತೆ (ವಜ್ರವೈಢೂರ್ಯಗಳಂತೆ) ಹೊಳೆಯುತ್ತಿವೆ. ಮತ್ತೆ ನೋಡಲು ಅಲ್ಲಿಂದ ಒಂದು ಮಂಚವನ್ನು ತಂದರು ಹಾಗೂ ಜನಾಬ ಹಜ್ರತ್ ಮುಹಮ್ಮದ್(ಸ)ರು ಚಂದ್ರದಂತಹ ತಮ್ಮ ಮೊಗದ ಮೇಲೆ ಶಿರವಸ್ತ್ರಧರಿಸಿ ಅದರ ಮೇಲೆ ಆಸೀನರಾಗಿರುವರು. ಆ ಮಂಚವನ್ನು ನನ್ನೆದುರು ಇಟ್ಟು, ಶಿರವಸ್ತ್ರ ತೆಗೆದು ಬೇರೆಡೆಗೆ ಕರೆದುಕೊಂಡು ಹೋದರು. ನಾನು ಹಜ್ರತ್ ಮುಹಮ್ಮದ್(ಸ)ರ ಮುಖಚಂದ್ರವನ್ನು ನೋಡುವಲ್ಲಿ ಮಗ್ನನಾದೆನು. ಆ ಶಿರವಸ್ತ್ರ ಇಟ್ಟ ಸ್ಥಳದಲ್ಲಿ ಗದ್ದಲ ಶುರುವಾಯಿತು. ಹಜ್ರತ್‌ರು ಆಗಮಿಸಿದ್ದಾರೆ. ಆದರೆ ಹಜ್ರತ್‌ರಂತೂ ನನ್ನ ಜೊತೆಗೆ ಇದ್ದಾರೆ ಹಾಗಾದರೆ ಈ ಜನ ಹೇಳುವುದೇನು? ಎಂದಾಗ ಆಗ ಹೀಗೆಂದರು ಹಲವಾರು ಜನರು ಹಜ್ರತ್ ನೋಡಿದ್ದೇನೆ ಎನ್ನುವದು. ಅವರು ಕೇವಲ ಆ ಶಿರವಸ್ತ್ರವನ್ನು ನೋಡುವರು ಆದರೆ ಮುಹಮ್ಮದ್(ಸ)ರನ್ನು ಪ್ರತ್ಯಕ್ಷ ನೋಡುವದು ಕೇವಲ ಕೆಲವರಿಗೆ ಎಲ್ಲೊಬ್ಬರಿಗೆ ಸಾಧ್ಯ. ಹಜ್ರತ್ ಮೌಲಾನಾ(ಖು) ತಮ್ಮ ಪುಸ್ತಿಕೆಯಲ್ಲಿ ಬರೆದಿರುವರು ಒಂದಿರುಳು ಮುಹಮ್ಮದ್ ಸಖಾವಿ(ರ) ಇವರ

ಹಸ್ತಪ್ರತಿ 'ಅಘರಾದೆ ಸಖಾವಿ'ಯನ್ನು ಓದುತ್ತಿದ್ದೆ. ಅದರಲ್ಲಿಯ ಒಂದು ಅಧ್ಯಾಯವಾದ ಬಾಬುತ್ವಾಲಿ ಮುಸ್ನದೇ ಅಬೀ ತುಫೈಲ್‌ದಲ್ಲಿ ಹರ್ರುಜುರ್ರಅತುನ್, ಅಂದರೆ ಯುದ್ಧವು ಒಂದು ಗುಟುಕು ಇರುವುದು. ಹೀಗೆಯೇ ವ ತಫಕ್ರದ್ ಬಿಹೀ ಅಬೂರಜಾಕ್ಕೆ ತಲುಪಿದೆನು. ಆಗ ಎದುರಿಗೆ ಮುಹಮ್ಮದ್(ಸ)ರು ಪ್ರಕಟವಾದರು. ಎದುರಿಗೆ ಕುಳಿತು ಇದು ಯಾವ ಪುಸ್ತಕವೆಂದು ಕೇಳಿದರು. ಈ ಪುಸ್ತಕವು 'ಅಘರಾದೆ ಸಖಾವಿ' ಎಂದಿರುವದು ಮೌಲಾನಾರವರು ಯಾರಸೂಲುಲ್ಲಾಹ್ ಏನು ಇವರೆಲ್ಲರೂ ಅಘರಾದ ಇರುವರು. ಹಜ್ರತ್(ಸ) ಎಂದರು ಹಾಂ! ಇವರೆಲ್ಲರೂ 'ಅಘರಾದ' ಇರುವರು. ಮತ್ತೆ ಹಜ್ರತ್ ಮುಹಮ್ಮದ್(ಸ)ರು ಪುಸ್ತಕದೆಡೆಗೆ ದೃಷ್ಟಿ ಬೀರಿ ತಮ್ಮ ತೋರುಬೆರಳನ್ನು ಆ ಪುಟಗಳ ಮೇಲೆ ಸ್ಪರ್ಷಿಸಿದರು. ಹಾಗೂ ಅದರ ಅರ್ಥಗಳ ಮೇಲೆ ಗಮನಿಸಿ ತಲೆಯಾಡಿಸಿದರು. ಹಾಗೂ ಸುಬಹಾನಲ್ಲಾಹ್ ಏನು ನೆಮ್ಮದಿದಾಯಕ ಪುಸ್ತಕವಿರುವದು. ಏನು ಉತ್ತಮ ಕಾಗದವಿರುವದು ಹಾಗೂ ಒಳ್ಳೆಯ ಸಾಲುಗಳಿರುವವು ಎಂದರು.

ಹಜ್ರತ್ ಮೌಲಾನಾರಿಂದ ಉಲ್ಲೇಖವಿದೆ, ಒಂದು ದಿನ ಹಜ್ರತ್‌ಶಾಹ್ ಮುಹಮ್ಮದ್ ಗೌಸ ಗ್ವಾಲಿಯಾರಿ(ಖು) ಅಪರಾಹ್ನದ ನಮಾಜಿನ ವೇಳೆ ಮುಗಿಯುತ್ತಿರುವದನ್ನು ಕಂಡು ಸೂರ್ಯನನ್ನು ಉದ್ದೇಶಿಸಿ ಹೀಗೆಂದರು. ಅಸರ್ ನಮಾಜನ್ನು ಓದಿದ ನಂತರ ಮಾಯವಾಗುವ ಹಾಗೆಯೇ ಆಯಿತು. ಮೌಲಾನಾರಿಗೂ ಒಂದು ದಿನ ಹೀಗೆಯೇ ಅಸರ ನಮಾಜಿಗೆ ತಡವಾಯಿತು. ಆಗ ಸೂರ್ಯನಿಂದ ಒಂದು ಗಳಿಗೆ ತಡೆ, ನಮಾಜ ಪೂರ್ತಿಗೊಳಿಸುವೆ ಎಂದರು. ಹಾಗೆಯೇ ಆಯಿತು.

ಒಂದು ರಾತ್ರಿ ಹಜ್ರತ್ ಮೌಲಾನಾ(ಖು)ರು ಕುಳಿತಿದ್ದರು. ಅವರ ಅನುಯಾಯಿಗಳು ಅವರ ಸುತ್ತಲೂ ಕುಳಿತಿದ್ದರು. ತಕ್ಷಣ-ದೀಪವು ಆರಿತು. ಆ ವೇಳೆಯಲ್ಲಿ ಇವರ ಕೈಯಲ್ಲಿ ದಂಡವಿತ್ತು ಅದರಿಂದ ದೀಪವನ್ನು ಸ್ಪರ್ಶಿಸಲು ಅದು ಬೆಳಗಿತು. ಹಜ್ರತ್ ಮೌಲಾನಾ(ಖು)ರಿಂದ ಉಲ್ಲೇಖವಿದೆ. ಜನರಲ್ಲಿ ಪ್ರಸಿದ್ಧಿಯಾಗಿದೆ "ಹಜ್ರತ್ ಅಮೀರುಲ್ ಮೋಮಿನೀನ್ ಅಲಿ ಕರಮುಲ್ಲಾ" ವಜ್ಹೈ ಅವರು ಕುದುರೆಯ ಥಡಿಯ ಮೇಲೆ ಒಂದು ಕಾಲಿರಿಸಿ ಮತ್ತೊಂದು ಕಾಲನ್ನು ಆ ಕಡೆಯ ಥಡಿಯ ಮೇಲೆ ಕುದುರೆಯನ್ನೇರಿ ಇರಿಸುವ ಸಮುಯದಲ್ಲಿ – ಕುರ್‌ಆನ್ ಷರೀಫದ ಸರ್ವ ವಾಕ್ಯಗಳನ್ನು ವ್ಯಾಕರಣಬದ್ಧವಾಗಿ ಪಠಿಸಿ ಮುಗಿಸುತ್ತಿದ್ದರು. ಇದು ಸತ್ಯವಾದ ಮಾತು. ಅಲ್ಲಾಹುವು ಹಜ್ರತ್‌ಶಾಹ್(ಖು)ರ ಸಮೃದ್ಧಿಯಿಂದಾಗಿ ನನ್ನ ಮೇಲೆಯೂ ಈ ಕೃಪೆಯನ್ನು ಬೀರಿದ್ದಾನೆ. ಒಂದು ಕ್ಷಣ ಮಾತ್ರದಲ್ಲಿ ಸರ್ವ ವಾಕ್ಯಗಳನ್ನು ವ್ಯಾಕರಣ ಬದ್ಧವಾಗಿ ಸಂಪೂರ್ಣ ಕುರ್‌ಆನ್ ಪಠಿಸುವೆನು.

ಯಾವ ಸಮಯದಲ್ಲಿ ಹಜ್ರತ್ ಮೌಲಾನಾ(ಖು) ಅಂಗಶುದ್ಧಿ (ವುಜೂ) ಮಾಡುತ್ತಿದ್ದರು. ಸ್ವಲ್ಪ ನೀರು ವಜೂವಿನ ಸ್ಥಳದಲ್ಲಿ ಶೇಖರಿಸಲ್ಪಡುತ್ತಿತ್ತು. ತಕ್ಷಣ

ಒಂದು ಕಾಗೆಯೂ ಪ್ರಕಟವಾಗಿ ಆ ನೀರನ್ನು ಕುಡಿಯುತ್ತಿತ್ತು. ಮೌಲಾನಾರು ಹೀಗೆ ಹೇಳುತ್ತಿದ್ದರು. "ಜನರು ಈ ರಹಸ್ಯವನ್ನು ಹೇಗೆ ಅರಿಯಲು ಸಾಧ್ಯ"? ಈತ ಯಾರು? ಹೊರನೋಟದಲ್ಲಿ ಇದು ಕಾಗೆಯಾಗಿ ಕಾಣುತ್ತದೆ.

ಹಜ್ರತ್ ಮೌಲಾನಾರು ಕೂಡ್ರುತ್ತಿದ್ದ ಉಯ್ಯಾಲೆಯಿಂದ ಅವ್ಯಕ್ತ ರಹಸ್ಯಗಳು ವ್ಯಕ್ತವಾಗುತ್ತಿದ್ದವು. ಹಾಗೂ ಅಲ್ಲಾಹುವಿನ ನಾಮದ ಜಪ ಕೇಳಿ ಬರುತ್ತಿತ್ತು. ಉಲ್ಲೇಖವಿದೆ. ಒಂದು ದಿನ ಓರ್ವ ವ್ಯಕ್ತಿಯು ಕಾಣಿಕೆ ಸ್ವರೂಪದಲ್ಲಿ ಕ್ಷೀರವನ್ನು ಕಳುಹಿಸಿದನು. ಹಜ್ರತ್ ಮೌಲಾನಾರು ಕುಡಿಯ ಬಯಸಿದರು. ಇಂಥದ್ದರಲ್ಲಿ ಅವ್ಯಕ್ತರೂಪದಲ್ಲಿ ಒಂದು ಹಸ್ತ ಪ್ರಕಟವಾಯಿತು. ಹಾಗೂ ಹಜ್ರತ್‌ರ ಪವಿತ್ರ ಕೈಯ ಮೇಲೆ ಹೀಗೆ ಝಾಡಿಸಿತು. ಕೈಯಿಂದ ಆ ಹಾಲಿನ ಪಾತ್ರೆ ಉರುಳಿ ಬಿದ್ದಿತು. ಅವರು ಅದನ್ನು ಬಿಟ್ಟು ಬಿಟ್ಟರು. ನಂತರ ತಿಳಿದು ಬಂದದ್ದು ಅದರಲ್ಲಿ ವಿಷ ಸೇರಿಸಲಾಗಿತ್ತು.

ಒಂದು ರಾತ್ರಿಯಲ್ಲಿ ಹಜ್ರತ್ ಮೌಲಾನಾ(ಖ)ರು ಹಾಗೂ ಹಜ್ರತ್ ಶೇಖ ಅಬ್ದುಲ್‌ವಹಾಬ್ ಊರ್ಫ್ ಶೇಖ ಬಾಬೂಜಿ (ಖ) ಜೊತೆಯಾಗಿ ಕುಳಿತಿದ್ದರು. ಆಗ ಮನೆಯ ಮಾಳಿಗೆಯ ಮೇಲಿಂದ ಇವರ ತೊಡೆಯ ಮೇಲೆ ಒಂದು ವಸ್ತು ಬಿದ್ದಿತು. ತಕ್ಷಣ ದೊಡ್ಡದಾದ ಶಬ್ದ ಉಂಟಾಯಿತು. ನೋಡಿದರೆ ಚೇಳು ಇತ್ತು. ಅದನ್ನು ಎತ್ತಿ ದೂರಕ್ಕೆ ಎಸೆದರು. ಮತ್ತೆ ಅವರು ಶೇಖ ಬಾಬುಜಿ(ಖ)ರೊಂದಿಗೆ ಕೇಳಿದರು. ಈ 'ಧ್ವನಿ' ಏನಿತ್ತು? ಆಗ ಅವರೆಂದರು ಅದು ಅಲ್ಲಾಹುವಿನಿಂದಾದ ಧ್ವನಿಯಿತ್ತು. ನಿಮಗೆ ಎಚ್ಚರಿಸಿತು.

ಹಸಿರು ಉಡುಗೆ ತೊಟ್ಟ ಐದು ಜನ ಫಕೀರರು ಅವರಲ್ಲಿ ಕೆಲವರ ಕೈಯಲ್ಲಿ ಮಣ್ಣಿನ ಕುಡಿಕೆ ಇದ್ದವು. ಹಾಗೂ ಹಾದಿಯಲ್ಲಿ ನಿರೀಕ್ಷೆಯಲ್ಲಿ ನಿಂತಿದ್ದರು. ಹಜ್ರತ್ ಮೌಲಾನಾ(ಖ)ರ ಪಲ್ಲಕ್ಕಿಯನ್ನು ನೋಡಿದ ತಕ್ಷಣ ಹೀಗೆನ್ನತೊಡಗಿದರು. 'ಹಬೀಬುಲ್ಲಾಹ್' ಈ ವ್ಯಕ್ತಿ ಇರುವರು. ಯಾವಾಗ ಅವರ ಸವಾರಿ ಇವರ ಬಳಿ ಬಂದಿತೋ ಅವರಿಗೆ ಕೇಳಿದರು. ಎಲ್ಲಿಂದ ಬಂದಿರುವಿರಿ. ಅವರೆಂದರು 'ದೆಹಲಿಯಿಂದ' ಎಲ್ಲಿ ತಂಗಿದ್ದೀರಿ? ಇದೇ ಸ್ಥಳದಲ್ಲಿ ಮತ್ತೆ ಕೇಳಿದರು ಮೂರು ದಿನ ಮೊದಲು ಎಲ್ಲಿ ನಿಂತಿದ್ದೀರಿ? ಇದೇ ಸ್ಥಳದಲ್ಲಿ ಎಲ್ಲಿಗೆ ಹೋಗುವಿರಿ? ದೆಹಲಿಗೆ ಯಾವ ಕಾರಣಕ್ಕೆ ಬಂದಿದ್ದೀರಿ? ಉತ್ತರವಾಗಿ 'ನಿಮ್ಮನ್ನು ನೋಡಲು' ಎಂದರು. ಹಜ್ರತ್ ಮೌಲಾನಾ ಹೇಳುತ್ತಾರೆ ಆ ಜನರು ಅಲ್ಲಿಂದ ಹೊರಟು ಹೋದರು. ಹಾಗೂ ದೂರದಿಂದ ನೋಡಲು ಉಲ್ಲೇಖಿತ ಫಕೀರರು ಒಟ್ಟಾಗಿ ಸೇರಿ ಹಾರುವ ಯೋಚನೆ ಮಾಡಿದರು. ಹಾಗೂ ಒಂದು ಕ್ಷಣದ ನಂತರ ದೃಷ್ಟಿಯಿಂದ ಮಾಯವಾದರು ತಿಳಿದುಬಂದದ್ದೇನೆಂದರೆ ಹಾರುತ್ತಾ ಎಲ್ಲಿಂದ ಬಂದಿದ್ದರೋ ಅಲ್ಲಿಗೆ ಮರಳಿದರು. ಉಲ್ಲೇಖವಿದೆ. ಒಂದು ದಿನ ಅವರು ನಿರ್ಧರಿಸಿದರು. ಅಂಗಳದ ಮೆಹರಾಬಿನಿಂದ ಒಂದು ಹಣೆಗೆಯನ್ನು

ಎತ್ತಿಕೊಳ್ಳಬೇಕು. ಹಾಗೆ ಯೋಚಿಸಿದಾಗಲೇ ಹಣಿಗೆಯು ತನ್ನಿಂದ ತಾನೆ ಹಾರುತ್ತ ಬಂದು ಹಜ್ರತ್‌ರ ಕೈ ಸೇರಿತು.

ಹಜ್ರತ್ ಮೌಲಾನಾ(ಖು) ವಯಸ್ಸು ೬೩ ವರ್ಷ ತಲುಪಿದಾಗ ಆ ಸಮಯದಲ್ಲಿ ಹಜ್ರತ್ ಮೌಲಾನಾರಿಗೆ ಸೈಯ್ಯದ್ ಅಸದ್ ಬಲ್ಖಿ ಎಂಬುವವರು ಯಾರು ಹಜ್ರತ್‌ಶಾಹ್ ಸಿಬಗ್‌ತುಲ್ಲಾಹ್ ಹುಸೈನಿ(ಖು)ರ ಪತ್ರವನ್ನು ತಂದು ಜಿಲ್‌ಖೈದಾದ– ದಿನಾಂಕ೧, ೧೦೪೦ ಹಿಜ್ರಿಯಂದು ತಲುಪಿಸಿದರು. ಅದರ ಸಾರಾಂಶ ಹೀಗಿತ್ತು. ತಾವು ಯಾವುದೇ ವಿಧದ ಹಿಂಜರಿಕೆಯನ್ನು, ಸಂಕೋಚವನ್ನು ಪಡದೇ ಪವಿತ್ರ ಮಕ್ಕಾ ಹಾಗೂ ಮದೀನಾ ಮನವ್ವರಾದ ಕಡೆಗೆ ಪಯಣಿಸಬೇಕು ಇದರಲ್ಲಿ ಸಮೃದ್ಧಿಯಿದೆ 'ಅಜದೋಸ್ತ ಯಕ್ ಇಶಾರಾ ಧರ್‌ನಾಬಸರ್ ದವಿದನ್' ಗೆಳೆಯನ ಒಂದು ಸಂಜ್ಞೆಯಾದರೆ ಸಾಕು. ನಾನು ತಲೆಕೆಳಗೆ ಮಾಡಿ ಓಡಿ ಹೋಗುತ್ತೇನೆ ಒಂದು ಸಂಜ್ಞೆಯ ಹಜ್ರತ್ ಮೌಲಾನಾ(ಖು)ರ ಪತ್ರ ತಲುಪಲು, ಹಾಗೂ ತಮಗೆ ಕರೆದುಕೊಳ್ಳುವ ವಿಷಯ ತಿಳಿದು ಸಂತಸಪಟ್ಟು, ಪುಸ್ತಕ 'ನಫಾತುಲ್ ಅನ್ಸ್'ದಲ್ಲಿ ನೋಡಿದರು. ಹಾಗೂ ಮಕ್ಕಾ, ಮದೀನಾದ ಯಾತ್ರೆಯ ನಿರ್ಧಾರದ ಕುರಿತು ಹಜ್ರತ್‌ಶಾಹ್ ಸಿಬಗತುಲ್ಲಾಹರಿಂದ ಸಹಾಯ ಪಡೆದರು. ಆಗ ಈ ಶಕುನದಲ್ಲಿ ದ್ವಿಪದಿಗಳು ಹೊರಟವು.

ದರೀಂಜಮಾಸಾ ಮನಮ್ ಖಾಯದ್ ಸಿರಾತ್ ಅಲ್ಲಾಹ್ ।
ಜ ಹದೆ ಖಾವರ್ ತಾ ಆಸ್ತಾನಾಯೆಅಕ್ಸಾ ॥
ರವಿಂದಗಾನೆ ಗಾನ್ ಮುಅರಿಫ್ ಮುರಾ ಕುಜಾ ಬೀ ನಂದ್ ।
ಕೆ ಹಸ್ತ್ ಮಂಜಿಲೆ ಜಾನಮ್ ಬಿಮಾ ವರಾಯೇವರಾ ॥

ಈ ಕಾಲದಲ್ಲಿ ನಾನು ಅಲ್ಲಾಹುವಿನ ಪಥದ ಮಾರ್ಗದರ್ಶಕನಾಗಿರುವೆನು. ಮದೀನಾದಿಂದ ಹಿಡಿದು ಮಸ್ಜಿದೆ ಅಕ್ಸಾದವರೆಗೆ ಪೂರ್ವದಿಂದ ಹಿಡಿದು ಪಶ್ಚಿಮದವರೆಗೆ ಮಾಅರಿಫತ್‌ದ ಹಾದಿಯಲ್ಲಿ ಸಾಗುವವರು. ನನ್ನನ್ನು ಹೇಗೆ ನೋಡಬಲ್ಲರು. ನಾನು ನನ್ನ ಜೀವನದ ಗುರಿಯಿಂದ ಬಹುದೂರ ಬಂದಿದ್ದೇನೆ.

ಈ ಶುಭಶಕುನದಿಂದ ಸಂತಸಗೊಂಡ ಮೌಲಾನಾ(ಖು)ರು ಪ್ರಯಾಣದ ವೆಚ್ಚ ಹಾಗೂ ಬೇಕಾದ ಅವಶ್ಯಕ ಸಾಮಗ್ರಿಗಳನ್ನು ಸಂಗ್ರಹಿಸುವತ್ತ ಗಮನ ಹರಿಸಿದರು. ಇದೇ ಸಮಯದಲ್ಲಿ ನವಾಬ್ ಆಸಿಫ್‌ಖಾನ್‌ನು ಭಾರತ ಸಾಮ್ರಾಜ್ಯದ ಸಾಮ್ರಾಟನಾದ ಶಹಾಜಹಾನನ ಸೇನಾಧಿಕಾರಿಯಾಗಿದ್ದ ಆತನು ತನ್ನ ಸೈನ್ಯದೊಂದಿಗೆ ಬಿಜಾಪುರಕ್ಕೆ ಆಗಮಿಸಿ ಮುತ್ತಿಗೆ ಹಾಕಿದನು. ಮೊಘಲರ ದಾಳಿಯ ಹಿಂಸೆಯ ಹಾಗೂ ತಮ್ಮನ್ನು ಕೈದಿಯಾಗಿಸುವ ಭಯದಿಂದ ಎಲ್ಲರೂ ತತ್ತರಿಸಿ ಹೋದರು. ಅದೇ ಕಾಲದಲ್ಲಿ ಹಜ್ರತ್ ಮೌಲಾನಾ(ಖು)ರು ಜ್ವರದಿಂದ ಬಳಲಿದರು. ಹಾಗೂ ದಿನದಿಂದ ದಿನಕ್ಕೆ

ಜ್ವರ ಹೆಚ್ಚುತ್ತಲೇ ಹೋಯಿತು. ಹಾಗೂ ಒಂದು ತಿಂಗಳವರೆಗೆ ರೋಗದಿಂದ ಬಳಲಿದರು. ಅವರ ಪತ್ನಿ ಹಾಗೂ ಹಿರಿಯ ಸುಪುತ್ರರಾದ ಶಾಹ್‌ಸಾಹದ್‌ರು ಮೊಘಲ ಸೈನ್ಯದ ಆಗಮನದಿಂದ ಹಾಗೂ ಹಜ್ರತರ ರೋಗದ ಉಲ್ಬಣಗೊಳ್ಳುವಿಕೆಯಿಂದ ವಿಪ್ಪಲಿತರಾಗಿ ಹಜ್ರತ್‌ರ ಬಳಿ ಹೀಗೆಂದರು–ಈಗ ಏನು ಯೋಚಿಸಬೇಕು ಹಜ್ರತ್‌ರು ಅವರನ್ನು ಸಮಾಧಾನಗೊಳಿಸಿದರು. ಹಾಗೂ ಒಂದು ದಿನ ಮನಸ್ಸನ್ನು ಶಾಂತಗೊಳಿಸುವದಕ್ಕಾಗಿ ಹೀಗೆಂದರು 'ಶಾಂತರಾಗಿರಿ' ಚಿಂತಿತರಾಗದಿರಿ, ಮೊಘಲ ಸೈನ್ಯದಿಂದ ಯಾವುದೇ ತೆರನಾದ ಹಾನಿ, ಗದ್ದಲ ಗೊಂದಲ, ಭಯ ಭೀತಿ ಹಾಗೂ ತೊಂದರೆಯಾಗದು ಎಲ್ಲವೂ ಕುಶಲವಾಗಿದೆ. ಈ ಸೈನ್ಯದಿಂದ ಏನೂ ತೊಂದರೆಯಾಗಲಾರದು. ಹಾಗೂ ಈ ಮಾತನ್ನು ಪದೇ ಪದೇ ಉಚ್ಚರಿಸುತ್ತಿದ್ದರು. ಲೇಖಕರಾದ ಶೇಖ ಅಬುಲ್‌ಫತಾಹ್ ತಮ್ಮ ಪುಸ್ತಿಕೆಯಲ್ಲಿ ಮೌಲಾನಾ(ಖು)ರು ಪದೇ ಪದೇ ಈ ಶಬ್ದ ಉಚ್ಛರಿಸುವುದನ್ನು ಗಮನಿಸಿ ಈ ಸೈನ್ಯದಿಂದ ಉಂಟಾಗುವ ಹಾನಿಯನ್ನು ತಡೆಯುವದಕ್ಕಾಗಿ ಸ್ವತಃ ಹಜ್ರತ್ ತಮ್ಮ ಪ್ರಾಣವನ್ನು ಪಣಕ್ಕಿಟ್ಟಿದ್ದಾರೆ. ರೋಗದ ಉಲ್ಬಣಾವಸ್ಥೆಯ ಶಿಖರದ ತುತ್ತ ತುದಿ ತಲುಪಿ ತಮ್ಮ ಕೊನೆಗಳಿಗೆಗಳಲ್ಲಿ ತಮ್ಮ ಸೇವಕರಾದ ಸಾದಿಕ್ ಶೇಖರಿಗೆ ಕರೆದು ಹೀಗೆ ಹೇಳಿದರು. ನನಗೆ ಆಕಾಶವಿಹಾರ ಮಾಡಿಸಿ ಎಲ್ಲವನ್ನು ತೋರಿಸಿದರು. ಆದರೆ ಸಾವನ್ನು ಮಾತ್ರ ತೋರಿಸಲಿಲ್ಲ. ಆಗ ಇದರ ಕಾರಣವನ್ನು ಶೇಖ ಇಸ್ಮಾಯಿಲ್‌ರು ಹೀಗೆ ಹೇಳಿದರು. 'ಔಲಿಯಾ ಜಿಂದಾ ಹೈಂ' ಈ ತೆರನಾಗಿ 'ಸೂಫಿಗಳು ಜೀವಂತ ಇರುವರು' ಔಲಿಯಾಗಳು ಅಮರರಾಗಿರುವರು. ಹಜ್ರತ್ ಮೌಲಾನಾ(ಖು)ರು ಸೋಮವಾರ, ಸಾಯಂಕಾಲದ ಸಮಯದಲ್ಲಿ ಹಿಜ್ರಿ ಶಕೆ ೧೦೪೧ರಲ್ಲಿ ಶಾಬಾನ್ ತಿಂಗಳ ೯ನೆಯ ದಿನಾಂಕದಂದು ಈ ಜಗಕ್ಕೆ ವಿದಾಯ ಹೇಳಿದರು ಹಾಗೂ ತಮ್ಮ ಅಂತಿಮ ಇಚ್ಛೆಯ ಅನುಸಾರವಾಗಿ ತಮ್ಮ ಮಾತೋಶ್ರಿ ಹಾಗೂ ಮುರೀದ್‌ರಾದ ಬೀಬಿನಯೀಮಾ(ರ) ಅವರ ಸಮಾಧಿಯ ಬಳಿ ಜೊಹ್ರಾಪುರದಲ್ಲಿ ಸೋಮವಾರದಂದು ಈ ಅಮೂಲ್ಯವಾದ ಮುತ್ತನ್ನು ಭೂಮಿಯ ಒಡಲಲ್ಲಿ ವಿಶ್ವಸ್ಥ ನಿಧಿಯನ್ನಾಗಿಸಿ ದಫನ್ ಮಾಡಲಾಯಿತು. ಅದೇ ತಿಂಗಳ ೧೨ನೆಯ ದಿನಾಂಕದಂದು ಆಸಿಫ್‌ಖಾನ್‌ನು ತನ್ನಿಂದ ತಾನೆ ಸೈನ್ಯವನ್ನು ಹಿಂತೆಗೆದುಕೊಂಡು ತುಂಬಾ ನಿರಾಶನಾಗಿ ಮರಳಿ ಹೋದನು. ಹಾಗೂ ಹಜ್ರತ್ ಮೌಲಾನಾ(ಖು)ರ ಕಾರಣದಿಂದ ಈ ತೊಂದರೆಯು ನೀಗಿತು ಎಂದು ಮಹಾಪುರುಷರಿಗೆ ತಿಳಿದುಬಂದಿತು ಹಾಗೂ ಮುಹಮ್ಮದ್(ಸ) ಪೈಗಂಬರರಿಗೆ ಇದ್ದಷ್ಟೇ ವಯಸ್ಸು ಹಜ್ರತ್‌ರಿಗೆ ಪ್ರಾಪ್ತಿಯಾಯಿತು. ಹಜ್ರತ್‌ಶಾಹ್(ಖು)ರು ಮರಳಿ ಹೋಗುವ ಸಮಯದಲ್ಲಿ ಮೌಲಾನಾ(ಖು)ರ ಅವರ ಜೊತೆ ಹೋಗಬಯಸುತ್ತಿದ್ದರು. ಆದರೆ ಹಜ್ರತ್‌ಶಾಹ್‌ರು 'ನೀವು ಇಲ್ಲಿಯೇ ಇರಬೇಕು ನಿಮ್ಮಿಂದ ಒಂದು ಮಹಾಕಾರ್ಯ ಜರುಗುವದಿದೆ' ಎಂದಿದ್ದರು. ಈಗ ಆ ಮಾತಿನ ಅರ್ಥ ಜಗಜ್ಜಾಹೀರವಾಯಿತು.

ಅವರು ಜಗತ್ತಿನಿಂದ ಮರೆಯಾದ ನಂತರ ಅವರ ಸುಪುತ್ರರಾದ ಹಜ್ರತ್ ಮುಹಮ್ಮದ್ ಸಿಬ್ಗತುಲ್ಲಾಹ್ ಉರ್ಫ್ ಶಾಹ್‌ಸಾಹಬ್(ಖು)ರು ಪವಿತ್ರಶವವನ್ನು ಮದೀನಾ ಮುನವ್ವರಾಕ್ಕೆ ತಲುಪಿಸುವ ದೃಢನಿರ್ಧಾರ ಮಾಡಿದರು. ಆದರೆ ಹಜ್ರತ್ ಮೌಲಾನಾರು ಪ್ರಕಟರಾಗಿ ತಮ್ಮ ಸಮಾಧಿಯ ಪ್ರವಾದಿ ಮುಹಮ್ಮದ(ಸ) ಸುಪುತ್ರ ಹಜ್ರತ್ ಇಬ್ರಾಹಿಂರ ಸಮಾಧಿಯ ಬಳಿ ಹಾಗೂ ತಮ್ಮ ಗುರು ಹಜ್ರತ್‌ಶಾಹ್ ಸಿಬ್ಗತುಲ್ಲಾಹ್(ಖು)ರ ಸಮಾಧಿಯ ಬಳಿ ತೋರಿಸಿ ಹೀಗೆಂದರು. ನಾನಿಲ್ಲಿರುವೆನು. ಹಾಗೂ ಇಲ್ಲಿಯ ಗುಂಬಜ್‌ನಲ್ಲಿರುವ ಸಮಾಧಿಯು ಖಾಲಿ ಇರುವುದನ್ನು ತೋರಿಸಿ ಇಲ್ಲಿಂದ ಒಯ್ಯುವ ಅಗತ್ಯವಿಲ್ಲ. ಈ ಕಾರಣದಿಂದ ಹಜ್ರತ್‌ಶಾಹ್(ಖು)ರು ಮದೀನಾ ಮುನವ್ವರಾದ ಪ್ರಯಾಣದ ವೆಚ್ಚವನ್ನು ಗುಂಬಜ್ ನಿರ್ಮಿಸುವಲ್ಲಿ ವ್ಯಯಿಸಿದರು ಹಾಗೂ ತಮ್ಮ ಸಮಾಧಿಯನ್ನು ಸಹ ಗುಂಬಜ್‌ದ ಒಳಗೆ ತಂದೆಯ ಸಮಾಧಿಯ ಪಕ್ಕದಲ್ಲಿ ನಿರ್ಮಿಸಿದರು. ಹಜ್ರತ್ ಮೌಲಾನಾ(ಖು)ರ ನಿಧನದ ದಿನಾಂಕವು ಖುತ್ಬೆ ಆಖಿರುಜ್ಜಮಾ ಎಂದರೆ ಹಿಜ್ರಿಶಕೆ ೧೦೪೧ ಆಗುವುದು. ಅವರ ಸಮಾಧಿಯು ಪ್ರಸಿದ್ಧ ಹಾಗೂ ಜನಸಮೂಹದ ದರ್ಶನಕ್ಕೆ ತೆರದ ಸ್ಥಳವಾಗಿದೆ ಹಾಗೂ ಗುಂಬಜ್‌ವು ತುಂಬಾ ಆಕರ್ಷಣೀಯವಾಗಿದೆ. ಹಾಗೂ ಈ ಗುಂಬಜ್‌ಕ್ಕೆ(ಮೋತಿ ಗುಂಬಜ್‌ವೆಂತಲೂ ಅನ್ನುವರು). ದರ್ಶನಾರ್ಥಿಗಳಿಗೆ ಈ ಗುಂಬಜ್‌ದ ಶಾಂತವಾತಾವರಣ ಹಾಗೂ ನೆರಳಿನಲ್ಲಿಯೇ ಇರಬೇಕೆನಿಸುತ್ತದೆ.

ನಜರ್ ಅಲಿಖಾನ್ ಎಂಬಾತನು ಉತ್ತಮ ಚಾರಿತ್ರ್ಯ ಹಾಗೂ ನ್ಯಾಯವಂತನಾಗಿದ್ದಾನೋ ಆತನು ಆಲಂಗೀರ ಔರಂಗಜೇಬ್ ಆಡಳಿತ ಅವಧಿಯಲ್ಲಿ ಸುಭೇದಾರನಾಗಿ ಕರ್ತವ್ಯ ನಿರ್ವಹಿಸಿದ್ದನು. ಆತನ ನ್ಯಾಯನಿರ್ಣಯದ ಘಟನೆಗಳು ಇಂದಿಗೂ ಜನರ ನಾಲಿಗೆಯ ಮೇಲೆ ನಲಿದಾಡುತ್ತವೆ. ಆತನೂ ಸಹ ಹಜ್ರತ್ ಮೌಲಾನಾ(ಖು)ರ ಗುಂಬಜ್‌ದ ಸುತ್ತ ಇರುವ ಗಡಿಯಲ್ಲಿ ದಫನ್ ಹೊಂದಿರುವನು ಹಾಗೂ ಆ ಕಾಲದ ಬಹಳಷ್ಟು ಮಹಾಪುರುಷರು, ಹಜ್ರತ್‌ರಿಂದ ಜ್ಞಾನದಾನ ಪಡೆದು ಸಮೃದ್ಧಿ ಹೊಂದಿ, ಖಿಲಾಫತ ಪಡೆದು ಜನಸೇವೆಯಲ್ಲಿ ತಮ್ಮ ಜೀವಿತವನ್ನೇ ಮುಡಿಪಾಗಿ ಇಟ್ಟರು.

ಹಜ್ರತ್‌ಶಾಹ್ ನೂರುದ್ದೀನ್ ಸಫವಿಯವರ ಸುಪುತ್ರರಾದ ಆರೀಫೆ ರಬ್ಬಾನಿ ಹಜ್ರತ್‌ಶಾಹ್ ಜಮಾಲುದ್ದೀನ್ ಸಫವಿಯವರು ಹಜ್ರತ್ ಮೌಲಾನಾರಿಂದ ಪ್ರಮಾಣ ಹೊಂದಿ ಖಿಲಾಫತ್ ಪಡೆದು ಧರ್ಮಪಾಲನೆಗೆ ಜನ ಸಮೂಹವನ್ನು ಶರಣಾಗಿಸಲು ನಿರಂತರವಾಗಿ ತೊಡಗಿಸಿಕೊಂಡರು.

ಹಜ್ರತ್‌ಶಾಹ್ ಮುಸ್ತಫಾ ಜುನೇದಿ ಸಜ್ಜಾದಯೇ ಹಜ್ರತ್‌ಶಾಹ್ ಗಂಜುಲ್ ಇಲ್ಮ ಜುನೇದಿಯವರೂ ಸಹ ಹಜ್ರತ್ ಮೌಲಾನಾ(ಖು)ರಿಂದ ಖಿಲಾಪತ್ ಪಡೆದು

ಸಮೃದ್ಧಿ ಹೊಂದಿದ್ದರು. ಬೀಬಿ ಸತ್ತಿ(ಖಿ)ರು ಯಾರು ಮಹಾಜ್ಞಾನಿಯಾಗಿದ್ದರು ಹಜ್ರತ್‌ರ ಸಾಂಗತ್ಯದಿಂದ ಇಂಥಹ ಉನ್ನತ ಮಟ್ಟವನ್ನು ಮುಟ್ಟಿದ್ದರೆಂದರೆ ಹಜ್ರತ್‌ರಿಗೆ ಲಭಿಸುವ ರಹಸ್ಯ ಆತ್ಮಜ್ಞಾನದ ಜ್ಞಾನವನ್ನು ಅಂತರ್ಜ್ಞಾನದಿಂದ ಅರಿತುಕೊಂಡು ಹಜ್ರತರಿಗೆ ಹೇಳುತ್ತಿದ್ದರು. ಯಾವಾಗಲೂ 'ತಮ್ಮ ಇಷ್ಟು ಆಯಸ್ಸು ಉಳಿದಿದೆ' ಎಂದು ಹೇಳುತ್ತಿದ್ದರು. ಹಾಗೂ ಮೃತ್ಯುವಿನ ಸಮಯದಲ್ಲಿ ಎರಡು ಸಲ, ಅಲ್ಲಾಹುವಿನ ಪ್ರಕಾಶದ ಮಿಂಚು ಹೊಳೆಯಿತು ಹಾಗೂ ಎಚ್ಚರದ ಸ್ಥಿತಿಯಲ್ಲಿ ಹಜ್ರತ್ ಮುಹಮ್ಮದ್(ಸ)ರ ದರ್ಶನವಾಯಿತು. ಹಾಗೂ ಮೃತ್ಯುಮುಖಿಯಾಗಿ ಹಾಸಿಗೆ ಹಿಡಿದ ಸಂದರ್ಭದಲ್ಲಿ ಸ್ವರ್ಗದ ಭೋಜನ ಸವಿದು ಸಂತೃಪ್ತರಾಗುತ್ತಿದ್ದರು. ಏಳನೆಯ ಜಮಾದಿಲ್‌ಆಖಿರ್ ಹಿಜ್ರಿಶಕೆ ೧೧೩೬ರಂದು ಇಹಲೋಕ ತ್ಯಜಿಸಿದರು.

ಹಜ್ರತ್ ಮೌಲಾನಾ(ಖು)ರ ಮೃತ್ಯು ದಿನಾಂಕವನ್ನು 'ಅಯಾ ತುಫ್ಫಾಹ್‌ತಲ್ ಜಿನಾನ್' (ಓ ಸ್ವರ್ಗದ ಸೇಬಿನ ಹಣ್ಣೇ) ಎಂದು ಇರುವುದು, ಅಂದರೆ ಅದರ ಒಟ್ಟು ಸಂಖ್ಯೆಯು ೧೧೩೬ ಇರುವುದು.

ಹಜ್ರತ್ ಶೇಖ ನದೀಮುಲ್ಲಾಹ್ ಬಿನ್ ಶಮಸುದ್ದೀನ್ ಸಿಬಗತುಲ್ಲಾಹೀ ಹಬೀಬುಲ್ಲಾಹಿ (ಖು) ಮಹಾನ್‌ವಿದ್ವಾಂಸ ಹಾಗೂ ದೇವನಿಷ್ಠೆಯಲ್ಲಿ ಅಪ್ರತಿಮರಾಗಿದ್ದರು. ಹಜ್ರತ್ ಮೌಲಾನಾ(ಖು)ರ ಖಲೀಫಾ ಹಾಗೂ ಸಂಬಂಧಿಗಳಲ್ಲಿ ಓರ್ವರಾಗಿದ್ದರು. ಹಜ್ರತ್ ಶೇಖ ಅಬುಲ್ ಫತಃ ಹಬೀಬುಲ್ಲಾಹಿ(ಖು) ಯಾರು ಹಜ್ರತ್‌ರ ಕುರಿತು ಹಲವಾರು ಪುಸ್ತಿಕೆಗಳ ಲೇಖಕರಾಗಿರುವರು ಅವರ ಆಪ್ತ ಖಲೀಫಾ ಹಾಗೂ ಶಿಷ್ಯೋತ್ತಮರಾಗಿದ್ದರು. ಒಂದು ದಿನ ಹಜ್ರತ್ ಮೌಲಾನಾ(ಖು)ರು ಮರಣಾಂತಿಕ ದಿನಗಳ ಮೊದಲಲ್ಲಿ ಈ ಲೇಖಕರಿಗೆ ಹಾಗೂ ತಮ್ಮ ಪುತ್ರರಿಗೆ ತಮ್ಮೆದುರು ಕರೆದು ಹೀಗೆ ಹೇಳಿದರು. ಒಂದು ವೇಳೆ ನೀವು ಪರಸ್ಪರ ಬೇರೆಯಾದರೆ, ಅಥವಾ ಸಂಬಂಧ ಮುರಿದುಕೊಂಡರೆ ಕರ್ತವ್ಯಚ್ಯುತಿಗೊಳಗಾಗುವಿರಿ. ಹಾಗೂ ಹೀಗೆಯೂ ಹೇಳಿದರು. ನಾನು ಯಾವ ಸ್ಥಳದಲ್ಲಿ ಮೃತ್ಯುವನ್ನು ಹೊಂದುವೆನೋ ಅಲ್ಲಿಯೇ ನೀವೂ ಕೂಡ ಮರಣ ಅಪ್ಪಿ ಸಮಾಧಿಸ್ಥರಾಗಬೇಕು. ಇಲ್ಲಿಯಾದರೆ ಇಲ್ಲಿ, ಮದೀನಾ ಮುನವ್ವರಾದಲ್ಲಾದರೆ ಅಲ್ಲಿ..., ನಫ್ಫಾಅನಲ್ಲಾಹು ಮಿನ್ ಬರ್ಕಾತಿಹಿಮ್ ಅಜ್ಮಯೀನ್।

ಅಲ್ಲಾಹು ಈ ಎಲ್ಲ ಮಹಾಪುರುಷರ ಸಮೃದ್ಧಿಯಿಂದ ನಮ್ಮೆಲ್ಲರನ್ನು ಧನ್ಯನಾಗಿಸಲಿ.

■

೨೫. ಹಜ್ರತ್ ಶಾಹ್ ಮುಹಮ್ಮದ್ ಸಿಬಗ್‌ತುಲ್ಲಾಹ ಸಾನಿ ದ್ವಿತೀಯ ಹಬೀಬುಲ್ಲಾಹಿ, ಶಾಹ್ ಸಾಹಬ್(ಖು) ಎಂದು ಪ್ರಸಿದ್ಧರು.

ಹಜ್ರತರು ಔಲಿಯಾಗಳಲ್ಲಿಯೇ ಶ್ರೇಷ್ಠ ಔಲಿಯಾ ಆಗಿದ್ದರು. ಹಾಗೂ ಪವಾಡ ಪುರುಷರಾಗಿದ್ದರು. ಬಾಲ್ಯದಲ್ಲಿ ಇಂತಹ ಕರಾಮತ್ತುಗಳು ಪ್ರಕಟವಾದವು. ಅವರ ತಂದೆಯವರಾದ ಹಜ್ರತ್ ಮೌಲಾನಾ ಹಬೀಬುಲ್ಲಾಹ್ ಸಿಬಗತುಲ್ಲಾಹಿ (ಖು)ರು ಹೀಗೆ ಹೇಳಿದರು. ತಮ್ಮ ಈ ಸುಪುತ್ರರು ಜನ್ಮಜಾತ ವಲಿಯಲ್ಲಾಹ್ ಆಗಿದ್ದಾರೆ. ಯಾವ ಜ್ಞಾನ ಹಾಗೂ ರಹಸ್ಯಗಳು ನನಗೆ ಅಂತಿಮ ದಿನಗಳಲ್ಲಿ ಲಭ್ಯವಾದವೋ ಇವರಿಗೆ ಬಾಲ್ಯಾವಸ್ಥೆಯಲ್ಲಿಯೇ ಲಭಿಸುವವು. ಸುಬಹಾನಲ್ಲಾಹ್ !

ಪಿದರ್ ಖುತುಬೆಎ ದೌರಾ, ಪಿಸರ್ ಕುತುಬೇವಕ್ತ ತಂದೆಯವರು ತಮ್ಮ ಯುಗದ ಕುತುಬ್‌ರಾದರೆ ಪುತ್ರರು ಈ ಕಾಲದ ಕುತುಬ್‌ರಾಗಿದ್ದಾರೆ. ಹಾಗೂ ಹಜ್ರತ್ ಮೌಲಾನಾ(ಖು) ಇದನ್ನು ಸಹ ಹೇಳಿದ್ದರು. ಶಾಸಾಹ್‌ಬ್ ಪ್ರಾರಂಭಾವಸ್ಥೆಯಲ್ಲಿ 'ಬೇಖುದಿ' (ತನ್ಮಯತೆ)ಯನ್ನು ಇಷ್ಟಪಡುತ್ತಿದ್ದರು. ಹಾಗೂ ಹೀಗೆನ್ನುತ್ತಿದ್ದರು. ತನ್ಮಯರಾಗಿರಬೇಕು ಸತ್ಯದ ಹೊರತಾಗಿ ಏನನ್ನು ಅರಿಯಬಾರದು. ನಾನೆಂದೆನು ಇಷ್ಟು ತನ್ಮಯವಾಗುವದು ಉಚಿತವಲ್ಲ. ಏಕೆಂದರೆ ತನ್ಮಯಿಗೆ ಉನ್ನತ ಹಂತಗಳು ಪರಿಚಯವಾಗಲಾರವು ಹಾಗೂ ಆತನು ಒಂದೇ ವಿಧದಲ್ಲಿರುವನು. ಹಜ್ರತ್ ಮೌಲಾನಾ (ಖು)ರು ತಮ್ಮ ಪುಸ್ತಿಕೆಯಲ್ಲಿ ಹೀಗೆಯೂ ಹೇಳಿದರು. ಶಾಹ್‌ಸಾಹಬ್‌ರು ೫ ವರ್ಷದ ವಯಸ್ಸಿನವರಾಗಿದ್ದಾರೆ. ಸಾಯಂಕಾಲ ಹಾಗೂ ರಾತ್ರಿಯ ನಮಾಜಿನ ಮಧ್ಯೆಯ ಸಮಯದಲ್ಲಿ ಮದರಸಾದಲ್ಲಿ ಮಂಚದ ಮೇಲೆ ಮಲಗಿದ್ದರು. ೩–೪ ಗಂಟೆಗಳವರೆಗೆ ನಿದ್ರಾವಸ್ಥೆಯಲ್ಲಿದ್ದಾಗ ಮನೆಯ ಒಳಗೆ ಒಯ್ದರು ಯಾವಾಗ ಅವರು ತಾವು ಮಲಗಿರುವ ಮಂಚದತ್ತ ಗಮನ ಹರಿಸಿದಾಗ ಅಲ್ಲಿ 'ಅಲ್ಲಾಹು' ಎಂಬ ಜಪವು ಜೋರಾಗಿ ಕೇಳಿಸತೊಡಗಿತು. ಓರ್ವ 'ಅಜೀಜಶಾಕಿ' ಎಂಬ ಹೆಸರಿನ ವ್ಯಕ್ತಿಯು ತರೀಕತ್ ಹಂತ (ಆಧ್ಯಾತ್ಮಿಕ ಉನ್ನತಿ ಸಾಧಿಸಿ) ತಲುಪಿದ್ದನು. ಆತನು ಈ ಧ್ವನಿಯನ್ನು ಆಲಿಸಿದನು ಹಾಗೂ ಇನ್ನಿಬ್ಬರು ಜೊತೆಗಿದ್ದರು ಆದರೆ ಅವರು ತರೀಕತ್ ಹಂತವನ್ನು ತಲುಪಿರಲಿಲ್ಲ. ಕಾರಣ ಅವರು ಧ್ವನಿಯನ್ನು ಆಲಿಸಲಿಲ್ಲ. ಏಕೆಂದರೆ ಅಲ್ಲಾಹು ತನ್ನ ರಹಸ್ಯಗಳನ್ನು ಅಪರಿಚಿತರಿಂದ ಮುಚ್ಚಿಡುತ್ತಾನೆ.

ಹಜ್ರತ್ ಶಾಹ್‌ಸಾಹಬ್(ಖು)ರು ಹೇಳಿರುವರು ತಮ್ಮ ಬಾಲ್ಯದಲ್ಲಿ ಓರ್ವ ವೃದ್ಧೆಯು ನವರಸಪುರದ ಮನೆಯಲ್ಲಿ ಕೆಲ ತಿಂಗಳಗಳವರೆಗೆ ಪ್ರತಿ ಗುರುವಾರ ಸಾಯಂಕಾಲ ಸಮಯದಲ್ಲಿ ಅವರ ಬಳಿ ಬಂದು ರಹಸ್ಯ ಜ್ಞಾನದ ಅರಿವನ್ನುಂಟು ಮಾಡಿಕೊಡುತ್ತಿದ್ದಳು. ತನ್ನ ಪರಿಸ್ಥಿತಿಯನ್ನು ಹೀಗೆ ವಿವರಿಸಿದಳು. 'ನಾನು

ಮರಣವನ್ನಪ್ಪಿದೆನು ಹಾಗೂ ನನ್ನ ಆತ್ಮವನ್ನು ಮೇಲಕ್ಕೆ ಒಯ್ದರು. ಅಲ್ಲಾಹುವಿನ ಆಜ್ಞೆಯಾಯಿತು. ಅದೇ ಸ್ಥಳಕ್ಕೆ ತೆಗೆದುಕೊಂಡು ಹೋಗಿರಿ. ಪ್ರತಿ ಶುಕ್ರವಾರದಂದು ಹಾಜರುಪಡಿಸಿರಿ ಆ ಕಾಲದಿಂದ ಪ್ರತಿ ಶುಕ್ರವಾರ ನನ್ನ ಆತ್ಮವನ್ನು ಅಲ್ಲಿ ಒಯ್ಯುವರು ಹಾಗೂ ನನ್ನ ದೇಹವು ಗೋರಿಯಲ್ಲಿ ಇರುವದು ನನಗೆ ಅಲ್ಲಾಹುವಿನ ಆಜ್ಞೆಯಂತೆ 'ರಹಸ್ಯಜ್ಞಾನವನ್ನು' ನಿಮಗೆ ಹೇಳಬೇಕು ಹಾಗೂ ಬೇರೆಯವರೊಂದಿಗೆ ಮಾತನಾಡುವ ಶಕ್ತಿಯಿಲ್ಲ. ಏಕೆಂದರೆ ನನ್ನ ಬಾಯಿಯಲ್ಲಿ ಎರಡೂ ಕಡೆ ಮೊಳೆಯನ್ನು ಜಡಿಯಲಾಗಿದೆ ಹಾಗೂ ನಿಮ್ಮೊಂದಿಗೆ ಮಾತನಾಡುವಾಗ ಮೊಳೆಯನ್ನು ತೆಗೆಯುವರು ಹಾಗೂ ನಾನು ಸದಾಕಾಲ ನನ್ನ ಗೋರಿಯಲ್ಲಿ ಜೀವಂತವಿರುವೆನು. ನನಗೆ ಊಟ, ನಿದ್ರೆ ಹಾಗೂ ನೀರಡಿಕೆಯ ಅವಶ್ಯಕತೆಯಿಲ್ಲ. ಇವರಿಂದ ಜರುಗಿದ ಘಟನೆಗಳು ಕರಾಮತ್ತುಗಳು ಹಾಗೂ ಪವಾಡಗಳು ಅಸಂಖ್ಯವಾಗಿರುವವು. ಇವರಿಗೂ ಸಹ ಮುನರ್ಷಿದುಲ್ ಔಲಿಯಾ ಶೇಖುಲ್‌ಕುಲ್ ಹಜ್ರತ್‌ಶಾಹ್ ಮುಹಮ್ಮದ್ ಗೌಸ್ ಗ್ವಾಲಿಯಾರಿ (ಖು)ರ ಪ್ರಮಾಣ ಹಾಗೂ ಶಿಷ್ಯತ್ವ ದೊರಕಿತು ಹಾಗೂ ಸಾಕಷ್ಟು ಸಮೃದ್ಧಿ ಹೊಂದಿದರು. ಅವರಿಂದ ರಹಸ್ಯಜ್ಞಾನ ಪ್ರಕಟಗೊಂಡಿತು.

ಹಜ್ರತ್‌ರು ತಾವು ಮರಣಾಸನ್ನರಾದಾಗ ಹೀಗೆ ಹೇಳಿದರು. ನಾನು ಈ ಘಟನೆಯನ್ನು ಕಂಡೆನು. ಪರಲೋಕದಿಂದ ಕೆಲವು ಕೀಲಿಕೈಗಳನ್ನು ತಂದಿರುವರು ಹಾಗೂ ಹೀಗೆಂದರು. ಸ್ವರ್ಗದಲ್ಲಿರುವ ಅರಮನೆಗಳನ್ನು ನೋಡಿರಿ ಹಾಗೂ ಮಹಾದ್ವಾರಗಳನ್ನು ತೆರೆದರು. ನೋಡಿದೆನು ಅವುಗಳ ಗೋಡೆಗಳು ವಜ್ರ ವೈಢೂರ್ಯಗಳಿಂದ ಅಲಂಕೃತಗೊಂಡಿವೆ. 'ಹಜ್ರತ್‌ರು ಗುರುವಾರದ ರಾತ್ರಿ ೨೦ನೆಯ ರಜ್ಜಬ್ ಹಿಜ್ರಿಶಕೆ ೧೦೭೦ರಂದು ಸಾಯಂಕಾಲದ ನಮಾಜಿನ ಬಳಿಕ ಅಶಾಶ್ವತ ಬದುಕನ್ನು ಶಾಶ್ವತ ಬದುಕಿನತ್ತ ಹೊರಳಿಸಿದರು. ಹಾಗೂ ತಮ್ಮ ತಂದೆಯವರ ಗುಂಬಜ್‌ದ ಒಳಗೆ ಪಶ್ಚಿಮ ದಿಕ್ಕಿನಲ್ಲಿ ಸಮಾಧಿಸ್ಥರಾದರು. ಹಜ್ರತ್‌ರಿಂದ ಬಹಳಷ್ಟು ಸಮೃದ್ಧಿ ಲಭಿಸಿದವು. ಮುಹಮ್ಮದ್ ಕಾಸಿಂ ಬಿನ್ ಅಬ್ದುಲ್ ಖಾದಿರ್ ಸಿಬ್ಗತುಲ್ಲಾಹ್ ಇಲಾಹಿ ಹಬೀಬುಲ್ಲಾ 'ನಫಾಯಿಸುಲ್ ಅನ್‌ಫಾಸ್' ಗ್ರಂಥದ ಲೇಖಕರಾಗಿರುವರು. ಇವರ ಶಿಷ್ಯರು ಹಾಗೂ ಸಂಬಂಧಿಗಳಲ್ಲಿ ಓರ್ವರಾಗಿರುವರು.

ಮೌಲಾನಾ(ಖು)ರ ಸಂತಾನದಲ್ಲಿ ಈಗ ಮೌಲ್ವಿ ಸೈಯ್ಯದ್ ಹಬೀಬುಲ್ಲಾಹ್ ಸಾಹೇಬ್ ಹೈದರಾಬಾದ್‌ನಲ್ಲಿ ಉಪಸ್ಥಿತರಿರುವರು ಹಾಗೂ ಪ್ರತಿವರ್ಷ ವಾರ್ಷಿಕ ಉತ್ಸವವನ್ನು ಆಚರಿಸುವರು.

■

೨೬. ಹಜ್ರತ್‌ಶಾಹ್ ನೂರುದ್ದೀನ್ ಸಫವಿ(ಖು)

ಹಜ್ರತ್‌ರು, ಜಗದ್ಗುರು ಇಬ್ರಾಹಿಂ ಆದಿಲ್‌ಶಾಹ್ ದ್ವಿತೀಯನ ಕಾಲದಲ್ಲಿ ಪವಿತ್ರ ಪಟ್ಟಣವಾದ ಬಿಜಾಪುರಕ್ಕೆ ಆಗಮಿಸಿದರು. ಬಾದಶಾಹ ಹಾಗೂ ಅಮೀರರ ಬಳಿ ಹಜ್ರತ್‌ರ ಕುರಿತು ಬಹಳೇ ಗೌರವ ಆದರಗಳು ಹೃದ್ಗತವಾಗಿದ್ದವು. ಹಾಗೂ ಗೌರವ ಸಲ್ಲಿಸುವದಕ್ಕಾಗಿ ಬಾದಶಾಹನ ಸಭೆಯಲ್ಲಿ ಇವರಿಗಿಂತಲೂ ಎತ್ತರದ ಪೀಠದಲ್ಲಿ ಯಾರೂ ಕೂಡ್ರುತ್ತಿರಲಿಲ್ಲ. ಹಜ್ರತ್‌ರು ಮುಹಮ್ಮದ್(ಸ)ರ ವಂಶಜರಾಗಿದ್ದರು ಹಾಗೂ ಈ ಕಾಲದ ಅತ್ಯಂತ ಶ್ರೇಷ್ಠ ಸೂಫಿಗಳಾಗಿದ್ದರು. ಹಜ್ರತ್‌ರಿಂದ ಅಪಾರ ಸಂಖ್ಯೆಯಲ್ಲಿ ಪವಾಡಗಳು ಜರುಗಿದವು. ಹಜ್ರತ್‌ರು ತಮ್ಮ ಉತ್ತರಾಧಿಕಾರತ್ವ ಹಾಗೂ ಪ್ರಮಾಣವನ್ನು ತಮ್ಮ ಪೂರ್ವಜರು ಹಾಗೂ ತಂದೆಯವರಿಂದ ಪಡೆದಿದ್ದರು. ಹಜ್ರತ್ ಮೌಲಾನಾ ಹಬೀಬುಲ್ಲಾಹ್ ಸಿಬಗ್‌ತುಲ್ಲಾಹ್ (ಖು)ರ ಪುಸ್ತಿಕೆಯೊಂದರಲ್ಲಿ ಹೀಗೆ ಬರೆಯಲಾಗಿದೆ.

ಶಾಹ್ ನೂರುದ್ದೀನ್ ಸಫವಿಯವರು ಅತ್ಯಂತ ಶ್ರೇಷ್ಠ ಔಲಿಯಾಗಳಲ್ಲಿ ಓರ್ವರಾಗಿದ್ದರು. ಹಾಗೂ ಬಾದಶಹನ ಸಭೆಯಲ್ಲಿ ಅವರಿಗಿಂತ ಎತ್ತರದ ಪೀಠದಲ್ಲಿ ಯಾರೂ ಆಸೀನರಾಗುತ್ತಿರಲಿಲ್ಲ. ಆದರೆ ಆ ಸಭೆಯಲ್ಲಿ ಹಜ್ರತ್‌ಶಾಹ ಸಿಬಗತುಲ್ಲಾಹ್(ಖು)ರು ಆಗಮಿಸಿದಾಗ ಶಾಹ್ ನೂರುದ್ದೀನರ ಮನದಲ್ಲಿ ಅವರ ಶ್ರೇಷ್ಠತೆಯು ಅರಿವಿಗೆ ಬಂದಿತು. ಹಾಗೂ ಹಜ್ರತ್‌ಶಾಹ್‌ರಿಗಿಂತಲೂ ಎತ್ತರದಲ್ಲಿ ಕೂಡ್ರಲಿಲ್ಲ. ಯಾವಾಗ ಹಜ್ರತ್‌ಶಾಹ್(ಖು)ರ ಶ್ರೇಷ್ಠತೆಯು ಇವರ ಹೃದಯದಲ್ಲಿ ಪ್ರಕಟಗೊಂಡಿತೋ ಆಗ ಹಜ್ರತ್ ನೂರುದ್ದೀನ್ ಸಫವಿಯವರು ಹಜ್ರತ್‌ರೊಂದಿಗೆ ವಿನಂತಿಸಿದರು. ಫಕೀರನೂ ಸಹ ತಮ್ಮ ನುಡಿಮುತ್ತುಗಳನ್ನು ಗೌರವಿಸುವವನಾಗಿದ್ದಾನೆ. ಆ ಕಾರಣಕ್ಕೆ ಈ ಫಕೀರನಿಗೂ ಜಪತಪದ ಆದೇಶ ನೀಡಬೇಕು. ಆಗ ಹಜ್ರತ್‌ರು ಹೀಗೆಂದರು ತಮಗೆ ತಮ್ಮ ಪೂರ್ವಜರಿಂದ ಯಾವ ಜ್ಞಾನಸ್ರೋತ ಹಾಗೂ ಆಜ್ಞೆಗಳು ದೊರೆತಿರುವದೋ ಅವುಗಳನ್ನೇ ನಾನು ಸಹ ನಿಮಗೆ ಅನುಮತಿಸುವೆನು ಅವುಗಳನ್ನೇ ನೀವು ಮುಂದುವರಿಸಿರಿ.

ಇವರ ಪುತ್ರರಿಗೆ ಗಂಭೀರ ರೂಪದ ಕಾಯಿಲೆ ಕಾಡತೊಡಗಿತು ಹಾಗೂ ಮರಣದ ಲಕ್ಷಣಗಳು ಕಂಡುಬಂದವು. ಹಾಗೂ ಮರಣಾಸನ್ನರಾದರು ಆತ್ಮವನ್ನು ದೇಹದಿಂದ ಹೊರಸೆಳೆಯಲು ದೇವಚರರರೂ ಆಗಮಿಸಿದರು. ಈ ವಿಷಯವನ್ನು ತಮ್ಮ ಅಂತರ್ಜ್ಞಾನದಿಂದ ಅರಿತುಕೊಂಡ ಹಜ್ರತ್‌ರು ತಮ್ಮ ಪುತ್ರನ ವಿದಾಯದ ದುಃಖವನ್ನು ತಡೆಯದಾಗದೆ ಅವರ ಪ್ರಾಣದ ಬದಲಾಗಿ ತಮ್ಮ ಪ್ರಾಣವನ್ನು ಅರ್ಪಿಸಲು ಮುಂದಾದರು. ಹಾಗೂ ದೇವಚರರರನ್ನು ಉದ್ದೇಶಿಸಿ ಹೀಗೆ ಹೇಳಿದರು. ಪುತ್ರನನ್ನು

ಬಿಡಿರಿ, ನನ್ನನ್ನು ಸ್ವೀಕರಿಸಿರಿ, ದೇವಚರರು ಈ ಮಾತನ್ನು ಕೇಳಿ ಕೆಲಸಮಯ ತಮ್ಮದಾರಿಯಿಂದ ಮಾಯವಾದರು. ನಂತರ ಮತ್ತೆ ಆಗಮಿಸಿ ಹೀಗೆಂದರು– ಪುತ್ರನನ್ನು ಬಿಟ್ಟೆವು. ಹಾಗೂ ನಿಮ್ಮನ್ನು ಸ್ವೀಕರಿಸಿದೆವು. ಅದೇ ಕ್ಷಣ ಅವರ ಪುತ್ರನಿಗೆ ಆರೋಗ್ಯಭಾಗ್ಯ ಲಭಿಸಿತು. ಕೆಲದಿನಗಳ ನಂತರ ಹಜ್ರತರು ಕಾಯಿಲೆಯಿಂದ ಬಳಲತೊಡಗಿದರು. ಹಜ್ರತ್ ಮೌಲಾನಾ ಹಬೀಬುಲ್ಲಾಹ್(ಖು)ರು ಹೀಗೆ ಹೇಳಿದರು. ನಾನು ನೂರುದ್ದೀನ್‌ರ ಸಂದರ್ಶನಕ್ಕೆ ಹೋಗಿದ್ದೆನು. ಆಗ ಶಾಹ್ ನೂರುದ್ದೀನ್‌ರು ಹೀಗೆಂದರು ನಾನು ಯಾವ ಪ್ರಾರ್ಥನೆ ಮಾಡಿದ್ದೆನೋ ಅಲ್ಲಾಹನು ಅದನ್ನು ಸ್ವೀಕರಿಸಿದನು. ಕಾರಣ ಅದೇ ಕಾಯಿಲೆಯಿಂದ ಅವರಿಗೆ ಮರಣ ಪ್ರಾಪ್ತವಾಯಿತು. ಇವರ ಸಮಾಧಿಯು ಬಿಜಾಪುರ ಪಟ್ಟಣದಲ್ಲಿ ಇರುವದು. ಅವರ ಮರಣದ ದಿನಾಂಕ ಹಾಗೂ ಹಿಜ್ರಿಶಕೆ ತಿಳಿದು ಬಂದಿಲ್ಲ.

■

೨೭. ಹಜ್ರತ್‌ಶೇಖ ನಿಜಾಮ ನಾರ್ನೂಲಿ (ಖು)

ಹಜ್ರತ್‌ರ ಜನ್ಮಸ್ಥಳವು ನಾರ್ನೂಲ್ ಇರುವದು. ಅದು ಭಾರತದ ಪ್ರಸಿದ್ಧ ಊರುಗಳಲ್ಲಿ ಒಂದಾಗಿರುವದು. ಅವರು ನಿರ್ಮಲ ಹೃದಯದವರು, ನಿಷ್ಠಾವಂತ ದೇವದಾಸರು ಹಾಗೂ ಪರಿಪೂರ್ಣ ರೀತಿಯಲ್ಲಿ ಅಲ್ಲಾಹುವನ್ನು ಅರಿತವರು. ಮುಹಮ್ಮದ್(ಸ)ರ ಚರ್ಯೆಯನ್ನು ಚಾಚೂ ತಪ್ಪದೆ ಪಾಲಿಸುವವರು ಆಗಿದ್ದರು. ಮಹಾಪುರುಷರ ಚಾರಿತ್ರ್ಯದಿಂದ ತುಂಬಾ ಪ್ರಭಾವಿತರಾಗಿದ್ದರು. ಮಾರಿಫತ್ ಹಂತದವರೆಗೆ ತಲುಪಿ ಮನೋನಿಗ್ರಹ ಸಾಧಿಸಿದ್ದರು. ಹಾಗೂ ಸದಾಕಾಲ ಅಲ್ಲಾಹುವಿನ ನಾಮಗಳ ಜಪತಪಗಳಲ್ಲಿ ನಿರತರಾಗಿರುತ್ತಿದ್ದರು. ಸಂಸಾರಸ್ಥರೂ ಆಗಿದ್ದರು. ಅವರಿಗೆ ಸುಪುತ್ರಿಯರು ಇದ್ದರು. ಹಜ್ರತ್‌ರು ಇಬ್ರಾಹಿಂ ಆದಿಲ್‌ಶಾಹ್ ದ್ವಿತೀಯನ ಕಾಲದಲ್ಲಿ ಬಿಜಾಪುರಕ್ಕೆ ಆಗಮಿಸಿದರು. ಬಿಜಾಪುರ ಹೊರಭಾಗದ ಜೊಹರಾಪುರದಲ್ಲಿ ಸಮಾಧಿಸ್ಥರಾಗಿರುವರು. ಅವರ ಗೋರಿಯ ಮೇಲೆ ಅಪೂರ್ಣವಾದ ಗುಂಬಜ್ ಇರುವದು.

ಇವರ ಸಂತಾನದಲ್ಲಿ ಯಾರೂ ಉಳಿದಿಲ್ಲ. ಆದರೆ ಮಖ್ದೂಮ್‌ಸಾಬ್ ಕಸಾಬ್‌ನ ಪುತ್ರ ಆಬಾಸಾಬ್ ವಾರ್ಷಿಕ ಉತ್ಸವದ ರೂಪದಲ್ಲಿ ಉರುಸನ್ನು ಆಚರಿಸುವರು.

■

೨೮. ಹಜ್ರತ್‌ಶಾಹ್ ಅತೀಕುಲ್ಲಾಹ್ ಖಾದ್ರಿ (ಖ)

ಹಜ್ರತ್‌ಶಾಹ್ ಅತೀಕುಲ್ಲಾಹ್ ಖಾದ್ರಿ ಹಜ್ರತ್‌ರು ಇಬ್ರಾಹಿಂ ಆದಿಲ್‌ಶಾಹ್‌ನ ಕಾಲದ ಪ್ರಸಿದ್ಧ ಹಾಗೂ ಶ್ರೇಷ್ಠ ಔಲಿಯಾಗಳಲ್ಲಿ ಓರ್ವರಾಗಿದ್ದಾರೆ. ಅಲ್ಲಾಹುವಿನ ಪ್ರೇಮಸಾಗರದಲ್ಲಿ ಮುಳುಗಿ ಈ ಅಶಾಶ್ವತ ಜಗದ ಮೋಹ ತೊರೆದರು. ಹಾಗೂ ದರವೇಶಿಯಂತೆ ಬದುಕತೊಡಗಿದರು. "ತರೀಖತ್" ಹಾಗೂ "ಹಕೀಕತ್" ಜ್ಞಾನದಲ್ಲಿ ಉನ್ನತ ದರ್ಜೆಯನ್ನು ಹೊಂದಿದರು. ಹಗಲಿರುಳೂ ಅಲ್ಲಾಹುವಿನ ಹಕ್ಕುಗಳನ್ನು ಪೂರ್ತಿಗೊಳಿಸಲು ಸನ್ನದ್ಧರಾಗಿರುತ್ತಿದ್ದರು. ಸತ್ಯದ ಧ್ವಜವಾಹಕರಿಗೆ ಮಾರ್ಗದರ್ಶಕರಾಗಿದ್ದರು. ೧೦೨೩ ಹಿಜ್ರಿಶಕೆಯಲ್ಲಿ ಇಹಲೋಕ ತ್ಯಜಿಸಿ ಪರಲೋಕದತ್ತ ಪಯಣ ಬೆಳೆಸಿದರು. ಇವರ ಮರಣದ ದಿನಾಂಕವು 'ಬೈತುಲ್‌ಅತೀಖ್' ಎಂದರೆ ೧೦೨೩ ಎಂದಿದೆ. ಹಜ್ರತ್‌ರ ಪವಿತ್ರ ಸಮಾಧಿಯು ಬಿಜಾಪುರ ಪಟ್ಟಣದ ಹೊರವಲಯದ ಜೊಹರಾಪುರದಲ್ಲಿ ಹಜ್ರತ್ ಮೌಲಾನಾ ಹಬೀಬುಲ್ಲಾಹ್(ಖ)ರ ಸಮಾಧಿಯ ಸಮೀಪ ಪೂರ್ವ ದಿಕ್ಕಿನಲ್ಲಿ ಇರುವದು.

■

೨೯. ಹಜ್ರತ್ ಸೈಯ್ಯದ್ ಅಲಿ(ಖ)

ಹಜ್ರತ್ ಸೈಯ್ಯದ್ ಅಲಿ(ಖ) 'ಬಾಬಾಮೀರ್' ಎಂದು ಪ್ರಸಿದ್ಧರು. ಅವರು ಸೈಯ್ಯದುಸ್ಸಾದಾತ್ ಹಜ್ರತ್ ಸೈಯ್ಯದ್ ಜಲಾಲ್ ಉರ್ಫ್ ಶಾಹ್ ಚಂದಾಹುಸೈನಿ(ಖ) ಅವರ ಪವಿತ್ರ ಸಮಾಧಿಯು ಗೋಗಿಯಲ್ಲಿರುವದು, ಅವರ ವಂಶಸ್ಥರು ಹಜ್ರತ್‌ಶೇಖ ಮುಸ್ತಫಾ ಜುನ್ನೈದಿ ಸಜ್ಜಾದಾ ಎ ದರ್ಗಾಹ್ ಹಜ್ರತ್ ಶೇಖ ಐನುದ್ದೀನ್ 'ಗಂಜುಲ್ ಉಲ್ಮ್'ರು ಇವರ ಅಳಿಯಂದಿರು ಆಗಿರುವರು. ಖಿಲಾಫತ್, ಇಜಾಜತ್ ಹಾಗೂ ತರಬಿಯತ್ ವ ಬೈತ್‌ವನ್ನು ಜನಾಬ್ ಸೈಯ್ಯದುಸ್ಸಾದಾತ್ ಖುತ್ಬುಲ್ ಆಲಮೀನ್ ಹಜ್ರತ್‌ಶಾಹ್ ವಜಿಯುದ್ದೀನ್ ಹುಸೈನಿ ಅಲ್ವಿ' ಗುಜ್ರಾತಿ-(ಖ)ರಿಂದ ಪಡೆದರು. ಸತ್ಯ ಮಾರ್ಗದಲ್ಲಿ ಸ್ಥಿರವಾಗಿ ನೆಲೆಯೂರಿದ್ದರು. ಅಹಲೆಸುನ್ನತ್ ಜಮಾಅತ್‌ದ ಸಿದ್ಧಾಂತವನ್ನು ಬಲವಾಗಿ ನಂಬಿದ್ದರು. ತಾವು ಜನಾಬ್ ಸೈಯ್ಯದುಲ್ ಮುರ್ಸಲೀನ್, ಖಾತಿಮುನ್ನಬೀನ್ ಹಜ್ರತ್ ಮುಸ್ತಫಾ ರಸೂಲಲ್ಲಾಹ್ ಸ್ವಲ್ಲಲ್ಲಾಹು ಅಲೈಹಿವ ಸ್ವಲ್ಲಮ್‌ರಿಗೆ ಅರ್ಪಿಸುವದಕ್ಕಾಗಿ ೭೦೦೦ದಷ್ಟು ದರೂದ್‌ಗಳನ್ನು ಸಂಗ್ರಹಿಸಿದರು. ಅವರು ಕಾಲವಾದ ಇಸ್ವಿಯು ತಿಳಿದುಬಂದಿಲ್ಲ. ಇವರ ಸಮಾಧಿಯು ಬಿಜಾಪುರ ನಗರದ ಹೊರವಲಯದಲ್ಲಿಯ ಜೊಹರಾಪುರದಲ್ಲಿರುವದು.

■

೩೦. ಹಜ್ರತ್‌ಶಾಹ್ ಅಲಾವುಲ್ ಹಕ್ ಖಾದ್ರಿ ಲಾಹೋರಿ (ಖ)

ಇವರ ವಂಶಾವಳಿಯು ಪೀರಾನೆಪೀರ್ ಹಜ್ರತ್ ಮುಹಿಯುದ್ದೀನ್ ಜಿಲಾನಿ(ಖ)ರಿಗೆ ತಲುಪುವದು. ಇವರು ತಮ್ಮ ಕಾಲದ 'ಕುತುಬ್' ಹಾಗೂ ಜಗದ್ಗುರುವಾಗಿದ್ದರು. ಇಹಪರದ ಜ್ಞಾನದಲ್ಲಿ ಉತ್ತುಂಗತೆ ಸಾಧಿಸಿದ್ದರು. ತಮ್ಮ ಜೀವನದ ಬಹುಕಾಲವನ್ನು ಪ್ರವಾಸದಲ್ಲಿ ಕಳೆದರು. ಹಾಗೂ ಅರಬ, ಅರಬೇರ ಎಲ್ಲ ಮಶಾಯಿಕೀನ್(ವಂಶಜರನ್ನು ಹಾಗೂ ಧಾರ್ಮಿಕ ವಿದ್ವಾಂಸರನ್ನು ಭೇಟಿಯಾಗಿ ಅವರ ಸಾಂಗತ್ಯದಲ್ಲಿದ್ದು ಸಮೃದ್ಧಿಯನ್ನು ಹೊಂದಿದರು. ಹಾಗೂ ಸಾರ್ವಜನಿಕರಿಂದ ದೂರ ಕಾಯ್ದುಕೊಂಡರು. ಸದಾಕಾಲ ಅಲ್ಲಾಹುವಿನ ಜಪದಲ್ಲಿ ನಿಮಗ್ನರಾಗಿರುತ್ತಿದ್ದರು. ಹಾಗೂ ವಿವಾಹ ಮಾಡಿಕೊಳ್ಳುವತ್ತ ಗಮನ ಹರಿಸಲಿಲ್ಲ. ಓರ್ವ ಮಹಾಪುರುಷರಿಂದ ಬೈತ್‌ವ ಖಿಲಾಫತ್ ಹೊಂದಿದ್ದರು. ಆದರೆ ಹಜ್ರತ್ ಶಾಹ್ ಸಿಬಗತುಲ್ಲಾಹ್ ಹುಸೈನಿಯವರ ಜ್ಞಾನಮಾರ್ಗವನ್ನು ಅನುಸರಿಸಿ ಮಾರ್ಗದರ್ಶನ ನೀಡುತ್ತಿದ್ದರು.

ಹಜ್ರತ್ ಮೌಲಾನಾ ಹಬೀಬುಲ್ಲಾಹ್ ಸಿಬ್ಗತುಲ್ಲಾಹಿಯವರು ತಮ್ಮ ಪುಸ್ತಿಕೆಯಲ್ಲಿ ಹೀಗೆ ಉಲ್ಲೇಖಿಸಿರುವರು. ಮೀರಾಶಾಹ್ ಅಲಾವುಲ್‌ಹಕ್ ಫಕೀರರು ಜಗತ್ತಿನ ಲೌಕಿಕ ವಿಚಾರದತ್ತ ಎಳ್ಳಷ್ಟು ಆಸಕ್ತಿ ಹೊಂದಿರಲಿಲ್ಲ.

ಒಂದು ದಿನ ಬಾಹ್ಯ ಜ್ಞಾನವನ್ನೇ ನಾನು ಪ್ರಸ್ತುತಪಡಿಸುವಾಗ ಹಜ್ರತ್‌ರು ನನ್ನ ಮನೆಗೆ ಆಗಮಿಸಿದರು. ಆಗ ನಾನು "ತಫ್ಸೀರೇ ಬೈಝಾವಿ"ಯನ್ನು ಓದುತ್ತಿದ್ದೆನು. ಒಂದು ಪ್ರಶ್ನೆಯ ಉತ್ತರಕ್ಕಾಗಿ ಯೋಚಿಸುತ್ತಿದ್ದೆನು. ಆಗ ಅವರು ಸ್ವತಃ ಈ ಪ್ರಶ್ನೆಯ ಉತ್ತರವನ್ನು ವಿವರಿಸಿದರು. ನನ್ನ ಯೋಚನೆಯಲ್ಲಿ ಬಂದಿದ್ದು ಇದರ ಅಂತ್ಯವನ್ನು ತಿಳಿಸಬೇಕು. ಏಕೆಂದರೆ ಉತ್ತರವು ಪೂರ್ತಿಗೊಳ್ಳಲಿ ಏನಾಯಿತು! ಒಂದು ಕ್ಷಣದ ನಂತರ ಅದರ ಅಂತ್ಯದ ಕುರಿತು ವಿವರಣೆ ನೀಡಿದರು. ಉತ್ತರವು ಪೂರ್ತಿಗೊಂಡಿತು. ಅದರ ನಂತರ ನಾನು ಕೇಳಿದೆನು ಬಾಹ್ಯ ಜ್ಞಾನವನ್ನು ಸಹ ಗಳಿಸಿದ್ದೀರಾ? ಆಗ ಅವರು ಉತ್ತರಿಸಿದರು. ಹೌದು! ಒಂದು ಸಲ ಗಮನಿಸಿದ್ದೆ. ಅವರು ಸರಳ ಸುಲಭ ಭಾಷೆಯಲ್ಲಿ ಮಾತನಾಡುತ್ತಿದ್ದರು. ತಮ್ಮ ವಿದ್ವತ್ತನ್ನು ಜನರ ಮೇಲೆ ಹೇರುತ್ತಿರಲಿಲ್ಲ. ಹಜ್ರತ್ ಮೌಲಾನಾ(ಖ)ರು ಇದನ್ನು ಸಹ ಹೇಳಿರುವರು. ಶಾಹ್ ಅಲಾವುಲ್‌ಹಕ್(ಖ)ರ ಉರುಸ್‌ನ ದಿನಗಳಲ್ಲಿ ಒಂದಿರುಳಿನಲ್ಲಿ ಸ್ವಪ್ನದಲ್ಲಿ ನೋಡಿದರು. ಅವರು ತಮ್ಮ ಸಮಾಧಿಯ ಬಳಿ ನಿಂತು ಉರುಸ್ ವೇಳೆ ತೊಡುವ ಬಟ್ಟೆ ತೊಟ್ಟುಕೊಂಡು ತಲೆಗೆ ಪೇಠಾವನ್ನು ಸುತ್ತಿಕೊಳ್ಳುತ್ತಿರುವರು ಹಾಗೂ ಎಲ್ಲ ಜನರು ಸುತ್ತಲೂ ಸೇರಿಕೊಂಡು ಉರುಸನ್ನು ಆಚರಿಸುತ್ತಿದ್ದಾರೆ. ನನ್ನನ್ನು ದೂರದಿಂದಲೇ ನೋಡಿ ಹೀಗೆನ್ನುವರು. ಸ್ವಲ್ಪ ಸಮಯಕ್ಕಾಗಿ ಈ ಕಡೆ ಬನ್ನಿರಿ, ನಾನು ಅದೇ ವೇಳೆ ಎಚ್ಚರಾಗಿ ಅವರ ಪವಿತ್ರ

ಸಮಾಧಿಯ ಬಳಿ ಹೋದೆನು. ಏನು ನೋಡುತ್ತೇನೆ. ಪವಿತ್ರ ಸಮಾಧಿಗೆ ಗಂಧ ಹಾಗೂ ಹೂಹಾರಗಳನ್ನು ಹೊದಿಸಿ ಜನರು ಪವಿತ್ರ ಸಮಾಧಿಯ ಸುತ್ತಲೂ ಕುಳಿತಿರುವರು. ಹಜ್ರತ್‌ಶಾಹ್ ಅಲಾವುಲ್‌ಹಕ್(ಖು)ರ ನಿಧನವು ಹಿಜ್ರಿಶಕೆ ೧೦೩೧ ರಂದು ಆಯಿತು ಹಾಗೂ ಇವರ ನಿಧನದ ದಿನಾಂಕವನ್ನು 'ಆ ಶಾಹ್ ತರೀಕತ್' ಎಂದಿರುವುದು. ಹಾಗೂ ಇವರ ಪವಿತ್ರ ಸಮಾಧಿಯು ಬಿಜಾಪುರ ಹೊರಭಾಗದಲ್ಲಿರುವ ಜೊಹರಾಪುರದಲ್ಲಿ ಇರುವದು.

■

೩೧. ಹಜ್ರತ್ ಶಾಹ್ ಕಾಸಿಂ ಖಾದ್ರಿ (ಖು)

ಅವರು ತಾವು ಮಹಾಪುರುಷರ ಹಾಗೂ ಮಹಾಸೂಫಿಗಳ ಸಂತತಿಯವರಾಗಿದ್ದರು. ಹಜ್ರತ್ ಮೆಹಬೂಬೇ ಸುಬಹಾನಿ ಅಬ್ದುಲ್‌ಖಾದಿರ್ ಜಿಲಾನಿ ಖುದ್ದಸಲ್ಲಾಹ್ ಸಿರ್‍ರಯಿಲ್ ಅಜೀಜ್‌ರ ಸಂತತಿಯವರಾಗಿದ್ದಾರೆ. ಹಜ್ರತ್‌ರು ತಮ್ಮ ದೇಶದಿಂದ ಪೂರ್ವದಿಕ್ಕಿನ ಮುಖಾಂತರ ಹೊರಟು ಈ ಪವಿತ್ರ ಬಿಜಾಪುರ ನಗರದತ್ತ ಪ್ರಯಾಣಿಸಿದರು. ಸುಲ್ತಾನ್ ಇಬ್ರಾಹಿಂ ಆದಿಲ್‌ಶಾಹ್ ಜಗದ್ಗುರುವಿನ ಅವಧಿಯಲ್ಲಿ ಇಲ್ಲಿಗೆ ಆಗಮಿಸಿದರು. ಈ ಪಟ್ಟಣವನ್ನು ಸಮೃದ್ಧಿದಾಯಕ ಪಟ್ಟಣವನ್ನಾಗಿ ಪರಿವರ್ತಿಸಿದರು. ಪ್ರಭುವಿನ ಮೇಲೆ ಸಂಪೂರ್ಣ ನಂಬಿಕೆಯನ್ನಿರಿಸಿ, ಅವನಿತ್ತ ಕೊಡುಗೆಗಳಲ್ಲಿ ಸಂತೃಪ್ತರಾಗಿ 'ದರವೇಶಿ' ವೃತ್ತಿಯನ್ನವಲಂಬಿಸಿ ದೇವಭೀರು ಹಾಗೂ ಸೂಫಿಗಣದ ಓರ್ವ ಉತ್ಕೃಷ್ಟ ನಾಯಕರಾಗಿ ಹೊರಹೊಮ್ಮಿದರು. ಏಕಾಂತವಾಸದಲ್ಲಿದ್ದು ಸೂಫಿಪಂಥದ ಎಲ್ಲ ಹಂತಗಳನ್ನು ಹಂತಹಂತವಾಗಿ ಮೆಟ್ಟಿಲೇರಿ 'ಅಲ್ಲಾಹು'ವಿನ ಸಾಂಗತ್ಯ ಹಾಗೂ ಸಾಮಿಪ್ಯದ ಉನ್ನತ ದರ್ಜೆಯನ್ನು ತಲುಪಿದರು. ಇಹಲೋಕದ ವಸ್ತುಗಳನ್ನು ನಾಯಿಗಿಂತಲೂ ಕಡೆಯಾಗಿ ಪರಿಗಣಿಸುತ್ತಿದ್ದರು. ಬಾದಶಹ ಹಾಗೂ ಅಮೀರರೊಂದಿಗೆ ಯಾವುದೇ ಸಂಬಂಧವನ್ನು ಇಟ್ಟುಕೊಳ್ಳುತ್ತಿರಲಿಲ್ಲ. ಹಾಗೂ ಯಾವುದೇ ಪರಿವೆ ಮಾಡುತ್ತಿರಲಿಲ್ಲ. ಜಯ್ಯದ್‌ಖಾನ್‌ನ ಮಸೀದೆಯಲ್ಲಿ ಆಯುಷ್ಯಪೂರ್ತಿ ಅಲ್ಲಿಯೇ ವಾಸಿಸಿ ಅಲ್ಲಿಂದಲೇ ಇಹಲೋಕ ತ್ಯಜಿಸಿದರು.

ಹಜ್ರತ್‌ರು ಬಿಜಾಪುರಕ್ಕೆ ಆಗಮಿಸಿ ಇಲ್ಲಿಯೇ ಇರುವ ಇಚ್ಛೆಯನ್ನು ವ್ಯಕ್ತಪಡಿಸಿದರು. ಆಗ ಜೊತೆಗಾರರಿಗೆ ಬಲವಾಗಿ ವಿಶ್ವಾಸವುಂಟಾಯಿತು. ಏನೆಂದರೆ ಹಜ್ರತ್‌ಶಾಹ್ ಖಾಸಿಂ ಖಾದ್ರಿ (ಖು)ರ ಇಚ್ಛೆಯು ಇಲ್ಲಿಯೇ ಇರುವುದಾಗಿದೆ ಮತ್ತು ಮರಳಿ ತಮ್ಮ ದೇಶಕ್ಕೆ ಹೋಗುವ ಬಯಕೆ ಇರುವದಿಲ್ಲ. ಹದೀಸೇ ನಬವಿಯಂತೆ–

'ಹುಬ್ಬುಲ್ ಔತಾನಿ, ಮಿನಲ್ ಈಮಾನೀ'
'ಮೊಹಬ್ಬತ್ ವತನ್‌ಕಿ, ಈಮಾನ್‌ಸೆ ಹೈ'

'ಸ್ವದೇಶದ ಪ್ರೀತಿಯು ಸತ್ಯವಿಶ್ವಾಸದೊಂದಿಗೆ ಬೆಸೆದಿದೆ'

ಅವರ ಜೊತೆಗಾರರು ತಮ್ಮ ಕುಟುಂಬ ಸ್ನೇಹಿತ ಬಂಧು ಬಳಗವನ್ನು ನೆನೆದು ತಮ್ಮ ದೇಶಕ್ಕೆ ಹೋಗಲಾರದ್ದಕ್ಕೆ ವ್ಯಥೆಯುಂಟಾಗಿ ಗಂಭೀರವದನರಾದರು. ಹಜ್ರತ್‌ಶಾಹ್‌ರು ಅವರ ಹೃದ್ಗತವನ್ನು ಅರಿತು ಅವರಿಂದ ಇಂತಹ ಪವಾಡ ಜರುಗಿತು. ಏನೆಂದರೆ ಅವರೆಲ್ಲರೂ ತಮ್ಮತಮ್ಮ ಹಾಸಿಗೆಯ ಮೇಲೆ ಮಲಗಿ ಬೆಳಿಗ್ಗೆ ಎದ್ದಾಗ ತಮ್ಮ ಸ್ವದೇಶದಲ್ಲಿದ್ದರು. ಯಾವುದೇ ಕಠಿಣ ಹಾದಿಯಿಂದ ಸಾಗುವ ಪರಿಶ್ರಮವನ್ನು ಮಾಡದೇ ತಮ್ಮ ಸ್ವದೇಶಕ್ಕೆ ತಲುಪಿದ್ದರು ಎಂಬ ಉಲ್ಲೇಖವೂ ಇದೆ.

ಇಬ್ರಾಹಿಂ ಆದಿಲ್‌ಶಾಹ್‌ನ ಕಾಲದಲ್ಲಿ ಓರ್ವ ಬ್ರಾಹ್ಮಣನು ಒಂದು ಪ್ರದೇಶದ ಅಧಿಕಾರಿಯಾಗಿದ್ದನು. ಆಕಸ್ಮಿಕವಾಗಿ ಅವನ ಮೇಲೆ ಬಾದಶಾಹಿಯ ಲೆಕ್ಕಪತ್ರ ನೀಡುವ ಆದೇಶ ಹೊರಟಿತು. ಬಾದಶಾಹನ ಸಿಪಾಯಿಗಳು ಆತನನ್ನು ಹೆಡೆಮುರಿ ಕಟ್ಟಿ ತರಲು ಸಿದ್ಧರಾದರು. ಬ್ರಾಹ್ಮಣನು ತನ್ನ ಮೇಲಿನ ಈ ಆದೇಶವನ್ನರಿತು ಓಡಿ ಹೋಗದೆ ಬೇರೆ ದಾರಿ ಕಾಣದಾದನು ಹಾಗೂ ಮನೆಯಿಂದ ಹೊರಟು ಓಡಿ ಹೋದನು. ಹಾಗೂ ಸಿಪಾಯಿಗಳೂ ಕೂಡ ಆತನನ್ನು ಹಿಂಬಾಲಿಸಿದರು. ಮತ್ತು ಆ ಬ್ರಾಹ್ಮಣನು ಜೈಯ್ಯದ್‌ಖಾನ್‌ನ ಮಸೀದೆಯ ಬಾಗಿಲಿನಿಂದ ಸಾಗಿದನು. ಅಲ್ಲಿ ನೋಡಿದನು. ಓರ್ವ ಫಕೀರರು ಕುಳಿತಿದ್ದರು. ಅವರೆದುರು ತನ್ನೆಲ್ಲ ಗೋಳನ್ನು ತನ್ನವರೆಂದು ಬಗೆದು ವಿವರಿಸಿದನು. ಹಾಗೂ ಅವರ ಶರಣು ಹೋದನು. ಹಜ್ರತ್‌ರು ಹೀಗೆಂದರು ನಿಶ್ಚಿಂತನಾಗಿ ನನ್ನ ಬೆನ್ನ ಹಿಂದೆ ಕೂತುಕೋ ನಿನಗೆ ಯಾವುದೇ ಬಗೆಯ ಹೆದರಿಕೆಯಿಲ್ಲ. ಹಜ್ರತ್‌ರ ಆದೇಶದಂತೆ ಬ್ರಾಹ್ಮಣನು ಅವರ ಹಿಂದೆ ಹೋಗಿ ಕುಳಿತುಕೊಂಡನು. ಸಿಪಾಯಿಯು ಅವನನ್ನು ಹುಡುಕುತ್ತಾ ಇಲ್ಲಿಗೆ ತಲುಪಿದನು ಓರ್ವ ಫಕೀರನು ಗೋದಡಿಉಟ್ಟು ಕುಳಿತುಕೊಂಡಿರುವರು. ಅವರ ಹಿಂದೆ ಒಂದು ಭಯಂಕರ ಹುಲಿ ಇರುವದು ಸಿಪಾಯಿಯು ಹೆದರಿ ಮರಳಿ ಹೊರಟು ಹೋದನು. ಅದರ ನಂತರ ಹಜ್ರತ್‌ಶಾಹ್ ಖಾಸಿಂ ಖಾದ್ರಿ(ಖ)ರು ಆ ಬ್ರಾಹ್ಮಣನಿಗೆ ಉದ್ದೇಶಿಸಿ ಹೀಗೆ ಹೇಳಿದರು. ಈಗ ಬಾದಶಾಹನ ದರ್ಬಾರಕ್ಕೆ ಹೋಗು ನಿನ್ನ ಕೆಲಸವು ಪೂರ್ತಿಯಾಗುವದು ಹಾಗೂ ನಿನ್ನ ಉದ್ದೇಶ ಈಡೇರುವದು ಬ್ರಾಹ್ಮಣನು ಅತ್ಯಂತ ವಿನೀತನಾಗಿ ಅವರ ಆದೇಶದಂತೆ ಅದೇ ವೇಳೆ ಬಾದಶಾಹನ ಎದುರು ಯಾರದೇ ಮಧ್ಯಸ್ಥಿಕೆ ಇಲ್ಲದೇ ಹೋದನು. ಬಾದಶಾಹನು ಆತನನ್ನು ಗಮನಿಸಿ ಆತನ ಪರಿಸ್ಥಿತಿಯ ಮೇಲೆ ಅನುಕಂಪ ತೋರಿದನು. ಹಾಗೂ ಆತನ ತಪ್ಪನ್ನು ಕ್ಷಮಿಸಿ ತನ್ನ ಕೊಡುಗೆಗಳಿಂದ ಸಂತಸಗೊಳಿಸಿದನು. ಈ ಎಲ್ಲ ಕೊಡುಗೆಗಳು ಸುಲ್ತಾನ ಹಜ್ರತ್‌ಶಾಹ್ ಖಾಸಿಂಖಾದ್ರಿಯವರ ಕಾರಣದಿಂದ ಉಂಟಾದವು ಎಂದು ಬ್ರಾಹ್ಮಣನು ಬಲವಾಗಿ ನಂಬಿದನು. ಹಾಗೂ ಸದಾಕಾಲ ಅವರೆದುರು ನತಮಸ್ತಕನಾಗಲು ಬಯಸಿ ಬರುತ್ತಿದ್ದನು.

ಒಂದು ದಿನ ಹೀಗೆಂದನು. ಒಂದು ವೇಳೆ ಆಜ್ಞೆಯಾದರೆ ತಮಗಾಗಿ ಈ ಮಸೀದೆಯ ಆವರಣದಲ್ಲಿ ಒಂದು ಗುಂಬಜ್‌ವನ್ನು ನಿರ್ಮಿಸುವೆನು ಹಜ್ರತ್‌ರು ಹೀಗೆಂದರು. ಇಂಥಹ ಯೋಚನೆಯನ್ನು ಮಾಡದಿರು ಇದರಲ್ಲಿ ನಿನಗೆ ಒಳಿತು ಆಗಲಾರದು. ನಿನ್ನ ಸಂತತಿ ಬದುಕಲಾರದು. ಹೀಗೆಂದರು ಎಲ್ಲವೂ ನನಗೆ ಒಪ್ಪಿಗೆಯಿದೆ. ಆದರೆ ಆಜ್ಞೆಯಾಗಲಿ ಇದೇ ಮಾತಿನ ಮೇಲೆ ಆತನು ದೃಢ ನಿಶ್ಚಯ ಹೊಂದಿದನು. ಹಜ್ರತ್‌ರು ಮೌನವಾದರು. ಅದಕ್ಕಾಗಿ ಆತನು ಎಲ್ಲ ಸಾಮಾನು ಸರಂಜಾಮುಗಳೊಂದಿಗೆ ಬಂದು ಭಕ್ತಿ–ಪೂರ್ವಕವಾಗಿ ಗುಂಬಜ್ ಷರೀಫ್‌ದ ಬುನಾದಿ ಹಾಕಿದನು. ಈ ಇಮಾರತ್ತನ್ನು ಪೂರ್ತಿಗೊಳಿಸುವ ಮೊದಲು ಈ ಬ್ರಾಹ್ಮಣನ ಎಲ್ಲ ಸಂತತಿ ತೀರಿಕೊಂಡಿತು. ಯಾವಾಗ ಗುಂಬಜ್‌ದ ಕೆಲಸ ಪೂರ್ತಿಯಾಯಿತೋ ಆ ಬ್ರಾಹ್ಮಣನೂ ತೀರಿಕೊಂಡನು. ಹಜ್ರತ್ ಆತನಿಗೆ ಮಸೀದೆಯ ಎದುರು ಭಾಗದ ಆವರಣದಲ್ಲಿ ಗುಂಬಜ್‌ದ ಕೆಳಗೆ ದಫನ್ ಮಾಡಿಸಿದರು. ಆತನ ಸಂಬಂಧಿಗಳು ಹಜ್ರತ್‌ರ ಬಳಿ ಬಂದು ಒತ್ತಡ ಹಾಕತೊಡಗಿದರು. ಏನೆಂದರೆ ಈ ಶವವನ್ನು ಇಲ್ಲಿಂದ ಹೊರತೆಗೆದು ನಮ್ಮ ಸಂಪ್ರದಾಯದಂತೆ ಅಗ್ನಿಗರ್ಪಿಸುವೆವು ಆಗ ಹಜ್ರತ್‌ರು ಹೇಳಿದರು. ಅದನ್ನು ತೆಗೆದುಕೊಂಡು ಹೋಗಿರಿ, ಹಾಗೂ ಆತನ ಗೋರಿಯನ್ನು ಅಗೆಯಲಾಯಿತು. ಏನು ನೋಡುತ್ತಾರೆ ಮುರಾರಿ ಪಂಡಿತ್ ಬ್ರಾಹ್ಮಣರ ಶವದ ಬದಲಾಗಿ ಅಲ್ಲಿ ಬರೀ ಹೂವುಗಳಿವೆ. ಹಾಗೂ ಆತನ ಗೋರಿಯನ್ನು ಮತ್ತೆ ಮುಚ್ಚಲಾಯಿತು ಹಾಗೂ ಅವರು ಅಲ್ಲಿಂದ ಮರಳಿದರು. ಹೇಳಲಾಗುತ್ತದೆ ಮಸೀದೆಯ ಆವರಣದಲ್ಲಿ ಯಾವ ಶಿಲೆಯನ್ನು ಭೂಮಿಯ ಮೇಲೆ ಇರಿಸಲಾಗಿದೆಯೋ ಅದು ಆ ಬ್ರಾಹ್ಮಣನ ಗೋರಿಯ ಸಂಕೇತವಾಗಿದೆ.

ಒಂದು ಉಲ್ಲೇಖದಂತೆ, ಇಬ್ರಾಹಿಂ ಜಗದ್ಗುರು ತನ್ನ ಕಾಲದ ಮಹಾಪುರುಷರು, ಸೂಫಿಗಳು ಹಾಗೂ ಸೂಫಿ ವಂಶಸ್ಥರೊಂದಿಗೆ ಅತ್ಯಂತ ಗೌರವಯುತ ಸಂಬಂಧ ಹಾಗೂ ವಿನೀತಭಾವವನ್ನು ಹೊಂದಿದ್ದನು. ಹಾಗೂ ಅವರೊಂದಿಗೆ ಗೌರವ ಆದರಗಳೊಂದಿಗೆ ಭೇಟಿ ಮಾಡುತ್ತಿದ್ದನು. ತುಂಬಾ ಒಳ್ಳೆಯ ರೀತಿಯಲ್ಲಿ ಅವರ ಸೇವೆಯನ್ನು ಕೂಡಾ ಮಾಡುತ್ತಿದ್ದನು. ಹೀಗಾಗಿ ಹಜ್ರತ್ ಖಾಸಿಂ ಖಾದ್ರಿ ಖಿದ್ದಸ್ಸಿರಾಹರ ಉನ್ನತ ಜ್ಞಾನದ ಕುರಿತು ತಿಳಿದು ಅವರನ್ನು ಭೇಟಿಯಾಗುವ ಇಚ್ಛೆ ಹೊಂದಿದ್ದನು ಹಾಗೂ ದರ್ಬಾರಿಗಳಿಂದ ಕೇಳಿ ತಿಳಿದನು. ಅವರೊಂದಿಗೆ ಭೇಟಿ ಮಾಡುವ ಬಗೆ ಹೇಗೆ? ಉತ್ತರ ರೂಪದಲ್ಲಿ ದರ್ಬಾರಿಗಳು ಹೀಗೆಂದರು. ಹಜ್ರತ್‌ರು ಪಾರಲೌಕಿಕವಾಗಿ ಅದೆಷ್ಟು ನಿಮಗ್ನರಾಗಿದ್ದಾರೆಂದರೆ ಅವರು ಲೌಕಿಕ ವಿಷಯಗಳ ಕುರಿತು ಎಳ್ಳಷ್ಟು ಗಮನ ನೀಡುವದಿಲ್ಲ. ಒಂದುವೇಳೆ ಬಾದಶಾಹರು ಅವರ ಭೇಟಿಯನ್ನು ಮಾಡಬಯಸುತ್ತೀರಾದರೆ ಶುಕ್ರವಾರದಂದು ನಮಾಜಿನ ನಂತರ ಜಾಮಿಯಾ

ಮಸೀದೆಯಲ್ಲಿ ಅವರನ್ನು ಭೇಟಿ ಮಾಡುವದು ಉಚಿತ ಎಂದು ಹೇಳಲಾಗುತ್ತದೆ. ಶುಕ್ರವಾರದಂದು ಬಾದಶಹನು ಅಲಂಕೃತ ಪೇಟಾ ತೊಟ್ಟು ಶುಕ್ರವಾರದ ನಮಾಜಿಗೆಂದು ಆಗಮಿಸಿದನು. ನಮಾಜ್ ಮುಗಿದ ನಂತರ ಹಜ್ರತ್‌ಶಾಹ್ ಖಾಸಿಂ ಖಾದ್ರಿ (ಖು)ರ ಬಳಿ ಬಂದು ಭೇಟಿ ಮಾಡಿದನು. ಹಜ್ರತ್‌ರು ಅವನತ್ತ ಲಕ್ಷ್ಯ ಕೊಡಲಿಲ್ಲ. ಹಾಗೂ ಮಾತನ್ನೂ ಆಡಲಿಲ್ಲ. ಬಾದಶಾಹನು ಮರಳಿ ಹೋದ ನಂತರ ಜನರೆಂದರು ಈತನು ಈ ಪ್ರದೇಶದ ಬಾದಶಾಹನಾದ ಸುಲ್ತಾನ್ ಇಬ್ರಾಹಿಂ ಆದಿಲ್‌ಶಾಹ್‌ನಾಗಿದ್ದನು ಹಾಗೂ ನಿಮ್ಮ ಭೇಟಿಯನ್ನು ಬಯಸಿದ್ದನು. ತಾವು ಅವನತ್ತ ಸ್ವಲ್ಪವೂ ಗಮನ ಹರಿಸಲಿಲ್ಲ. ಹಜ್ರತ್‌ರು ಆಗ ಹೀಗೆಂದರು ನಾವು ಅವನನ್ನು 'ಹಾವಾಡಿಗ' ಎಂದು ತಿಳಿದೆವು. ಹಜ್ರತ್‌ರು ಜಿಲ್‌ಹಜ್ಜಾದ ೨೭ನೇ ದಿನಾಂಕದಂದು ತಮ್ಮ ಪವಿತ್ರ ನಾಲಿಗೆಯಿಂದ ಹೀಗೆ ಉಚ್ಚರಿಸಿದರು. ಫಕೀರನ ಆಯುಷ್ಯವು ಒಂದು ತಿಂಗಳು ಬಾಕಿ ಇರುವದು. ನನ್ನ ಉತ್ತರಾಧಿಕಾರಿಯನ್ನು ನೇಮಿಸುವೆನು. ಹೀಗೆ ಹೇಳಿ ಒಂದು ದಿನ ಹಜ್ರತ್‌ಶಾಹ್ ಅಬುಲ್ ಹಸನ್ ಖಾದ್ರಿಯವರ ಕಿರಿಯ ಸಹೋದರರಾದ ಹಜ್ರತ್ ಸೈಯ್ಯದ್ ಮುಸ್ತಫಾಖಾದ್ರಿಯವರ ಸುಪುತ್ರ ಹಾಗೂ ಪೀಠಾಧಿಪತಿಯವರಾದ ಸೈಯ್ಯದುಸ್ಸಾದಾತ್ ಹಜ್ರತ್ ಸೈಯ್ಯದ್ ಅಬ್ದುಲ್‌ಖಾದಿರ್ ಖಾದ್ರಿಯವರನ್ನು ತಮ್ಮ ಪರಂಪರೆಯಿಂದ ಇರುವ ಅವರನ್ನು ಆಧ್ಯಾತ್ಮಿಕ ಉನ್ನತಿಗೆ ತಲುಪಿಸಿ ಸಮೃದ್ಧಗೊಳಿಸಿದರು. ಖಿಲಾಫತ್‌ನಾಮಾ(ಉತ್ತರಾಧಿಕಾರತ್ವ) ಹಾಗೂ ಸಜ್ಜಾದ್‌ಗಿ ನಾಮಾ(ಪೀಠಾಧಿಪತಿ)ಯ ಸನದನ್ನು ತಮ್ಮ ಮುದ್ರೆಯೊಂದಿಗೆ ಅವರಿಗೆ ನೀಡಿದರು. ಆ ಪವಿತ್ರ ಲೇಖವು ಇಂದಿಗೂ ಹಜ್ರತ್ ಸೈಯ್ಯದುಸ್ಸಾದಾತ್‌ರ ವಂಶದವರ ಹತ್ತಿರ ಇರುವದು. ಹಾಗೂ ಹಜ್ರತ್‌ಶಾಹ್ ಖಾಸಿಂ ಖಾದ್ರಿ(ಖು) ಮೊಹರಂ ತಿಂಗಳ ೨೭ನೆಯ ದಿನಾಂಕ ಹಿಜ್ರಿಶಕೆ ೧೦೩೨ರಂದು ನಶ್ವರ ಜಗತ್ತಿಗೆ ವಿದಾಯ ಹೇಳಿ ಶಾಶ್ವತ ಲೋಕದತ್ತ ಪಯಣ ಬೆಳೆಸಿದರು. ಹಾಗೂ ಜೈಯ್ಯದ್‌ಖಾನ್ ಮಸೀದೆಯ ಆವರಣದಲ್ಲಿ ಉತ್ತರ ದಿಕ್ಕಿನಲ್ಲಿ ಗುಂಬಜ್‌ದ ಒಳ ಭಾಗದಲ್ಲಿ ಹಜ್ರತ್‌ರ ಸಮಾದಿಯು ಇರುವದು. ಶ್ರದ್ಧಾಳುಗಳು ಆಸ್ಥೆಯೊಂದಿಗೆ ಇಂದಿಗೂ ಜಿಯಾರತ್‌ಗೈದು ನೆಮ್ಮದಿ ಪಡೆಯುವರು. ಇವರ ದರ್ಗಾದ ಆವರಣದಲ್ಲಿ ಪಂಡಿತಪಾಮರರೆಲ್ಲರೂ ಅಂತಿಮದಿನದ ಮೋಕ್ಷದ ಬಯಕೆಯೊಂದಿಗೆ ಇಲ್ಲಿ ದಫನ್‌ರಾಗಿರುವರು. ಈಗ ಬಹಳಷ್ಟು ವಿದ್ವಾಂಸರು, ಧರ್ಮ ಪಂಡಿತರೂ ಸಹ ಅಲ್ಲಿ ದಫನರಾಗಿರುವರು. ಇತ್ತೀಚಿನವರಲ್ಲಿ ಸೈಯ್ಯದ್ ಅಬುತುರಾಬ್ ಇವರು ಹಜ್ರತ್ ಸೈಯ್ಯದುಸ್ಸಾದಾತ್ ಶಂಶುದ್ದೀನ್ ಖಾದ್ರಿ(ಖು)ರ ಸುಪುತ್ರರಾಗಿರುವರು. ಹಾಗೂ ಹಜ್ರತ್ ಮುಹಮ್ಮದ್ ಖಲೀಲುರ್‌ರಹಿಮಾನ್ ಹಾಗೂ ಅವರ ಪುತ್ರರಾದ ಹಜ್ರತ್ ಮೌಲ್ವಿ ಸಾಹೇಬ್ ಮುಹಮ್ಮದ್ ಅಕ್ರಮ್ ಹಾಗೂ ಹಜ್ರತ್ ಮುಹಮ್ಮದ್ ಅಕ್ಬರ್‌ನಾಬ ಇತರರು

ಹಾಗೂ ಇನ್ನುಳಿದ ಬಹಳಷ್ಟು ಒಳ್ಳೆಯ ಜನರು ಇಲ್ಲಿ ದಫನ್‌ರಾಗಿರುವರು ಇದರ ವಿವರವು ಸುದೀರ್ಘವಿರುವದು.

■

೩೨. ಹಜ್ರತ್‌ಶಾಹ್ ಮುರ್ತುಜಾ ಖಾದ್ರಿ(ಖು)

ಇವರು ಬಿಜಾಪುರದ ಮಹಾಪುರುಷರು ಹಾಗೂ ಸಾದಾತ್ ವಂಶಜರು. ಸೂಫಿ ಶ್ರೇಷ್ಠರಲ್ಲಿ ಓರ್ವರಾಗಿರುವರು ಇವರ ವಂಶಾವಳಿ ಹಾಗೂ ಪಂಥ ಎರಡೂ 'ಖಾದ್ರಿ' ಇರುವವು. ಇವರ ಪವಾಡಗಳು ಪ್ರಸಿದ್ಧವಾಗಿವೆ. ಇವರು ಗುಜರಾತಿನ ಅಹ್ಮದಾಬಾದ್‌ನಲ್ಲಿ ಜನಿಸಿದರು. ಅಲ್ಲಿಂದ ಜಗದ್ಗುರು ಇಬ್ರಾಹಿಂ ಆದಿಲ್‌ಶಾಹ್‌ನ ಕಾಲದಲ್ಲಿ ಬಿಜಾಪುರಕ್ಕೆ ಆಗಮಿಸಿ ಪಟ್ಟಣಿಗರಿಗೆ ಉಪದೇಶ ನೀಡಿ ಉನ್ನತ ದರ್ಜೆಗೆ ತಲುಪಿಸಿದರು. ಇವರ ಸಾಂಗತ್ಯದ ಸ್ಪರ್ಶದಿಂದಾಗಿ ಬಹಳಷ್ಟು ಜನರು ಯಾರಿಗೆ ದೇವನನ್ನು ಪಡೆಯುವ ಅದಮ್ಯ ಇಚ್ಛೆಯಿತ್ತೋ ಅವರು ಅಲ್ಲಾಹುವಿಗೆ ತಲುಪಿದರು. ಹಜ್ರತ್‌ಶೇಖ ಮುಸ್ತಫಾ ಸಜ್ಜಾದಾ ನಶೀನ್ ದರ್ಗಾ ಹಜ್ರತ್‌ಶೇಖ ಐನುದ್ದೀನ್ ಗಂಜುಲ್‌ಉಲ್ಮ(ಖು) ಹುಮಾ ಇವರು ಹಜ್ರತ್‌ರಿಂದ 'ಖಾದ್ರಿ' ಪರಂಪರೆಯ ಖಿಲಾಫತ್ ಪಡೆದುಕೊಂಡಿರುವರು ಹಜ್ರತ್ ಹಾಫೀಜ್‌ಶಾಹ್ ಅಬ್ದುಲ್‌ಖಾದಿರ್(ಖು) ಹಾಗೂ ಹಾಗೂ ಹಜ್ರತ್‌ಶಾಹ್ ಮುಸ್ತಫಾ(ಖಿ) ಸಾಹೇಬ್ ಜುಮನಾಳ ಗ್ರಾಮದವರು ಹಜ್ರತ್‌ಶಾಹ್ ಮುರ್ತುಜಾಖಾದ್ರಿಯವರ ಖಲೀಫಾಗಳಲ್ಲಿಂದ ಹಾಗೂ ಹಜ್ರತ್‌ಶಾಹ್ ಮಜಜೂಬ್(ಖು)ರೂ ಸಹ ಇವರಿಂದಲೇ ಸಮೃದ್ಧಿ ಹೊಂದಿರುವರು.

ಪ್ರಾರಂಭದಲ್ಲಿ ಓರ್ವ ಮಜಜೂಬನ ದೃಷ್ಟಿಯ ಫಲದಿಂದ ಹಜ್ರತ್‌ರ ಮೇಲೆ ಮಗ್ನರಾಗುವಿಕೆಯು ಸದಾಕಾಲ ಆವರಿಸಿಕೊಂಡಿತು. 'ಮಗ್ನತೆ'ಯು ಮುಂದೆ ಹಂತಹಂತವಾಗಿ ಸಾಗುವಲ್ಲಿ ಅಡತಡೆಯಾಗಿರುವದು. ಏಕೆಂದರೆ 'ಮಗ್ನನು' (ಮಜಜೂಬ್‌ನು) ಒಂದೇ ಸ್ಥಿತಿಯಲ್ಲಿ ಇರುವರು. ಅವರಿಗೆ ಉನ್ನತಿಯ ದರ್ಜೆ ಲಭಿಸದು ಅದಕ್ಕಾಗಿ ಹಜ್ರತ್ ಸೈಯ್ಯದ್ ವಜಿಯುದ್ದೀನ್ ಅಲ್ವಿ ಗುಜರಾತಿ(ಖು)ರ ಜೇಷ್ಠ ಪುತ್ರರಾದ ಮುರ್ಷಿದುಲ್ ಔಲಿಯಾ ಸೈಯ್ಯದ್ ಸೈಯದೆ ಔಲಾದೆ ರಸೂಲಲ್ಲಾಹ್ ಹಜ್ರತ್‌ಶಾಹ್ ಅಬ್ದುಲ್ಲಾಹ್(ಖು) ಆ ಮಗ್ನತೆಯನ್ನು ತಮ್ಮ ಕೃಪಾದೃಷ್ಟಿಯ ಮುಖಾಂತರ ದೂರಗೊಳಿಸಿದರು. ಹಾಗೂ ತಮ್ಮ ಉಪದೇಶ ಹಾಗೂ ಶಿಕ್ಷಣದ ಸಮೃದ್ಧಿಯಿಂದಾಗಿ ಉನ್ನತ ದರ್ಜೆಗೆ ತಲುಪಿಸಿದರು. ಉಲ್ಲೇಖವಿದೆ ಇಬ್ರಾಹಿಂ ಆದಿಲ್‌ಶಾಹನ ಪುತ್ರಿಯ ನಿಧನದ ಮೂರನೆಯ ದಿನ ಸಮಾಧಿಯ ಸಮೀಪದಲ್ಲಿ ಶಾಹಿ ವಿಧಾನದಲ್ಲಿ ಅಲ್ಲಿಯ ಪ್ರಾಂಗಣವು ಹೂ ರಾಶಿಯಿಂದ ತುಂಬಿತು. ಹೂವಿನ ಚಾದರ, ಸುಗಂಧದ್ರವ್ಯಗಳಿಂದ ಅವಳ ಸಮಾಧಿಯ ಸುತ್ತಲೂ ಅಲಂಕೃತಗೊಂಡಿದ್ದವು. ಆಡಳಿತಗಾರರು, ಸೂಫಿ

ವಂಶಸ್ಥರು, ವಿದ್ವಾಂಸರು ಅಲ್ಲಿ ಸೇರಿದ್ದರು. ಹಜ್ರತ್ ಶಾಹ್ ಮುರ್ತುಜಾ ಖಾದ್ರಿ(ಖ)ರೂ ಸಹ ಆ ಸಮಾರಂಭದಲ್ಲಿ ಆಗಮಿಸಿ ಹೊರಭಾಗದ ಝುಗಮಗಿಸುವ ಹೊಳಪು ಕಂಡು ತಮ್ಮ ಅಂತರ್ಜ್ಞಾನದ ಬಲದಿಂದ ಗೋರಿಯೊಳಗಿನ ಸಂಕುಚಿತತೆ ಹಾಗೂ ಘೋರನೋವಿನ ವಿಷಯ ಕಂಡುಕೊಂಡು ದಖನಿ ಭಾಷೆಯಲ್ಲಿ ಹೀಗೆ ಉಸುರಿದರು.

ಊಪರ್ ಜಹಕ್ ಜಹಕ್
ಅಂದರ್ ಬಹಕ್ ಬಹಕ್

ಎಂದರೆ ಹೊರಭಾಗದಲ್ಲಿ ಅಲಂಕೃತ ಝುಗಮಗಿಸುವ ಹೊಳಪಿದೆ ಹಾಗೂ ಒಳಭಾಗದಲ್ಲಿ ಬೆಂಕಿ ಮತ್ತು ಬೇಗೆ ಇದೆ. ಇದರ ನಂತರ ಅವಳ ಸಮಾಧಿಯ ಮೇಲೆ ಸವಾರರಾಗಿ ಪವಿತ್ರ ನಾಲಿಗೆಯಿಂದ ಹೀಗೆ ಉಲಿದರು.

ಊಪರ್ ಭಿ ಜಹಕ್ ಜಹಕ್
ಅಂದರ್ ಭೀ ಜಹಕ್ ಜಹಕ್
ಮೇಲ್ಭಾಗದಲ್ಲಿಯೂ ಝುಗಮಗ
ಒಳ ಭಾಗದಲ್ಲಿಯೂ ಝುಗಮಗ

ತಮ್ಮ ಅಂತಃಶಕ್ತಿಯ ಬಲದಿಂದಾಗಿ ಕ್ಷಣಮಾತ್ರದಲ್ಲಿ ಒಳಭಾಗದ ಬೇಗೆಯನ್ನು ತಂಪುಗೊಳಿಸಿ ಹೊರಭಾಗದಂತೆಯೇ ಒಳಗನ್ನು ಬೆಳಗಿದರು ಹಾಗೂ ಅವಳ ಗೋರಿಯನ್ನು ಸ್ವರ್ಗದ ಉದ್ಯಾನದಂತೆ ಒಂದು ಉದ್ಯಾನವನ್ನಾಗಿಸಿದರು.

ಒಂದು ದಿನ ಹಜ್ರತ್‌ರು ಆಸಾರ್ ಮಹಲಿನಲ್ಲಿ ಕೇಶಕಸ್ತೂರಿಯ ದರ್ಶನಕ್ಕಾಗಿ ಒಳ ಹೋದರು. ಜಿಯಾರತ್ ಮಾಡಿದ ನಂತರ ಪವಿತ್ರ ಪೆಟ್ಟಿಗೆಗೆ ಆಧಾರವಾಗಿಸಿಕೊಂಡು ಕುಳಿತುಕೊಂಡರು. ಆಸಾರ ಶರೀಫದ ಸೇವಕನು ನಮ್ರನಾಗಿ ಹಜ್ರತ್‌ರಲ್ಲಿ ವಿನಂತಿಸಿದನು. ಇದು ಪವಿತ್ರ ಸ್ಥಳವಾಗಿದ್ದು ಇಲ್ಲಿ ಕುಳಿತುಕೊಳ್ಳುವದು ಹಾಗೂ ಪವಿತ್ರ ಪೆಟ್ಟಿಗೆಗೆ ಆಧಾರವಾಗಿಸಿಕೊಂಡು ಕೂಡ್ರುವದು ಶಿಷ್ಟಾಚಾರದ ವಿರುದ್ಧವಾಗಿದೆ. ಹಜ್ರತ್‌ರು ಅಲ್ಲಿಂದ ಎದ್ದು ಪವಿತ್ರ ಪೆಟ್ಟಿಗೆಯಿಂದ ದೂರ ಹೋಗಿ ಕುಳಿತುಕೊಂಡರು. ಪವಿತ್ರ ಪೆಟ್ಟಿಗೆಯು ಹಜ್ರತ್‌ರ ಬೆನ್ನು ಭಾಗಿಗೆ ಅಂಟಿಕೊಂಡಿತ್ತು. ಈ ದೃಶ್ಯವನ್ನು ಕಂಡು ಸೇವಕನು ಬಹಳೇ ಧೈರ್ಯ ಮಾಡಿ ಹೀಗೆಂದನು. ಒಂದು ವೇಳೆ ತಾವು ಹಜ್ರತ್ ಮುಹಮ್ಮದ್ ಸ್ವಲ್ಲಲ್ಲಾಹು ಅಲೈಹಿ ಸ್ವಲ್ಲಮ್‌ರ ಅತೀವ ಪ್ರೀತಿ ಪಾತ್ರರಾಗಿದ್ದೀರಿ. ಶಿಷ್ಟಾಚಾರಕ್ಕನುಗುಣಿಸಿ ತಾವು ಪವಿತ್ರ ಪೆಟ್ಟಿಗೆಯಿಂದ ದೂರ ಕಾಯ್ದುಕೊಳ್ಳಿರಿ. ಆ ಸಮಯದಲ್ಲಿ ಹಜ್ರತ್‌ರು ಆ ಸೇವಕನಿಗೆ ದಿಟ್ಟಿಸಿ ನೋಡಿ ಆ ಸ್ಥಳದಿಂದಲೂ ಸ್ವಲ್ಪ ದೂರ ಹೋಗಿ ಕುಳಿತುಕೊಂಡರು. ಪವಿತ್ರ ಪೆಟ್ಟಿಗೆಯು ಈಗಲೂ ಸಹ ಅದೇ ರೀತಿಯಲ್ಲಿ ಅವರ ಬೆನ್ನಿಗಂಟಿಕೊಂಡಿತ್ತು. ಸೇವಕನು ಪದೇ ಪದೇ ಈ ಕರಾಮತ್ತನ್ನು

ಕಂಡು ಮತ್ತೆ ಅದೇ ರೀತಿಯಲ್ಲಿ ನಮ್ರನಾಗಿ ವಿನಂತಿಸಿದನು. ಮತ್ತೆ ಮೂರನೇ ಸಲವೂ ಇದೇ ರೀತಿಯಲ್ಲಾಗಲು ಮೌನ ತಾಳಿದನು.

ಕೇಶಕಸ್ತೂರಿಯು ಹಜ್ರತ್‌ರ ದೇಹಕ್ಕೆ ಸ್ಪರ್ಶಿಸಿ ಪವಿತ್ರ ನಳಿಕೆಯಲ್ಲಿ ಪ್ರವೇಶಿಸಿದ ವಿವರಣೆಯು ಈ ಗ್ರಂಥದ ಪ್ರಾರಂಭದಲ್ಲಿ ಕೇಶಕಸ್ತೂರಿಯ ವರ್ಣನೆಯಲ್ಲಿ ವಿವರಿಸಲಾಗಿದೆ. ಹಜ್ರತ್‌ಶಾಹ್ ಮುರ್ತುಜಾಖಾದ್ರಿ(ಖು) ಖಿಲಾಫತ್ ಹಾಗೂ ಆಧ್ಯಾತ್ಮಿಕ ಜ್ಞಾನವನ್ನು ತಮ್ಮ ಗೌರವಾನ್ವಿತ ತಂದೆಯವರಾದ ಹಜ್ರತ್ ಸೈಯ್ಯದ್ ಶರ್ಫುದ್ದೀನ್ ಸೂಫಿ (ಖು)ರಿಂದ ಪಡೆದುಕೊಂಡರು. ಇವರ ಪರಂಪರೆಯು ಪರಂಪರಾಗತವಾಗಿ ಹರಿದು ಬಂದಿರುವದು ಇವರಿಗೆ ಇವರ ತಂದೆಯವರಿಂದ ಹಾಗೂ ಅವರಿಗೆ ಅವರ ತಂದೆಯವರಿಂದ ಇದೇ ತೆರನಾಗಿ ಜನಾಬ್ ಸುಲ್ತಾನುಲ್ ಔಲಿಯಾ ಹಜ್ರತ್ ಸೈಯ್ಯದ್ ಮುಹಿಯುದ್ದೀನ್ ಜೀಲಾನಿ(ಖು)ರ ವರೆಗೆ ನಿರಂತರವಾಗಿ ತಲುಪುತ್ತದೆ. ನನ್ನ ಗುರುಗಳ ಗುರುಗಳು ಹಜ್ರತ್ ಮೌಲಾನಾ ಸೈಯ್ಯದ್ ಹಜ್ರತ್‌ರು ಒಂದು ದಿನ ಹಜ್ರತ್‌ಶಾಹ್ ಮುರ್ತುಜಾಖಾದ್ರಿಯವರ ಜಿಯಾರತ್‌ರಾಗಿ ಹೋಗಿದ್ದರು. ಜಿಯಾರತ್‌ದ ಸಮಯದಲ್ಲಿ ಹೀಗೆ ಯೋಚಿಸಿದರು. ಹಜ್ರತ್‌ರು ವಂಶಾವಳಿಯಿಂದ ಸಾದಾತ್ ಖಾದ್ರಿಯಾಗಿದ್ದಾರೆ ಹಾಗೂ ಇವರ ಸಾಂಗತ್ಯ ಹಾಗೂ ಪರಂಪರೆಯು 'ಖಾದ್ರಿಯಾ' ಇರುವದು ಆದರೆ ಇದು ತಿಳಿದು ಬಂದಿರುವದಿಲ್ಲ. ಸಮೃದ್ಧಿಯ ಖಿಲಾಫತ್‌ನ್ನು ಬೇರೆಯವರಿಂದಲೂ ಪಡೆದುಕೊಂಡಿದ್ದಾರೋ ಇಲ್ಲವೋ ಅದಕ್ಕಾಗಿ ಜಿಯಾರತ್ 'ಷರೀಫ್‌ಗೈದು' ಹೊರಬಂದರು. ಅಲ್ಲಿ ಓರ್ವ ಅಪರಿಚಿತ ಫಕೀರರು ಹಾಜರಿದ್ದರು. ಅವರ ಕೈಯಲ್ಲಿ ಒಂದು ವಂಶಾವಳಿಯ ವಿವರದ ಕಾಗದವಿತ್ತು. ಅದನ್ನು ಮೌಲಾನಾರ ಕೈಯಲ್ಲಿ ನೀಡಿ ಮಾಯವಾದರು ಯಾವಾಗ ವಂಶಾವಳಿಯನ್ನು ತೆರೆದು ನೋಡಿದರೋ ಆಗ ಸ್ವತಃ ಹಜ್ರತ್‌ರು ಹಾಗೂ ಹಜ್ರತ್‌ಶಾಹ್ ಅಬ್ದುಲ್ಲಾಹ್ ಹಾಗೂ ಹಜ್ರತ್‌ಶಾಹ್ ವಜೀಯುದ್ದೀನ್ ಅಲ್ವಿ ಗುಜ್ರಾತಿ(ಖು)ರ ಪವಿತ್ರನಾಮದೊಂದಿಗೆ ಕೊನೆಯ ವಂಶದ ಹಿರಿಯರವರೆಗೂ ಸರಿಯಾಗಿಯೇ ಇತ್ತು. 'ವಲ್ಲಾಹ್ ಆಲಮ್' ಅಲ್ಲಾಹನೇ ಬಲ್ಲನು...!!

ಹಜ್ರತ್‌ಶಾಹ್ ಮುರ್ತುಜಾಖಾದ್ರಿ(ಖು)ರು ಇಸ್ಲಾಮೀ ವಿಧಿವಿಧಾನದಂತೆ ವಿವಾಹವಾದರು. ಓರ್ವ ಪುತ್ರಿ ಜನಿಸಿದಳು. ಆ ಮಗಳಿಗೆ ತನ್ನ ಸಹೋದರನ ಪುತ್ರರಾದ ಸೈಯ್ಯದ್ ತವಕ್ಕಲ್ ಬಿನ್ ಸೈಯ್ಯದ್ ಮೆಹಮೂದ್‌ರ ಜೊತೆಗೆ ವಿವಾಹ ಮಾಡಿಕೊಟ್ಟರು ಹಾಗೂ ಅವರಿಂದ ಸಂತಾನ ಪ್ರಾಪ್ತಿಯಾಯಿತು. ಹಜ್ರತ್‌ರ ಉರೂಸ್ ಷರೀಫ್‌ವು ಜಮಾದುಸ್ಸಾನಿಯ ೨೩ನೆಯ ದಿನಾಂಕವಿರುವದು ಆದರೆ ಇಸ್ವಿ ತಿಳಿದಿರುವದಿಲ್ಲ. ಸಮಾಧಿ ಸ್ಥಳವು ಮನಗೂಳಿ ಅಗಸಿಯ ಹೊರಭಾಗದಲ್ಲಿ ಇರುವದು. ಸಮಾಧಿಯ ಮೇಲ್ಗಡೆ ಒಂದು ಗುಂಬಜ್ ನಿರ್ಮಿಸಲಾಗಿದೆ. ಈ ಪವಿತ್ರ ಸ್ಥಳವು ಪಂಡಿತ ಪಾಮರರಿಗೆ ಜಿಯಾರತ್ ಸ್ಥಳವಾಗಿದೆ. ಇಂದಿಗೂ ಸಹ ಪ್ರತಿ ಗುರುವಾರದಂದು

ಜನರು ಜಿಯಾರತ್‌ಗಾಗಿ ಸೇರುವರು. ಹಾಗೂ ಸಮೃದ್ಧಿ ಪಡೆಯುವರು. ನಿಷ್ಠಾವಂತರು ತಮ್ಮ ಉದ್ದೇಶಪೂರ್ತಿ ಕಂಡುಕೊಳ್ಳುವರು.

ಈ ಜಗತ್ತಿನಿಂದ ಅವರು ವಿದಾಯ ಹೇಳುತ್ತಿರುವಾಗ 'ವಸೀಯತ್' (ಉಯಿಲು ಬರೆದರು) ತಮ್ಮ ಜನಾಜಾ ನಮಾಜ್ (ಶವವನ್ನು ಮುಂದಿಟ್ಟುಕೊಂಡು ಸಲ್ಲಿಸುವ ಪ್ರಾರ್ಥನೆ)ವನ್ನು ಆ ವ್ಯಕ್ತಿಯು ಜರುಗಿಸಬೇಕು. ಯಾವನು ತನ್ನ ತಾರುಣ್ಯ ಘಟ್ಟದಿಂದ ಇಲ್ಲಿಯವರೆಗೂ ನಮಾಜೆ ತಹಜ್ಜುದ್(ಮಧ್ಯರಾತ್ರಿಯ ಹೊತ್ತು ಸಲ್ಲಿಸುವ ಕಡ್ಡಾಯವಲ್ಲದ ಸುನ್ನತ ನಮಾಜ್)ನ್ನು ಒಮ್ಮೆಯೂ ತಪ್ಪಿಸದೇ ಸಲ್ಲಿಸಿರಬೇಕು. ಏನಿತ್ತು? ಇವರ ಮರಣಾ ನಂತರ ಶವಸ್ನಾನಗೈದು ಕಫನ್ ತೊಡಿಸಿ ನಮಾಜೇ ಜನಾಜಾಗಾಗಿ ಜನರ ಮಧ್ಯೆ ತಂದು ಇರಿಸಲಾಯಿತು. ಮಹಾಪುರುಷರು. ಸೂಫಿವಂಶಜರು, ಆಡಳಿತಗಾರರು ಜನಾಜಾನಮಾಜ್‌ಗಾಗಿ ಬಂದು ಸೇರಿದರು. ಆ ಸಭೆಯಲ್ಲಿ ಹುಜೂರ್‌ರ ಉಯಿಲಿನ ಕುರಿತ ವಿಷಯವು ಚರ್ಚೆಗೆ ಬಂದಿತು. ಎಲ್ಲರೂ ಚಿಂತಿತರಾದರು. ಇಖ್ಲಾಸ್‌ಖಾನ್ ಮಂತ್ರಿ ಸುಲ್ತಾನ್ ಇಬ್ರಾಹಿಂ ಆದಿಲ್‌ಶಾಹ್‌ನ ಗುಲಾಮನಾಗಿದ್ದನು. ಹಾಗೂ ಬಾದಶಾಹ್‌ನ ಕೃಪೆಯಿಂದಾಗಿ ಉನ್ನತ ಪದವಿ ಹೊಂದಿದ್ದನು. ಆ ಸಭೆಯಲ್ಲಿ ಧೈರ್ಯ ಒಟ್ಟುಗೂಡಿಸಿಕೊಂಡು ಮುಂದೆ ಬಂದನು. ಹಾಗೂ ಹೀಗೆಂದನು ತಾರುಣ್ಯದ ಘಟ್ಟದಿಂದ ಇಲ್ಲಿಯವರೆಗೂ ಅಲ್ಲಾಹುವಿನ ಅಪಾರ ಕೃಪೆಯಿಂದಾಗಿ ಈ ದಾಸನ ನಮಾಜೆತಹಜ್ಜುದ್‌ವು ಒಂದು ದಿನವೂ ತಪ್ಪಲಿಲ್ಲ. ಏಕೆಂದರೆ ಗುಲಾಮನ ಇಮಾಮತ್ ಅರ್ಹವಲ್ಲ. ಬಾದಶಹನು ತಕ್ಷಣವೇ ಆತನನ್ನು ಸ್ವತಂತ್ರಗೊಳಿಸಿದನು. ಇಖ್ಲಾಸ್‌ಖಾನ್‌ನು ಬಿಡುಗಡೆಗೊಂಡು ಸ್ವತಃ ತಾನೇ ಇಮಾಮತ್(ನಾಯಕತ್ವ)ವಹಿಸಿ ಹಜ್ರತ್‌ಶಾಹ್(ಖು)ರ ನಮಾಜೇ ಜನಾಜಾವನ್ನು ನಿರ್ವಹಿಸಿದನು. ಇಖ್ಲಾಸ್‌ಖಾನ್‌ನ ಗುಂಬಜ್‌ವು ಹಜ್ರತ್‌ರ ಗುಂಬಜ್‌ದ ಬಳಿಯೇ ಇರುವದು. ಹಜ್ರತ್‌ರ ಗುಂಬಜಿನ ಒಳಾಂಗಣದ ಬಲಭಾಗದಲ್ಲಿ ಹಜ್ರತ್‌ರ ಮೊಮ್ಮಗರಾದ ಹಜ್ರತ್‌ಶಾಹ್ ಸೂಫಿ(ಖು)ರ ಸಮಾಧಿ ಸ್ಥಳವಿರುವದು. ಗುಂಬಜಿನ ಹೊರಭಾಗದಲ್ಲಿ ಪಶ್ಚಿಮ ದಿಕ್ಕಿನಲ್ಲಿ ಗುಂಬಜಿನ ಗೋಡೆಯ ಹತ್ತಿರದಲ್ಲಿ ಹಜ್ರತ್‌ಶಾಹ್ ತವಕ್ಕಲ್ ಹಾಗೂ ಹಜ್ರತ್‌ಶಾಹ್ ಹುಸೈನ್ ಹಾಗೂ ಸ್ವತಃ ಹಜ್ರತ್‌ರ ಖಲೀಫಾರಾದ ಹಜ್ರತ್‌ಶಾಹ್ ಹಾಫೀಜ್ ಅಬ್ದುಲ್‌ಖಾದಿರ್(ಖು)ರು ಸಮಾಧಿಯಲ್ಲಿ ಉಪಸ್ಥಿತರಿರುವರು ಹಾಗೂ ಆ ಕಾಲದ ಪ್ರಸಿದ್ಧ ಶೋಕಗೀತಕಾರರಾದ ಮಿರ್ಜಾ ಹಾಗೂ ಮಿಯಾಹಾಜಿ ಝಾಕೀರ್ ಗುಂಬಜ್ ಶರೀಫ್‌ದ ಹಿಂಭಾಗದಲ್ಲಿ ಪೂರ್ವದಿಕ್ಕಿಗೆ ಧಫನ್‌ರಾಗಿರುವರು ಬಹಳಷ್ಟು ವಿದ್ವಾಂಸರು ಹಾಗೂ ಉತ್ತಮ ಚಾರಿತ್ರ್ಯವುಳ್ಳ ಅತ್ಯುತ್ಕೃಷ್ಟ ಜನರು ಗುಂಬಜ್ ಶರೀಫ್‌ದ ಸುತ್ತಲೂ ಸಮಾಧಿಸ್ಥರಾಗಿರುವರು ಹಾಗೂ ಸಮಕಾಲೀನರಲ್ಲಿ ಹಜ್ರತ್‌ಶಾಹ್ ಮುಸ್ತಫಾ ಖಾದ್ರಿಯವರ ಶಿಷ್ಯರಾದ ಶೇಖ ಅಬ್ದುಸ್ಸಲಾಮ್(ಖು)ರು ಹಾಗೂ ಅವರ ಪುತ್ರರಾದ ಮಹಾವಿದ್ವಾಂಸ ಮೌಲ್ವಿ ಅಬ್ದುಲ್ ರೆಹಮಾನ್ ಹಾಗೂ ಅವರ ಮೊಮ್ಮಗರಾದ ಹಜ್ರತ್ ಸಾಕಿ ಅಲಿ ಯಾರು ನನ್ನ

ತಂದೆಯ ಗುರುವಾಗಿದ್ದಾರೆ ಪವಿತ್ರ ಗುಂಬಜ್ ಮುಬಾರಕದ ಹಿಂಭಾಗದಲ್ಲಿ ಪಶ್ಚಿಮದಿಕ್ಕಿಗೆ ದಫನ್‌ರಾಗಿರುವರು.

ಇವರ ಸಂತಾನವು ಅರ್ಕಾತ್‌ದಲ್ಲಿದೆ. ಸಧ್ಯಕ್ಕೆ ಮುರ್ತುಜಾ ಸಾಬ್ ಮುಜಾವರ್‌ರು ವಾರ್ಷಿಕ ಉರುಸ್ ಉತ್ಸವದ ಹೊಣೆಯನ್ನು ನಿಭಾಯಿಸುತ್ತಿರುವರು.

■

೩೩. ಹಜ್ರತ್‌ಶಾಹ್ ಅಬುಲ್ ಹಸನ್‌ಖಾದ್ರಿ (ಖು)

ಹಜ್ರತ್‌ರು ಇಬ್ರಾಹಿಂ ಆದಿಲ್‌ಶಾಹ್ ಜಗದ್ಗುರುವಿನ ಕಾಲದಲ್ಲಿ ತಮ್ಮ ಪೂರ್ವಜರ ಪ್ರದೇಶವಾದ ಮುಹಮ್ಮದಾಬಾದ್ (ಬೀದರ್)ನ್ನು ತೊರೆದು ಈ ನಗರಕ್ಕೆ ಆಗಮಿಸಿದರು. ಧರ್ಮನಿಷ್ಠ ಹಾಗೂ ದೇವಭೀರು ಶಿಷ್ಯರತ್ತ ತಮ್ಮ ಗಮನ ಹರಿಸಿದರು. ತಾವುಗಳು ಆ ಕಾಲದ ಸೂಫಿವರ್ಯರೂ ಹಾಗೂ ಸೂಫಿ ವಂಶಜರಾಗಿದ್ದರು. ಹಾಗೂ ಹಜ್ರತ್ ಮೀರಾಂ ಸೈಯ್ಯದ್ ಮುಹಿಯ್ಯುದ್ದೀನ್ ಜಿಲಾನಿ(ಖುದ್ದಿಸ್ಸೆರ್ರಹ)ರ ಪವಿತ್ರ ವಂಶದಿಂದ ಇರುವರು ಇವರ ಬೈಯತ್ ಹಾಗೂ ಖಿಲಾಫತ್ ತಮ್ಮ ಪೂರ್ವಜರ ಶೃಂಖಲೆಯು ಹಜ್ರತ್ ಗೌಸುಲ್ ಆಜಮ್ ಖುದ್ದಿಸ್ಸರ್ರಾಹರವರೆಗೆ ತಲುಪುವದು. ಹಜ್ರತ್‌ರು ಆ ಕಾಲದ ಕುತುಬ್ ಹಾಗೂ ಪ್ರಸಿದ್ಧ ಸೂಫಿವರ್ಯರಾಗಿದ್ದರು. ಇವರಿಂದ ಅನೇಕ ಪವಾಡಗಳು ಸಂಭವಿಸಿವೆ. "ಸೈಫತುಲ್‌ಹುದಾ" ಗ್ರಂಥದಲ್ಲಿ ಹೀಗೆ ಬರೆಯಲಾಗಿದೆ. ಹಜ್ರತ್‌ರ ಮೇಲೆ ನವಿಲುಗರಿಯ ಬೀಸಣಿಕೆಯಿಂದ ಬೀಸುವಾಗ ಅದರ ಕಡ್ಡಿಗಳಿಂದ ಪ್ರಕಾಶದ ಮಿಂಚು ಉಂಟಾಗುತ್ತಿತ್ತು.

ಓರ್ವ ದಖನ್ನಿನ ಶೇಖ್‌ನಾದ ಇಸ್ರಾಫಿಲ್ ಹೆಸರಿನ ವ್ಯಕ್ತಿಯು, ಧೈರ್ಯಸ್ಥೈರ್ಯ ಹಾಗೂ ಪೈಲ್ವಾನ್‌ಗಿರಿಯಲ್ಲಿ ತನಗೆ ತಾನೇ ಸಾಟಿಯಾಗಿದ್ದ ಏಕಮೇವ ವ್ಯಕ್ತಿಯಾಗಿದ್ದನು. ಸುಲ್ತಾನ್ ಇಬ್ರಾಹಿಂ ಆದಿಲ್‌ಶಾಹ್‌ನ ನೌಕರರಲ್ಲಿ ಸೇರಿಕೊಂಡನು. ಬಾದಶಾಹ್‌ನು ಆತನಿಗೆ ಗೌರವ ಹಾಗೂ ಪುರಸ್ಕಾರ ನೀಡಿ ತನ್ನ ಎದುರು ಕೂಡಲು ಅನುಮತಿ ನೀಡಿದನು. ಬಾದಶಾಹನ ಕಡೆಯಿಂದ ಆತನಿಗೆ ಈ ತೆರನಾದ ಗೌರವ ಪ್ರಾಪ್ತಿಯಾಗಲು ಮತ್ಸರಬುದ್ಧಿಯುಳ್ಳ ಜನರಿಗೆ ಅಸೂಯೆಯುಂಟಾಯಿತು ಹಾಗೂ ಆತನನ್ನು ಕೆಳಗಿಳಿಸಲು ಸನ್ನದ್ಧರಾದರು. ಬಾದಶಾಹನೊಂದಿಗೆ ಹೀಗೆಂದರು ಇಸ್ರಾಫೀಲ್‌ನು ತನ್ನ ಶಕ್ತಿಯಿಂದಾಗಿ ಅಹಂಕಾರಿಯಾಗಿರುವನು ಹಾಗೂ ತನ್ನ ಯೌವನದ ಬಲ ಪ್ರದರ್ಶಿಸಿ ಗರ್ವಿಷ್ಠನಾಗಿರುವನು. ಒಂದು ಸಲ ದರ್ಬಾರ್‌ದಲ್ಲಿ ಆತನ ಪರೀಕ್ಷೆ ತೆಗೆದುಕೊಳ್ಳಬೇಕು. ಏಕೆಂದರೆ ಆತನ ಮೇಲೆ ಬಾದಶಾಹನ ಕೃಪಾದೃಷ್ಟಿಯು ಬಹಳೇ ವಿಧದಲ್ಲಿ ಇತ್ತು.

ಆತನನ್ನು ಬಾದಶಹನು ದೂರಗೊಳಿಸಲು ಬಯಸಲಿಲ್ಲ. ಕೊನೆಗೆ ಆತನ

ಸಮೀಪಸ್ಥರೆಲ್ಲ ಸೇರಿ ಒಗ್ಗಟ್ಟಾಗಿ ಒತ್ತಡ ಹೇರತೊಡಗಲು ಅನಿವಾರ್ಯವಾಗಿ ಬಾದಶಾಹನು ಅವರಿಂದ ಸಲಹೆ ಕೇಳಿದನು. ಎಲ್ಲರೂ ಒಂದೇ ಕಂಠದಲ್ಲಿ ವಿನಂತಿಸಿದರು. ಏನೆಂದರೆ ಬಾದಶಾಹರು ಒಂದು ದಿನ ಅಂಗಳದಲ್ಲಿ ಕುಳಿತು ಸಾರ್ವಜನಿಕರಿಗೆ ಒಂದೆಡೆ ಸೇರಲು ಆದೇಶ ನೀಡಬೇಕು ಹಾಗೂ ಆನೆಗಳ ಸಂರಕ್ಷಕರಿಗೆ ರಹಸ್ಯವಾಗಿ ಸಂಕೇತ ನೀಡಿ ಮದೋನ್ಮತ್ತ ಗಜವೊಂದನ್ನು ಜನರ ನಡುವೆ ಬಿಡಬೇಕು. ಜನರು ಮದೋನ್ಮತ್ತ ಆನೆಯ ಭಯದಿಂದ ಚೆಲ್ಲಾಪಿಲ್ಲಿಯಾಗುವರು ಆಗ ಇಸ್ರಾಫಿಲ್‌ನ ಶೌರ್ಯವು ಪ್ರದರ್ಶನಗೊಳ್ಳುವುದು. ಅದಕ್ಕಾಗಿ ಪ್ರಾಂಗಣದ ಪೀಠದ ಮೇಲೆ ಬಾದಶಾಹನಿಗಾಗಿ ಮಂಟಪವನ್ನು ನಿರ್ಮಿಸಿದರು ಹಾಗೂ ಸಿಂಹಾಸನವನ್ನು ಇಡಲಾಯಿತು. ಆಡಳಿತಗಾರರು, ಆಪ್ತರು ಹಾಗೂ ಅಧಿಕಾರಿಗಳು ದರ್ಬಾರಿನಲ್ಲಿ ಹಾಜರಾದರು. ಇಸ್ರಾಫಿಲ್‌ನೂ ಸಹ ತನ್ನ ರೂಢಿಯಂತೆ ಹಾಜರಾಗಿ ಎದುರಲ್ಲಿ ಕೈಕಟ್ಟಿಕೊಂಡು ವಿನಮ್ರನಾಗಿ ಕುಳಿತುಕೊಂಡನು. ಗೌಪ್ಯ ಸಂದೇಶದಂತೆ ಮಾವುತನು ಮದೋನ್ಮತ ಆನೆಯನ್ನು ಜನರ ನಡುವೆ ಬಿಟ್ಟು ಗೊಂದಲವೆಬ್ಬಿಸಿದನು. ಹಾಗೂ ಆನೆಯು ನನ್ನ ಹಿಡಿತದಲಿಲ್ಲ ಎಂದು ಚೀರಿದನು. ಹಾಗೂ ಚೀತ್ಕರಿಸುತ್ತಾ ಎಲ್ಲರೂ ಏಳಿರಿ, ಬೇಗ ಏಳಿರಿ ಎನ್ನುತ್ತಿದ್ದನು.

ಎಲ್ಲರೂ ಆನೆಯ ಭಯದಿಂದ ಅಲ್ಲಿಂದ ಒಂದೆಡೆಗೆ ನಿರ್ಗಮಿಸಿದರು. ಇಸ್ರಾಫಿಲ್ ಯಾರು ವಿನಮ್ರನಾಗಿ ಕುಳಿತುಕೊಂಡಿದ್ದನು ತನ್ನ ಸ್ಥಳದಿಂದ ಒಂದಿನಿತೂ ಅಲುಗಾಡಲಿಲ್ಲ ಹಾಗೂ ಆನೆಯತ್ತ ನೋಡಲೂ ಇಲ್ಲ. ಮಾವುತನು ಆನೆಯನ್ನು ಇಸ್ರಾಫಿಲ್ ಬಳಿಗೆ ತಲುಪಿಸಿ ಒಂದು ಭಯಭೀತ ಧ್ವನಿಗೈದನು. ಈ ಆನೆಯು ಮದೋನ್ಮತ್ತವಾಗಿದ್ದು ನನ್ನ ಕೈಯಿಂದ ಹೊರಹೋಗಿದೆ. ಏಳಿ ಇಸ್ರಾಫಿಲ್‌ರೇ ಏಳಿರಿ. ಇಸ್ರಾಫಿಲ್‌ನು ತನ್ನ ಕೈ ಬಿಚ್ಚಿದನು. ಆನೆಯು ತನ್ನ ಸೊಂಡಿಲನ್ನು ಸೊಕ್ಕಿನಿಂದ ಅವನ ಬಗಲಲ್ಲಿ ಹಾಕಬಯಸಿತು. ಹಾಗೂ ಅವನನ್ನು ಅಲ್ಲಿಂದ ಎತ್ತಿ ಬೇರೆಡೆಗೆ ದೂರಕ್ಕೆ ಎಸೆಯಬೇಕು ಎಂದು ಬಯಸಿತು. ಇಸ್ರಾಫಿಲ್‌ನು ಆನೆಯ ಸೊಂಡಿಲನ್ನು ತನ್ನ ಬಗಲಲ್ಲಿ ಒತ್ತಿದನು. ಅದು ಅನಿವಾರ್ಯವಾಗಿ ತನ್ನ ಶಕ್ತಿ ಕುಂದಿಸಿಕೊಂಡಿತು ಹಾಗೂ ಚೀತ್ಕರಿಸಿ ಭೂಮಿಯ ಮೇಲೆ ಬಿದ್ದುಕೊಂಡಿತು. ಮಾವುತನು ಹೀಗೆ ಹೇಳುತ್ತಿದ್ದನು. ಏನೆಂದರೆ ಇದು ಬಾದಶಾಹನ ವಿಶೇಷ ಸವಾರಿಯ ಆನೆಯಾಗಿರುವದು ಇಸ್ರಾಫಿಲ್‌ನೂ ಇದನ್ನು ಆಲಿಸದಾದನು ಹಾಗೂ ಅದನ್ನು ಬಿಡಲೂ ಇಲ್ಲ ಹಾಗೂ ಅರಿತುಕೊಂಡನು. ಇದು ತನ್ನ ಸತ್ವಪರೀಕ್ಷೆಯಾಗಿತ್ತು ಕೋಪೋದ್ರಿಕ್ತನಾಗಿ ಭೂಮಿಯ ಮೇಲೆ ಒಂದು ಮುಷ್ಟಿಯಿಂದ ಹೊಡೆದರೆ ಹದಿನಾರು ಅಡಿಯವರೆಗೆ ಭೂಮಿ ಬಿರಿಯಿತು. ಆಗ ಇಸ್ರಾಫಿಲ್ ದರ್ಬಾರಿನಿಂದ ಹೊರಹೋಗಿ ಮನೆಯಲ್ಲಿಯೇ ಇರತೊಡಗಿದನು. ಆಗ ಬಾದಶಾಹನು ಬಹಳೇ ಆಸ್ಥೆಯಿಂದ ಕರೆಕಳಿಸಿದನು. ಆದರೆ ಆತನು ಒಪ್ಪಲಿಲ್ಲ ಮತ್ತು ಅದೇ ದಿನ

ರಾಜಿನಾಮೆ ನೀಡಿದನು. ಹಾಗೂ ಹೀಗೆ ನಿಶ್ಚಯಿಸಿದನು. ಏನೆಂದರೆ ಯಾರು ತನಗಿಂತಲೂ ಭುಜಬಲದಲ್ಲಿ ಹೆಚ್ಚಿನ ಶಕ್ತಿ ಸಾಮರ್ಥ್ಯ ಉಳ್ಳವರು ಆಗಿರುವರು ಅಂತಹ ಓರ್ವ ಮಹಾಪುರುಷರಾದ ಸೂಫಿವರ್ಯರ ಶಿಷ್ಯತ್ವ ಸ್ವೀಕರಿಸಿ ಅವರಲ್ಲಿ ಬೈಯ್ಯತ್ ಪಡೆಯುವುದು. ಅದಕ್ಕಾಗಿ ಇಂಥಹ ಮಹಾಪುರುಷರನ್ನು ಹುಡುಕಲು ತನ್ನ ಸ್ನೇಹಿತನಲ್ಲಿ ಸಲಹೆ ಕೇಳಿದನು. ಹಾಗೂ ಆತನಲ್ಲಿ ಅವರೊಂದಿಗೆ ಹೇಗೆ ಭೇಟಿಯಾಗುವದೆಂದು ವಿಚಾರಿಸಿದನು. ಆತನು ಹೀಗೆಂದನು ಉತ್ತಮ ರೀತಿಯ ವಿಧಾನ ಇದಾಗಿದೆ. ಪ್ರತಿ ಶುಕ್ರವಾರ ಜುಮ್ಮಾ ನಮಾಜಿನ ನಂತರ ಜಾಮಿಯಾ ಮಸೀದೆಯ ಮೂರು ಬಾಗಿಲುಗಳಲ್ಲಿ ಒಂದು ಬಾಗಿಲಿಗೆ ಕುಳಿತುಕೋ ಸೂಫಿವರ್ಯರು, ಸೂಫಿವಂಶಜರು ಹಾಗೂ ಮಹಾಪುರುಷರು ಅಲ್ಲಿ ಸೇರುವರು. ಒಂದು ವೇಳೆ ಆ ಬಾಗಿಲಿನಿಂದ ಯಾವ ವ್ಯಕ್ತಿ ಹೊರಬರುವರೋ ಅವರೊಂದಿಗೆ ಹಸ್ತಲಾಘವ ಮಾಡು, ಮತ್ತೆ ಎರಡನೆಯ ಶುಕ್ರವಾರ ಮತ್ತೊಂದು ಬಾಗಿಲು ಮೂರನೆಯ ಶುಕ್ರವಾರ ಇನ್ನೊಂದು ಬಾಗಿಲು ಹೀಗೆ ಪರೀಕ್ಷಿಸು, ಒಂದು ವೇಳೆ ಹೀಗೆಯೇ ಅನೇಕ ಶುಕ್ರವಾರ ಇದೇ ತೆರನಾಗಿ ಮುಂದುವರೆದರೆ ಆ ಪಂಥದಿಂದ ನಿಮಗೆ ಯಾವ ವ್ಯಕ್ತಿ ಬೇಕೋ ಅವರು ಸಿಗುವರು. ಇಸ್ರಾಫಿಲ್‌ನು ಈ ದೃಢನಿರ್ಧಾರದೊಂದಿಗೆ ಒಂದು ಬಾಗಿಲಿಗೆ ಕುಳಿತುಕೊಂಡನು.

ಆ ದಿನ ಯಾವ ವ್ಯಕ್ತಿ ಹೊರಬರುತ್ತಿದ್ದನು. ಈತನು ಅವರ ಹಸ್ತಲಾಘವ ಮಾಡಿ ಅವರ ಬಲವನ್ನು ಪರೀಕ್ಷಿಸಿದ್ದನು. ಆದರೆ ತನ್ನ ಉದ್ದೇಶ ಈಡೇರಲಿಲ್ಲ. ಹೀಗೆಯೇ ಹಲವಾರು ಶುಕ್ರವಾರ ಇದೇ ವಿಧಾನ ಅನುಸರಿಸಿದನು. ಆಕಸ್ಮಿಕವಾಗಿ ಒಂದು ಶುಕ್ರವಾರ ಒಂದು ಬಾಗಿಲಿಗೆ ಕುಳಿತುಕೊಂಡು ಪ್ರತಿಯೊಬ್ಬರೊಂದಿಗೆ ಹಸ್ತಲಾಘವ ಮಾಡುತ್ತಿದ್ದನು. ಜನಾಬ್ ಷಾಹ್ ಅಬುಲ್ ಹಸನ್ ಖಾದ್ರಿ(ಖ) ನಮಾಜ್ ಮುಗಿಸಿ ತಮ್ಮ ಮನೆಗೆ ಮರಳುತ್ತಿದ್ದರು. ಆಗ ಇಸ್ರಾಫಿಲ್‌ನು ಹಸ್ತಲಾಘವಕ್ಕಾಗಿ ಹಜ್ರತ್‌ರಿಗೆ ಎದುರಾಗಿ ಬಂದು ತನ್ನೆಲ್ಲ ಶಕ್ತಿಯನ್ನು ಒಟ್ಟುಗೂಡಿಸಿ ಹಜ್ರತ್‌ರೊಂದಿಗೆ ಹಸ್ತಲಾಘವ ಮಾಡಿದನು. ಹಜ್ರತ್‌ರು ಆತನ ಎರಡೂ ಕೈಗಳನ್ನು ತಮ್ಮ ಅಂತಃಶಕ್ತಿಯಿಂದ ಹೀಗೆ ಅದುಮಿದರು. ಅದನ್ನು ತಾಳದೆ ಭೂಮಿಯ ಮೇಲೆ ಬಿದ್ದುಬಿಟ್ಟನು. ಹಾಗೂ ಮೂರ್ಛಿತನಾದನು. ಕೆಲಕ್ಷಣಗಳ ನಂತರ ಆತನಿಗೆ ಎಚ್ಚರವಾಯಿತು. ಆಗ ಆತನು ಹಜ್ರತ್‌ರನ್ನು ಹಿಂಬಾಲಿಸಿ ಪಾದದ ಮೇಲೆ ಬಿದ್ದುಕೊಂಡನು. ಹಾಗೂ ಹಜ್ರತ್‌ರಿಂದ ಬೈಯತ್ ಹೊಂದಿದನು. ಹಾಗೂ ಅವರ ಪರಿಪೂರ್ಣ ಶಿಷ್ಯನಾಗಿ ಪ್ರಸಿದ್ಧಿ ಹೊಂದಿದನು. ಆತನ ಸಮಾಧಿಯು ಸಹ ಹಜ್ರತ್‌ರ ಸಮಾಧಿಯ ಸಮೀಪವಿರುವುದು. ಹಜ್ರತ್‌ರ ಪವಾಡಗಳು ಬಹಳ ಇರುವವು. ಅವರು ರಬ್ಬಿವುಲ್ ಆಖಿರ್‌ದ ೧೪ನೆ ದಿನಾಂಕ ಹಿಜ್ರಿಶಕೆ ೧೧೪೫ರಂದು ಈ ನಶ್ವರ ಜಗತ್ತಿಗೆ ವಿದಾಯ ಹೇಳಿ ಶಾಶ್ವತ ಜಗತ್ತಿನತ್ತ ಪಯಣ ಬೆಳೆಸಿದರು. ಸಮಾಧಿಯು ಬಿಜಾಪುರದ ಕೋಟೆಯ ಹೊರಭಾಗದಲ್ಲಿ

ಅಲ್ಲಾಪುರ ಕೋಟೆಬಾಗಿಲು ಬಳಿ ಇರುವುದು. ಒಂದು ನೆರಳುಳ್ಳ ಚೌಖಂಡಿಯ ನಡುವೆ ಹಜ್ರತ್‌ರ ಸಮಾಧಿ ಇರುವದು. ಸಾರ್ವಜನಿಕರ ದರ್ಶನಕ್ಕಾಗಿ ಹಜ್ರತ್‌ರ ಸಮಾಧಿಯು ಬಹು ಪ್ರಸಿದ್ಧ ದರ್ಗಾ ಆಗಿದೆ. ಹಜ್ರತ್‌ಶಾಹ್ ಅಬುಲ್‌ಹಸನ್ ಖಾದ್ರಿ(ಖ)ರಿಗೆ ಐವರು ಪುತ್ರರಿದ್ದರು. ಓರ್ವ ಸೈಯ್ಯದ್ ಅಬ್ದುಲ್‌ಖಾದಿರ್‌ರು, ಎರಡನೆಯವರು ಸೈಯ್ಯದ್ ನ್ಯಾಮತುಲ್ಲಾಹ್, ಮೂರನೆಯವರು ಸೈಯ್ಯದ್ ಬದ್ರುದ್ದೀನ್, ನಾಲ್ಕನೆಯವರು ಸೈಯ್ಯದ್ ಅಬುಲ್‌ಖಾಸಿಂ, ಐದನೆಯವರು ಸೈಯ್ಯದ್ ಮುಹಮ್ಮದ್ ಮೀರಾಂ ಖುದ್ದಸ್ಸಲ್ಲಾಹ್ ಅಸ್ರಾರಹಮ್ ಅಜ್ಮಯೀನ್ ಇವರಲ್ಲಿಯ ಹಜ್ರತ್ ಸೈಯ್ಯದ್ ಬದ್ರುದ್ದೀನ್ ಖುದ್ದುಸ್ಸಿರ್‍ರಾಹರು ದೆಹಲಿಗೆ ಹೋದರು ಹಾಗೂ ಅಲ್ಲಿಯೇ ನಿಧನ ಹೊಂದಿದರು. ಉಳಿದ ನಾಲ್ವರು ಪುತ್ರರು ಪವಾಡ ಪುರುಷರಾಗಿದ್ದರು ತಮ್ಮ ತಂದೆಯ ಸಮಾಧಿಯ ಬಳಿಯೇ ಸಮಾಧಿಸ್ಥರಾಗಿದ್ದಾರೆ. ಹಜ್ರತ್‌ರ ಸಂತಾನವು ಈ ಐದೂ ಪುತ್ರರಿಂದ ಜಾರಿಯಲ್ಲಿರುವದು. ಇವರಲ್ಲಿ ಅನೇಕರು ಸೂಫಿವರ್ಯರಾಗಿ ಪ್ರಸಿದ್ಧರಾಗಿರುವರು. ಬಿಜಾಪುರ, ಹಾಗೂ ಪರಾಂಡಾ ಮತ್ತು ಅನೇಕ ಸ್ಥಳಗಳಲ್ಲಿ ಬಹುವಾಗಿ ಉಪಸ್ಥಿತರಿರುವರು.

ಎಲ್ಲ ಪುತ್ರರಲ್ಲಿ ಜೇಷ್ಠಪುತ್ರರಾದ ಸೈಯ್ಯದ್ ಅಬ್ದುಲ್‌ಖಾದಿರ್ ಖಾದ್ರಿ(ಖ) ೧೭ನೆಯ ಜಿಲ್‌ಖೈದಾ ಹಿಜ್ರಿಶಕೆ ೧೦೬೮ಕ್ಕೆ ನಿಧನರಾದರು. ಇವರೂ ಸಹ ಮಹಾಪುರುಷರಾಗಿದ್ದರು. ಶಿಷ್ಯಗಣಕ್ಕೆ ಸತ್ಯ ಮಾರ್ಗದರ್ಶಕರಾಗಿದ್ದರು. ಇವರ ಪುತ್ರರಾದ ಹಜ್ರತ್ ಶಾಹ್ ಅಬುಲ್ ಹಸನ್ ಸಾನಿ (ದ್ವಿತೀಯ)(ಖ) ಸಿಕಂದರ್ ಆದಿಲ್‌ಶಾಹ್ ಹಾಗೂ ಶಾಹ್ ಆಲಂಗೀರ್‌ರ ಕಾಲದ ಪ್ರಸಿದ್ಧ ಮಹಾಪುರುಷರಲ್ಲಿ ಓರ್ವರಾಗಿದ್ದಾರೆ. ಅನೇಕ ಪವಾಡಗಳನ್ನು ಪ್ರದರ್ಶಿಸಿದ್ದರು. ಕಿತಾಬ್ 'ಮಖಾಜನ್ ಸಲಾಸಿಲ್ ಖಾದ್ರಿಯಾ' ಗ್ರಂಥವು ಇವರಿಂದ ಸಂಗ್ರಹಿಸಲ್ಪಟ್ಟಿದೆ ಹಾಗೂ ಖಾನಖಾಯೇ ಖಾದ್ರಿಯಾ ಅಂಬಾರ್‌ಖಾನಾದ ಸಮೀಪವಿದೆ ಅದು ಇವರಿಂದ ಸ್ಥಾಪಿಸಲ್ಪಟ್ಟಿದೆ. ಹಿಜ್ರಿಶಕೆ ೧೧೩೨ರಲ್ಲಿ ಈ ಲೋಕದಿಂದ ಸ್ವರ್ಗದೆಡೆಗೆ ಪಯಣಿಸಿದರು. ಇವರ ಸಮಾಧಿಸ್ಥಳವು ಕಣಕಾಲ ಗ್ರಾಮದಲ್ಲಿರುವದು. ಸೈಯ್ಯದ್ ಅಬ್ದುಲ್‌ಖಾದಿರ್‌ಖಾದ್ರಿ(ಖ) ಇವರ ಸಂತತಿಯಿಂದ ಸಾಹೇಬೆ ಸಜ್ಜಾದಾ ಎಂದರೆ ಸೈಯ್ಯದ್ ಅಬುಲ್ ಹಸನ್ ದ್ವಿತೀಯ ಇವರ ಮೊಮ್ಮಗ ಸೈಯ್ಯದ್‌ಶಾಹ್ ಹುಸೈನ್‌ಬಿನ್ ಸೈಯ್ಯದ್‌ಶಾಹ್ ಸಿಂಧನೂರ್ ನೂರುಲ್ಲಾಹ್ ಖಾದ್ರಿ ಜಾಗೀರದಾರ ಹತ್ತಿ ಗ್ರಾಮ, ತಾಲೂಕಾ ಹಾಗೂ ಇವೆರಡೂ ಹುಸೇನಪುರ ಗ್ರಾಮ, ತಾ. ನಾನ್ವಿ ದಖ್ಖನ್ನಿನ ಹೈದ್ರಾಬಾದ್‌ನಲ್ಲಿ ಬರುವವು. ಹಜ್ರತ್ ಸೈಯ್ಯದ್ ನ್ಯಾಮತುಲ್ಲಾಹ್ ಖಾದ್ರಿ ತಮ್ಮ ಸಹೋದರನ ಪುತ್ರನಾದ ಸೈಯ್ಯದ್ ಅಬುಲ್‌ಹಸನ್ ದ್ವಿತೀಂಯುರಿಗೆ ತಮ್ಮ ಉತ್ತರಾಧಿಕಾರಿ ಹಾಗೂ ಪೀಠಾಧಿಕಾರಿಯನ್ನಾಗಿಸಿದ್ದರು. ಹಜ್ರತ್ ಜುನ್ನೇರ್ ಸೈಯ್ಯದ್ ಬದ್ರುದ್ದೀನ್ ಇವರ

ಸಂತತಿಯು ಇರುವದು. ಹಜ್ರತ್ ಸೈಯ್ಯದ್ ಅಬುಲ್ ಖಾಸಿಂ ಇವರ ಸಂತತಿಯು ಬಿಜಾಪುರದಲ್ಲಿ ಸೈಯ್ಯದ್ ಖಾಸಿಂ ಸಾಬ ಬಿನ್ ಸೈಯ್ಯದ್ ಹಸನ್ ಖಾದ್ರಿ ಹಾಗೂ ಸೈಯ್ಯದ್ ಖಾದಿರ್ ಪಾಶಾಸಾಹೇಬ್ ಇಬ್ನ ಸೈಯ್ಯದ್ ಸಾಹೇಬ ಪೀರ್‌ಸಾಹೇಬರು ಇರುವರು. ಹಜ್ರತ್ ಸೈಯ್ಯದ್ ಮುಹಮ್ಮದ್ ಮೀರಾಂ ಖುದ್ದಿಸ್ಸಿರ್ರಾಹರ ಸಂತತಿಯಿಂದ ಸೈಯ್ಯದ್‌ಹುಸೇನ್, ಸೈಯ್ಯದ ಯೂಸುಫ್ ಸೈಯ್ಯದ್ ಬುರ್ಹಾನ್‌ರು ಈ ಮೂವರು ಸೈಯ್ಯದ್ ಫರೀದ್‌ರ ಮಕ್ಕಳು ಆಸಾರ್ ಷರೀಫದ ಸಮೀಪ ಇರುವರು.

■

೩೪. ಹಜ್ರತ್‌ಶಾಹ್ ಮುಸ್ತಫಾ ಖಾದ್ರಿ (ಖು)

ಇವರು ತಮ್ಮ ಹಿರಿಯ ಸಹೋದರರಾದ ಹಜ್ರತ್ ಅಬುಲ್ ಹಸನ್ ಖಾದ್ರಿಯವರ ಜೊತೆಯಾಗಿ ಮುಹಮ್ಮದಾಬಾದ್ ಬೀದರ್‌ನಿಂದ ಈ ಪಟ್ಟಣಕ್ಕೆ ಆಗಮಿಸಿದರು.

ಸದಾಕಾಲ ಆರಾಧನೆಯಲ್ಲಿ ತೊಡಗಿ ಅಲ್ಲಾಹುವಿನ ಸಾಂಗತ್ಯದಲ್ಲಿದ್ದು ತಮ್ಮ ಇಂದ್ರಿಯಗಳ ಮೇಲೆ ಹಿಡಿತ ಸಾಧಿಸಿ ನಿರಂತರ ಧ್ಯಾನಮಗ್ನರಾಗಿರುತ್ತಿದ್ದರು. ಹಾಗೂ ತಮ್ಮ ಆರಾಧನೆಯನ್ನು ಜನರಿಂದ ಗೌಪ್ಯವಾಗಿಡುತ್ತಿದ್ದರು ಹಾಗೂ ಜಗದತ್ತ ವೈರಾಗ್ಯ ಭಾವನೆ ಬೆಳೆಸಿಕೊಂಡಿರುತ್ತಿದ್ದರು.

ಯಾವಾಗಲಾದರೂ ಬಾದಶಾಹ್ ಹಾಗೂ ಅಮೀರರು ಇವರ ದರ್ಶನ ಪಡೆಯಲು ಇಚ್ಛಿಸುತ್ತಿದ್ದರು ಆದರೆ ಅವರನ್ನು ದೂರವೇ ಇಡುತ್ತಿದ್ದರು. 'ಸಹೀಫತುಲ್‌ಹುದಾ' ಗ್ರಂಥದಲ್ಲಿ ಹೀಗೆ ಬರೆಯಲಾಗಿದೆ. ಸುಲ್ತಾನ್ ಇಬ್ರಾಹಿಂ ಆದಿಲ್‌ಶಾಹನು ಇವರ ಪವಾಡಗಳನ್ನು ಹಾಗೂ ಏಕಾಂತವಾಸವನ್ನು ಗ್ರಹಿಸಿ ಇವರ ಖ್ಯಾತಿಯನ್ನು ತಿಳಿದು ಇವರಿಗೆ ಭೇಟಿಯಾಗಬಯಸಿದನು. ಆದರೆ ಹಜ್ರತ್‌ರು ನಿರಾಕರಿಸಿದರು. ಬಾದಶಾಹನ ದರ್ಬಾರಿನಲ್ಲಿಯ ಓರ್ವ ವ್ಯಕ್ತಿಯು ಹಜ್ರತ್‌ರ ಶ್ರದ್ಧಾಳುವಾಗಿದ್ದನು. ಈ ಸಂದರ್ಭದಲ್ಲಿ ಇವರ ಭೇಟಿಯ ಕುರಿತು ಈ ವ್ಯಕ್ತಿಯನ್ನು ಬಾದಶಾಹನು ಕೇಳಿದನು. ಅದಕ್ಕುತ್ತರವಾಗಿ ಆ ವ್ಯಕ್ತಿ ಹೀಗೆಂದನು. ಮುಂಜಾವಿನ ನಮಾಜಿನ ನಂತರ ಹಜ್ರತ್‌ರು ಧ್ಯಾನದಲ್ಲಿ ನಿರತರಾಗಿರುತ್ತಾರೆ ಹಾಗೂ ಅವರ ಕೋಣೆಯ ಬಾಗಿಲು ತೆರೆದಿರುತ್ತದೆ. ನಾನೂ ಸಹ ಅಲ್ಲಿಯೇ ಇರುವೆನು. ಒಂದು ವೇಳೆ ಬಾದಶಾಹರು ಯಾವುದೇ ಒಂದು ದಿನ ಮುಂಜಾನೆ ಓರ್ವರೇ ಅಲ್ಲಿ ತಲುಪಿದರೆ ಭೇಟಿಯಾಗಬಹುದು. ಬಾದಶಹನು ಮರುದಿನವೇ ಯಾವುದೇ ಡಂಬ, ತೋರಿಕೆಯನ್ನು ಮಾಡದೇ ಕೆಲ ಆಪ್ತರೊಂದಿಗೆ ಹಜ್ರತ್‌ರ ಬಳಿ ತಲುಪಿದನು. ಹಜ್ರತ್‌ರು ಜಪದಲ್ಲಿ ತೊಡಗಿದ್ದರು. ಬಾದಶಹನತ್ತ

ಸ್ವಲ್ಪವೂ ಗಮನ ನೀಡಲಿಲ್ಲ. ಧ್ಯಾನಸ್ಥ ಸ್ಥಿತಿಯಿಂದ ಹೊರಬಂದಾಗ ಆ ಸೇವಕನು ಹೀಗೆ ಹೇಳಿದನು. ಇವರು ಇಬ್ರಾಹಿಂ ಆದಿಲ್‌ಶಾಹ್ ದೊರೆಯಾಗಿರುವರು. ಹಜ್ರತ್‌ಶಾಹ್ ಮುಸ್ತಫಾ(ಖು)ರು ಬಾದಶಾಹನತ್ತ ತಿರುಗಿ ಹೀಗೆಂದರು. ಇಲ್ಲಿಗೆ ಬರುವ ಉದ್ದೇಶವೇನು? ಬಾದಶಾಹನು ನಿಮ್ಮ ದರ್ಶನಗೈಯ್ಯುವುದೇ ನನ್ನ ಉದ್ದೇಶವಾಗಿತ್ತು. ಏಕೆಂದರೆ ಇದರಲ್ಲಿ ಸಮೃದ್ಧಿ ಇರುವದು. ಹಜ್ರತ್‌ರು ಹೀಗೆಂದರು ಭೇಟಿಯಂತೂ ಆಯಿತು. ಈಗ ಹೋಗಿ! ಬಾದಶಾಹನಿಗೆ ಇದರಿಂದ ಬಹಳೇ ಖೇದ ಉಂಟಾಯಿತು. ವಿಷಾದದೊಂದಿಗೆ ಹೀಗೆಂದನು. ಭೇಟಿಯಂತೂ ಆಯಿತು. ಪವಾಡವನ್ನು ನಿರೀಕ್ಷಿಸುತ್ತಿದ್ದೇನೆ. ಹಜ್ರತ್‌ರು ಗಾಂಭೀರ್ಯದಿಂದ ಕೋಣೆಯ ಮೇಲ್ಭಾಗದತ್ತ ದೃಷ್ಟಿ ಹರಿಸಿದರು. ತಕ್ಷಣ ಒಂದು ಪ್ರಕಾಶದ ಕಿರಣವು ಹಜ್ರತ್ ಹಾಗೂ ಬಾದಶಾಹನ ನಡುವೆ ಬಂದಿತು ಬಾದಶಾಹನ ಕಣ್ಣುಗಳು ಅದನ್ನು ನೋಡಲಾಗದೇ ಮುಚ್ಚಿಕೊಂಡವು. ಒಂದು ಕ್ಷಣದ ನಂತರ ಹಜ್ರತ್‌ರ ಗಾಂಭೀರ್ಯವು ಶಾಂತತೆ ಪಡೆಯಿತು. ಹಾಗೂ ಪ್ರಕಾಶ ಮಾಯವಾಯಿತು. ಆಗ ಹಜ್ರತರು ಹೀಗೆಂದರು ಇದು ಚಂದ್ರನ ತಂಪು ಪ್ರಕಾಶವಾಗಿತ್ತು. ಒಂದು ವೇಳೆ ಸೂರ್ಯನ ಬೆಳಕು ಪ್ರಕಾಶವಾಗಿದ್ದರೆ ಅದರ ಶಾಖದಿಂದ ಬಾದಶಾಹನ ಮುಖವು ಕಪ್ಪಾಗಾಗುತ್ತಿತ್ತು. ಓ ಬಾದಶಾಹನೇ ಯಾರು ಈ ಜಗತ್ತಿನಿಂದ ವಿಮುಖರಾಗಿರುವರು. ಜನರಿಂದ ದೂರವಾಗಿ ಏಕಾಂತವಾಸಿಯಾಗಿರುವರು ಅವರ ಪರೀಕ್ಷೆ ತೆಗೆದುಕೊಳ್ಳಬೇಡ ಹಾಗೂ ಅವರ ಸಮಯವನ್ನು ವ್ಯರ್ಥಗೊಳಿಸಬೇಡ. ಇಷ್ಟನ್ನು ಕೇಳಿದ ಬಾದಶಾಹನು ಅಲ್ಲಿಂದ ಮರಳಿ ಹೋದನು. ಹಜ್ರತ್‌ರು ಆ ದಿನದಿಂದ ಆ ಕೋಣೆಯಿಂದ ಹೊರ ಬರಲಿಲ್ಲ. ಮತ್ತು ಹೀಗೆಂದರು ಫಕೀರನ ರಹಸ್ಯ ಬಹಿರಂಗವಾಯಿತು. ಹಾಗೂ ನಂತರ ೮ನೆಯ ದಿನವೇ ಈ ಲೋಕಕ್ಕೆ ವಿದಾಯ ಹೇಳಿದರು. ಹಜ್ರತ್‌ರ ಸಮಾಧಿಯು ತಮ್ಮ ಹಿರಿಯ ಸಹೋದರರಾದ ಶಾಹ್ ಅಬುಲ್‌ಹಸನ್ ಖಾದ್ರಿಯವರ ಸಮಾಧಿಯ ಪಕ್ಕದಲ್ಲಿ ಇರುವುದು ಇವರ ಪುತ್ರ ಹಾಗೂ ಪೀಠಾಧಿಪತಿ ಹಜ್ರತ್ ಸೈಯ್ಯದ್ ಅಬ್ದುಲ್ ಖಾದಿರ್‌ಖಾದ್ರಿ(ಖು)ರೂ ಸಹ ಇಲ್ಲಿಯೇ ಸಮಾಧಿಸ್ಥರಾಗಿರುವರು. ಇವರ ಸುಪುತ್ರ ಹಜ್ರತ್ ಸೈಯ್ಯದ್ ಷಮ್ಶುದ್ದೀನ್ ಖಾದ್ರಿ(ಖು)ರು ಆಧ್ಯಾತ್ಮಿಕ ಜ್ಞಾನದಲ್ಲಿ ಬಹಳ ಉನ್ನತದರ್ಜೆಯ ಸೂಫಿಗಳಾಗಿದ್ದರು. ಇವರು ಜಮಾದಿಲ್ ಆಖಿರ್‌ದ ೬ನೆಯ ದಿನಾಂಕ ಹಿಜ್ರಿಶಕೆ ೧೧೨೮ರಲ್ಲಿ ಈ ತಂಗುದಾಣವನ್ನು ತ್ಯಜಿಸಿ ಶಾಶ್ವತಲೋಕಕ್ಕೆ ನಿರ್ಗಮಿಸಿದರು. ಇವರ ಸಮಾಧಿಸ್ಥಳವು ಜಾಗೀರು ಗ್ರಾಮವಾದ ಗೋಮರ್ಸಿ ಗ್ರಾಮ, ತಾಲೂಕಾ ಸಿಂಧನೂರದಲ್ಲಿದೆ. ಇವರ ಸಂತತಿಯವರು ಬಿಜಾಪುರದ ಸುತ್ತಮುತ್ತಲು ವಾಸಿಸುತ್ತಿರುವರು ಅವರಲ್ಲಿ ಬಹಳಷ್ಟು ಜನ ಮಹಾಪುರುಷರು ಆಗಿ ಹೋಗಿದ್ದಾರೆ.

ಹಜ್ರತ್ ಶಮ್ಸುದ್ದೀನ್ ಖಾದ್ರಿಯವರಿಗೆ ಐವರು ಪುತ್ರರಿರುವರು. ಸೈಯ್ಯದ್ ಅಬ್ದುಲ್ ಖಾದಿರ್, ಸೈಯ್ಯದ್ ಅಬುತುರಾಬ್, ಸೈಯ್ಯದ್ ಅಬ್ದುಲ್ ಲತೀಫ್, ಸೈಯ್ಯದ್ ಮುರ್ತುಜಾ, ಸೈಯ್ಯದ್ ಮುಸ್ತಫಾ(ಖು) ಇವರಲ್ಲಿ ಸೈಯ್ಯದ್ ಅಬ್ದುಲ್ ಖಾದಿರ್, ಸೈಯ್ಯದ್ ಅಬುತುರಾಬ್, ಸೈಯ್ಯದ್ ಮುಸ್ತಫಾರ(ಖು) ಸಂತತಿ ಇರುವದಿಲ್ಲ. ಆದರೆ ಸೈಯ್ಯದ್ ಅಬ್ದುಲ್ ಲತೀಫ್ ಹಾಗೂ ಸೈಯ್ಯದ್ ಮುರ್ತುಜಾ ಖಾದ್ರಿ ಬಿಜಾಪುರದಲ್ಲಿ ಇರುವರು ಹಾಗೂ ಸೈಯ್ಯದ್ ಮುರ್ತುಜಾರ ಸಂತಾನದಿಂದ ಸೈಯ್ಯದ್ ಮೆಹಮೂದ ಉರ್ಫ್ ಸಂದಾನಿಸಾಬ್ ಗೋಮರ್ಸಿ ಗ್ರಾಮ ತಾಲೂಕಾ ಸಿಂಧನೂರದಲ್ಲಿರುವರು.

■

೩೫. ಹಜ್ರತ್ ಶಾಹ್ ಅಬ್ದುಲ್ ರಜಾಕ್ ಖಾದ್ರಿ (ಖು)

ಇವರು ಪಜ್ರತ್ ಅಗಸಿ ಪೀರಾನೆ ಪೀರ್ ಸೈಯದ್ ಮುಹಿಯುದ್ದೀನ್ ಜಿಲಾನಿಯವರ ವಂಶಸ್ಥರಾಗಿರುವರು. ಈ ಪಟ್ಟಣದ ಪ್ರಸಿದ್ಧ ಔಲಿಯಾಗಳಲ್ಲಿ ಓರ್ವರಾಗಿರುವರು. ತಮ್ಮ ಪೂರ್ವಜರಿಂದ ಬೈಯತ್ ಹಾಗೂ ಖಿಲಾಫತ್ ಪಡೆದರು. ಸುಲ್ತಾನ್ ಮುಹಮ್ಮದ್ ಆದಿಲ್‌ಶಾಹನ ಅವಧಿಯಲ್ಲಿ ಬಗದಾದ್‌ದಿಂದ ವಿಜಾಪುರಕ್ಕೆ ಆಗಮಿಸಿದರು. ಇವರ ಮಾರ್ಗದರ್ಶನದ ಬೆಳಕಿನಲ್ಲಿ ಒಂದು ಜನಸಮುದಾಯವೇ ಮಿಂದೆದ್ದಿತು. ಬಾದ್‌ಶಾಹ್ ಹಾಗೂ ಅಧಿಕಾರಿವರ್ಗ ಇವರೊಡನೆ ವಿಶ್ವಾಸದಿಂದ ಹಾಗೂ ಗೌರವಾದರಗಳಿಂದ ನಡೆದುಕೊಳ್ಳುತ್ತಿದ್ದರು. ಸುಲ್ತಾನ್ ಮುಹಮ್ಮದ್ ಆದಿಲ್‌ಶಾಹ್‌ನ ಮಂತ್ರಿಯಾದ ಖಾನ್ ಮುಹಮ್ಮದ್‌ಖಾನ್‌ನು ಇವರ ಮುರೀದ್(ಶಿಷ್ಯ)ನಾಗಿದ್ದನು. ಹಜ್ರತ್ ಶೇಖ ಇಬ್ರಾಹಿಂ ಬಗದಾದಿಯವರು ಜ್ಞಾನವೃದ್ಧರು ಹಾಗೂ ಆರಾಧನೆಯಲ್ಲಿ ಮಹಾಪುರುಷರಾಗಿ ಪ್ರಸಿದ್ಧರಾಗಿದ್ದರು. ಇವರು ಹಜ್ರತ್‌ಅಬ್ದುಲ್‌ರಜಾಕ್ ಖಾದ್ರಿಯವರ ಖಲೀಫಾ ಆಗಿದ್ದರು. ಇವರು ಹಜ್ರತ್‌ಶಾಹ್ ಹಾಷಿಂ ಪೀರ್ ದಸ್ತಗೀರ್ ಹುಸೈನಿ ಅಲ್ವಿಯವರೊಂದಿಗೆ ಗಾಢವಾದ ಸ್ನೇಹ ಹೊಂದಿದ್ದರು. ಬಹಳಷ್ಟು ಸೂಫಿಗಳು ಶಾಹ್ ಕಾಸಿಂ ಖಾದ್ರಿ, ಶಹ್ ಮುರ್ತುಜಾ ಶೇಖ ಅಬ್ದುಸ್ಸಮದ್ ಕನ್‌ಆನಿಯವರ ಕರಾಮತ್ತುಗಳು ಸುಪ್ರಸಿದ್ಧವಾಗಿದ್ದವು. ಇವರ ಸಮಕಾಲೀನರಾಗಿದ್ದರು. ಒಂದು ಉಲ್ಲೇಖದಂತೆ ಸುಲ್ತಾನ್ ಮುಹಮ್ಮದ್ ಆದಿಲ್‌ಶಾಹ್ ತನ್ನ ಪ್ರಾರಂಭಕಾಲದಲ್ಲಿ ಹಜ್ರತ್ ಅಬ್ದುಲ್‌ರಜಾಕ್ ಖಾದ್ರಿ(ಖ)ರ ಕುರಿತು ಸಂಶಯವುಳ್ಳವನಾಗಿದ್ದನು. ಇವರ ಅಂತರ್‌ಜ್ಞಾನದ ಹಿರಿಮೆಯ ಕುರಿತು ಅಜ್ಞಾನಿಯಾಗಿದ್ದನು. ಹಜ್ರತ್ ಶಾಹ್ ಹಾಷಿಂ ಪೀರ್ (ಖ)ರು ಈತನ ಸಂದೇಹವನ್ನು

ಹೃದಯದಿಂದ ದೂರಗೊಳಿಸಿದರು. ಇವರ ಶ್ರೇಷ್ಠತೆ ಹಾಗೂ ಉನ್ನತದರ್ಜೆಯ ಪರಿಚಯ ಮಾಡಿಕೊಟ್ಟರು. ಒಂದುದಿನ ಹಜ್ರತ್‌ಶಾಹ್ ಹಾಷಿಂ ಪೀರ್ (ಖಿ) ಹಜ್ರತ್ ಅಬ್ದುಲ್ ರಜಾಕ್ ಖಾದ್ರಿ (ಖಿ)ರ ಮನೆಗೆ ಹೋದರು. ಈರ್ವರೂ ಮಹಾಪುರುಷರು ಸಮಾಲೋಚನೆಯಲ್ಲಿ ತೊಡಗಿದ್ದರು. ಅದೇ ಸಮಯದಲ್ಲಿ ಸುಲ್ತಾನ್ ಮುಹಮ್ಮದ್‌ನೂ ಸಹ ಅಲ್ಲಿ ತಲುಪಿದನು ಹಾಗೂ ಈರ್ವರೂ ಮಹಾಪುರುಷರ ದರ್ಶನ ಪಡೆದರು. ಒಂದು ಕ್ಷಣದ ನಂತರ ಹಜ್ರತ್‌ಶಾಹ್ ಹಾಷಿಂಪೀರ್‌ರು ಸುಲ್ತಾನ್ ಮುಹಮ್ಮದನಿಗೆ ಕೋಣೆಯ ಗೋಡೆಯ ಕಡೆಗೆ ಸಂಜ್ಞೆ ಮಾಡಿದರು. ಯಾವ ಗೋಡೆಯು ಅಬ್ದುಲ್ ರಜಾಕ್ ಖಾದ್ರಿಯವರ ಬೆನ್ನ ಹಿಂದೆ ಇತ್ತು, ಬಾದಶಹನು ಆ ಕಡೆಗೆ ಚಿತ್ತಹರಿಸಿದನು. ಏನು ನೋಡುತ್ತಾನೆ? ಗೋಡೆಯಲ್ಲಿ ಅದೃಶ್ಯದಿಂದ ಒಂದು ಬಾಗಿಲು ತೆರೆಯಿತು. ಆ ಕಡೆಗೆ ಹೋಗಿ ಅಲ್ಲಿ ಏನಿದೆ ಎಂದು ನೋಡುವ ಇಚ್ಛೆಪಟ್ಟು ಹೋದನು. ಬಾಗಿಲಿನ ಆಚೆ ಕಾಲಿಟ್ಟನು. ಅಲ್ಲಿಯ ಅದ್ಭುತ ದೃಶ್ಯವು ತನ್ನ ನಾಡಿನದ್ದಾಗಿರಲಿಲ್ಲ. ಬೇರೆಯೇ ಪ್ರದೇಶದ್ದಾಗಿತ್ತು. ತುಂಬಿ ಹರಿಯುವ ನದಿ, ಹಣ್ಣು ಹಂಪಲುಗಳ ಗಿಡಮರಗಳು, ಸುಂದರ ಉದ್ಯಾನಗಳು, ಯಾವ ಕಡೆ ನೋಟಹರಿಸಿದರೂ ಹಸಿರು ಉದ್ಯಾನಗಳು ಹಾಗೂ ಕಾರಂಜಿಗಳು. ಅವುಗಳ ನಡುವೆ ಒಂದು 'ಮಹಲ್' (ಅರಮನೆ) ಕಂಡುಬಂದಿತು. ಅದರೊಳಗೆ ಹೋಗಿ ನೋಡುತ್ತಾನೆ. ಅಲ್ಲಿ ಅತ್ಯಮೂಲ್ಯ ಮುತ್ತುಗಳಿದ್ದುವು. ಅವುಗಳನ್ನು ತೆಗೆದುಕೊಳ್ಳಬಯಸಿದನು. ಆಗ ಭಟರು ಒಡೆಯನ ಅಪ್ಪಣೆಯಿಲ್ಲದೇ ತೆಗೆದುಕೊಳ್ಳಬೇಡಿರಿ ಎಂದರು. ಆಗ ಬಾದಶಹ ಕೇಳಿದನು, 'ಒಡೆಯನು' ಯಾರಿರುವರು ಹಾಗೂ ಆತನಿಗೆ ಅತ್ಯಮೂಲ್ಯ ಹಾಗೂ ಅಪಾರ ಮುತ್ತುಗಳು ಎಲ್ಲಿಂದ ದೊರೆತವು. ಆಗ ಅದಕ್ಕುತ್ತರವಾಗಿ ಹೀಗೆಂದನು, ಇದು ಹಜ್ರತ್‌ಶಾಹ್ ಅಬ್ದುಲ್ ರಜಾಕ್ ಖಾದ್ರಿ(ಖಿ)ಯವರಿಗೆ ಸೇರಿದ್ದಾಗಿದೆ. 'ಜಿನ್'(ಯಕ್ಷ)ಗಳ ರಾಜನು ಹಜ್ರತ್‌ರ ಶಿಷ್ಯನಿರುವನು. ಆತನು ಈ ಮುತ್ತು, ರತ್ನ, ವಜ್ರ, ವೈಢೂರ್ಯಗಳನ್ನು ಪುರಸ್ಕಾರರೂಪದಲ್ಲಿ ನೀಡಿರುವನು. ಸುಲ್ತಾನ್ ಮುಹಮ್ಮದ್‌ನು ಈ ಮಾತಿನಿಂದ ಆಶ್ಚರ್ಯಚಕಿತನಾದನು ಹಾಗೂ ಅಲ್ಲಿಂದ ಮರಳುವ ಇಚ್ಛೆ ಹೊಂದಿದನು. ಕೆಲ ಹಜ್ಜೆ ಮರಳಿದಾಗ ಆ ಪ್ರದೇಶ ಮಾಯವಾಯಿತು. ಮತ್ತೆ ಅದೇ ಹಜ್ರತ್ ಶಾಹ್ ಅಬ್ದುಲ್ ರಜಾಕ್ ಖಾದ್ರಿಯವರ ಬೆನ್ನು ಹಿಂದಿನ ಬಾಗಿಲು ಕಂಡಿತು. ಕೋಣೆಯಲ್ಲಿ ದಾಖಲಾಗಿ ನೋಡುತ್ತಾನೆ. ಅಲ್ಲಿ ಈರ್ವರೂ ಮಹಾಪುರುಷರು ಸಮಾಲೋಚನೆಯಲ್ಲಿ ತೊಡಗಿದ್ದಾರೆ. ಬಾದಶಹನು ತನ್ನ ತಪ್ಪನ್ನು ತಿದ್ದಿಕೊಂಡು ಹಜ್ರತ್‌ರಲ್ಲಿ ಕ್ಷಮೆ ಯಾಚಿಸಿದನು. ಆ ದಿನದಿಂದ ಹಜ್ರತ್‌ರ ಔನ್ನತ್ಯವನ್ನು ಮನಗಂಡನು. ಹಜ್ರತ್‌ರ ನಿಧನವು ಹಿಜ್ರಿ ಶಕೆ ೧೦೫೧ರಲ್ಲಿ ಆಯಿತು. ಇವರ ಸಮಾಧಿಯು ಪ್ರಸ್ತುತ ಕೇಂದ್ರ ಬಸ್‌ನಿಲ್ದಾಣದ ಹಿಂದೆ ಇರುವುದು. ಇದು ಜೋಡುಗುಮ್ಮಟವೆಂದು ಪ್ರಸಿದ್ಧವಾಗಿದೆ.

ಪಟ್ಟಣದೊಳಗೆ ಮಕ್ಕಾ ದ್ವಾರದ ಸಮೀಪ ತಮ್ಮ ಖಾನ್‌ಖಾಹ್‌ದ ಹತ್ತಿರ ಸಮಾಧಿಸ್ಥರಾಗಿರುವರು. ಇವರ ಸಮಾಧಿಯ ಮೇಲೆ ಗುಂಬಜ್ ಕಟ್ಟಲ್ಪಟ್ಟಿದೆ. ಹಾಗೂ ಇಲ್ಲಿ ಜನರು ಸಮೃದ್ಧಿಯನ್ನು ಪಡೆಯುವರು. ಗುಂಬಜಿನ ಒಳಗೆ ಸಮಾಧಿಯ ಬಲಭಾಗದಲ್ಲಿ ಇವರ ಧರ್ಮಪತ್ನಿಯವರ ಸಮಾಧಿ ಇರುವದು ಹಾಗೂ ಎಡಭಾಗದಲ್ಲಿ ಇವರ ಸುಪುತ್ರರಾದ ಹಜ್ರತ್ ಸೈಯ್ಯದ್ ಅಬ್ದುಲ್‌ಖಾದಿರ ಉರ್ಫ್ ಶಾಹ್ ಹಜ್ರತ್ ಖಾದ್ರಿ (ಖು)ರು ಸಮಾಧಿಸ್ಥರಾಗಿರುವರು ಜನಾಬ ಶಾಹ್ ಹಜ್ರತ್ ಖಾದ್ರಿ ಖುದ್ದಿಸ್ಸಿರ್ರಾಹು ತಮ್ಮ ತಂದೆಯವರ ಬಳಿಕ ಉತ್ತರಾಧಿಕಾರಿಯಾಗಿ ಜ್ಞಾನಾರ್ಥಿಗಳಿಗೆ ಮಾರ್ಗದರ್ಶನ ನೀಡುತ್ತಿದ್ದರು. ಹಜ್ರತ್‌ರು ರಜ್ಜಬದ ೧೬ನೆಯ ದಿನಾಂಕದಂದು ಇಹಲೋಕ ತ್ಯಜಿಸಿದರು. ಹಾಗೂ ಖಾನ್ ಮುಹಮ್ಮದ್ ಖಾನ್‌ಖಾನಾನ್ ಹಜ್ರತ್ ಅಬ್ದುಲ್ ರಜಾಕ್ ಖಾದ್ರಿಯವರ ಅಡಿಯಲ್ಲಿ ಸಮಾಧಿಸ್ಥರಾಗಿರುವರು. ಇವರ ಗೋರಿಯ ಮೇಲೆ ಒಂದು ಸುಂದರ ಅಷ್ಟಕೋನದ ಗುಂಬಜವು ನಿರ್ಮಿಸಲ್ಪಟ್ಟಿದೆ.

ಇವರ ಸಂತತಿ ಇರುವುದಿಲ್ಲ ಹಾಗೂ ಖಾನ್ ಮುಹಮ್ಮದ್ ಖಾನ್‌ಖಾನಾನ್ ಉರ್ಫ್ ಖವ್ವಾಸಖಾನ್ ಮಂತ್ರಿವರ್ಯನ ಸಂತತಿಯಿಂದ ಗುಂದಗಿ ಗ್ರಾಮದಲ್ಲಿ ಹುಸೈನ್‌ಸಾಬ ಎಂಬುವವರು ಇರುವರು. ಅವರ ಪುತ್ರಿಯ ಸಂತಾನವಾಗಿ ಸೈಯ್ಯದ್ ಸಾಬ್ ಇದ್ರುಸ್ ಇನಾಮದಾರ ಬಾಗೇವಾಡಿ ತಾಲೂಕಿನ ಮನಗೂಳಿ ಗ್ರಾಮದಲ್ಲಿ ಇರುವರು.

■

೩೬. ಹಜ್ರತ್‌ಶಾಹ್ ಹಾಷಿಂ ಹುಸೈನಿ ಅಲ್ವಿ ಖುದ್ದುಸ್ಸ್‌ಲ್ಲಾಹ್ ಸರ್‌ರಯಿಲ್ ಅಜೀಜ್

ಇವರು 'ಸುಲ್ತಾನುಲ್ ವಾಸಲೀನ್' ಅಂದರೆ ಅಲ್ಲಾಹುವಿನತ್ತ ಮಾನವ ಚಿತ್ತ ಜೋಡಿಸುವವರ ದೊರೆಯಾಗಿದ್ದರು. 'ಬುರ್ಹಾನುಲ್ ಆರಿಫೀನ್' ಎಂದರೆ ಸ್ಪಷ್ಟವಾಗಿ ಆಧಾರಸಹಿತ ಪರಮಾತ್ಮನೊಡನೆ ಸಂಪರ್ಕ ಅನುಭವಿಸುವ, ಕಲ್ಪಿಸುವ ಅನುಭಾವಿಗಳಾಗಿದ್ದ ಹಜ್ರತ್ ಮಿಯಾ ಷಾಹ್ ವಜಿಯುದ್ದೀನ್ ಅಲ್ವಿ ಗುಜ್ರಾತಿ-(ಖು)ಯವರ ಸಹೋದರರ ಸುಪುತ್ರರಾಗಿದ್ದಾರೆ. ಇವರು 'ಮುಕ್ತದಾಯೆ ಸಾಲಿಕಾನವ ಪೇಶ್ವಾಯೆ ಆರೀಫಾನ್ ಎಂದರೆ ಯಾರ ಮಾರ್ಗದರ್ಶನದಲ್ಲಿ ಜನರು ಅಲ್ಲಾಹುವಿನ ಸಾಮಿಪ್ಯ ಹೊಂದುವ ಅನುಭಾವಿಗಳಾಗಲು ಮುಂದುವರಿಯುತ್ತಿದ್ದರೋ ಅವರ ಧಾರ್ಮಿಕ ನಾಯಕರೂ ಹಾಗೂ ಉನ್ನತ ದರ್ಜೆಯ ಸೂಫಿಗಳ ಗುರುಗಳೂ ಆಗಿದ್ದರು. 'ಗೌಸೆಏ ಖಲಾಯಕ್' ಎಂದರೆ ಜನರ ತೊಂದರೆ ಆಲಿಸಿ ಪರಿಹರಿಸುವವರು.

'ಕುತ್ಬೆಆಲಮ್' ಎಂದರೆ ಅನುಭಾವಿಗಳ ಸರ್ದಾರರಾಗಿದ್ದರು ಮತ್ತು ಉನ್ನತ ದರ್ಜೆಯ ಸೂಫಿವರ್ಯರಾಗಿದ್ದರು.

ಸುಲ್ತಾನ ಇಬ್ರಾಹಿಂ ಆದಿಲ್‌ಷಾಹ್ ಜಗದ್ಗುರುವಿನ ಅವಧಿಯಲ್ಲಿ ಈ ಭೂಭಾಗಕ್ಕೆ ತಮ್ಮ ಪವಿತ್ರ ಪಾದಸ್ಪರ್ಶಿಸಿ ಪಾವನಗೊಳಿಸಿದರು. ಕೆಲ ಸಮಯದವರೆಗೆ ಜೊಹರಾಪುರದಲ್ಲಿ ತಂಗಿದ್ದರು. ಅದರ ನಂತರ ನಗರ ಮಧ್ಯದಲ್ಲಿ ಆಗಮಿಸಿದರು. ಇವರ ಉಪದೇಶ ಹಾಗೂ ಮಾರ್ಗದರ್ಶನದ ಮುಖಾಂತರ ಸಾವಿರಾರು ಜ್ಞಾನಾರ್ಥಿಗಳು ಧರ್ಮ ಸೂಕ್ಷ್ಮಗಳನ್ನು, ಧಾರ್ಮಿಕ ಜ್ಞಾನವನ್ನು ಪಡೆದರು. ಹಾಗೂ ಒಳಹೊರಗನ್ನು ಬೆಳಗಿಕೊಂಡು ಬದುಕನ್ನು ಹಸನಾಗಿಸಿಕೊಂಡರು. ಅಂತರ್ಬಾಹ್ಯ ಆಚರಣೆ ನಡೆ, ನುಡಿ ಒಂದೇ ಆದವು. ಹೀಗೆ ಉನ್ನತ ದರ್ಜೆಗೆ ತಲುಪಿದರು. ಹಜ್ರತ್ ಹಾಷಿಂಪೀರರು ಸ್ವತಃ ಹೀಗೆ ನುಡಿಯುತ್ತಾರೆ ನನ್ನ ಮಾರ್ಗದರ್ಶನದಿಂದ ಐದು ಸಾವಿರದ ಐದು ನೂರು ಜನರು ಜ್ಞಾನ ಸಮೃದ್ಧಿ ಪಡೆದು ಅಲ್ಲಾಹುವಿಗೆ ತಲುಪಿದರು. ಹೀಗೆಯೇ ಅಲ್ಲಾಹುವಿನೊಂದಿಗೆ ಪ್ರಾರ್ಥಿಸಿರುವೆನು. ನನ್ನ ಶಿಷ್ಯಗಣ ಹಾಗೂ ನನ್ನನ್ನು ಅನುಸರಿಸುವವರಿಗೆ ಇಹಪರಗಳೆರಡರಲ್ಲೂ ಯಾವುದೇ ತೊಂದರೆಯಾಗದಿರಲಿ ನನ್ನ ಸಂತತಿ, ಹಾಗೂ ಆಪ್ತರು ಅಲ್ಲಾಹು ಹಾಗೂ ಮುಹಮ್ಮದ್(ಸ)ರ ಎದುರು ಯಶಸ್ಸು ಹಾಗೂ ಗೌರವದೊಂದಿಗೆ ಇರಲಿ.

ಹಜ್ರತ್‌ಶಾಹ್ ವಜಿಉದ್ದಿನ್(ಖು)ರ ನಿಧನರಾದಾಗ ಇವರ ವಯಸ್ಸು ೧೪ ವರ್ಷವಿತ್ತು. ಇವರಿಗೆ ಬೈಅತ್ ಗುರುವನ್ನು (ಅನುಸರಿಸುವ ಪ್ರಮಾಣ) ಹಾಗೂ ಮಾರ್ಗದರ್ಶನ, ಶಿಕ್ಷಣ ಸ್ವತಃ ಇವರ ತಂದೆಯವರಾದ ಹಜ್ರತ್‌ಶಾಹ್ ಬುರ್ಹಾನುದ್ದೀನ್ ಹುಸೇನಿ ಅಲ್ವಿ(ಖು) ಅವರಿಂದ ಪಡೆಯಲ್ಪಟ್ಟಿದ್ದಾರೆ. ಇವರ ಸಾಂಗತ್ಯದಲ್ಲಿ ಸಮಗ್ರ ಜ್ಞಾನವನ್ನು ಗ್ರಹಿಸಿ, ಅದಕ್ಕಾಗಿ ನಿರಂತರ ಪ್ರಯತ್ನಿಸಿ ಪರಿಪೂರ್ಣರಾದರು. ತಂದೆಯವರ ಮರಣದ ನಂತರ ಹಾಗೂ ಅವರ ಉಯಿಲು ಮತ್ತು ಅಲ್ಲಾಹುವಿನಿಂದ ನೇರವಾಗಿ ಪಡೆದ ರಹಸ್ಯಜ್ಞಾನದಿಂದಾಗಿ ಹಜ್ರತ್‌ಷಾಹ್ ಅಬ್ದುಲ್ಲಾಹ್ ಹಜ್ರತ್ ಷಾಹ್ ವಜಿಯುದ್ದೀನ್ ಅಲ್ವಿಯವರ ಸುಪುತ್ರರಾಗಿದ್ದರು. ಅವರ ಬಳಿಗೆ ಹೋಗಿ ಒಂದು ಅವಧಿಯವರೆಗೆ ಅವರ ಸಾಂಗತ್ಯದಲ್ಲಿದ್ದರು. ಖಿಲಾಫತ್, "ಜಿಕ್ರ ವ ಅಷಗಾಲ್" ಎಂದರೆ ಅನುಭಾವಿಕ ಉತ್ತರಾಧಿಕಾರಿತ್ವ ಹಾಗೂ ಜಪತಪ, ಆಧ್ಯಾತ್ಮಿಕ ರಹಸ್ಯಜ್ಞಾನವನ್ನು ಪಡೆದರು. ಸಮಗ್ರ ಹಂತಗಳನ್ನು ಯಶಸ್ವಿಯಾಗಿ ದಾಟುತ್ತಾ ಪರಿಪೂರ್ಣ ಸೂಫಿವರ್ಯರಾಗಿ ಹೊರ ಹೊಮ್ಮಿದರು. ಇಬ್ರಾಹಿಂ ಆದಿಲ್‌ಷಾಹನು ಇವರ ಸನ್ನಿಧಿಗೆ ಆಗಮಿಸಿ, ಇವರಲ್ಲಿ ಅನುರಕ್ತನಾಗಿದ್ದನು. ಹಾಗೂ ಇವರನ್ನು ಬಹಳೇ ಗೌರವಿಸುತ್ತಿದ್ದನು. ಹಾಗೂ ಇವರ ಸೇವೆಗೆ ಅಣಿಯಾಗಿ ನಿಲ್ಲುತ್ತಿದ್ದನು. ಅವನ ಪುತ್ರನಾದ ಮುಹಮ್ಮದ್ ಆದಿಲ್‌ಷಾಹ್‌ನೂ ಸ್ವಃ ಹಜ್ರತ್‌ರೊಂದಿಗೆ ಅತ್ಯಂತ ಗೌರವದೊಂದಿಗೆ

ನಡೆದುಕೊಳ್ಳುತ್ತಿದ್ದನು. ಮತ್ತು ಯಾವಾಗಲಾದರೂ ಆತನಿಗೆ ತೊಂದರೆಯುಂಟಾದರೆ ಹಜ್ರತ್‌ರ ಸನ್ನಿಧಿಯಲ್ಲಿ ನಮ್ರನಾಗಿ ವಿನಂತಿಸುತ್ತಿದ್ದನು. ಹಾಗೂ ಅವರ ಕೃಪಾದೃಷ್ಟಿಯಿಂದ ಆತನ ಸಂಕಟ ಪರಿಹಾರವಾಗುತ್ತಿತ್ತು.

ಹಜ್ರತ್‌ರು ಲೋಕವಿರಹಿತರಾಗಿದ್ದರು.

ಆಂಕೆ ಹರದೋ ಕೌನ್ ಬಯಕ್ ಖಜ್‌ನಮೀ ಖರಂದ್ ।
ಈಶಾಂ ದಮ್‌ಅಜ್ ಮುಹಬ್ಬತೇ ದುನಿಯಾ ಕುಜಾ ಜನಂದ್ ॥
ಯಾರು ಈ ಜಗತ್ತನ್ನು ಒಂದು ಕವಡೆಗೂ
ಕಡಿಮೆ ಎಂದು ಭಾವಿಸುವರು ! ಭಲಾ,
ಅಂಥವರು ಈ ಜಗತ್ತನ್ನು ಯಾವಾಗ ಪ್ರೀತಿಸುವರು!?

ಉರ್ದು (ಜೊ ಲೋಗ ದೋಜಹಾಂ ಕೋ ಕವಡಿ ಕೋ ಭಿ ನಲೆ ಕಹಿಯೆ ಭಲಾ ಮೊಹಬ್ಬತೆ ದುನಿಯಾ ಓ ಕಬ್ ಕರೆ)

ದೊರೆ ಹಾಗೂ ಪ್ರಜೆ ಇವರ ದೃಷ್ಟಿಯಲ್ಲಿ ಸಮನಾಗಿದ್ದರು. ಯಾವುದೇ ಕಾಣಿಕೆ, ಕೊಡುಗೆಗಳು ತಮಗೆ ದೊರೆಯುತ್ತಿದ್ದವೋ ಅವೆಲ್ಲವು ಫಕೀರರಲ್ಲಿ ಹಂಚಲ್ಪಡುತ್ತಿದ್ದವು.

ಹಜ್ರತ್‌ರು ಹೀಗೆನ್ನುತ್ತಾರೆ ಯಾವಾಗ ನನ್ನ ವಯಸ್ಸು ೧೬ ವರ್ಷದ್ದಾಗಿತ್ತು, ಈ ವಿಧಾನ ಅನುಸರಿಸಿದೆನು. ಒಂದು ವೇಳೆ ದಿನನಿತ್ಯ ಲಕ್ಷಗಟ್ಟಲೆ ಹಣ ಹರಿದು ಬಂದರೂ ಇಷಾ(ರಾತ್ರ) ನಮಾಜಿನ ನಂತರ ಒಂದು ನಾಣ್ಯವೂ ಬಾಕಿಯುಳಿದರೆ ಅದನ್ನು ಕಾಸಿ ನನ್ನ ದೇಹದ ಮೇಲೆ ಬರೆ ನೀಡಬೇಕು. ಈ ವಿಷಯದಲ್ಲಿ ಹೀಗೆ ಹೇಳಿದರು.

ಹಜ್ರತ್‌ರ ನುಕ್ತಾ (ನುಡಿಮುತ್ತು)

ಹಾಪಿಂಜಿ ಕಿ ಸುನಿಯೇ ಬಾತ್
ಜಿಸ್ನೆ ರಖ್ಖಾ ಬಾಸಿ ಭಾತ್
ಉಸ್ಕಾ ಜಾವೆ ಹಾತೆ ಹಾತ್
ಹಾಪಿಂ ನುಡಿಯನ್ನು ಕೇಳಿರಿ.

ಯಾರು ಇಟ್ಟರೋ ಹಳಿಸಿದ ಅನ್ನ (ಕೂಡಿಟ್ಟ ಹಣ) ಅವನ ಕೈಯಿಂದ ಎಲ್ಲವೂ ವ್ಯರ್ಥವಾಗಿ ಹೋಗುತ್ತದೆ.

(ಇದರ ಅರ್ಥವು ಹೀಗಿದೆ, ಯಾರು ನಾಳೆಗಾಗಿ ಇಂದು ಕೂಡಿಡುವನೋ ಅವನ ಮನೆಯಿಂದ ಸಮೃದ್ಧಿ ಹೊರಟು ಹೋಗುವದು)

ಒಂದು ಸಲ ಮರೆತು ಒಂದು ನಾಣ್ಯವು ಚಾಪೆಯ ಕೆಳಗೆ ಉಳಿದಿತ್ತು. ಮರುದಿನ ಕಣ್ಣಿಗೆ ಬಿದ್ದಿತು. ಅವರು ತಮ್ಮ ಅಚಲ ಪ್ರತಿಜ್ಞೆಯ ಅನುಸಾರವಾಗಿ ಅದನ್ನು ಕಾಯಿಸಿ ತಮ್ಮ ದೇಹದ ಮೇಲೆ ಬರೆ ಎಳಿಸಿಕೊಂಡರು.

ಈ 'ಬರೆ'ಯು ಇವರ ಸಂತಾನದ ಗುರುತಾಗಿ ಒಂದು ಚಿನ್ಹೆಯಾಗಿ ಉಳಿಯಿತು. ಅದಕ್ಕಾಗಿ ಈ ಅನುವಾದಕನ ಪೀರ್ ಮುರ್ಷಿದ್‌ರು ನನ್ನನ್ನು ಹೀಗೆಂದಿದ್ದರು. ನಿನ್ನ ಗುರುಪತ್ನಿಯ ಕೈಯ ಮೇಲೆಯೂ ಈ 'ಗುರುತು' ಇರುವದು. ಏಕೆಂದರೆ ನಿನ್ನ ಗುರುಪತ್ನಿಯು ಹಜ್ರತ್‌ಷಾಹ್ ಹಾಷಿಂ ಹುಸೈನಿ ಅಲ್ವಿಯವರ ಸಂತಾನದಿಂದಿರುವರು.

ಹಜ್ರತ್‌ರು ಹೀಗೆನ್ನುತ್ತಾರೆ : ನಾನು ದೇವನ ಸಾಮಿಪ್ಯ ಬಯಸಿ ನನ್ನ ೧೬ನೆಯ ವಯಸ್ಸಿನಲ್ಲಿ ಆ ಮಾರ್ಗವನ್ನು ಆಯ್ದುಕೊಂಡೆನು. ಇಂದ್ರಿಯ ನಿಗ್ರಹವನ್ನು ಮೈಗೂಡಿಸಿಕೊಂಡೆನು. ಹಾಗೂ ಯಾವದನ್ನು ಇಂದ್ರಿಯಗಳು ಬಯಸುವವೋ ಅವುಗಳನ್ನು ಅವುಗಳಿಗೆ ನೀಡದಿರುವೆನು ಹಾಗೂ ಯಾವುದು ಬಯಸದೆಯೇ ಸಿಗುವುದೋ ಅದನ್ನು ತೆಗೆದುಕೊಳ್ಳುವೆನು. ನಾನು ಮನೆಯಲ್ಲಿ ಎಂದಿಗೂ ಊಟವನ್ನು ಕೇಳಲಿಲ್ಲ. ಯಾವುದನ್ನು ನನ್ನೆದುರು ತರಲಾಗುತ್ತಿತ್ತೋ ಅದನ್ನು ಗ್ರಹಿಸುತ್ತಿದ್ದೆನು ಹಾಗೂ ಎಂದಿಗೂ ಇದು ಅಪಕ್ವವಿದೆ ಎಂದು ಹೆಸರಿಡಲಿಲ್ಲ. ಉಪ್ಪು ಹೆಚ್ಚಾಗಿದೆ, ಅಥವಾ ಸಪ್ಪೆಯಾಗಿದೆ ಎಂದು ಅನ್ನಲಿಲ್ಲ. ಯಾವುದೆಲ್ಲ ಇಂದ್ರಿಯ ಬಯಸುತ್ತಿತ್ತೋ ಅದರ ವಿಚಾರವನ್ನು ಬೇರೆಯವರಿಗೂ ಸಹ ಹೇಳಲಿಲ್ಲ. ಏಕೆಂದರೆ ಬೇರೆಯವರಿಗೆ ತಿಳಿಸುವುದು ಹಾಗೂ ಬೇಡುವದು ಎರಡೂ ಒಂದೇ ಆಗಿದೆ.

ಹಜ್ರತ್‌ರು ಎರಡು ಸಲ 'ಹರಮೈನೆ ಷರೀಫ್' ಅಂದರೆ (ಪವಿತ್ರ ಮಕ್ಕಾ ಹಾಗೂ ಮದೀನಾ)ದ ಜಿಯಾರತ್‌ಗೈದರು. ಅದರಲ್ಲಿ ಒಂದು ಸಲ ತಮ್ಮ ಪೂರ್ವಜರಾದ ಪ್ರವಾದಿ ಮುಹಮ್ಮದ್(ಸ)ರ ಕರೆಯನ್ನು ಆಲಿಸಿ ಹೋಗಿದ್ದರು. ಹಾಗೂ ಅವರಿಂದ ಆಧ್ಯಾತ್ಮಿಕ ಜ್ಞಾನದಿಂದ ಸಮೃದ್ಧಿ ಹೊಂದಿದರು. 'ಹಿಜ್ಬುಲ್ ಆಜಮ್' ಗ್ರಂಥ ಹಾಗೂ 'ಗೀತಿಯೇ ಮುಬಾರಕ್' (ಪವಿತ್ರ ಖಡ್ಗ)ವನ್ನು ಪಡೆದರು. 'ಗಂಜೆ ಅಸ್ರಾರ' ಗ್ರಂಥದಲ್ಲಿ ಹಜ್ರತ್‌ರು ಹೀಗೆನ್ನುತ್ತಾರೆ. ಯಾವ ಅವಧಿಯಲ್ಲಿ ಪವಿತ್ರ ಮದೀನಾ ಮುನವ್ವರಾದ ಜಿಯಾರತ್‌ಗೈದೆನೋ ಆಗ ನನ್ನ ವಯಸ್ಸು ಐವತ್ತು ವರ್ಷದ್ದಾಗಿತ್ತು. ಒಂದಿರುಳು ರಹಸ್ಯ ಬಹಿರಂಗವಾಯಿತು. ಏನೆಂದರೆ ಹಜ್ರತ್ ಮುಹಮ್ಮದ್(ಸ)ರು ತಮ್ಮ ಪವಿತ್ರ ಖಡ್ಗ ಹಾಗೂ ಒಂದು ಗ್ರಂಥ ಅದರಲ್ಲಿ ಹಿಜ್ಬುಲ್ ಆಜಮ್ ವಿರ್ದುಲ್ ಫಖಮ್ (ಜಪತಪಾದಿಗಳ ವಿವರಣೆ)ಯನ್ನು ಫಕೀರ್ ಹಾಷಿಂ ಪೀರ್‌ರಿಗೆ ನೀಡಲಾಯಿತು. ಒಂದು ಗಳಿಗೆಯ ನಂತರ ಓರ್ವ ವ್ಯಕ್ತಿಯು ಬಾಗಿಲಿನ ಬಳಿ ಕಂಡುಬಂದನು. ಹಜ್ರತ್‌ರು ಕೇಳಿದರು ಯಾರು? ಆತನು ಹೀಗೆಂದನು ನಾನು ಮದೀನಾ ಮುನವ್ವರಾದ 'ಷರೀಫ್' (ಅಧಿಪತಿ)ನಾಗಿರುವೆನು ಹಾಗೂ ರಸೂಲಲ್ಲಾಹ್ ಸ್ವಲ್ಲಲ್ಲಾಹು ಅಲೈಹಿ ವ

ಸ್ವಲ್ಲಮ್‌ರು ತಮಗಾಗಿ ಷಂಷೀರ್ (ಖಡ್ಗ) ಹಾಗೂ ಹಿಸ್ಬುಲ್‌ಆಜಮ್ ವಜೀಫಾವನ್ನು (ಪುಸ್ತಿಕೆಯನ್ನು) ಕಳುಹಿಸಿರುವರು. ಹಾಗೂ ಸೇವಕನನ್ನು ಆಜ್ಞೆ ಮಾಡಲಾಗಿದೆ. ನನ್ನ ಸುಪುತ್ರ ಷಾ ಹಾಷಿಂ ಬಂದಿರುವನು. ಈ ಅಮಾನತ್ತು (ವಿಶ್ವಸ್ಥನಿಧಿ) ಯಾವದು. ಇಹಪರ ವಿಜಯದ ಕೊಡುಗೆಯಾಗಿರುವದು ಆತನಿಗೆ ತಲುಪಿಸಿರಿ. ನಂತರ ಫಕೀರ ಹಾಷಿಂಪೀರ್ ಅದನ್ನು ತಲೆಯ ಮೇಲೆ ಹೊತ್ತು ಈ ಕೊಡುಗೆಯ ಬದಲಾಗಿ ಕೃತಜ್ಞನಾಗಿ ಧನ್ಯತಾಭಾವದೊಂದಿಗೆ ಕೃತಜ್ಞಾತಾರ್ಪಣೆಯ ಎರಡು ರಕಾತ್ ಶುಕ್ರಾನಾ ನವಾಜ್‌ನ್ನು ಮಾಡಿದೆನು ಹಾಗೂ ಹಜ್ರತ್ ಮುಹಮ್ಮದ್ ಮುಸ್ತಫಾ(ಸ)ರು ಯಾವಾಗಲೂ, ಹಾಗೂ ನಿರಂತರವಾಗಿ ತಮಗೆ ಸನ್ಮಾರ್ಗದರ್ಶನ ನೀಡುತ್ತಿದ್ದರು. ತಮ್ಮ ಎರಡು ಪುಸ್ತಿಕೆಗಳಲ್ಲಿ ವಿವರವಿದೆ ಹಜ್ರತ್‌ಶಾಹ್ ಹಾಷಿಂ ಹುಸೈನಿಯವರು ಹೀಗೆನ್ನುವರು. ಒಂದು ಸಲ ನಾನು ನೋಡಿದೆನು ನಾನು ಮಲಗಿದ್ದರೂ ನಾನು ಎಚ್ಚರವಾಗಿದ್ದೆನು' ಎಂದೆನಿಸುತ್ತಿತ್ತು. ನಾನು ನನ್ನ ಮನೆಯಿಂದ ಜೋಹರಾಪುರದ ಮಸೀದೆಯ ಅಂಗಳದಲ್ಲಿ ಬಂದಿರುವೆನು ನೋಡುತ್ತೇನೆ ಮಿಂಬರ್‌ದ ಬಳಿಗೆ ಮೆಹ್ರಾಬ್‌ದ ಎದುರಲ್ಲಿ ಹಜ್ರತ್ ರಸೂಲಲ್ಲಾಹ್ ಸ್ವಲ್ಲಲ್ಲಾಹು ಅಲೈಹಿ ವ ಸ್ವಲ್ಲಮ್ ಸಹಾಬಾ ರಜಿಯಲ್ಲಾಹು ಅನ್ಹುಮ್‌ರೊಂದಿಗೆ ನಿಂತಿರುವರು ಹಾಗೂ ಮಕ್ಕಾದೆಡೆಗೆ ಮುಖ ಮಾಡಿ ಫಿಕ್ಹದ (ಶರಿಯತ್ತಿನ ಸಮಸ್ಯೆಗಳ ಪರಿಹಾರ) ಕುರಿತು ವಿವರಿಸುತ್ತಿರುವರು. ಇದೇ ಸಮಯದಲ್ಲಿ ಈ ಫಕೀರನು ಬೇಗಬೇಗನೆ ಮಸೀದೆಯಲ್ಲಿ ಬಂದನು. ಓರ್ವ ಸಹಾಬಿ (ಪ್ರವಾದಿ ಸಹಚರರು) ಹೀಗೆಂದರು ಯಾ ರಸೂಲಲ್ಲಾಹ್ ಷಾ ಹಾಷಿಂ ಬರುತ್ತಿರುವರು. ಹುಜೂರ್ ಮುಹಮ್ಮದ್ ಮುಸ್ತಫಾ (ಸ)ರು ತಮ್ಮ ಪವಿತ್ರ ಮುಖಾರವಿಂದವನ್ನು ಫಕೀರನೆಡೆಗೆ ತಿರುಗಿಸಿದರು. ಫಕೀರನು ಕಲ್ಮೆಕಿ ಉಂಗಲಿ (ತೋರು ಬೆರಳನ್ನು) ನೆಲದ ಮೇಲಿರಿಸಿ ತಸ್ಲಿಮಾತ್ ಎಂದನು. ರಸೂಲಲ್ಲಾಹ್(ಸ)ರು ತಮ್ಮ ಎರಡೂ ಪವಿತ್ರ ಕೈಗಳನ್ನು ತಮ್ಮ ಪವಿತ್ರ ತೊಡೆಗಳ ಮೇಲಿರಿಸಿ ಸ್ವಲ್ಪವೇ ಬಾಗಿ ತಲೆಯನ್ನು ಅಲುಗಾಡಿಸಿದರು ಹಾಗೂ ಹೀಗೆಂದರು.

'ಇಕ್ಬಾಲುಲ್ ಷರೀಫಿ ಹಾಷಿಮಿ ಹಾಷಿಮನಾ ಅಲಲ್‌ಆಲಿ'

ಹಾಷಿಮಿಯವರ ಆಗಮನವು ನಮ್ಮೆಲ್ಲರಿಗೂ ಸಮೃದ್ಧಿಯದಾಯಕವಾದುದಾಗಿದೆ.

ಈ ಬಿರುದಿಂದ ಎರಡು ಸಲ ಫಕೀರನನ್ನು ಕರೆದರು.

ಹಜ್ರತ್ ಷಾಹ್ ಹಾಷಿಂ (ಖು)ರಿಗೆ ಈ ಅಭ್ಯಾಸವಿತ್ತು ಯಾವುದೇ ಮದೋನ್ಮತ್ತ ಆನೆಯ ಎದುರಿನಿಂದ ಸರಿಯುತ್ತಿರಲಿಲ್ಲ. ಹಾಗೂ ಈ ದೈತ್ಯ ಪ್ರಾಣಿಯನ್ನು ಎದುರಿಸುವ ಅವಕಾಶ ಅನೇಕ ಸಲ ಬಂದೊದಗಿತು. ಹಜ್ರತ್‌ರು ಒಂದಿನಿತೂ ಹೆದರುತ್ತಿರಲಿಲ್ಲ. ಒಂದು ದಿನ ಹಜ್ರತ್‌ರೊಂದಿಗೆ ಅವರ ಮುರೀದರಲ್ಲೋರ್ವರು ಕೇಳಿದರು. ಹುಜೂರ್!

ತಾವು ಆನೆ, ಹುಲಿ ಹಾಗೂ ಸರ್ಪದ ಎದುರಿನಿಂದ ಮುಖ ತಿರುವುದಿಲ್ಲ. ಇದು ಶೌರ್ಯವಂತಿಕೆಯಾಗಿರುವದು ಅಥವಾ ಅಲ್ಲಾಹುವಿನ ನಾಮದ ಜಪತಪದ ಕೊಡುಗೆಯಾಗಿದೆಯೇ? ಹುಜೂರ್‌ರು ಹೀಗೆಂದರು. ಶೌರ್ಯವಂತಿಕೆಯೂ ಅಲ್ಲ, ಅಲ್ಲಾಹುವಿನ ದಯೆ ಆದರೆ ನನ್ನ ಗೌರವಾನ್ವಿತ ತಂದೆಯವರು ಹೀಗೆನ್ನುತ್ತಿದ್ದರು. ಓ ನನ್ನ ಮಗನೆ ಯಾವಾಗ ನಿನಗೆ ಆನೆ, ಹುಲಿ ಹಾಗೂ ಸರ್ಪ ಇತ್ಯಾದಿ ಹಿಂಸ್ರಕ ಪಶುಗಳ ಮುಖಾಮುಖಿಯಾಗುವದೋ ಆಗ ನಿನ್ನ ಮುಖ ತಿರುವಬೇಡ! ಏಕೆಂದರೆ ಇದರಲ್ಲಿ ನಿನ್ನ ಪರೀಕ್ಷೆ ಇರುವದು ಒಂದು ವೇಳೆ ದೇವನದಯೆಯಿದ್ದರೆ ಅವುಗಳ ಮುಖಾಮುಖಿಯಾದರೆ ಹೃದಯದಲ್ಲಿ ಯಾವುದೇ ತೆರನಾದ ಚಿಂತೆ ಅಥವಾ ಹೆದರಿಕೆಯುಂಟಾಗದು. ಒಂದುವೇಳೆ ಭಯಭೀತತೆ ಕಾಡಿದರೆ ನಿನ್ನ ಉನ್ನತ ದರ್ಜೆಯಿಂದ ಕೆಳಗಿಳಿದಂತೆ ಆಗ ಮತ್ತೆ ಜಪತಪಗೈಯ್ಯಬೇಕು. ಹಾಗೂ ಆ ದರ್ಜೆಗೆ ತಲುಪಲು ಪ್ರಯತ್ನಿಸಬೇಕು.

ಒಂದು ದಿನ ಹಜ್ರತಷಾಹ ಹಾಷಿಂ(ಖು) ಓರ್ವ ವ್ಯಕ್ತಿಯ ಆಮಂತ್ರಣದ ಮೇರೆಗೆ ಸೈಯ್ಯದ್ ಅಹ್ಮದ್ ನಜೀರ್ ಅರಬ್‌ದೇಶದಿಂದ ಆಗಮಿಸಿದ "ಸಾದಾತ್" ವಂಶದವರಾಗಿದ್ದರು. ಹಾಗೂ ಸಚ್ಚಾರಿತ್ರವಂತರಾಗಿದ್ದರು. ಅವರನ್ನು ಜೊತೆಗೆ ಕರೆದುಕೊಂಡು ಎತ್ತಿನ ಬಂಡಿಯಲ್ಲಿ ಸವಾರರಾಗಿ ಹೋಗುತ್ತಿದ್ದರು. ಆಕಸ್ಮಿಕವಾಗಿ ಆ ಸವಾರಿಯು ಹಜ್ರತ್‌ಷಾಹ್ ಹಂಝಾಹುಸೈನಿ(ಖು)ರ ಸಮಾಧಿಸ್ಥಳದ ದಕ್ಷಿಣ ಭಾಗದತ್ತ ತಲುಪಿತು. ಹಾಗೂ ಆ ಕಡೆಯ ಬಯಲು ಪ್ರದೇಶದಿಂದ ಒಂದು ಮದೋನ್ಮತ್ತ ಆನೆಯು ಇವರ ಕಡೆಗೆ ಆಗಮಿಸಿತು. ಜನರೆಲ್ಲರೂ ಅದರ ಭಯದಿಂದಾಗಿ ಚೆಲ್ಲಾಪಿಲ್ಲಿಯಾಗಿ ಓಡಿದರು. ಜ್ಞಾನಿಗಳು ಮಾತ್ರ ಈ ರಹಸ್ಯ ಬಲ್ಲವರಾಗಿದ್ದರು. ಏನೆಂದರೆ ಹಜ್ರತ್ ಷಾಹ್ ಹಾಷಿಂ(ಖು) ಮದೋನ್ಮತ್ತ ಆನೆಯ ಎದುರಿನಿಂದ ಒಂದಿನಿತೂ ಸರಿಯುತ್ತಿರಲಿಲ್ಲ. ನೋಡುಗರ ಗುಂಪು ಸೇರಿತು ಒಬ್ಬರಿಗೊಬ್ಬರು ಹೀಗೆನ್ನತೊಡಗಿದರು. ಸ್ನೇಹಿತರೆ, ಇಂದು ಆಕಸ್ಮಿಕವಾಗಿ ಒಂದು ವಿಚಿತ್ರ ಘಟನೆ ಜರುಗುತ್ತಿದೆ. ಆ ಕಡೆಯಿಂದ ಮದೋನ್ಮತ್ತ ಆನೆ ಬರುತ್ತಿದೆ ಹಾಗೂ ಈ ಕಡೆಯಿಂದ ಹಜ್ರತ್ ಷಾಹ್ ಹಾಷಿಂ (ಖು)ರು ಬರುತ್ತಿದ್ದಾರೆ ಹಾಗೂ ಓಣಿಯು ತುಂಬಾ ಇಕ್ಕಟ್ಟಾಗಿದೆ. ನೋಡೋಣ ಏನಾಗುತ್ತದೆ? ನಾಲ್ಕೂ ಕಡೆಯಿಂದಲೂ ಗದ್ದಲ ಗೊಂದಲವುಂಟಾಯಿತು. ಜನರು ಈ ದೃಶ್ಯವನ್ನು ನೋಡಲು ಗೋಡೆಗಳನ್ನೇರಿ ನಿಂತುಕೊಂಡರು. ಹಾಗೂ ಎವೆಯಿಕ್ಕದೇ ನೋಡತೊಡಗಿದರು. ಈ ಘಟನೆಯನ್ನು ವಿವರಿಸುವವನು ಹೀಗೆನ್ನುತ್ತಾನೆ ಸ್ವತಃ ಈ ಗುಂಪಿನಲ್ಲಿ ಆಸಾರ ಮಹಲಿನ ಉತ್ತರ ದ್ವಾರದ ಕಡೆಯಿಂದ ಪೂರ್ವ ದಿಕ್ಕಿನ ಹೊಂಡದ ಬಳಿ ಕುಳಿತಿದ್ದೆನು ಹಾಗೂ ನೋಡುತ್ತಿದ್ದೆನು. ಹಜ್ರತ್‌ರು ಬಂಡಿಯಲ್ಲಿ ಕುಳಿತಿರುವರು ಹಾಗೂ ಸೈಯ್ಯದ್ ಅಹ್ಮದ್

ನಜೀರ್ ಅವರ ಮಗ್ಗುಲಲ್ಲಿ ಕುಳಿತಿರುವರು. ಹಾಗೂ ಆ ಆನೆಯು ಬಂಡಿಯ ಎದುರಿಗೆ ಬಂದಿತು. ಆಗ ಹಜ್ರತ್‌ರು ಬಂಡಿಯನ್ನು ನಡೆಸುವವನಿಗೆ ಹೀಗೆ ಆದೇಶ ಮಾಡಿದರು. ನಿರ್ಭಯನಾಗಿ ಗಾಡಿಯನ್ನು ನಡೆಸು. ಆತನು ಹಾಗೆಯೇ ಮಾಡಿದನು. ಯಾವಾಗ ಆನೆಯು ಬಂಡಿಯ ಸಮೀಪ ಬಂದಿತು. ಓಣಿಯು ಇಕ್ಕಟ್ಟಾಗಿತ್ತು. ಒಂದು ಕಡೆ ಹಜ್ರತ್ ಷಾಹ್ ಹಂಝಾಹುಸೈನಿ(ಖ)ರ ಉದ್ಯಾನವನದ ಗೋಡೆಯಿತ್ತು. ಎರಡನೆಯ ಕಡೆ ಆಸಾರ್ ಷರೀಫ್‌ದ ಗೋಡೆಯಿತ್ತು. ನಾನು ಸ್ವತಃ ನೋಡಿದೆನು ಆ ಅನಿಯಂತ್ರಿತ ಆನೆಯು ಅದೇ ಕ್ಷಣ ಭಯಭೀತವಾಗಿ ಸೊಂಡಿಲನ್ನು ತನ್ನ ಬಾಯಲ್ಲಿ ಸುರುಳಿ ಸುತ್ತಿಕೊಂಡು ಮರಳಿ ಹೊರಟಿತು. ಅದರ ಕೊರಳಲ್ಲಿ ಘಂಟೆ ಕಟ್ಟಿದ ಸರಪಳಿಯಿತ್ತು. ಅದು ಬಂಡಿಯ ಮೇಲ್ಭಾಗಕ್ಕೆ ಸ್ಪರ್ಷಿಸಿತು. ಆನೆಯು ತುಂಬಾ ನಮ್ರವಾಗಿ ಹಜ್ರತ್‌ರ ಬಂಡಿಯ ಮಗ್ಗುಲಿನಿಂದ ಹೋಗುವಾಗ ತನ್ನೆಲ್ಲ ಶಕ್ತಿಯು ಕುಂದಿದಂತೆ, ಮಾಯವಾಗಿದೆ ಎಂಬಂತೆ ಹೋಯಿತು. ಹಾಗೂ ಅದರ ಚೀರುವಿಕೆ ತಕ್ಷಣ ನಿಂತು ಹೋಯಿತು. ಮತ್ತು ಅಲ್ಲಿಂದ ಮುಂದೆ ಸಾಗಿದಾಗ ಮತ್ತೆ ತನ್ನ ಮೊದಲಿನ ಅನಿಯಂತ್ರಿತ ಮದೋನ್ಮತ್ತ ಸ್ಥಿತಿಗೆ ಮರಳಿತು.

ಗಂಜುಲ್ ಅಸ್ರಾರ್‌ದಲ್ಲಿ ಹೀಗೆ ಬರೆಯಲ್ಪಟ್ಟಿದೆ. ಸುಲ್ತಾನ್ ಇಬ್ರಾಹಿಂ ಜಗದ್ಗುರುವಿನ ಅವಧಿಯಲ್ಲಿ ಅನಾವೃಷ್ಟಿಯಿಂದಾಗಿ ಬರಗಾಲದ ಹೊಡೆತ ಎರಗಿತು. ಜನರು ಗುಳೆ ಹೊರಟರು. ಆಡಳಿತಗಾರರು, ಅಧಿಕಾರಿಗಳು ಹಾಗೂ ಬಲ್ಲವರು, ಮಳೆಗಾಗಿ ಪ್ರಾರ್ಥಿಸುವುದು ಹಾಗೂ ಬರಗಾಲ ನೀಗಿಸಲು ಒಂದೆಡೆ ಸೇರಿ ಹಜ್ರತ್‌ಷಾಹ್ ಹಾಷಿಂಪೀರರ ಸನ್ನಿಧಿಗೆ ಆಗಮಿಸಿದರು. ಹಾಗೂ ಹೀಗೆಂದರು ಅನಾವೃಷ್ಟಿಯಿಂದಾಗಿ ಎಲ್ಲ ಜನರೂ ಹಾಗೂ ಪಶುಪಕ್ಷಿಗಳು ತೊಂದರೆಗೀಡಾಗಿವೆ, ಸಾಯುತ್ತಿವೆ, ಸಮಸ್ತ ಜೀವ ಜಂತುಗಳು ಸಾವುನೋವಿಗೀಡಾಗುತ್ತಿವೆ. ತಾವು ಅಲ್ಲಾಹುವಿನ ಆಯ್ದ ದಾಸರಲ್ಲಾಗಿರುವಿರಿ, ತಮ್ಮ ಕೃಪಾದೃಷ್ಟಿಯಾಗಬೇಕು. ಈ ದುಃಸ್ಥಿತಿ ನೀಗಲು ಪ್ರಾರ್ಥಿಸಿರಿ ಎಂದು ವಿನಂತಿಸಿದರು. ಆಗ ಹಜ್ರತ್‌ರು ಹೀಗೆ ನುಡಿದರು.

ವಜಅಲ್‌ನಾ ಮಿನಲ್ ಮಾಯಿ ಕುಲ್ಲ ಷಯ್ಯಿನ್ ಹಯ್ಯಿನ್ ಕರ್ದನ್ ।
ಬ ಹುರ್ಮತುನ್ನಬಿ ಹಾಷಿಮ್‌ಜಲಫಲ್ ಫಿರೂಂ ॥
ಔರ ಹಮ್ನೆ ದುನಿಯಾ ಕಿ ಹರಚೀಜ್ ಕೋ
ಪಾನಿ ಸೆ ಜಿಂದಾ ಕರ್‌ದಿಯಾ ।
ನಬಿಯೇ ಮೊಹತ್ರಮ್ ಕಿ ಹುರ್ಮತ್
ವ ತಕದ್ದುಸ್ ಕೆ ಸದ್ಕೆ ಪಾನಿ ಬನ್‌ಕರ್ ಬಹ್ ನಿಕ್ಲಾ

ಮತ್ತೆ ನಾವು ಜಗತ್ತಿನ ಪ್ರತಿಯೊಂದು ಸೃಷ್ಟಿಯನ್ನು ನೀರಿನಿಂದ ಜೀವಂತಗೊಳಿಸಿದೆವು । ಪ್ರವಾದಿಯವರ ಪ್ರೇಮದಲ್ಲಿ ಮುಳಿಗೆದ್ದ ನಾನು ಪವಿತ್ರ ಜಲವಾಗಿ ಹರಿಯಹತ್ತಿದೆನು ॥

ಈ ನುಡಿಮುತ್ತು ಅವರ ಬಾಯಿಂದ ಹೊರಟಂತೆಯೇ ಆಕಾಶದಿಂದ ನಾಲ್ಕೂ ಕಡೆಗೆ ಮುಗಿಲು ತುಂಬ ಮೋಡಗಳು ಸೇರಿದವು. ಹಾಗೂ ಮಳೆ ಪ್ರಾರಂಭವಾಯಿತು. ಹಾಗೂ ಇಂಥಹ ಮಳೆ ಸುರಿಯಿತು. ನದಿಗಳು ತುಂಬಿ ಹರಿಯ ತೊಡಗಿದವು. ಹಾಗೂ ನಾಲ್ಕೂ ಕಡೆ ಜಲಾವೃತವಾಯಿತು. ಗಿಡಮರ ಬಳ್ಳಿಗಳು ಹಸಿರಾದವು.

ಒಂದು ದಿನ ಹಜ್ರತ್‌ಶಾಹ್ ಹಾಷಿಂ(ಖು) ಜ್ಞಾನಾರ್ಥಿಗಳಿಗೆ ಮಾರ್ಗದರ್ಶನ ನೀಡುತ್ತಿದ್ದರು. ಅಸರ್ ನಮಾಜಿನ ವೇಳೆಯಾಯಿತು. ಸಭೆಯು ತನ್ನ ಉನ್ನತ ದರ್ಜೆಗೆ ತಲುಪಿತ್ತು ಸೂರ್ಯನು ಮುಳಗಲು ತೊಡಗಿದನು. ಹಾಗೂ ನಮಾಜಿನ ಸಮಯವೂ ಮೀರತೊಡಗಿತು. ದರ್ಶಕರ ಮನದಲ್ಲಿ ಈ ವಿಚಾರಬಂದಿತು. ಇದರಲ್ಲೇನು ರಹಸ್ಯ ಅಡಗಿದೆ. ನಮಾಜಿನ ಸಮಯ ಮೀರುತ್ತಿದೆ. ಆದರೆ ಹಜ್ರತ್‌ರು ನಮಾಜಿನ ಬಯಕೆ ಮಾಡುತ್ತಿಲ್ಲ.

ಆದರೆ ಯಾವ ವ್ಯಕ್ತಿಯೂ ಹಜ್ರತ್‌ರ ಗೌರವದಿಂದಾಗಿ ಹೇಳುವ ಧೈರ್ಯ ಮಾಡುತ್ತಿಲ್ಲ. ಸಭೆಯ ನಂತರ ಹಜ್ರತ್‌ರು ಎದ್ದು ವಜೂಗಾಗಿ ಭಾವಿಯ ಹತ್ತಿರ ಹೋದರು. ಇನ್ನೂ ವಜೂ ಪೂರ್ತಿಯಾಗಿರಲಿಲ್ಲ. ಸೂರ್ಯ ಮುಳುಗಿತು ಯಾವಾಗ ಹಜ್ರತ್‌ರು ವಜೂ ಮಾಡಿಕೊಂಡು ಭಾವಿಯ ಮೆಟ್ಟಲುಗಳನ್ನೇರಿ ಹೊರಬಂದರು ಸೂರ್ಯ ಮತ್ತೆ ತನ್ನ ಉಜ್ವಲ ಬೆಳಕನ್ನು ಪಸರಿಸಿತು. ಹಜ್ರತ್‌ರು ತಮ್ಮ ಮುರೀದರು ಹಾಗೂ ಸಭೆಗೆ ಆಗಮಿಸಿದ್ದ ಜನರೊಂದಿಗೆ ಅಸರ್ ನಮಾಜ್‌ನ್ನು ಸಲ್ಲಿಸಿದರು. ಅಲ್ಪ ಸಮಯದವರೆಗೆ ಸೂರ್ಯ ತನ್ನ ಬೆಳಕನ್ನು ಪ್ರತಿಫಲಿಸಿತು.

ಓರ್ವ ವ್ಯಕ್ತಿಯು ಯಾರ ಹೆಸರು ಹಾಜಿ ಝಾಕೀರ್ ಎಂದಿತ್ತು ಆತನು ರಾಗಾಲಾಪನೆಯಲ್ಲಿ ಗುರುವಾಗಿದ್ದನು. ಆತನು ಸದಾ ಕಾಲ ಮಹಾಪುರುಷರ ಹಾಗೂ ಸೂಫಿವರ್ಯರ ಉರುಸುಗಳಲ್ಲಿ ಮೌಲೂದ್ ಹಾಗೂ ಕಸೀದಾ(ಮೌಲೂದ್ ಎಂದರೆ ಹಜ್ರತ್ ಮುಹಮ್ಮದ್(ಸ)ರ ಜನನದ ವಿವರವಿರುವದು. ಹಾಗೂ ಕಸೀದಾ ಎಂದರೆ ಸ್ತುತಿಗೀತೆ ಎಂದಾಗುವುದು) ಓದುತ್ತಿದ್ದನು. ಜನರು ಅವನನ್ನು ಅಪಹಾಸ್ಯ ಮಾಡುತ್ತಿದ್ದರು. ಎಲ್ಲಿಯೂ ಆತನಿಗೆ ಗೌರವ ನೀಡುತ್ತಿರಲಿಲ್ಲ. ಆತನು ಒಂದು ದಿನ ಹಜ್ರತ್‌ರ ಸೇವೆಯಲ್ಲಿ ಬಂದು ಒಂದು ಶೋಕಗೀತೆಯನ್ನು ಪ್ರಸ್ತುತಪಡಿಸಿದನು. ಹಾಗೂ ತನ್ನ ವಿಷಯವನ್ನು ಪ್ರಸ್ತಾಪಿಸಿ ಹೀಗೆಂದನು–ತನಗೆ ಮಧುರ ಕಂಠವು ಪ್ರಾಪ್ತಿಯಾಗಲಿ, ಹಾಗೂ ಎಲ್ಲೆಡೆಗೆ ಕೀರ್ತಿ ಸಿಗಲಿ ಹಜ್ರತ್‌ರು ಆತನ ಸ್ಥಿತಿಗೆ ಅನುಕಂಪ ಪಟ್ಟು ತನ್ನ ಬಳಿಯ ಪೇಟಾ ಹಾಗೂ ಹೂವಿನ ಚಿತ್ರದಿಂದ ಅಲಂಕೃತ ಚಾದರವನ್ನು ಕಾಣಿಕೆ ರೂಪದಲ್ಲಿ ನೀಡಿದರು. ಹಾಗೂ ಆತನ ಕಂಠವನ್ನು "ಲಹನೆದಾವೂದಿ" ಧ್ವನಿಯಾಗಿಸಿದರು. ಆತನು ತನ್ನ ಕಾಲದ ಸುಪ್ರಸಿದ್ಧ ಕಲಾವಿದರಲ್ಲೊಬ್ಬನಾದನು. ತನ್ನ ಸಿರಿಕಂಠದಿಂದ ಚುಂಬಕ ರೂಪದಲ್ಲಿ ಜನರನ್ನು ಸೆಳೆಯುತ್ತಿದ್ದನು ಹಾಗೂ

ಆತನ ಸುಮಧುರ ಕಂಠದಿಂದ ಕಾಡಿನ ಹಕ್ಕಿಗಳೂ ಸಹ ಸೆರೆಯಾಗುತ್ತಿದ್ದವು. ಜನರು ಆ ಸುಮಧುರ ಧ್ವನಿಯಾಲಿಸಲು ದೂರ ದೂರದಿಂದ ಆಗಮಿಸುತ್ತಿದ್ದರು. ಹಾಗೂ ಆತನ ಅಭಿಮಾನಿಗಳಾಗುತ್ತಿದ್ದರು. ಹಜ್ರತ್ ಷಾಹ್ ನಯೀಮುಲ್ಲಾಹ್(ಖು) ವಿವರಿಸುತ್ತಾರೆ. ಯಾವ ದಿನದಿಂದ ಹಜ್ರತ್‌ರು ಆತನಿಗೆ 'ಲಹನೆದಾವೂದಿ' ಅಂದರೆ (ಸುಮಧುರ ಕಂಠ) (ಹಜ್ರತ್ ದಾವೂದ್(ಅ)ಪೈಗಂಬರರ ಧ್ವನಿಯು ಬಲು ಮಧುರವಾಗಿತ್ತು.) ಅನುಗ್ರಹಿಸಿದರೋ ಆವಾಗಿನಿಂದ ಆತನ ಕೊನೆಯುಸಿರು ಇರುವವರೆಗೂ ಆತನ ಪ್ರಸಿದ್ಧಿಯು ಕುಂಠಿತಗೊಳ್ಳಲಿಲ್ಲ. ಹಾಗೂ ಸುಮಧುರತೆಯಲ್ಲಿ ಸ್ವಲ್ಪವೂ ವ್ಯಾತ್ಯಾಸವಾಗಲಿಲ್ಲ.

ಯಾವ ಕಾಲದಲ್ಲಿ ಪೋರ್ತಗೀಜರ ಬಂಧನದಿಂದ ಹಜ್ರತ್‌ರು ಬಿಡುಗಡೆ ಹೊಂದಿ ಸೇವಕರು ಹಾಗೂ ಸ್ನೇಹಿತರೊಂದಿಗೆ ಬಿಜಾಪುರಕ್ಕೆ ಆಗಮಿಸುವ ಇಚ್ಛೆಯನ್ನು ವ್ಯಕ್ತಪಡಿಸಿದರು ಆಗ ಹಾದಿಯಲ್ಲಿ ಓರ್ವ ವೃದ್ಧ ವ್ಯಕ್ತಿಯು ಹಜ್ರತ್‌ರೊಂದಿಗೆ ಭೇಟಿ ಮಾಡಿ ಹೀಗೆ ವಿನಂತಿಸಿದನು. ನಿಮಗೆ ರಸವಿದ್ಯೆಯ ಜ್ಞಾನವನ್ನು ಕಲಿಸುವೆನು ಹಾಗೂ ತಮಗಾಗಿಯೇ ಈ ಕಾಣಿಕೆ ತಂದಿರುವೆನು. ಹಾಗೂ ಈ ರಸವಿದ್ಯೆಯಲ್ಲಿ ಪರಿಣಿತನಿದ್ದು ರಸಜ್ಞ ಎನಿಸಿಕೊಂಡಿರುವೆನು. ಕಂಚನ್ನು ಚಿನ್ನವಾಗಿ ಪರಿವರ್ತಿಸುವೆನು. ಹಜ್ರತ್‌ರು ಮುಗುಳ್ನಕ್ಕು ಹೀಗೆಂದರು ನಾನು ಫಕೀರನಾಗಿದ್ದೇನೆ ನನಗೆ 'ಅಲ್ಲಾಹುವೇ ಸಾಕು' ಚಿನ್ನವನ್ನು ತೆಗೆದುಕೊಂಡು ಏನು ಮಾಡಲಿ? ಒಂದು ವೇಳೆ ನಿನಗೆ ಬಂಗಾರದ ಬಯಕೆ ಇದ್ದರೆ ಬಾ ಕಲ್ಲಿನ ಒಂದು ಗುಂಪನ್ನು ಹಾಕು ಅದು ಬಂಗಾರವಾಗುವುದು. ಆ ವ್ಯಕ್ತಿಯು ಎದ್ದು ಹಜ್ರತ್‌ರ ಆಜ್ಞೆಯನ್ನು ಪಾಲಿಸಿ ಕಲ್ಲಿನ ಒಂದು ಗುಂಪನ್ನು ಹಾಕಿದನು. ಆಗ ಹಜ್ರತ್‌ರು ಅದರೆಡೆಗೆ ತಮ್ಮ ಕೃಪಾದೃಷ್ಟಿಯನ್ನು ಬೀರಿದರು. ಆಗ ಆ ಕಲ್ಲುಗಳೆಲ್ಲವೂ ಚಿನ್ನವಾಗಿ ಹೊಳೆಯತೊಡಗಿದವು. ಮತ್ತೆ ಅವರು ಅವನನ್ನು ಸಂಬೋಧಿಸಿ ಹೀಗೆಂದರು. ಅವೆಲ್ಲವುಗಳನ್ನು ಎತ್ತಿಕೊಂಡು ಹೋಗು! ಆ ವ್ಯಕ್ತಿಯು ಇವರಿಂದ ಈ ಕರಾಮತ್ತನ್ನು (ಪವಾಡವನ್ನು) ಕಂಡು ಅವರ ಕಾಲಿಗೆರಗಿದನು ಹಾಗೂ ಹೀಗೆಂದನು.

ಚ್ಯೂಂ ಕಹಲ್ ಬೀನಷ್ ಮಾ ಖಾಕ ಆಸ್ತಾನಯೆ ತುಸ್ತ್ ।
ಕುಜಾ ರವಂ ತು ಬ ಫರ್ಮಾ ಅಜೀನ್ ಜನಾಬ ಕುಜಾ ॥
ಹಮಾರೆ ಆಂಖ್ ಕಾ ಸುರ್ಮಾ ಜೊ ತೇರೆ ದರ್ ಕಿ ಹೈ ಖಾಕ್ ।
ಭಲಾ ಬತಾ ತುಝೆ ಅಬ್ ಛೋಡಕರ್ ಕಹಾಂ ಜಾಯೆ ॥
ನಮ್ಮ ಕಣ್ಣ ಕಾಡಿಗೆಯು ನಿಮ್ಮ ಪಾದದ ಧೂಳಿ ।
ನೀವೇ ಹೇಳಿ ನಿಮ್ಮನ್ನು ಹೊರತು ಪಡಿಸಿ ಹೋಗುವುದೆಲ್ಲಿ ?

ಮತ್ತೆ ಹೀಗೆಂದನು, ಹಜ್ರತ್‌ರೆ ನನ್ನನ್ನು ತಮ್ಮ ಶಿಷ್ಯವೃಂದದಲ್ಲಿ ಸೇರಿಸಿಕೊಳ್ಳಿರಿ.

ಹಜ್ರತ್‌ರು ಆ ವ್ಯಕ್ತಿಯನ್ನು ಶಿಷ್ಯನನ್ನಾಗಿಸಿಕೊಂಡರು ಹಾಗೂ ಅಲ್ಲಾಹುವಿನ ನಾಮದ ಜಪತಪದ ವಿಧಾನ ತಿಳಿಸಿದರು. ಕೊನೆಗೆ ಆ ವ್ಯಕ್ತಿಯು ಮಹಾಪುರುಷರಾಗಿ ಹೊರಹೊಮ್ಮಿದರು. ಹಜ್ರತ್‌ರ ಓರ್ವ ಸೇವಕನು ಅವರ ಬಳಿ ಹೀಗೆಂದನು. ಹಜ್‌ಯಾತ್ರೆಗೆ ಹೋಗಲು ಮನಸ್ಸು ವಿಹ್ವಲಿತಗೊಳ್ಳುತ್ತಿದೆ. ಒಂದು ವೇಳೆ ಪೀರ್‌ರ ಆದೇಶ ಹಾಗೂ ಅನುಮತಿ ದೊರೆತರೆ ಹಜ್‌ಯಾತ್ರೆಗೈದು ಮರಳಿ ಬಂದು ಹಜ್ರತ್‌ರ ಸೇವೆಯಲ್ಲಿ ತೊಡಗುವೆನು.

ಹಜ್ರತ್‌ರು ತಮ್ಮ ಪವಿತ್ರ ನಾಲಿಗೆಯಿಂದ ಹೀಗೆ ಉಚ್ಚರಿಸಿದರು. 'ಏ ಹೈ ಕಾಬಾ' ಹಾಗೂ ಹಸ್ತ ಮುಂದೆ ಚಾಚಿದರು. ಆ ವ್ಯಕ್ತಿಗೆ ಅಲ್ಲಿ 'ಕಾಬಾ' ಕಂಡಿತು. ಹುಜೂರ್‌ರೆಂದರು ಈಗ ಸುತ್ತು ಹಾಕು ಹಜ್ರತ್‌ರ ಆದೇಶದಂತೆ ಸುತ್ತು ಹಾಕಿದರು. ಮತ್ತೆ ಕೆಲ ಸಮಯದ ಬಳಿಕ ಆ ಶಿಷ್ಯನೊಂದಿಗೆ ಹೀಗೆಂದರು ಅಲ್‌ಹಮ್ದುಲಿಲ್ಲಾಹ್! ಅಲ್ಲಾಹುವು ನಿನಗೆ ಇಲ್ಲಿಯೇ ಕಾಬಾದರ್ಶನ ಮಾಡಿಸಿದನು. ಆ ಸೇವಕನು ಹೇಳಿದನು ಅಲ್ಲಾಹುವಿನ ದಯೆಯಿಂದ ಹಾಗೂ ಪೀರ್‌ರ ಕೃಪೆಯಿಂದ ಇದು ಸಂಭವಿಸಿತು.

ಒಂದು ದಿನ ಹಜ್ರತ್ ಷಾಹ್ ಹಾಷಿಮ್(ಖು) ಕುದುರೆಯ ಮೇಲೆ ಸವಾರರಾಗಿ ಕಂದಕ್ಕಿನ ಬದಿಯಿಂದ ಜೋಹರಾಪುರದ ಕಡೆಗೆ ಹೋಗುತ್ತಿದ್ದರು. ಹಾಗೂ ಅಬುಲ್‌ಹಸನ ಫಖರ್‌ಆಬಾದಿಯವರ ಪುತ್ರರಾದ ಹಜ್ರತ್‌ಷಾಹ್ ಯದುಲ್ಲಾಹ್‌ರವರು ಅವರ ಜೊತೆಯಲ್ಲಿದ್ದರು. ಇಂಥದ್ದರಲ್ಲಿ ಒಂದು ಮದೋನ್ಮತ್ತ ಆನೆಯು ಎದುರಿಗೆ ಬಂತು ಹಜ್ರತ್ ಷಾಹ್ ಯದುಲ್ಲಾಹ್(ಖು)ರ ಕುದುರೆಯು ಆನೆಯನ್ನು ಕಂಡು ಜಿಗಿಯಿತು. ತನ್ನ ಮುಂದಿನ ಎರಡು ಕಾಲುಗಳನ್ನು ಕಂದಕ್ಕಿನಲ್ಲಿ ಇಳಿಬಿಟ್ಟಿತು. ಹಜ್ರತ್‌ಷಾಹ್ ಹಾಷಿಮ್(ಖು) ತಮ್ಮ ಎರಡೂ ಕೈಗಳನ್ನು ಆ ಕುದುರೆಯ ಪಾದದಡಿ ಹಿಡಿದು ಅದನ್ನು ಹೊರತಂದರು. ಆ ವೇಳೆಯಲ್ಲಿ ಹಜ್ರತ್‌ಷಾಹ್ ಯದಲ್ಲಾಹ್(ಖು)ರು ನೋಡಿದರು. ಹಜ್ರತ್‌ರು ಕಂದಕನಲ್ಲಿ ಇರುವರು ಹಾಗೂ ಹಿಂದೆ ದೃಷ್ಟಿ ಹಾಕಿದರೆ ಹಜ್ರತ್‌ರು ಕುದುರೆಯ ಮೇಲೆಯೇ ಇರುವರು. ಹಜ್ರತ್ ಷಾಹ್ ಯದುಲ್ಲಾಹ್(ಖು) ಈ ಘಟನೆಯಿಂದ ವಿಹ್ವಲಿತರಾಗಿ ಹಜ್ರತ್‌ರಿಗೆ ಕೇಳಿದರು. ಯಾವಾಗ ನನ್ನ ಕುದುರೆಯ ಎರಡೂ ಕಾಲುಗಳು ಕಂದಕನಲ್ಲಿ ಹೋಗಿದ್ದವು. ನೋಡಿದರೆ ತಾವು ಕಂದಕ್‌ನಲ್ಲಿ ಇದ್ದಿರಿ. ಹಾಗೂ ನನ್ನ ಕುದುರೆಯನ್ನು ತಮ್ಮ ಪವಿತ್ರ ಕೈಗಳಿಂದ ಹೊರ ತಂದಿರಿ ಮತ್ತೆ ಹಿಂದೆ ನೋಡಲು ತಾವು ಕುದುರೆಯ ಮೇಲೆ ಸವಾರರಿದ್ದೀರಿ. ಇದರಲ್ಲಿ ಏನು ರಹಸ್ಯವಿದೆ! ಆಗ ಹಜ್ರತ್ ಹೀಗೆಂದರು. ನಿಮ್ಮ ಈ ಪ್ರಶ್ನೆಯು ವಿಚಿತ್ರವಾಗಿದೆ. ಹಾಗೂ ನಿಮ್ಮ ಮೇಲೆ ಜಾಹೀರುಗೊಂಡಿದೆ. ಫಕೀರನ ಷರತ್ತು ಇದಾಗಿದೆ. ಯಾರೊಡನೆಯೂ ತಪ್ಪೆಸಗಬಾರದು ಆಗಲೇ ಆತನು ಫಕೀರನಾಗುವನು ಈ ಫಕೀರನ ಸ್ಥಿತಿ ನೀವು ಮನಗಂಡಿರಿ ಒಂದು ವೇಳೆ ಯಾವುದೇ ವ್ಯಕ್ತಿಯು ಕಲ್ಮಾ ಇಲಾಹ

ಇಲ್ಲಲಾಹು ಎಂದರೆ ವಿಶ್ವಾಸವಿರಲಿ ಈ ಫಕೀರನ ಕೈಯಿಂದಾದಷ್ಟು ಸಹಾಯ ಒದಗುವುದು. ತಾವಂತೂ ಫಕೀರನ ಕಕ್ಕನ ಮಗ ಆಗಿದ್ದೀರಿ ಹಾಗೂ ಹಜ್ರತ್ ಖ್ವಾಜಾ ಸೈಯ್ಯದ್ ಮುಹಮ್ಮದ್ ಹುಸೈನಿ ಗೇಸುದರಾಜ್‌ರ ಸಂತಾನದಿಂದಿರುವಿರಿ. ನಿಮ್ಮ ಕುದುರೆ ಕಂದಕ್ಕಿನ ನೀರಲ್ಲಿ ಇಳಿಯುತ್ತಿದ್ದರೆ ನಾನು ನೋಡುತ್ತ ನಿಲ್ಲಲೇ? ಯಾವಾಗ ಫಕೀರನ ಕೈಯಿಂದ ಅದನ್ನು ಉಳಿಸಲು ಸಾಧ್ಯವಿದೆ ಮತ್ತೆ ನಾನು ಅದನ್ನು ನಿರ್ಲಕ್ಷಿಸಿದರೆ ನಾಳೆ ನಿಮ್ಮ ಪೂರ್ವಜರಾದ ಹಜ್ರತ್ ಮುಹಮ್ಮದ್ ಹುಸೈನಿ (ಖು)ರ ಎದುರಲ್ಲಿ ನನಗೆ ಲಜ್ಜೆಯುಂಟಾಗುವದು.

'ಮಕ್ಸೂದುಲ್ ಮುರಾದ್' ಪುಸ್ತಿಕೆಯಲ್ಲಿ ಹೀಗೆ ಬರೆದಿದೆ ಹಜ್ರತ್‌ರ ಶಿಷ್ಯರಾದ ಸೈಯ್ಯದ್ ಸಾದಲ್ಲಾಹ್‌ರವರು ಒಂದು ದಿನ ಹಜ್ರತ್‌ರ ಸಭೆಯಲ್ಲಿ ಹಾಜರಿದ್ದರು. ಅವರ ಮನಸ್ಸಿನಲ್ಲಿ ಹೀಗೆ ವಿಚಾರ ಬಂದಿತು. ಅಬ್ದುಲ್‌ಸ್ಸಮದ್ ಸಾಹೇಬರು ಉನ್ನತ ದರ್ಜೆಯ ಮಹಾಪುರುಷರಾಗಿರುವರು. ಅವರ ಸೇವೆಯಲ್ಲಿ ತೊಡಗಿ ಧರ್ಮಪ್ರಸಾರದ ಅನುಮತಿ ಪಡೆಯಬೇಕು. ಅದೇ ವೇಳೆ ಹಜ್ರತ್ ಷಾಹ್‌ಹಾಷಿಂ (ಖು)ರು ಹೀಗೆಂದರು. ಓ ಸಾಅದಾತ್! ಶೇಖ ಅಬ್ದುಸಮದ್ ಮಹಾಪುರುಷರಾಗಿರುವರು. ಅವರ ಬಳಿ ಧರ್ಮಪ್ರಸಾರದ ಅನುಮತಿ ಪಡೆಯಬಹುದು. ಸೈಯ್ಯದ್ ಸಾಅದಲ್ಲಾ ಅಳುತ್ತ ಹೀಗೆಂದರು. ನನ್ನ ನಾಲಿಗೆಯ ಮೇಲೆ ಈ ಮಾತು ಬಂದಿದ್ದರೆ ನನ್ನ ನಾಲಿಗೆ ಕತ್ತರಿಸಲ್ಪಡಲಿ ಆದರೆ ಹೃದಯ ನನ್ನ ಹಿಡಿತದಲ್ಲಿಲ್ಲ ಹಾಗೂ ಪಾದದಡಿಗೆ ಶಿರಬಾಗಿಸಿ ಅತ್ತರು ಹಾಗೂ ಕ್ಷಮೆಯಾಚಿಸಿದರು.

ಒಂದು ದಿನ ಹಜ್ರತ್‌ಷಾಹ್ ಹಾಷಿಂ(ಖು) ಪಾದಶಾಪುರದ ಮಸೀದೆಯಲ್ಲಿ ಕುಳಿತಿದ್ದರು. ಓರ್ವ ವೃದ್ಧೆ ಅಲ್ಲಿ ಬಂದಳು. ಹಾಗೂ ಹಜ್ರತ್‌ರ ಕಾಲಿಗೆ ಬಿದ್ದು, ಹೀಗೆಂದಳು ನನ್ನ ಮಗ ತೀರಿಕೊಂಡನು. ಹಾಗೂ ಆತನು 'ಮುರೀದ್'ನಾಗಿರಲಿಲ್ಲ. ಆತನಿಗೆ ಶಿಷ್ಯತ್ವ ಕಲ್ಪಿಸಿರಿ, ಹಜ್ರತ್‌ರು ಎದ್ದುನಿಂತರು. ಮಸೀದೆಯ ಹೊರಭಾಗದಲ್ಲಿ ಗೋಡೆಯ ನೆರಳಿನಲ್ಲಿ ಕುಳಿತುಕೊಂಡರು. ಆ ವೃದ್ಧೆಯು ಉತ್ತುತ್ತಿ ಹಾಗೂ ಹೂವುಗಳನ್ನು ಹುಜೂರ್‌ರೆದರು ಇಟ್ಟಳು. ಎಲ್ಲ ಸೇವಕರನ್ನು ದೂರ ಹೋಗಲು ಆದೇಶಿಸಿದರು. ಹಜ್ರತ್‌ಷಾಹ್ ಮುರಾದ್(ಖು) ಹೀಗೆನ್ನುತ್ತಾರೆ ಫಕೀರನು ಒಂದು ಮೂಲೆಯಿಂದ ನೋಡಿದನು. ಹಜ್ರತ್‌ರು ತಮ್ಮ ಕೈಯನ್ನು ಹೀಗೆ ಮುಂದೆ ಚಾಚಿದರು. ಯಾರದೋ ಕೈಯನ್ನು ತಮ್ಮೊಂದಿಗೆ ತೆಗೆದುಕೊಳ್ಳುತ್ತಿರುವರು. ಬೈಯ್ಯತ್‌ದ ವೇಳೆ ಏನೆಲ್ಲ ಓದುವರೋ ಹಾಗೆಯೇ ಓದಿದರು. ಅದರ ನಂತರ ಆ ವೃದ್ಧೆಗೆ ಕೇಳಿದರು. ಏನು ನಿನ್ನ ಮಗ ಕಪ್ಪಾಗಿದ್ದಾನೆಯೆ? ಆಗ ವೃದ್ಧೆ ಎಂದಳು ಹೌದು! ಮತ್ತೆ ಕೇಳಿದರು ಸುಮಾರು ಎತ್ತರದವನಾಗಿದ್ದಾನೆಯೇ? ಹಾಗೂ ಗಡ್ಡವನ್ನು ಕತ್ತರಿಸಿಕೊಳ್ಳುತ್ತಿದ್ದನೇ ಮತ್ತೆ ಏನನ್ನೋ ಕೇಳಿದರು: ನಮಗೆ ಕೇಳಿಸಲಿಲ್ಲ. ಆದರೆ ಆ ವೃದ್ಧೆಯು ಪ್ರತಿಸಲವೂ ಪ್ರತಿ ಮಾತಿಗೂ

ಹಜ್ರತ್‌ರ ಕಾಲಿಗೆರಗಿ ಹೇಳುತ್ತಿದ್ದಳು. 'ಸರಿ ಇದೆ'. ನಂತರ ಷಾಹ್ ಮುರಾದ್‌ರಿಗೆ ಬಳಿಗೆ ಕರೆದು ಈಹೂವು ಹಾಗೂ ಖರ್ಜೂರನ್ನು ಹಂಚಿಕೊಳ್ಳಿರೆಂದು ಹೇಳಿದರು.

ಸುಲ್ತಾನ್ ಮುಹಮ್ಮದ್ ಆದಿಲ್‌ಶಾಹನಿಗೆ ಭಯಭೀತತೆಯ ತೊಂದರೆ ಕಾಡತೊಡಗಿತು. ಹಾಗೂ ಅದು ಮೋಡಕವಿದಾಗ ಹಾಗೂ ಸಿಡಿಲು ಮಿಂಚಿದಾಗ, ಹಾಗೂ ಗುಡುಗು ಉಂಟಾದಾಗ ಬಾದಶಾಹನಿಗೆ ಸಹಿಸಲಾಗುತ್ತಿರಲಿಲ್ಲ. ಆತನು ನಿತ್ರಾಣ ಹೊಂದುತ್ತಿದ್ದನು. ಜಿಗುಪ್ಸೆ ಉಂಟಾಗುತ್ತಿತ್ತು. ಊಟ ಸೇರುತ್ತಿರಲಿಲ್ಲ. ನಿದ್ರೆ ಸಮೀಪ ಹಾಯುತ್ತಿರಲಿಲ್ಲ. ಒಂದು ಅವಧಿಯವರೆಗೆ ಇದೇ ಸ್ಥಿತಿಯಲ್ಲಿ ಬಳಲುತ್ತಿದ್ದನು. ಹಾಗೂ ವೈದ್ಯರಿಂದ ಚಿಕಿತ್ಸೆ ಪಡೆದನು ಆದರೆ ಏನೂ ಉಪಯೋಗಕ್ಕೆ ಬರಲಿಲ್ಲ. ಕೊನೆಗೆ ಹಜ್ರತ್‌ಷಾಹ್ ಹಾಷಿಂ (ಖ)ರ ಸನ್ನಿಧಿಯಲ್ಲಿ ಹೇಳಿ ಕಳುಹಿಸಿದನು. ಈ ತೊಂದರೆಯಿಂದ ಮುಕ್ತಿ ಸಿಗಲಿ ಹಜ್ರತ್‌ರು ಹೇಳಿದರು. ಆಗಲಿ ಏನೂ ಚಿಂತೆಯಿಲ್ಲ ಇಂದಿನಿಂದ ಮತ್ತೆ ಯಾವ ಗುಡುಗು ಮಿಂಚು ನಿನ್ನ ಕಿವಿಯಲ್ಲಿ ಕೇಳಬಾರದು ಹೀಗೆಂದರು, ಹಜ್ರತ್‌ರ ಕೃಪಾದೃಷ್ಟಿಯಿಂದಾಗಿ ಸುಲ್ತಾನನು ಆ ದಿನದಿಂದ ಗುಡುಗು ಮಿಂಚಿನ ಶಬ್ದವನ್ನು ಆಲಿಸಲಿಲ್ಲ. ಯಾವಾಗಿನವರೆಗೆ ಬಾದಶಾಹನು ಎಚ್ಚರದಿಂದ ಇರುತ್ತಿದ್ದನು ಮೋಡ ಕವಿಯುತ್ತಿರಲಿಲ್ಲ. ಹಾಗೂ ಮಿಂಚು ಹೊಳೆಯುತ್ತಿರಲಿಲ್ಲ. ಯಾವಾಗ ಮಲಗುತ್ತಿದ್ದನೋ ಹಾಗೂ ನಿದ್ರಾವಸ್ಥೆಯಲ್ಲಿರುತ್ತಿದ್ದನೊ ಆಗ ಮೋಡ ಹಾಗೂ ಮಿಂಚುಗಳು ತಮ್ಮ ಕಾರ್ಯವೆಸಗುತ್ತಿದ್ದವು. ಬಾದಶಾಹನ ಕೊನೆಯುಸಿರು ಇರುವವರೆಗೂ ಇದೇ ಸ್ಥಿತಿ ಇತ್ತು.

ಶೇಖ ಮುಹಮ್ಮದ್ ಸಿದ್ದೀಖಿ ಹಜ್ರತ್‌ಷಾಹ್ ಹಾಷಿಮ್(ಖ)ರ ಮುರೀದ್‌ರು ಉಲ್ಲೇಖಿಸುವರು ನಾನು ಹಜ್ರತ್‌ರ ಬೈಯತ್‌ದಿಂದ ಅನುಗ್ರಹಿತನಾದೆನು. ಆ ವೇಳೆಯಲ್ಲಿ ಹಜ್ರತ್‌ರು ಹೀಗೆಂದರು. ಜಪತಪದ ವಿಧಾನ ನಿಮಗೆ ಮತ್ತೊಂದು ವೇಳೆಯಲ್ಲಿ ಹೇಳುವೆನು. ನಾನು ಒಪ್ಪಿ ಹಗಲಿರುಳು ಹಜ್ರತ್‌ಪೀರ್ ದಸ್ತಗೀರರ ಸನ್ನಿಧಿಯಲ್ಲಿದ್ದೆನು ಹೀಗೆಯೇ ಕೆಲ ವರ್ಷಗಳು ಗತಿಸಿದವು. ಆದರೆ ಜಪತಪದ ವಿಧಾನ ಹೇಳಿಕೊಡಲಿಲ್ಲ. ನಾನೂ ಸಹ ಕೇಳಲಿಲ್ಲ. ಕೊನೆಗೆ ಇಹಲೋಕ ತ್ಯಜಿಸಿದರು. ನಾನು ತುಂಬಾ ವಿಚಲಿತಗೊಂಡೆನು. ನನ್ನ ಪೀರ್ ದಸ್ತಗೀರ್ ಖುತ್ಬುಲ್ ಅಖ್ತಾಬ್ ಆಗಿದ್ದರು. ಹಜ್ರತ್‌ರ ಗಮನವಾಗಲಿಲ್ಲವೋ ಈ ಫಕೀರನು ಇದಕ್ಕೆ ಅರ್ಹನಾಗಿರಲಿಲ್ಲವೋ ನನಗೆ ಯಾವುದೇ ಜಪತಪ ಹೇಳಿಕೊಡಲಿಲ್ಲವಲ್ಲ. ಇದೇ ಚಿಂತೆಯಲ್ಲಿ ವಿಹ್ವಲಿತಗೊಂಡೆನು. ಈ ಕಾಲದಲ್ಲಿ ಬಹಳಷ್ಟು ಔಲಿಯಾ ಮಹಾಪುರುಷರು ಇದ್ದರು. ಆದರೆ ನಾನು ಯಾರೊಡನೆಯೂ ಹೇಳಲಿಲ್ಲ. ಇದೇ ಸ್ಥಿತಿಯಲ್ಲಿ ಕೆಲ ವರ್ಷಗಳು ಉರುಳಿದವು. ಒಂದು ದಿನ ನನ್ನ ಮನಸ್ಸಿನಲ್ಲಿ ಈ ವಿಚಾರ ಬಂದಿತು. ನನ್ನ ಆಯುಷ್ಯ ಮುಗಿಯಲು ಬಂದಿತು. ನಾನು ವೃದ್ಧನಾಗಿದ್ದೇನೆ. ಈಗ ನನಗೆ ನನ್ನ ಗುರುವಿನ ಹೊರತಾಗಿ ಯಾರು

ನನ್ನನ್ನು ಅಲ್ಲಾಹುವಿನೆಡೆಗೆ ತಲುಪಿಸುವರು ಇದರಿಂದಾಗಿ ತುಂಬಾ ವಿಷಾದಪಟ್ಟೆನು ಹಾಗೂ ಕಣ್ಣಿನಿಂದ ಅಶ್ರುಗಳು ಜಾರಿಗೊಂಡವು. ಆಗ ಹ್ರಜತ್‌ಷಾಹ್ ಹಾಷಿಂ(ಖು)ರನ್ನು ಅವರು ಜೀವಂತವಾಗಿದ್ದಾಗ ಹೇಗಿದ್ದರೋ ಹಾಗೆಯೇ ಕಂಡೆನು. ತಕ್ಷಣ ಹಜ್ರತ್‌ರ ಕಾಲಿಗೆರಗಿದೆನು ಅವರು ತಮ್ಮ ಗಮನದಿಂದ ಹಾಗೂ ಕೃಪೆಯಿಂದ ಜಪತಪದ ವಿಧಾನವನ್ನು ಕಲಿಸಿದರು. ಹಾಗೂ 'ಮಾರಿಫತ್ ಇಸ್ರಾರ್' ಅಲ್ಲಾಹುವಿನ ರಹಸ್ಯ ಜ್ಞಾನದಿಂದ ಸಮೃದ್ಧಗೊಳಿಸಿದರು. ಆಗ ಮನಸ್ಸಿಗೆ ಸಮಾಧಾನ ಹಾಗೂ ಹೃದಯಕ್ಕೆ ತೃಪ್ತಿ ದಕ್ಕಿತು.

ಆ ಕಾಲದಲ್ಲಿ ಈರ್ವರು ವಿಖ್ಯಾತ ಕಳ್ಳರಿದ್ದರು. ತಮ್ಮ ಲೂಟಿಕೋರರ ಗುಂಪಿನಲ್ಲಿಯೇ ಅತ್ಯಂತ ಮುಂದುವರಿದವರಾಗಿದ್ದರು. ಬಹಳಷ್ಟು ಮನೆಗಳನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸಿ ಬಿಡುತ್ತಿದ್ದರು. ಅವರನ್ನು ಹಿಡಿಯಲಿಕ್ಕಾಗಿ ಆರಕ್ಷಕರು ನೇಮಿಸಲ್ಪಟ್ಟಿದ್ದರು. ಆದರೂ ಅವರ ಕೈಗೆ ಸಿಗಲಿಲ್ಲ. ಆಕಸ್ಮಿಕವಾಗಿ ಒಂದು ದಿನ ಕೋತ್ವಾಲನ ಸಿಪಾಯಿಗಳ ಕೈಗೆ ಸಿಕ್ಕಿಹಾಕಿಕೊಂಡರು. ಕೋತ್ವಾಲನು ಅವರಿಗೆ ಶಿಕ್ಷೆ ನೀಡಬಯಸಿದನು. ಆದರೆ ಆ ಕಳ್ಳರು ತಮ್ಮನ್ನು ತಾವು ಉಳಿಸಿಕೊಳ್ಳಲು, ಹಜ್ರತ್ ಷಾಹ್ ಹಾಷಿಂ(ಖು)ರ ಪ್ರಕೃತಿ, ಮೃದು ಸ್ವಭಾವ ಅರಿತಿದ್ದರಿಂದ ತಮ್ಮನ್ನು ಈ ಕಾರ್ಯಕ್ಕೆ ಹಜ್ರತ್‌ರು ಕಳುಹಿಸಿರುವರು. ಎಂದು ಹೇಳಿಬಿಟ್ಟರು. ಹಜ್ರತ್‌ಶಾಹ್ ಹಾಷಿಂ(ಖು)ರವರು ಸದ್ವರ್ತನೆ ಮೃದುಗುಣ, ಅನುಕಂಪಕ್ಕೆ ತುಂಬಾ ಪ್ರಸಿದ್ಧರಾಗಿದ್ದರು. ಆ ಕಾಲದ ಬಾದಶಹ, ಆಡಳಿತಗಾರರು ಅಧಿಕಾರಿಗಳೂ ಸಹ ಅವರನ್ನು ಗೌರವಿಸುತ್ತಿದ್ದರು. ಅವರ ಅನುಯಾಯಿಗಳು ಹಾಗೂ ಅಭಿಮಾನಿಗಳೂ ಆಗಿದ್ದರು. ಇದೇ ಕಾರಣಕ್ಕೆ ತಮ್ಮನ್ನು ತಾವು ಶಿಕ್ಷೆಯಿಂದ ಉಳಿಯಲು ಹಜ್ರತ್‌ರು ನನಗೆ ಈ ಕೆಲಸಕ್ಕೆ ಕಳುಹಿಸಿದ್ದಾರೆ. ಇದರಲ್ಲಿ ನಮ್ಮದೇನು ತಪ್ಪಿಲ್ಲ ಎಂದು ಬಿಟ್ಟರು. ಯಾವಾಗ ಆ ಈರ್ವರು ಕಳ್ಳರು ಹಜ್ರತ್‌ರ ಹೆಸರನ್ನು ತೆಗೆದುಕೊಂಡಾಗ ಕೋತ್ವಾಲನು ಆಶ್ಚರ್ಯಚಕಿತನಾದನು. ಹಾಗೂ ಈ ಈರ್ವರು ಕಳ್ಳರನ್ನು ಬಾದಶಹನ ಎದುರಲ್ಲಿ ತಂದು ನಿಲ್ಲಿಸಿದನು. ಅಲ್ಲಿಯೂ ಸಹ ಈ ಕಳ್ಳರು ತಮ್ಮ ಬಿಡುಗಡೆಯ ಹಾದಿಯೆಂದು ಬಗೆದು ಹಜ್ರತ್‌ರ ಹೆಸರನ್ನೇ ಹೇಳಿದರು. ಬಾದಶಹ ಹಾಗೂ ಆಡಳಿತಗಾರರು ಅವರನ್ನು ನಿಮ್ಮ ಜೀವವನ್ನು ಉಳಿಸಿಕೊಳ್ಳಲು ಹಜ್ರತ್‌ರ ಹೆಸರನ್ನು ಹೇಳುತ್ತಿದ್ದೀರಿ ಎಂದು ಜರೆದರು. ಆಗ ಕಳ್ಳರೆಂದರು ಹಜ್ರತ್‌ರಿಂದಲೇ ಕೇಳಿರಿ! ಸತ್ಯ ಏನು? ಸುಳ್ಳು ಏನು? ಎಂದು ತಿಳಿಯುವದು. ಬಾದಶಾಹನು ತನ್ನ ಸೇವಕರನ್ನು ಹಜ್ರತ್‌ರ ಬಳಿಗೆ ಈ ಸಂದೇಶದೊಂದಿಗೆ ಕಳುಹಿಸಿದನು. ಯಾರು ಕಳವು ಮಾಡಲು ಬಂದು ಸಿಕ್ಕಿ ಹಾಕಿಕೊಂಡಿರುವರು ಅವರು ನೀವು ಕಳವು ಮಾಡಲು ಕಳುಹಿಸಿದ್ದೀರಿ ಎಂದೆನ್ನುತ್ತಿದ್ದಾರೆ.

ಓ ಸಮರ್ ಬಸ್ತಾನೆ ರಹ್ಮತುಲ್ಲಾಲಮೀನ್, ಶಫಿವುಲ್ ಮುಜ್ನಬೀನ್ ಆ

ದಯಾಸಾಗರರಾದ ಹಾಗೂ ಕರುಣೆಯ ಉದ್ಯಾನವನದ ಫಲಭರಿತ ವೃಕ್ಷವಾಗಿರುವ ಹಾಗೂ ಪಾಪಿಗಳನ್ನು ಕ್ಷಮಿಸಿ ಪಾಪಪರಿಹರಿಸುವವರಾಗಿರುವ ಹಜ್ರತ್‌ಶಾಹ್ ಹಾಷಿಂಪೀರ್ ಖಿದ್ದಸ್ಸರ್ರಾಹರು ಈ ಘಟನೆಯನ್ನು ಆಲಿಸಿ ಹೀಗೆಂದರು. ಹೌದು! ಸರಿಯಾಗಿಯೇ ಹೇಳುತ್ತಾರೆ. ಅವರನ್ನು ಈ ಕೆಲಸಕ್ಕಾಗಿಯೇ ಕಳುಹಿಸಲಾಗಿದೆ. ಅವರ ಯಾವುದೇ ತಪ್ಪಿಲ್ಲ. ತಪ್ಪು ಈ ಫಕೀರನದೇ ಇರುವದು. ಅವರಿಗೆ ಯಾವುದೇ ತೆರನಾಗಿ ಶಿಕ್ಷೆ ನೀಡಬೇಡಿರಿ. ಹಾಗೂ ಅವರನ್ನು ಬಿಟ್ಟು ಬಿಡಿರಿ. ಬಾದಶಾಹನು ಮತ್ತೆ ಎರಡನೆಯ ಬಾರಿ ಪರೀಕ್ಷೆಗಾಗಿ ಹಜ್ರತ್‌ರಿಂದ ಅವರ ಗುರುತನ್ನು ಮುಖಚರ್ಯೆಯನ್ನು ಹೇಳಲು ಕಳುಹಿಸಿದನು. ಹಜ್ರತ್‌ರು ಅವರ ಮುಖಚರ್ಯೆ, ದೇಹ ಪ್ರಕೃತಿ, ಎತ್ತರ, ನಿಲುವು ಇತ್ಯಾದಿಗಳನ್ನು ಇದ್ದಕ್ಕಿದ್ದಂತೆಯೇ ವಿವರಿಸಿ ಹೀಗೆಂದರು. ಬೇಗನೆ ಬಿಟ್ಟು ಬಿಡಿರಿ. ಅದರಿಂದ ಬಾದಷಾಹ್ ಹಾಗೂ ಅಧಿಕಾರಿಗಳು, ಹಜ್ರತ್‌ರು ದಯಾಮಯಿಯೂ ವಾತ್ಸಲ್ಯಮಯಿಯೂ ಕರುಣಾಮಯಿಯೂ ಆಗಿರುವರು ಹಾಗೂ ಪಾಪಿಗಳನ್ನು ಕ್ಷಮಿಸುವ ಸಲುವಾಗಿ ಈ ಕಾರ್ಯವೆಸಗುತ್ತಿರುವರು ಎಂದು ಬಗೆದರು ಹಾಗೂ ಅದೇ ವೇಳೆ ಹಜ್ರತ್‌ರ ಬಳಿಗೆ ಆ ಈರ್ವರೂ ಕಳ್ಳರನ್ನು ಕಳುಹಿಸಿಕೊಟ್ಟರು. ಆ ಈರ್ವರೂ ಕಳ್ಳರು ಹಜ್ರತ್‌ರ ಕಾಲಿಗೆರಗಿ ತಮ್ಮ ತಪ್ಪನ್ನು ಒಪ್ಪಿಕೊಂಡರು. ಈ ಮಹಾನ್ ಗುಣವು ಇಂದಿಗೂ ಹಜ್ರತ್‌ರ ವಂಶದಲ್ಲಿ ಇರುವದು. ಹಜ್ರತ್‌ರ ಸರ್ವ ಗುಣಗಳು, ಪವಾಡಗಳು, ಫಕೀರಿ, ದರ್ವೇಶಿತನದ ದರ್ಜೆ, ತಪ್ಪನ್ನು ಕ್ಷಮಿಸುವದು, ಅಲ್ಲಾಹುವಿನಲ್ಲಿಯೇ ನಿಷ್ಠೆ, ಆರಾಧನೆ ಹಾಗೂ ಶ್ರದ್ಧೆ, ತ್ಯಾಗ ಹಾಗೂ ಉತ್ತಮ ಚಾರಿತ್ರ್ಯದ ವ್ಯಕ್ತಿತ್ವ, ಅಲ್ಲಾಹುವಿನ ಸಜ್ಜನ ದಾಸರು, ಸೈಯ್ಯದಿ, ಸನದಿ, ಮುರ್ಷದಿ ಹಜ್ರತ್‌ಶಾಹ್ ಅಬ್ದುಲ್ಲಾಹ್ ಸಾನಿ ಅಲ್ವಿಯವರಲ್ಲಿ ಈ ಎಲ್ಲ ಗುಣಗಳು ಪ್ರತಿಫಲಿಸಿವೆ. ಯಾವ ಉನ್ನತ ದರ್ಜೆಯ ಜ್ಞಾನಸಮೃದ್ಧಿ, ಮಹಾಪುರುಷರ ಲಕ್ಷಣಗಳು ಹಜ್ರತ್‌ಶಾಹ ಹಾಷಿಂ ಪೀರರಲ್ಲಿ ಗೋಚರಿಸುತ್ತಿದ್ದವೋ ಅವೆಲ್ಲವೂ ಈ ಹಜ್ರತ್ ಷಾಹ್ ಅಬ್ದುಲ್ಲಾಹ್ ಸಾನಿ ಅಲ್ವಿಯವರಲ್ಲಿಯೂ ಕಂಡುಬರುತ್ತವೆ. ಆ ಈರ್ವರು ಕಳ್ಳರಲ್ಲಿ ಓರ್ವನು ಹಜ್ರತ್‌ರಲ್ಲಿ ವಿನಂತಿಸಿದನು. ಈ ಗುಲಾಮನಿಗೆ ನಿಮ್ಮ ಶಿಷ್ಯವೃಂದ ಹಾಗೂ ಸೇವಕರಲ್ಲಿ ದಾಖಲುಗೊಳಿಸಿರಿ. ಆದರೆ ಎರಡು ಅತ್ಯಂತ ದೊಡ್ಡ ಕೆಟ್ಟ ಹವ್ಯಾಸಗಳು ನನ್ನಲ್ಲಿ ಮನೆ ಮಾಡಿವೆ ಅವುಗಳೆಂದರೆ ಮದ್ಯಸೇವನೆ ಹಾಗೂ ವ್ಯಭಿಚಾರ ಈ ಎರಡನ್ನೂ ನಾನು ಬಿಡಲಾರೆನು. ಈ ಎರಡೂ ಪಾಪಗಳನ್ನು ಕ್ಷಮಿಸಿರಿ ಹೇಗೆ ಇಂದು ಸಹಾಯ ನೀಡಿ, ದಯೆ ತೋರಿ ನನ್ನ ಜೀವ ಹಾಗೂ ಮರ್ಯಾದೆಯನ್ನು ಉಳಿಸಿದಿರಿ ಹಾಗೆಯೇ ಅಂತ್ಯ ವಿಚಾರಣೆಯ ದಿನ (ಕಯಾಮತ್)ವೂ ಹೀಗೆಯೇ ಕ್ಷಮೆ ಹಾಗೂ ಮುಕ್ತಿಯ ಮಾಧ್ಯಮವಾಗಿರಿ. ಹಜ್ರತ್‌ರೆಂದರು ಆಗಲಿ! ಆದರೆ ಫಕೀರನೆದುರು ಈ ಕಾರ್ಯವೆಸಗಬೇಡ ಅದಕ್ಕೆ ಆ ವ್ಯಕ್ತಿಯು ತುಂಬಾ ಸಂತಸಗೊಂಡು ಬೈಯ್ಯತ ಪಡೆದು ಹೊರಟುಹೋದನು. ಮುಂದೆ ತನ್ನ ಹವ್ಯಾಸದಂತೆ ಮಧ್ಯ ಸೇವಿಸಲೆಂದು

ಸಾರಾಯಿ ಅಂಗಡಿಗೆ ಹೋದನು. ಆ ಸ್ಥಳದಲ್ಲಿ ನೋಡಿದರೆ ಹಜ್ರತ್‌ರು ಇದ್ದಾರೆ. ಅಲ್ಲಿಂದ ಲಜ್ಜಿತಗೊಂಡು ಹೊರಬಂದನು. ಮತ್ತೆ ವೇಶ್ಯೆಯ ಮನೆಗೆ ಹೋದನು. ಅಲ್ಲಿಯೂ ಮುರ್ಷಿದ್‌ರ ಮುಖಕಂಡು ನಾಚಿಕೆಯಿಂದ ಹೊರಬಂದನು. ಇದೇ ತೆರನಾಗಿ ಯಾವಾಗ ಕೆಟ್ಟ ಕೆಲಸ ಮಾಡುವ ವಿಚಾರ ಮನದಲ್ಲಿ ತಂದುಕೊಂಡು ಎಲ್ಲೆಲ್ಲಿ ಹೋಗುತ್ತಿದ್ದನೋ ಅಲ್ಲೆಲ್ಲ ಹಜ್ರತ್‌ರನ್ನು ಕಾಣುತ್ತಿದ್ದನು.

ಹರ್‌ಜಾಕೆ ರೋಮ್ ರೂಯೆ ತುರಾಮೀ ಬೀನಮ್।
ಜಾವೂಂ ಮೈ ಜಹಾಂ ಭೀ ದಿಖತೀ ಹೈ ತುಮ್ಹಾರಿ ಸೂರತ್ ॥
ಜಿದರ್ ದೇಖ್ತಾ ಹೂಂ ಉಧರ್ ತೂಹಿತೂಹೈ ।

'ಎಲ್ಲೆಲ್ಲಿ ನಾನು ಹೋಗುವೆನೋ ಅಲ್ಲಲ್ಲಿ ನಿಮ್ಮ ಮುಖಾರವಿಂದವನ್ನೇ ಕಾಣುವೆನು। ಹಲವಾರು ಬಾರಿ ಇದೇ ತೆರನಾಗಿ ಹಜ್ರತ್‌ರ ಮುಖಾರವಿಂದ ಕಂಡು ಕೆಟ್ಟ ಕೆಲಸಗಳಿಂದ ಮುಕ್ತನಾದೆನು.

ಹಜ್ರತ್‌ಶಾಹ್ ಹಾಷಿಂ ಪೀರ್(ಖ)ರು ಶಿಷ್ಯವೃಂದ ಹಾಗೂ ಜ್ಞಾನಾರ್ಥಿಗಳೊಂದಿಗೆ ಬಾದಶಾಹಪುರದ ಜಾಮಿಯಾ ಮಸೀದೆಯಲ್ಲಿ ಕುಳಿತುಕೊಂಡಿದ್ದರು. ಓರ್ವ ಸೇವಕನು ಬಂದು ವಿನಂತಿಸಿಕೊಂಡನು. ಸುಲ್ತಾನ್ ಮುಹಮ್ಮದ್ ಆದಿಲ್‌ಶಾಹನಿಗೆ ಒಂದು ಅಸಾಧ್ಯ ವ್ಯಾಧಿಯುಂಟಾಗಿದೆ. ವೈದ್ಯರು, ಹಕೀಮರು ಆ ರೋಗವನ್ನು ಕಂಡುಹಿಡಿಯಲು ಹಾಗೂ ಚಿಕಿತ್ಸೆ ನೀಡಲು ಅಸಹಾಯಕರಾಗಿದ್ದಾರೆ. ಆದಕಾರಣ ಹಜ್ರತ್‌ರ ಸನ್ನಿಧಿಯಲ್ಲಿ ಈ ನಮ್ರ ವಿನಂತಿಯನ್ನು ಬಾದಶಾಹರು ಮಾಡಿರುವರು. ದಯೆ ಹಾಗೂ ಕೃಪೆಯ ದೃಷ್ಟಿ ಬೀರಬೇಕು ಇದರಿಂದ ಬಾದಶಾಹರ ತೊಂದರೆಯೂ ನೀಗಬೇಕು ಹಾಗೂ ರೋಗಮುಕ್ತರಾಗಬೇಕು. ಹಜ್ರತ್‌ರು ಈ ವಿಷಯ ತಿಳಿದು ಸೇವಕನಿಗೆ ಹೀಗೆಂದರು. 'ರುಮಾಲು' ತಾ ಆ ಸೇವಕನು 'ರುಮಾಲು' ತಂದನು. ಆಗ ಹಜ್ರತ್‌ರು ಸುದೀರ್ಘವಾಗಿ ಪ್ರಾರ್ಥಿಸಿ ಆ ರುಮಾಲುವಿನ ಮೇಲೆ ಊದಿದರು. ಹಾಗೂ ಸೇವಕನಿಗೊಪ್ಪಿಸಿ ತೆಗೆದುಕೊಂಡು ಹೋಗಲು ಹೇಳಿ, ಎಲ್ಲಿ ನೋವಿದೆಯೋ ಅಲ್ಲಿ ಕಟ್ಟಿಕೊಳ್ಳಲು ಹೇಳಿದರು. ಸೇವಕನು ಆ ರುಮಾಲನ್ನು ಹಾಗೂ ಹಜ್ರತ್‌ರ ಆಜ್ಞೆಯನ್ನು ಬಾದಶಾಹರಿಗೆ ತಲುಪಿಸಿದನು. ಬಾದಶಾಹರು ಆಜ್ಞೆಯನ್ನು ಶಿರಸಾ ಪಾಲಿಸಿದರು. ಆದರೆ ಯಾವುದೇ ಪರಿಣಾಮ ಕಂಡು ಬರಲಿಲ್ಲ. ಬಾದಶಾಹನು ಸ್ವತಃ ಹಜ್ರತ್‌ರ ಸನ್ನಿಧಿಯಲ್ಲಿ ಹಾಜರಾಗಿ ತುಂಬಾ ವಿನೀತನಾಗಿ ವಿಲವಿಲ ಒದ್ದಾಡತೊಡಗಿದನು ಹಾಗೂ ನಮ್ರನಾಗಿ ವಿನಂತಿಸಿಕೊಂಡನು.

ತಮ್ಮ ದಯೆಯಿಲ್ಲದೇ ನನ್ನ ಈ ನೋವಿನ ಮುಕ್ತಿಯು ಮತ್ತೆಲ್ಲಿಯೂ ಕಾಣದು, ಆ ಕಾರಣಕ್ಕಾಗಿ ಅಲ್ಲಾಹುವಿಗಾಗಿ ಈ ಇಚ್ಛುಕನ ಮೇಲೆ ಕರುಣೆಯ ದೃಷ್ಟಿ ಬೀರಿರಿ

ಹಾಗೂ ಈ ನೋವಿಗೆ ಮುಕ್ತಿ ನೀಡಿರಿ ನನ್ನ ತಂದೆಯ ಮೇಲೆ ಹೇಗೆ ಕರುಣೆಯ ಮಳೆ ಸುರಿಸಿದ್ದೀರಿ ಹಾಗೆಯೇ ನನ್ನ ಮೇಲೆಯೂ ವರ್ಷಿಸಿರಿ ಹಜ್ರತ್‌ರು ಹೀಗೆಂದರು ನಿಸ್ಸಂದೇಹ! ನಿನ್ನ ತಂದೆ ಇಬ್ರಾಹಿಮ್ ಆದಿಲ್‌ಶಾಹ್‌ನು ಫಕೀರನ ಮೇಲೆ ಬಹಳೇ ಸಹಾಯವೆಸಗಿದ್ದಾನೆ ಯಾವಾಗ ಫಕೀರನು ಹಜ್‌ಯಾತ್ರೆಗೈದು ಈ ಕಡೆಗೆ ಬಂದನೋ ಆಗ ತನ್ನೆಲ್ಲ ಸ್ನೇಹಿತರೊಂದಿಗೆ ಯಾರು ಹಡಗಿನಲ್ಲಿ ಫಕೀರನ ಜೊತೆಗಿದ್ದರು ಪೋರ್ತುಗೀಜರ ಬಂಧನಕ್ಕೊಳಗಾದರು. ಆ ಸಮಯದಲ್ಲಿ ನಿನ್ನ ತಂದೆಯು ಸಹಾಯಹಸ್ತ ಚಾಚಿದನು. ಬಹಳ ಗೌರವ ತೋರಿದನು. ಈಗ ಅದರ ಬದಲಾಗಿ ನಿನಗೆ ಸಹಾಯ ದೊರೆಯುವುದು. ನಿನ್ನ ಆಯುಷ್ಯವು ಮುಗಿದು ಹೋಗಿದೆ ಈಗ ಪ್ರಾಣದಾನದ ಹೊರತು ಏನೂ ಸಾಧ್ಯವಿಲ್ಲ. ಫಕೀರನ ಆಯುಷ್ಯದಲ್ಲಿ ಹತ್ತುವರ್ಷ ಇನ್ನೂ ಬಾಕಿ ಇವೆ ಆ ಹತ್ತುವರ್ಷಗಳ ಆಯುಷ್ಯವನ್ನು ನಿನಗೆ ದಯಪಾಲಿಸಿದೆನು. ಹಾಗೂ ನಿನ್ನ ನೋವು ನನ್ನ ಮೇಲೆ ತೆಗೆದುಕೊಂಡೆನು ತಕ್ಷಣ ಸುಲ್ತಾನ್ ಮುಹಮ್ಮದ್ ಆದಿಲ್‌ಶಾಹ್‌ನು ರೋಗಮುಕ್ತನಾದನು. ಹಾಗೂ ಮರುದಿನ ಮತ್ತೆ ಹಜ್ರತ್‌ರ ಸನ್ನಿಧಿಯಲ್ಲಿ ಹಾಜರಾಗಿ ನೋಡಿದರೆ ತನ್ನ ನೋವು ಹಜ್ರತ್‌ರ ದೇಹದ ಮೇಲೆ ಸ್ಪಷ್ಟ ಗೋಚರವಾಗುತ್ತಿದೆ. ಹಜ್ರತ್‌ರಿಗೆ ಈ ತೆರನಾಗಿ ನೋವಿದೆ. ಅವರು ತಮ್ಮ ಸ್ಥಳದಿಂದ ಅಲುಗಾಡಲೂ ಆಗುತ್ತಿಲ್ಲ. ಬಾದಶಾಹನು ಬಹಳಷ್ಟು ವಿಷಾದ ಪ್ರಕಟಿಸಿದನು. ಹಾಗೂ ಅವರ ಶುಶ್ರೂಷೆಯನ್ನು ಮಾಡಿದನು. ಹಜ್ರತ್‌ರು ಹೇಳಿದರು.

ಅಲ್ ಮೌತು ಜಿಸ್ರೂನ್ ಯೂಂ ಸಿಲೂಲ್ ಹಬೀಬಾ ಇಲಲ್ ಹಬೀಬಿ ।
ಮೌತ್ ಪುಲ್ ಹೈ ಪಹೂಂಚಾತೀಹೈ ದೋಸ್ತ ಕೋ ದೋಸ್ತ ಕೀ ತರಫ್ ।

ಈ ವಿಷಯದ ಮೇಲೆ ಹೀಗೆ ವ್ಯಾಖ್ಯಾನಿಸಿದರು. – ಮರಣವು ಒಂದು ಸೇತುವೆಯಾಗಿದೆ. ಅದು ಸೇರಿಸುವದು ಗೆಳೆಯನನ್ನು ಗೆಳೆಯನೊಂದಿಗೆ ।

ಮರ್ಗ ಮಾರಾ ಜಿಂದಗೀ ದೀಗರ್ ಅಸ್ತ್
ಜಹರೆ ಮರ್ಗ ಅಜ್ ಶಹದ್ ಶಿರೀಂ ಖುಷ್ತರ್ ಅಸ್ತ ।
ಮರ್ಗ ಸಾಜ್ ವ ಮಗಜ್ ರಾ ಸಾಫಿ ಜಪೋಸ್ತ ।
ತಾ ರಸಾನದ್ ದೋಸ್ತ ರಾ ನಜ್ದೀಕ್ ದೋಸ್ತ ॥
ಮೌತ್ ಹಮ್ಕೊ ದೂಸರಿ ಹೈ ಜಿಂದಗಿ
ಶಹದ್ ಸೆ ಬೆಹ್ತರ್ ಹೈ ತಲ್ಖಿಯೇ ಮೌತ್‌ಕಿ ।
ಮಗಜ್ ಕೊ ಕರ್ದೆ ಜುದಾ ವೊ ಪೋಸ್ತಸೆ
ದೋಸ್ತ ಕೊ ತಾಕೆ ಮಿಲಾದೆ ದೋಸ್ತಸೆ ॥

ಮರಣವು ನಮಗೆ ಎರಡನೆಯ ಬದುಕು ಜೇನಿಗಿಂತಲೂ ಉತ್ತಮ ಈ ಮರಣದ

ಕಹಿಯು । ತಿರುಳನ್ನು ಬೇರ್ಪಡಿಸಿ ಸಿಪ್ಪೆಯಿಂದ, ಗೆಳೆಯನನ್ನು ಗೆಳೆಯನೊಂದಿಗೆ ಭೇಟಿ ಮಾಡಿಸುತ್ತದೆ.

ಈ ಘಟನೆಯಿಂದ ಬಾದಶಾಹ ಹಾಗೂ ಇನ್ನಿತರರಿಗೆ ತಿಳಿದು ಬಂದಿದ್ದೇನೆಂದರೆ ಅಲ್ಲಾಹುವಿನ ಗೆಳೆಯರು ಕೇವಲ ಅಲ್ಲಾಹುವಿನ ಸಂಪ್ರೀತಿಗಾಗಿ ಬೇರೆಯವರ ಭಾರವನ್ನು ತಾವು ಹೊತ್ತುಕೊಳ್ಳುತ್ತಾರೆ. ತಮ್ಮ ಆಯುಷ್ಯವನ್ನು ಕೂಡ ಬೇರೆಯವರಿಗೆ ದಾನ ಮಾಡುತ್ತಾರೆ. ಇವರ ಬಳಿ ನೋವು–ನಲಿವು, ಜೀವನ–ಮೃತ್ಯು ಎಲ್ಲ ಸಮವಾಗಿವೆ. ಹಜ್ರತ್‌ರು ಅದೇ ಸಮಯದಿಂದ ಮೂರನೆಯ ದಿನ ಶುಕ್ರವಾರದಂದು ರಂಜಾನ್ ತಿಂಗಳ ಒಂಬತ್ತನೆಯ ತಾರೀಖಿನಂದು ಹಿಜ್ರಿಶಕೆ ೧೦೫೬ ರಂದು ಅಲ್ಲಾಹುವಿನ ಸನ್ನಿಧಿ ಸೇರಿದರು. ಇವರ ಶವಯಾತ್ರೆಯಲ್ಲಿ ಬಾದಶಾಹ, ಮಂತ್ರಿಗಳು, ಅಮೀರರು, ಫಕೀರರು, ಸಾಅದಾತ್ ಹಾಗೂ ಮಶಾಯಕೀನ್, (ಸೂಫಿ ವಂಶಸ್ಥರು) ವಿದ್ವಾಂಸರು ಬಿಜಾಪುರದ ಸರ್ವ ಸಾರ್ವಜನಿಕರು, ಪಂಡಿತ ಪಾಮರರೆನ್ನದೇ ಎಲ್ಲರೂ ಹಾಜರರಿದ್ದರು. ಪ್ರತಿಯೊಬ್ಬರೂ ಪವಿತ್ರ ಶವಕ್ಕೆ ಹಸ್ತಸ್ಪರ್ಶಿಸಿ ಧನ್ಯಭಾವ ಹೊಂದಲು ಬಯಸುತ್ತಿದ್ದರು. ಆದರೆ ಯಾರ ಕೈಯೂ ತಲುಪುವ ಸ್ಥಿತಿಯಲ್ಲಿರಲಿಲ್ಲ. ಜನಾಜಾ ಮೇಲ್ಭಾಗದಲ್ಲಿ ತೇಲಿ ಹೊರಟಿತ್ತು. ಹಜ್ರತ್‌ರ ಸಮಾಧಿಯು ಬಾದಶಾಹಪುರದಲ್ಲಿದೆ ಹಾಗೂ ಸಮಾಧಿಯ ಮೇಲ್ಗಡೆ ತುಂಬಾ ಸುಂದರವಾದ ಗುಂಬಜ್ ನಿರ್ಮಿಸಲಾಗಿದೆ. ಹಜ್ರತ್‌ರ ಆಸ್ತಾನಾ (ಸಮಾಧಿ ಸ್ಥಳ)ವು ಪವಾಡಗಳಿಂದ ಕೂಡಿದೆ ಸಾರ್ವಜನಿಕರ ದರ್ಶನ ಸ್ಥಳ ಹಾಗೂ ಇಚ್ಛಾಪೂರ್ತಿಗೊಳ್ಳುವ ಸ್ಥಳವಾಗಿದೆ. ಹಜ್ರತ್‌ರ ನಿಧನದ ದಿನಾಂಕವು 'ಬಾದಶಾಹ್ ಅಹಲೇ ಬಹಿಸ್ತ' (೧೦೫೬) ಇರುವದು. ಹಾಗೂ 'ಮಫ್ಜರ್ ಕೌನೀನ್' ಎಂದೂ ಕೂಡಾ ಅಂದಿರುವರು. ಎಂದರೆ (೧೦೫೬) ಎಂದಾಗುವದು.

ಮೃತ್ಯುವಿನ ನಂತರ ಮೂರನೆಯ ದಿನ ಬಹಳಷ್ಟು ಸಾಅದಾತ್, ಮಶಾಯಿಕೀನ್ ನ್ಯಾಯಾಧೀಶರು, ವಿದ್ವಾಂಸರು, ಶಿಷ್ಯರು, ಖಲೀಫಾಗಳು ಮಂತ್ರಿಗಳು ಹಾಗೂ ಅಮೀರರು ಒಟ್ಟುಗೂಡಿದರು. ಕವ್ವಾಲಿ ಹಾಡುವವರು ಹಜ್ರತ್‌ರು ಬರೆದ 'ಜಕರ್‌ಟಾನ' ಇದನ್ನು ಹಜ್ರತ್‌ರು ತಾವು ತೀರಿಕೊಳ್ಳುವ ಮೂರು ದಿನ ಮೊದಲು ಕವ್ವಾಲನಿಗೆ ಬಾಯಿಪಾಠ ಮಾಡಲು ಆದೇಶ ನೀಡಿದ್ದರು. ಅದನ್ನು ಈಗ ಹಾಡತೊಡಗಿದರು. ತಕ್ಷಣ ಪವಿತ್ರ ಸಮಾಧಿಯು ಚಲನೆಯಲ್ಲಿ ಬಂದಿತು ಹಾಗೂ ಸಮಾಧಿಯ ಮೇಲಿದ್ದ ಹೂವುಗಳು ಆ ಜನರ ಒಡಲಲ್ಲಿ ಬಂದು ಬಿದ್ದವು. ಯಾರು ಸಮಾಧಿ ಸ್ಥಳದಿಂದ ದೂರ ಕುಳಿತಿದ್ದರು ಹಾಗೂ ತುರಾಯಿಯು ಕವ್ವಾಲನ ಒಡಲಲ್ಲಿ ಬಿದ್ದಿತು ಯಾರು ಹಜ್ರತ್‌ರ ಕಟ್ಟಾ ಅನುಯಾಯಿಯಾಗಿದ್ದನು. ಹಾಗೂ ಅವನ ಮೇಲೆ ಹಜ್ರತ್‌ರ ಕೃಪಾದೃಷ್ಟಿ ಇತ್ತು ಜನರು ಆ ಪುಷ್ಪಗಳನ್ನು ಪ್ರಸಾದವೆಂದು ಬಗೆದು ತಿಂದರು ಹಾಗೂ ಪವಿತ್ರ ಸಮಾಧಿಯು ಚಲನೆಯಲ್ಲಿ ಬಂದದ್ದು ಕಂಡು ಎಲ್ಲರೂ ಸ್ತಂಭೀಭೂತರಾದರು.

ಒಂದು ದಿನ ಧಾರ್ಮಿಕ ಮುಖ್ಯಗುರುಗಳಾದ ಹಜ್ರತ್ ಮೌಲಾನಾ ಅಬ್ದುಲ್ ರಹೀಂ (ಖು)ರವರು ಹಜ್ರತ್ ಷಾಹ್ ಹಾಷಿಂ(ಖು)ರ ಸಮಾಧಿಭವನಕ್ಕೆ ದರ್ಶನಾರ್ಥಿಯಾಗಿ ಆಗಮಿಸಿದರು. ಫಾತೇಹಾ ಓದಿದ ನಂತರ ದರ್ಗಾದ ಜಿಯಾರತ್‌ಗೈದು ಮನಸ್ಸಿನಲ್ಲಿಯೇ ಯೋಚಿಸಿದರು. ಹಜ್ರತ್ ಷಾಹ್ ಹಾಷಿಂ(ಖು) ಯಾವ ದರ್ಜೆಯನ್ನು ಅಲಂಕರಿಸಿರಬಹುದು. ಹಜ್ರತ್ ಮೌಲಾನಾರವರ ಅಭ್ಯಾಸವಿತ್ತು. ತಮ್ಮ (ವಜೀಫಾ) ಜಪತಪದ ಪುಸ್ತಕವನ್ನು ಸದಾಕಾಲ ತಮ್ಮ ಜೊತೆಗೆಯೇ ಇಟ್ಟುಕೊಳ್ಳುತ್ತಿದ್ದರು. ಬಗಲಿನಿಂದ 'ದಲಾಯಿಲೆ ಖೈರಾತ್' ಪುಸ್ತಕವನ್ನು ತೆರೆದು ನೋಡಿದಾಗ ಈ ವ್ಯಾಖ್ಯಾನ ಕಂಡುಬಂದಿತು.

ಹಾಜೆಹೀ ಸಿಫತೊ ರೋಜತಿನ್ನಬಿಯೀ
ಅಲ್ಲತೀ ದುಫಿನ ಫೀಹಾ ರಸೂಲುಲ್ಲಾಹೀ
ಸ್ವಲ್ಲಲ್ಲಾಹು ಅಲೈಹಿ ವ ಸ್ವಲ್ಲಮ್ ।

ಇದು ಪ್ರವಾದಿ ಮುಹಮ್ಮದ್ (ಸ)ರ ಸಮಾಧಿಯ ವಿವರವಿದೆ, ಇದರಲ್ಲಿ ರಸೂಲ್ (ಸ) ವಿಶ್ರಾಂತಿಯಲ್ಲಿದ್ದಾರೆ.

ಹಜ್ರತ್ ಮೌಲಾನಾರವರು ಆಶ್ಚರ್ಯ ಚಕಿತರಾಗಿ ತಬ್ಬಿಬ್ಬಾದರು. ಹಾಗೂ ತಮ್ಮ ಕಣ್ಣಲ್ಲಿ ಅಶ್ರು ತುಂಬಿಕೊಂಡು ಹೀಗೆಂದರು. ಎಲ್ಲಿ ನಿಂತಿರುವೆನು ಹಾಗೂ ಏನು ವಿಚಾರಿಸಿದೆನು ಹಾಗೂ ಏನು ಹೊರಟಿತು. ಹಜ್ರತ್ ಹಾಷಿಂಪೀರರ ದರ್ಜೆಯ ಉನ್ನತಿಯು ತಿಳಿದುಬಂದಾಗ ಅಳಹತ್ತಿದರು ಹಾಗೂ 'ತೌಬಾ ತೌಬಾ' ಎನ್ನುತ್ತ ತಮ್ಮ ಕೆನ್ನೆಗಳನ್ನು ಬಡಿದುಕೊಳ್ಳತೊಡಗಿದರು. ನಾನು ಇಂಥಹ ವಿಚಾರ ಮಾಡುವ ಧೈರ್ಯ ಏಕೆ ಮಾಡಿದೆನು? ಹಜ್ರತ್ ಷಾಹ್ ವಜಿಯುದ್ದೀನ್ ಸಾನಿ ಅಲ್ವಿ ಹುಸೈನಿ(ಖು) ಸಜ್ಜಾದಾನಶೀನ್ (ಪೀಠಾಧಿಕಾರಿ)ಯವರೂ ಸಹ ಅಲ್ಲಿ ಹಾಜರಿದ್ದರು. ಅವರನ್ನು ಉದ್ದೇಶಿಸಿ ಮೌಲಾನಾ ಹೀಗೆಂದರು. ಹಜ್ರತ್ ಕೇಳಿರಿ, ನೋಡಿರಿ ನಾನು ಏನು ಯೋಚಿಸಿದೆನು ಹಾಗೂ ಏನು ಹೊರಟಿತು. ಈ ರೋಜಾ ಹಜ್ರತ್ ಸ್ವಲ್ಲಲ್ಲಾಹು ಅಲೈಹಿ ವ ಸ್ವಲ್ಲಮ್‌ರ ರೋಜಾ ಇರುವದು ಎಂದು ಹೊರಟಿದೆ.

ಗುಂಬಜ್ ಷರೀಫ್‌ದ ಎಡ ಹಾಗೂ ಬಲಭಾಗದಲ್ಲಿ ಇವರ ಈರ್ವರು ಪತ್ನಿಯರ ಸಮಾಧಿಗಳಿವೆ ಹಾಗೂ ಪಾದದಡಿಯಲ್ಲಿ ಅವರ ಮೊಮ್ಮಗ ಹಜ್ರತ್‌ಷಾಹ್ ಬುರ್ಹಾನುದ್ದೀನ್ ಹುಸೈನಿ(ಖು)ರ ಸಮಾಧಿ ಇರುವದು ಹಜ್ರತ್‌ರ ದರ್ಗಾ ಷರೀಫದಲ್ಲಿ ಗುಂಬಜಿನ ಹೊರಭಾಗದಲ್ಲಿ ಬಹಳಷ್ಟು ಪುರುಷರ, ಸ್ತ್ರೀಯರ, ಮಹಾಪುರುಷರ, ಸಜ್ಜನವ್ಯಕ್ತಿಗಳ ಫಕೀರರ ಹಾಗೂ ಶಿಷ್ಯರ, ಯಾತ್ರಿಕರ ಸಮಾಧಿಗಳಿವೆ. ಹಜ್ರತ್ ಷಾಹ್ ಕುತ್ಬುದ್ದೀನ್ ಸಫವಿ ಹಾಗೂ ಅವರ ಸುಪುತ್ರ ಹಜ್ರತ್ ಷಾಹ್ ಹುಸೈನ್ ಸಫವಿ(ಖು)ರವರೂ ಅಲ್ಲಿಯೇ ಸಮಾಧಿಸ್ಥರಾಗಿರುವರು.

ಇದರೊಂದಿಗೆಯೇ ಹಜ್ರತ್‌ಶಾಹ ಹಾಷಿಂ(ಖು)ರ ದೊಡ್ಡಪ್ಪರಾದ ಹಜ್ರತ್‌ಶಾಹ್ ವಜಿಯುದ್ದೀನ್ ಅಲ್ವಿ ಹುಸೈನಿ ಗುಜ್ರಾತಿ(ಖು)ರವರ ಜೀವನದ ಕೆಲ ಘಟನೆಗಳು ಹಾಗೂ ಪವಾಡಗಳನ್ನು ಸಮೃದ್ಧಿ ರೂಪದಲ್ಲಿ ಇಲ್ಲಿ ವಿವರಿಸಲಾಗುವದು. ಅವರ ಸಮಗ್ರ ಪವಾಡಗಳನ್ನು, ಘಟನೆಗಳನ್ನು ವಿವರಿಸಲು ಯಾರಿಗೆ ಶಕ್ಯವಿದೆ? ಗುಜ್ರಾತ್‌ದ ಚರಿತ್ರೆಯಲ್ಲಿ ಹಾಗೂ ವಲಿಯುಲ್ಲಾಹ್‌ರ ಪುಸ್ತಿಕೆಗಳಲ್ಲಿ ಹಾಗೂ ವ್ಯಾಖ್ಯಾನಗಳಲ್ಲಿ ಹಜ್ರತ್‌ರ ಕರಾಮತ್ತುಗಳು ವಿವರಿಸಲ್ಪಟ್ಟಿವೆ. ಇವುಗಳ ಪ್ರಸಿದ್ಧಿಯು ಕೇವಲ ಗುಜರಾತ್, ಅಥವಾ ಹಿಂದೂಸ್ಥಾನ ಮಾತ್ರವಲ್ಲದೇ ಅರಬಸ್ತಾನದಲ್ಲಿಯೂ ಹಬ್ಬಿದೆ. ಹಜ್ರತ್‌ರ ಮುಖಾಂತರ ಪ್ರಜೆಗಳು ಆಧ್ಯಾತ್ಮಿಕ ಜ್ಞಾನ ಹೊಂದಿ ಸಮೃದ್ಧಿ ಪಡೆದರು.

■

೩೭. ಹಜ್ರತ್ ವಜಿಯುದ್ದೀನ್ (ಖು)

ಹಜ್ರತ್ ವಜಿಯುದ್ದೀನ್(ಖು)ರಿಗೆ ಸಮಗ್ರ ರೂಪದ ಜ್ಞಾನದಲ್ಲಿ ಪರಿಪೂರ್ಣತೆ ಇತ್ತು. ಹಾಗೂ ಹಲವಾರು ಪುಸ್ತಕಗಳಿಗೆ ಟಿಪ್ಪಣಿ ಬರೆದು ಅವುಗಳನ್ನು ಅನುಪಮಗೊಳಿಸಿದರು. ರೋಗಿಗಳಿಗೆ ರೋಗ ಮುಕ್ತರನ್ನಾಗಿಸುವ ಭವವೈದ್ಯರಾಗಿದ್ದರು. ನಿತ್ಯ ಅಸಂಖ್ಯ ರೋಗಿಗಳು ಯಾರು ಅನೇಕ ರೋಗಗಳಿಂದ ಬಳಲುತ್ತಿದ್ದರು. ಅಂಥವರು ಹಜ್ರತ್‌ರ ಬಳಿ ಬಂದು ರೋಗ ಮುಕ್ತಿ ಹೊಂದುತ್ತಿದ್ದರು.

ಖತಾ :

ಮಸಿಹೆ ಹರ್‌ದಮ್ ಅಜ್ ಫೈಜೆ ನಿಹಾನಿಹಾ ।
ಜದಾ ಬರ್ ಮುರ್ದಾ ಜಾನಾನ ಫೈಜೆ ಜಾನಿಹಾ ॥

ಬಹರ್ ಸೂಯಿ ಕೆ ಉ ಅಲ್‌ಹಮ್ದು ಖ್ವಾಂದಾ
ಅಜಲ್ ಅಜ್‌ಕಾರ್ ರಾ ನಿ ಬಾಜ್ ಮಾಂದಾ ॥

ಮಸಿಃ ಹರ್ ಏಕ್‌ದಮ್ ಫೈಜ್ ನಿಹಾನ್ ಸೆ
ಕೆ ಜಿಂದಾ, ಮುರ್ದಾ ಜಾನೊಂ ಕೆ ಬನಾಯೆ ।

ಜಿದರ್ ದಮ್ ಕರದೆ ಉಧರ್ ಅಲ್‌ಹಮ್ದು ಪಡೆ
ಅಜಲ್ ಭಿ ಬಾಜ್ ಆಕೆ ವಹಾಂ ಸೆ ನಿಕಲೆ ॥

ಹಜ್ರತ್ ಈಸಾ(ಅ) ಅಲ್ಲಾಹುವಿನ ಕೃಪೆಯಿಂದಾಗಿ ಯಾವುದೇ ಮೃತದೇಹದ ಮೇಲೆ ಊದಿದರೆ ಅದು ಜೀವಂತವಾಗುತ್ತಿತ್ತು.

ಅವರ ಒಂದು ಸಮೃದ್ಧಿಯಿಂದ ಮೃತದೇಹದಲ್ಲಿ ಜೀವಸೆಲೆಯೊಡೆಯುವುದು. ಯಾವ

ಕಡೆಗೂ ಅವರು ಪ್ರಾರ್ಥಿಸಿ ಊದಿದರೆ, ಅಲ್ಲಿಂದ ಶವಗಳು ಅಲ್ಲಾಹುವಿನ ಸ್ತುತಿಗೈಯ್ಯುತ್ತ ಏಳುವುವು. ಹಾಗೂ ಮರಣವು ಅಲ್ಲಿಂದ ಕಾಲ್ದೆಗೆಯುವದು.

ಹಜ್ರತ್‌ರ ಖಾನ್‌ಖಾವು ಮಹಾಪುರುಷರ, ಸಜ್ಜನರ, ಸೂಫಿಗಳು ಉಳಿದುಕೊಳ್ಳುವ ಸ್ಥಳವಾಗಿತ್ತು. ಅವರ ಉಡುಗೆ ತೊಡುಗೆ ಸರಳ ರೀತಿಯದ್ದಾಗಿತ್ತು. ದಪ್ಪ ಬಟ್ಟೆಯಿದ್ದರೂ ಸಂತೋಷದಿಂದಿರುತ್ತಿದ್ದರು. ಕಾಣಿಕೆ ರೂಪದಲ್ಲಿ ಏನೇ ಬಂದರೂ ಅದನ್ನು ಹಂಚಿ ಬಿಡುತ್ತಿದ್ದರು. ಅಕ್ಬರ್ ಬಾದಶಾಹನ ಆಸ್ಥಾನದಲ್ಲಿದ್ದ ಅಮೀರನಾದ 'ಸಮರಾತುಲ್ ಖುದ್ಸ್' ಮಿನ್ ಶಜರಾತಿಲ್ ಉನ್ಸ್' ಗ್ರಂಥಗಳ ಲೇಖಕನು ಹಜ್ರತ್‌ರ ಕುರಿತು ವಿವರವಾಗಿ ಬರೆದಿರುವನು. ಹಜ್ರತ್‌ರು ೧೪ ವರುಷದ ವಯಸ್ಸಿನವರಾಗಿದ್ದಾಗ ಆಗಲೇ ಎಲ್ಲ ತೆರನಾದ ಜ್ಞಾನಶಾಖೆಗಳಲ್ಲಿ ಪಾರಂಗತರಾದರು. ಅನೇಕಾನೇಕ ಲೌಕಿಕ ವಿಧದ ಪಾರಲೌಕಿಕ ಜ್ಞಾನವನ್ನು ಅರಗಿಸಿಕೊಂಡರು. ತಮ್ಮ ತಂದೆಯವರಾದ ಹಜ್ರತ್ ಸೈಯ್ಯದ್ ನಸರುಲ್ಲಾ ಹುಸೈನಿ(ಖು)ರ ಮುರೀದ್‌ರಾದರು. ಧರ್ಮೋಪದೇಶ ನೀಡಲು ತೊಡಗಿದರು. ನಿರಂತರವಾಗಿ ಎಪ್ಪತ್ತು ವರುಷಗಳವರೆಗೆ ಶಿಷ್ಯೋತ್ತಮರಿಗೆ ಮಾರ್ಗದರ್ಶನ, ತತ್ವೋಪದೇಶ ನೀಡಿದರು. ತಮ್ಮ ಹದಿನಾಲ್ಕನೆಯ ವಯಸ್ಸಿನ ನಂತರ ಧಾರ್ಮಿಕ ಉಪದೇಶ ನೀಡಲು ಪ್ರಾರಂಭಿಸಿದಂದಿನಿಂದ ಇಹಲೋಕ ತ್ಯಜಿಸುವವರೆಗೂ ಬಾದಶಾಹರ ಅರಮನೆಗಳಿಗೆ ಹೋಗಲಿಲ್ಲ ಹಾಗೂ ಲೋಕವಿರಕ್ತರಾಗಿದ್ದರು. ಹಾಗೂ ಜನರು ಹಜ್ರತ್‌ರನ್ನು ಹಲವಾರು ಬಾರಿ ಪವಿತ್ರ ಮಕ್ಕಾ ಮದೀನಾದಲ್ಲಿ ನೋಡಿರುವರು. ಆದರೆ ಹಜ್ರತ್‌ರೂ ಒಮ್ಮೆಯೂ ಅಹ್ಮದಾಬಾದ್ ಗುಜರಾತನಿಂದ ಹೊರ ಹೋಗಲಿಲ್ಲ. ಹಜ್ರತ್‌ರು ಹೀಗೆ ಹೇಳಿರುವರು. ಏನೆಂದರೆ- ಹಜ್ರತ್ ಮೌಲಾನಾ ಇಮಾದುದ್ದೀನ್ ತಾರೀಮಿ(ಖು) ಹಜ್ರತ್‌ರ ಗುರುಗಳಾಗಿದ್ದರು. ೨೫೦ ತೆರನಾದ ಜ್ಞಾನ ಬಲ್ಲವರಾಗಿದ್ದರು. ಗುರುಗಳು ಜೀವಂತವಿರುವವರೆಗೆ ಹಜ್ರತ್‌ರು ಕೇವಲ ೧೨೫ ತೆರನಾದ ಜ್ಞಾನ ಸ್ರೋತಗಳನ್ನು ಅರಿತರು. ಯಾವಾಗ ಗುರುಗಳ ಮೃತ್ಯುವಾಯಿತು ಹಜ್ರತ್‌ರಿಗೆ ತುಂಬಾ ವಿಷಾದವುಂಟಾಯಿತು. ಹಾಗೂ ಸದಾಕಾಲ ದುಃಖದಲ್ಲಿರುತ್ತಿದ್ದರು. ಆಕಸ್ಮಿಕ ಒಂದಿರುಳು ಹಜ್ರತ್ ಮುಹಮ್ಮದ್(ಸ)ರನ್ನು ಕನಸಿನಲ್ಲಿ ಕಂಡರು. ಪ್ರವಾದಿಗಳು "ಓ ಮಗುವೆ! ದುಃಖಿಸದಿರು! ಯಾವ ಜ್ಞಾನವು ನಿನ್ನ ಗುರುವಿಗೆ ತಿಳಿದಿತ್ತೋ ಅವುಗಳ ಮೇಲೆ ಮತ್ತೆ ಮೂವತ್ತು ಹೆಚ್ಚಿನ ಜ್ಞಾನವನ್ನು ನಾವು ನಿನಗೆ ದಯಪಾಲಿಸುವೆವು." ಹಾಗೂ ಒಂದು ಕಾಗದ ಮೇಲೆ ಜ್ಞಾನಸ್ರೋತಗಳ ಹೆಸರು ಬರೆಯಲಾಗಿತ್ತು. ಅದನ್ನು ನನ್ನ ಕೈಯಲ್ಲಿ ನೀಡಿದರು. ನಾನು ಅದನ್ನು ನೋಡಿದೆನೋ ಆ ಜ್ಞಾನಗಳ ಹೆಸರುಗಳಿದ್ದವು. ಇದೇ ಸಂತಸದಲ್ಲಿ ಎಚ್ಚರಗೊಂಡೆನು ಹಾಗೂ ಆ ಕಾಗದವು ನನ್ನ ಕೈಯಲ್ಲಿತ್ತು. ಆ ಕಾಗದದಲ್ಲಿದ್ದ ಜ್ಞಾನದಲ್ಲಿ ಯಾವುದರ ಕಡೆಗೆ ಗಮನ ಹರಿಸುತ್ತಿದ್ದೆನೋ ಹೀಗನಿಸುತ್ತಿತ್ತು. ಅನೇಕ ವರ್ಷಗಳಿಂದ ಆ ಜ್ಞಾನದ

ಉಪದೇಶ ನೀಡಿರುವೆನು. ಹಾಗೂ ಕಾಗದವು ಫಕೀರನ ಬಳಿ ಆ ಕಾಲದವರೆಗೂ ಇತ್ತು. ಅದರಲ್ಲಿ ಬರೆದ ಎಷ್ಟು ಜ್ಞಾನಗಳಿರುವವೋ ಅವುಗಳನ್ನು ಓದಿ ಸ್ವತಃ ಅರಿತುಕೊಂಡೆನು. ನಂತ ಆ ಕಾಗದವು ನನ್ನಿಂದ ಕಳೆದು ಹೋಯಿತು.

ಹಜ್ರತ್‌ರು ಯಾವಾಗಲೂ ತಮ್ಮ ಜ್ಞಾನವನ್ನು ಪ್ರದರ್ಶಿಸುತ್ತಿರಲಿಲ್ಲ ಹಾಗೂ ತಮ್ಮ ಕರಾಮತ್ತುಗಳನ್ನು ಆದಷ್ಟು ಮುಚ್ಚಿಡುತ್ತಿದ್ದರು. ಆದರೆ ಅಂತರ್ಜ್ಞಾನವು ತುಂಬಿ ಹರಿಯುತ್ತಿತ್ತು ಹಾಗೂ ಅಸಂಖ್ಯ ಪವಾಡಗಳು ಜರುಗುತ್ತಿದ್ದವು ಹಾಗೂ ಜನ ಸಮೃದ್ಧಿ ಪಡೆಯುತ್ತಿದ್ದರು. ಹಜ್ರತ್‌ರ ಆಧ್ಯಾತ್ಮಿಕ ಜ್ಞಾನವು ೧೪೦೦ರಷ್ಟು ಖಲೀಫಾರಿಗೆ ಲಭಿಸಿತು. ಆ ಎಲ್ಲರಿಂದ ಜರುಗಿದ ಪವಾಡಗಳು ಪ್ರಸಿದ್ಧಿ ಹೊಂದಿವೆ. ಇವರಲ್ಲಿ ಪ್ರಮುಖರಾದ ಹಜ್ರತ್‌ಶಾಹ್ ಸಿಬಗತುಲ್ಲಾಹ್ ಹುಸೈನಿ(ಖು)ರ ಪವಾಡಗಳ ಪ್ರಸಿದ್ಧಿಯು ಕೇವಲ ಹಿಂದೂಸ್ಥಾನ ಹಾಗೂ ದಖ್ಖನದಲ್ಲಿ ಮಾತ್ರ ಆಗದೆ ದೂರದೇಶವಾದ ಅರಬಸ್ಥಾನದಲ್ಲಿ ಕೂಡ ಹಬ್ಬಿದೆ.

ಹಜ್ರತ್ ಸೈಯ್ಯದ್ ಯಾಸೀನ್(ಖು) ಹಿಂದೂಸ್ಥಾನದಲ್ಲಿ ಪ್ರಸಿದ್ಧರಿರುವರು. ಈ ಖಲೀಫಾರಲ್ಲಿಯೇ ಓರ್ವರಾಗಿರುವರು. ಇವರು ೮೦ ವರ್ಷದವರೆಗೆ ಜ್ಞಾನದ ಪ್ರಸಾರ ಮಾಡುತ್ತಲಿದ್ದರು. ಹಾಗೂ ಇನ್ನೋರ್ವ ಪ್ರಸಿದ್ಧ ಸೂಫಿವರ್ಯರಾದ ಹಜ್ರತ್ ಮುಲ್ಲಾ ಹಸನ್ ಫರಾಗಿ ಹಾಗೂ ಇನ್ನೋರ್ವ ಮುಲ್ಲಾ ಅಬ್ದುಲ್‌ರೆಹಮಾನ್ ಬೊಹರಾ(ರ) ಇರುವರು. ಹಜ್ರತ್ ಹಬೀಬುಲ್ಲಾಹ್ ಸಿಬಗತುಲ್ಲಾಹ್ ಇಲಾಹಿಯವರಿಂದ ಉಲ್ಲೇಖಿಸಲಾಗಿದೆ. ಹಜ್ರತ್ ಷಾಹ್ ವಜಿಯುದ್ದೀನ್(ಖು) ತಮ್ಮ ಆಯುಷ್ಯದ ಕೊನೆಯ ಹಂತದಲ್ಲಿ ಉಪದೇಶ ನೀಡುವದನ್ನು ನಿಲ್ಲಿಸುವ ಇಚ್ಛೆ ಪ್ರಕಟಪಡಿಸಿದರು. ಜನಾಬ್ ಹಜ್ರತ್ ಮುಹಮ್ಮದ್(ಸ) ರಿಂದ ಆದೇಶವಾಯಿತು. ನಾವು ನಿಮ್ಮ ಪಾಠಗಳ ಉದ್ಘೋಧೆಯ ವೇಳೆಯಲ್ಲಿ ಹಾಜರಾಗಿ ಆಲಿಸುವೆವು. ನಿಲ್ಲಿಸದಿರಿ ಅಂದಿನಿಂದ 'ದರ್ಸೆಮುಹಮ್ಮದಿ' ಎಂದು ಹೆಸರಿಸಿ ಕೊನೆಯುಸಿರು ಇರುವವರೆಗೂ ನಿರಂತರವಾಗಿ ಶಿಕ್ಷಣ ಪ್ರಸಾರ ಮಾಡುತ್ತಲಿದ್ದರು ಹಾಗೂ ಜನೋಪಯೋಗಿ ಪಾಠ ನೀಡುತ್ತಿದ್ದರು. ಉದ್ಘೋಧೆಯ ನಂತರ ಹಲವಾರು ಬಾರಿ ಹಜ್ರತ್ ಖ್ವಾಜಾ ಖಿಜರ್ ಅಲೈಹಿಸ್ಸಲಾಮರೊಂದಿಗೆ ಭೇಟಿಯಾಗುತ್ತಿತ್ತು. ಹಾಗೂ ಸಾಂಗತ್ಯದಲ್ಲಿರುತ್ತಿದ್ದರು. ಈರ್ವರಲ್ಲಿ ರಹಸ್ಯಜ್ಞಾನದ ಚರ್ಚೆಯಾಗುತ್ತಿತ್ತು.

ಹಜ್ರತ್ ಸೈಯ್ಯದ್ ಸೂಫಿ ಜಂಜಾನಿ(ಖು) ಹಜ್ರತ್‌ರ ಖಲೀಫಾಗಳಲ್ಲಿ ಓರ್ವರಾಗಿದ್ದಾರೆ. ಅವರು ಹೀಗೆ ಬರೆದಿರುವರು. ಗುಜರಾತದ ವಿನಾಶ ಹಾಗೂ ಗುಜರಾತನ್ನು ಮೊಘಲರು ವಶಕ್ಕೆ ತೆಗೆದುಕೊಳ್ಳುವ ಕಾಲದಲ್ಲಿ ಒಂದುದಿನ ಹಜ್ರತ್‌ರು ಹೀಗೆಂದರು. ಫಕೀರನು ಹಜ್ರತ್‌ರ ಕೈಯನ್ನು ಗಟ್ಟಿಯಾಗಿ ಹಿಡಿದು ಕೇಳಿದನು.

ಗುಜಾರಾತದ ವಿನಾಶವು ಈ ತೆರನಾಗಿ ಆಗಿದೆ. ಮತೆ ಇದರಲ್ಲಿ ಯಾವಾಗ ಸುಧಾರಣೆ ಉಂಟಾಗುವದು. ಅದಕ್ಕೆ ಪ್ರತಿಯಾಗಿ ಅವರೆಂದರು ಅಲ್ಲಾಹುವು ಅದನ್ನು ರಹಸ್ಯವಾಗಿಟ್ಟಿರುವನು. ಅದನ್ನು ಬಹಿರಂಗಗೊಳಿಸದಿರಿ, ಬಹಿರಂಗಗೊಳಿಸದಿರಿ ಮತ್ತೆ ತಮ್ಮ ಕೈಯನ್ನು ಬಿಡಿಸಿಕೊಂಡು ಹೊರಟುಹೋದರು. ಅದರ ನಂತರ ಶಿಕ್ಷಣ ನೀಡಲು ಸಭಾಂಗಣಕ್ಕೆ ಮತ್ತೆ ಬರಲಿಲ್ಲ.

ಓರ್ವ ಜ್ಞಾನಾರ್ಥಿ ಬಹುದೂರದಿಂದ ಆಗಮಿಸಿದನು. ಹಜ್ರತ್‌ರು ಶಿಕ್ಷಣ ನೀಡುವಲ್ಲಿ ಮಗ್ನರಾಗಿದ್ದರು. ಆತನು ನಿಂತುಕೊಂಡಿದ್ದನು ಹಾಗೂ ವಿಹ್ವಲಿತಗೊಂಡಿದ್ದರಿಂದ ಕೂಡ್ರಲಿಲ್ಲ. ಓದುವವರೊಂದಿಗೆ ಕೇಳಿದನು. ಹಜ್ರತ್ ಮಿಯಾ ವಜಿಯುದ್ದೀನ್‌ರು ಎಲ್ಲಿದ್ದಾರೆ? ಅಲ್ಲಿಯೇ ಹಜ್ರತ್‌ರು ಇದ್ದರು ಸ್ವತಃ ಕೇಳಿದರು. ನಿನಗೆ ಅವರಿಂದ ಏನು ಕೆಲಸವಿದೆ? ಒಂದು ವಿಷಯವಿದೆ ಅದನ್ನು ನಿಮ್ಮೆಲ್ಲರಿಂದ ರಹಸ್ಯವಾಗಿಡುವದು ಅವಶ್ಯವಿದೆ ಹಜ್ರತ್‌ರು ಹೀಗೆಂದರು ವಜೀಯುದ್ದೀನ್ ಈ ಫಕೀರನಾಗಿದ್ದಾನೆ ಹಾಗೂ ಮಿಯಾ ವಜೀಯುದ್ದೀನ್ ಬೇರೆಡೆಗೆ ಇರುತ್ತಾರೆ ಅವನೆಂದನು ನನ್ನ ಕೆಲಸವು ವಜಿಯುದ್ದೀನ್ ಅವರೊಂದಿಗೆಯೇ ಇತ್ತು. ಅದು ಈಡೇರಿತು. ಬೇರೆಡೆಗೆ ಹೋಗುವ ಅವಶ್ಯಕತೆಯಿಲ್ಲ. ತಕ್ಷಣ ಕಾಲಿಗೆರಗಿ ಮುಂದೆ ಸಾಗಿದನು. ಅಲ್ಲಿ ಉಪಸ್ಥಿತರಿದ್ದ ಉಳಿದೆಲ್ಲ ವಿದ್ಯಾರ್ಥಿ ಸಮೂಹವು ಇಲ್ಲಿ ನಿಮಗೆ ಸ್ಥಳಾವಕಾಶವಿದೆ. ಇಲ್ಲಿ ಉಳಿದುಕೊಳ್ಳಿರಿ ಎಂದು ಬಹಳೇ ವಿನಂತಿಸಿದರು. ಆಗ ಆತ ಹೀಗೆಂದನು ಯಾವ ವ್ಯಕ್ತಿಯು ಒಂದು ದೃಷ್ಟಿಯಲ್ಲಿ ತನ್ನ ಉದ್ದೇಶಪೂರ್ತಿ ಗೊಳಿಸಿಕೊಂಡನು ಆತನು ಮತ್ತೆ ಯಾವ ಉದ್ದೇಶಕ್ಕೆ ಇಲ್ಲಿ ಉಳಿಯಬೇಕು? ಎಲ್ಲರೂ ಆಶ್ಚರ್ಯಚಕಿತರಾಗಿ ನೋಡತೊಡಗಿದರು. ಹಜ್ರತ್‌ರು ಹೀಗೆಂದರು ತೈಲಯುಕ್ತ ಕುಡಿಕೆಯಿತ್ತು. ಬತ್ತಿಯಿತ್ತು, ಬೆಂಕಿಯಿತ್ತು ಮತ್ತೇಕೆ ನಾನು ಅದನ್ನು ಬೆಳಗದೇ ಇರಲಿ!!

ಒಂದು ದಿನ ಹಜ್ರತ್‌ರು ಶಿಷ್ಯರೊಂದಿಗೆ ಮಾರ್ಗದರ್ಶನ ನೀಡುವಲ್ಲಿ ನಿರತರಾಗಿದ್ದರು. ಆಕಸ್ಮಿಕವಾಗಿ ಓರ್ವ ಜಾದೂಗಾರನು ತನ್ನ ವಿದ್ಯೆಯಲ್ಲಿ ತನಗೆ ತಾನೆ ಸಾಟಿಯಾಗಿದ್ದನು. ಹಜ್ರತರ ಸೇವೆಯಲ್ಲಿ ಹಾಜರಾದನು. ತನ್ನೊಂದಿಗೆ ಓರ್ವ ಸುಂದರ ತರುಣಿಯನ್ನು ಜೊತೆಗಿಡುತ್ತಿದ್ದನು. ಹಜ್ರತರಿಗೆ ಗೌರವ ಸಲ್ಲಿಸಿ ಹೀಗೆಂದನು. ಹಜ್ರತ್‌ರೆ! ಆಕಾಶದಲ್ಲಿ ಎರಡು ಗುಂಪುಗಳ ನಡುವೆ ಯುದ್ಧ ಆರಂಭಗೊಂಡಿದೆ. ನನ್ನ ಸಹೋದರರ ಸಹಾಯಕ್ಕಾಗಿ ಹೋಗಬಯಸುತ್ತಿದ್ದೇನೆ. ಆದರೆ ಈ ಹೆಣ್ಣು ನನ್ನ ಕೆಲಸಕ್ಕೆ ಅಡ್ಡಗೋಡೆಯಾಗಿದ್ದಾಳೆ. ನನ್ನೊಂದಿಗೆ ಒಯ್ಯಲಾರೆ, ಹಾಗೂ ಎಲ್ಲಿಯೂ ಬಿಡಲಾರೆ ಏಕೆಂದರೆ ಅವಳು ತುಂಬು ಯೌವ್ವನದ ಅಪೂರ್ವ ಸುಂದರಿಯಾಗಿದ್ದಾಳೆ ಹಾಗೂ ಈ ಕಾಲದ ಜನರು ವಿಶ್ವಾಸಾರ್ಹರಲ್ಲ. ತಮ್ಮ ಖಾನ್‌ಕಾಹ್‌ವು ಧಾರ್ಮಿಕ ಜನರಿಂದ, ಆರಾಧನೆಗೆ ತೊಡಗುವವರಿಂದ, ದೇವಭೀರುಗಳಿಂದ ಕೂಡಿದ ಸ್ಥಳವಾಗಿದೆ.

ಒಂದು ವೇಳೆ ತಾವು ಅನುಮತಿಸಿದರೆ ಅವಳನ್ನು ಒಂದು ಮೂಲೆಯಲ್ಲಿ ಬಿಟ್ಟು ಹೋಗುವೆನು. ಮರಳಿ ಬಂದ ನಂತರ ಮತ್ತೆ ನನ್ನೊಂದಿಗೆ ಒಯ್ಯುವೆನು. ಹಜ್ರತ್‌ರು ಮದರಸಾದ ಮೂಲೆಯೊಂದರಲ್ಲಿರುವ ಕೋಣೆಯತ್ತ ಸಂಜ್ಞೆ ಮಾಡಿದರು. ಅಲ್ಲಿ ಆತನು ತನ್ನ ಪತ್ನಿಯನ್ನು ಬಿಡಬೇಕು. ಜಾದುಗಾರನು ತಕ್ಷಣವೇ ಅಲ್ಲಿಂದ ಎದ್ದು ಹಜ್ರತ್‌ರು ತೋರಿದ ಕೋಣೆಗೆ ಹೋಗಿ ತನ್ನ ಪತ್ನಿ ಹಾಗೂ ತನ್ನೊಂದಿಗೆ ತಂದ ವಸ್ತುಗಳನ್ನು ಇರಿಸಿದನು. ಮತ್ತೆ ಹೊರಬಂದು ತನ್ನ ಬಳಿಯ ದಾರದ ಉಂಡೆಯನ್ನು ಹೊರತೆಗೆದು ಆಕಾಶದತ್ತ ಎಸೆದನು. ಅದರ ಒಂದು ಕೊನೆಯನ್ನು ಕೈಯಲ್ಲಿ ಹಿಡಿದನು. ಮತ್ತೆ ಹಜ್ರತ್‌ರನ್ನು ಗೌರವಪೂರ್ವಕವಾಗಿ ವಂದಿಸಿ ಅಲ್ಲಿಂದ ಹೊರಟುಹೋಗಲು ಅನುಮತಿ ಕೇಳಿದನು. ಹಾಗೂ ಹೀಗೆಂದನು. ಯುದ್ಧವು ಭೀಕರರೂಪ ತಳೆದಿರುವದು. ತಾವು ತಮ್ಮ ಕೃಪಾದೃಷ್ಟಿಯನ್ನು ನನ್ನ ಮೇಲೆ ಬೀರಿರಿ. ವಿಜಯದೊಂದಿಗೆ ಮರಳಿ ಬರುವೆನು. ಹಜ್ರತ್‌ರು ಆತನ ಮಾತುಗಳನ್ನು ಕೇಳಿ ಮುಗುಳ್ನಗೆ ಬೀರಿದರು. ಆಗ ಆತನು ದಾರವನ್ನು ಹಿಡಿದು ತೂಗಾಡತೊಡಗಿದನು ಹಾಗೂ ಮೇಲೆ ಮೇಲಕ್ಕೆ ಏರಿದನು. ಜನ ನೋಡುತ್ತಲಿದ್ದರು. ಕೆಲಸಮಯದ ನಂತರ ಅವನು ದೃಷ್ಟಿಗೋಚರವಾಗಲಿಲ್ಲ. ನೋಡುಗರು ಈ ಘಟನೆಯಿಂದ ವಿಸ್ಮಿತರಾಗಿದ್ದರು. ಒಂದು ಕ್ಷಣದ ನಂತರ ಒಂದು ಕೈ ರಕ್ತಸಿಕ್ತವಾಗಿ ಕೆಳಗೆ ಬಿದ್ದಿತು ಜನರು ನಾಲ್ಕೂ ಕಡೆಯಿಂದ ಓಡಿದರು. ನೋಡಿದರೆ ಅದು ಜಾದೂಗಾರನ ಕೈಯಾಗಿತ್ತು. ಯುದ್ಧ ಭೀಕರರೂಪ ತಳೆದಿದೆ ಎಂದು ಯೋಚಿಸಿದರು. ಆತನ ಪತ್ನಿಯು ಗದ್ದಲ ಗೊಂದಲದ ದನಿಯನ್ನು ಆಲಿಸಿ ಕೋಣೆಯಿಂದ ಹೊರಬಂದಳು ಆ ಕೈಯನ್ನು ಎತ್ತಿಕೊಂಡು ಹೀಗೆಂದಳು. ಇದು ನನ್ನ ಗಂಡನ ಕೈಯಾಗಿದೆ ಆತನು ಕೊಲೆಯಾದನು ಮತ್ತೆ ಜೋರಾಗಿ ಅಳತೊಡಗಿದಳು. ಈ ಅವಧಿಯಲ್ಲಿ ಮತ್ತೊಂದು ಕೈ ಕೂಡ ಬಿದ್ದಿತು, ಮತ್ತೆ ಒಂದು ಕ್ಷಣದ ನಂತರ ಒಂದು ಕಾಲು ಬಿದ್ದಿತು ನಂತರ ಮತ್ತೆ ಮತ್ತೊಂದು ಕಾಲು ಕೂಡ ಬಿದ್ದಿತು ನಂತರ ಹೊಟ್ಟೆ ಹಾಗೂ ಎದೆ ನಂತರ ತಲೆ ಬಿದ್ದಿತು. ಆತನ ಹೆಂಡತಿಯು ಬಹಳೇ ವಿಹ್ವಲಿತಗೊಂಡು ಇನ್ನೂ ಜೋರಾಗಿ ಅಳತೊಡಗಿದಳು. ಮದರಸಾವು ಗದ್ದಲದ ಗೂಡಾಯಿತು. ಎಲ್ಲರೂ ಆಕೆಗೆ ಸಾಂತ್ವನ ನೀಡುತ್ತಿದ್ದರು. ಆಕೆ ಯಾರನ್ನೂ ದೂರಲಿಲ್ಲ. ಆರೋಪಿಸಲಿಲ್ಲ. ನಂತರ ಹಜ್ರತ್‌ರ ಸೇವೆಯಲ್ಲಿ ವಿನಂತಿಸಿಕೊಂಡಳು. ನನ್ನ ಪತಿಯು, ಯಾರಿಂದ ನನ್ನ ಜೀವನವು ಸಮೃದ್ಧವಾಗಿತ್ತೋ ಈ ಲೋಕದಿಂದ ಹೊರಟುಹೋದನು ಈಗ ನನ್ನ ಬದುಕು ನರಕವಾಗಿದೆ ನಾನು ಬದುಕಿ ಏನು ಮಾಡಲಿ? ನಾನು ಅವನೊಂದಿಗೆಯೇ 'ಸತಿ'(ಸತಿಸಹಗಮನ) ಯಾಗಬಯಸುತ್ತೇನೆ ತಾವು ನನಗೆ ಹೋಗಲು ಬಿಡಿರಿ ನಂತರ ಅವಳು ಪತಿಯೊಂದಿಗೆ ಸಹಗಮನಗೈಯ್ಯುವ ಸತಿಯಾಗಲು ಬೇಕಾಗುವ ಎಲ್ಲ ವಸ್ತುಗಳನ್ನು ನೀಡಲಾಯಿತು. ಆ ತರುಣಿಯು ಆತನ ದೇಹದ ಬಿಡಿ ಭಾಗಗಳನ್ನು ತನ್ನ ಒಡಲಲ್ಲಿ ಇರಿಸಿಕೊಂಡಳು. ಕಟ್ಟಿಗೆಗಳ

ನಡುವೆ ಕುಳಿತುಕೊಂಡಳು. ಅಗ್ನಿಸ್ಪರ್ಶಮಾಡಲಾಯಿತು. ಈರ್ವರೂ ಸುಟ್ಟು ಕರಕಲಾದರು. ಮತ್ತೆ ಒಂದು ಕ್ಷಣದ ನಂತರ ಜಾದೂಗಾರನು ಅದೇ ದಾರದ ಮುಖಾಂತರವಾಗಿ ಕೆಳಗಿಳಿದು ಬಂದನು ಹಾಗೂ ಹಜ್ರತ್‌ರ ಎದುರು ಗೌರವ ಸಲ್ಲಿಸಿ ಹೀಗೆಂದನು ಹಜ್ರತ್‌ರ ಕೃಪೆಯಿಂದ ವೈರಿಗಳ ಮೇಲೆ ವಿಜಯ ಸಾಧಿಸಿದೆನು ಹಾಗೂ ಸಜೀವ ಮರಳಿದೆನು. ಸ್ವಲ್ಪು ಸಮಯದ ನಂತರ ತನ್ನ ಪತ್ನಿಯನ್ನು ನೋಡಬಯಸಿ ಪತ್ನಿಯನ್ನು ಕಂಡು ಸಂತಸಗೊಳ್ಳುವೆನು ಎಂದನು. ಹಜ್ರತ್‌ರು ಮೌನ ತಾಳಿದರು. ಅಲ್ಲಿದ್ದ ಜನರು ಜಾದೂಗಾರನೊಂದಿಗೆ ಹೀಗೆಂದರು ನೀನು ಹೋದ ಬಳಿಕ ಮೇಲಿನಿಂದ ಒಂದೊಂದು ಅಂಗವು ರಕ್ತಸಿಕ್ತಗೊಂಡು ಬಿದ್ದಿತು. ನಿನ್ನ ಪತ್ನಿಯು ನೀನು ಹತನಾದೆಯೆಂದು ಬಗೆದು ಅಳಹತ್ತಿದಳು. ನಂತರ ಸ್ವತಃ ಸತಿಸಹಗಮನ ಮಾಡಬಯಸಿದಳು. ಎಲ್ಲರೂ ತಡೆಯ ಬಯಸಿದರೂ ಅವಳು ಒಪ್ಪಲಿಲ್ಲ. ಕೊನೆಗೆ ನಿನ್ನ ಶವದೊಂದಿಗೆ ಆ ಸ್ಥಳದಲ್ಲಿ ಸುಟ್ಟು ಬೂದಿಯಾದಳು ಇನ್ನುವರೆಗೂ ಅಲ್ಲಿ ಅಗ್ನಿಯ ಶಾಖವಿರುವದು. ಜಾದೂಗಾರನು ತುಂಬಾ ವಿಚಲಿತಗೊಂಡು ಕೋಪೋದ್ರಿಕ್ತನಾಗಿ ಹೀಗೆನ್ನತೊಡಗಿದನು. ನನ್ನ ಪತ್ನಿಯು ಅತೀವ ಸುಂದರಿಯಾಗಿದ್ದಳು ಅವಳನ್ನು ಮುಚ್ಚಿಟ್ಟು ನನ್ನಿಂದ ಕಸಿದುಕೊಳ್ಳಬಯಸುತ್ತಾರೆ. ಹೀಗಾಗದು! ನನ್ನ ಪತ್ನಿಯು ಜೀವಂತವಿರುವಳು. ಅವಳು ಸುಟ್ಟುಕೊಂಡಿಲ್ಲ ನೋಡಿರಿ ನಾನು ಅವಳನ್ನು ಹಾಜರುಗೊಳಿಸುವೆನು. ಜನರೆಂದರು ಅವಳನ್ನು ಕರೆ! ಅವಳಂತೂ ಸುಟ್ಟು ಬೂದಿಯಾಗಿದ್ದಾಳೆ ಈಗ ಎಲ್ಲಿಂದ ಹಾಜರಾಗುವಳು ಜಾದೂಗಾರನು ತನ್ನ ಪತ್ನಿಗೆ ಕರೆದನು. ಅವಳು ಉತ್ತರಿಸುತ್ತಾ ಹೊರಬಂದಳು ತಕ್ಷಣ ಈರ್ವರೂ ಹಜ್ರತ್‌ರ ಎದುರಿಗೆ ಬಂದು ಗೌರವ ಸಲ್ಲಿಸಿ ನಿಂತುಕೊಂಡರು. ಹಜ್ರತ್‌ರು ಜಾದೂಗಾರನಿಗೆ ಹೀಗೆಂದರು ಶಹಬ್ಬಾಷ್! ನೀನು ತುಂಬಾ ಚತುರನಿರುವಿ! ವಿಸ್ಮಯಗೊಳಿಸುವ ಚಮತ್ಕಾರ ತೋರಿಸಿದಿ ಹಾಗೂ ಒಂದು ಕೋಣೆಯತ್ತ ಸಂಜ್ಞೆ ಮಾಡಿ ಹೇಳಿದರು. ಆ ಸ್ಥಳಕ್ಕೆ ಹೋಗು ಒಂದು ಪೆಟ್ಟಿಗೆಯಲ್ಲಿ ಪುಸ್ತಕವಿರುವದು ತೆಗೆದುಕೊಂಡು ಬಾ, ಆತನು ಪೆಟ್ಟಿಗೆಯ ಬಳಿಗೆ ಹೋದನು ಹಾಗೂ ಪುಸ್ತಕ ಎತ್ತಿಕೊಳ್ಳ ಬಯಸಿದನು. ಏನು ನೋಡುತ್ತಾನೆ ಕೋಣೆಯೂ ಇಲ್ಲ, ಪೆಟ್ಟಿಗೆಯೂ ಇಲ್ಲ. ಪುಸ್ತಕವೂ ಇಲ್ಲ. ಆದರೆ ದೊಡ್ಡ ಬಯಲು, ಹಾಗೂ ಮರಭೂಮಿ ಇದೆ ಅದಕ್ಕೆ ಕೊನೆ ಮೊದಲಿಲ್ಲ. ಜಾದೂಗಾರನು ತಬ್ಬಿಬ್ಬಾದನು. ಆತನು ಏನು ಮಾಡಬೇಕೆಂದು ತೋಚದೆ ನಿಂತನು ಹಾಗೂ ದಾರಿ ಮರೆತ ಯಾತ್ರಿಕನಂತೆ ದಿಕ್ಕುಗಾಣದೇ ಮುಂದೆ ಸಾಗಿದನು. ಸ್ವಲ್ಪು ಹಾದಿ ಕ್ರಮಿಸಲು ನೋಡುತ್ತಾನೆ ಅರಣ್ಯದ ಕೊನೆಯಲ್ಲಿ ಒಂದು ಸೈನ್ಯವು ಬ್ರಹದ್ ರೂಪದಲ್ಲಿ ಬರುತ್ತಲಿದೆ. ಈ ಸೈನ್ಯದಲ್ಲಿ ಆನೆ, ಕುದುರೆ, ನಗಾರಿ ಹಾಗೂ ಸಾಮ್ರಾಜ್ಯದ ಎಲ್ಲ ಅವಶ್ಯಕ ವಸ್ತುಗಳು ಇರುವವು. ಜಾದೂಗಾರನ ಏಕಾಂತದ ಭಯದಿಂದ ವಿಪ್ಹಲಿತಗೊಂಡ ಹೃದಯವು ಶಾಂತಗೊಂಡಿತು. ಇವರನ್ನು ಭೇಟಿಯಾಗೋಣ

ಮುಂದೆನಾಗುತ್ತದೆಯೋ ಆಗಲಿ, ಮತ್ತೆ ಮುಂದೆ ನಡೆದನು. ಸೈನ್ಯ ಸಮೀಪಿಸಿದಾಗ ನೋಡುತ್ತಾನೆ ಎಲ್ಲಕ್ಕಿಂತ ಮುಂದೆ ಒಂದು ಅಲಂಕೃತಗೊಂಡ ಆನೆಯಿದೆ. ಸೊಂಡಿಲಿನಲ್ಲಿ ಒಂದು ವಜ್ರಖಚಿತ ಮಾಲೆಯಿದೆ ಯಾವಾಗ ಆನೆಯು ಸಮೀಪ ಬಂದಿತೋ ಆಗ ಆ ಅಲಂಕೃತ ಆನೆಯು ತನ್ನ ಸೊಂಡಿಲಿನಲ್ಲಿಯ ಆ ವಜ್ರಖಚಿತ ಮಾಲೆಯನ್ನು ಜಾದೂಗಾರನ ಕೊರಳಲ್ಲಿ ಹಾಕಿತು ನಂತರ ಸಮಸ್ತ ಆಡಳಿತವರ್ಗವು ಅಲ್ಲಿ ಉಪಸ್ಥಿತರಿದ್ದರು. ಓಡುತ್ತಾ ಬಂದು ಆತನಿಗೆ ಕೊಡುಗೆ ಕಾಣಿಕೆಗಳನ್ನು ಅರ್ಪಿಸತೊಡಗಿದರು. ಹಾಗೂ 'ಬಾದಶಾಹ' ಆದಿರೆಂದು ಅಭಿನಂದನೆ ಸಲ್ಲಿಸತೊಡಗಿದರು. ಜಾದೂಗಾರನು ಈ ವಿಚಿತ್ರ ಸ್ಥಿತಿಯಿಂದ ಬಹಳೇ ಆಶ್ಚರ್ಯಚಕಿತನಾದನು. ಆತನು ಯಾರಿಂದಲೂ ಇದರ ರಹಸ್ಯವನ್ನು ತಿಳಿಯದವನಾಗಿದ್ದನು. ಮತ್ತು ಸಹನೆ ಮಾಡಿ ಮೌನದಿಂದ ಇರಲಾರದವನಾಗಿದ್ದನು. ಅವಸ್ಥೆಯಲ್ಲಿಯೇ ಸರ್ವ ಗೌರವಗಳೊಂದಿಗೆ ಆತನನ್ನು ಪಟ್ಟಣದಲ್ಲಿ ಕರೆದು ತಂದರು. ಹಾಗೂ ಸ್ನಾನವನ್ನು ಮಾಡಿಸಿ ಬಾದಶಾಹನ ಉಡುಪು ತೊಡಿಸಿ, ಬಾದಶಾಹನ ಸಿಂಹಾಸನದ ಮೇಲೆ ಕೂಡ್ರಿಸಿದರು. ಮತ್ತೆ ಮಗದೊಂದು ಸಲ ಕಾಣಿಕೆ, ಕೊಡುಗೆ, ಅಭಿನಂಗನೆ ಸಂದವು ಅರಮನೆ ಹಾಗೂ ಕೋಟೆಗಳ ಕೀಲಿಕೈಗಳನ್ನು ಅರ್ಪಿಸಲಾಯಿತು. ಆಡಳಿತಗಾರ ಹಾಗೂ ಅಧಿಕಾರವರ್ಗದ ಪ್ರತಿಯೊಬ್ಬ ವ್ಯಕ್ತಿಯು ಆತನೆದುರು ವಿನೀತರಾಗಿ ಆತನ ಆಜ್ಞಾಧಾರಕರಾಗಿ ಕಂಡುಬಂದರು. ಜಾದೂಗಾರನಿಗೆ ಈ ಆಕಸ್ಮಿಕ ದೊರೆತನ ದೊರೆಯಲು ತನ್ನ ಮೊದಲಿನ ಸ್ಥಿತಿಯನ್ನು ಮರೆತನು ತನ್ನ ಪತ್ನಿಯೂ ನೆನಪಿಗೆ ಬರಲಿಲ್ಲ. ಹಾಗೂ ತನ್ನ ದೇಶವೂ ಕೂಡ. ಒಂದು ಅವಧಿಯವರೆಗೆ ರಾಜ್ಯವನ್ನಾಳಿದನು. ಅದರ ನಂತರ ಆಡಳಿತವರ್ಗ, ಅಧಿಕಾರವರ್ಗ ಹಾಗೂ ಆತನ ಹಿತೈಷಿಗಳು ವಿನಂತಿಸಿದರು. ಅಲ್ಲಾಹುವು ತಮಗೆ ಸಿರಿಸಂಪತ್ತು, ಅಧಿಕಾರಗಳೆಲ್ಲವನ್ನೂ ದಯಪಾಲಿಸಿದ್ದಾನೆ. ಆದರೆ ಇನ್ನೂವರೆಗೂ 'ಮಹಾರಾಣಿ' ಅರಮನೆಯಲ್ಲಿ ಬಂದಿಲ್ಲದಿರುವುದು ವಿಷಾದವೆನಿಸುತ್ತದೆ ಅಂದರು. ಹಾಗೂ ಆತನನ್ನು ಒಪ್ಪಿಸಿದರು. ಮಹಾರಾಜನು ಒಪ್ಪಿಗೆ ನೀಡಲು ಬಹಳೇ ವೈಭವದೊಂದಿಗೆ ಆತನ ವಿವಾಹವನ್ನು ನಡೆಸಿದರು. ಒಂದು ಅವಧಿಪೂರ್ತಿ ವಿಲಾಸದಲ್ಲಿ ಕಳೆಯಿತು. ಇದೇ ಕಾಲದಲ್ಲಿ ೪–೫ ಮಕ್ಕಳು ಜನಿಸಿದವು. ಆತನು ವಿಲಾಸೀ ಜೀವನದಲ್ಲಿ ಅದೆಷ್ಟು ಮುಳುಗಿದನೆಂದರೆ ಸಮಯ ಹೇಗೆ ಸರಿಯುತ್ತಿತ್ತು ತಿಳಿಯಲಿಲ್ಲ. ಹಾಗೂ ತನ್ನ ಪೂರ್ವ ಕಾಲದ ಜೀವನವನ್ನು ಸಂಪೂರ್ಣ ಮರೆತಿದ್ದನು. ಆತನಿಗೆ ತನ್ನ ಪತ್ನಿಯ ಚಿಂತೆ ಎಳ್ಳಷ್ಟೂ ಕಾಡಲಿಲ್ಲ ಮತ್ತು ಯಾವ ಸ್ನೇಹಿತನೂ ನೆನಪಿಗೆ ಬರಲಿಲ್ಲ. ಒಂದು ಸುದೀರ್ಘ ಕಾಲದವರೆಗೆ ಸಂತೋಷ ಹಾಗೂ ಸಮೃದ್ಧಿಗಳು ಆತನ ಅರಮನೆಯಲ್ಲಿ ನೆಲಿಸಿದ್ದರಿಂದ ಆತನಿಗೆ ದುಃಖದುಮ್ಮಾನ ಒಂದಿನಿತೂ ಕಾಡಲಿಲ್ಲ. ಕೊನೆಗೆ ಒಂದು ದಿನ ಬೇಟೆಯ ಇಚ್ಛೆಯಿಂದ ಹೊರಹೊರಟನು ಆತನೊಂದಿಗೆ ಆತನ ಸೈನ್ಯವೂ ಇತ್ತು. ಯಾವಾಗ

ಅರಣ್ಯವನ್ನು ಪ್ರವೇಶಿಸಿದನೋ ಆಗ ಆತನಿಗೆ ಒಂದು ಬೇಟೆಯು ಕಣ್ಣಿಗೆ ಬಿದ್ದಿತು ಅದರ ಹಿಂದೆ ಕುದುರೆಯನ್ನು ಓಡಿಸಿದನು. ಹಾಗೂ ಆ ಪ್ರಾಣಿಯು ಅರಣ್ಯದ ಒಳಭಾಗಕ್ಕೆ ಕರೆದೊಯ್ದಿತು. ಸೈನ್ಯವು ಆತನಿಂದ ಬೇರ್ಪಟ್ಟಿತು. ಬಾದಶಾಹನು ಏಕಾಂಗಿಯಾದನು. ಆಗ ಏನು ನೋಡುತ್ತಾನೆ ಅಲ್ಲಿ ಬೇಟೆಯ ಆ ಪ್ರಾಣಿಯೂ ಇಲ್ಲ, ಅರಣ್ಯವೂ ಇಲ್ಲ ಆದರೆ ಅದೇ ಕೋಣೆ ಹಾಗೂ ಪೆಟ್ಟಿಗೆ ಮತ್ತು ಪುಸ್ತಕವು ಇದೆ. ಎಲ್ಲಿಂದ ಆತನು ಕೆಲ ವರ್ಷಗಳ ಹಿಂದೆ ಹೋಗಿದ್ದನು ಬಹಳೇ ಒತ್ತುಕೊಟ್ಟು ನೆನಪಿಸಿದಾಗ ಆತನಿಗೆ ನೆನಪು ಬಂದಿದ್ದು ಹಜ್ರತ್‌ರ ಆದೇಶದಂತೆ ಪುಸ್ತಕವನ್ನು ತೆಗೆದುಕೊಂಡು ಹೋಗಲು ಈ ಕೋಣೆಗೆ ಆಗಮಿಸಿದ್ದನು ಆಶ್ಚರ್ಯಪಡುತ್ತಾ ವಿಷಾದದೊಂದಿಗೆ ಆ ಕೋಣೆಯಿಂದ ಹೊರಬಂದನು. ತಲೆ ಮೇಲೆ ಕಿರೀಟವು, ದೇಹದ ಮೇಲೆ ಬಾದಶಾಹನ ಉಡುಪು ಹಾಗೂ ತೊಟ್ಟ ಭರ್ಜರಿ ಆಭರಣಗಳೆಲ್ಲವೂ ಇದ್ದಂತೆಯೇ ಇದ್ದವು. ಹಜ್ರತ್‌ರ ಕಾಲಿಗೆರಗಿದನು. ಹಾಗೂ ತನ್ನ ವಿಜೃಂಭಣೆ ಹಾಗೂ ವಿಲಾಸೀ ಜೀವನವು ತನ್ನ ಕೈಯಿಂದ ಹೋಗಿದ್ದಕ್ಕೆ ವಿಷಾದ ವ್ಯಕ್ತಪಡಿಸಿದನು. ಹಜ್ರತ್‌ರು ಮುಗುಳ್ನಗುತ್ತಾ ಸಾಂತ್ವನ ನೀಡಿದರು. ಅಲ್ಲಾಹುವಿಗೆ ಕೃತಜ್ಞತೆಯನ್ನು ಅರ್ಪಿಸು. ಎಲ್ಲವೂ ಅಲ್ಲಾಹುವಿನ ಹಿಡಿತದಲ್ಲಿದೆ ಎಂದರು.

ಮೊಹರ್ರಮದ ೧೯ನೆಯ ದಿನಾಂಕದಂದು ಬೆಳ್ಳಂ ಬೆಳಿಗ್ಗೆ ರವಿವಾರ ಹಿಜ್ರಿಶಕೆ ೯೯೮ರಂದು ಹಜ್ರತ್‌ರು ಇಹಲೋಕವನ್ನು ತ್ಯಜಿಸಿದರು. ಹಜ್ರತ್‌ರ ಸಮಾಧಿಸ್ಥಳವು ಅಹ್ಮದಾಬಾದ್ ಗುಜರಾತಿನಲ್ಲಿ ಪ್ರಸಿದ್ಧವಿದೆ ಹಾಗೂ ದರ್ಶನಾರ್ಥಿಗಳಿಗೆ ಸಮೃದ್ಧಿದಾಯಕವಾಗಿದೆ. ಅವರ ನಿಧನದ ದಿನಾಂಕವು 'ಓಲಿಯಾಯೆ ತಹತ್ ಖಬಾಯಿ' ಎಂದು ಇರುವದು.

'ತಾರೀಖೆ ಜಹಾಂಗೀರ್' ಗ್ರಂಥದ ಲೇಖಕನು ಹೀಗೆ ಬರೆದಿರುವನು ಹಿಜ್ರಿಶಕೆ ೧೦೨೭ರಲ್ಲಿ ಜಹಾಂಗೀರ ಬಾದಶಾಹನು ಅಹ್ಮದಾಬಾದ್ ಗುಜರಾತಕ್ಕೆ ಹೋಗಿದ್ದನು ಅಲ್ಲಿ ತಲುಪಿದ ಮರುದಿನ ಹಜ್ರತ್‌ಷಾಹ್ ವಜಿಯುದ್ದೀನ್ ಅಲ್ವಿ(ಖು)ರ ಪವಿತ್ರ ಸಮಾಧಿ ಸ್ಥಳಕ್ಕೆ ಭೇಟಿ ನೀಡಿ ತುಂಬಾ ಗೌರವ ಹಾಗೂ ವಿನೀತತೆಯಿಂದ ಜಿಯಾರತ್‌ಗೈದನು. ಆ ಅವಧಿಯಲ್ಲಿ ಅವರ ಮಗ ಹಜ್ರತ್‌ಷಾಹ ಅಬ್ದುಲ್ಲಾಹ್‌ರ ಪುತ್ರ ಹಾಗೂ ಹಜ್ರತ್‌ರ ಮೊಮ್ಮಗ ಹಜ್ರತ್‌ಷಾಹ್ ಅಸದುಲ್ಲಾಹ್‌ರು ಸಜ್ಜಾದಾ ನಶೀನ (ಪೀಠಾಧಿಪತಿ)ಯಾಗಿದ್ದರು.

ಹಜ್ರತ್‌ಷಾಹ್ ವಜೀಯುದ್ದೀನ್ ಅಲ್ವಿಯವರ ಜೇಷ್ಠ ಪುತ್ರರಾದ ಹಜ್ರತ್‌ಷಾಹ್ ಅಬ್ದುಲ್ಲಾಹ್ ಹುಸೈನಿಯವರು ಇಪ್ಪತ್ತು ವರ್ಷಗಳವರೆಗೆ ಜನರೊಡನೆ ಉಪದೇಶ ಹಾಗೂ ಮಾರ್ಗದರ್ಶನ ನೀಡಿದರು. ಹಜ್ರತ್‌ರು ಆ ಅವಧಿಯ ಮಹಾಪುರುಷರಾಗಿದ್ದರು. ಚಾರಿತ್ರ್ಯ ಹಾಗೂ ನಡತೆಯಲ್ಲಿ ತಮ್ಮ ತಂದೆಯವರಂತೆಯೇ

ಇದ್ದರು. ದರ್ವೇಶಿತನ ಹಾಗೂ ದೇವಾರಾಧನೆಯಲ್ಲಿ ಉನ್ನತ ದರ್ಜೆಯನ್ನು ತಲುಪಿದ್ದರು. ಅವರ ವಯಸ್ಸು ೮೭ ವರ್ಷಗಳಿಗಿಂತಲೂ ಹೆಚ್ಚಾಗಿತ್ತು. ತಮ್ಮ ಪೂರ್ತಿ ಆಯುಷ್ಯದ ಅವಧಿಯಲ್ಲಿ ಅವರು ಸೇವಿಸಿದ ಆಹಾರ ಏಳು ಸೇರು ಗೋಧಿಯಷ್ಟಾಗಿತ್ತು. ಅವರು ಸದಾಕಾಲ ರೋಜಾ (ಉಪವಾಸ) ನಿರತರಾಗಿರುತ್ತಿದ್ದರು. ಹಾಗೂ ರೋಜಾ ತೈ ಅಂದರೆ ಉಪವಾಸವನ್ನು ಮೂರು ದಿನಗಳಿಗೊಮ್ಮೆ ಬಿಡುವ ವೃತವನ್ನು ಪಾಲಿಸುತ್ತಿದ್ದರು. ಉಪವಾಸ ವೃತವನ್ನು ಬರೀ ನೀರು ಸೇವಿಸಿಯೂ ಇರುತ್ತಿದ್ದರು. ಹಾಗೂ ಉಪವಾಸ ಬಿಡುವಿಕೆಯನ್ನು ಕೆಲವೊಮ್ಮೆ ರೊಟ್ಟಿಸೇವನೆಯಿಂದಲೂ ಕೆಲವೊಮ್ಮೆ ಬರೀ ನೀರು ಸೇವಿಸಿಯೇ ಬಿಡುತ್ತಿದ್ದರು. ಹಜ್ರತ್‌ರ ನಿಧನವು ಮೊಹರಮ್ ತಿಂಗಳ ೫ನೆಯ ದಿನಾಂಕದಂದು ಹಿಜ್ರಿಶಕೆ ೧೦೧೭ರಲ್ಲಿ ಆಯಿತು. ಹಜ್ರತ್‌ರ ಸಮಾಧಿಯು ಅವರ ತಂದೆಯವರ ಸಮಾಧಿಯ ಪಕ್ಕದಲ್ಲಿರುವದು.

ಅಲ್ಲಾಹುಮ್ಮನ್ ಫಹನಾ ಬೀ ಬರಕಾತಿಹಿಮ್ ।
ವಜ್‌ಅಲ್‌ನಾ ಮಿನ್ ಕಿಲಾಬೀ ಅತಬಾತಿಹಿಮ್ ॥

ಓ ಅಲ್ಲಾಹು। ನೀನು ಈ ಮಹಾಪುರುಷರ ಸಮೃದ್ಧಿಯಿಂದಾಗಿ ನಮಗೆ ಫಲನೀಡು ಹಾಗೂ ಅವರ ನಿಷ್ಠಾವಂತ ಸೇವಕನನ್ನಾಗಿಸು. (ಅವರ ಬಾಗಿಲೆದುರಿನ ನಾಯಿಯಾಗಿಸು)

■

೩೮. ಹಜ್ರತ್‌ಷಾಹ್ ಮುರ್ತುಜಾ ಹುಸೈನಿ ಅಲ್ವಿ (ಖು)

ಇವರು ಹಜ್ರತ್ ಪೀರ್ ದಸ್ತಗೀರ್‌ಷಾಹ್ ಹಾಷಿಂ(ಖು)ರ ಜೇಷ್ಠ ಪುತ್ರರಾಗಿರುವರು. ಹಾಗೂ ತಮ್ಮ ತಂದೆಯವರಿಂದಲೇ "ಇರಾದತ್", ಬೈಯ್ಯತ್, ಪರವಾನಿಗೆ ಹಾಗೂ ಖಿಲಾಫತ್‌ವನ್ನು ಪಡೆದಿದ್ದರು. ತಂದೆಯವರಂತೆಯೇ ನಡೆನುಡಿಯನ್ನು ಚಾರಿತ್ರ್ಯವನ್ನು ಹೊಂದಿದ್ದರು. ಹಜ್ರತ್‌ರ ಎದುರಲ್ಲಿಯೇ ಹುತಾತ್ಮರಾದರು. ಇವರ ಹುತಾತ್ಮತೆಯ ಘಟನೆಯು 'ಗಂಜುಲ್ ಅಸ್ರಾರ್' ಎಂಬ ಪುಸ್ತಿಕೆಯಲ್ಲಿ ಹೀಗೆ ಬರೆಯಲಾಗಿದೆ. ಹಜ್ರತ್‌ಷಾಹ್ ಹಾಷಿಂ (ಖು)ರ ಪ್ರಕೃತಿಯಲ್ಲಿ ಒಂದು ವಿಶೇಷವಿತ್ತು. ಅವರು ಯಾರಿಗೂ ನೋವನ್ನುಂಟು ಮಾಡುತ್ತಿರಲಿಲ್ಲ. ಎಲ್ಲಿಯವರೆಗೆಂದರೆ, ಯಾವುದೇ ವಿಷಯುಕ್ತ ಅಥವಾ ವಿಷರಹಿತ ಪ್ರಾಣಿಗೂ ಸಹ ತೊಂದರೆ ಕೊಡುತ್ತಿರಲಿಲ್ಲ. ಹಜ್ರತ್‌ರಿಗೂ ಸಹ ಯಾವುದೇ ಪ್ರಾಣಿಯಿಂದ ಅವರ ಜೀವನಪರ್ಯಂತ ತೊಂದರೆಯು ತಲುಪಲಿಲ್ಲ. ಒಂದು ದಿನ ಹಜ್ರತ್‌ರು ವಿಶ್ರಾಂತಿ ಪಡೆಯುತ್ತಿದ್ದರು. ಒಂದು ಇಲಿಯು ಅವರ

ಪಾದದ ಅಂಗುಷ್ಠಕ್ಕೆ ಮುತ್ತು ನೀಡಿತು. ಹಜ್ರತ್‌ರು ಕಾಲನ್ನು ಎಳೆದುಕೊಂಡರು. ಮತ್ತೆ ಎರಡನೆಯ ಸಲವೂ ಹಾಗೆಯೇ ಮಾಡಿತು. ಹಜ್ರತ್‌ರು ಸುಮ್ಮನಾದರು. ಮತ್ತೆ ಮೂರನೆಯ ಸಲ ಮುತ್ತು ನೀಡಿ ನೆಕ್ಕಿತು. ಆಗ ಅವರ ಪುತ್ರರಾದ ಹಜ್ರತ್ ಮುರ್ತುಜಾ ಹುಸ್ಸೈನಿ(ಖ)ರು ಅದರಿಂದ ಬಿಡುಗಡೆ ಕೊಡಿಸಲು ಮಕ್ಕಳು ಆಡುವ ಬಿಲ್ಲು ಬಾಣಗಳಿಂದ ಒಂದು ಬಾಣವನ್ನು ಆಯ್ದು ಅದರೆಡೆಗೆ ಎಸೆದರು. ಆಕಸ್ಮಿಕವಾಗಿ ಆ ಬಾಣವು ಇಲಿಯ ಹೊಟ್ಟೆಯಲ್ಲಿ ಚುಚ್ಚಿತು. ಅದರಿಂದ ಅದು ಸಾವನ್ನಪ್ಪಿತು. ಹಜ್ರತ್‌ರು ಅದರ ಸಾವಿನಿಂದಾಗಿ ಬಹಳಷ್ಟು ವ್ಯಥಿತರಾದರು. ಹಾಗೂ ವಿಷಾದ ವ್ಯಕ್ತಪಡಿಸಿದರು. ತಮ್ಮ ಬದುಕಿನಲ್ಲಿಯೇ ಯಾವುದೇ ಜೀವಿಗೆ ತೊಂದರೆ ಅಥವಾ ಸಾವು ನೋವು ಸಂಭವಿಸಿರಲಿಲ್ಲ. ಆದರೆ ಇಂದು ಈ ಮುದಿ ಇಲಿಯ ಜೀವ ಹೋಯಿತು. ಈ ಘಟನೆಯಿಂದ ಯಾವಾಗಲೂ ಚಿಂತಿತರಾಗಿರುತ್ತಿದ್ದರು. ಹಾಗೂ ಅಲ್ಲಾಹುವಿನಿಂದ ಇದನ್ನೇ ಬಯಸುತ್ತಿದ್ದರು. ಈ ರಕ್ತದ 'ಬದಲು' ಬೇಗನೆ ತೆಗೆದುಕೋ ಆಕಸ್ಮಿಕವಾಗಿ ಇದೇ ಸಮಯದಲ್ಲಿ ಒಂದು ದಿನ ನವಾಬ್ ಮುಸ್ತಫಾಖಾನ್ ಹಾಗೂ ದೌಲತ್‌ಖವಾಸ್‌ಖಾನ್‌ನ ನಡುವೆ ಜಗಳವು ತೀವ್ರವಾಗಿ ನಡೆಯತೊಡಗಿತು. ಆಗ ಹಜ್ರತ್‌ಷಾಹ ಮುರ್ತುಜಾ(ಖ)ರು ಮುಸ್ತಫಾಖಾನ್‌ನ ಬಳಿಗೆ ಕುಳಿತಿದ್ದರು. ವಿರೋಧಿಯು ಬಿಟ್ಟ ಬಾಣವು ಹಜ್ರತ್‌ರ ಹೊಟ್ಟೆಯಲ್ಲಿ ನೆಟ್ಟಿತು. ಎಲ್ಲಿ ಹಜ್ರತ್‌ರ ಕೈಯಿಂದ ಮುದಿ ಇಲಿಯ ಹೊಟ್ಟೆಯಲ್ಲಿ ನೆಟ್ಟಿತ್ತು. ತಕ್ಷಣ ಅಲ್ಲಿಯೇ ನಿಧನರಾದರು. ಈ ಘಟನೆಯು ಜಿಲ್ಹಜ್ಜಾದ 'ಅರಫಾ'ದ ದಿನ ಹಿಜ್ರಿಶಕೆ ೧೦೪೫ರಂದು ಜರುಗಿತು. ಈ ಸುದ್ಧಿಯು ಹಜ್ರತ್‌ರಿಗೆ ತಲುಪಿತೋ ಆಗ ಇಲಿಯ ರಕ್ತದ ಬದಲಾಗಿ ನನ್ನ ಪುತ್ರನು ಹತನಾದನು. ಅದರ ಪ್ರತಿಯಾಗಿ ಏನನ್ನಾದರೂ ಮಾಡಬೇಕು. ಆಗ ತನ್ನ ಮೊಮ್ಮಗನಾದ ಹಜ್ರತ್‌ಷಾಹ್ ಬುರ್ಹಾನುದ್ದೀನ್ ಅಂದರೆ ಹಜ್ರತ್‌ಷಾಹ್ ಮುರ್ತುಜಾ(ಖ)ರ ಪುತ್ರರನ್ನು ತಮ್ಮ ಸನ್ನಿಧಿಗೆ ಕರೆಯಿಸಿಕೊಂಡು ಹೀಗೆಂದರು. 'ಪ್ರವಾದಿ ಮುಹಮ್ಮದ್(ಸ)ರಿಂದ ಆಧ್ಯಾತ್ಮಿಕವಾಗಿ ನನಗೆ ದೊರೆತ ಎಲ್ಲ ವಿದ್ಯೆಯನ್ನು ನಿನಗೆ ಧಾರೆಯೆರೆದಿರುವನು, ಖಿಲಾಫತ್ ನೀಡುವೆನು. ನನ್ನ ಉತ್ತರಾಧಿಕಾರಿಯಾಗಿ ನೀನು ಇನ್ನು ಮುಂದೆ ನಮ್ಮ ಧಾರ್ಮಿಕ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗು ಎಂದು ಆಶೀರ್ವದಿಸಿದರು. ಹಜ್ರತ್‌ರ ಸಮಾಧಿ ಸ್ಥಳವು ಜೋಹರಾಪುರದ ಕೋಟೆಗೋಡೆಯ ಹೊರಗಡೆ ಇರುವದು. ಅಂದರೆ ಈಗಿನ ಪೋಲೀಸ್ ಗಾರ್ಡನ್‌ದ ಪೂರ್ವದಿಕ್ಕಿನಲ್ಲಿ ಇರುವದು. ಹಜ್ರತ್‌ರ ತಾಯಿಯವರ ಪಾದದಡಿಯಲ್ಲಿ ಸಮಾಧಿಸ್ಥರಾಗಿರುವರು. ಇವರ ಪತ್ನಿಯವರ ಸಮಾಧಿಯು ಇಲ್ಲಿಯೇ ಇರುವದು.

■

೩೯. ಹಜ್ರತ್‌ಷಾಹ್ ಮುಸ್ತಫಾ ಹುಸೈನಿ ಅಲ್ವಿ (ಖು)

ಇವರು ಹಜ್ರತ್‌ಷಾಹ್ ಹಾಷಿಂ ಹುಸೈನಿ ಅಲ್ವಿ(ಖು)ರ ಎರಡನೆಯ ಪುತ್ರರಾಗಿದ್ದಾರೆ. ಇವರೂ ಸಹ ಹಜ್ರತ್ ಷಾಹ್ ಹಾಷಿಂಪೀರ್(ಖು)ರ ಮುರೀದ ಹಾಗೂ ಖಲೀಫಾ (ಉತ್ತರಾಧಿಕಾರಿ)ರಾಗಿರುವರು. ಧಾರ್ಮಿಕ ನಡವಳಿಕೆ, ಜಪತಪ, ಶಿಕ್ಷಣ ನೀಡುವಲ್ಲಿ, ಮಾರ್ಗದರ್ಶನ ಮಾಡುವಲ್ಲಿ, ಎಲ್ಲದರಲ್ಲಿಯೂ ತಮ್ಮ ತಂದೆಯವರಂತೆಯೇ ಇದ್ದರು. ಈ ಹಜ್ರತ್‌ರಿಗೆ ಹದಿನಾಲ್ಕು ಜನ ಪುತ್ರರಿದ್ದರು. ಎಲ್ಲರೂ ತಮ್ಮ ಕಾಲದ ಸೂಫಿವರ್ಯರಾಗಿದ್ದರು. ಇವರೆಲ್ಲರಲ್ಲಿ ಜೇಷ್ಠರಾದ ಹಜ್ರತ್‌ಷಾಹ್ ಹಬೀಬುಲ್ಲಾಹ್(ಖು)ರು ಮಹಾಜ್ಞಾನಿಗಳೂ, ಆಧ್ಯಾತ್ಮಿಕ ಜ್ಞಾನದಲ್ಲಿ ತಮಗೆ ತಾವೇ ಸಾಟಿಯಾಗಿದ್ದರು. ಹಜ್ರತ್‌ಷಾಹ್ ಮುಸ್ತಫಾ(ಖು)ರ ಸಮಾಧಿಯು ನಗರದ ಹೊರಗಡೆ ಬೊಮ್ಮನಹಳ್ಳಿಯ ದ್ವಾರದೆಡೆಗೆ ಹಜ್ರತ್ ಮಿರ್ಜಾ ಮುಹಮ್ಮದ್ ಉರ್ಫ್ ಷಾಹ್‌ರಾಜು(ಖು)ರ ಸಮಾಧಿಯ ಬಳಿ ಇರುವದು ಹಾಗೂ ಹಜ್ರತ್‌ರ ಎಲ್ಲ ಸಂತತಿಯವರು ಅಲ್ಲಿಯೇ ದಫನ್‌ರಾಗಿರುವರು.

■

೪೦. ಹಜ್ರತ್‌ಷಾಹ್ ಮುರಾದ್ (ಖು)

ಇವರು ಹಜ್ರತ್‌ಷಾಹ್ ಅಬ್ದುಲ್‌ರಜಾಕ್ ಖಾದ್ರಿ(ಖು)ರ ಶಿಷ್ಯರಾಗಿದ್ದರು. ತಮ್ಮ ಗುರುಗಳ ನಿಧನದ ನಂತರ ಪೀರ್ ದಸ್ತಗೀರ್ ಹಜ್ರತ್‌ಷಾಹ್ ಹಾಷಿಂ(ಖು)ರ ಸೇವೆಯಲ್ಲಿ ಖಿಲಾಫತ್ ಹಾಗೂ ಅಂತರ್ಜ್ಞಾನ ಪಡೆದರು. ಹಗಲಿರುಳೂ ಅವರ ಸೇವೆಯಲ್ಲಿ ತೊಡಗಿದ್ದು ಅವರಿಂದ ಸಮೃದ್ಧಿ ಪಡೆದರು. ಇವರು ಹಜ್ರತ್‌ಷಾಹ್ ಹಾಷಿಂಪೀರ್(ಖು)ರ ನುಡಿಮುತ್ತುಗಳನ್ನು ಸಂಗ್ರಹಿಸಿರುವರು. ಅವುಗಳಲ್ಲಿ ಹಜ್ರತ್‌ರ ಪವಿತ್ರ ನಾಲಿಗೆಯಿಂದ ನುಡಿಯಲ್ಪಟ್ಟ ಹಾಗೂ 'ಅಜ್ಜಾರ್ ವ ಅಷಾಲ್'(ಜಪತಪ) 'ಮಾಅರಿಫ್ ವ ಅಸ್ರಾರ್' (ಅಲ್ಲಾಹುವಿನ ರಹಸ್ಯಗಳು) ಇರ್ಷಾದಾತ್ (ನುಡಿಮುತ್ತುಗಳು) ಹಾಗೂ ಹಜ್ರತ್‌ರಿಂದ ಗುಜರಾತಿ ಭಾಷೆಯಲ್ಲಿ ನುಡಿಯಲ್ಪಟ್ಟ ದ್ವಿಪದಿ ಹಾಗೂ ಗೀತೆ, "ಇರ್ಫಾನ ವ ತಸವ್ವುಫ್" ಹಾಗೂ ಹಜ್ರತ್‌ರ ಜಪತಪದ ಪರಿಯನ್ನು ಹಾಗೂ ಅವರಿಂದ ಜರುಗಿದ ಹಲವಾರು ಪವಾಡಗಳನ್ನು ವಿವರಿಸಿರುವರು. ಹಜ್ರತ್‌ಷಾಹ್ ಮುರಾದ್‌ರ ಸಮಾಧಿಯು ಹಜ್ರತ್‌ಷಾಹ್ ಹಾಷಿಂಪೀರ್(ಖು)ರ ದರ್ಗಾದ ಪೂರ್ವದಿಕ್ಕಿನಲ್ಲಿರುವ ಬಾವಿಯ ಬಳಿ ಇರುವದು.

■

೪೧. ಹಜ್ರತ್ ಷಾಹ್ ನಯೀಮುಲ್ಲಾಹ್ (ಖು)

ಇವರು ಹಜ್ರತ್‌ಷಾಹ್ ಹಾಷಿಂ(ಖು)ರ ಮುರೀದ ಹಾಗೂ ಖಲೀಫಾ ಆಗಿರುವರು. ಹಜ್ರತ್‌ರ ನಿಧನದ ನಂತರ ಹಜ್ರತ್‌ರ ಮೊಮ್ಮಗ ಹಾಗೂ ಉತ್ತರಾಧಿಕಾರಿ ಹಜ್ರತ್‌ಷಾಹ್ ಬುರ್ಹಾನುದ್ದೀನ್(ಖು)ರ ಸೇವೆಯಲ್ಲಿದ್ದು ಶಿಕ್ಷಣ ಹಾಗೂ ಮಾರ್ಗದರ್ಶನ ಪಡೆದು ಖಿಲಾಫತ್ ಪಡೆದರು. ಇವರು 'ಗಂಜುಲ್ ಅಸ್ರಾರ್' ಪುಸ್ತಿಕೆಯನ್ನು ಸಂಗ್ರಹಿಸಿದರು. ಅದರಲ್ಲಿ ಹಜ್ರತ್‌ಷಾಹ್ ಹಾಷಿಂಪೀರರ ಪವಾಡಗಳು, ಅಂತರ್ಜಾನದ ನುಡಿಮುತ್ತುಗಳು ವಿವರಿಸಲ್ಪಟ್ಟಿವೆ. ಹಾಗೂ ಹಜ್ರತ್ ಷಾಹ್ ಬುರ್ಹಾನುದ್ದೀನ್(ಖು)ರ ಜೀವನ ಚರಿತ್ರೆ ಹಾಗೂ ಕರಾಮತ್ತುಗಳನ್ನು ಸಹ ಬರೆದಿರುವರು.

ಇವರು ಆ ಕಾಲದ ಮಹಾಪುರುಷರಾಗಿದ್ದರು. ಇವರ ಸಮಾಧಿ ಸ್ಥಳವು ಹಜ್ರತ್‌ಷಾಹ್ ನಸ್ರುಲ್ಲಾಹ್‌ವಲಿ(ಖು)ರ ದರ್ಗಾದಲ್ಲಿ ಪೂರ್ವದಿಕ್ಕಿನಲ್ಲಿ ಇರುವದು. ಹಾಗೂ ಅವರ ಸಮಾಧಿ ಸ್ಥಳದ ಮೇಲೆ ಒಂದು ಪುಟ್ಟ ಗುಂಬಜ್ ಇರುವದು ಅದು ಹಜ್ರತ್ ಷಾಹ್ ನಸ್ರುಲ್ಲಾಹ್(ಖು)ರ ಸಮಾಧಿ ಸ್ಥಳದ ಮೇಲೆ ಇರುವ ಗುಂಬಜಿನಂತೆ ಇರುವದು. ಸುಲ್ತಾನ್ ಸಿಕಂದರ್ ಆದಿಲ್‌ಷಾಹ್ ಹಜ್ರತ್‌ರ ಮುರೀದ್‌ನಾಗಿದ್ದನು. ಹಾಗೂ ಹಜ್ರತ್‌ರ ಪಾದದಡಿಯಲ್ಲಿ ದಫನ್ ಆಗಿರುವನು. ಈ ಸ್ಥಳವು ಈಗ 'ಸಿಕಂದರ ಮಸ್ಜೀದ್' ಎಂದು ಪ್ರಸಿದ್ಧವಾಗಿರುವದು.

ಷಾಹ್ ಉಸ್ಮಾನ್ ಮಜಜೂಬ ಸಮಾಧಿಯು ಷಹಾಪುರ ದರ್ವಾಜಾದ ಬಳಿ ಇರುವದು ಹಜ್ರತರ ಮುರೀದರಲ್ಲೊಬ್ಬರಾಗಿದ್ದರು.

ಹಜ್ರತ್‌ರ ಈರ್ವರು ಫಕೀರರು ಬುಡನ್‌ಷಾಹ್ ಹಾಗೂ ಹಾಷಿಂಷಾಹ್ ಕರಾಮತ್ತುಗಳು ಪ್ರಸಿದ್ಧ ಇವೆ. ಇವರ ಸಮಾಧಿಗಳು ಸರಸಂಗಿ (ಈಗಿನ ತಾಲೂಕಾ ರಾಮದುರ್ಗ ಜಿಲ್ಲಾ ಬೆಳಗಾಂವ) ಗ್ರಾಮದ ಗುಡ್ಡದ ಮೇಲೆ ಇರುವವು. ಹಾಗೂ ಹೈದರ್‌ಷಾಹ್ ಆ ಕಾಲದ ಮಹಾಪುರುಷರಾಗಿದ್ದರು. ಹಾಗೂ ಹಜ್ರತ್‌ರಿಂದ ಸಮೃದ್ಧಿ ಪಡೆದಿದ್ದರು. ಕಣಕಾಲದಲ್ಲಿ ಇವರ ಸಮಾಧಿ ಇರುವದು.

ಇವರ ಸಂತತಿಯಿಂದ ಅರ್ಕಾಟ್‌ದಲ್ಲಿ ಷಾಹ್‌ಹಾಫೀಜ್ ಸೈಯ್ಯದ್ ಅಫ್ಜಲುಲ್ಲಾಹ್ ಸಾಹೇಬ್ ಉರ್ಫ್ ಮಿಯಾ ಸಾಹೇಬ್ ಹಾಗೂ ಇವರ ಸುಪುತ್ರರು ಇರುವರು.

■

೪೨. ಹಜ್ರತ್ ಷಾಹ್ ಅಹ್ಮದ್ ಮೀರಾಂಜಿ (ಖ)

ಇವರು ಹಜ್ರತ್‌ಷಾಹ್ ಅಹ್ಮದ್ ಮೀರಾಂಜಿ ಎಂದು ಪ್ರಸಿದ್ಧರು. ಈ ಹಜ್ರತ್‌ರು ಗುಜರಾತಿನಿಂದಲೇ ಹಜ್ರತ್‌ಷಾಹ್ ಹಾಷಿಂ (ಖ) ಅವರ ಸೇವೆಯಲ್ಲಿ ಹಗಲಿರುಳೂ ತೊಡಗಿಕೊಂಡಿರುತ್ತಿದ್ದರು. ಹಜ್ರತ್‌ರ ಕೃಪಾದೃಷ್ಟಿಗೆ ಅರ್ಹರಾಗಿದ್ದರು. ಹಾಗೂ ಹಜ್ರತ್‌ರಿಂದ ಬೈಯ್ಯತ್. ಇರಾದತ್, ನಡೆನುಡಿ, ಜಪತಪ ಹಾಗೂ ಏನನ್ನು ಮಾಡಬೇಕು ಏನನ್ನು ಮಾಡಬಾರದು ಎಂಬ ಅನುಮತಿ ಪಡೆದು ಅಲ್ಲಾಹುವಿನ ಸಂಪ್ರೀತಿಯಲ್ಲಿ ಮುಳುಗಿದರು. ಜ್ಞಾನಾರ್ಥಿಗಳಿಗೆ ಧಾರ್ಮಿಕ ರಹಸ್ಯ ಹಾಗೂ ಸತ್ಯದರ್ಶನ ಮಾಡಿಸಿದರು. ಅವರು ತಮ್ಮ ನಿರಪೇಕ್ಷ ಗುಣದಿಂದಾಗಿ, ಅಲ್ಲಾಹುವಿನಲ್ಲಿಯ ಸಂಪೂರ್ಣ ದೃಢನಂಬುಗೆಯಿಂದಾಗಿ, ಜಗತ್ತಿನಿಂದ ವಿರಕ್ತಿ ಹೊಂದಿದ ಮನಸ್ಸು ಹಾಗೂ ಏಕಾಂತಪ್ರಿಯತೆಯಿಂದಾಗಿ ಅವರು ತಮ್ಮ ಕಾಲದ ಮಹಾಪುರುಷರಲ್ಲೊರ್ವರಾಗಿದ್ದರು. ಇವರು ಸುಲ್ತಾನ ಇಬ್ರಾಹಿಂ ಆದಿಲ್‌ಷಾಹ್‌ನ ಸಮಾಧಿಯ ಬಳಿಯಿರುವ ಮಸೀದೆಯ ಹಿಂದುಗಡೆ ಇರುತ್ತಿದ್ದರು.

ಬಾದಶಾಹ ಆಲಂಗೀರ್‌ನು ಹಜ್ರತ್‌ರ ಪ್ರಸಿದ್ಧಿಯನ್ನು ಕೇಳಿ ಒಂದು ದಿನ ಇಬ್ರಾಹಿಂ ಆದಿಲ್‌ಷಾಹನ ಸಮಾಧಿಸ್ಥಳಕ್ಕೆ ಭೇಟಿ ನೀಡಿದನು. ಹಾಗೂ ಹಜ್ರತ್‌ರನ್ನು ಭೇಟಿಯಾಗುವ ಬಯಕೆಯಿಂದ ಮಸೀದೆಯ ಹಿಂಭಾಗದಲ್ಲಿ ನಡೆದನು. ಒಂದೆರಡು ಮೆಟ್ಟಲುಗಳನ್ನಿಳಿದಿದ್ದನು. ಓರ್ವ ಸೇವಕನು ಮೊದಲೇ ಬಾದಶಹರು ಬರುವ ಸುದ್ಧಿ ತಿಳಿಸಲು ಹೋಗಿದ್ದವನು ಮರಳಿ ಬಂದನು. ಹಾಗೂ ಬಾದಶಾಹನೊಂದಿಗೆ ಹೀಗೆಂದನು. ಹಜ್ರತ್‌ರು ಈಗ ಜಪತಪಗಳಲ್ಲಿ ತೊಡಗಿರುವರು ಹಾಗೂ ಈ ರೀತಿ ನಿಮಗ್ನತೆಯಲ್ಲಿರುವಾಗ ಯಾರತ್ತಲೂ ಗಮನ ನೀಡುವದಿಲ್ಲ ಮಾತನಾಡುವದಿಲ್ಲ. ಬಾದಶಹನು ಹೀಗೆಂದನು 'ನಿರಪೇಕ್ಷ ಫಕೀರರಾಗಿರುವರು ಯಾರ ಪರಿವೆಯೂ ಮಾಡುವವರಲ್ಲ' ಮತ್ತೆ ಅಲ್ಲಿಂದಲೇ ತಿರುಗಿ ಬಂದನು. ಹಜ್ರತ್‌ರ ಸಮಾಧಿಯು ಇಬ್ರಾಹಿಂ ಆದಿಲ್‌ಷಾಹನ ಸಮಾಧಿಯ ಬಳಿಯಿರುವ ಮಸೀದೆಯ ಹಿಂದುಗಡೆ ಒಳಾಂಗಣದಲ್ಲಿ ಉಪಸ್ಥಿತವಿರುವುದು ಹಾಗೂ ಹಜ್ರತ್‌ರ ಸಮಾಧಿಯ ಹಿಂದುಗಡೆ ಹಜ್ರತ್‌ರ ಮುರೀದ್ ಹಾಗೂ ಖಲೀಫಾ ಆಗಿದ್ದ ಶೇಖ ಮುಹಮ್ಮದ್ (ಖ)ಅವರೂ ಸಹ ತಮ್ಮ ಕಾಲದ ಸೂಫಿವರ್ಯರಲ್ಲಾಗಿದ್ದರು. ಮಹಾಜ್ಞಾನಿ ಮತ್ತು ಧರ್ಮಪ್ರಸಾರದಲ್ಲಿ ಮುಂಚೂಣಿಯಲ್ಲಿದ್ದರು. ಇವರ ಸಮಾಧಿಯು ಹಜ್ರತ್‌ರ ಸಮಾಧಿಯ ಬಳಿಯೇ ಇರುವದು.

■

೪೩. ಹಜ್ರತ್‌ಷಾಹ್ ಬುರ್ಹಾನ್ ಹುಸ್ಸೈನಿ ಅಲ್ವಿ (ಖು)

ಇವರು ಮಹಾಪುರುಷರು, ದೇವಸಾಮಿಪ್ಯ ಬಯಸುವವರ ನಾಯಕರು, ಜ್ಞಾನಾರ್ಥಿಗಳ ಪ್ರಿಯರು, ನಿರಪೇಕ್ಷರ ಮುರ್ಷಿದ್‌ರು ಆಗಿದ್ದರು. ಹಾಗೂ ತಮ್ಮ ಪೂರ್ವಜರಾದ ಹಜ್ರತ್‌ಷಾಹ್ ಹಾಷಿಂ ಹುಸ್ಸೈನಿ ಅಲ್ವಿ(ಖು)ರಿಂದ ಶಿಕ್ಷಣ ಹಾಗೂ ಖಿಲಾಫತ್ ಹೊಂದಿ ಹಜ್ರತ್‌ರ ಉಯಿಲಿನಂತೆ ಹಜ್ರತ್‌ರ ನಂತರ ಪೀಠಾಧಿಪತಿಗಳಾದರು. ಅನುಯಾಯಿಗಳಿಗೆ ಮಾರ್ಗದರ್ಶನ ನೀಡತೊಡಗಿದರು. ಪಟ್ಟಣದ ಪ್ರಸಿದ್ಧ ಸೂಫಿವರ್ಯರಲ್ಲಿ ಓರ್ವರೆಂದು ಪರಿಗಣಿಸಲ್ಪಡುತ್ತಾರೆ. ಸುಲ್ತಾನ್ ಮುಹಮ್ಮದ್ ಆದಿಲ್‌ಷಾಹ್ ಹಾಗೂ ಅನೇಕ ಅಧಿಕಾರಿಗಳು, ಅಮೀರರು ಹಜ್ರತ್‌ರಲ್ಲಿ ಅಪ್ರತಿಮ ವಿಶ್ವಾಸ ಹಾಗೂ ಗೌರವ ತೋರುತ್ತಿದ್ದರು. ಹಜ್ರತ್‌ರ ಮಾರ್ಗದರ್ಶನದಿಂದಾಗಿ ಅಸಂಖ್ಯ ಅನುಯಾಯಿಗಳು ಅಲ್ಲಾಹುವಿನ ಸಮೃದ್ಧಿ ಪಡೆದರು. ಇವರ ಪೂರ್ವಜರಲ್ಲಿದ್ದ ಸರ್ವ ಉತ್ತಮಾಂಶಗಳು ಹಾಗೂ ಪವಾಡಗಳು ಇವರಲ್ಲಿಯೂ ಗೋಚರವಾದವು.

ಹಜ್ರತರು ಒಂದು ಸಲ ಲಕ್ಷ್ಮೇಶ್ವರದ ಬಳಿ ಇರುವ ಕರ್ಕಹವಾರಾ ಎಂಬ ಗ್ರಾಮಕ್ಕೆ ಹೋದರು. ಹಜ್ರತ್‌ಶಾಹ್ ನಯೀಮುಲ್ಲಾಹ್(ಖು)ರೂ ಸಹ ಅವರ ಜೊತೆಗೆ ಇದ್ದರು. ಅವರು ಹೀಗೆನ್ನುತ್ತಾರೆ. ಹಜ್ರತ್‌ರು ಅಲ್ಲಿ ಒಂದು ಖಾನ್‌ಶಾಹ್ ಹಾಗೂ ಮಸೀದೆ ನಿರ್ಮಿಸಬೇಕೆಂದು ಮನಸ್ಸು ಮಾಡಿದರು. ಬೇಸಿಗೆಯ ಕಾಲವಿತ್ತು. ಆ ಗ್ರಾಮದಲ್ಲಿ ನೀರಿಲ್ಲದೇ, ನೀರಿಗಾಗಿ ತುಂಬಾ ಹಾಹಾಕಾರ ಇತ್ತು. ಹಜ್ರತ್‌ರು ಅಲ್ಲಾಹುವಿನ ದರ್ಬಾರದಲ್ಲಿ ಪ್ರಾರ್ಥಿಸಿದರು. ಓ ಅಲ್ಲಾಹನೇ! ಎಲ್ಲರ ಕಾರ್ಯಕಾಮನೆಗಳನ್ನು ಪೂರ್ತಿಗೊಳಿಸುವವನೇ ಒಂದು ವೇಳೆ ಮಳೆಯು ಇಲ್ಲಿ ವರ್ಷಿಸಿದರೆ ನಿನ್ನ ಜೀವಿಗಳಿಗೆ ಸಂತಸ ದೊರೆಯುವುದು ಹಾಗೂ ಮಸೀದೆಯು ಯಾವುದು ನಿನ್ನ ಆಲಯವಾಗಿದೆ ಅದರ ಬುನಾದಿಯೂ ಇಡಲಾಗುವದು. ವಿವರಿಸುವವರು ಹೀಗೆ ವಿವರಿಸುತ್ತಾರೆ. ಈ ಕಡೆ ಜನರ ನಡುವೆ ಈ ಮಾತನ್ನು ಉಚ್ಚರಿಸಿದರು. ಮತ್ತು ಆ ಕಡೆ ಮುಗಿಲುಗಳು ಮೋಡಗಟ್ಟಿ ನಾಲ್ಕೂ ಕಡೆ ಆವರಿಸಿದವು. ಹಾಗೂ ಮಳೆಯು ಧೋ ಧೋ ಎಂದು ಸುರಿಯತೊಡಗಿತು. ಊರು, ಕೇರಿ, ಗುಡ್ಡ, ಬೆಟ್ಟ, ಅರಣ್ಯಗಳೆಲ್ಲವೂ ನೀರಿನಿಂದ ಆವೃತ್ತಗೊಂಡವು. ಕೊನೆಗೆ ಜನರು ಅತಿವೃಷ್ಟಿಯ ತೊಂದರೆಯ ಹವಾಲನ್ನು ಹಜ್ರತರ ಎದುರು ತಂದರು. ಹಾಗೂ ಹಜ್ರತರು ಪ್ರಾರ್ಥಿಸಿದಾಗ ಮಳೆಯು ನಿಂತಿತು.

ಹಜ್ರತ್‌ರು ತಮ್ಮ ನಿಧನದ ನಾಲ್ಕು ವರ್ಷ ಪೂರ್ವದಲ್ಲಿ ತಮ್ಮ ಸುಪುತ್ರರಾದ ಹಜ್ರತ್‌ಷಾಹ್ ಮುರ್ತುಜಾ ಹುಸ್ಸೈನಿ ಅಲ್ವಿ(ಖು)ರನ್ನು ಖಿಲಾಫತ್, ಅನುಮತಿ ಹಾಗೂ ಉತ್ತರಾಧಿಕಾರತ್ವವನ್ನು ನೀಡಿದರು. ಹಾಗೂ ಅವರ ತರಬೇತಿಯು ಹಜ್ರತ್‌ಷಾಹ್ ನಯೀಮುಲ್ಲಾಹ್‌ರ ಸುಪರ್ದಿಗೆ ಬಂದಿತು. ಅದರ ೨ ವರ್ಷದ ನಂತರ ದೊಂಡಕಾ

ಗ್ರಾಮಕ್ಕೆ ಹೋಗುವ ಬಯಕೆ ವ್ಯಕ್ತಪಡಿಸಿದರು. ಈ ಗ್ರಾಮಕ್ಕೆ ತಮ್ಮ ಹೆಸರನ್ನು ಜೊತೆಗೂಡಿಸಿ 'ಬುರ್ಹಾನ್‌ಪುರ' ಎಂದು ನಾಮಕರಣ ಮಾಡಿದರು. ಕಾರಣ ಎಲ್ಲ ಸೇವಕರಿಗೆ ಉದ್ದೇಶಿಸಿ ಆದೇಶಿಸಿದರು. ಈ ಗುರುವಾರ ನಾನು ಬುರ್ಹಾನ್‌ಪುರಕ್ಕೆ ಹೊರಡುವೆನು. ಯಾತ್ರೆಗೆ ಬೇಕಾಗುವ ಸಾಮಗ್ರಿಗಳನ್ನು ಸಿದ್ಧಗೊಳಿಸಿದರು. ಹಜ್ರತ್‌ರು ತಾವು ಹೊರಡುವ ಸಮಯದಲ್ಲಿ ಹಜ್ರತ್‌ಷಾಹ್ ಮುರ್ತುಜಾ(ಖು)ರಿಗೆ ತಮ್ಮ ಸನ್ನಿಧಿಗೆ ಕರೆಯಿಸಿಕೊಂಡು ಮೂರು ತಾಸಿನವರೆಗೆ ದಿಟ್ಟಿಸಿ ನೋಡತೊಡಗಿದರು. ಹಜ್ರತ್‌ಷಾಹ್ ಮುರ್ತುಜಾ(ಖು) ದೇಹದಲ್ಲಿ ಕಂಪನ ಮೂಡತೊಡಗಿತು. ಕುಟುಂಬದವರು ಅವರ ನೋಡುವಿಕೆ ಹಾಗೂ ಗಮನ ಹರಿಸುವಿಕೆಯು ರಹಸ್ಯಪೂರ್ಣವಾಗಿದೆಯೆಂದು ಬಗೆದರು. ಆ ಒಂದು ಕೃಪಾದೃಷ್ಟಿಯಿಂದ ಇಂತಹ ದಿವ್ಯಜ್ಞಾನವನ್ನು ದಯಪಾಲಿಸಿದರು. ಯಾವುದು ಓದುವದರಿಂದ ಬರಲಾರದು. ಹಾಗೂ ಆ ಜ್ಞಾನವನ್ನು ಅವರ ಹೃದಯದಲ್ಲಿ ಸ್ಥಾಪಿತಗೊಳಿಸಿದರು. ಆಧ್ಯಾತ್ಮಿಕ ಜ್ಞಾನದ ಸಮಗ್ರ ವಿಷಯವನ್ನು ಧಾರೆಯೆರೆದರು. ಅದೇ ದಿನ ಬುರ್ಹಾನ್‌ಪುರಕ್ಕೆ ಹೋದರು. ಹಾಗೂ ಎರಡು ವರ್ಷಗಳವರೆಗೆ ಅಲ್ಲಿಯೇ ನೆಲಿಸಿ ಅಲ್ಲಿಂದಲೇ ಶಾಶ್ವತ ಲೋಕದತ್ತ ಪಯಣ ಬೆಳೆಸಿದರು. ವಿವರಿಸುವವನು ಹೀಗೆನ್ನುವನು ನಿಧನದ ದಿನ ಸೂರ್ಯ ಬೆಳಗಲಿಲ್ಲ. ಅದು ಬೇಸಿಗೆಯ ಕಾಲವಿತ್ತು. ಮುಗಿಲಿನ ಮೇಲೆ ಮೋಡಗಳು ಕವಿದಿರಲಿಲ್ಲ. ಜನರೆಲ್ಲರೂ ವಿಪ್ಪಲಿತಗೊಂಡಿದ್ದರು. ಏನು ಅಂತಿಮದಿನ (ಕಯಾಮತ್) ಬಂದಿತೇ? ಮತ್ತೆ ಮರುದಿನ ಸೂರ್ಯನು ತನ್ನ ಬೆಳಕನ್ನು ಪ್ರತಿಫಲಿಸಿದಾಗ ತಿಳಿದರು. ಹಜ್ರತ್‌ರು 'ಕುತುಬೇವಕ್ತ' (ಆ ಕಾಲದ ಮಹಾಪುರುಷರಾಗಿದ್ದರು) ಆಗಿದ್ದರು. ಆ ಕಾರಣಕ್ಕೆ ಹೀಗಾಯಿತು. ಅಲ್ಲಿಂದ ಹಜ್ರತ್‌ರ ಮೃತದೇಹವನ್ನು ಬಿಜಾಪುರಕ್ಕೆ ತರಲಾಯಿತು. ಮೂರು ಸ್ಥಳಗಳಲ್ಲಿ ಹಜ್ರತ್‌ರ ಜನಾಜಾ ನಮಾಝನ್ನು ಸಲ್ಲಿಸಲಾಯಿತು. ಮೊದಲನೆ ಸಲ ಆ ಗ್ರಾಮದಲ್ಲಿ, ಎರಡನೆಯದಾಗಿ ಪಟ್ಟಣದ ಹೊರಗಡೆ ಹಾಗೂ ಮೂರನೆಯ ಸಲ ಪಟ್ಟಣದಲ್ಲಿ, ಆಗ ಅಸಂಖ್ಯ ಸಜ್ಜನರು, ಸೂಫಿಗಳು, ಸೂಫಿವಂಶಜರು ಹಾಗೂ ಸಾರ್ವಜನಿಕರು ಜನಾಜಾ ನಮಾಜಿನಲ್ಲಿ ಹಾಗೂ ಪ್ರಾರ್ಥನೆಯಲ್ಲಿ ಪಾಲ್ಗೊಂಡರು.

ಈ ಜ್ಞಾನದ ಗಣಿಯನ್ನು, ಸೂಫಿವರ್ಯರನ್ನು ಹಜ್ರತ್‌ರ ಪೂರ್ವಜರಾದ ಹಜ್ರತ್‌ಶಾಹ್ ಹಾಷಿಂ(ಖು)ರ ಗುಂಬಜಿನ ಒಳಾಂಗಣದಲ್ಲಿ ಹಜ್ರತ್‌ರ ಪಾದದಡಿಯಲ್ಲಿ ಸಮಾಧಿಸ್ಥರನ್ನಾಗಿಸಿದರು. ಹಜ್ರತ್‌ರ ಉರುಸ್ ಷರೀಫವು ಜಿಲ್‌ಖೈದಾದ ೧೭ನೇ ದಿನಾಂಕದಂದು ಇರುವದು.

ಆಗಿನ ಕಾಲದಲ್ಲಿ ಒಂದು ಸಂಪ್ರದಾಯವಿತ್ತು. ಅದೇನೆಂದರೆ ಪಟ್ಟಣದ ಹೊರಭಾಗದಿಂದ ಮೈಯ್ಯತ್‌ನ್ನು (ಶವವನ್ನು) ಪಟ್ಟಣದೊಳಗೆ ತರುತ್ತಿರಲಿಲ್ಲ. ಯಾವುದೇ ಪ್ರಭಾವೀ ಅಮೀರನ ಶವವನ್ನು ಪಟ್ಟಣದೊಳಗೆ ತಂದು ದಫನ್‌ಗೊಳಿಸುವ ಧೈರ್ಯ

ಯಾರಿಗೂ ಇರಲಿಲ್ಲ. ಆ ವ್ಯಕ್ತಿಯು, ಪ್ರಭಾವಿ ಅಮೀರನಾಗಿರಲಿ, ಮಂತ್ರಿಯಾಗಿರಲಿ ಅಥವಾ ಸೂಫಿಯಾಗಿರಲಿ ಒಂದು ವೇಳೆ ಕೋಟೆಯ ಹೊರಗಡೆ ಮೃತನಾದರೆ ಅಲ್ಲಿಯೇ ದಫನ್ ಮಾಡುತ್ತಿದ್ದರು. ಯಾವಾಗ ಹಜ್ರತ್‌ರ ಮೃತದೇಹವನ್ನು ಪಟ್ಟಣದಲ್ಲಿ ತರಲಾಯಿತೋ ಆಗ ಕೋಟೆಗೋಡೆಯ ದ್ವಾರಪಾಲಕರಲ್ಲಿ ಸ್ತಂಭೀಭೂತತನ ಸ್ಥಾಪಿತಗೊಂಡು ಒಬ್ಬರನೊಬ್ಬರು ನೋಡುತ್ತಲೇ ನಿಂತುಕೊಂಡರು. ಎಲ್ಲರ ಬಾಯಿಗೂ ಬೀಗ ಬಿದ್ದಿದ್ದವು. ಎಲ್ಲರೂ ಮೌನ ಹೊಂದಿದ್ದರು. ಯಾರೂ ನಾಲಿಗೆ ಅಲುಗಾಡಿಸಲಿಲ್ಲ. ದಫನ್ ಆದ ನಂತರ ಚರ್ಚೆ ನಡೆಯಿತು. ಇದು ಹಜ್ರತ್‌ರ ಪವಾಡವಾಗಿತ್ತು. 'ನಾಸಿರ್ ಅಹಲೆ ಬಹೀಷ್ತ್' ಎಂದರೆ ಹಜ್ರತ್‌ರ ನಿಧನದ ದಿನಾಂಕವಾಗಿದೆ. ೧೦೮೪ ಹಜ್ರತ್‌ರ ಸುಪುತ್ರ ಹಾಗೂ ಪೀಠಾಧಿಪತಿಗಳಾದ ಷಾಹ್ ಮುರ್ತುಜಾ ಹುಸೈನಿ ಅಲ್ವಿ(ಖು) ಅವರು ಗುಂಬಜಿನ ಹೊರಗಡೆ ಸಮಾಧಿಸ್ಥರಾಗಿರುವರು.

ಹಜ್ರತ್ ಮುರ್ತುಜಾ ಷಾಹ್ ಹುಸೈನಿಯವರ ನಿಧನ ಷವ್ವಾಲ ತಿಂಗಳ ಹದಿನಾಲ್ಕನೆಯ ದಿನಾಂಕ, ಹಿಜ್ರಿಶಕೆ ೧೧೬೧ಕ್ಕೆ ಆಯಿತು. ಹಜ್ರತ್‌ರ ನಿಧನದ ದಿನಾಂಕ 'ಕುತ್ಬೆ ಮುಅಜ್ಜಮ್' ಅಂದರೆ ಅದರ ಸಂಖ್ಯೆ ೧೧೬೧ಎಂದು ಇರುವದು. ಹಜ್ರತ್‌ರಿಗೆ ೧೦ ಜನ ಪುತ್ರರು

೧) ಹಜ್ರತ್ ಸೈಯ್ಯದ್‌ಷಾಹ್ ಹಜ್ರತ್

೨) ಹಜ್ರತ್ ಸೈಯ್ಯದ್‌ಷಾಹ್ ಹಾಷಿಂ ಹುಸೈನಿ

೩) ಹಜ್ರತ್ ಸೈಯ್ಯದ್ ಷಾಹ್ ವಜಿಯುದ್ದೀನ್ ಹುಸೈನಿ ಸಜ್ಜಾದಾ

೪) ಹಜ್ರತ್ ಸೈಯ್ಯದ್‌ಷಾಹ್ ಅಬ್ದುಲ್ ಹಕಂ

೫) ಹಜ್ರತ್ ಸೈಯ್ಯದ್‌ಷಾಹ್ ಸೈಯ್ಯದ್ ಮುಕಾರಮ್

೬) ಹಜ್ರತ್ ಸೈಯ್ಯದ್‌ಷಾಹ್ ಕುಲ್‌ಸುಮ್

೭) ಹಜ್ರತ್ ಸೈಯ್ಯದ್ ಅಬ್ದುಲ್‌ಖಾದರ್

೮) ಹಜ್ರತ್ ಸೈಯ್ಯದ್ ಮುಹಿಯುದ್ದೀನ್

೯) ಹಜ್ರತ್ ಸೈಯ್ಯದ್ ಸೈಯ್ಯದ್ ಅಹ್ಮದ್

೧೦)ಹಜ್ರತ್ ಸೈಯ್ಯದ್ ಅಬ್ದುಲ್‌ಲತೀಫ್

ಇವರಲ್ಲಿ ಷಾಹ್ ಹಜ್ರತ್ ಹುಸೈನಿ, ಷಾಹ್ ಹಾಷಿಂ, ಸೈಯ್ಯದ್ ಮಕಾರಮ್, ಸೈಯ್ಯದ್ ಷಾಹ್ ಕುಲ್‌ಸುಮ್ ಹಾಗೂ ಸೈಯ್ಯದ್ ಅಬ್ದುಲ್ ಲತೀಫ್‌ರ ಸಂತಾನವು

ಮೈಸೂರು, ಅರ್ಕಾಟ್, ಚೆನ್ನಪಟ್ಟಣದ ಕಡೆಗೆ ಇರುವರು. ಸೈಯ್ಯದ್ ಅಬ್ದುಲ್ ಹಕಂ, ಸೈಯ್ಯದ್ ಮುಹಿಯುದ್ದೀನ್ ಹಾಗೂ ಸೈಯ್ಯದ್ ಅಹ್ಮದ್‌ರ ಸಂತಾನ ಇರುವದಿಲ್ಲ. ಸಜ್ಜಾದಾ ಸೈಯ್ಯದ್ ಷಾಹ್ ವಜಿಯುದ್ದೀನ್ ಹುಸ್ಸೈನಿಯವರ ಸಂತತಿಯಲ್ಲಿ ಈಗ ಸೈಯ್ಯದ್‌ಷಾಹ್ ಅಬ್ದುಲ್ಲಾಹ್ ಹುಸ್ಸೈನಿ ಸಜ್ಜಾದಾ (ಪೀಠಾಧಿಪತಿ) ಹಾಗೂ ಅವರ ಓರ್ವ ಪುತ್ರ ಸೈಯ್ಯದ್ ವಜಿಯುದ್ದೀನ್‌ರು ನವಜಾತ ಶಿಶು ಇರುವರು. ಸೈಯ್ಯದ್ ಅಬ್ದುಲ್ ಖಾದಿರ್‌ರ ಸಂತಾನದಲ್ಲಿ ಸೈಯ್ಯದ್ ಷಾಹ್ ಬುರ್ಹಾನುದ್ದೀನ್ ಹುಸ್ಸೈನಿ ಹಾಗೂ ಅವರ ಪುತ್ರರಾದ ಸೈಯ್ಯದ್ ಮುಹಮ್ಮದ್ ಹುಸ್ಸೈನಿ ಇರುವರು.

■

೪೪. ಹಜ್ರತ್ ಸೈಯ್ಯದ್ ಮುಹಮ್ಮದ್ ಉರ್ಫ್ ಷಾಹ್ ಹಜ್ರತ್ ಹುಸ್ಸೈನಿ ಚಿಷ್ತಿ ಖಾದ್ರಿ (ಖು)

ಇವರು ಸುಪ್ರಸಿದ್ಧ ಸೂಫಿವರ್ಯರು, ಸೂಫಿವಂಶಜರು ಆಗಿದ್ದರು. ತಮ್ಮ ಕಾಲದ ಶ್ರೇಷ್ಠ ಸೂಫಿ ನಾಯಕರಾಗಿದ್ದರು. ಆಧ್ಯಾತ್ಮ ಜ್ಞಾನದಲ್ಲಿ, ಷರೀಯತ್ ಹಾಗೂ ತರೀಖತ್‌ದಲ್ಲಿ ಪರಿಪೂರ್ಣರಾಗಿದ್ದರು. ಆಧ್ಯಾತ್ಮಿಕ ಜ್ಞಾನದಲ್ಲಿ ಉನ್ನತ ದರ್ಜೆಗೆ ತಲುಪಿದ್ದರು. ಅವರ ಶಿಷ್ಯವೃಂದಕ್ಕೆ ನೇರ ಮಾರ್ಗದರ್ಶನ ಮಾಡಿ ಅಲ್ಲಾಹುವಿನತ್ತ ಸನ್ಮಾರ್ಗದರ್ಶನ ಮಾಡಿದರು. ಇವರ ವಂಶಾವಳಿಯು ಹಾಗೂ ಬೈಯ್ಯತದ ಪರಂಪರೆಯು ಸುಲ್ತಾನುಲ್ ಆಶಿಕೀನ್ ರಯೀಸುಲ್ ಕಾಮಿಲೀನ್ ಹಜ್ರತ್ ಖ್ವಾಜಾ ಸೈಯ್ಯದ್ ಮುಹಮ್ಮದ್ ಹುಸ್ಸೈನಿ ಗೇಸೂದರಾಜ್‌ರಿಗೆ ಸೇರುತ್ತದೆ. ಹಜ್ರತ್ ಶೇಖ ಅಬ್ದುಸ್ಸಮದ್ ಕನ್‌ಆನಿಯವರ ಶಿಷ್ಯರು ಆಗಿರುವರು. ಹಾಗೂ ಇವರಿಂದ ಸಮೃದ್ಧಿ ಹಾಗೂ ಖಿಲಾಫತ್ (ಉತ್ತರಾಧಿಕಾರತ್ವ) ಪಡೆದರು. ಆ ಕಾಲದ ಹಲವಾರು ಸೂಫಿವಂಶಜರು ಹಾಗೂ ಮಹಾಪುರುಷರೊಂದಿಗೆ ಸಂವಹನ, ಭೇಟಿ, ಮಾಡುತ್ತಿದ್ದರು. ಹರಮೈನ್ ಷರೀಫೈನ್ (ಮಕ್ಕಾ ಮದೀನಾಗಳ) ದರ್ಶನವನ್ನು ಮಾಡಿದ್ದರು. ಷರೀಯತ್ತಿನ ಪ್ರಕಾರ ವಿವಾಹವನ್ನೂ ಮಾಡಿಕೊಂಡರು. ಓರ್ವ ಪುತ್ರಿಯೂ ಜನಿಸಿದಳು. ಹಾಗೂ ಆ ಪುತ್ರಿಯನ್ನು ಹಜ್ರತ್ ಷಾಹ್ ಹಾಷಿಂ ಹುಸ್ಸೈನಿ ಅಲ್ವಿಯವರ ಮೊಮ್ಮಗ ಹಾಗೂ ಪೀಠಾಧಿಪತಿ–ಹಜ್ರತ್‌ಷಾಹ್ ಬುರ್ಹಾನುದ್ದೀನ್‌ರ ಪುತ್ರ ಸೈಯ್ಯದುಸ್ಸಾದಾತ್ ಹಜ್ರತ್ ಷಾಹ್ ಮುರ್ತುಜಾ(ಖು)ರೊಂದಿಗೆ ವಿವಾಹವನ್ನು ಜರುಗಿಸಿಕೊಟ್ಟರು. ಅವರಿಂದ ಮೂವರು ಪುತ್ರರು ಜನಿಸಿದರು. ಆಯಿಯು ಹಿರಿಯ ಮೊಮ್ಮಗನನ್ನು ದತ್ತು ತೆಗೆದುಕೊಂಡು ಸ್ವತಃ ಪೋಷಿಸಿದರು. ಹಾಗೂ ಷಾಹ್ ಹಜ್ರತ್ ಹುಸ್ಸೈನಿ ಎಂದು ಹೆಸರಿಟ್ಟರು. ಅವರನ್ನು ಪೀಠಾಧಿಪತಿಯನ್ನಾಗಿಸಿದರು. ಹಜ್ರತ್‌ರ ನಿಧನವು ರಂಜಾನ್

ತಿಂಗಳ ೨೭ನೇ ದಿನಾಂಕದಂದು ಆಯಿತು. ಇಸ್ವಿ ತಿಳಿದು ಬಂದಿಲ್ಲ. ಸಮಾಧಿಯು ಕೋಟೆಯ ಒಳಗಡೆ ಇರುವದು. ಸಮಾಧಿಯ ಮೇಲ್ಗಡೆ ಒಂದು ಪುಟ್ಟದಾದ ನಾಲ್ಕು ಕಮಾನುಗಳುಳ್ಳ ಗುಂಬಜ್ ಇರುವದು. ಇವರ ಸಮಾಧಿಯ ಪಕ್ಕದಲ್ಲಿ ಇವರ ಧರ್ಮಪತ್ನಿಯವರ ಸಮಾಧಿ ಇರುವದು.

■

೪೫. ಹಜ್ರತ್ ಷಾಹ್ ಮೀರಾಂಜಿ ಷಮ್ಸುಲ್ ಉಶ್ಶಾಕ್ (ಖ)

ಇವರು ಬಿಜಾಪುರದ ಪ್ರಸಿದ್ಧ ಸೂಫಿವರ್ಯರಾಗಿರುವರು. ಹಜ್‌ಯಾತ್ರೆಗೈದು ಮಕ್ಕಾ, ಮದೀನಾದ ದರ್ಶನ ಪಡೆದು ಒಂದು ಅವಧಿಯವರೆಗೆ ಅಲ್ಲಿಯೇ ನೆಲೆಸಿದ್ದರು. ಹನ್ನೆರಡು ವರ್ಷದವರೆಗೆ ಹಜ್ರತ್ ಮುಹಮ್ಮದ್(ಸ) ಪ್ರವಾದಿಗಳ ಸೇವೆಯಲ್ಲಿದ್ದರು. ಒಂದೇ ಮಗ್ಗುಲಾಗಿ ಮಲಗುತ್ತಿದ್ದರು. ಹಜ್ರತ್ ಮುಹಮ್ಮದ್(ಸ)ರ ಆದೇಶ ಪಾಲಿಸಿ ಅಲ್ಲಿಂದ ಹೊರಟು ದಕ್ಷಿಣಭಾರತದತ್ತ ಪಯಣ ಬೆಳೆಸಿ ಅಲಿ ಆದಿಲ್‌ಷಾಹ್ ಪ್ರಥಮನ ಪ್ರಾರಂಭ ಕಾಲದಲ್ಲಿ ಬಿಜಾಪುರಕ್ಕೆ ಆಗಮಿಸಿ ಕೋಟೆಯ ಹೊರಭಾಗದಲ್ಲಿ ಬಂದು ನೆಲೆಸಿದರು. ಹಾಗೂ ಹಜ್ರತ್ ಖ್ವಾಜಾ ಕಮಾಲುದ್ದೀನ್ ಬಯಾಬಾನಿಯವರಿಂದ ಹಜ್ರತ್ ಖ್ವಾಜಾ ಸೈಯ್ಯದ್ ಮುಹಮ್ಮದ್ ಹುಸೈನಿ ಗೇಸುದರಾಜ್‌ರ ಖಲೀಫಾಗಳಲ್ಲಿ ಓರ್ವರಾಗಿರುವರು. ಅವರಿಂದ ಚಿಷ್ತಿಯಾ ಪರಂಪರೆಯ ಖಿಲಾಫತ್ವ ಹೊಂದಿದರು. ಶಿಷ್ಯರಿಗೆ ಮಾರ್ಗದರ್ಶನ ಹಾಗೂ ವಿದ್ಯಾದಾನ ನೀಡುವಲ್ಲಿ ನಿರತರಾದರು. ಹಜ್ರತ್‌ರ ಸಮಾಧಿ ಸ್ಥಳವು ಬಿಜಾಪುರದ ಕೋಟೆಯ ಹೊರಗಡೆ ಶಹಾಪುರದ ಎತ್ತರದ ಪ್ರದೇಶದಲ್ಲಿ ಸ್ಥಿತವಿರುವದು. ಸಮಾಧಿಯ ಮೇಲೆ ಒಂದು ಗುಂಬಜ್ ನಿರ್ಮಿಸಲಾಗಿದೆ. ಮಿರ್ಜಾ ಫಸಿಯುದ್ದೀನ್ ಉರ್ಫ್ ಬಾಬಾ ತಮ್ಮ ಕಾಲದ ಶ್ರೇಷ್ಠ ಸೂಫಿ ಹಾಗೂ ಕವಿಯಾಗಿದ್ದರು. ಅವರ ಕವಿತೆಗಳನ್ನು ಆಲಿಸಿದ ಆದಿಲ್‌ಷಾಹ್ ತುಂಬಾ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದನು. ಹಾಗೂ ಇವರ ಸಮಾಧಿ ಸ್ಥಳವು 'ಸಾಗರ'ದಲ್ಲಿ ಇರುವದು. ಹಜ್ರತ್‌ಷಾಹ್ ಮಿರಾಂಜಿಯವರ ಶಿಷ್ಯ ಹಾಗೂ ಖಲೀಫಾ ಆಗಿರುವರು.

■

೪೬. ಹಜ್ರತ್‌ಷಾಹ್ ಬುರ್ಹಾನುದ್ದೀನ್ ಜಾನಮ್ (ಖ)

ಹಜ್ರತ್‌ಶಾಹ್ ಮಿರಾಂಜಿ ಶಮ್ಸುಲ್ ಉಶ್ಶಾಖ್‌ರ ಪುತ್ರರು ಹಾಗೂ ಖಲೀಫಾ ಆಗಿರುವರು. ಇವರು ಅಲ್ಲಾಹುವನ್ನು ಸಂಪ್ರೀತಗೊಳಿಸಿದ ಮಹಾಪುರುಷರಲ್ಲಿ ಓರ್ವರಾಗಿದ್ದರು. ಹಾಗೂ ಪವಾಡ ಪುರುಷರಾಗಿದ್ದರು. ಜ್ಞಾನ ಪ್ರಸಾರದಲ್ಲಿ ಹಾಗೂ

ಮಾರ್ಗದರ್ಶನ ನೀಡುವಲ್ಲಿ ಆತ್ಮೀಯುವಾದ ವಿಶೇಷತೆಯುನ್ನು ಹೊಂದಿ ಹೊಸಬಾಂಧವ್ಯಕ್ಕೆ ನಾಂದಿ ಹಾಡಿದ್ದರು. ಇವರ ಪತ್ರಿಕೆಗಳು, ಪುಸ್ತಿಕೆಗಳು ಹಾಗೂ ಇವರ ಖಲೀಫಾರು ಪ್ರಸಿದ್ಧ ಇರುವವರು. ಇವರ ನುಡಿಮುತ್ತುಗಳು ಏಕದೇವತ್ವದ ಕುರಿತು ಅಲ್ಲಾಹುವಿನ ರಹಸ್ಯದ ಕುರಿತು ಇರುವ ನುಡಿಗಳು ಇವರ ಶಿಷ್ಯವೃಂದಕ್ಕೆ ಹಾಗೂ ಹಿತೈಷಿಗಳಿಗೆ ಬಹಳೇ ಸಮೃದ್ಧಿದಾಯಕವಾಗಿರುವವು. ಅಸಂಖ್ಯ ಜನರು ಇವರ ಮಾರ್ಗದರ್ಶನ ಹಾಗೂ ಉಪದೇಶದಿಂದಾಗಿ ಬದುಕನ್ನು ಸಾರ್ಥಕಗೊಳಿಸಿಕೊಂಡು ಏಕದೇವನ ಮಾರ್ಗದಲ್ಲಿ ಸಂತೃಪ್ತರಾಗಿ ಮಾರಿಫತ್ ಅಂದರೆ ಅಲ್ಲಾಹುವಿನ ಅರಿವನ್ನು ಗಳಿಸುವಲ್ಲಿ ಉನ್ನತ ದರ್ಜೆಗೆ ತಲುಪಿದರು.

ಇವರ ನಿಧನವು ಜಮಾದಿಸ್ಸಾನಿ ತಿಂಗಳ ಹದಿನೈದನೆಯ ದಿನಾಂಕದಂದು ಆಯಿತು. ಇವರ ಸಮಾಧಿಯು ಇವರ ತಂದೆಯವರ ಗುಮ್ಮಟದಲ್ಲಿ ಇರುವದು. ■

೪೭. ಹಜ್ರತ್ ಖ್ವಾಜಾ ಅಮೀನುದ್ದೀನ್ (ಖು)

ಇವರು ತಮ್ಮ ತಂದೆಯವರಾದ ಹಜ್ರತ್ ಬುರ್ಹಾನುದ್ದೀನ್ ಜಾನಮ್(ಖು)ರ ನಿಧನದ ನಂತರ ಜನ್ಮ ತಾಳಿದರು.

ಇವರು ಮಹಾನ್ ಸೂಫಿಗಳೂ ಹಾಗೂ ಮಜಜೂಬ್ (ಅಲ್ಲಾಹುವಿನ ಸ್ಮರಣೆಯಲ್ಲಿ ನಿರಂತರ ತಲ್ಲೀನರಾಗಿರುವ ವ್ಯಕ್ತಿತ್ವದವರಾಗಿದ್ದರು. ತಮ್ಮ ಚಿಕ್ಕಪ್ಪರಾದ ಹಜ್ರತ್ ಖ್ವಾಜಾ ಅತಾವುಲ್ಲಾಹ್(ಖು) ಇವರಿಂದ ಬೈಯ್ಯತ್ ತೆಗೆದುಕೊಂಡು ಹಗಲಿರುಳು ಅಲ್ಲಾಹುವಿನ ಸ್ಮರಣೆಯಲ್ಲಿ ಮುಳುಗಿರುತ್ತಿದ್ದರು. ನಿಮಗ್ನತೆಯ ಸ್ಥಿತಿಯಲ್ಲಿದ್ದರೂ ಸಹ ಇವರಿಂದ ಶಿಕ್ಷಣ, ಏಕದೇವತ್ವದ ಅರಿವಿನ ರಹಸ್ಯವು ಜಾರಿಯಾಗುತ್ತಿತ್ತು. 'ಉರೂಸೆ ಇರ್ಫಾನ್' ಎಂಬ ಗ್ರಂಥದಲ್ಲಿ ಹೀಗೆ ಬರೆಯಲಾಗಿದೆ. ಹಜ್ರತ್ ಖ್ವಾಜಾ ಅಮೀನುದ್ದೀನ್ (ಖು) ಪ್ರಾರಂಭದಲ್ಲಿ ತಮ್ಮ ತಂದೆಯವರಾದ ಹಜ್ರತ್ ಬುರ್ಹಾನುದ್ದೀನ್(ಖು)ರ ಗುಮ್ಮಟದಲ್ಲಿ ಸೇವೆಯಲ್ಲಿದ್ದು ತರೀಖತ್, ಮಾರಿಫತ್‌ದ ಜ್ಞಾನವನ್ನು ಗ್ರಹಿಸಿದರು.

ಪೌರ್ಣಿಮೆಯ ರಾತ್ರಿಯಂದು ಚಂದ್ರನು ತನ್ನ ತೀವ್ರತರವಾದ ಚೆಂಬೆಳಕನ್ನು ಬೀರುತ್ತಿದ್ದನು. ಹಜ್ರತ್‌ರು ಗುಮ್ಮಟದ ಒಳಗಿನಿಂದ ಹೊರಬಂದರು. ಖಲೀಫಾ ಹಾಗೂ ಶಿಷ್ಯರು ಯಾರು ಅಲ್ಲಿ ಆಗ ಉಪಸ್ಥಿತರಿದ್ದರು ಅವರನ್ನುದ್ದೇಶಿಸಿ ಹೀಗೆ ಹೇಳಿದರು.

ಓ! ಬಾಂಧವರೆ ಅಲ್ಲಾಹುವಿನ ಸಾಮಿಪ್ಯವು ನಿಮಗ್ನತೆಯ ಮನದ ತಲ್ಲೀನತೆಯ ಹೊರತಾಗಿ ಸಾಧ್ಯವಿಲ್ಲ. ಆಗ ಸರ್ವರು ತಮ್ಮ ಹಣೆಯನ್ನು ಭೂಮಿಗೆ ಸ್ಪರ್ಶಿಸಿ

ಒಂದೇ ಧ್ವನಿಯಲ್ಲಿ ಹೇಳಿದರು. 'ಸತ್ಯವಾಗಿದೆ' ಮತ್ತೆ ಹಜ್ರತ್‌ರು ಗುಮ್ಮಟದ ಒಳಗೆ ಹೋದರು.

ಓರ್ವ ಹೊಸ ಶಿಷ್ಯನಿದ್ದನು. ಈ ಹೇಳಿಕೆಯ ಸೂಕ್ಷ್ಮತೆಯನ್ನು ಅರಿಯದೇ ತನ್ನ ಹಿತೈಷಿಯಾದ ಓರ್ವ ಖಲೀಫಾರೊಂದಿಗೆ ಕೇಳಿದನು. ಯಾವಾಗ ತಲ್ಲೀನತೆ ಭಂಗವಾಯಿತು. ಆಗ 'ದೇವನ ಸಾಮಿಪ್ಯ' ಏನಾಗುವದು? ಅವರು ಉತ್ತರ ರೂಪದಲ್ಲಿ ಹೀಗೆಂದರು.

ಈ 'ಖುದಿ'ಯು (ತಲ್ಲೀನತೆಯು) ಮರಣ ಅಥವಾ ವಿಷ ತಿನ್ನುವದರಿಂದಲೂ ಹೋಗದು. ಮೃತ್ಯುವಿನ ನಂತರವೂ ಸಹ ಇರುವದು. ಆದರೆ 'ಜ್ಞಾನ ಮತ್ತು ಅರಿವು' ಹೋದರೆ ತಲ್ಲೀನತೆಯು ಹೋಗುವದು.

ಒಂದು ದಿನ ಓರ್ವ ಶಿಷ್ಯನು ಹಜ್ರತ್‌ರ ಸಮ್ಮುಖದಲ್ಲಿ ಹಾಜರಾಗಿ ತನ್ನ ಇಂದ್ರಿಯ ನಿಗ್ರಹವು ಸಾಧ್ಯವಾಗದೇ ಮನಸ್ಸಿನ ಚಂಚಲತೆಯು ಹೃದಯಶುದ್ಧಿಗೆ ಅಡ್ಡಿಯನ್ನುಂಟು ಮಾಡಿ, ಮಹದುದ್ದೇಶಕ್ಕೆ ಭಂಗ ತರುತ್ತಿದೆ. ತಾವು ದಯಮಾಡಿ ಕೃಪಾದೃಷ್ಟಿ ಬೀರಿ ನನ್ನೊಳಗಿನ ಇಂದ್ರಿಯ ಲೋಲುಪ್ತತೆಯನ್ನು ಹೋಗಲಾಡಿಸಿ ನನ್ನ ಹಾಗೂ ಅಲ್ಲಾಹುವಿನ ಮಧ್ಯ ಸಾಂಗತ್ಯ ಏರ್ಪಡಿಸಿ ನನ್ನ ಜಪತಪಕ್ಕೆ ಸಹಕಾರಿಯಾಗುವಂತೆ ಮಾಡಿರಿ. ಆಗ ಹಜ್ರತ್‌ರು ಹೀಗೆಂದರು. ಆಗಲಿ! ನಿನ್ನ ಮನದ ಚಂಚಲತೆಯನ್ನು ಗ್ರಹಿಸಿ ಉತ್ತರಿಸುವೆನು. ಮತ್ತು ಆತನ ಮನದಲ್ಲಿ ಉದ್ಭವಿಸುವ ಬಯಕೆಗಳನ್ನು ಬೆದರಿಸಿ ಹೀಗೆ ಹೇಳಿದರು ಏಕೆ ಕಾಡುತ್ತೀರಿ? ನಂತರ ತನ್ನ ಶಿಷ್ಯನನ್ನು ಕರೆದು ಹೇಳಿದರು. ನಿನ್ನ ಬಯಕೆಗಳಿಗೆ ಕೇಳಿದಾಗ ಅವು ಹೀಗೆಂದವು. ನೀವೇ ಸ್ವತಃ ನ್ಯಾಯ ಮಾಡಿರಿ, ಇದರಲ್ಲಿ ನಮ್ಮ ತಪ್ಪು ಏನಿದೆ? ನಾವು ನಮ್ಮ ಸ್ವಮನಸ್ಸಿನಿಂದ ಬರುವದಿಲ್ಲ. ಹಾಗೂ ನಿಮ್ಮ ಮನದಲ್ಲಿ ಚಂಚಲತೆ ಉಂಟು ಮಾಡುವದಿಲ್ಲ. ಆದರೆ ನೀವೇ ಸ್ವತಃ ನಮ್ಮನ್ನು ಸೆಳೆದು ಬಳಿಗೆ ಕರೆದುಕೊಳ್ಳುತ್ತೀರಿ ಮತ್ತು ತೊಂದರೆ ನೀಡುತ್ತೀರಿ ಹೇಗೆಂದರೆ– ಓರ್ವ ಪ್ರೇಮಿಯು ತನ್ನ ಪ್ರಿಯತಮೆಯೊಂದಿಗೆ ಒಲವಿನಲ್ಲಿ ಮುಳುಗುತ್ತಾನೆ ಆಗ ಆತನು ನಮಗೆ ಈ ತೆರನಾಗಿ ಕರೆಯುತ್ತಾನೆ ಏನೆಂದರೆ ಬಯಕೆಯ ರೂಪದಲ್ಲಿ 'ಜಾಸ್ಮಿನ್' ಹೂವು ಬೇಕು ಅದಕ್ಕೆ ಸುಂದರ ಎಲೆಯೂ ಅಂಟಿರಬೇಕು ಹಾಗೂ ಅದರಲ್ಲಿ ಸುಗಂಧಯುಕ್ತ ಪರಿಮಳವೂ ಇರಬೇಕು ಹೀಗೆ ಬಯಕೆಗಳನ್ನು ವಿಸ್ತರಿಸುತ್ತಾ ನಮ್ಮನ್ನು ಬರಮಾಡಿಕೊಳ್ಳುತ್ತಾನೆ ಎಂದು ಉದಾಹರಣೆ ನೀಡಿದವು.

ಹಜ್ರತ್‌ರು ನಿಮಗ್ನತೆಯ ಸ್ಥಿತಿಯಲ್ಲಿ ತಲ್ಲೀನರಾಗಿದ್ದಾಗ ಶರಿಯತ್ತಿನ ಪಾಲನೆ ಮಾಡಲಾಗದೇ ಹಲವು ಸಲ ನಮಾಜನ್ನು ತೊರೆಯುತ್ತಿದ್ದರು. ಸೈಯ್ಯದುಸ್ಸಾದಾತ್ ಸೈಯ್ಯದ್ ಮುಹಮ್ಮದ್ ಬುಖಾರಿಯವರು ಆಗಿನ ಕಾಲದ ಮಹಾಪುರುಷರಾಗಿದ್ದರು. ಹಾಗೂ ಶರಿಯತ್‌ನ್ನು ಕಡ್ಡಾಯವಾಗಿ ಪಾಲಿಸುವವರಾಗಿದ್ದರು. ತಮ್ಮ ಕಾಲದ

ಬಾದಶಾಹ ಹಾಗೂ ಅಮೀರರ ಮನಸ್ಸಿನಲ್ಲಿ ಇವರ ಕುರಿತು ಗೌರವ ಆದರಗಳು ನೆಲೆಸಿದ್ದವು. ಯಾವಾಗ ಹಜ್ರತ್ ಖ್ವಾಜಾ ಅಮೀನುದ್ದೀನ್(ಖ)ರು ತಮ್ಮ ನಿಮಗ್ನತೆಯ ಸ್ಥಿತಿಯಿಂದಾಗಿ ಕಡ್ಡಾಯ ನಮಾಜ್‌ನ್ನು ತೊರೆದಿದ್ದು ಗಮನಕ್ಕೆ ಬಂದಾಗ ಅವರಿಗೆ ಕಡ್ಡಾಯ ಶರೀಯತ್ತನ್ನು ಪಾಲಿಸಲು ತಿಳಿಸುವ ಜವಾಬ್ದಾರಿಯೊಂದಿಗೆ ತಮ್ಮೊಂದಿಗೆ ಇನ್ನಷ್ಟು ಸೂಫಿಗಳನ್ನು ಜೊತೆಗೆ ಕರೆದುಕೊಂಡು ಹೋಗಿ ಹಜ್ರತ್ ಅಮೀನುದ್ದೀನ್ ಆಲಾ ಅವರಿಗೆ ಹೇಳಿದರು. ಮಹಾಪುರುಷರು, ಧರ್ಮಿಷ್ಠರು ಎಂಥಹದೇ ತಲ್ಲೀನತೆಯಲ್ಲಿ ಮಗ್ನರಾಗಿದ್ದರೂ ಸಹ ಶರೀಯತ್ತಿನ ದಾರಿಯಿಂದ ವಿಮುಖರಾಗಲಿಲ್ಲ. ಹಾಗೂ ಹಜ್ರತ್ ಮುಹಮ್ಮದ್(ಸ)ರವರು ತೋರಿದ ಮಾರ್ಗದಿಂದ ವ್ಯತಿ ಚಲಿಸಲಿಲ್ಲ. ತಾವು ಕಡ್ಡಾಯ ವಿಧಿಯಾದ ನಮಾಜ್‌ನ್ನು ತೊರೆಯುವುದು ಶರಿಯತ್ತಿಗೆ ಸಮ್ಮತವಾದ ಮಾತಲ್ಲ. ಮೊದಲು ಶರಿಯತ್ತಿನ ನಿಬಂಧನೆಗಳನ್ನು ಕಡ್ಡಾಯವಾಗಿ ಪಾಲಿಸಿ, ಅಲ್ಲಾಹುವಿನ ಮಾರ್ಗದಲ್ಲಿ ದೃಢರಾಗಿರಿ. ಆಗ ಹಜ್ರತ್‌ಷಾಹ್ ಅಮೀನುದ್ದೀನ್(ಖ) ಆ ವೇಳೆ ತಮ್ಮ ಶಿಷ್ಯನಿಗೆ ಆದೇಶಿಸಿ ಕೆರೆಯ ನಡುವೆ ನಮಾಜನ್ನು ಸಲ್ಲಿಸಲು ಹಾಸುವ ಬಟ್ಟೆಯನ್ನು ಹಾಸಲು ಹೇಳಿದರು. ಶಿಷ್ಯನು ಅವರ ಆದೇಶದಂತೆ ಶಾಹಪುರದ ಕೆರೆಯ ನಡುವೆ ಆಗ ಜಲದಿಂದ ಸಮೃದ್ಧವಾಗಿತ್ತು. ಅದರಲ್ಲಿ ಬಟ್ಟೆಯನ್ನು ಹಾಸಿದನು. ಹಜ್ರತ್‌ರು ಅಲ್ಲಿ ಹೋಗಿ ನಮಾಜನ್ನು ಸಲ್ಲಿಸಿದರು. ಹಜ್ರತ್‌ರ ನಿಧನವು ರಂಜಾನ್ ತಿಂಗಳ ೨೪ನೆಯ ದಿನಾಂಕ ಹಿಜ್ರಿಶಕೆ ೧೧೦೮ ರಂದು ಆಯಿತು.

ಹಜ್ರತ್‌ರ ಸಮಾಧಿಯ ಮೇಲೆ ಗುಮ್ಮಟ ನಿರ್ಮಿಸಲಾಗಿದೆ. 'ಖತ್ಮೆವಲಿ' ಎಂಬ ಉಕ್ತಿಯಿಂದ ಹಜ್ರತ್‌ರ ನಿಧನದ ದಿನಾಂಕವು ದೃಢಪಟ್ಟಿದೆ. ಹಜ್ರತ್‌ರಿಂದ ಬೈಯ್ಯತ್ ಹಾಗೂ ಖಿಲಾಫತ್ ಜಾರಿಯಿದೆ.

ಹಜ್ರತ್‌ರ ಪ್ರಸಿದ್ಧ ಖಲೀಫಾರಲ್ಲಿ ಓರ್ವರಾದ ಸೈಯ್ಯದ್ ಖುದಾವಂದ್, ಖುದಾನುಮಾ ಸಾಹೇಬ್ ಚಿಚೋಲಿ ಇರುವರು. ಹಾಗೂ ಎರಡನೆಯವರು ಶಾಹ್ ಮಿರಾಂಜಿ ಸೈಯ್ಯದ್ ಹಸನ್ ಖುದಾನುಮಾ ಇರುವರು ಸಮಾಧಿಯು ಹಾಗೂ ಮನೆಯು ಹೈದರಾಬಾದಿನ ಕೋಟೆಯ ಹೊರಗಡೆ ಇರುವದು. ಮೂರನೆಯವರು ಖಾದರಲಿಂಗ ಕೌತಾಳಂ ಇರುವರು.

ಇವರ ಸಂತಾನದಿಂದ ಸೈಯ್ಯದ್ ಪಾಶಾಹುಸೈನಿ ಇಬ್ನ ಸೈಯ್ಯದ್ ಅಸ್‌ದುಲ್ಲಾಹ್‌ಹುಸ್ಸೈನಿ, ಪೀಠಾಧಿಕಾರಿ ಇರುವರು. ಅವರಿಗೆ ಓರ್ವ ಪುತ್ರ ಅವರು ಸೈಯ್ಯದ್ ಅಸದುಲ್ಲಾ ಹುಸೈನಿ ಹೆಸರಿನವರು ಇರುವರು. ಇವರ ಚಿಕ್ಕಪ್ಪರಾದ ಸೈಯ್ಯದ್ ಮುಹಮ್ಮದ್ ಹುಸೈನಿ ಉರ್ಫ್ ಬಡೇಸಾಬರ ಪುತ್ರರು ಜೀವಂತ ಇರುವರು.

■

೪೮. ಹಜ್ರತ್ ಶೇಖ ಮೆಹಮೂದ್ ಖುಷ್‌ದಹಾನ್ (ಖು)

ಇವರು ಪರಿಪೂರ್ಣ ಸೂಫಿವರ್ಯರಾಗಿದ್ದರು. ಹಜ್ರತ್‌ರು ಸೈಯ್ಯದುಸ್ಸಾದಾತ್ ಹಜ್ರತ್‌ಷಾಹ್ ಅಬುಲ್ ಹಸನ್ ಖಾದ್ರಿಯವರ ಸಹೋದರಿಯ ಪುತ್ರರಾಗಿರುವರು. ಬೈಯ್ಯತ್ ಹಾಗೂ ಅನುಮತಿಯನ್ನು ಖಾದ್ರಿಯ ಪರಂಪರೆಯನ್ನು ತಮ್ಮ ತಾತರಿಂದ ಪಡೆದರು. ನಂತರ ಮುಹಮ್ಮದಾಬಾದ್ ಬೀದರಿನಿಂದ ಹೊರಟು ಬಿಜಾಪುರಕ್ಕೆ ಆಗಮಿಸಿದರು. ಹಾಗೂ ಹಜ್ರತ್ ಬುರ್ಹಾನುದ್ದೀನ್ ಜಾನಮ್(ಖು)ರಿಂದ ಖಿಲಾಫತ್ ಹಾಗೂ ಅನುಮತಿ ಚಿಷ್ತಿಯಾ ಪರಂಪರೆಯಿಂದ ಪಡೆದು ಸಮೃದ್ಧಿ ಹೊಂದಿದರು. ಹಜ್ರತ್‌ರ ಉಯಿಲಿನಂತೆ ಹಜ್ರತ್‌ಶಾಹ್ ಅಮೀನುದ್ದೀನ್(ಖು)ರ ಉಸ್ತಾದ್‌ರಾದರು. ಹಾಗೂ ಎರಡೂ ಪಂಥಗಳಲ್ಲಿ ಎಂದರೆ ಖಾದ್ರಿಯಾ ಹಾಗೂ ಚಿಷ್ತಿಯಾಗಳಲ್ಲಿ ಶಿಷ್ಯರನ್ನಾಗಿಸುತ್ತಿದ್ದರು. ಹಜ್ರತ್‌ರು 'ಖುಷ್‌ದಹಾನ್' ಆಗುವ ಕಾರಣ ಹೀಗೆನ್ನುವರು. ಹಜ್ರತ್‌ರ ಮುಖವು ಸ್ವಲ್ಪ ಓರೆಯಾಗಿತ್ತು. ಅದಕ್ಕಾಗಿ ಜನರು 'ಕಜ್‌ದಹಾನ್'(ಓರೆ ಮುಖದವರು) ಎನ್ನುತ್ತಿದ್ದರು. ಹಜ್ರತ್‌ರ ಅನುಯಾಯಿಗಳು ಅದನ್ನು ಬದಲಾಯಿಸಿ 'ಖುಷ್‌ದಹಾನ್' ನಗುಮುಖದವರು ಎಂದು ಪ್ರಸಿದ್ಧಗೊಳಿಸಿದರು. ಹಜ್ರತ್‌ರ ಸಮಾಧಿಸ್ಥಳವು ಹಜ್ರತ್ ಖ್ವಾಜಾ ಅಮೀನುದ್ದೀನ್(ಖು)ರ ದರ್ಗಾದಲ್ಲಿದೆ.

■

೪೯. ಹಜ್ರತ್ ಜುನೈದ್ ಸಾನಿ (ಖು)

ಹಜ್ರತ್‌ರು ಈ ಪ್ರದೇಶದ ಪರಿಪೂರ್ಣ ಸೂಫಿವರ್ಯರಲ್ಲೋರ್ವರಾಗಿದ್ದಾರೆ. ಸಮಕಾಲೀನರಲ್ಲಿ ಅತ್ಯಂತ ಶ್ರೇಷ್ಠರು ಹಾಗೂ ತರೀಖತ್‌ದಲ್ಲಿ ಮಹಾನ್‌ರು ಆಗಿದ್ದರು. ಹಜ್ರತ್‌ಷಾಹ್ ಬುರ್ಹಾನುದ್ದೀನ್ ಜಾನಮ್‌ರಿಂದ ಬೈಯ್ಯತ್‌ದ ಸಮೃದ್ಧಿಯನ್ನು ಪಡೆದರು. ಹಜ್ರತ್‌ರ ಸಮಾಧಿಯು ಕೋಟೆಯ ಹೊರಭಾಗದಲ್ಲಿ ಜೋಹರಾಪುರದಲ್ಲಿ ಇರುವದು ಹಾಗೂ ಸಮಾಧಿಯ ಮೇಲ್ಗಡೆ ಒಂದು ಪುಟ್ಟ ಗುಂಬಜ್ ಇರುವದು.

ಹಜ್ರತ್‌ರ ಸಂತಾನವು ಕರಜಗಿ ಗ್ರಾಮದಲ್ಲಿ ಇರುವದು.

■

೫೦. ಹಜ್ರತ್‌ಷಾಹ್ ಷರೀಫ್ ರಂಗ್‌ರೇಜಾಂ (ಖು)

ಇವರು ಬಿಜಾಪುರ ಪಟ್ಟಣದ ಸೂಫಿವರ್ಯ ಹಾಗೂ ಮಹಾಪುರುಷರಲ್ಲಿ ಓರ್ವರಾಗಿರುವರು. ಇವರು ಜನರನ್ನು ಷರೀಯತ್ ಹಾಗೂ ತರೀಕತ್‌ದ ಮೇಲೆ ನಡೆಸುವ ಮಾರ್ಗದರ್ಶಕರಾಗಿದ್ದರು. ಹಾಗೂ ಹಲವಾರು ಕರಾಮತ್ತು ಜರುಗಿಸಿ ಪವಾಡಪುರುಷರೆನಿಸಿದ್ದರು. ಇವರ ಜೀವನ ಚರಿತ್ರೆಯ ಕುರಿತು ಸಂಪೂರ್ಣ ವಿವರವು ಲಭ್ಯವಿರುವದಿಲ್ಲ. ಹಜ್ರತ್‌ರು 'ರಂಗರೇಜಾಂ' (ಬಟ್ಟೆಗೆ ಬಣ್ಣ ನೀಡುವವರು) ಎಂದು ಪ್ರಸಿದ್ಧವಾಗಿರುವ ಕಾರಣವೆಂದರೆ ಇವರು ನಗರದ ಹೊರಗಡೆ ಬಟ್ಟೆಗೆ ಬಣ್ಣ ಊಡಿಸುವ ಕೆರೆಯ ಬಳಿ ವಾಸಿಸುತ್ತಿರುವದರಿಂದಾಗಿ ಇವರು 'ರಂಗರೇಜಾಂ' ಬಿರುದಿನಿಂದ ಕರೆಯಲ್ಪಟ್ಟರು. ಇವರು ರಂಜಾನ ಷರೀಫ್ ಪಾವನ ಮಾಸದ ಒಂದನೆಯ ದಿನಾಂಕದಂದು ಹಿಜ್ರಿಶಕೆ ೧೦೭೧ರಲ್ಲಿ ಈ ಇಹಲೋಕದಿಂದ ಪರಲೋಕಕ್ಕೆ ಪಯಣ ಬೆಳೆಸಿದರು. ಬಿಜಾಪುರ ಪಟ್ಟಣದ ಕೋಟೆಯ ಹೊರಗಡೆ ಷಹಾಪುರದಲ್ಲಿ ಮಲಿಕ್ ರೆಹಾನ್‌ನ ಉದ್ಯಾನ ಹಾಗೂ ಸಮಾಧಿಯ ಬಳಿ ಇವರ ಸಮಾಧಿ ಸ್ಥಳವು ಇರುವದು. ಇವರ ಸಮಾಧಿಯ ಮೇಲ್ಗಡೆ ಒಂದು ಸುಭದ್ರ ಗುಂಬಜ್ ಕಟ್ಟಲ್ಪಟ್ಟಿದೆ.

■

೫೧. ಹಜ್ರತ್‌ಷಾಹ್ ಗನಿ (ಖು)

ಇವರು ಈ ಪ್ರದೇಶದ ಪ್ರಸಿದ್ಧ ಸೂಫಿವರ್ಯರಲ್ಲಿ ಓರ್ವರಾಗಿರುವರು. ಮುಹಮ್ಮದ್ ಆದಿಲ್‌ಷಾಹನ ಅವಧಿಯಲ್ಲಿ ಪವಾಡಪುರುಷರಾಗಿ ಪ್ರಸಿದ್ಧರಾಗಿದ್ದರು. ಬಾದಶಾಹನ ಓರ್ವ ಪತ್ನಿಯು ಹಜ್ರತ್‌ರಿಂದ ಬೈಯ್ಯತ್ ಪಡೆದಿದ್ದಳು. ಹಜ್ರತ್‌ರ ಜೀವನ ಚರಿತ್ರೆಯ ವಿವರವು ಸಂಪೂರ್ಣವಾಗಿ ಲಭ್ಯವಿಲ್ಲ. ಇವರ ತಂಗುದಾಣವು ಷಾಹಾಪುರದ ಕೆರೆಯ ಬಳಿಗೆ ಇತ್ತು. ಹಜ್ರತ್‌ರ ಸಮಾಧಿಯ ಸುತ್ತಲೂ ನಾಲ್ಕು ಗೋಡೆಗಳನ್ನು ನಿರ್ಮಿಸಲಾಗಿದೆ. ಹಜ್ರತ್ ಶಾಹ್‌ನೂರ್(ಖು) ಮಹಾಪುರುಷರು, ಹಾಗೂ ಪವಾಡಪುರುಷರೂ ಆಗಿದ್ದರು. ಹಾಗೂ ಹಜ್ರತ್ ನಿರಂಜನ್ ಷಾಹ್(ಖು) ಇವರ ಮನೆಯು ಜೋಹರಾಪುರದಲ್ಲಿ ಇರುವದು. ಹಾಗೂ ಸಮಾಧಿಯು ಮುಸ್ತಫಾಖಾನ್‌ನ ಅತಿಥಿಗೃಹದ ಬಳಿ ಇರುವದು. ಈ ಈರ್ವರು ಸೂಫಿವರ್ಯರು ಹಜ್ರತ್‌ರ ಮುರೀದ್ ಹಾಗೂ ಖಲೀಫಾ ಆಗಿರುವರು.

೫೨. ಹಜ್ರತ್‌ಶಾಹ್ ಅಬ್ದುಸ್ಸಲಾಮ್ ಶತ್ತಾರಿ (ಖು)

ಇವರು ಬಿಜಾಪುರದ ಪ್ರಸಿದ್ಧ ಔಲಿಯಾಗಳಲ್ಲಿ ಓರ್ವರಾಗಿರುವರು. ಸೂಫಿತ್ವದಲ್ಲಿ ಉನ್ನತ ದರ್ಜೆಗೆ ತಲುಪಿದಮಹನೀಯರಾಗಿರುವರು. ಹಜ್ರತ್‌ರು ಹಜ್ರತ್‌ಶೇಖ ಮುಹಮ್ಮದ್ ಗೌಸ್ ಗವಾಲಿಯಾರ್(ಖು)ರ ಸಂತಾನದಿಂದಿರುವರು. ಬೈಯ್ಯತ್, ಖಿಲಾಫತ್‌ವನ್ನು ತಮ್ಮ ಪೂರ್ವಜರ ವಿಧಾನದಲ್ಲಿ ಅನುಸರಿಸುತ್ತಿದ್ದರು. ಹಜ್ರತ್‌ರ ಜೀವನ ಚರಿತ್ರೆಯ ಸಂಪೂರ್ಣ ವಿವರ, ನಿಧನ ಹೊಂದಿದ ದಿನಾಂಕ ಮತ್ತು ಶಕೆ ತಿಳಿದುಬಂದಿಲ್ಲ. ಹಜ್ರತ್‌ರ ಸಮಾಧಿಸ್ಥಳವು ಬಿಜಾಪುರದ ಕೋಟೆಯ ಒಳಗಡೆ 'ಮಸ್ಜಿದೇಶಾಫಿಯಾ' ಎಂಬ ಮಸೀದೆಯ ಬಳಿ ಪೂರ್ವದಿಕ್ಕಿಗೆ ಉಪಸ್ಥಿತವಿರುವದು. ಹಜ್ರತ್‌ರ ಸವಾಧಿ ಸ್ಥಳದ ಪಕ್ಕದಲ್ಲಿ ಪೂರ್ವದಿಕ್ಕಿಗೆ ಹಜ್ರತ್‌ಖ್ವಾಜಾ ಅಬ್ದುರ್ರಹೀಮ್(ಖು)ರ ಸಮಾಧಿಯು ಇರುವದು.

■

೫೩. ಹಜ್ರತ್‌ಶೇಖ ಸಿರಾಜುದ್ದೀನ್ ಜುನೈದಿ (ಖು)

ಇವರು ಬಿಜಾಪುರದ ಪ್ರಸಿದ್ಧ ಸೂಫಿವರ್ಯರಲ್ಲಿ ಓರ್ವರಾಗಿರುವರು. ಪವಾಡಪುರುಷರಾಗಿದ್ದರು. ಇವರು ಹಜ್ರತ್‌ಶೇಖ ಮುಹಮ್ಮದ್ ಸಿರಾಜುದ್ದೀನ್ ಜುನೈದಿ(ಖು)ರ ಸಂತತಿ ಹಾಗೂ ವಂಶಾವಳಿಯಲ್ಲಿ ಬರುವರು. ಈ ಹಜ್ರತ್‌ರ ಸಮಾಧಿ ಸ್ಥಳವು ಗುಲ್ಬರ್ಗಾದಲ್ಲಿ ಪ್ರಸಿದ್ಧವಾಗಿರುವದು.

ಮುಹಮ್ಮದ್ ಆದಿಲ್‌ಶಾಹ್‌ನ ಅವಧಿಯಲ್ಲಿ ಇವರು ಬಿಜಾಪುರ ಪಟ್ಟಣಕ್ಕೆ ಆಗಮಿಸಿದರು. ಹಜ್ರತ್‌ರ ಸಮಾಧಿ ಸ್ಥಳವು ಜಾಮಿಯಾ ಮಸೀದೆಯ ಸಮೀಪ ಪೂರ್ವದಿಕ್ಕಿನ ದ್ವಾರದ ಎದುರಲ್ಲಿ ಇರುವದು. ಯುಜಾರು ವ ಯು ವತಬರ್ರಕೂ ।ಇವರ ಜಿಯಾರತ್ (ದರ್ಶನ)ಗೈಯ್ಯಲಾಗುತ್ತಿದೆ ಹಾಗೂ ಸಮೃದ್ಧಿ ಹೊಂದಲಾಗುತ್ತಿದೆ.

ಹಜ್ರತ್‌ರ ಸಂತಾನವು ಬಿಜಾಪುರದಲ್ಲಿ ಇರುವದಿಲ್ಲ. ಮಗಳ ಸಂತಾನದಿಂದ ಸೈಯ್ಯದ್‌ಖಾದಿರ್ ಬಾದಶಾಹ್ ಪಾಂಚಸದ್ದೆ ವಿವರವು ಮೌಲಾನಾ ಮುಹಿಯುದ್ದೀನ್ ಖಾದ್ರಿಯವರ ಉಲ್ಲೇಖದಲ್ಲಿ ಇರುವದು.

■

೫೪. ಸೈಯ್ಯದ್ ಮುಹಮ್ಮದ್ ಬುಖಾರಿ (ಖು)

ಹಜ್ರತ್‌ರು ಬಿಜಾಪುರದ ಪ್ರಸಿದ್ಧ ಸೂಫಿವರ್ಯರು. ಆ ಕಾಲದ ಪವಾಡ ಪುರುಷರಾಗಿದ್ದರು. ಮತ್ತು ಆ ಅವಧಿಯ ಅನೇಕ ಬಾದಶಾಹರು, ಅಮೀರರು ಆಡಳಿತಗಾರರು. ಹಜ್ರತ್‌ರ ಭಕ್ತರಾಗಿದ್ದರು. ಹಿಜ್ರಿಶಕೆ ೧೧೯೭ ರಲ್ಲಿ ಇಹಲೋಕ ತ್ಯಜಿಸಿದರು. ಇವರ ನಿಧನದ ದಿನಾಂಕವು 'ಮಖ್ಬೂಲೆ ಖುದಾ ವ ರಸೂಲ್' ಎಂದಿರುವದು. ಇವರ ಸಮಾಧಿ ಸ್ಥಳವು ಕೋಟೆಯ ಒಳಗಡೆ ನಗರ ಪ್ರದೇಶದಲ್ಲಿ 'ಅಲಿಬಾಗ್'ದಲ್ಲಿ ಇರುವದು.

ಹಜ್ರತ್‌ರ ವಾರ್ಷಿಕ ಉರೂಸ್‌ವನ್ನು ಅಲ್ಲಿಯ ಓಣಿಯವರೇ ಆಚರಿಸುತ್ತಾರೆ. ■

೫೫. ಹಜ್ರತ್ ಸೈಯ್ಯದ್ ಮುಹಮ್ಮದ್ ತಾಜಿಮತರ್ಕ(ಖು)

ಇವರು ಬಿಜಾಪುರದ ಪ್ರಸಿದ್ಧ ಸೂಫಿವರ್ಯರಾಗಿರುವರು. ತಮ್ಮ ದೇಶ ಅಸ್ತರಾಬಾದ್‌ನಿಂದ ಹೊರಟು ಸುಲ್ತಾನ್ ಇಬ್ರಾಹಿಂ ಆದಿಲ್‌ಶಾಹ್ ಜಗದ್ಗುರುವಿನ ಅವಧಿಯಲ್ಲಿ ಈ ಪಟ್ಟಣಕ್ಕೆ ಆಗಮಿಸಿದರು. ಹಜ್ರತ್‌ರು 'ತಾಜೀಮ್ ತರ್ಕ್' ಎಂದು ಪ್ರಸಿದ್ಧಿಗೊಳ್ಳುವ ಕಾರಣವೆಂದರೆ ಹಜ್ರತ್‌ರು ಯಾರಿಗೂ ಗೌರವಾರ್ಪಣೆ ನೀಡುತ್ತಿರಲಿಲ್ಲ. ಆದರೆ ಶವಗಳಿಗೆ ಮಾತ್ರ ತಪ್ಪದೇ ಗೌರವ ಸಲ್ಲಿಸುತ್ತಿದ್ದರು. ಏನೆಂದರೆ ಯಾವುದೇ ಶವಯಾತ್ರೆಯು ತಮ್ಮ ಎದುರಿನಿಂದ ಹೊರಟರೆ ತಕ್ಷಣ ಆತನಿಗೆ ಗೌರವ ಸಲ್ಲಿಸಲು ಎದ್ದು ನಿಲ್ಲುತ್ತಿದ್ದರು. ಹಾಗೂ ನಮಾಜೆ ಜನಾಜಾ ಸಲ್ಲಿಸಲು ಉತ್ಸುಕರಾಗುತ್ತಿದ್ದರು. ಕೆಲ ಕಿಡಗೇಡಿಗಳು, ದುರ್ದೈವಿ ಜನರು ಫಕೀರರನ್ನು ದರವೇಶಿಗಳನ್ನು ನಿರಾಕರಿಸುವವರು ಒಂದೆಡೆ ಸೇರಿ ಹೀಗೆ ಯೋಚಿಸಿದರು. ಈ ಸೂಫಿವರ್ಯರು ಜೀವಂತ ಜನರನ್ನು ಗೌರವಿಸುವದಿಲ್ಲ ಹಾಗೂ ಹೆಣಗಳಿಗೆ ಗೌರವ ನೀಡುತ್ತಾರೆ. ಅವರನ್ನು ಅಪಹಾಸ್ಯಕ್ಕೀಡು ಮಾಡಬೇಕು ಇದರಿಂದಾಗಿ ಅವರು ತಮ್ಮ ಈ ಹವ್ಯಾಸವನ್ನು ಬದಲಿಸಬಹುದು. ಹೀಗೆ ಯೋಚಿಸಿ ತಮ್ಮ ನಡುವೆಯ ಓರ್ವ ವ್ಯಕ್ತಿಯನ್ನು ಪ್ರಚೋದಿಸಿ ನಾಳೆ ನಿನ್ನನ್ನು ಶವದ ರೀತಿಯಲ್ಲಿ ಕಫನ್ ಉಡಿಸಿ, ಪಂಜರಾದಲ್ಲಿಟ್ಟು 'ಕಲ್ಮಯೆಶಹಾದತ್' ಓದುತ್ತಾ ನಮ್ಮ ಹೆಗಲ ಮೇಲೆ ಹೊತ್ತು ಅವರೆದುರು ಒಯ್ಯುವೆವು. ಅವರು ತಮ್ಮ ಎಂದಿನ ರೂಢಿಯಂತೆ ಎದ್ದುನಿಂತು ಜನಾಜಾ ನಮಾಜ್ ಮಾಡಿಸುವರು. ಯಾವಾಗ ಅವರು ಅಲ್ಲಾಹು ಅಕ್ಬರ್ ಎನ್ನುವರೋ ಆಗ ನೀನು "ಪಂಜರ"ದಿಂದ ಹೊರಗೆ ಬಾ ಮತ್ತೆ ನಾವು ಅವರ ಕರಾಮತ್, ಶವದ ಗೌರವದ ಕುರಿತು ಹೇಗೆ ಅಪಹಾಸ್ಯ

ಮಾಡುವೆವೋ ನೋಡು! ಈ ಯೋಜನೆಯಂತೆ ಮರುದಿನವೇ ಎಲ್ಲರೂ ಹೀಗೆಯೇ ಮಾಡಿದರು, ಹಾಗೂ ತಮ್ಮ ಸ್ನೇಹಿತನನ್ನು ಹೆಣದ ರೂಪ ನೀಡಿ ಹಜ್ರತ್‌ರ ಬಳಿ ಬಂದರು. ಹಜ್ರತ್‌ರು ತಮ್ಮ ರೂಢಿಯಂತೆ ಏಳಲಿಲ್ಲ. ತಮ್ಮ ಸ್ಥಳದಲ್ಲಿ ಹಾಗೆಯೇ ಕುಳಿತುಕೊಂಡರು. ಆಗ ಆ ಜನರು ನಕಲಿ ಶವವನ್ನು ಹಜ್ರತ್‌ರ ಮುಂದಿಟ್ಟು ನಮ್ರರಾಗಿ ವಿನಂತಿಸಿಕೊಂಡರು. ತಾವು ಜನಾಜಾ ನಮಾಜ್‌ದ ನಾಯಕತ್ವವಹಿಸಬೇಕು. ಅಂದರೆ ಈ ಮೈಯ್ಯತ್‌ವು ಬಿಡುಗಡೆ ಹೊಂದುವದು. ಹಜ್ರತ್‌ರು ಬೇರೆಡೆಗೆ ಒಯ್ಯಲು ಹೇಳಿದರು. ಆ ಜನರು ಅತ್ತು ಕರೆದು ಹಜ್ರತ್‌ರನ್ನು ಒತ್ತಾಯಿಸಿದರು. ಆಗ ಹಜ್ರತ್‌ರು ಮೂರು–ನಾಲ್ಕು ಸಲ ಕೇಳಿದರು. ನೀವು ನಿಮ್ಮ ಇಚ್ಛೆಯಿದ್ದರೆ ನಾನು ಜನಾಜಾ ನಮಾಜ್ ಮಾಡಲೇ! ಆಗ ಅವರೆಲ್ಲ ಹೌದು ಎಂದಾಗ ಹಜ್ರತ್‌ರು ಎದ್ದು ನಿಂತು ಜನಾಜಾದ ಎದುರು ಅಲ್ಲಾಹು ಅಕ್ಬರ್ ಎಂದರು ಹಾಗೂ ನಾಲ್ಕೂ ತಕ್ಬೀರ್ ಸಲ್ಲಿಸಿ ಸಲ್ಲಾಂ ತಿರುಗಿದರು. ಆ ಜನರು ತಮ್ಮ ಅಪಹಾಸ್ಯದೊಂದಿಗೆ ನಮಾಜ್‌ನ್ನು ಹಜ್ರತ್‌ರ ಹಿಂದೆ ಸಲ್ಲಿಸಿದರು. ಹಾಗೂ ಈ ನಿರೀಕ್ಷೆಯಲ್ಲಿದ್ದರು. ಇವನು ಈಗ ಏಳುವನು ಆಗ ಏಳುವನು, ಆದರೆ ಆತನು ಅಲುಗಾಡಲಿಲ್ಲ. ಆಗ ವಿಹ್ವಲಿತರಾಗಿ ನಮಾಜಿನ ನಂತರ ಆತನ ಬಳಿ ಹೋಗಿ ನೋಡಿದರು. ಅವನು ಶವವಾಗಿ ಹೋಗಿದ್ದ. ಮತ್ತೇನಿತ್ತು ಬಹಳೇ ಲಜ್ಜಿತರಾದರು ಹಾಗೂ ಪಶ್ಚಾತ್ತಾಪ ಪಡತೊಡಗಿದರು ಹಾಗೂ ತಮ್ಮ ಅಗೌರವದ ಕುರಿತು ಹೇಳಿದರು. ಹಜ್ರತ್‌ರು ನಾನು ನಿರಾಕರಿಸುತ್ತಿದ್ದೆ ನೀವು ಇಚ್ಛೆ ಪಡುತ್ತಿದ್ದಿರಿ ಹೀಗಾಗಿ ನಾನು ವಿವಶನಾಗಿ ನಮಾಜ್ ಸಲ್ಲಿಸಿದೆ. ನನ್ನ ತಪ್ಪೇನಿಲ್ಲ. ಇನ್ನೊಮ್ಮೆ ಎಂದಿಗೂ ಫಕೀರರ ಪರೀಕ್ಷೆ ಹಾಗೂ ಅಗೌರವ ಮಾಡಬಾರದು. ಹಜ್ರತ್‌ರ ನಿಧನದ ಶಕೆಯು ತಿಳಿದು ಬಂದಿಲ್ಲ ಹಾಗೂ ಉರುಸವು ಜಿಲ್‌ಹಜ್ಜಾದ ೧೧ನೆಯ ದಿನಾಂಕದಂದು ಇರುವದು. ಹಜ್ರತ್‌ರ ಸಮಾಧಿಯು ಪಟ್ಟಣದಲ್ಲಿ ಶಹಾಪುರ ದ್ವಾರದ ಬಳಿ ಇರುವದು. ಹಜ್ರತ್‌ರ ಸಮಾಧಿಯ ಮೇಲ್ಗಡೆ ಚೌಖಂಡಿ ನಿರ್ಮಿಸಲಾಗಿದೆ. ಹಾಗೂ ಹಜ್ರತ್‌ರ ಪುತ್ರರಾದ ಹಜ್ರತ್‌ಷಾಹ್ ಅಲಿ (ಖು)ರಿಗೆ ಓರ್ವ ಪುತ್ರಿಯಿದ್ದಳು.

ಹಜ್ರತ್‌ರ ಸಂತಾನದಿಂದ ಸೈಯ್ಯದ್ ಮುಹಮ್ಮದ್‌ಸಾಬ್, ಸೈಯ್ಯದ್ ಮೀರಾಂಸಾಬ್, ತಾಜೀಮ್‌ಸಾಬ್, ಸೈಯ್ಯದ್‌ಸಾಬ್ ಇತ್ಯಾದಿ ಇರುವರು. ಇವರಲ್ಲಿ ಕೆಲವರು ಬಕ್ಷಿ ಹವೇಲಿ ಗಲ್ಲಿಯಲ್ಲಿ ವಾಸಿಸುತ್ತಿರುವರು ಮತ್ತೆ ಕೆಲವರು ಬೇರೆ ಬೇರೆ ಸ್ಥಳದಲ್ಲಿ ಇರುವರು. ಹಜ್ರತ್‌ರ ವಾರ್ಷಿಕ ಉರುಸು ಜರುಗುತ್ತದೆ.

■

೫೬. ಹಜ್ರತ್‌ಶಾಹ್ ಮೂಸಾಖಾದ್ರಿ (ಖ)

ಇವರು ಇಲ್ಲಿಯ ಪ್ರಸಿದ್ಧ ಔಲಿಯಾಗಳಲ್ಲಿ ಓರ್ವರು. ಹಜ್ರತ್‌ರಿಂದ ಹಲವಾರು ಪವಾಡಗಳು ಜರುಗಿವೆ. ಶರೀಯತ್ ಹಾಗೂ ತರೀಕತ್ ಪಾಲಿಸಿ ಜನಸೇವೆಗೈಯ್ಯುತ್ತಿದ್ದರು. ಹಜ್ರತ್‌ರ ತಂದೆಯವರಾದ ಸೈಯ್ಯದುಸ್ಸಾದಾತ್ ಹಜ್ರತ್‌ಶಾಹ್ ಅಬ್ದುಲ್‌ಲತೀಫ್ ಖಾದ್ರಿ(ಖ) ಪವಾಡಪುರುಷರಾಗಿದ್ದರು. ಇವರ ಸಮಾಧಿಯು ಕರ್ನೂಲನಲ್ಲಿದೆ. ಹಾಗೂ ಈ ಸಮಾಧಿ ಸ್ಥಳವು ಸುಪ್ರಸಿದ್ಧವಾಗಿದೆ. ಹಜ್ರತ್‌ರು ಸುಲ್ತಾನುಲ್ ಔಲಿಯಾ ಗೌಸುಲ್ ಆಜಮ್ ಹಜ್ರತ್ ಸೈಯ್ಯದ್ ಮುಹಿಯುದ್ದೀನ್ ಜಿಲಾನಿ(ಖ)ರ ಸಂತಾನದಿಂದಿರುವರು. ಇವರ ಸಮಾಧಿ ಸ್ಥಳವು ಕೋಟೆಯ ಹೊರಗಡೆ ಪೂರ್ವದಿಕ್ಕಿನ ದ್ವಾರವಾದ ಅಲ್ಲಾಪುರ ಅಗಸಿಯ ಬಳಿ ಇರುವದು. ಹಾಗೂ ಇವರ ಸಂತಾನವು ಹೈದರಾಬಾದ್‌ನಲ್ಲಿ ಇರುವರು.

ಹಜ್ರತ್‌ರ ತಂದೆಯವರಾದ ಸೈಯ್ಯದ್‌ಶಾಹ್ ಅಬ್ದುಲ್‌ಲತೀಫ್ ಖಾದ್ರಿ (ಖ) ಸುಪ್ರಸಿದ್ಧ 'ಲಾಉಬಾಲಿ' ಎಂಬ ಬಿರುದಿನಿಂದ ಪ್ರಸಿದ್ಧರಿರುವರು. ಹಜ್ರತ್‌ರಿಗೆ ನಾಲ್ವರು ಪುತ್ರರಿರುವರು. ೧) ಸೈಯ್ಯದ್ ಅಬ್ದುಲ್ಲಾಖಾದ್ರಿಯವರ ಸಮಾಧಿಯು ಕರ್ನೂಲದಲ್ಲಿಯೇ ಇರುವದು. ೨) ಸೈಯ್ಯದ್ ಶಾಹ್ ಮೂಸಾ ಖಾದ್ರಿ(ಖ) ಬಿಜಾಪುರಿ, ೩)ಸೈಯ್ಯದ್ ಶಾಹ್ ಪೀರ್ ಮಿಸ್ಕಿನ್ ಖಾದ್ರಿ (ಖ)ಯವರ ಸಮಾಧಿಯು ಹೈದ್ರಾಬಾದದ ಕಾರವಾನ್ ಓಣಿಯಲ್ಲಿರುವದು. ೪) ಸೈಯ್ಯದ್‌ಶಾಹ್ ತಾಹೀರ್ ಉರ್ಫ್ ಶಾಹ್ ಹಜ್ರತ್ ಖಾದ್ರಿ (ಖ)ಯವರ ಸಮಾಧಿಯು ಅದ್ವೋನಿಯಲ್ಲಿರುವದು ಹಾಗೂ ಅವರ ಸಂತಾನವು ಹೈದರಾಬಾದ್, ಕರ್ನೂಲ್, ಅಧೋನಿ, ಅಲಿಬಂಡಾ, ದೋಗರ್ದರ್ ಹಾಗೂ ತಿಮ್ಮಾಪುರದಲ್ಲಿ ಇರುವರು.

■

೫೭. ಹಜ್ರತ್‌ಶಾಹ್ ಮುಸ್ತಫಾ ಖಾದ್ರಿ (ಖ)

ಹಜ್ರತ್‌ರು ಬಿಜಾಪುರಕ್ಕೆ ಆಗಮಿಸಿದ ಕೊನೆಯ ಹಂತದ ಸೂಫಿಗಳಲ್ಲಿ ಬರುವರು. ಹಾಗೂ ಹಜ್ರತ್ ಸೈಯ್ಯದ್ ಮುಹಮ್ಮದ್ ಮುದರ್ರಿಸ್(ಖ)ರ ಸಹೋದರಿಯ ಪುತ್ರರೂ ಆಗಿರುವರು. ಹಾಗೂ ಹಜ್ರತ್‌ರ ತಂದೆಯವರಾದ ಹಜ್ರತ್ ಸೈಯ್ಯದ್ ಚಾಂದ್ ಮುಹಮ್ಮದ್ (ಖ)ರು ಖಾಜಿ ಸೈಯ್ಯದ್ ಅಲಿ ಮುಹಮ್ಮದ್ (ರ) ಅವರ ಸಹೋದರಿಯ ಪುತ್ರರೂ ಆಗಿರುವರು. ಇವರು ಸೂಫಿ ಸಂತತಿಯವರ ನಡುವಳಿಕೆ ಶಿರಸಾ ಪಾಲಿಸಿ ಜನರ ಮಾರ್ಗದರ್ಶನಗೈಯ್ಯುತ್ತಿದ್ದರು. ಬೈಯ್ಯತ್ ಹಾಗೂ ಖಿಲಾಫತ್‌ವನ್ನು ಹಜ್ರತ್‌ಶಾಹ್ ಅಬ್ದುಲ್‌ಖಾದಿರ್‌ರಿಂದ ಯಾರು ಹಜ್ರತ್‌ಶಾಹ್

ಮುರ್ತುಜಾ ಖಾದ್ರಿಯವರ ಶಿಷ್ಯ ಹಾಗೂ ಉತ್ತರಾಧಿಕಾರಿಯಾಗಿದ್ದರು. ಅವರಿಂದ ಹಜ್ರತ್‌ರು ಆಧ್ಯಾತ್ಮಿಕ ಜ್ಞಾನವನ್ನು ಪಡೆದರು. ಆದಿಲ್‌ಶಾಹಿ ಹಾಗೂ ಆಲಂಗೀರರ ಮೇಲೆ ಪ್ರಭಾವ ಬೀರಿದ್ದರು. ಹಜ್ರತ್‌ರು ಬಾದಶಾಹ ಆಲಂಗೀರರ ನಿರ್ದೇಶನದಂತೆ ಮಾಮೂರ್‌ಖಾನ್ ಸುಬೇದಾರರ ಮುಖಾಂತರ ಹಜ್ರತ್ ಮುಹಮ್ಮದ್(ಸ)ರ ಪವಿತ್ರ ಕೇಶಕಸ್ತೂರಿಯ ದರ್ಶನ ಪಡೆದರು. ಹಾಗೂ ಆಲಂಗೀರ ಔರಂಗಜೇಬರಿಂದ ಜುಮ್ನಾಳ ಗ್ರಾಮವು ಹಜ್ರತ್‌ರ ನಿತ್ಯ ಜೀವನ ನಿರ್ವಹಣೆಗೆ ಮೀಸಲಾಗಿತ್ತು. ಹಜ್ರತ್‌ರು ತಮ್ಮ ಪತ್ನಿಯ ಸಹೋದರರಾದ ಹಜ್ರತ್‌ಶಾಹ್ ಅಲಿ ಸಫವಿ(ಖು)ರನ್ನು ತಮ್ಮ ಪೀಠಾಧಿಪತಿಯನ್ನಾಗಿಸಿದರು. ಆದುದರಿಂದ ಹಜ್ರತ್‌ಶಾಹ್ ಮುಸ್ತಫಾಖಾದ್ರಿಯವರ ಆಸ್ತಿಯು ಹಜ್ರತ್‌ಶಾಹ ಅಲಿ ಸಫವಿ ಹಾಗೂ ಅವರ ಸಂತಾನದ ಬಳಕೆಯಲ್ಲಿರುವದು. ಹಜ್ರತ್‌ರ ನಿಧನವು ರಬ್ಬಿವುಲ್ ಅವ್ವಲ್‌ದ ೨೧ನೇ ದಿನಾಂಕದಂದು ಹಿಜ್ರಿಶಕೆ ೧೧೧೩ರಲ್ಲಿ ಆಯಿತು. ಹಜ್ರತ್‌ರ ಸಮಾಧಿ ಸ್ಥಳವು ಜಾಮಿಯಾ ಮಸೀದೆಯ ಬಳಿ ಅಗಸಿಯ ಮೂಲೆಯೆಡೆಗೆ ಬರುವದು.

ಹಜ್ರತ್‌ರ ಸಂತಾನದಿಂದ ಪುಣೆಯಲ್ಲಿ ಸೈಯ್ಯದ್ ಮುಸ್ತಫಾಖಾದ್ರಿ ಹರೆಝುಂಡೆವಾಲೆ ಉಪಸ್ಥಿತರಿರುವರು.

■

೫೮. ಹಜ್ರತ್‌ಶಾಹ್ ನೂರುಲ್ಲಾ ಖಾದ್ರಿ (ಖು)

ಇವರು ಹಜ್ರತ್ ಗೌಸೂಸ್ಸಕ್ಲೈನ್ ಸೈಯ್ಯುದ್ ಅಬ್ದುಲ್‌ಖಾದಿರ್‌ರ ಸಂತಾನದಿಂದಿರುವರು. ಹಾಗೂ ಬಿಜಾಪುರದ ಮಹಾಪುರುಷರೂ ಹಾಗೂ ಔಲಿಯಾಗಳಲ್ಲಿ ಓರ್ವರಾಗಿರುವರು. ಹಲವಾರು ಪವಾಡಗಳನ್ನು ತೋರಿರುವರು. ಶರೀಯತ್ ಹಾಗೂ ತರೀಖತ್ ಮಾರ್ಗಾವಲಂಬಿಗಳಾಗಿ ಜನರಿಗೆ ಮಾರ್ಗದರ್ಶನ ಮಾಡುತ್ತಿದ್ದರು. ಹಜ್ರತ್‌ರು ಹಿಜ್ರಿಶಕೆ ೧೦೬೭ರಲ್ಲಿ ಇಹಲೋಕ ತ್ಯಜಿಸಿ ಪರಲೋಕಕ್ಕೆ ಪಯಣಗೈದರು. ಅವರ ನಿಧನದ ದಿನಾಂಕವು (ಫಿ ಕಬ್ರಿಹಿ ನೂರುನ್ ಮಿನ್‌ನ್ನೂರುಲ್ಲಾಹೀ ಎಂದರೆ-ಅವರ ಸಮಾಧಿಯಲ್ಲಿ ಅಲ್ಲಾಹುವಿನ ಪ್ರಕಾಶ ಪ್ರಕಟವಾಗಿದೆ. (೧೦೬೫) ಆಗುವದು. ಹಾಗೂ ಗನಿ ಅಬದ್ (೧೦೬೭) ಹಜ್ರತ್‌ರ ದಿನಾಂಕಗಳಿರುವವು. ಹಜ್ರತ್‌ರ ಸಮಾಧಿಸ್ಥಳವು ಕೋಟೆಯ ಹೊರಗಡೆ ಜೊಹರಾಪುರದಲ್ಲಿ ಹಜ್ರತ್ ಮೌಲಾನಾ ಹಬೀಬುಲ್ಲಾಹ್ ಸಿಬಗತುಲ್ಲಾಹಿ (ಖು)ರ ದರ್ಗಾದ ಬಳಿ ದಕ್ಷಿಣದೆಡೆಗೆ ಕಟ್ಟೆಯ ಮೇಲ್ಗಡೆ ಇರುವದು.

■

೫೯. ಹಜ್ರತ್ ಶೇಖ ಅಬ್ದುಲ್ ಲತೀಫ್ ಖಾದ್ರಿ (ಖ)

ಇವರು ಹಜ್ರತ್‌ಶಾಹ್ ನೂರುಲ್ಲಾ ಖಾದ್ರಿಯವರ ಸುಪುತ್ರರಾಗಿರುವರು. ಇವರು ಪವಾಡ ಪುರುಷರಾಗಿದ್ದರು. ಹಜ್ರತ್‌ರ ನಿಧನವು ೧೦೮೨ರಂದು ಆಯಿತು. ಹಾಗೂ ಹಜ್ರತ್‌ರ ಸಮಾಧಿ ಸ್ಥಳವು ಅವರ ತಂದೆಯವರ ಸಮಾಧಿಯ ಪಕ್ಕದಲ್ಲಿಯೇ ಇರುವದು. 'ಖಲ್ವಿತ್ ಗಜೀದಾ' (೧೦೮೨) ನಿಧನದ ದಿನಾಂಕ ಇರುವದು. ಹಜ್ರತ್‌ರ ಸುಪುತ್ರರಾದ ಹಜ್ರತ್‌ಶಾಹ್ ಹಜ್ರತ್ ಖಾದ್ರಿ(ಖ) ಆ ಕಾಲದ ಸುಪ್ರಸಿದ್ಧ ಮಹಾಪುರುಷರಾಗಿದ್ದರು. ಸುಲ್ತಾನ್ ಸಿಕಂದರ್ ಆದಿಲ್‌ಶಾಹ್‌ನ ಕಾಲದ ಬಹಳೇ ಗೌರವ ಹಾಗೂ ಘನತೆಯ ಸೂಫಿವರ್ಯರಾಗಿದ್ದಾರೆ. ಬಾದಶಾಹನ ಮೇಲೆ ಪ್ರಭಾವ ಬೀರಿದ್ದರು. ಸಾಮ್ರಾಜ್ಯದ ಹಲವಾರು ಕಾರ್ಯಕೆಲಸಗಳನ್ನು ಹಜ್ರತ್‌ರ ಅಭಿಪ್ರಾಯ ಪಡೆದು ನೆರವೇರಿಸಲಾಗುತ್ತಿತ್ತು. ಸುಲ್ತಾನ್ ಆಲಂಗೀರ ಔರಂಗಜೇಬರ ಮೇಲೆಯೂ ಹಜ್ರತ್‌ರು ತುಂಬಾ ಪ್ರಭಾವ ಬೀರಿದ್ದರು. ಹಾಗೂ ಔರಂಗಜೇಬ್ ಬಾದಶಾಹನಿಂದ ಹಜ್ರತ್‌ರಿಗೆ ಬೃಹತ್ ರೂಪದ ಆಸ್ತಿಯನ್ನು ಕೊಡಲಾಯಿತು. ಇಲ್ಲಿಯವರೆಗೂ ಹಜ್ರತ್‌ರ ಸಂತಾನಕ್ಕೆ ಅದು ಲಭ್ಯವಿರುವದು. ಮೊಹರಮ್‌ದ ೧೪ನೆಯ ದಿನಾಂಕದಂದು ನಿಧನ ಹೊಂದಿದರು. ಹಜ್ರತ್‌ರ ಸಮಾಧಿ ಸ್ಥಳವು ನಗರದ ಒಳಭಾಗದಲ್ಲಿ ಹಜ್ರತ್‌ರ ಹವೇಲಿಯಲ್ಲಿ ಜಾಮಿಯಾ ಮಸೀದೆಯ ಬಳಿ ಪಶ್ಚಿಮ ದಿಕ್ಕಿನಲ್ಲಿ ಇರುವದು.

ಶಾಹ್ ಹಜ್ರತ್ ಸಾಹೇಬರ ಸಂತತಿಯಾದ ತಾಜುದ್ದೀನ್ ಸೈಯ್ಯದ್ ಶಾಹ್ ನಬೀರಾ ಖಾದ್ರಿಯವರ ಪುತ್ರ ಸೈಯ್ಯದ್ ನಸೀರುದ್ದೀನ್ ಹೈದರ್ ನಬೀರಾ ಖಾದ್ರಿಯವರು ಸಜ್ಜಾದಾನಶೀನ್ (ಪೀಠಾಧಿಪತಿ)ಯಾಗಿರುವರು. ಲಿಂಗಸೂರ ಜಿಲ್ಲೆಯ ಅನಾಹೊಸುರು, ಹೈದ್ರಾಬಾದ್ ದಖ್ಖನ್‌ದಲ್ಲಿ ಇರುವರು. ಹಾಗೂ ಸೈಯ್ಯದ್ ಶಾಹ್ ಹುಸ್ಸೈನ್ ನಬೀರಾಖಾದ್ರಿಯವರ ಸಂತಾನವು ಜಿಯಾವುದ್ದೀನ್ ಸೈಯ್ಯದ್‌ಶಾಹ್ ಅಹ್ಮದ್ ಖಾದ್ರಿ, ಮೌಲ್ವಿ ಫೈಯಾಜುದ್ದೀನ್, ಸೈಯ್ಯದ್‌ಶಾಹ್ ಹಜ್ರತ್‌ಖಾದ್ರಿ ಹಜ್ರತ್ ಸೈಯ್ಯದ್‌ಶಾಹ್ ನೂರುಲ್ಲಾಹ್ ಖಾದ್ರಿ ಹಾಗೂ ಸೈಯ್ಯದ್ ಶಾಹ್ ಇಬ್ರಾಹಿಂ ನಬೀರಾ ಖಾದ್ರಿಯವರು ಅನಾಹೊಸೂರುನಲ್ಲಿ ಇರುವರು. ಹಜ್ರತ್‌ರ ಪೂರ್ವಜರು ಹಜ್ರತ್‌ಶಾಹ್ ನೂರುಲ್ಲಾಖಾದ್ರಿಯವರ ಜೊತೆಯಲ್ಲಿ ಬಂದಿದ್ದರು. ಅವರ ಸಂತಾನದಿಂದ ಸೈಯ್ಯದ್ ಅಬ್ದುಲ್‌ವಹಾಬ್ ಸಾಹಬ್ ಬಿಜಾಪುರದ ದರ್ಗಾದ ಸೇವೆಯಲ್ಲಿರುವರು. ಹಾಗೂ ಸೈಯ್ಯದ್ ಶಾಹ್ ನೂರುಲ್ಲಾಖಾದ್ರಿಯವರ ಸಂತಾನದಲ್ಲಿ ಸೈಯ್ಯದ್ ಕರೀಮುಲ್ಲಾ ಖಾದ್ರಿಯವರು ದರ್ಗಾದ ಮುತವಲ್ಲಿಯಾಗಿರುವರು.

■

೬೦. ಹಜ್ರತ್‌ಶಾಹ್ ಕರೀಮುಲ್ಲಾಹ್ ಖಾದ್ರಿ (ಖು)

ಇವರು ಬಿಜಾಪುರದ ಸುಪ್ರಸಿದ್ಧ ಮಹಾಪುರುಷರಲ್ಲಿ ಓರ್ವರಾಗಿರುವರು. ಕುತ್ಬುಲ್ ಅರ್‍ಫಾ ಹಜ್ರತ್‌ಷಾಹ್ ಷರೀಫ್ ಮುಹಮ್ಮದ್ ಷರಫುಲ್ ಹಕ್ ಖಾದ್ರಿ ಗುಜರಾತಿ(ಖು)ರ ಸಹೋದರಿಯ ಪುತ್ರರಾಗಿರುವರು. ಹೀಗೆ ಹೇಳಲಾಗುವದು. ಸುಲ್ತಾನ್ ಮುಹಮ್ಮದ್ ಆದಿಲ್‌ಷಾಹನ ಕಾಲದಲ್ಲಿ ಷಾಹ್‌ಷರೀಫ್ ಮುಹಮ್ಮದ್ (ಖು) ಬಿಜಾಪುರಕ್ಕೆ ಆಗಮಿಸಿದರು. ಆದಿಲಷಾಹನು ಇವರ ಆಗಮನವು ಸಮೃದ್ಧಿದಾಯಕವೆಂದು ಬಗೆದು ಹಾಗೂ ಇಲ್ಲಿಯ ಜನರಿಗೆ ಫಲದಾಯಕವೆಂದು ತಿಳಿದು ಹಜ್ರತ್‌ರನ್ನು ಇಲ್ಲಿ ತಂಗಿಸುವ ಇಚ್ಛೆಯುಳ್ಳವನಾಗಿದ್ದನು. ಹಜ್ರತ್‌ರ ಇರುವಿಕೆಗಾಗಿ ಅಲ್ಪಾವಧಿಯಲ್ಲಿಯೇ ಒಂದು ಶ್ರೇಷ್ಠ(ಬಹುಮಹಡಿ ಕಟ್ಟಡ) ಹವೇಲಿಯನ್ನೂ ನಿರ್ಮಿಸಿದನು. ಆದರೆ ಹಜ್ರತ್‌ರು ಅದಕ್ಕೆ ಒಪ್ಪದೇ ಮರಳಿ ಗುಜರಾತಕ್ಕೆ ಹೋದರು. ತಮ್ಮ ಸಹೋದರಿಯ ಪುತ್ರರೂ, ಉತ್ತರಾಧಿಕಾರಿಗಳೂ ಆದ ಹಜ್ರತ್‌ಷಾಹ್ ಕರೀಮುಲ್ಲಾಹ್ ಖಾದ್ರಿ(ಖು)ರನ್ನು ಇಲ್ಲಿಗೆ ಕಳುಹಿಸಿದರು. ಹಜ್ರತ್‌ಷಾಹ್ ಕರೀಮುಲ್ಲಾಹ್ ಉನ್ನತ ದರ್ಜೆಯ ಪವಾಡಪುರುಷರಾಗಿದ್ದರು. ಬಾದಷಾಹ್ ಹಾಗೂ ಅಮೀರರು ಹಜ್ರತ್‌ರಿಗೆ ಬಹಳೇ ಗೌರವ ಸಲ್ಲಿಸುತ್ತಿದ್ದರು. ಹಜ್ರತ್‌ರ ನಿಧನದ ದಿನಾಂಕ ಹಾಗೂ ಇಸ್ವಿಯು ತಿಳಿದುಬಂದಿಲ್ಲ. ಸಮಾಧಿ ಸ್ಥಳವು ಜಾಮಿಯಾ ಮಸೀದೆಯ ಬಳಿ ಪಶ್ಚಿಮದಿಕ್ಕಿಗೆ ಉಪಸ್ಥಿತವಿರುವದು. ಹಜ್ರತ್‌ರ ಸಂತಾನದಿಂದ ಪುತ್ರರಾದ ಷಾಹ್ ಇಸ್ರಾರುಲ್ಲಾಹ್ ಹಾಗೂ ಷಾಹ್ ವಲಿಯುಲ್ಲಾಹ್ ಉರ್ಫ್ ಷಾಹ್ ರಜ್ವಿ(ಖು)ರು ಸುಪ್ರಸಿದ್ಧ ಔಲಿಯಾಗಳಲ್ಲಿ ಪರಿಗಣಿತರಾಗಿದ್ದರು. ತಮ್ಮ ತಂದೆಯ ಸಮಾಧಿಯ ಬಳಿಯೇ ಸಮಾಧಿಸ್ಥರಾಗಿರುವರು. ಇವರ ಸಂತತಿಯವರು ರಾಯಚೂರು ಹಾಗೂ ಆ ಪ್ರದೇಶದ ಸುತ್ತಮುತ್ತಲೂ ಇರುವರು.

■

೬೧. ಷಾಹ್ ಮಂಜಹನ್ ಬುಖಾರಿ (ಖು)

ಇವರು ಆದಿಲಶಾಹಿ ಕಾಲದ ಅಂತಿಮ ಘಟ್ಟದ ಪ್ರಸಿದ್ಧ ಔಲಿಯಾಗಳಲ್ಲಿ ಓರ್ವರಾಗಿರುವರು. ಸೂಫಿ ಪರಂಪರೆಯ ಉನ್ನತ ದರ್ಜೆಗೆ ತಲುಪಿದ ಮಹಾಪುರುಷರು. ಇವರಿಂದ ಜರುಗಿದ ಪವಾಡಗಳು ಜನರ ನಾಲಿಗೆಯ ಮೇಲೆ ನಲಿದಾಡುತ್ತಿವೆ. ಈ ಪ್ರಸಿದ್ಧ ಸೂಫಿವರ್ಯರು ಮೊಹರಮ್ಮಿನ ಹದಿಮೂರನೆಯ ದಿನದಂದು ಇಹಲೋಕ ತ್ಯಜಿಸಿದರು. ಇವರ ಸಮಾಧಿಯು ಕೋಟೆಯ ಒಳಗಡೆ ಪಾದಷಾಹಪುರದಲ್ಲಿರುವ

ಮಾಸಾಹಬಾರವರ ಬಾವಿಯ ಮಗ್ಗಲು ಸ್ಥಿತವಿರುವದು. ಹಜ್ರತ್‌ರ ತಂದೆಯವರಾದ ಸೈಯ್ಯದ್ ಮುಹಮ್ಮದ್ ಬುಖಾರಿ (ಖು)ರ ಸಮಾಧಿಯು ಅಲ್ಲಾಪುರ ಅಗಸಿಯ ಹೊರಗೆ ಇರುವದು.

■

೬೨. ಹಜ್ರತ್ ಶೇಖ ನ್ಯಾಮತುಲ್ಲಾಹ್ (ಖು)

ಇವರು ಸುಪ್ರಸಿದ್ಧ ಮಹಾಪುರುಷರಾಗಿರುವರು. ನಿತ್ಯ ನಿರಂತರವೂ ಅಲ್ಲಾಹುವಿನ ಧ್ಯಾನದಲ್ಲಿ ನಿಮಗ್ನರಾಗಿರುತ್ತಿದ್ದರು. ಹಾಗೂ ಹಜ್ರತ್‌ರು ಹಜ್ರತ್ ಶೇಖ ಮುಹಮ್ಮದ್ ಬಿನ್ ಫಜಲಲ್ಲಾಹ್(ಖು)ರು ಯಾರು 'ತೌಫತುಲ್ ಮುರ್ಸಲೀನ್' ಪುಸ್ತಿಕೆಯ ಲೇಖಕರಾಗಿದ್ದರು. ಅವರ ಮುರೀದ್ ಹಾಗೂ ಖಲೀಫಾ ಆಗಿದ್ದಾರೆ.

ಹಾಜಿ ಝಾಕಿರ್‌ರು ಹಜ್ರತ್‌ಷಾಹ್ ಹಾಷಿಂ(ಖು)ರ ಕೃಪಾದೃಷ್ಟಿಯಿಂದ ಸುಮಧುರ ಕಂಠದ ಒಡೆಯರಾಗಿದ್ದರು. ತಮ್ಮ ಕಾಲದ ಎಲ್ಲ ಸ್ತುತಿ ಸ್ತೋತ್ರ ಪಾಠಕರಿಗೂ ಮೀರಿಸಿದವರಾಗಿದ್ದರು. ಅವರ ಪವಿತ್ರ ನಾಲಿಗೆಯಿಂದ ಮೌಲೂದ್ ಷರೀಫ್ (ಹಜ್ರತ್‌ರ ಜನ್ಮದಿನದ ಸ್ತುತಿಗೀತೆ)ಯನ್ನು ಆಲಿಸುವ ಇಚ್ಛೆಯಲ್ಲಿ ಹಜ್ರತ್ ಶೇಖ ನ್ಯಾಮತುಲ್ಲಾ(ಖು) ತಮ್ಮ ಸ್ವದೇಶವಾದ ಬುರ್ಹಾನ್‌ಪುರದ ಖಾಂದೇಶದಿಂದ ಹೊರಟು ಬೇಗಬೇಗನೆ ಪಯಣಗೈದು ಬಿಜಾಪುರಕ್ಕೆ ಆಗಮಿಸಿದರು. ಹಾಗೂ ತಮ್ಮ ಸಂಬಂಧಿಗಳಾದ ಮಿಯಾ ರಹೀಂ ಮುಹಮ್ಮದ್ ಜುಬೇರಿಯವರ ವಾಸಸ್ಥಾನದಲ್ಲಿ ಬಂದು ತಂಗಿದರು. ಆಕಸ್ಮಿಕವಾಗಿ ಆಗ ಓರ್ವ ಮಹಾಪುರುಷರ ಉರೂಸುತ್ಸವವಿತ್ತು. ಆ ಸ್ಥಳದಲ್ಲಿ ಮೌಲೂದಿಗಳು ಹಾಗೂ ವರ್ಣನೆಗೈಯ್ಯುವವರು ಹಾಗೂ ಬಿಜಾಪುರದ ಪ್ರಸಿದ್ಧ ಮಹಾಪುರುಷರ ಸಂಗಮ ಅಲ್ಲಿ ಜರುಗಿತ್ತು. ಹಜ್ರತ್‌ರು ಈ ಸಭೆಯಲ್ಲಿ ಹಾಜರಾದರು. ಹಾಜಿ ಝಾಕೀರ್‌ರು ಮೌಲೂದ್ ಷರೀಫ್ ಸ್ತುತಿಗೀತೆಯನ್ನು ಪ್ರಾರಂಭಿಸಿದಾಗ ಹಜ್ರತ್‌ರು ಒಂದು ಶ್ವೇತವರ್ಣದ ಶಾಲನ್ನು ತಮ್ಮ ಮುರ್ಷಿದ್‌ರಿಂದ ಸಮೃದ್ಧಿದಾಯಕ ರೂಪದಲ್ಲಿ ಪಡೆದಿದ್ದರು. ಹಾಗೂ ಯಾವುದೇ ಸಭೆ ಸಮಾರಂಭದಲ್ಲಿ ಹೋಗುತ್ತಿದ್ದಾಗ ಅದನ್ನು ಸಮೃದ್ಧಿದಾಯಕವಾಗಿ ತಮ್ಮ ಹೆಗಲಿನ ಮೇಲೆ ಹಾಕಿಕೊಂಡು ಇರುತ್ತಿದ್ದರು. ಅದನ್ನು ಹಾಜಿ ಝಾಕೀರ್‌ರಿಗೆ ಅರ್ಪಿಸಿ ಹೀಗೆಂದರು. ಈ ಸಮೃದ್ಧಿಯು ಹಜ್ರತ್ ಆರೀಫ್ ಬಿಲ್ಲಾಹ್ ಶೇಖ ಮುಹಮ್ಮದ್ ಬಿನ್ ಫಜಲುಲ್ಲಾಹ್(ಖು)ರಿಂದ ಈ ಫಕೀರನಿಗೆ ಲಭಿಸಿತ್ತು. ಅದನ್ನು ಈಗ ನಿಮಗೆ ನೀಡಿರುವೆನು. ಹಾಜಿ ಝಾಕೀರ್‌ರು ಗೌರವ ಅರ್ಪಿಸಿ ತಲೆಯ ಮೇಲೆ ಕಟ್ಟಿಕೊಂಡರು. ಹಾಗೂ ಹಜ್ರತ್ ಮುಹಮ್ಮದ್(ಸ)ರ ಸ್ತುತಿಗೀತೆಗೆ ತೊಡಗಿದಾಗ ಈ ನಡುವೆ ಅವರ ಬಾಯಿಂದ ಈ ದ್ವಿಪದಿಯು ಹೊರಟಿತು.

ನಾಮೋನಿಶಾನೆ ಮಾ ಹಮಾ ದರ್ ಇಶ್ಕೇಪಾಕ್‌ಸೂಖ್ತ ।
ಬಾಮಾ ದಿಗರ್ ಮಗೋ ಕೆ ಕುಜಾಯಿ ವ ಚಿ–ಸ್ತನಾಮ್ ॥
ಅಲ್ಲಾಹ್ ಕೆ ಪಾಕ್ ಇಶ್ಕ್ ಮೆ ಹಮಾರಾ
ನಾಮ್ ವ ನಿಶಾನ್ ಜಲ್‌ಕರ್ ಖಾಕ ಹೋಗಯಾ
ದೋಬಾರಾ ಹಮ್‌ಸೆ ಮತ್ ಪೂಛೋ
ತೂ ಕೌನ್ ಹೈ ಔರ್ ತೇರಾ ಕ್ಯಾ ನಾಮ್ ಹೈ

ಅಲ್ಲಾಹುವಿನ ಪವಿತ್ರಪ್ರೇಮದಲ್ಲಿ ನನ್ನತನ ಅಳಿದುಹೋಯಿತು. ನನ್ನ ಹೆಸರು, ಕುರುಹು ಸುಟ್ಟು ಕರಕಲಾದವು। ಮತ್ತೊಮ್ಮೆ ನನಗೆ ಕೇಳದಿರಿ ನೀನಾರು? ನಿನ್ನ ಹೆಸರೇನು? ಎಂದು।

ಹಜ್ರತರು ಇದನ್ನು ಆಲಿಸಿ ಒಮ್ಮೆಲೇ ಚೀತ್ಕರಿಸಿ ಮೌಲೂದ್ ಓದಲು ಬಂದವರ ನಡುವೆ ಹೋಗಿ ಬಿದ್ದರು ಹಾಗೂ ಮೂರ್ಛಿತರಾದರು. ಅದೇ ವೇಳೆ ಹಜ್ರತ್‌ರನ್ನು ಹಾಜಿ ಝೂಕೀರ್‌ರ ಪಾಲ್ಕಿಯಲ್ಲಿ ಹಾಕಿಕೊಂಡು ಮನೆಗೆ ತಂದರು. ಬೆಳಿಗ್ಗೆ ಹಜ್ರತ್‌ರ ಸೋದರಳಿಯ ಬಂದು ದೇಹದಲ್ಲಿ ಅಲ್ಪವೇ ಪ್ರಾಣವು ಉಳಿದಿದೆ ಎಂದು ಘೋಷಿಸಿದರು. ಬೇರೆ ಜನರು 'ಇಲ್ಲ' ಎಂದರು. ಇದೆ, ಇಲ್ಲ ಎನ್ನುವದರೊಳಗೇ ಮದ್ಯಾಹ್ನವಾಯಿತು. ಯಾವಾಗ ಹಜ್ರತ್‌ರ ದೇಹದಿಂದ ಅವರ ವಸ್ತ್ರವನ್ನು ತೆಗೆಯಲಾಯಿತು ಎದೆಭಾಗದಿಂದ ಕಾಲುಗಳವರೆಗೆ ಒಂದು ಹುಣ್ಣು ಉಂಟಾಗಿತ್ತು ಹಾಗೂ ದೇಹವು ಶಾಖದಿಂದ ಕೂಡಿತ್ತು. ಹೀಗೆ ಹೇಳಲಾಗಿದೆ ಯಾವಾಗ ಹಜ್ರತ್‌ರ ನಿಧನದ ಸುದ್ಧಿಯು ಹಾಜಿ ಝೂಕಿರ್‌ರಿಗೆ ತಲುಪಿತು ಅವರು ವಿಷಾದ ವ್ಯಕ್ತಪಡಿಸಿ ನಾನು ಬರುವವರೆಗೂ ಶವವನ್ನು ದಫನ್‌ಗಾಗಿ ಒಯ್ಯಬಾರದು. ಆದುದರಿಂದ ಹಜ್ರತ್‌ರ ಶವವನ್ನು ಝೂಕೀರ್‌ರು ಬಂದ ನಂತರವೇ ದಫನ್‌ಗಾಗಿ ಕಬರಸ್ತಾನಕ್ಕೆ ತೆಗೆದುಕೊಂಡು ಹೊರಟರು. ಹಜ್ರತ್ ಝೂಕೀರ್‌ರು ಮೌಲೂದ್ ಓದುತ್ತಾ ಮುಂದೆ ಮುಂದೆ ನಡೆದಿದ್ದರು. ಬೇರೆಯವರು ಮೌಲೂದ್ ಹೇಳುತ್ತಿದ್ದಾಗ ಶವವು ಸಾವಧಾನವಾಗಿ ಸಾಗುತ್ತಿತ್ತು. ಯಾವಾಗ ಹಾಜಿ ಝೂಕೀರ್‌ರು ಎತ್ತರದ ಧ್ವನಿಯಲ್ಲಿ ಓದುತ್ತಿದ್ದರೋ ಜನಾಜಾ ಪಂಜರವು ಬೇಗಬೇಗನೆ ಸಾಗಿ ಝೂಕೀರ್‌ರ ಬಳಿ ನಿಲ್ಲುತ್ತಿತ್ತು. ಇದೇ ತೆರನಾಗಿ ಕಬರಸ್ತಾನದವರೆಗೆ ತಲುಪಿದರು ಹಾಗೂ ಈ ಮಹಾಪುರುಷರಿಗೆ ಸಮಾಧಿಯಲ್ಲಿಳಿಸಲಾಯಿತು. ಹಜ್ರತ್‌ರ ನಿಧನದ ಇಸ್ವಿ ಹಾಗೂ ಸಮಾಧಿ ಸ್ಥಳವು ತಿಳಿದು ಬಂದಿಲ್ಲ.

■

೭೩. ಸೈಯ್ಯದ್ ಜಾಫರ್ ಸಖ್ಖಾಫ್ (ಖ)

ಇವರು ಅರಬ್ಬಿನಸಾಅದಾತ್ ಹಾಗೂ ಬಿಜಾಪುರದ ಸುಪ್ರಸಿದ್ಧ ಸೂಫಿವರ್ಯರಲ್ಲೋರ್ವರಾಗಿರುವರು. ಷರಿಯತ್ತಿನ ನೇರ ಮಾರ್ಗದಲ್ಲಿ ನಡೆದು, ಜಗತ್ತಿನಿಂದ ವಿಮುಖರಾಗಿ ಯಾವದು ಸೂಫಿಗಳ ವಿಶೇಷ ರೀತಿಯಾಗಿದೆ. ಅದನ್ನು ಹೊಂದಿ ಅಲ್ಲಾಹುವಿನ ಸಾಂಗತ್ಯ ಪಡೆದರು. ಹಜ್ರತ್‌ರಿಂದ ಹಲವಾರು ಪವಾಡಗಳು ಜರುಗಿವೆ. ಮುಹಮ್ಮದ್ ಆದಿಲ್‌ಷಾಹ್‌ನ ಕಾಲದಲ್ಲಿ 'ಹಜರ ಮೌತ್' ಪ್ರದೇಶದಿಂದ ಎಲ್ಲಿ ಸೂಫಿವರ್ಯರಾದ ಅರಬ್ ಸಾಅದಾತ್ ಇರುವರೋ ಅಲ್ಲಿಂದ ಹೊರಟು ಪವಿತ್ರ ಪಟ್ಟಣವಾದ ಬಿಜಾಪುರಕ್ಕೆ ಆಗಮಿಸಿದರು.

ಒಂದು ದಿನ ಹಜ್ರತ್‌ರು ಅಲಿಆದಿಲಶಾಹ್ ಪ್ರಥಮನ ಸಮಾಧಿಯ ಕಟ್ಟಡದಲ್ಲಿ ಮಹಡಿಯ ಮೇಲೆ ತನ್ನ ಶಿಷ್ಯ ಹಾಗೂ ಹಿತೈಷಿಗಳೊಂದಿಗೆ ಇರುತ್ತಿದ್ದರು. ಕೆಹ್ವಾ (ಕಾವಾ) ಕಷಾಯವನ್ನು ಅವರೊಂದಿಗೆ ಸೇವಿಸುತ್ತಿದ್ದಾಗ ಆ ಕಾಲದ ಓರ್ವ ಮಹಾಪುರುಷರು ಆ ಹಾದಿಯಿಂದ ಎಲ್ಲಿಗೋ ಹೊರಟಿದ್ದರು. ಆಗ ಅವರು ಮಹಡಿಯ ಸಮೀಪ ಬಂದರು. ಹಜ್ರತ್‌ರು ಒಂದು ಕೆಹ್ವಾಕಷಾಯದ ಬಟ್ಟಲನ್ನು ಆ ಮಹಾಪುರುಷರಿಗೋಸ್ಕರ ಮಹಡಿಯಿಂದ ಕೆಳಗಡೆಗೆ ಬಿಟ್ಟರು. ಹಜ್ರತ್‌ರ ಕರಾಮತ್ತಿನಿಂದ ಆ ಕೆಹ್ವಾ ತುಂಬಿದ ಬಟ್ಟಲು ಆ ಮಹಾಪುರುಷರ ಕೈಯ್ಯಲ್ಲಿ ಒಂದು ಹನಿಯೂ ಹೊರಬೀಳದಂತೆ ಅವರ ಕೈಯಲ್ಲಿ ತಲುಪಿತು. ಯಾರೋ ತುಂಬಾ ಜಾಗರೂಕತೆಯೊಂದಿಗೆ ಕೈಯಲ್ಲಿ ಹಿಡಿದು ತಂದಿರುವರೋ ಎಂಬಂತೆ !

ಹಜ್ರತ್‌ರ ಅವಧಿಯಲ್ಲಿ ವೈರಿಯ ಬ್ರಹತ್ ಸೈನ್ಯವು ಬಹಳಷ್ಟು ಮದ್ದುಗುಂಡಿನೊಂದಿಗೆ ಕೋಟೆಯ ಸುತ್ತಲೂ ಮುತ್ತಿಗೆ ಹಾಕಿತು. ಪಟ್ಟಣದ ಜನರು ಈ ಮುತ್ತಿಗೆ ಹಾಗೂ ಯುದ್ಧದಿಂದ ತೊಂದರೆಗೊಳಗಾದರು. ಸುಲ್ತಾನ್ ಮುಹಮ್ಮದ್ ಆದಿಲ್‌ಶಾಹ್‌ನು ಹಜ್ರತ್‌ರ ಸೇವೆಯಲ್ಲಿ ಹಾಜರಾಗಿ ಈ ಆಪತ್ತಿನಿಂದ ಪಾರಾಗುವದಕ್ಕಾಗಿ 'ದುವಾ' ಮಾಡಲು ಪ್ರಾರ್ಥಿಸಿದನು. ಹಜ್ರತ್‌ರು ಆತನ ವಿನಂತಿಯನ್ನು ಪರಿಗಣಿಸಿ ಹೀಗೆಂದರು. 'ತೋಪು ಹಾರಿಸುವವನಿಗೆ ಮದ್ದುಗುಂಡನ್ನು ತಮ್ಮ ಅನುಮತಿ ಇಲ್ಲದೆ ಹಾರಿಸಬಾರದೆಂದು ಆದೇಶ ನೀಡಬೇಕು. ಬಾದಶಾಹನು ಇದನ್ನು ಶಿರಸಾ ಪಾಲಿಸಲು ಆಜ್ಞೆ ನೀಡಿದನು. ಅದರ ನಂತರ ಹಜ್ರತ್‌ರು ಸ್ವತಃ ಬುರುಜಿನ ಮೇಲೆ ಹೋಗಿ ವೈರಿಯ ಸೈನ್ಯದೆಡೆಗೆ ಮುಖಮಾಡಿ ತೋಪಚಿಗಳಿಗೆ ಆದೇಶ ನೀಡಿದರು. ತೋಪನ್ನು ಹಾರಿಸಿರಿ. ಸ್ವಲ್ಪೇ ಸಮಯದಲ್ಲಿ ವೈರಿಗಳ ಸೈನ್ಯವು ಸೋಲನ್ನಪ್ಪಿತ್ತು. ಯಾರು ತೋಪಿನ ಗುಂಡುಗಳಿಂದ ಉಳಿದಿದ್ದರೋ ಓಡಿ ಹೋದರು. ಸುಲ್ತಾನ್ ಮುಹಮ್ಮದ್‌ನು ತನಗೆ ಯಶಸ್ಸು ಹಾಗೂ ವೈರಿಗೆ ಸೋಲು ಸಿಗಲು ತುಂಬಾ ಸಂತೋಷಗೊಂಡು ಹಾಗೂ

ಆಭಾರಿಯಾಗಿ ಚಿನ್ನದ ನಾಣ್ಯಗಳ ಚೀಲಗಳನ್ನು ಮತ್ತು ಗ್ರಾಮಗಳನ್ನು ಸನದಿನೊಂದಿಗೆ ಹಜ್ರತ್‌ರಿಗೆ ಅರ್ಪಿಸಿದನು. ಹಜ್ರತ್‌ರು ಅದನ್ನು ಸ್ವೀಕರಿಸದೇ ತಿರುಗಿ ಕಳುಹಿಸಿದರು. ಬಾದಶಹನು ತುಂಬಾ ವಿಧವಿಧವಾಗಿ ಪ್ರಯತ್ನಿಸಿದಾಗ ಹಜ್ರತ್‌ರು ಕೇವಲ ಕೆಲವು ನಾಣ್ಯಗಳನ್ನು ಸ್ವೀಕರಿಸಿ ಬಡಜನರಲ್ಲಿ ಹಂಚಿದರು. ಹಜ್ರತ್‌ರ ನಿಧನವು ಜೀಖಾಯಿದಾದ ೨೦ನೆಯ ದಿನಾಂಕ, ಹಿಜ್ರಿಶಕೆ ೧೦೫೭ರಂದು ಆಯಿತು. ನೌಬಾಗ್‌ದ ಬಳಿ ಇವರ ಸಮಾಧಿ ಇರುವದು. ಸಮಾಧಿಯ ಸುತ್ತಲೂ ಅಲಂಕೃತ ಕಟ್ಟಡವಿರುವದು. ಹಜ್ರತ್‌ರ ಸಮಾಧಿ ಸ್ಥಳವು ಪ್ರಸಿದ್ಧ ಯಾತ್ರಾಸ್ಥಳವಾಗಿದೆ. ಪ್ರತಿ ಗುರುವಾರದಂದು ಫಾತೆಹಾಖಾನಿಯ ಪರಂಪರೆಯು ಜಾರಿಯಲ್ಲಿರುವದು. ಹಜ್ರತ್‌ರ ಸಮಾಧಿ ಸ್ಥಳದ ಬಳಿ ಬಹಳಷ್ಟು ಸಾಅದಾತ್‌ರು ಹಾಗೂ ವಿದ್ವಾಂಸರ, ಗುಣೀಜನರ ಸಮಾಧಿಗಳು ಇರುವವು. ಈ ಸಮಾಧಿಗಳ ನಡುವೆ ಓರ್ವ ಹಜ್ರತ್ ಸೈಯ್ಯದ್ ಹನೀಫ್ ಸಖ್ವಾಫ್‌ರು ಇರುವರು. ಅವರು ಪವಾಡ ಪುರುಷರಾಗಿದ್ದರು ಹಜ್ರತ್‌ರ ಸಮಾಧಿಯ ಚಬೂತರಾದ(ಪೀಠ) ಪೂರ್ವ ದಿಕ್ಕಿನಲ್ಲಿರುವ ಮೆಹರಾಬ್‌ದ (ಮಾಡು) ಬಳಿ ಇರುವದು. ಹಾಗೂ ಅವರ ನಂತರದ ಜನರಲ್ಲಿ ಸೈಯ್ಯದುಸ್ಸಾದಾತ್ ಹಜ್ರತ್ ಸೈಯ್ಯದ್ ಅಲ್ವಿ ಬುರೂಮ್ (ಖು)ರು ಮಹಾಪುರುಷರಾದ ಹಜ್ರತ್ ಸೈಯ್ಯದ್ ಅಹ್ಮದ್ ಬುರೂವ್‌ರ ಮೊಮ್ಮಗರಾಗಿರುವರು. ಹಾಗೂ ಪುಸ್ತಿಕೆ ಬರೆದಿರುವವರು ಇವರೂ ಸಹ ಇಲ್ಲಿಯೇ ಸಮಾಧಿಸ್ಥರಾಗಿರುವರು. ಇವರ ಸಮಾಧಿಯು ಬಯಲು ಪ್ರದೇಶದಲ್ಲಿರುವ (ಪೀಠ) ಚಬೂತರಾದ ಪೂರ್ವದಿಕ್ಕಿನಲ್ಲಿ ಇರುವದು. ಇವರ ಸಹೋದರನ ಪುತ್ರರಾದ ಹಜ್ರತ್ ಸೈಯ್ಯದ್ ಮುಸ್ತಫಾ ಬುರೂವ್ ಷಾಖುದ್ದಸ್ಸಿರುಹು ಎಂದು ಸುಪ್ರಸಿದ್ಧರಾಗಿರುವರು. ಅವರು ಲೇಖಕರ ತಂದೆ ಹಾಗೂ ಗುರು ಆಗಿರುವರು. ಹಾಗೂ ಇವರಿಗೆ ಮಾರ್ಗದರ್ಶನ, ಗ್ರಂಥಜ್ಞಾನ, ನೀಡಿರುವರು ತಮ್ಮ ಕಕ್ಕರಾದ ಹಜ್ರತ್ ಸೈಯ್ಯದ್ ಅಲಿ ಬುರೂಮ್(ಖು) ರ ಸಮಾಧಿಯ ಬಳಿ ಪೂರ್ವದಿಕ್ಕಿಗಿರುವ ಒಂದು ಬೇರೆಯ ಪೀಠದ ಮೇಲೆ ಸಮಾಧಿ ಇರುವದು. ಹಜ್ರತ್‌ರು ದೇವನಿಷ್ಠೆಯಲ್ಲಿ ಉನ್ನತ ದರ್ಜೆ ಹೊಂದಿದವರಾಗಿದ್ದರು. ಜನರಿಗೆ ಧರ್ಮಜ್ಞಾನವನ್ನು ಹಾಗೂ ಪ್ರಾಥಮಿಕ ಶಿಕ್ಷಣ ಕಡ್ಡಾಯ ವಿಧಿ ವಿಧಾನ ಈಮಾನ್ ನಮಾಜ್, ರೋಜಾ, ಜಕಾತ್ ಕುರಿತು ಮಾರ್ಗದರ್ಶನ ಮಾಡುತ್ತಿದ್ದರು. ಬಹಳ ಸಲ ಇರುಳಿನಲ್ಲಿ ಜನರು ಇವರಿಗೆ ಸಮಾಧಿಗಳ ಬಳಿ ಕಬರಸ್ಥಾನದಲ್ಲಿ ನೋಡುತ್ತಿದ್ದರು. ಹೇಳಲಾಗುತ್ತದೆ. ಈ ಸೂಫಿವರ್ಯರಿಗೆ ಕಷ್ಫೆಕುಬೂರ್ ಅಂದರೆ ಸಮಾಧಿಯಲ್ಲಿ ದಫನ್ ಮಾಡಲಾದ ಶವದ ಮೇಲೆ ಜರುಗುತ್ತಿರುವ ಸ್ಥಿತಿಗತಿಯ ಅರಿವು ಇವರಿಗಾಗುತ್ತಿತ್ತು. ಹಜ್ರತ್‌ರು ಪ್ರಾರಂಭದಲ್ಲಿ ಪಟ್ಟಣದ ಮೌಲ್ವಿಯವರಾದ ಹಜ್ರತ್ ಮೌಲಾನಾ ಸೈಯ್ಯದಿ ಅಬ್ದುಲ್ ರಹೀಂ (ಖು)ರ ಸೇವೆಯಲ್ಲಿ ನಂತರ ಮೌಲ್ವಿ ಮುಹಮ್ಮದ್ ಅಕ್ರಂ(ರ) ರ ಬಳಿ

ಜ್ಞಾನವನ್ನು ಹೊಂದಿದರು. ಹಾಗೂ ಸಫರ್ ತಿಂಗಳ ೨೧ನೆಯ ದಿನಾಂಕದಂದು ಹಿಜ್ರಿಶಕೆ ೧೨೨೦ರಲ್ಲಿ ಈ ಇಹಲೋಕವನ್ನು ತ್ಯಜಿಸಿ ಪರಲೋಕಕ್ಕೆ ಪಯಣಗೈದರು.

ಅಲ್ಲಾಮಾ (ವಿದ್ವಾಂಸ) ಮೌಲ್ವಿ ಅಬ್ದುಲ್ ಅಲಾ ಊರ್ಫ್ ಬಡೇಸಾಬ್ ಇವರು ವಲಿ ರಹ್ಮತುಲ್ಲಾಹ್‌ರ ಪುತ್ರರಾಗಿರುವರು ಇವರು ಮಹಾವಿದ್ವಾಂಸರು, ತಮ್ಮ ಜನ್ಮಸ್ಥಳವಾದ ಅರ್ಕಾಟದಿಂದ ವಿದ್ಯೆ ಪ್ರಾಪ್ತಿಗಾಗಿ ಹಜ್ರತ್ ಮೌಲಾನಾ ಸೈಯ್ಯದಿ ಅಬ್ದುಲ್ ರಹೀಂ(ಖು)ರ ಸೇವೆಯಲ್ಲಿ ಹಾಜರಾದರು. ಹಾಗೂ ಹಜ್ರತ್‌ರ ಆಜ್ಞೆಯಂತೆ ಇವರು ಮೌಲ್ವಿ ಮುಹಮ್ಮದ್ ಅಕ್ರಂ ಸದರ್ ಉರ್ಫ್ ಮ್ಯಾನಸಾಬ್(ರ)ರ ಬಳಿ ಓದುತ್ತಿದ್ದರು. ಜ್ಞಾನಪ್ರಾಪ್ತಿಯ ವೇಳೆಯಲ್ಲಿಯೇ ನಿಧನ ಹೊಂದಿದರು. ಹಜ್ರತ್‌ರು ಹಜ್ರತ್ ಸೈಯ್ಯದ್ ಜಾಫರ್ ಸಖ್ಖಾಫ್‌ರ ಸಮಾಧಿಯ ಬಳಿ ಸಮಾಧಿಸ್ಥರಾಗಿರುವರು.

ಅಬ್ದುಲ್ ಅಲಾ ಅವರ ಸ್ಮರಣಶಕ್ತಿಯು ಅಪಾರವಾಗಿತ್ತು. ತಮ್ಮ ಗುರುಗಳಾದ ಮುಹಮ್ಮದ್ ಆಕ್ರಂರ ಎದುರು ಪುಸ್ತಕ ತೆರೆದು ಯಾವ ಪಾಠ ಓದುತ್ತಿದ್ದರೋ ಮತ್ತೆ ಮರು ಓದು ಮಾಡುತ್ತಿರಲಿಲ್ಲ. ಆದರೆ ಪುಸ್ತಕದ ಒಳತಿರುಳನ್ನು ವಿಶದವಾಗಿ ವಿಶ್ಲೇಷಿಸುತ್ತಿದ್ದರು. ಗುರುಗಳಿಗೆ ನೆಮ್ಮದಿಯುಂಟಾಗುತ್ತಿತ್ತು. ಒಂದು ದಿನ ಅವರು ಪಾಠದಲ್ಲಿ ಬಹಳಷ್ಟು ಪ್ರಶ್ನೆ ಎತ್ತಿದರು. ಸಮಯ ಸರಿದದ್ದೇ ತಿಳಿಯಲಿಲ್ಲ. ಜೊಹರ್ (ಮದ್ಯಾಹ್ನದ ನಮಾಜ್)ದ ಸಮಯ ಮೀರುತ್ತಿತ್ತು. ಮೌಲ್ವಿ ಮುಹಮ್ಮದ್ ಅಕ್ರಂರು ಅವರ ಸಂವಾದ ಆಲಿಸಿ ಇದು ಸುನ್ನತೆ ಇದ್ದು. 'ಫರ್ಜ' ಅಂದರೆ ನಮಾಜ್‌ದ ವೇಳೆ ಮೀರಿ ಹೋಗುತ್ತಿದೆ. ಹಜ್ರತ್‌ರು ತಿಳಿದರು. ನಮಾಜಿನ ವೇಳೆ ಮೀರುತ್ತಿದೆ. ಪುಸ್ತಕ ಮುಚ್ಚಿಟ್ಟರು. ಹಾಗೂ ಹೀಗೆನ್ನಲಾಗುತ್ತದೆ. ಶೇಖ ಅಬ್ದುಲ್ ವಹಾಬ್‌ರು ಸಹಪಾಠಿಯಾಗಿದ್ದರು. ಅವರೊಂದಿಗೆಯೂ ಸಂವಾದ ನಡೆಸುತ್ತಿದ್ದರು. ಒಂದು ದಿನ ಯಾವುದೋ ಕಾರ್ಯಕ್ಕಾಗಿ ಒಂದು ಕಡೆ ಹೊರಟಿದ್ದರು. ಯಾವಾಗ ಅಬ್ದುಲ್ ಅಲಾರ ಮನೆಯ ಬಳಿ ತಲುಪಿದಾಗ ನೋಡುತ್ತಾರೆ ಅಬ್ದುಲ್ ಅಲಾ ಮಹಡಿಯ ಮೇಲೆ ಪುಸ್ತಕ ಓದುವುದರಲ್ಲಿ ಮಗ್ನರಾಗಿರುವರು. ಅಬ್ದುಲ್‌ವಹಾಬ್‌ರಿಗೆ ಪಾಠದಲ್ಲಿ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿದಿತ್ತು. ಮಹಡಿಯ ಕೆಳಗೆ ನಿಂತು ಅಬ್ದುಲ್‌ಅಲಾರಿಗೆ ಪ್ರಶ್ನಿಸಿದರು. ಅದರೊಂದಿಗೆ ಅವರು ಸುದೀರ್ಘವಾಗಿ ಉತ್ತರಿಸಲು ಪ್ರಾರಂಭಿಸಿದರು. ಬಹಳಷ್ಟು ಸಮಯ ಮೀರಿತು. ಆದರೂ ಅವರ ಪ್ರಶ್ನೋತ್ತರವು ಮುಗಿಯಲಿಲ್ಲ. ಅಬ್ದುಲ್ ವಹಾಬ್‌ರಿಗೆ ಅವಶ್ಯಕಾರ್ಯಕ್ಕೆ ಹೋಗುವದಿತ್ತು. ಉತ್ತರವನ್ನು ಅರಿಯಲು ಮತ್ತೆ ಸಮಯ ತೆಗೆಯುತ್ತೇನೆಂದು ತಮ್ಮ ಕೆಲಸಕ್ಕೆ ಹೊರಟುಹೋದರು. ತಮ್ಮ ಕೆಲಸ ಮುಗಿಸಿಕೊಂಡು ಸುದೀರ್ಘ ಅವಧಿಯ ನಂತರ ಮತ್ತೆ ಅದೇ ಹಾದಿಯಿಂದ ಮರಳಿದರು. ನೋಡುತ್ತಾರೆ. ಅಬ್ದುಲ್‌ಅಲಾ ಇನ್ನೂ ಸಹ ಅದೆ ತೆರನಾಗಿ ಉತ್ತರಿಸುತ್ತಿದ್ದಾರೆ ಹಾಗೂ ಅಲ್ಲಿ ಯಾರೂ ಇರಲಿಲ್ಲ. ಕೇಳಿದರು. ಯಾರೊಂದಿಗೆ ಸಂವಾದಿಸುತ್ತಿದ್ದೀರಿ,

ಅವರು ಉತ್ತರಿಸಿದರು. ನಿಮ್ಮ ಪ್ರಶ್ನೆಗೆ ಉತ್ತರಿಸುತ್ತಿರುವೆ. ಅಬ್ದುಲ್‌ವಹಾಬ್ ಹೀಗೆಂದರು. ಸ್ವಲ್ಪ ಸಮಯದಿಂದ ನನ್ನ ಕೆಲಸಕ್ಕಾಗಿ ಬಹಳ ದೂರ ಹೋಗಿದ್ದೆನು ಅಲ್ಲಿಂದ ಬಹಳಷ್ಟು ಸಮಯದ ನಂತರ ನನ್ನ ಕೆಲಸ ಮುಗಿಸಿ, ಈಗ ಬಂದೆನು. ನೀವು ಇನ್ನೂ ಸಹ ಉತ್ತರ ನೀಡುವದರಲ್ಲಿಯೇ ಇದ್ದೀರಿ. ಅಬ್ದುಲ್ ಅಲಾರು ಅವರ ಮೇಲೆ ಕೋಪ ಪ್ರದರ್ಶಿಸಿ ಹೇಳಿದರು. ನಾನು ತಿಳಿದಿದ್ದೇನು ನೀವು ಇಲ್ಲಿಯೇ ನಿಂತಿರುವಿರಿ, ನೀವು ಹೋಗುವಾಗ ನನಗೇಕೆ ಹೇಳಲಿಲ್ಲ. ಜನರು ಸಂಶಯ ಪಡುವರು ನಾನು ಹುಚ್ಚನಾಗಿರುವೆನೆಂದು.

ಹಜ್ರತ್ ಸೈಯ್ಯದ್ ಜಾಫರ್ ಸಖ್ಖಾಫ್‌ರ ಸಂತತಿಯು ಹೈದರಾಬಾದ್‌ದಲ್ಲಿರುವದು. ಹಾಗೂ ಹಜ್ರತ್‌ರ ಉರುಸು ಸೈಯ್ಯದ್ ಗೌಸ್ ಮುಖ್ಬಿಲ್ ಖಲೀಫಾಯೇ ಸಖ್ಖಾಫ್ ಹಾಗೂ ಸೈಯ್ಯದ್ ಅಹ್ಮದ್ ಮುಖ್ಬಿಲ್ ಖಲೀಫಯೇ ಸಖ್ಖಾಫ್. ಹಾಗೂ ಸೈಯ್ಯದ್ ದಾದೇಪೀರ್ ಸಾಹೇಬ್ ಇತರರು ಆಚರಿಸುವರು. ಹಾಗೂ ಇನಾಮ ರೂಪದಲ್ಲಿ ಪಡೆದ ಭೂಮಿಯಲ್ಲಿ ವಾಸಿಸುತ್ತಿರುವರು. ಇವರ ಸಂತತಿಯಿಂದ ಸೈಯ್ಯದ್ ಮಹಜಾರ್ ಸಾಹೇಬ್ ಹಾಗೂ ಸೈಯ್ಯದ್ ಹುಸೈನ್‌ಸಾಬ್ ಮುಖ್ಬಿಲ್‌ರೂ ಸಹ ಇರುವರು.

■

೬೪. ಹಜ್ರತ್ ಸೈಯ್ಯದ್ ಅಬೂಬಕರ್ ಬಾಫಖಿ (ಖು)

ಇವರು ನ್ಯಾಯಪ್ರಿಯ, ಜಾಣ ದೊರೆಯಾದ ಸುಲ್ತಾನ್ ಮುಹಮ್ಮದ್ ಆದಿಲ್‌ಷಾಹನ ಕಾಲದಲ್ಲಿ ಹಜರ್‌ಮೌತ್ ನಗರದಿಂದ ಈ ಪ್ರದೇಶಕ್ಕೆ ಆಗಮಿಸಿದರು. ಬಹಳಷ್ಟು ಅರಬರು ಹಜ್ರತ್‌ರ ಸಂಗಾತಿಗಳಾಗಿ ಆಗಮಿಸಿದರು. ಹಜ್ರತ್‌ರ ಖಾನ್‌ಖಾಹ್‌ದಲ್ಲಿ ಇರುತ್ತಿದ್ದರು. ದೇವಭಯ, ದೇವನಿಷ್ಠೆಯಲ್ಲಿ ಉನ್ನತ ದರ್ಜೆ ಹೊಂದಿದ್ದರು. ಜನಸೇವೆಯಲ್ಲಿ ತೊಡಗಿ ನೇರ ಮಾರ್ಗದರ್ಶನ ಮಾಡುತ್ತಿದ್ದರು. ಅಂತರ್ಜ್ಞಾನದ ಧಣಿಯಾಗಿದ್ದರು. ಹಜ್ರತ್‌ರು ಅರಬ ದೇಶದ ಸಾದಾತ್ ಹಾಗೂ ಬಿಜಾಪುರದ ಸುಪ್ರಸಿದ್ಧ ಸೂಫಿವರ್ಯರಲ್ಲಿ ಓರ್ವರಾಗಿರುವರು. ಆ ಕಾಲದ ಬಹಳಷ್ಟು ಔಲಿಯಾ, ಮಹಾಪುರುಷರೊಂದಿಗೆ ಭೇಟಿ ಹಾಗೂ ಸ್ನೇಹ ಸಂಬಂಧವನ್ನು ಇಟ್ಟುಕೊಂಡಿದ್ದರು. ಆ ಸಮೃದ್ಧ ಸತ್ಸಂಗಿಗಳೊಂದಿಗೆ ಆಸಾರ್ ಷರೀಫ್‌ನಲ್ಲಿ 'ಪ್ರವಾದಿಯವರ ಕೇಶಕಸ್ತೂರಿ' ದರ್ಶನ ಪಡೆದರು. ಹಜ್ರತ್‌ರ ನಿಧನವು ಶಾಬಾನ್ ತಿಂಗಳ ೨೨ನೆಯ ದಿನಾಂಕದಂದು ಜರುಗಿತು. ಇಸ್ವಿ ತಿಳಿದು ಬಂದಿಲ್ಲ.

ಹಜ್ರತ್‌ರ ಸಮಾಧಿಯು ಇವರ ಖಾನ್‌ಖಾಹ್‌ದ ಪ್ರಾಂಗಣದಲ್ಲಿ ಆಸಾರ ಷರೀಫ್‌ನ ಬಳಿ 'ಮೊಹಲ್ಲಯೆ ದರೀಬಾ'ದಲ್ಲಿ ಇರುವದು. ಹಜ್ರತ್‌ರ ನಿಧನವು ಅಲಿ ಆದಿಲಶಾಹ

ದ್ವಿತೀಯನ ಕಾಲದಲ್ಲಿ ಆಯಿತು. ಬಾದಶಾಹನು ಶಿಯಾಪಂಥ ಪಾಲಿಸುತ್ತಿದ್ದನು. ಆ ಕಾರಣಕ್ಕೆ ರಾಫಜಿಗಳಿಗೆ ಬಾದಶಹನ ಬಳಿ ಮಿತಿಮೀರಿದ ಸಾಮಿಪ್ಯ ಲಭಿಸುತ್ತಿತ್ತು. 'ಹಕಿಂ ಶಮಸಾ'ನ ಹವೇಲಿಗಳು ಹಾಗೂ ಆತನ ಸಂಬಂಧಿಗಳ ಮನೆಗಳು ಹಜ್ರತ್‌ರ ಮನೆಯ ಸಮೀಪವೇ ಇದ್ದವು. ಹಾಗೂ ಅವರು ಅಹಲೆ ಸುನ್ನತ ಅಂದರೆ ಸುನ್ನಿಪಂಥದ ಜನರೊಂದಿಗೆ ಅಸೂಯೆ ಹಾಗೂ ಮತ್ಸರವನ್ನಿಟ್ಟುಕೊಂಡಿದ್ದರು. ವಿಶೇಷವಾಗಿ ಹಜ್ರತ್‌ರೊಂದಿಗೆ ಮತ್ಸರ ಹೊಂದಿದ್ದರು. ಏಕೆಂದರೆ ಹಜ್ರತ್‌ರ ಹೆಸರು ಪ್ರಥಮ ಖಲೀಫಾ ಅಬೂಬಕರ್‌ರ ಹೆಸರಾಗಿತ್ತು. ಅದಕ್ಕಾಗಿ ಹಜ್ರತ್‌ರ ಸಮಾಧಿಯು ತಾವಿರುವ ಸ್ಥಳದ ಸಮೀಪ ಇರಲು ಬಯಸುತ್ತಿರಲಿಲ್ಲ. ಅಬ್ದುಲ್ ಮುಹಮ್ಮದ್ ಬಾದಶಾಹನ ಮಂತ್ರಿಯ ಗುರುಗಳು ಹಾಗೂ ಕಟ್ಟಾ ಸುನ್ನಿ ಪಂಥಾನುಯಾಯಿ ಹಾಗೂ ಮಹಾವಿದ್ವಾಂಸರು ಆಗಿದ್ದರು. ಶಿಯಾಪಂಥದ ಜನರ ವಿರೋಧವನ್ನು ಕಡೆಗಣಿಸಿ ಅಲ್ಲಿಯೇ ಹಜ್ರತ್‌ರ ಖಾನ್‌ಖಾಹ್‌ದಲ್ಲಿ ದಫನ್ ಮಾಡಿಸಿದರು.

ಹಜ್ರತ್‌ರ ಸುಪುತ್ರ ಹಜ್ರತ್ ಸೈಯ್ಯದ್ ಮುಹಮ್ಮದ್ ಅಬ್ದುಲ್‌ರೆಹಮಾನ್ ಮಕ್ಕಿ (ಖು) ಇವರೂ ಸಹ ಆಧ್ಯಾತ್ಮಿಕ ಜ್ಞಾನದ ಧಣಿಗಳಾಗಿದ್ದು ತಮ್ಮ ತಂದೆಯವರ ಸಮಾಧಿಯ ಪಕ್ಕದಲ್ಲಿ ಪೂರ್ವದಿಕ್ಕಿನಲ್ಲಿ ಸಮಾಧಿಸ್ಥರಾಗಿರುವರು. ಇದೇ ಸ್ಥಳದಲ್ಲಿ ಬಹಳಷ್ಟು ಸಾದಾತ್ ಹಾಗೂ ಹಜ್ರತ್‌ರ ಸಂಬಂಧಿಗಳು, ಅನುಯಾಯಿಗಳು ಸಮಾಧಿಸ್ಥರಾಗಿರುವರು. ವಿದ್ವಾಂಸರಲ್ಲಿ ಶ್ರೇಷ್ಠರಾದ, ಬರಲಿರುವ ಉನ್ನತ ದರ್ಜೆಯವರ ನವನೀತತೆ ಹೊಂದಿದ್ದ ಸೂಫಿಶ್ರೇಷ್ಠರಾಗಿದ್ದ ಹಾಗೂ ವಿವಿಧ ಸೂಫಿಪಂಥಗಳ ಅನುಯಾಯಿಗಳ ಗುರುವಾಗಿದ್ದ ಮೌಲಾನಾ ಸೈಯ್ಯದಿ ಅಬ್ದುಲ್ ರಹಿಂರು.

ನಫ್ಹಾನಲ್ಲಾಹು ಮಿನ್ ಬರ್ಕಾತಿಹಿಮ್
ವ ಬರ್ಕಾತಿ ಉಲೂಮಿಹಿವ
ಕಮಾಲಾತಿಹಿ ।

ಅಲ್ಲಾಹು ಇವರ ಜ್ಞಾನ ಹಾಗೂ ಪವಾಡಗಳ ಸಮೃದ್ಧಿಯಿಂದ ನಮಗೆ ಫಲನೀಡಲಿ.

ಹಜ್ರತ್ ಸೈಯ್ಯದ್ ಅಬ್ದುಲ್ ರಹಿಮಾನ್(ಖು)ರ ಸಮಾಧಿಯ ಹಿಂದುಗಡೆ ಸಮಾಧಿಸ್ಥರಾಗಿದ್ದಾರೆ. ಹಜ್ರತ್‌ರ ಮುರೀದ್‌ರೂ ಆಗಿದ್ದರು. ಹಜ್ರತ್ ಮೌಲಾನಾರು ದೇವನಿಷ್ಠರು, ಮಹಾವಿದ್ವಾಂಸರು, ತಸವ್ವುಫ್‌ನಲ್ಲಿ ಉನ್ನತಿ ಸಾಧಿಸಿದ್ದರು. ಹಜ್ರತ್‌ರ ವ್ಯಕ್ತಿತ್ವವು ಆ ಕಾಲದ ಅಭಿಮಾನವಾಗಿತ್ತು. ಹಾಗೂ ಪೂರ್ಣ ಆಯುಷ್ಯವನ್ನು ಏಕಾಂತದಲ್ಲಿ ದರ್ವೇಶಿಯಾಗಿ ಕಳೆದರು. ಜಗತ್ತಿನಿಂದ ವಿರಾಗ ಹೊಂದುವಲ್ಲಿ ಮೇಲುಗೈ ಸಾಧಿಸಿದ್ದರು. ಹಾಗೂ ಅವರ ಕಾಲದ ಅಮೀರರು ಅಂದರೆ ನವಾಬ್ ಆಸಿಫ್ ಜಾ ಹಾಗೂ ಹಿದಾಯತ್ ಮುಹಿಯುದ್ದೀನ್ ಖಾನ್‌ರು ಹಜ್ರತ್‌ರ ಅನುಯಾಯಿಗಳಾಗಿದ್ದರು. ಹಾಗೂ ಹಜ್ರತ್‌ರನ್ನು ಬಹುವಿಧವಾಗಿ ಗೌರವಿಸುತ್ತಿದ್ದರು. ಯಾರಿಂದಲೂ ಯಾವುದೇ

ವಿಧದ ಕೊಡುಗೆ ಕಾಣಿಕೆಗಳನ್ನು ಸ್ವೀಕರಿಸುತ್ತಿರಲಿಲ್ಲ. ಹಜ್ರತ್‌ರು ಬಿಜಾಪುರದ ವಿನಾಶ ಹಾಗೂ ಸಂಘರ್ಷದ ಸಮಯದಲ್ಲಿ ಪ್ರೌಢಾವಸ್ಥೆಗೆ ತಲುಪಿದರು. ಜ್ಞಾನದಾಹಿಗಳಾಗಿದ್ದರು. ಆ ಅವಧಿಯಲ್ಲಿ ಮದರಸಾಗಳು ಯಾವುವು ಜ್ಞಾನಾರ್ಥಿಗಳಿಂದ ತುಂಬಿರುತ್ತಿದ್ದವು ಅವು ಈಗ ವಿನಾಶದ ಕಾರಣ ನಿಸ್ತೇಜವಾಗಿದ್ದವು. ಹಾಗೂ ಅಲ್ಲಿ ಶಿಕ್ಷಣದ ಸುಳಿವೂ ಇರಲಿಲ್ಲ. ಆದರೆ ಕೆಲವು ಸ್ಥಳಗಳಲ್ಲಿ ಹಜ್ರತ್ ಮೌಲಾನಾರವರು ಕೆಲವು ಕಡೆ ವ್ಯಾಕರಣ, ಕೆಲವು ಕಡೆ ತರ್ಕಶಾಸ್ತ್ರ ಹಾಗೂ ಕೆಲವೆಡೆ ಫಾರ್ಸಿ ಭಾಷೆಯನ್ನು ಕಲಿತರು. ಬಾದಶಾಹ್ ಆಲಂಗೀರ್‌ನ ಬರುವಿಕೆಯು ನಂತರ ಖಾಜಿ ಅಬುಲ್ ಬರ್ಕಾತ್‌ರಿಂದ ಬಹುವಿಧವಾದ ವಿದ್ಯೆಯನ್ನು ಅರ್ಜಿಸಿದರು. ಅದರ ನಂತರ ಅರವತ್ತು ವರ್ಷಗಳವರೆಗೆ ಶಿಕ್ಷಣ ನೀಡುವಲ್ಲಿ ವ್ಯಯಿಸಿದರು. ಬಹಳಷ್ಟು ಜನರು ಮೂರು ಪೀಳಿಗೆಯವರೆಗೆ ಹಜ್ರತ್‌ರಿಂದ ವಿದ್ಯೆ ಪಡೆದರು. ಪಟ್ಟಣದ ಎಲ್ಲ ಪೀರಜಾದೆ ಹಾಗೂ ಸಮಸ್ತ ವಿದ್ವಾಂಸರು ಹಜ್ರತ್‌ರ ಶಿಷ್ಯವೃಂದದಲ್ಲಿದ್ದವರಾಗಿದ್ದರು. ಪ್ರಾಪಂಚಿಕ ಜ್ಞಾನದೊಂದಿಗೆ ಆಧ್ಯಾತ್ಮಿಕ ಜ್ಞಾನವನ್ನು ಕಲಿಸುತ್ತಿದ್ದರು. ಇವರು ಹಜ್ರತ್ ಗಂಜುಲ್ ಉಲೂಮ್(ಖು)ರ ಆತ್ಮದಿಂದಲೂ ಸಮೃದ್ಧಿ ಹೊಂದಿದವರಾಗಿದ್ದಾರೆ. ಇರುಳಿನಲ್ಲಿ ಹಜ್ರತ್‌ರ ಆತ್ಮಿಕ ಮದರಸಾಕ್ಕೆ ಹೋಗುತ್ತಿದ್ದರು. ಇದನ್ನು ದೇವನೇ ಬಲ್ಲ ! ವಲ್ಲಾಹ್ ಆಲಮ್ !!

ಹಜ್ರತ್ ಮೌಲಾನಾ ಬುಧವಾರದಂದು ಜಮಾದಿಸ್ಸಾನಿಯ ೧೯ನೆಯ ದಿನ ೧೧೬೮ರಂದು ನಿಧನ ಹೊಂದಿದರು. ಇವರ ನಿಧನದ ದಿನಾಂಕವು 'ಆಫ್ತಾಬೆ ರಫ್ತಾ' ಎಂದಿರುವದು. ಅರಬ್ಬಿಯಲ್ಲಿ 'ಲಿಜಾಲಿಕಾಅಲ್ ಫೌಜುಲ್ ಕಬೀರ್' (ಇದೇ ಅತ್ಯುತ್ಕೃಷ್ಟವಾದ ಯಶಸ್ಸಾಗಿದೆ) ಎಂದು ಬರೆಯಲಾಗಿದೆ. ಹಜ್ರತ್ ಮೌಲಾನಾ ತಮ್ಮ ಶಿಷ್ಯಂದಿರಲ್ಲಿಯ ಮೌಲ್ವಿ ಅಬ್ದುಲ್ ರೆಹಮಾನ್‌ರಿಗೆ ಮಹಾವಿದ್ವಾಂಸರು ಹಾಗೂ ಅತ್ಯುತ್ತಮ ಶಿಷ್ಯರಾಗಿದ್ದರು. ತಮ್ಮ ಮದರಸಾದ ಶಿಕ್ಷಕರನ್ನಾಗಿಸಲು ಬಯಸುತ್ತಿದ್ದರು. ಆದರೆ ಕೊನೆಗಾಲದಲ್ಲಿ ಮೌಲ್ವಿ ಅಬ್ದುಲ್‌ರೆಹಮಾನ್‌ರ ಪ್ರಕೃತಿಯಲ್ಲಿ ಉನ್ಮಾದ ಕಂಡು ಬಂದಿತು.

ಹಜ್ರತ್ ಅಬೂಬಕರ್ ಬಾಫಖಿ(ಖು)ರ ಸಂತಾನದಿಂದ ಈಗ ಜೈನ್‌ಸಾಬ್ ವ ಹಸನ್‌ಸಾಬ್ ವ ಸಾಹೇಬ ಹಜ್ರತ್ ವ ಸೈಯ್ಯದ್ ಅಬೂಬಕರ್ ವ ಸೈಯ್ಯದ್ ಅಬ್ದುಲ್ ರೆಹಮಾನ್ ವ ಸೈಯ್ಯದ್ ಹುಸೈನ್ ವ ಸೈಯ್ಯದ್ ಅಹ್ಮದ್ ಇತ್ಯಾದಿ ಲೋಣಿ ಗ್ರಾಮದಲ್ಲಿ ಜಾಗೀರ್‌ವಿದೆ. ಅದು ಸಾಂಗಲಿ ತಾಲೂಕ ಪ್ರದೇಶದಲ್ಲಿದೆ ಹಾಗೂ ಸೈಯ್ಯದ್ ಹುಸೈನ್ ಹೆಸರಿನವರು ಹೈದರಾಬಾದ್‌ನಲ್ಲಿ ಸರ್ಕಾರಿ ಸೇವೆಯಲ್ಲಿರುವರು.

■

೬೫. ಹಜ್ರತ್ ಸೈಯ್ಯದ್ ಅಹ್ಮದ್‌ನಜೀರ್(ಖ)

ಇವರು ಅರಬ್ಬಿನ ಸಾದಾತ್‌ರೂ ಹಾಗೂ ಈ ಪ್ರದೇಶದ ಪ್ರಮುಖ ಸೂಫಿಗಳಾಗಿರುವರು. ಅರಬ್ಬಿನ ಸಾದಾತ್‌ರ ಜನ್ಮಸ್ಥಳವಾಗಿರುವ 'ಹಜ್ರತ್‌ಮೌತ್'ದಿಂದ ಯಾತ್ರೆಗೈದು ಸುಲ್ತಾನ್ ಮುಹಮ್ಮದ್ ಅದಿಲ್‌ಶಾಹ್‌ನ ಸಮೃದ್ಧ ಅವಧಿಯಲ್ಲಿ ಈ ಪುಣ್ಯಪ್ರದ ಪ್ರದೇಶವಾದ ಬಿಜಾಪುರಕ್ಕೆ ಆಗಮಿಸಿ ಇಲ್ಲಿಯೇ ತಂಗಿದರು. ಹಾಗೂ ಜ್ಞಾನಾರ್ಥಿಗಳ ಮಹಾಗುರುವಾಗಿದ್ದರು. ಆ ಕಾಲದ ಮಹಾಪುರುಷರು ಹಾಗೂ ಸೂಫಿಸಂತತಿಯವರೊಂದಿಗೆ ಸ್ನೇಹ ಸಂಬಂಧ ವೃದ್ಧಿಸಿ ಅವರಿಂದ ಸಮೃದ್ಧಿ ಪಡೆದರು. ಪೀರ್‌ದಸ್ತಗೀರ ಹಜ್ರತ್‌ಶಾಹ್ ಹಾಷಿಂ (ಖ)ರೊಂದಿಗೆ ಅನನ್ಯ ಸಂಬಂಧ ಹೊಂದಿದ್ದರು. ಹಜ್ರತ್‌ರ ಸಮಾಧಿಯು ಬಿಜಾಪುರ ಕೋಟೆಯ ಹೊರಭಾಗದಲ್ಲಿ ಸಾರವಾಡ ದ್ವಾರದ ಕಡೆಗೆ ಇರುವದು. ಹಜ್ರತ್‌ರ ನಿಧನದ ಇಸ್ವಿಯು ತಿಳಿದುಬಂದಿಲ್ಲ.

ಹಜ್ರತ್‌ರ ಸಂತತಿಯಿಂದ ಸೈಯ್ಯದ್ ಮೊಹಸಿನ್‌ಸಾಬ್ ನಜೀರ್ ಆಸಾರ್ ಷರೀಫ್‌ದ ಬಳಿ ವಾಸಿಸುತ್ತಿರುವರು.

■

೬೬. ಹಜ್ರತ್ ಸೈಯ್ಯದ್ ಜೈನ್ ಮುಕ್ಬಿಲ್ (ಖ)

ಇವರೂ ಸಹ ಅರಬ್ಬಿನಿಂದ ಆಗಮಿಸಿದ ಸಾದಾತ್ ಹಾಗೂ ಬಿಜಾಪುರದ ಪ್ರಸಿದ್ಧ ಸೂಫಿವರ್ಯರಲ್ಲಿ ಓರ್ವರಾಗಿರುವರು. ಹಜ್ರತ್‌ರು 'ಹಜರ್‌ಮೌತ್'ದಿಂದ ಈ ಪ್ರದೇಶಕ್ಕೆ ಬರುವದನ್ನು ನಿಶ್ಚಯಿಸಿ ಈ ಪಟ್ಟಣಕ್ಕೆ ಆಗಮಿಸಿ ಇಲ್ಲಿಯೇ ವಾಸಿಸತೊಡಗಿದರು. ಇಲ್ಲಿಯ ಬಾದಶಾಹರ ದೃಷ್ಟಿಯಲ್ಲಿ ಅನುಪಮ ಗೌರವ ಹೊಂದಿದ್ದರು. ಹಜ್ರತ್‌ರ ಜೀವನೋಪಾಯಕ್ಕಾಗಿ ಬಹಳಷ್ಟು ಗ್ರಾಮಗಳನ್ನು ಜಹಗೀರಾಗಿ ಅರ್ಪಿಸಲಾಗಿತ್ತು. ಹಜ್ರತ್‌ರು ಶರೀಯತ್ ಪಾಲನೆಯಲ್ಲಿ ಅತ್ಯಂತ ನಿಷ್ಠೆಯುಳ್ಳವರಾಗಿದ್ದರು. ಜ್ಞಾನದ ಉನ್ನತ ಮಟ್ಟವನ್ನೂ ಮುಟ್ಟಿದ್ದರು. ಹಜ್ರತ್‌ರ ಗ್ರಂಥಾಲಯದಲ್ಲಿ ೯೦೦ ಸಂಪುಟಗಳು ಇದ್ದವು. ಅವುಗಳಲ್ಲಿ ಹಜ್ರತ್‌ರ ಕೈಯಿಂದ ಬರೆಯಲ್ಪಟ್ಟ ಹಸ್ತಪ್ರತಿಗಳು ಸುಮಾರು ೩೦೦ ರಷ್ಟು ಇದ್ದವು. ಬಹಳಷ್ಟು ಪುಸ್ತಕಗಳು ಅಲ್ಲಲ್ಲಿ ನೋಡಲು ಸಿಗುತ್ತವೆ. ಹಾಗೂ ಧರ್ಮಪ್ರಸಾರದಲ್ಲಿ ಜ್ಞಾನ ಪ್ರಸಾರದಲ್ಲಿ ತಮಗೆ ತಾವೇ ಸಾಟಿಯಾಗಿದ್ದರು. ಹಜ್ರತ್‌ರ ಧರ್ಮದೆಡೆಗೆ ನೀಡುವ ಕರೆಯು ಜನರ ಮನಮುಟ್ಟುತ್ತಿತ್ತು.

ಸುಲ್ತಾನ್ ಅಲಿ ಆದಿಲ್‌ಶಾಹ್ ದ್ವಿತೀಯನ ಅವಧಿಯಲ್ಲಿ ಆತನ ವೈರಿಯು

ಬ್ರಹತ್ ಸೈನ್ಯ ಹಾಗೂ ಯುದ್ಧ ಸಾಮಗ್ರಿಯೊಂದಿಗೆ ಬಿಜಾಪುರಕ್ಕೆ ಆಗಮಿಸಿ ಯುದ್ಧವನ್ನು ಪ್ರಾರಂಭಿಸಿದನು. ಅಲಿಆದಿಲ್‌ಶಾಹನು ಹಜ್ರತ್‌ರ ಕೃಪಾದೃಷ್ಟಿ ಹಾಗೂ 'ದುವಾ' ಬಯಸಿದನು. ಹಜ್ರತ್‌ರು ಒಂದು 'ತಾಯತ್'ವನ್ನು ತಮ್ಮ ಸ್ವಹಸ್ತದಿಂದ ಬರೆದು ನೀಡಿದರು ಹಾಗೂ ಎಚ್ಚರಿಕೆಯೊಂದಿಗೆ ಹೀಗೆಂದರು. ತೋಪನ್ನು ವೈರಿಯೆಡೆಗೆ ತಿರುಗಿಸಿ ಅದರ ಮುಖಕ್ಕೆ ಈ ತಾಯತವನ್ನು ಕಟ್ಟಿ ಆ ಕಡೆಗೆ ಮದ್ದು ಹಾರಿಸಿರಿ ಇನ್ಷಾಅಲ್ಲಾಹ್‌ತಾಲಾ (ಅಲ್ಲಾಹನು ಇಚ್ಛಿಸಿದರೆ) ವೈರಿಯ ಸಾಮರ್ಥ್ಯ ಕುಂದುವದು. ಹಾಗೂ ವೈರಿಯಿಂದ ಯಾವುದೇ ತೆರನಾದ ಹಾನಿಯು ನಿಮಗುಂಟಾಗುವದಿಲ್ಲ. ಹಜ್ರತ್‌ರ ಹೇಳಿಕೆಯನ್ನು ಅಕ್ಷರಶಃ ಪಾಲಿಸಲಾಯಿತು. ಆಗ ವೈರಿಯ ಸೈನ್ಯವು ಬೆನ್ನು ತೋರಿಸಿ ಓಡಿ ಹೋಯಿತು. ಈ ರೀತಿಯಲ್ಲಿ ಹಜ್ರತ್‌ರಿಂದ ಹಲವಾರು ಕರಾಮತ್ತುಗಳು ಪ್ರಕಟಗೊಂಡಿವೆ. ಹಜ್ರತ್‌ರ ಧರ್ಮಪ್ರಸಾರದ ಯಶೋಗಾಥೆಯು ಪ್ರತಿಯೊಬ್ಬರ ನಾಲಿಗೆಯ ಮೇಲೆ ನಲಿದಾಡುತ್ತವೆ. ಹಜ್ರತ್‌ರು ಆಲಂಗೀರ್ ಬಾದಶಾಹನೊಂದಿಗೆ ಭೇಟಿ ಮಾಡಿದ್ದರು. ಬಾದಶಾಹ ಹಾಗೂ ಆಡಳಿತಗಾರರ ದೃಷ್ಟಿಯಲ್ಲಿ ಗೌರವಸ್ಥಾನ ಹೊಂದಿದ್ದರು. ಹಜ್ರತ್‌ರ ನಿಧನವು ರಬ್ಬಿವುಲ್ ಅವ್ವಲ್ ತಿಂಗಳ ೨೫ನೆಯ ದಿನಾಂಕದಂದು ಆಯಿತು. ಶಾಹಪೇಟಿಯಲ್ಲಿ ಇವರ ಸಮಾಧಿಯು ಉಪಸ್ಥಿತವಿರುವದು. ಹಜ್ರತ್‌ರ ಸುಪುತ್ರರಾದ ಹಜ್ರತ್ ಸೈಯ್ಯದ್ ಅಬ್ದುಲ್ಲಾಹ್ ಮುಕ್ಬಿಲ್ ಅವರು ಪುಣ್ಯಪುರುಷರಾಗಿದ್ದರು. ಆ ಕಾಲದ ಅಮೀರರೂ ಹಜ್ರತ್‌ರನ್ನು ಬಹಳ ಗೌರವಪೂರ್ವಕವಾಗಿ ನೋಡಿಕೊಳ್ಳುತ್ತಿದ್ದರು. ಹಜ್ರತ್‌ರು ತಮ್ಮ ತಂದೆಯ ಸಮಾಧಿಯ ಪಕ್ಕದಲ್ಲಿ ಸಮಾಧಿಸ್ಥರಾಗಿರುವರು.

ಹಜ್ರತ್‌ರ ಸಂತತಿಯಿಂದ ಸೈಯ್ಯದ್‌ಶಾಹ್ ಅಲಿಸಾಹೇಬ್ ಮತ್ತು ಗೌಸ್‌ಸಾಹೇಬ ವಗೈರಾ ಬಿಜಾಪುರದಲ್ಲಿ ವಾಸಿಸುತ್ತಿರುವರು. ಲೋಗಾಂವ ಗ್ರಾಮದಲ್ಲಿಯೂ ಇರುವರು.

■

೬೭. ಹಜ್ರತ್‌ಶೇಖ ಫರೀದ್ (ಖ)

ಇವರು ಸೂಫಿವಂಶಜರು ಹಾಗೂ ಮಹಾಪುರುಷರಲ್ಲಿ ಓರ್ವರಾಗಿರುವರು. ಶರೀಯತ್ ಕಾನೂನು ಅರಿಯುವಲ್ಲಿ ಹಾಗೂ ದರವೇಶಿತನದಲ್ಲಿ ಆ ಕಾಲದ ಅತ್ಯಂತ ಶ್ರೇಷ್ಠ ವ್ಯಕ್ತಿಯೂ ಯಾಗಿದ್ದರು. ಹಗಲಿರುಳು ಅಲ್ಲಾಹುವಿನ ಆರಾಧನೆಯಲ್ಲಿ ತೊಡಗಿರುತ್ತಿದ್ದರು. ಸೂಫಿಯಾನಾ ಶಾಯರಿಯಲ್ಲಿಯೂ ಆಸಕ್ತಿ ತೋರುತ್ತಿದ್ದರು. ಹಜ್ರತ್ ಮೌಲಾನಾ ಹಬೀಬುಲ್ಲಾಹ್ ಸಿಬ್ಗತುಲ್ಲಾಹಿ (ಖ)ರ ಪುಸ್ತಿಕೆಯಲ್ಲಿ ಹಜ್ರತ್ ಮೌಲಾನಾರ ಕುರಿತು ಹೀಗೆ ಹೇಳಲಾಗಿದೆ. ನಾನು ಒಂದು ರಾತ್ರಿ ಮನೆಯಲ್ಲಿ

ಮಂಚದ ಮೇಲೆ ಕುಳಿತಿದ್ದೆನು, ಒಳಗಿನಿಂದ ಚಿಲಕ ಹಾಕಿಕೊಂಡಿದ್ದೆನು. ಒಳಗೆ ಯಾರೂ ಬರಬಾರದೆಂದು ಯಾವಾಗಲೂ ಮನೆಯ ಬಾಗಿಲಿಗೆ ಕೀಲಿ ಹಾಕಲಾಗುತ್ತಿತ್ತು. ಅಕಸ್ಮಿಕವಾಗಿ ನೋಡಿದೆನು. ರಾತ್ರಿಯ ಕೊನೆಯ ಪ್ರಹರದಲ್ಲಿ ಹಜ್ರತ್‌ಶೇಖ ಫರೀದರು ಒಳಬಂದು ಕುಳಿತಿರುವರು. ನಾನು ಕೇಳಿದೆನು ಶೇಖ ಫರೀದರೇ ಇಲ್ಲಿ ಹೇಗೆ ಬಂದಿರಿ. ಆಗ ಹಜ್ರತ್‌ರು ಹೀಗೆಂದರು. ಅಲ್ಲಾಹುವು ಕರೆತಂದಿರುವನು. ಅದರ ನಂತರ ಬಾಗಿಲು ತೆರೆದು ಹೊರಾಂಗಣದಲ್ಲಿ ಬಂದು ಕುಳಿತೆವು. ಹಾಗೂ ಫಜರ್ ನಮಾಜ್ ಸಲ್ಲಿಸಿದೆವು. ಮನೆಯ ಬಾಗಿಲು ಹೀಗೆಯೇ ಮುಚ್ಚಲ್ಪಟ್ಟಿತ್ತು. ಹಜ್ರತ್ ಶೇಖ ಫರೀದ್(ಖು)ರ ನಿಧನದ ದಿನಾಂಕ ಹಾಗೂ ಇಸ್ವಿ ಹಾಗೂ ಉರುಸ್‌ದ ದಿನ ಹಾಗೂ ಅವರ ಸಮಾಧಿ ಸ್ಥಳವು ತಿಳಿದುಬಂದಿಲ್ಲ.

■

೭೮. ಹಜ್ರತ್ ಶೇಖ ಅಹ್ಮದ್ ಬುರ್ಖಾಪೋಶ(ಖು)

ಇವರು ಬಿಜಾಪುರದ ಪ್ರಸಿದ್ಧ ಸೂಫಿವರ್ಯರಲ್ಲಿ ಓರ್ವರಾಗಿರುವರು. ಶರೀಯತ್ ಹಾಗೂ ತರೀಖತ್‌ನನ್ನು ನಿಷ್ಠೆಯಿಂದ ಪಾಲಿಸುತ್ತಿದ್ದರು. ಹಜ್ರತ್‌ರ ಜೀವನ ಚರಿತ್ರೆಯ ವಿವರಗಳು ತಿಳಿದುಬಂದಿಲ್ಲ. ಹಜ್ರತ್‌ರ ನಿಧನವು ರಬ್ಬಿವುಲ್ ಅವ್ವಲ್ ತಿಂಗಳ ೧೦ನೆಯ ದಿನಾಂಕದಂದು ಆಯಿತು. ಹಾಗೂ ಸಮಾಧಿಯು ಬಿಜಾಪುರದ ಕೋಟೆಯೊಳಗೆ ಶಹಾಪುರ ದ್ವಾರದ ಬಳಿ ಸ್ಥಿತವಿರುವದು.

ಹಜ್ರತ್‌ರ ಸಂತತಿಯಿಂದ ಸೈಯ್ಯದ್‌ಶಾಹ್ ಹಜಾದಿಸಾಹೇಬ್ ತಾಲೂಕಾ ಇಂಡಿಯಲ್ಲಿ ಇರುವರು. ಹಜ್ರತ್‌ರ ವಾರ್ಷಿಕ ಉರುಸ್ ಉತ್ಸವ ಜರುಗುವದು.

■

೭೯. ಹಜ್ರತ್ ಮೌಲಾನಾ ಶೇಖ ಸಾಲೆಹ್ ಖಾದ್ರಿ (ಖು)

ಇವರು ಧಾರ್ಮಿಕ ವಿದ್ವಾಂಸರು, ಪವಾಡ ಪುರುಷರೂ ಆಗಿದ್ದರು. ಬಿಜಾಪುರದ ಪ್ರಮುಖ ಸೂಫಿವರ್ಯರಾಗಿದ್ದರು. ಉಲ್ಲೇಖವಿದೆ. ಹಜ್ರತ್‌ರು ತಮ್ಮ ನಿಧನದ ಸಮಯ ತಿಳಿದು ತಮ್ಮ ದಫನ್‌ಗಾಗಿ ತೊರವಿ ಗ್ರಾಮದ ಕಾಡಿನಲ್ಲಿ ನೆಲದ ಒಳಗೆ ಒಂದು ಗುಹೆಯಂತಿರುವ ಭಾಗದಲ್ಲಿ ಒಂದು ಕೋಟೆಯಂತೆ ನಿರ್ಮಿಸಿ ಅದನ್ನು ಗೋರಿಯನ್ನಾಗಿಸಿದರು. ತಮ್ಮ ಸಂಗಾತಿಗಳ ಆಶಯ ಹಾಗೂ ವಿನಂತಿಯ ಮೇರೆಗೆ ಆ ಗೋರಿಯ ಮೇಲ್ಗಡೆ ಕುರುಹು ಆಗಿ ಒಂದು ಪುಟ್ಟ ಗುಂಬಜ್ ನಿರ್ಮಿಸಿದರು.

ಆ ಸಮಯದಲ್ಲಿ ಹೀಗೆಂದರು. ನನಗೆ ಅಗೋಚರ ವಾಣಿಯ ಮುಖಾಂತರ ಈ ಸುದ್ಧಿಯನ್ನು ತಲುಪಿಸಲಾಗಿದೆ. ಈ ಪ್ರದೇಶದಲ್ಲಿ (ತೊರವಿ) ಒಂದು ಪಟ್ಟಣ ನಿರ್ಮಿಸಲಾಗುವದು. ಹಾಗೂ ಅದರಲ್ಲಿ ಬಾದಶಹನು ಕೆಲವರ್ಷಗಳವರೆಗೆ ಆಡಳಿತ ಹಾಗೂ ಜೀವನ ನಿರ್ವಹಿಸುವನು ತದನಂತರ ಮತ್ತೆ ನಿರ್ನಾಮ ಹೊಂದುವದು. ಕೆಲ ಸಮಯದ ನಂತರ ಸುಲ್ತಾನ್ ಇಬ್ರಾಹಿಂ ಆದಿಲ್‌ಶಾಹ್‌ನು ನವರಸಪುರ ನಗರದ ಬುನಾದಿ ಹಾಕಿದನು. ಮತ್ತು ೧೬ ವರ್ಷದವರೆಗೆ ಅಲ್ಲಿ ಆಡಳಿತ ನಡೆಸಿ-ಮತ್ತೆ ಬಿಜಾಪುರಕ್ಕೆ ಮರಳಿ ಬಂದು ಸಾಮ್ರಾಜ್ಯ ನಡೆಸಿದನು. ಹಾಗೂ ನವರಸಪುರ ಪಟ್ಟಣ ನಿರ್ನಾಮವಾಯಿತು. ಆ ಕಾಲದ ಕೆಲ ಜನರು ಹೀಗೆನ್ನುವರು ಇರುಳಿನಲ್ಲಿ ಓರ್ವ ಅಗೋಚರ ವ್ಯಕ್ತಿ, ಗೋದಿವರ್ಣದ ಉದ್ದನೆಯ ಗಡ್ಡದ ಶ್ವೇತವರ್ಣದ ಬಟ್ಟೆಯುಟ್ಟ ಶೇಖ ಸಾಲೆಹ್‌ರಂತಹ ಮುಖಚರ್ಯೆಯುಳ್ಳವರು ಅವರ ಗುಂಬಜದಿಂದ ಪ್ರಕಟವಾಗಿ ಅತ್ತಿತ್ತ ತಿರುಗಾಡಿ ಮತ್ತೆ ಅಲ್ಲಿ ಮರಳಿ ಮಾಯವಾಗುತ್ತಿದ್ದರು. ಹಾಗೂ ಕೆಲ ಸಲ ಅಲ್ಲಿ ಅಲ್ಲಾಹುವಿನ ಸ್ತುತಿಯ ಧ್ವನಿಯೂ ಕೇಳಿಸುತ್ತಿತ್ತು. ಮಹಾಪುರುಷರಿಂದ ಇಂತಹ ನಿಗೂಢ ಪವಾಡಗಳು ಜರುಗುವದು ಹೊಸವಿಷಯವೇನಲ್ಲ!

■

೭೦. ಹಜ್ರತ್ ಮೌಲಾನಾ ಮುಹಿಯುದ್ದೀನ್ ಖಾದ್ರಿ (ಖು)

ಇವರು ಬಿಜಾಪುರದ ಸುಪ್ರಸಿದ್ಧ ವಿದ್ವಾಂಸರಲ್ಲಿ ಓರ್ವರಾಗಿರುವರು. ಇವರು ಪವಾಡಗಳನ್ನು ಜರುಗಿಸುವದರಲ್ಲಿಯೂ ಪ್ರಸಿದ್ಧರಾಗಿದ್ದರು. ತಂತ್ರ ಹಾಗೂ ಯುಕ್ತಿ (ಅಮಲಿಯಾತ್;ವ ದಾವತೇ ಅಸ್ಮಾ) ಹಾಗೂ ಧರ್ಮದೆಡೆಗೆ ಕರೆ ನೀಡುವ ಕಾಯಕವು ಇವರಿಗೆ ಪಾರಂಪರಿಕವಾಗಿ ಅನುಮತಿಯೊಂದಿಗೆ ಹಜ್ರತ್‌ರಿಗೆ ಲಭಿಸಿತ್ತು. ಆ ಕಾಲದಲ್ಲಿ ಹಜ್ರತ್‌ರ 'ಖಾನಖಾಯೆ" ಖಾದ್ರಿಯಾ' ಖಾದ್ರಿ ಜ್ಞಾನ ಮನೆ ಪ್ರಸಿದ್ಧವಾಗಿತ್ತು. ಇವರು ಹಜ್ರತ್ ಮೌಲಾನಾ ಸಿಬ್ಗತುಲ್ಲಾಹಿ(ಖು)ರ ಸಂಗಾತಿ ಹಾಗೂ ಸಂಬಂಧಿಗಳಲ್ಲಿ ಓರ್ವರಾಗಿದ್ದರು. ಹಾಗೂ ಹಜ್ರತ್‌ರ ತಂದೆಯವರಾದ ಮೌಲಾನಾ ಅಹ್ಮದ್ ಖಾದ್ರಿ(ಖು)ರೂ ಸಹ ಮಹಾಪುರುಷರಾಗಿದ್ದರು. ಹಾಗೂ ಹಜ್ರತ್ ಮೌಲಾನಾ ಮುಹಿಯುದ್ದೀನ್ ಖಾದ್ರಿ(ಖು)ರ ನಿಧನವು ೧೦೭೯ ಹಿಜ್ರಿಶಕೆಯಲ್ಲಿ ಆಯಿತು.

'ಲಮ್‌ಯುಮೀತ್ ಮುಹಿಯುದ್ದೀನ್ ಆಲ್‌ಖಾದ್ರಿ'(ಮುಹಿಯುದ್ದೀನ್ ಅಲ್‌ಖಾದ್ರಿ ಜೀವಂತವಿರುವರು) ಹಜ್ರತ್‌ರ ನಿಧನದ ಇಸ್ವಿಯ ದಿನಾಂಕ (೧೦೭೯) ಎಂದು ಇರುತ್ತದೆ. ಹಜ್ರತ್‌ರ ಸಮಾಧಿಯು ಮೌಲಾನಾ ಹಬೀಬುಲ್ಲಾಹ್ ಸಿಬ್ಗತುಲ್ಲಾಹ್(ಖು)ರ ದರ್ಗಾದ ಹೊರಾಂಗಣದಲ್ಲಿ ದಕ್ಷಿಣ ಭಾಗದಲ್ಲಿ ಇರುವದು.

ಹೀಗೆನ್ನಲಾಗುತ್ತದೆ. ಒಂದು ದಿನ ಹಜ್ರತ್ ಸೈಯ್ಯದ್ ಅಲಿ ಬುರೂಮ್(ಖು) ಹಜ್ರತ್ ಮೌಲಾನಾ ಹಬೀಬುಲ್ಲಾಹ್‌ರ ದರ್ಗಾಕ್ಕೆ ಹೋಗಿ ಜಿಯಾರತ್‌ಗೈದು ಮರಳಿ ಬರುತ್ತಿದ್ದರು. ಆಗ ಹಜ್ರತ್ ಮುಹಿಯುದ್ದೀನ್(ಖು)ರ ಸಮಾಧಿಯಿಂದ ದಖನಿ ಭಾಷೆಯಲ್ಲಿ ಹೀಗೆ ಧ್ವನಿ ಕೇಳಿತು.

'ಇದ್ರಿಚ್ ಅಂದರೆ ಈ ಕಡೆಗೂ'.... ಆಗ ಹಜ್ರತ್‌ರು ಅವರ ಸಮಾಧಿಗೂ ಹೋಗಿ ಜಿಯಾರತ್‌ಗೈದರು. ಹಜ್ರತ್‌ರ ಸುಪುತ್ರರಾದ ಮೌಲಾನಾ ಜಮಾಲ್ ಮುಹಮ್ಮದ್ ಖಾದ್ರಿ(ಖು) ತಮ್ಮ ತಂದೆಯವರಂತೆಯೇ ಪವಾಡಪುರುಷರಾಗಿದ್ದರು. ಹಜ್ರತ್‌ರು ತಮ್ಮ ತಂದೆಯ ಸಮಾಧಿಯ ಪಕ್ಕದಲ್ಲಿ ಸಮಾಧಿಸ್ಥರಾಗಿರುವರು. ಹಜ್ರತ್‌ರ ಮೊಮ್ಮಗ ಹಜ್ರತ್‌ಶೇಖ ಶರೀಫುಲ್ಲಾಹ್(ಖು)ರು ತಮ್ಮ ಕಾಲದ ಸುಪ್ರಸಿದ್ಧ ಮಹಾಪುರುಷರಲ್ಲಿ ಓರ್ವರಾಗಿದ್ದರು. ಸುಲ್ತಾನ್ ಸಿಕಂದರ್ ಆದಿಲ್‌ಶಾಹ ಹಾಗೂ ಆ ಕಾಲದ ಅಮೀರರ ಬಳಿ ಹಜ್ರತ್‌ರ ಕುರಿತು ಬಹು ಗೌರವವಿತ್ತು. ಪುಸ್ತಿಕೆ 'ಹೈಕಲ್‌ನೂರಿಯಾ' 'ಶರಾ ಇಸ್ಮಾಯೆ ಷರೀಫ್' (ನಾಮಾವಳಿ) ಹಜ್ರತ್ ಗೌಸುಲ್ ಆಜಮ್(ಖು) ಹಜ್ರತ್‌ರಿಂದಲೇ ಬರೆಯಲ್ಪಟ್ಟ ಪುಸ್ತಕವಾಗಿದೆ.

ಹಜ್ರತ್‌ರ ಸಂತತಿಯಿಂದ ಸೈಯ್ಯದ್ ಖಾದಿರ್ ಬಾದಶಹ ಇಬ್ನ ಸೈಯ್ಯದ್‌ಸಾಬ್ ಬಿಜಾಪುರದಲ್ಲಿ ಹಾಗೂ ಸೈಯ್ಯದ್‌ದಸ್ತಗೀರ್ ಸಾಬ್ ಇಬ್ನ ಸೈಯ್ಯದ್ ಅಹ್ಮದ್‌ಸಾಬ್ ಪಾಂಚಚೋರೆಯವರು ಉಕ್ಕಲಿ ಗ್ರಾಮದಲ್ಲಿ ವಾಸಿಸುತ್ತಿರುವರು.

■

೭೧. ಹಜ್ರತ್ ಸೈಯ್ಯದ್ ಮೀರಾಂ ಖಲ್ಫ(ಪುತ್ರ) ಸೈಯ್ಯದ್ ಅಸದುಲ್ಲಾಹ್ ಗುಜ್ರಾತಿ (ಖು)

ಹಜ್ರತ್‌ರು ಈ ಪಟ್ಟಣದ ಸುಪ್ರಸಿದ್ಧ ಸೂಫಿವರ್ಯರಾಗಿರುವರು. ಸುಲ್ತಾನ್ ಇಬ್ರಾಹಿಂ ಆದಿಲ್‌ಶಾಹನ ಕಾಲದಲ್ಲಿ ತನ್ನ ಜನ್ಮಸ್ಥಳವಾದ ಗುಜರಾತ್‌ನಿಂದ ಇಲ್ಲಿ ಆಗಮಿಸಿ ವಾಸಿಸತೊಡಗಿದರು. ವಿದ್ಯಾರ್ಥಿಗಳಿಗೆ ಜ್ಞಾನದಯಪಾಲಿಸುವಲ್ಲಿ ನಿರತರಾಗಿ ದೇವಭಯ ಹಾಗೂ ದೇವನಿಷ್ಠೆಯನ್ನು ಉನ್ನತ ದರ್ಜೆಗೆ ತಲುಪಿಸಿದರು. ಜಮಾದಿಲ್ ಅವ್ವಲದಲ್ಲಿ ೧೦೫೫ ಹಿಜ್ರಿಶಕೆಯಲ್ಲಿ ಈ ನಶ್ವರ ಜಗತ್ತನ್ನು ತ್ಯಜಿಸಿ ಶಾಶ್ವತ ಜಗತ್ತಿನತ್ತ ಪಯಣ ಬೆಳೆಸಿದರು.

ಅಲ್ಲಾಪುರ ದ್ವಾರದ ಹೊರಗಡೆ ಪೂರ್ವದಿಕ್ಕಿನೆಡೆಗೆ ಹಜ್ರತ್‌ಶಾಹ್ ಅಬುಲ್‌ಹಸನ್ ಖಾದ್ರಿ(ಖು)ರ ಸಮಾಧಿಯ ಬಳಿ ಸಮಾಧಿಸ್ಥರಾದರು. ಪ್ರಥಮ ಗೋರಿಯಾದ

ಯಾವದು ಕಿಬ್ಲಾ (ಪಶ್ಚಿಮ)ದೆಡೆಗೆ ಇದೆಯೋ ಅದು ಹಜ್ರತ್‌ರ ಸಮಾಧಿಯಾಗಿದೆ. ಕಲ್ಲಿನ ಪೀಠ ನೀರ್ಮಿಸಲಾಗಿದೆ. ಹಜ್ರತ್‌ರ ಸಮಾಧಿಯ ಪೂರ್ವದಿಕ್ಕಿನಲ್ಲಿ ಹಜ್ರತ್‌ರ ಪುತ್ರರಾದ ಸೈಯ್ಯದ್ ಇಸ್ಮಾಯಿಲ್(ಖು) ಸಮಾಧಿಸ್ಥರಾಗಿರುವರು ಹಾಗೂ ಈ ಪೀಠದ ಪಶ್ಚಿಮ ದಿಕ್ಕಿನೆಡೆಗೆ ಹಜ್ರತ್‌ಶೇಖ್ ಇಲ್ಮುಲ್ಲಾಹ್ ಮುಹದ್ದಿಸ್ ರಹ್ಮತುಲ್ಲಾಹ್ ಅಲೈಕಾರ ಸಮಾಧಿ ಹಾಗೂ ಮುರಾರಿಬಾಗ್ ಇರುವದು. ಹಾಗೂ ಪೀಠದ ಪೂರ್ವದಿಕ್ಕಿಗೆ ಹಜ್ರತ್ ಸೈಯ್ಯದ್ ಮೀರಾಂ (ಖು)ರ ಸಹೋದರರಾದ ಹಜ್ರತ್ ಸೈಯ್ಯದ್ ಅಲಿ ಮುಹಮ್ಮದ್(ಖು)ರ ಸಮಾಧಿ ಇರುವದು. ಹಾಗೂ ಹಜ್ರತ್ ಸೈಯ್ಯದ್ ಅಲಿ ಮುಹಮ್ಮದ್(ಖು)ರ ಪೀಠದ ಬಳಿ ಹಜ್ರತ್ ಶಾಹ್ ಅಬುಲ್ ಹಸನ್ ಖಾದ್ರಿಯವರ ದರ್ಗಾ ಇರುವದು.

ಹಜ್ರತ್‌ರ ಪುತ್ರಿಯ ಸಂತತಿಯಿಂದ ಪಾದಶಾಹಪುರದವರು, ಗಚ್ಚಿಮಹಲ್‌ದವರು, ಗೋಲಸಂಗಿಯವರು ಹಾಗೂ ಜುಬೈರಿಯವರು ಇರುವರು.

■

೭೨. ಹಜ್ರತ್ ಖಾಜಿ ಸೈಯ್ಯದ್ ಮುಹಮ್ಮದ್ ಅಲಿ(ಖು)

ಹಜ್ರತ್‌ರು ತಮ್ಮ ಹಿರಿಯ ಸಹೋದರರಾದ ಹಜ್ರತ್ ಸೈಯ್ಯದ್ ಮೀರಾಂರೊಂದಿಗೆ ಗುಜ್ರಾತಿನಿಂದ ಹೊರಟು ದಕ್ಷಿಣದೆಡೆಗೆ ಜ್ಞಾನ ಪ್ರಸಾರದಲ್ಲಿ ಜ್ಞಾನಾರ್ಥಿಗಳಿಗೆ ಜ್ಞಾನದಾಹ ತಣಿಸುವಲ್ಲಿ ಮಗ್ನರಾಗಿದ್ದರು. ಬಹಳಷ್ಟು ಸಾದಾತ್ ಹಾಗೂ ಸೂಫಿವಂಶಜರು, ವಿದ್ವಾಂಸರು, ಉದಾಹರಣೆಗೆ ಖುತ್ಬುಲ್ ಅಖ್ತಾಬ್ ಹಜ್ರತ್‌ಶಾಹ್ ಹಾಷಿಂ ಹುಸೈನಿ ಅಲ್ವಿ(ಖು)ರ ಮೊಮ್ಮಗರಾದ ಸೈಯ್ಯದುಸ್ಸಾದಾತ್ ಹಜ್ರತ್‌ಶಾಹ್ ಬುರ್ಹಾನುದ್ದೀನ್ (ಖು) ಹಾಗೂ ಹಜ್ರತ್‌ಶಾಹ ಅಬ್ದುಲ್‌ರಜಾಕ್ ಖಾದ್ರಿಯವರ ಪುತ್ರ, ಹಜ್ರತ್‌ಸೈಯ್ಯದ್ ಮುಹಮ್ಮದ್ ಮುದ್ದರಿಸ್(ಖು), ಹಜ್ರತ್ ಖಾಜಿ ಇಬ್ರಾಹಿಂ ಜುಬೈರಿ ಮುದ್ದರಿಸ್(ರ.ಅ) ಹಾಗೂ ಖಾಜಿ ಬುರ್ಹಾನ್(ರ.ಅ) ಮುಂತಾದವರು. ಹಜ್ರತ್‌ರ ಶಿಷ್ಯವೃಂದದಲ್ಲಿ ಬರುವರು. ಅಬ್ದುಲ್ ಮುಹಮ್ಮದರ ಪುತ್ರರಾದ ಇಬ್ರಾಹಿಂಖಾನ್‌ರೂ ಸಹ ಹಜ್ರತ್‌ರಿಂದಲೇ ಜ್ಞಾನಪ್ರಾಪ್ತಿ ಮಾಡಿದ್ದರು. ಸುಲ್ತಾನ್ ಇಬ್ರಾಹಿಂ ಆದಿಲ್‌ಶಾಹ್ ಹಾಗೂ ಸುಲ್ತಾನ್ ಮುಹಮ್ಮದ್ ಆದಿಲ್‌ಶಾಹ್‌ನ ಕಾಲದಲ್ಲಿ ಬಿಜಾಪುರದ ನ್ಯಾಯಾಧೀಶರಾಗಿದ್ದರು. ಹಾಗೂ ಈ ನ್ಯಾಯಾಧೀಶರ ಆಜ್ಞೆಯು ಅಕ್ಷರಶಃ ಜಾರಿಯಲ್ಲಿ ಬರುತ್ತಿತ್ತು. ಅಮೀರರು ಹಜ್ರತ್‌ರ ಆಜ್ಞೆಯನ್ನು ಶಿರಸಾ ಪಾಲಿಸುತ್ತಿದ್ದರು.

ಬಿಜಾಪುರದ ಓರ್ವ ಶ್ರೀಮಂತನು ಶಕ್ತಿಯಲ್ಲಿ ಹಾಗೂ ಸಂಪತ್ತಿನಲ್ಲಿ ತನ್ನ ಸಂಗಾತಿಗಳಿಗಿಂತ ಹೆಚ್ಚಿನ ಹಿರಿಮೆ ಹೊಂದಿದ್ದನು. ಆತನ ಮನೆಯು ಮಸೀದೆಯ

ಪಕ್ಕದಲ್ಲಿ ಇತ್ತು. ಒತ್ತಾಯಪೂರ್ವಕವಾಗಿ ಮಸೀದೆಯನ್ನು ತನ್ನ ಸುಪರ್ದಿಗೆ ತೆಗೆದುಕೊಂಡನು. ನಮಾಜನ್ನು ಸಲ್ಲಿಸಲು ಬರುವವರಿಗೆ ತಡೆದನು. ಓರ್ವರಿಂದ ಓರ್ವರಿಗೆ ಹರಡುತ್ತಾ ಈ ಸುದ್ಧಿಯು ಖಾಜಿಯುಲ್ ಖಾಜಾಯತ್ (ಮುಖ್ಯ ನ್ಯಾಯಾಧೀಶ)ರ ಕಿವಿಗೆ ಬಿದ್ದಿತು. ಆಗ ಮುಖ್ಯ ನ್ಯಾಯಾಧೀಶರು ಕುರಾನಿನ ಈ ಆಯತ್(ಸೂಕ್ತ)ವನ್ನು ಬರೆದು ಆತನ ಬಳಿ ಕಳುಹಿಸಿದರು. 'ವಮನ್ ಅಜ್ಲಮೂ ಮಿಮ್ಮನ್ ಮನಾ ಮಸಾಜಿದಲ್ಲಾಹೀ ಅಂಯ್ಯುಜಕರ್ ಫೀಹಾ ಇಸ್ಮಿಹೂ ವಸ್‌ಆ ಫೀಖರಾಬೀಹಾ' (ಯಾವಾತನು ಅಲ್ಲಾಹುವಿನ ನಾಮಸ್ಮರಣೆಗೆ ಆರಾಧನೆಗೆ ಮೀಸಲಾದ ಮಸೀದೆಗೆ ಜನರನ್ನು ಬರದಂತೆ ತಡೆಯುವನೋ ಹಾಗೂ ಮಸೀದೆಗಳನ್ನು ಜನರಹಿತ ಸ್ಥಳವನ್ನಾಗಿಸಲು ಪ್ರಯತ್ನಿಸುವನೋ ಅವನಿಗಿಂತ ಮಿಗಿಲಾದ ಅತ್ಯಾಚಾರಿ ಇನ್ನೊಬ್ಬನಿಲ್ಲ!) ಆ ಶ್ರೀಮಂತನು ತಕ್ಷಣವೇ ಮಸೀದೆಯನ್ನು ಬಿಟ್ಟುಕೊಟ್ಟನು. ಹಜ್ರತ್‌ರು ಬುಧವಾರದ ಜೀಖಾಯಿದಾದ ೫ನೆಯ ದಿನಾಂಕದಂದು ಹಿಜ್ರಿಶಕೆ ೧೦೭೦ರಂದು ಸ್ವರ್ಗಸ್ಥರಾದರು. "ಸುತೂನೆದೀನ್ ಫತಾಹ್‌ದಾ" (೧೦೭೦) ಹಜ್ರತ್‌ರ ನಿಧನದ ದಿನಾಂಕವಾಗಿರುವದು. ಅಲ್ಲಾಪುರದ ದ್ವಾರದ ಹೊರಗೆ ಹಿರಿಯ ಸಹೋದರರಾದ ಹಜ್ರತ್ ಸ್ಯೆಯ್ಯದ್ ಮೀರಾಂ(ಖು)ರ ಬಳಿ ಪೂರ್ವದಿಕ್ಕಿನೆಡೆಗೆ ಒಂದು ಬೇರೆಯದಾದ ಪೀಠದಲ್ಲಿ ಸಮಾಧಿಸ್ಥರಾಗಿರುವರು. ಹಜ್ರತ್‌ರ ಈರ್ವರು ಪುತ್ರರಾದ ಹಜ್ರತ್‌ಶಾಹ್ ಕರೀಮುಲ್ಲಾಹ್ ಹಾಗೂ ಹಜ್ರತ್‌ಶಾಹ್ ನೂರುಲ್ಲಾಹ್(ಖು) ತಮ್ಮ ತಂದೆಯವರ ಸಮಾಧಿಯ ಪಕ್ಕದಲ್ಲಿ ಪೂರ್ವ ದಿಕ್ಕಿನೆಡೆಗೆ ಸಮಾಧಿಸ್ಥರಿರುವರು. ಈ ಈರ್ವರು ಸಹೋದರರು ಪುರುಷೋತ್ತಮರಾಗಿದ್ದರು. ವಿಶೇಷವಾಗಿ ಹಜ್ರತ್‌ಶಾಹ್ ನೂರುಲ್ಲಾಹ್ ಆ ಕಾಲದ ಶ್ರೇಷ್ಠ ಗುರುವಾಗಿದ್ದರು. ಹಜ್ರತ್‌ರ ಫಾರ್ಸಿಭಾಷೆಯು ವಿದ್ವಾಂಸರಲ್ಲಿ, ಸುಲ್ತಾನರಲ್ಲಿ ಬಹಳೇ ಗೌರವ ಹೊಂದಿತ್ತು. ಸುಲ್ತಾನ್ ಮುಹಮ್ಮದ್ ಆದಿಲ್ ಹಾಗೂ ಅಲಿ ಆದಿಲ್‌ಶಾಹ್ ಹಜ್ರತ್‌ರನ್ನು ಬಹುವಾಗಿ ಗೌರವಿಸುತ್ತಿದ್ದರು. ಹಜ್ರತ್‌ರ ಜೀವನಗಾಥೆ ಹಾಗೂ ಪವಾಡಗಳು ಆದಿಲ್‌ಶಾಹಿಗಳ ಚರಿತ್ರೆಯಲ್ಲಿ ಬರೆಯಲ್ಪಟ್ಟಿದೆ.

■

೭೩. ಹಜ್ರತ್ ಸೈಯ್ಯದ್ ಅಬ್ದುಲ್‌ರೆಹಮಾನ್ ಹುಸೈನಿ (ಖು)

ಇವರು ಬಿಜಾಪುರದ ಮಹಾಪುರುಷರೂ, ಪರಿಪೂರ್ಣ ಸೂಫಿವರ್ಯರೂ ಆಗಿರುವರು. ಹಾಗೂ ಹಜ್ರತ್‌ಶಾಹ್ ಸಿಬ್ಗತುಲ್ಲಾಹ್ ಹುಸೈನಿಯವರ ಚಿಕ್ಕಪ್ಪನವರ ಪುತ್ರರಾಗಿರುವರು. ಹಾಫೀಜೆ ಕುರ್‌ಆನ್(ಕುರ್‌ಆನನ್ನು ಕಂಠಸ್ಥಗೊಳಿಸಿದವರು) ಮಾನವೀಯ ಮೌಲ್ಯಗಳ ಒಡೆಯರಾಗಿದ್ದರು. ಮುರ್ಷಿದುಲ್ ಔಲಿಯಾ ಹಜ್ರತ್

ಶಾಹ್ ವಜೀಉದ್ದೀನ್ ಹುಸೈನಿ ಅಲ್ವಿಯವರಿಂದ ಸಮೃದ್ಧಿಕರವಾದ ಬೈಯ್ಯತ್ ಹಾಗೂ ಖಿಲಾಫತ್ ಪಡೆದರು. ಹಾಗೂ ಇಬ್ರಾಹಿಂ ಆದಿಲ್‌ಶಾಹ್‌ನ ಕಾಲದಲ್ಲಿ ಬಿಜಾಪುರಕ್ಕೆ ಆಗಮಿಸಿದರು. ಇವರ ಸಮಾಧಿ ಸ್ಥಳವು ಬಿಜಾಪುರ ನಗರದ ಕೋಟೆಯ ಹೊರವಲಯದಲ್ಲಿ ಫತೇಹ್ ದರ್‌ವಾಜಾ (ಮನಗೂಳಿ ಅಗಸಿ)ದೆಡೆಗೆ ಇರುವದು. ಹಜ್ರತ್‌ರು ಹಾಗೂ ಶೇಖ ಅಹ್ಮದ್ ಮುಹದ್ದಿಸ್ (ರ.ಅ) ಒಂದೇ ಪೀಠದ ಮೇಲೆ ಸಮಾಧಿಸ್ಥರಾಗಿರುವರು.

ಈ ಪುಸ್ತಕದ ಲೇಖಕರು ಮೇಲೆ ಏನನ್ನು ಬರೆದಿರುವರೋ ಹಜ್ರತ್‌ರು ಶಾಹ್ ಸಿಬ್ಗತುಲ್ಲಾಹ್‌ರ ಕಕ್ಕನ ಮಗನಾಗಿದ್ದರು. ಹಾಗೂ ಇವರು ಮುರ್ಷಿದೆ ಔಲಿಯಾ ಹಜ್ರತ್‌ಶಾಹ್ ವಜೀಯುದ್ದೀನ್ ಅಲ್ವಿ ಗುಜ್ರಾತಿಯವರಿಂದ ಬೈಯ್ಯತ್ ಹಾಗೂ ಖಿಲಾಫತ್ ಹೊಂದಿದರು. ಇದರಲ್ಲಿ ಮೊದಲನೆಯದಾಗಿ ಕಕ್ಕನ ಮಗ ಎಂಬ ಸಂಬಂಧ ತಪ್ಪಾಗಿದೆ. ಇವರು ಹಜ್ರತ್‌ಶಾಹ್ ಸಿಬ್ಗತುಲ್ಲಾಹ್ (ಖು)ರ ಹಿರಿಯ ಸಹೋದರರಾಗಿದ್ದಾರೆ. ಎರಡನೆಯದಾಗಿ ಬೈಯ್ಯತ್ ಹಾಗೂ ಖಿಲಾಫತ್ ಇದೂ ಸಹ ಕೇಳಿದ್ದು ಎಂದೆನಿಸುತ್ತದೆ. ಏಕೆಂದರೆ ಹಜ್ರತ್‌ರಿಗೆ ಬೈಯ್ಯತ್ ಹಾಗೂ ಖಿಲಾಫತ್ ಹಜ್ರತ್ ಸೈಯ್ಯದ್ ಮೆಹಮೂದ್ ಹುಸೈನಿ (ಖು)ರಿಂದ ಲಭಿಸಿದೆ. ಹಾಗೂ ತಮ್ಮ ತಂದೆ ಹಜ್ರತ್ ಶಾಹ್ ರೂಹುಲ್ಲಾಹ್ ಹುಸೈನಿ(ಖು)ರಿಂದಲೂ ಖಿಲಾಫತ್ ಪಡೆದಿರುವರು. ಇದರ ಸಂಪೂರ್ಣ ವಿವರವು ಈ ಕೆಳಗೆ ವಿವರಿಸಲಾಗಿದೆ. ಸ್ಪಷ್ಟವಾಗುವದು ಇದರ ಹೊರತಾಗಿ ಹಜ್ರತ್‌ಶಾಹ್ ವಜೀಹುದ್ದೀನ್ ಅಲ್ವಿ(ಖು)ರ ಚರಿತ್ರೆಯನ್ನು ಈ ಅನುವಾದಕನು ತಾರೀಖೆ ಹಾಷ್ಮಿಯಾದಿಂದ ಹಜ್ರತ್‌ರ ಖಲೀಫಾಗಳ ವಿವರದ ಪಟ್ಟಿಯನ್ನು ೧೧೪ನೆಯ ಪುಟದಲ್ಲಿಂದ ನಕಲು ಇಳಿಸಲಾಗಿದೆ. ಇದರಲ್ಲಿಯೂ ಹಜ್ರತ್ ಸೈಯ್ಯದ್ ಅಬ್ದುಲ್‌ರೆಹಮಾನ್ ಹುಸೈನಿ ಭೈರೋಚಿ (ಖು)ರ ಹೆಸರು ಇರುವದಿಲ್ಲ. ಅದರ ನಿಜಾಂಶ ಇದು ಇರುವುದು.

ಹಜ್ರತ್ ಸೈಯ್ಯದ್ ಮೀರಾಂ ಮುದ್ದರಿಸ್‌ರ ಸಹೋದರಿಯ ಪುತ್ರರಾದ ಹಜ್ರತ್‌ಶಾಹ್ ಮುಸ್ತಫಾ(ಖು) ತಮ್ಮ ಪತ್ರಗಳಲ್ಲಿ ವಿವರಿಸುವರು. ಹಜ್ರತ್ ಸೈಯ್ಯದ್ ಅಬ್ದುಲ್‌ರೆಹಮಾನ್(ಖು) ಹಜ್ರತ್‌ಶಾಹ್ ಸಿಬ್ಗತುಲ್ಲಾಹ್‌ರ ಸಹೋದರರು ತಮ್ಮ ಸ್ವದೇಶವಾದ ಭೈರೂಚಿನಲ್ಲಿ ಹಜ್ರತ್ ಸೈಯ್ಯದ್ ಮೆಹಮೂದ್ ಹುಸೈನಿ (ಖು)ರ ಬಳಿ ಹೋಗಿ ೬ ವರ್ಷ ಹಜ್ರತ್‌ರ ಸೇವೆಯಲ್ಲಿದ್ದರು. ಹಾಗೂ ತಮ್ಮ ಧಾರ್ಮಿಕ ಲೌಕಿಕ ಜ್ಞಾನವನ್ನು ಉದಾಹರಣೆಗೆ ಹದೀಸ್, ಫಿಕ್ಹ್, (ಇಸ್ಲಾಮೀ ಕಾನೂನಿನ) ಅಧ್ಯಯನ ಸಂಪೂರ್ಣಗೊಳಿಸಿದರು. ನಂತರ ಒಂದು ದಿನ ಹಜ್ರತ್‌ರಲ್ಲಿ ಬೈಯ್ಯತ್ ಪಡೆಯುವ ಇಚ್ಛೆಯನ್ನು ಪ್ರಕಟಪಡಿಸಿದರು. ಹಾಗೂ ನನಗೆ ನಿಮ್ಮ ಶಿಷ್ಯಂದಿರಲ್ಲಿ ಸೇರಿಸಿಕೊಳ್ಳಿರಿ ಹಜ್ರತ್‌ರು ಹೀಗೆಂದರು–ನಿಮ್ಮ ತಂದೆಯವರಾದ ಹಜ್ರತ್‌ಶಾಹ್

ರೂಹುಲ್ಲಾಹ್ ಹುಸೈನಿಯವರಿಂದ ಬೈಯ್ಯತ್ ಪಡೆಯಿರಿ ಏಕೆಂದರೆ ನನ್ನ ಹಾಗೂ ಅವರ ವಂಶಾವಳಿ ಒಂದೇ ಇರುವದು. ಹಜ್ರತ್‌ಶಾಹ್, ರೂಹುಲ್ಲಾಹ್ ಹುಸೈನಿ ನನ್ನ ಕಕ್ಕ ಹಜ್ರತ್‌ಶಾಹ್ ಜಮಾಲ್ ಸೂಫಿ ಅಲ್ಲಾಹ್ ಹುಸೈನಿ(ಖು) ಹಜ್ರತ್ ಸೈಯ್ಯದ್ ಜಮಾಲ್ ಸಫಿಯಲ್ಲಾ ಹುಸೈನಿ(ಖು)ರ ಸಹೋದರನ ಪುತ್ರರಾಗಿರುವರು ಹಾಗೂ ಹಜ್ರತ್ ಸೈಯ್ಯದ್ ರೆಹ್ಮತುಲ್ಲಾಹ್ ಹುಸೈನಿ ಹಾಗೂ ಸೈಯ್ಯದ್ ಜಮಾಲ್ ಸಫಿವುಲ್ಲಾ ಹುಸೈನಿ (ಖಿದ್ದಸ್ಸರಾಹುಮಾ) ತಮ್ಮ ತಂದೆಯವರಾದ ಹಜ್ರತ್ ಸೈಯ್ಯದ್ ಮುಹಮ್ಮದ್ ಹುಸೈನಿಯವರ ಶಿಷ್ಯರಾಗಿರುವರು. ಹಾಗೂ ಅವರು ಹಜ್ರತ್‌ಶಾಹ್ ಕಮಾಲ್ ಸೂಫಿ ಭೈರೂಚಿಯವರ ಶಿಷ್ಯರಾಗಿರುವರು. ಅವರು ಹಜ್ರತ್ ಸೈಯ್ಯದ್ ಮುಹಮ್ಮದ್ ಗೇಸುದರಾಜ್(ಖು)ರ ಶಿಷ್ಯ ಹಾಗೂ ಅಳಿಯರಾಗಿರುವರು. ಈ ತೆರನಾಗಿ ಹಜ್ರತ್‌ಸೈಯ್ಯದ್ ಅಬ್ದುಲ್ ರೆಹಮಾನ್ ಹುಸೈನಿ(ಖು)ರು ವಿನಂತಿಸಿದರು. ತಂದೆಯವರ ಆದೇಶದಂತೆಯೇ ನಿಮ್ಮ ಸೇವೆಯಲ್ಲಿ ಬಂದಿರುವೆನು. ಏನೆಂದರೆ ಅವರು ಹೀಗೆಂದರು ಹಜ್ರತ್ ಸೈಯ್ಯದ್ ಮೆಹಮೂದ್ ಹುಸೈನಿಯವರ ಬಳಿ ಹೋಗಿ ವಿನಂತಿಸಿ ದೇವಮಾರ್ಗದಲ್ಲಿ ನಡೆಸಿ ಹಾಗೂ ತಸವ್ವುಫದವರ ಜ್ಞಾನವನ್ನು ಉಣಬಡಿಸಿರಿ ಅವರಿಂದ ಖಿಲಾಫತ್ ಪಡೆಯಬೇಕು ಯಾವಾಗ ಹಜ್ರತ್‌ರು ತಮಗಾಗಿ ಅವರಲ್ಲಿ ನಿಷ್ಠೆಕಂಡರೋ ಆಗ ತಮ್ಮ ಶಿಷ್ಯಂದಿರಲ್ಲಿ ಪರಿಗಣಿಸಿ ಚಿಷ್ತಿಯಾ ಪಂಥದಲ್ಲಿ ಕೂಡ್ರಿಸಿದರು. ಕೆಲದಿನಗಳ ಜಪತಪದಿಂದಾಗಿ ಹಜ್ರತ್‌ರು ಪರಿಪೂರ್ಣವಾಗಿ ಹಜ್ರತ್‌ರಂತೆಯೇ ಆದರು. ಅವರ ಎಲ್ಲ ಒಳಿತುಗಳು ಇವರಲ್ಲಿ ಮೇಳೈಸಿದವು. ಹಜ್ರತ್ ಸೈಯ್ಯದ್ ಅಬ್ದುಲ್‌ರೆಹಮಾನ್ ಹುಸೈನಿ(ಖು)ರಿಗೆ ಖಿಲಾಫತ್ ಅವರ ತಂದೆಯವರಾದ ಹಜ್ರತ್‌ಶಾಹ್ ರೂಹುಲ್ಲಾಹ್ ಹುಸೈನಿಯವರಿಂದಲೂ ಲಭಿಸಿದೆ.

ಒಂದು ದಿನ ಹಜ್ರತ್‌ಸೈಯ್ಯದ್ ಅಬ್ದುಲ್ ರೆಹಮಾನ್ ಹುಸೈನಿ(ಖು) ಶುಕ್ರವಾರದ ವಿಶೇಷ ಪ್ರಾರ್ಥನೆಗಾಗಿ ಜಾಮಿಯಾ ಮಸೀದೆ ಭೈರೂತಕ್ಕೆ ಹೋಗುತ್ತಿದ್ದರು. ದಾರಿಯಲ್ಲಿ ಒಂದು ಸುಂದರ ಕುದುರೆಯ ಚಿತ್ರವು ಕಣ್ಣಿಗೆ ಬಿದ್ದಿತು. ಬಹುಶಃ ಇಂತಹ ಸುಂದರ ಕುದುರೆ ಯಾರೂ ನೋಡಿರಲಿಕ್ಕಿಲ್ಲ. ಹಜ್ರತ್‌ರು ಆ ಚಿತ್ರವನ್ನು ನೋಡಿ ಅದನ್ನು ಚಿತ್ರಿಸಿದ ಕಲಾವಿದನನ್ನು ಗ್ರಹಿಸಿದರು ಹಾಗೂ ಹೀಗೆಂದರು ನಿಜವಾಗಿಯೂ ಕುದುರೆಯನ್ನು ನಿರ್ಮಿಸಿದ ಕಲಾವಿದನನ್ನು ನಾನು ನಿರ್ಲಕ್ಷಿಸಿದ್ದೇನೆ ಎಂಬ ವಿಷಾದ ವ್ಯಕ್ತಪಡಿಸಿದರು. ಈ ತೆರನಾಗಿ ಅಲ್ಲಾಹುವಿನ ಒಲವು ಹೃದಯದಲ್ಲಿ ಒಡಮೂಡಿತು. ಹಾಗೂ ಅಂತರಾತ್ಮದಲ್ಲಿ ನಿಷ್ಕಾಮಪ್ರೇಮ ಜಾಗೃತಗೊಂಡಿತು. ಎಷ್ಟೆಂದರೆ ತನ್ನ ದೇಹ ಹಾಗೂ ಉಟ್ಟ ಬಟ್ಟೆಗಳ ಪರಿವೆಯೂ ಇರಲಿಲ್ಲ. ಅದರ ನಂತರ ಶುಕ್ರವಾರದ ವಿಶೇಷ ನಮಾಜನ್ನು ಸಲ್ಲಿಸಿ ಅದೇ ದಿನ ಆ ಪಟ್ಟಣದಿಂದ ಹೊರಹೊರಟರು. ಹಾಗೂ ತಮ್ಮ ಕುಟುಂಬದವರಿಂದ ದೂರವಾದರು. ಏಕಾಂತವನ್ನು ಹೊಂದಿ

ಫಕೀರರೊಂದಿಗೆ ಅಲೆಮಾರಿತನ ಹೊಂದಿದರು. ಕುಟುಂಬದವರು ಹಜ್ರತ್‌ರಿಗೆ ಬಹಳ ರೀತಿಯಲ್ಲಿ ಹುಡುಕಾಡಿದರು. ಆದರೆ ಹಜ್ರತ್‌ರು ಎಲ್ಲಿಯೂ ಸಿಗಲಿಲ್ಲ.

ಹಜ್ರತ್ ಸೈಯ್ಯದ್ ಅಬ್ದುಲ್ ರೆಹಮಾನ್(ಖು) ಕೆಲದಿನ ಅಲೆಮಾರಿ ಫಕೀರರೊಂದಿಗೆ ಇದ್ದರು. ನಂತರ ಅವರ ಸಾಂಗತ್ಯವನ್ನು ತೊರೆದು ಹಜ್‌ಗಾಗಿ ಹೊರಡುವ ನಿಶ್ಚಯ ಮಾಡಿದರು. ಹಿಜ್ರಿಶಕೆ ೯೫ರಲ್ಲಿ ಹಜ್ಜೆ ಅಕಬರ್‌ಗೈದು ಮದೀನಾ ಮುನವ್ವರಾಕ್ಕೆ ಹೋದರು. ಕೆಲ ತಿಂಗಳು ಅಲ್ಲಿದ್ದು ಹಜ್ರತ್ ಮುಹಮ್ಮದ್(ಸ)ರ ಜಿಯಾರತ್‌ಗೈದರು. ಅಲ್ಲಿಂದ ಬಗ್ದಾದ್ ಷರೀಫಕ್ಕೆ ಪ್ರಯಾಣಿಸಿ ಹಜ್ರತ್ ಸೈಯ್ಯದ್ ಅಬ್ದುಲ್‌ಖಾದಿರ್ ಜಿಲಾನಿ(ರ) ಅವರ ಜಿಯಾರತ್‌ಗೈದು ಅಲ್ಲಿಂದ ಮಾರೂಫ್ ಗ್ರಾಮಕ್ಕೆ ಹೋಗಿ ಅಲ್ಲಿಯ ಮರಳುಗಾಡಿನಲ್ಲಿ ಜಪತಪದಲ್ಲಿ ನಿರತರಾದರು. ಹಾಗೂ ಅಲ್ಲಿ ತಾವಾಗಿ ಬೇಡದೇ ಯಾರಾದರೂ ನೀಡಿದರೆ ಸ್ವೀಕರಿಸುತ್ತಿದ್ದರು. ಆದರೆ ಯಾರಿಂದಲೂ ಬೇಡುತ್ತಿರಲಿಲ್ಲ. ಒಂದು ದಿನ ತಾವು ಸ್ವಪ್ನದಲ್ಲಿ ನೋಡಿದರು. ಓರ್ವ ವ್ಯಕ್ತಿಯು ಹಜ್ರತ್‌ರ ಕೋಣೆಯಲ್ಲಿ ಆಗಮಿಸಿ ಹೀಗೆ ಹೇಳುತ್ತಾನೆ. ಹಜ್ರತ್ ಸೈಯ್ಯದ್ ಮುಹಮ್ಮದ್ ಹುಸೈನಿ(ಖು) ನಿಮ್ಮನ್ನು ಹುಡುಕುತ್ತಾ ನಿಮ್ಮ ಕೋಣೆಯ ಹೊರಗಡೆ ದಾರಿಕಾಯುತ್ತ ನಿಂತಿದ್ದಾರೆ ತಕ್ಷಣ ಅವನೊಂದಿಗೆಯೇ ಹಜ್ರತ್‌ರು ಬಾಗಿಲಿನಿಂದ ಹೊರಗೆ ಬಂದು ಹಜ್ರತ್‌ರ ಅಜ್ಜ ಹಾಗೂ ಗುರುವಿನ ಪಾದಕ್ಕೆರಗಿದರು. ಹಜ್ರತ್‌ರು ಅವರನ್ನೆಬ್ಬಿಸಿ ತಬ್ಬಿಕೊಂಡರು. ಹಾಗೂ ಹೀಗೆಂದರು ಓ, ಸೈಯ್ಯದ್ ಅಬ್ದುಲ್ ರೆಹಮಾನ್ ಈಗ ಜಪತಪ ನಿಲ್ಲಿಸು ಹಾಗೂ ಈ ಮರಳುಗಾಡಿನಿಂದ ಹೊರಹೊರಡು ನಿನ್ನ ಜಪತಪ ಅಲ್ಲಾಹುವಿನಲ್ಲಿ ಸ್ವೀಕರಿಸಲ್ಪಟ್ಟಿದೆ. ಒಂದು ವೇಳೆ ನಿಮಗೆ ನಂಬುಗೆಯಿಲ್ಲದಿದ್ದರೆ ನನ್ನೊಂದಿಗೆ ಬನ್ನಿರಿ ಹೀಗೆಂದು ಹಜ್ರತ್ ಸೈಯ್ಯದ್ ಅಬ್ದುಲ್‌ರೆಹಮಾನ್‌ರ ಕೈ ಹಿಡಿದುಕೊಂಡು ಹಜ್ರತ್ ಸೈಯ್ಯದ್ ಅಬ್ದುಲ್‌ಖಾದರ್ ಜಿಲಾನಿ(ರ) ಅವರ ಸನ್ನಿಧಿಯಲ್ಲಿ ಹೋದರು. ಹಜ್ರತ್‌ರೂ ಸಹ ಇದನ್ನೇ ಸಮರ್ಥಿಸಿದರು ಹಾಗೂ ಈ ಮರುಳುಗಾಡಿನಿಂದ ಹೊರಡಲು ಹೇಳಿದರು. ಪ್ರವಾಸಕ್ಕೆ ಹೊರಡು, ನಿಜವನ್ನೇ ಹೇಳು, ಶ್ರಮದಿಂದ ಪ್ರಾಪ್ತವಾದದ್ದರಿಂದಲೇ ಉಣ್ಣು, ಹಜ್ರತ್‌ರು ಸ್ವಪ್ನದಿಂದ ಹೊರಬಂದರು ಹಾಗೂ ತಮ್ಮ ಗುರುವಾದ ಹಜ್ರತ್ ಸೈಯ್ಯದ್ ಮುಹಮ್ಮದ್ ಹುಸೈನಿಯವರ ಆದೇಶದಂತೆ ಹಾಗೂ ಹಜ್ರತ್ ಸೈಯ್ಯದ್ ಅಬ್ದುಲ್ ಖಾದರ್ ಜಿಲಾನಿಯವರ ಹೇಳಿಕೆಯಂತೆ ಮಾರುಫ್ ಗ್ರಾಮದ ಮರಳುಗಾಡನ್ನು ಬಿಟ್ಟು ಪ್ರಯಾಣ ಹೊರಟರು. ಹಾಗೂ ಹಿಜ್ರಿಶಕೆ ೯೮ರಲ್ಲಿ ಬಿಜಾಪುರಕ್ಕೆ ಆಗಮಿಸಿದರು. ಇಲ್ಲಿ ಕುರ್‌ಆನ್ ಷರೀಫ್‌ದ ಸೂಕ್ತ ಬರೆದು ಅದರಿಂದ ಬರುವ ಗೌರವ ಸಂಭಾವನೆಯನ್ನು ಪಡೆದು ಅದರಲ್ಲಿ ಅರ್ಧದಷ್ಟು ಅಲ್ಲಾಹುವಿನ ಮಾರ್ಗದಲ್ಲಿ ವ್ಯಯಿಸುತ್ತಿದ್ದರು. ಉಳಿದರ್ಧವನ್ನು ಆಹಾರಕ್ಕಾಗಿ ವ್ಯಯಿಸುತ್ತಿದ್ದರು. ಇದರ ನಂತರ ಕೆಲಕಾಲ ಕಾಡಿನಿಂದ ಕಟ್ಟಿಗೆಗಳ ಹೊರೆಯನ್ನು ತಲೆಯ ಮೇಲೆ ಹೊತ್ತು ತಂದು ಮಾರುತ್ತಿದ್ದರು. ಏನು

ಲಭಿಸುತ್ತಿತ್ತೋ ಅದನ್ನು ಸಹ ಮೇಲಿನಂತೆಯೇ ವ್ಯಯಿಸುತ್ತಿದ್ದರು. ಕೆಲ ಅವಧಿಯವರೆಗೆ ವ್ಯಾಪಾರಿಗಳ ಮನೆಯಲ್ಲಿ ಕೂಲಿ ಮಾಡಿ ಅದರಿಂದ ಗಳಿಸಿದ್ದನ್ನು ಸಹ ಹೀಗೆಯೇ ವ್ಯಯಿಸುತ್ತಿದ್ದರು. ಇದರ ನಂತರ ಗುಲಾಮ್ ಅಹ್ಮದ್ ಎಂಬ ವ್ಯಾಪಾರಿಯ ಅಂಗಡಿಯಲ್ಲಿ ನೌಕರರಾದರು. ಯಾವಾಗ ಸಂಬಳ ಬರುತ್ತಿತ್ತೋ ಆಗಲೂ ಎರಡು ಭಾಗ ಮಾಡುತ್ತಿದ್ದರು. ಹಜ್ರತ್ ಸೈಯ್ಯದ್ ಅಸಅದ್ ಬಲ್ಖಿ ಖಲೀಫಾಯೇ ಹಜ್ರತ್ ಶಾಹ್(ಖು) ತಮ್ಮ ಪತ್ರಿಕೆಯಾದ 'ಅಷ್ಗಾಲ್ ವ ಮರಾಖಿಬ್'ದಲ್ಲಿ ಹಜ್ರತ್ ಸೈಯ್ಯದ್ ಅಬ್ದುಲ್ ರೆಹಮಾನ್ ಹುಸೈನಿಯವರ ಬಹಳಷ್ಟು ವಿವರಗಳನ್ನು ಬರೆದಿರುವರು.

ವರ್ತಕನಾದ ಗುಲಾಮ ಅಹ್ಮದ್‌ನು ಪೇಟೆಯಲ್ಲಿ ಒಳ್ಳೆಣ್ಣೆಯ ಅಂಗಡಿ ತೆರೆದಿದ್ದನು ಆತನು ಒಂದುದಿನ ಯಾವುದೇ ಗ್ರಾಮದಿಂದ ಡಬ್ಬಿಯಲ್ಲಿ ಎಣ್ಣೆಯನ್ನು ತುಂಬಿ ಹಜ್ರತ್‌ರ ತಲೆಯ ಮೇಲಿರಿಸಿ ಅಂಗಡಿಗೆ ಕರೆದುಕೊಂಡು ಹೊರಟನು. ದಾರಿಯಲ್ಲಿ ಅಸರ್ ನಮಾಜಿನ ವೇಳೆ ಆಯಿತು. ಹಜ್ರತ್‌ರು ವ್ಯಾಪಾರಿಗೆ ಹೀಗೆ ಹೇಳಿದರು. ಡಬ್ಬಿಯನ್ನು ನೆಲದ ಮೇಲಿಟ್ಟು ಅಸರ್ ನಮಾಜ್ ಸಲ್ಲಿಸುತ್ತೇನೆ. ಮತ್ತೆ ನಿಮ್ಮ ಡಬ್ಬಿಯನ್ನು ಅಂಗಡಿಗೆ ತಲುಪಿಸುತ್ತೇನೆ. ಗುಲಾಮ ಅಹ್ಮದ್‌ನು ಒಪ್ಪಿಕೊಂಡನು ಹಾಗೂ ಡಬ್ಬಿಯನ್ನು ಅವರ ತಲೆಯಿಂದ ಕೆಳಗಿಳಿಸಿ ಹೀಗೆಂದನು. ನಾನು ಮುಂದೆ ಹೊರಡುವೆನು ಹಾದಿಯಲ್ಲಿ ತಮ್ಮ ಹಾದಿ ಕಾಯುವೆನು. ತದ ನಂತರ ನಮಾಜನ್ನು ಸಲ್ಲಿಸಿ ಗುಲಾಮ ಅಹ್ಮದ್ ಹಾದಿಯಲ್ಲಿ ಮರೆಯಲ್ಲಿ ಅಡಗಿ ಕುಳಿತಿದ್ದನು. ನೋಡಿದರೆ ಆ ಡಬ್ಬಿಯು ಹಜ್ರತ್‌ರ ತಲೆಯ ಮೇಲೆ ಒಂದು ಗೇಣಿನ ಅಂತರದಲ್ಲಿದೆ. ಆ ದಿನದಿಂದ ವ್ಯಾಪಾರಿಯು ಇವರಿಗೆ ಯಾವುದೇ ಭಾರದ ಕೆಲಸ ನೀಡಲಿಲ್ಲ. ಏಕೆಂದರೆ ಆತನಿಗೆ ನಂಬಿಕೆಯಾಯಿತು. ಹಜ್ರತ್‌ರು ಸೂಫಿವರ್ಯರಾಗಿದ್ದಾರೆ. ಅದಕ್ಕಾಗಿ ಯಾವುದೇ ಕೆಲಸ ನೀಡಲು ಹೆದರುತ್ತಿದ್ದನು. ಈ ಘಟನೆಯನ್ನು ಜಗತ್ಪ್ರಸಿದ್ಧಿಗೊಳಿಸಿದನು. ಹಜ್ರತ್‌ರು ಈ ವ್ಯಕ್ತಿಯು ಏನು ಕೆಲಸವನ್ನು ಮಾಡಿಸಿಕೊಳ್ಳುತ್ತಿಲ್ಲ ಹಾಗೂ ಪ್ರತಿತಿಂಗಳು ಮುಂಗಡ ಹಣ ನೀಡುತ್ತಾನೆ. ಒಂದು ದಿನ ಆತನಿಗೆ ಹೇಳಿದರು. ನೀನು ನೀಡುವ ಹಣವು ನನಗೆ ಹಲಾಲ್ ಆಗುವದಿಲ್ಲ. ಮತ್ತೆ ಅಂದಿನಿಂದಲೇ ಅವರು ಆತನ ನೌಕರಿಯನ್ನು ಬಿಟ್ಟು ಬಿಟ್ಟರು. ಮೊದಲಿನಂತೆಯೇ ಕುರ್‌ಆನಿನ ಸೂಕ್ತಗಳನ್ನು ಬರೆದು ಬದುಕತೊಡಗಿದರು.

ಯಾವಾಗ ಹಜ್ರತ್‌ಶಾಹ್ ಸಿಬ್ಗತುಲ್ಲಾಹ್(ಖು) ೧೦೦೦ ಹಿಜ್ರಿಶಕೆಯಲ್ಲಿ ಮದೀನಾ ಮುನವ್ವರಾದಿಂದ ಬಿಜಾಪುರ ಪಟ್ಟಣಕ್ಕೆ ತಲುಪಿದರು. ಆಗ ಇಲ್ಲಿಯ ಜನರಿಂದ ಈ ವಿಷಯ ಆಲಿಸಿದರು. ಇಲ್ಲಿ ಓರ್ವ ಮಹಾಪುರುಷರು ಎರಡು ವರ್ಷದಿಂದ ಬಂದು ಇರುವರು ಹಾಗೂ ಶ್ರಮಪಟ್ಟು ತಮ್ಮ ದೈನಂದಿನ ಬೇಡಿಕೆ ಪೂರೈಸಿಕೊಳ್ಳುವರು. ಹಾಗೂ ಅವರ ಜೀವನೋಪಾಯವು ಕೂಲಿ ಕೆಲಸದ ಮೇಲೆ ನಿಂತಿದೆ. ಪ್ರತಿದಿನ

ಕೂಲಿಗೈದು ಗಳಿಸಿದ್ದರಲ್ಲಿ ಅರ್ಧದಷ್ಟನ್ನು ಅಲ್ಲಾಹುವಿನ ಮಾರ್ಗದಲ್ಲಿ ದಾನ ಮಾಡುವರು ಮತ್ತು ಉಳಿದ ಅರ್ಧದಷ್ಟನ್ನು ತಮ್ಮ ಜೀವನೋಪಾಯಕ್ಕೆ ಬಳಸುವರು. ಅವರ ಹೆಸರು ಹಜ್ರತ್ ಸೈಯ್ಯದ್ ಅಬ್ದುಲ್ ರೆಹಮಾನ್(ಖು) ಎಂದು ಇರುವದು. ತಮ್ಮ ಸ್ವದೇಶ ಭೈರೂಚ್ ಎಂದು ಹೇಳುವರು. ಈ ಮಾತನ್ನು ಆಲಿಸಿದ ಹಜ್ರತ್‌ಶಾಹ್ ಸಿಬ್ಗತ್ತುಲ್ಲಾಹ್(ಖು)ರು ಅವರನ್ನು ಹುಡುಕತೊಡಗಿದರು. ಒಂದು ದಿನ ಇಬ್ರಾಹಿಂಪುರದಲ್ಲಿ ಹಜ್ರತ್‌ರು ತಮ್ಮ ಮನೆಯ ಮಹಡಿಯಲ್ಲಿ ಕುಳಿತಿದ್ದರು. ಆ ಸಭೆಯಲ್ಲಿ ಹಜ್ರತ್‌ಮಿಂಯಾ ಅಬ್ದುಸ್ಸಮದ್, ಹಜ್ರತ್‌ಶೇಖ ಅಬ್ದುಲ್ ಹಕೀಂ(ಖು)ರು ಯಾರು ಹಜ್ರತ್‌ರ ಖಲೀಫಾ ಆಗಿದ್ದರು. ಅಲ್ಲಿ ಹಾಜರಿದ್ದರು. ಹಜ್ರತ್ ಸೈಯ್ಯದ್ ಅಬ್ದುಲ್‌ರೆಹಮಾನ್ ಹುಸೈನಿ (ಖು) ಮಹಡಿಯ ಕೆಳಗೆ ಪೇಟೆಯ ಕಡೆಗೆ ಹೊರಟಿದ್ದರು. ಹಜ್ರತ್‌ಶೇಖ ಅಬ್ದುಲ್ ಹಕೀಂ(ಖು)ರು ನೋಡಿದರು. ಹಜ್ರತ್‌ರು ಹೊರಟಿರುವರು ಹಜ್ರತ್‌ರ ಗಮನಕ್ಕೆ ತಂದರು. ಅವರು ಇದೇ ಮಹಾಪುರುಷರಾಗಿರುವರು ಯಾರು ಇಲ್ಲಿ ಹೊರಟಿರುವರು. ಹಜ್ರತ್‌ರಂತೂ ಅವರನ್ನು ಹುಡುಕುತ್ತಲೇ ಇದ್ದರು. ನೋಡಿದರು. ಮುಖಚರ್ಯೆ ತಮ್ಮ ಸಹೋದರರನದೇ ಇದೆ. ತಕ್ಷಣ ಆದೇಶಿಸಿದರು. ಅವರನ್ನು ಹೋಗಗೊಡಬೇಡಿರಿ, ನಾನು ಅವರನ್ನು ಭೇಟಿ ಮಾಡುವೆನು. ಹಜ್ರತ್ ಮಿಂಯಾ ಅಬ್ದುಸ್ಸಮದ್ ಹಾಗೂ ಶೇಖ ಅಬ್ದುಲ್ ಹಕೀಂ (ಖು) ಹೋದರು. ಓ ಫಕೀರರೇ ನಿಲ್ಲಿರಿ ನಮ್ಮ ಮುರ್ಷಿದ್‌ರು ತಮ್ಮ ಭೇಟಿಗಾಗಿ ಬರುತ್ತಿರುವರು. ಆಗ ಹಜ್ರತ್‌ರೆಂದರು, ನಮಗೆ ನಿಮ್ಮ ಮುರ್ಷಿದ್‌ರಿಂದ ಏನು ಕೆಲಸವಿದೆ? ಅವರೇಕೆ ಬರುತ್ತಿದ್ದಾರೆ? ಅಷ್ಟರಲ್ಲಿಯೇ ಹಜ್ರತ್ ಶಾಹ್(ಖು) ಸ್ವತಃ ಆಗಮಿಸಿದರು ಹಾಗೂ ನೋಡುತ್ತಾರೆ. ಇವರು ತಮ್ಮ ಹಿರಿಯ ಸಹೋದರರಾಗಿದ್ದಾರೆ. ಪಾದಕ್ಕೆರಗಿದರು. ಹಾಗೂ ಅಳಹತ್ತಿದರು. ಹಜ್ರತ್ ಸೈಯ್ಯದ್ ಅಬ್ದುಲ್ ರೆಹಮಾನ್ ಹುಸೈನಿ(ಖು) ಹೀಗೆಂದರು ಓ ಸಹೋದರನೆ, ಇಲ್ಲಿಯವರೆಗೆ ನನಗೆ ನಾನು ಗೌಪ್ಯವಾಗಿಟ್ಟಿದ್ದೆನು ಈಗ ಅದು ಬಹಿರಂಗವಾಯಿತು ಹೀಗೆನ್ನುತ್ತಾ ಈರ್ವರೂ ಸಹೋದರರು ಹಾದಿಯಿಂದ ಮನೆಯೊಳಗೆ ಬಂದರು ಹಾಗೂ ಹಜ್ರತ್‌ಶಾಹ್(ಖು) ತಮ್ಮ ಸಹೋದರರಿಗೆ ತಮ್ಮ ಬಳಿಯೇ ಇರಿಸಿಕೊಂಡರು. ಆಗ ಈ ವಿಷಯವು ಜಗಜ್ಜಾಹೀರಾಯಿತು. ಏನೆಂದರೆ ಈ ಈರ್ವರೂ ಮಹಾಪುರುಷರು ಸಹೋದರರಾಗಿದ್ದಾರೆ. ಹೀಗೆ ತಿಳಿದು ಬರುತ್ತದೆ. ಹಜ್ರತ್ ಸೈಯ್ಯದ್ ಅಬ್ದುಲ್ ರೆಹಮಾನ್ ಹುಸೈನಿ(ಖು)ರು ಕೆಲ ದಿನಗಳ ನಂತರ ಹಜ್ರತ್‌ಅಂತಲ್ ಫಾತಿಮಾ ಬಿಂತೆ ಸೈಯ್ಯದ್ ಕರೀಂ ಮುಹಮ್ಮದ್ ಖಾದ್ರಿ (ಖು)ರೊಂದಿಗೆ ವಿವಾಹವಾದರು. ಹಜ್ರತ್ ಸೈಯ್ಯದ್ ಕರೀಂ ಮುಹಮ್ಮದ್ ಖಾದ್ರಿ (ಖು) ಸೂಫಿವಂಶಜರಿಂದ ಇದ್ದರು ಅವರ ಸ್ವದೇಶವೂ ಗುಜರಾತ್ ಆಗಿತ್ತು.

ಹಜ್ರತ್‌ರಿಗೆ ಓರ್ವ ಪುತ್ರ ಹಜ್ರತ್ ಸೈಯ್ಯದ್ ಮುಹಮ್ಮದ್ ಮುದರ್‍ರಿಸ್(ಖು) ಹಾಗೂ ಮೂವರು ಪುತ್ರಿಯರು ಅವರಲ್ಲಿ

೧) ಸೈಯ್ಯದ್ ಚಾಂದ್ ಮುಹಮ್ಮದ್ ಸಾಬ್‌ರ ಪತ್ನಿಯಾಗಿದ್ದಾರೆ–ಅವರಿಂದ ಹಜ್ರತ್‌ಶಾಹ್ ಮುಸ್ತಫಾ ಖಾದ್ರಿ (ಖು) ಜನ್ಮ ತಾಳಿದರು.

೨) ಶೇಖ ಅಬ್ದುಲ್ ವಹಾಬ್ ಖತೀಬ್ ವಲ್ದ ಶೇಖ ಅಹ್ಮದ್ ಮುಹದ್ದಿಸ್‌ರ ಪತ್ನಿ– ಇವರಿಂದ ಮುಹಮ್ಮದ್ ಷರೀಫ್ ಹಾಗೂ ಅಹ್ಮದ್ ಷರೀಫ್‌ರು ಜನಿಸಿದರು.

೩) ಸೈಯ್ಯದ್ ಮೆಹಮೂದ್ ಜದ್ ಸೈಯ್ಯದ್ ಮೆಹಮೂದ್(ಖು)ರ ಪತ್ನಿ– ಇವರಿಂದ ಸೈಯ್ಯದ್ ಅಹ್ಮದ್‌ಸಾಬ್ ಹುಟ್ಟಿದರು.

ಹಜ್ರತ್‌ಶಾಹ್ ಮುಸ್ತಫಾ(ಖು) ಹಜ್ರತ್ ಮೀರಾಂ ಸೈಯ್ಯದ್ ಮುಹಮ್ಮದ್ ಮುದ್ದರಿಸ್(ಖು)ರ ಸಹೋದರಿಯ ಪುತ್ರರಾಗಿರುವರು. ಹಾಗೂ ಮುರೀದ್(ಶಿಷ್ಯ) ಖಲೀಫಾ, ಆಗಿರುವರು. ತಮ್ಮ ಪತ್ರಿಕೆಯಲ್ಲಿ ಬರೆದಿರುವರು. ಯಾವಾಗ ಹಜ್ರತ್ ಸೈಯ್ಯದ್ ಅಬ್ದುಲ್ ರೆಹಮಾನ್ ಸಾಹೇಬ್ ಹುಸೈನಿ(ಖು)ರು ರಂಜಾನಿನ ಹನ್ನೊಂದನೆಯ ದಿನದಂದು, ಬುಧವಾರ, ಹಿಜ್ರಿಶಕೆ ೧೦೨೭ರಲ್ಲಿ ನಿಧನ ಹೊಂದಿದರು. ಎಲ್ಲ ಸೂಫಿವಂಶಜರು ಹಾಗೂ ಇವರ ಪುತ್ರರು ಹಜ್ರತ್ ಸೈಯ್ಯದ್ ಮುದರ್ರಿಸ್‌ರ ಉಯಿಲಿನಂತೆ ಹಜ್ರತ್ ಸೈಯ್ಯದ್ ಅಬ್ದುಲ್ ರೆಹಮಾನ್ ಹುಸೈನಿ(ಖು)ರಿಗೆ ಆ ಪೀಠದ ಮೇಲೆ ಯಾವುದನ್ನು ಇಬ್ರಾಹಿಂ ಆದಿಲ್‌ಶಾಹ್‌ನಿಂದ ಪಡೆದುಕೊಂಡಿದ್ದರು ಅಲ್ಲಿ ದಫನ್ ಮಾಡಲಾಯಿತು. ಆ ಸಮಯದಲ್ಲಿ ಹಜ್ರತ್ ಮೀರಾಂ ಸೈಯ್ಯದ್ ಮುಹಮ್ಮದ್ ಮುದ್ರರಿಸ್‌ರ ವಯಸ್ಸು ೧೨ ವರ್ಷವಿತ್ತು.

■

೭೪. ಹಜ್ರತ್ ಸೈಯ್ಯದ್ ಮುಹಮ್ಮದ್ ಮುದರ್ರಿಸ್(ಖು)

ಇವರು ಹಜ್ರತ್ ಅಬ್ದುಲ್ ರೆಹಮಾನ್(ಖು)ರ ಪುತ್ರರಾಗಿರುವರು. ಬಿಜಾಪುರದ ಸುಪ್ರಸಿದ್ಧ ಶಿಕ್ಷಕರು ಹಾಗೂ ಸೂಫಿವಂಶಜರಾಗಿರುವರು. ಹಜ್ರತ್‌ರು ಬಿಜಾಪುರದಲ್ಲಿ ಹಜ್ರತ್ ಖಾಜಿ ಸೈಯ್ಯದ್ ಮುಹಮ್ಮದ್ ಅಲಿ (ಖು)ರ ಬಳಿ ಪಡೆದರು. ಷರೀಯತ್ ಹಾಗೂ ತರೀಕತ್‌ನಲ್ಲಿ ತಮ್ಮ ಕಾಲದ ಅನನ್ಯ ಗುರುವಾಗಿದ್ದರು. ಅಲ್ಲಾಹುವಿನಲ್ಲಿ ಏಕನಿಷ್ಠೆ ಹಾಗೂ ದರವೇಶಿತನದಲ್ಲಿ ಉನ್ನತ ವ್ಯಕ್ತಿಯಾಗಿದ್ದರು. ಲೌಕಿಕ ಹಾಗೂ ಪಾರಲೌಕಿಕ ಜ್ಞಾನವನ್ನು ವಿದ್ಯಾರ್ಥಿಗಳಿಗೆ ಸಮೃದ್ಧಿದಾಯಕವಾಗಿ ದಯಪಾಲಿಸುತ್ತಿದ್ದರು. ಶೇಖುಲ್ ಕಾಮಿಲಿನ್ ಹಜ್ರತ್‌ಶೇಖ ಅಬ್ದುಲ್ ಅಜೀಂ ಮುಹಮ್ಮದ್ ಮಕ್ಕಿ ಮುರೀದ್ ಹಾಗೂ ಖಲೀಫಾ ಹಜ್ರತ್ ಶಾಹ್ ಸಿಬ್ಗತಲ್ಲಾಹ್ ಹುಸೈನಿ(ಖು) ಅವರಿಂದ ಬೈಯ್ಯತ್ ಹಾಗೂ ಖಿಲಾಫತ್ ಪಡೆದರು. ಮಕ್ಕಾ ಹಾಗೂ ಮದೀನಾ ಮುನವ್ವರಾಕ್ಕೆ

ಜಿಯಾರತ್‌ಗೈಯ್ಯಲು ಎರಡು ಸಲ ಹೋಗಿ ಬಂದರು. ಹಜ್ರತ್‌ರ ಮೊಮ್ಮಗರಾದ ಹಜ್ರತ್ ಸೈಯ್ಯದ್ ಅಲಿ ಮುಹಮ್ಮದ್(ಖು)ರ 'ತಜಲ್ಲಿಯಾತೆ ರೆಹಮಾನಿ'ಯಲ್ಲಿ ಹೀಗೆ ಬರೆದಿರುವರು. ಹಜ್ರತ್‌ರು ಹಜ್ ಗೈಯ್ಯಲು ನಿರ್ಧರಿಸಿ ಮನೆಯಿಂದ ಹೊರಟು ತಿಕೋಟಾದ ವಸತಿಗೃಹದಲ್ಲಿ ಅದು ಪ್ರಸಿದ್ಧ ಕಟ್ಟಡವಾಗಿರುವದು ಅಲ್ಲಿ ಪ್ರಥಮವಾಗಿ ತಂಗಿದರು. ಕುಟುಂಬದವರು, ಸಂಬಂಧಿಕರು, ಶಿಷ್ಯರು, ಅನುಯಾಯಿಗಳು ಅವರನ್ನು ಗೌರವಪೂರ್ವಕವಾಗಿ ಹಜ್‌ಯಾತ್ರೆಗೆ ಕಳುಹಿಸಲೆಂದು ಅವರ ಜೊತೆಯಲ್ಲಿದ್ದರು. ಹಜ್ರತ್‌ರು ಬೆಳಗ್ಗಿನ ನಮಾಜ್‌ಗೈದು ತಮ್ಮ ಹಿತೈಷಿಗಳಿಗೆ ವಿದಾಯ ಹೇಳಿ ಒಂದು ದಿನದಲ್ಲಿ ಎರಡು ಹಂತ ದಾಟುವ ನಿರ್ಧಾರ ಮಾಡಿದರು. ಯಾವಾಗ ಬೆಳಗಾಯಿತು ನಮಾಜ್ ಸಲ್ಲಿಸಿದ ನಂತರ ಹೊರಡುವ ನಿಶ್ಚಯವಾಗಿತ್ತು. ಇಂಥದರಲ್ಲಿ ಹಜ್ರತ್‌ರ ಜೇಷ್ಠ ಪುತ್ರರಾದ ಹಜ್ರತ್ ಸೈಯ್ಯದ್ ಜೈನುದ್ದೀನ್(ಖು) ಎರಡುವರೆ ವರ್ಷ ವಯಸ್ಸಿನವರಾಗಿದ್ದರು. ಇವರಿಗೆ ದಾಯಾ ಮಡಿಲಲ್ಲಿ ತೆಗೆದುಕೊಂಡು ಆಟವನ್ನು ತೋರಿಸಲು ವಸತಿಗೃಹದ ಮೇಲ್ಗಡೆ ಹೋದಳು ಹಾಗೂ ಅಲ್ಲಿ ಜನರೊಂದಿಗೆ ಮಾತನಾಡುವದರಲ್ಲಿ ತೊಡಗಿದಳು ಇಂಥದರಲ್ಲಿ ಹಜ್ರತ್‌ರ ಜೇಷ್ಠಪುತ್ರರು ವಸತಿಗೃಹದ ಮಾಳಿಗೆಯ ಮೇಲಿನಿಂದ ಕೆಳಗೆ ಜಾರಿ ಬಿದ್ದರು. ಹಾಗೂ ಪೆಟ್ಟು ಎಷ್ಟು ಗಂಭೀರವಾಗಿತ್ತೆಂದರೆ ತಲೆ ಹಾಗೂ ಮೂಗಿನಿಂದ ರಕ್ತ ಹೊರ ಹೊರಡ ತೊಡಗಿತು. ಸ್ವಲ್ಪವೇ ಪ್ರಾಣ ಉಳಿದಿತ್ತು. ಹಜ್ರತ್‌ರ ಪತ್ನಿ, ಎಲ್ಲ ಸಂಬಂಧಿಕರು, ಆಪ್ತವಲಯದವರು ಹಾಗೂ ಮುರೀದರ ಮೇಲೆ ದುಃಖದ ಛಾಯೆ ಗಾಢವಾಗಿ ಆವರಿಸಿತು. ಹಜ್ರತ್‌ರು ಈ ಘಟನೆಯನ್ನು ಕಂಡು ಎಲ್ಲ 'ದೇವವಿಧಿ'ಯೆಂದು ಬಗೆದು ಮುಂದೆ ಹೊರಡಲು ಸಿದ್ಧರಾದರು. ಆಗ ಹಜ್ರತ್‌ರ ಪತ್ನಿಯವರು ದುಃಖಭರಿತರಾಗಿ ಮಗುವಿನ ಪ್ರಾಣವು ಇನ್ನೇನು ಹಾರಿ ಹೊರಟಿದೆ. ತಾವು ಜನಾಜಾದ ನಮಾಜ್ ಸಲ್ಲಿಸಿ ಮುಂದೆ ಸಾಗುವದು ಒಳಿತು! ಎಂದರು. ಅದಕ್ಕೆ ಪ್ರತಿಯಾಗಿ ಹಜ್ರತ್‌ರು ಹೀಗೆಂದರು. ಒಂದುವೇಳೆ ಮರಣ ಹೊಂದಿದರೆ ಇಲ್ಲಿ ಮುಸ್ಲಿಮರು ಬಹಳಷ್ಟು ಇದ್ದಾರೆ ಜನಾಜಾ ನಮಾಜ್‌ಗೈದು ಅಂತ್ಯಕ್ರಿಯೆಗೈಯ್ಯುವರು ಫಕೀರನು ಅಲ್ಲಾಹುವಿನ ಮಾರ್ಗದಲ್ಲಿ ಮುಂದುವರೆದಿದ್ದಾನೆ. ಈ ವಿಷಯದಲ್ಲೀಗ ವಿರಾಗಿಯಾಗಿದ್ದಾನೆ. ಎಲ್ಲ ಸಂಬಂಧಿಕರನ್ನು ಹಾಗೂ ಆಪ್ತರನ್ನು ವಿದಾಯ ಹೇಳಿ ಮುಂದೆ ನಡೆದರು. ಹಂತಹಂತವಾಗಿ ಪಯಣ ಮುಂದುವರೆಸಿ ಹಜ್ರತ್ ಶೇಖ ಅಬ್ದುಲ್ ಅಜೀಂ ಮುಹಮ್ಮದ್ ಮಕ್ಕಿ (ಖು)ರೊಂದಿಗೆ ಭೇಟಿಗೈದರು. ಹಾಗೂ ಬೈಯ್ಯತ್ ಮತ್ತು ಖಿಲಾಫತ್ ಪಡೆದು ವಸ್ತ್ರ ಹಾಗೂ ಟೊಪ್ಪಿಗೆ ಸ್ವೀಕರಿಸಿ ಮಕ್ಕಾ ಮುವಜ್ಜಮಾಕ್ಕೆ ಹೋಗಿ ಹಜ್‌ಗೈದು ಮದೀನಾ ಮುನವ್ವರಾಕ್ಕೆ ತಲುಪಿದರು. ಹಜ್ರತ್ ಮುಹಮ್ಮದ್(ಸ)ರ ಪವಿತ್ರ ಸಮಾಧಿಯ ಜಿಯಾರತ್‌ಗೈದರು. ಮೆಕ್ಕಾ-ಮದೀನಾದ (ಹರಮೈನ್ ಷರೀಫೈನ್)ದ ಹಲವಾರು ಜನರು ಹಜ್ರತ್‌ರಿಂದ ಬೈಯತ್‌ಗೈದು ಸಮೃದ್ಧಿ ಪಡೆದರು. ಕೆಲದಿನಗಳ ನಂತರ ಬಿಜಾಪುರ ಪಟ್ಟಣಕ್ಕೆ

ಮರಳಿ ಬಂದರು. ಮೂವತ್ತು ವರ್ಷಗಳವರೆಗೆ ಇಲ್ಲಿದ್ದು ಗುರುವಿನ ಸ್ಥಾನದಲ್ಲಿದ್ದು ಪಾರಲೌಕಿಕ ಜ್ಞಾನವನ್ನು ಜನರಿಗೆ ದಯಪಾಲಿಸಿದರು. ಹಜ್ರತ್‌ರಿಂದ ಸುಮಾರು ನೂರರಷ್ಟು ಜನರು ಖಿಲಾಫತ್ ಪಡೆದರು. ಆಗ ಎರಡನೆಯ ಬಾರಿಗೆ ಹರಮೈನ್ ಷರೀಫೈನ್‌ಕ್ಕೆ ಹೋಗುವ ನಿರ್ಧಾರ ಮಾಡಿ ತಮ್ಮೊಂದಿಗೆ ಆ ಜೇಷ್ಠಪುತ್ರ ಯಾರು ತಿಕೋಟಾದ ವಸತಿ ಗೃಹದ ಮಾಳಿಗೆಯಿಂದ ಬಿದ್ದಿದ್ದರು ಅವರನ್ನು ಜೊತೆಗೆ ಕರೆದುಕೊಂಡು ಎರಡನೆಯ ಪುತ್ರರಾದ ಹಜ್ರತ್ ಸೈಯ್ಯದ್ ಅಬ್ದುಲ್ ರೆಹಮಾನ್(ಖ)ರಿಗೆ ತಮ್ಮ ಖಿಲಾಫತ್ ಹಾಗೂ ಉತ್ತರಾಧಿಕಾರತ್ವ ನೀಡಿ ತಮ್ಮ ಹೆಸರಿನಿಂದ ಅವರನ್ನು ಕರೆದು, ಮುರೀದರು ಹಾಗೂ ಜ್ಞಾನಾರ್ಥಿಗಳನ್ನು ಇವರ ಸುಪರ್ದಿಗೆ ನೀಡಿ ಇಬ್ರಾಹಿಂಪುರದಲ್ಲಿ ತಂಗಿದರು. ಆಗ ಮುರೀದ್‌ರಾಗಲು ಬಯಸಿ ಬಹಳಷ್ಟು ಜನರು ಆಗಮಿಸಿದರು. ಕಾರಣ ಒಬ್ಬೊಬ್ಬ ವ್ಯಕ್ತಿಗೆ ವ್ಯಯಕ್ತಿಕವಾಗಿ ಬೈಯ್ಯತ್ ನೀಡಲು ಸಾಧ್ಯವಿರಲಿಲ್ಲ. ಕೊನೆಗೆ ಬೇರೆ ಬೇರೆ ವಂಶದವರನ್ನು ಬೇರೆ ಬೇರೆ ಗುಂಪಾಗಿಸಿ ತಮ್ಮ ಮುರೀದ್‌ರನ್ನಾಗಿ ಸ್ವೀಕರಿಸಿದರು. ಬೈಯ್ಯತ್ ಹಾಗೂ ಶಿಕ್ಷಣ ಪಡೆಯಲು ತಮ್ಮ ಪುತ್ರ ಹಾಗೂ ಉತ್ತರಾಧಿಕಾರಿಯಿಂದ ಪಡೆಯಲು ಹೇಳಿದರು. ಒಂದು ತಿಂಗಳವರೆಗೆ ಇಬ್ರಾಹಿಂಪುರದಲ್ಲಿ ನಿರಂತರವಾಗಿ ಈ ವಿಧಿವಿಧಾನದ ಕಾರ್ಯಕ್ರಮ ನಡೆಯಿತು. ಮುಂದೆ ನಡೆದಾಗ ಮತ್ತೆ ಜನರು ಮುರೀದ್‌ರಾಗಲು ಬಯಸಿ ಶೋರ್ ನದಿಯವರೆಗೆ ಜೊತೆಗೆ ನಡೆದರು. ಹಜ್ರತ್‌ರು ಅವರಿಗೂ ಸಹ ಅದನ್ನೇ ತಿಳಿಸಿ ಮರಳಿ ಕಳುಹಿಸಿದರು. ನೀವು ನನ್ನನ್ನು ನನ್ನ ಪುತ್ರನಲ್ಲಿ ಕಾಣುವಿರಿ, ಏನನ್ನು ಬಯಸುತ್ತಿದ್ದೀರೋ ಅವರಿಂದ ತೆಗೆದುಕೊಳ್ಳಿರಿ ಹಾಗೂ ಅವರಿಂದಲೇ ಪಡೆಯುವಿರಿ. ನಂತರ ಹಲವಾರು ದಿನಗಳ ಬಳಿಕ ಕಾಬಾಕ್ಕೆ ತಲುಪಿ, ಕಾಬಾ ಯಾತ್ರೆಯ ನಂತರ ಮದೀನಾ ಮುನವರಾಕ್ಕೆ ತಲುಪಿದರು ಯಾವಾಗ ಪವಿತ್ರ ಗುಂಬಜ್ ದೃಷ್ಟಿಗೆ ಬಿದ್ದಿತೋ ಆಗ ನಮಾಜ್‌ನ್ನು ಸಲ್ಲಿಸಿದರು. ಎಂಥಹ ಸಮೃದ್ಧಿದಾಯಕವಾಗಿ ಹೃದಯ ತುಂಬಿ ಬಂದಿತ್ತೆಂದರೆ ನಮಾಜಿನ ನಂತರ ತಕ್ಷಣ ಅವರ ಪ್ರಾಣ ಪಕ್ಷಿ ಹಾರಿಹೋಯಿತು. ಹಜ್ರತ್‌ರ ಜೇಷ್ಠ ಪುತ್ರರು ಹಾಗೂ ಮುರೀದರು ದುಃಖ ಭರಿತರಾಗಿ ಅಂತ್ಯಕ್ರಿಯೆಯ ಸಿದ್ಧತೆ ನಡೆಸಿದರು. ಸಮಾಧಿಗಾಗಿ ಹಜ್ರತ್‌ಶಾಹ್ ಸಿಬ್ಗತುಲ್ಲಾಹ್ ಹುಸ್ಯೆನಿಯವರ ಸಮಾಧಿಯ ಬಳಿ ಸ್ಥಳವನ್ನು ಹುಡುಕಿದರು. ಅಲ್ಲಿ ಸ್ಥಳವಿರಲಿಲ್ಲ. ಅದಕ್ಕಾಗಿ ಬೇರೆಕಡೆಗೆ ದಫನ್‌ಗೈಯ್ಯಲು ನಿಶ್ಚಯಿಸಿದರು. ಅಷ್ಟರಲ್ಲಿ ಓರ್ವ ವೃದ್ಧಪುರುಷರು ಅಲ್ಲಿ ಆಗಮಿಸಿದರು. ಇವರನ್ನು ಎಲ್ಲಿ ದಫನ್‌ಗೈಯ್ಯುವಿರಿ ಎಂದು ಕೇಳಿದರು. ಅದಕ್ಕುತ್ತರವಾಗಿ ಹಜ್ರತ್‌ಶಾಹ್ ಸಿಬ್ಗತುಲ್ಲಾಹ್(ಖ)ರ ಸಮಾಧಿಯ ಬಳಿ ದಫನ್‌ಗೈಯ್ಯಬಯಸುತ್ತೇವೆ ಆದರೆ ಅಲ್ಲಿ ಗೋರಿಗಾಗಿ ಸ್ಥಳವಿಲ್ಲ, ಬೇರೆಡೆಗೆ ಗೋರಿ ಸಿದ್ಧಗೊಳಿಸುವೆವು. ಆಗ ಆ ವೃದ್ಧರು ಹೀಗೆಂದರು–ಒಂದು ವೇಳೆ ನನಗೆ ಅಂತ್ಯಕ್ರಿಯೆಯ ಕಾರ್ಯದಲ್ಲಿ ಭಾಗಿಯಾಗಿಸಿದರೆ ಹಾಗೂ ಎರಡು ಅಶ್ರಫಿ(ಹೊನ್ನಿನ

ನಾಣ್ಯ) ಕೂಲಿ ನೀಡಿದರೆ ಹಜ್ರತ್‌ಶಾಹ್ ಸಿಬ್ಗತುಲ್ಲಾಹ್(ಖು)ರ ಸಮಾಧಿಯ ಪಕ್ಕದಲ್ಲಿ ಸ್ಥಳ ತೋರಿಸುವೆನು. ಎಲ್ಲರೂ ಅವರ ಮಾತಿಗೆ ಒಪ್ಪಿದರು. ಅಂತಿಮಸ್ನಾನ ಹಾಗೂ ಕಫನ ತೊಡಿಸಿದ ನಂತರ ಹಜ್ರತ್‌ಶಾಹ್ ಸಿಬ್ಗತುಲ್ಲಾಹ್‌ರ ಸಮಾಧಿಯ ಪಕ್ಕದಲ್ಲಿ ಸಮಾಧಿಗೈದರು. ದಫನ್‌ದ ನಂತರ ಆ ವೃದ್ಧರಿಗೆ ಕೂಲಿ ನೀಡುವದಕ್ಕಾಗಿ ಹುಡುಕಾಡಿದರು. ಆದರೆ ಅವರು ಎಲ್ಲಿಯೂ ಸಿಗಲಿಲ್ಲ. ಮದೀನಾ ಮುನವ್ವರಾದ ಜನರಲ್ಲಿ ಕೇಳಲು ಅವರು ನಮಗೆ ಅಪರಿಚಿತರು ಎಂದರು. ಹಜ್ರತ್‌ರ ಉರುಸೆ ಷರೀಫ್‌ವು ಷವ್ವಾಲ್ ತಿಂಗಳ ೨೪ನೆಯ ದಿನದಂದು ಇರುವದು. ಹಾಗೂ ಹಿಜ್ರಿಶಕೆ ೧೧೮೮ರಲ್ಲಿ ನಿಧನ ಹೊಂದಿದರು. ಅವರ ನಿಧನದ ದಿನಾಂಕವು 'ಪಾತಲ್ ಸೈಯ್ಯದ ಮುಹಮ್ಮದ್‌ಅಲ್ ವಲಿ ಫಿ ಬಲದಿಅಬೀ ಮುಹಮ್ಮದನ್ನಬೀಯೀ' ಸೈಯ್ಯದ್ ಮುಹಮ್ಮದ್ ವಲಿಯವರು ತಮ್ಮ ಪೂರ್ವಜರಾದ ಪ್ರವಾದಿ ಮುಹಮ್ಮದ್(ಸ)ರ ಪವಿತ್ರ ಪಟ್ಟಣದಲ್ಲಿ ನಿಧನ ಹೊಂದಿದರು ಎಂದು ಇರುವದು. ಹಜ್ರತ್‌ರ ಶಿಕ್ಷಣದಿಂದಾಗಿ ಬಹಳಷ್ಟು ಜನರಿಗೆ ಸಮೃದ್ಧಿ ಲಭಿಸಿತು. ಆರೀಫೆ ರಬ್ಬಾನಿ ಹಜ್ರತ್ ಮೌಲಾನಾ ಶೇಖ ಮುಹಮ್ಮದ್ ಜುಬೈರ ಅಲ್ ಸಾನಿ(ಖು) ಹಜ್ರತ್‌ರ ಅಳಿಯ ಹಾಗೂ ಹಜ್ರತ್‌ರ ಪತ್ನಿಯವರ ಸಹೋದರಿಯ ಪುತ್ರರಾಗಿರುವರು. ಅವರು ಹಜ್ರತ್‌ರಿಂದ ಬೈಯ್ಯತ್ ಹಾಗೂ ಖಿಲಾಫತ್ ಪಡೆದರು. ಅವರು ಹಜ್ರತ್‌ರಿಗೆ ಬಹುಪ್ರಿಯ ವ್ಯಕ್ತಿಯಾಗಿದ್ದರು. ಅವರೂ ಸಹ ತಮ್ಮ ಕಾಲದ ಉತ್ತಮ ಶಿಕ್ಷಕರಾಗಿದ್ದರು. ಇವರಿಂದಲೂ ಬಹುಸಮೃದ್ಧಿ ಲಭಿಸಿತು. ಹಜ್ರತ್ ಸೈಯ್ಯದ್ ಮುಹಮ್ಮದ್ ಮುದರ್ರಿಸ್‌ರಿಗೆ ಮೂವರು ಪುತ್ರರಿದ್ದರು. ಅವರಲ್ಲಿ ಎಲ್ಲರೂ ಮಹಾಪುರುಷರು. ಪವಾಡ ಪುರುಷರೂ ಆಗಿದ್ದರು. ಅವರ ವಂಶದಲ್ಲಿ ಹಲವಾರು ಜನ ಔಲಿಯಾಗಳಾದರು. ಹಜ್ರತ್‌ರ ಎಲ್ಲ ವಂಶದವರು ಶಿಕ್ಷಕರು ಹಾಗೂ ಮಾರ್ಗದರ್ಶಕರು ಆಗಿ ಹೋಗಿರುವರು.

ಹಜ್ರತ್ ಮೀರಾಂ ಸೈಯ್ಯದ್ ಮುಹಮ್ಮದ್ ಮುದರ್ರಿಸ್(ಖು)ರು ಹಜ್ರತ್ ಸೈಯ್ಯದ್ ಅಬ್ದುಲ್‌ರೆಹಮಾನ್ ಹುಸೈನಿ(ಖು)ರ ಪುತ್ರರಾಗಿರುವರು.

ಹಜ್ರತ್‌ಶಾಹ್ ರೂಹುಲ್ಲಾಹ್ ಹುಸೈನಿ(ಖು)ರವರ ಪುತ್ರರು ಹಜ್ರತ್ ಸೈಯ್ಯದ್ ಅಬ್ದುಲ್ ರೆಹಮಾನ್ ಹುಸೈನಿ(ಖು) ಆಗಿರುವರು ಹಾಗೂ ಹಜ್ರತ್‌ಶಾಹ್ ಸಿಬ್ಗತುಲ್ಲಾಹ್ ಹುಸೈನಿ(ಖು)ರೂ ಸಹ ಹಜ್ರತ್‌ಶಾಹ್ ರೂಹುಲ್ಲಾಹ್‌ರ ಪುತ್ರರೇ ಆಗಿರುವರು.

'ತಸರುರ್ರುಫಾತೆ ಬುರ್ಹಾನಿ' ಪುಸ್ತಕದಲ್ಲಿ ಮುದ್ರಣ ದೋಷದಿಂದಾಗಿ ಹಜ್ರತ್ ಮೀರಾಂ ಸೈಯ್ಯದ್ ಮುಹಮ್ಮದ್ ಮುದರ್ರಿಸ್(ಖು)ರಿಗೆ ಹಜ್ರತ್‌ಶಾಹ್ ಸಿಬ್ಗತುಲ್ಲಾಹ್ ಹುಸೈನಿ(ಖು) ಎಂದು ಬರೆಯಲಾಗಿದೆ. ಹಜ್ರತ್‌ಶಾಹ್ ಸಿಬ್ಗತುಲ್ಲಾಹ್(ಖು)ರ ನಿಧನದ ದಿನ ಅಂದರೆ ೨೪ನೆಯ ದಿನಾಂಕ ಜಮಾದಿಲ್ ಅವ್ವಲ್ ತಿಂಗಳಿನಲ್ಲಿ ಹಿಜ್ರಿಶಕೆ

೧೦೧೫ರಲ್ಲಿ ಹಜ್ರತ್ ಮೀರಾಂ ಸೈಯ್ಯದ್ ಮುಹಮ್ಮದ್ ಮುದರ್ರಿಸ್‌ರು ಜನ್ಮ ತಾಳಿದರು. ಪ್ರೌಢಾವಸ್ಥೆಗೆ ತಲುಪುವವರೆಗೆ ಲೌಕಿಕ ಜ್ಞಾನ, ಧಾರ್ಮಿಕಜ್ಞಾನ, ಫಿಕ್ಹ, ಹದೀಸ್‌ಜ್ಞಾನವನ್ನು ಪಡೆದರು. 'ತಜ್ಜಲ್ಲಿಯಾತೆರೆಹ್ಮಾನಿ' ಪುಸ್ತಕದಲ್ಲಿ ಹೀಗೆ ಬರೆಯಲಾಗಿದೆ. ಏನೆಂದರೆ ಹಜ್ರತ್‌ಶಾಹ್(ಖು)ತಮ್ಮ ನಿಧನಕ್ಕಿಂತ ಮುಂಚೆ ತಮ್ಮ ಖಲೀಫಾ ಹಜ್ರತ್ ಶೇಖ ಅಬ್ದುಲ್ ಅಜೀಮ್ ಮುಹಮ್ಮದ್ ಮುಕ್ಕಿ(ಖು)ರಿಗೆ ಉಯಿಲು ರೂಪದಲ್ಲಿ ಹೀಗೆ ಹೇಳಿದರು. ನನ್ನ ನಿಧನದ ದಿನ ನನ್ನ ಸಹೋದರನ ಪುತ್ರ ಜನ್ಮ ತಾಳುವನು ಹಾಗೂ ಅವರು ಹಜ್‌ಯಾತ್ರೆಗೆ ಬರುವರು. ಆಗ ಸೂಫಿವಸ್ತ್ರ, ಪೇಠಾ ಹಾಗೂ ಅನುಮತಿ ಪತ್ರಗಳನ್ನು ಅವರಿಗೆ ತಲುಪಿಸಬೇಕು. ಅವರು ನನ್ನ ಸಜ್ಜಾದಾ ಹಾಗೂ ಜಾನಶೀನ್ ಅಂದರೆ ಪೀಠಾಧಿಪತಿ ಹಾಗೂ ಉತ್ತರಾಧಿಕಾರಿ ಆಗಿರುವರು. ಅವರಿಂದ ಬಹಳಷ್ಟು ಜನರು ಸಮೃದ್ಧಿ ಪಡೆದು ಅಲ್ಲಾಹುವಿನ ಸಂಪ್ರೀತಿಗಳಿಸುವರು. ಅವರಿಂದ ಈ ಪ್ರಮಾಣ ತೆಗೆದುಕೊಳ್ಳಬೇಕು. ಈ ಫಕೀರನ ಪರಂಪರೆಯನ್ನು ಮುಂದುವರೆಸಬೇಕು. ಅವರ ಕಾಲದಲ್ಲಿ ಅವರನ್ನು ಸರಿಗಟ್ಟುವವರು ಯಾರೂ ಇರಲಾರರು. ತಮ್ಮ ಅಂತಿಮ ಕಾಲದಲ್ಲಿ ಹಜ್ರತ್ ಶೇಖ ಮಕ್ಕಿ (ಖು)ರು ನದಿಯ ದಡದಲ್ಲಿ ಕೋಣೆ ನಿರ್ಮಿಸಿಕೊಂಡು ಹಜ್ರತ್‌ರ ನಿರೀಕ್ಷೆಯಲ್ಲಿದ್ದರು. ಯಾವಾಗ ಹಜ್ರತ್ ಮೀರಾಂ ಸೈಯ್ಯದ್ ಮುಹಮ್ಮದ್ ಮುದರ್ರಿಸ್‌ರು ಯೌವ್ವನಕ್ಕೆ ತಲುಪಿದರು ಹಾಗೂ ಅಲ್ಲಾಹುವಿನತ್ತ ಚಿತ್ತವು ಏಕಾಗ್ರವಾಗಲು ಹಜ್ ಗೈಯ್ಯಲು ಇಚ್ಛಿಸಿದರು. ಹಜ್ರತ್‌ಶೇಖ ಅಬ್ದುಲ್ ಅಜೀಮ್ ಮುಹಮ್ಮದ್ ಮಕ್ಕಿ(ಖು)ರು ಮುಂದೆ ಬಂದು ಹಜ್ರತ್‌ಶಾಹ್(ಖು)ರ ಉಯಿಲನ್ನು ಪ್ರಕಟಪಡಿಸಿದರು. ಹಾಗೂ ಖಿಲಾಫತ್‌ದ ಉಡುಪನ್ನು, ಅನುಮತಿ ಪತ್ರವನ್ನು ಅವರಿಗೆ ಒಪ್ಪಿಸಿದರು. 'ಹಿರಜುಲ್ ಆಶಿಕೀನ' ಎಂಬ ಪುಸ್ತಕದ ಕರ್ತೃವು ಈ ಘಟನೆಯನ್ನು ಈ ತೆರನಾಗಿ ವಿವರಿಸಿರುವರು. ಯಾವಾಗ ಹಜ್ರತ್ ಶಾಹ(ಖು) ಈ ಲೋಕದಿಂದ ತೆರಳಲು ಬಯಸಿದಾಗ ತಮ್ಮ ಖಲೀಫಾಯೆ ಆಜಮ್ ಹಜ್ರತ್‌ಶೇಖ ಅಬ್ದುಲ್ ಅಜೀಮ್ ಮಕ್ಕಿ(ಖಿ)ರಿಗೆ ಯಾರ ವಯಸ್ಸು ೧೦೦ ವರ್ಷವಾಗಿತ್ತೋ ಅವರಿಗೆ ಉಯಿಲು ರೂಪದಲ್ಲಿ ಹೇಳಿದರು. ಈ ವರ್ಷ ನನ್ನ ಸಹೋದರನ ಪುತ್ರನಾದ ಸೈಯ್ಯದ್ ಮುಹಮ್ಮದ್‌ರ ಜನನವಾಗಿದೆ. ಯಾವಾಗ ಆತನು ಪ್ರೌಢಾವಸ್ಥೆಗೆ ತಲುಪಿ ಹಿಂದೂಸ್ಥಾನದಿಂದ ಇಲ್ಲಿಗೆ ಆಗಮಿಸುವನು ಅವರು ತಮ್ಮ ಕಾಲದ 'ಶಾಹ್' ಆಗಿರುವರು. ಈ ಉಡುಪು, ಪೇಠಾ ಹಾಗೂ ಎಲ್ಲ ವಸ್ತುಗಳು ಅವರಿಗೆ ನೀಡಬೇಕು ಹಾಗೂ ಖಿಲಾಫತ್‌ನಾಮಾ ಕೊಡಬೇಕು. ಹಾಗೂ ನನ್ನ ಖಾನ್‌ಖಾಹ್ ಹಾಗೂ ಮದ್ರಸಾ ಅವರಿಗೆ ಒಪ್ಪಿಸಬೇಕು. ನನ್ನ ಉತ್ತರಾಧಿಕಾರಿ ಹಾಗೂ ಪೀಠಾಧಿಕಾರಿ ಯನ್ನಾಗಿಸಬೇಕು. ಈ ತೆರನಾಗಿ ಹಜ್ರತ್‌ಶೇಖ ಮಕ್ಕಿ(ಖು)ರವರ ಆದೇಶದಂತೆ ಅವರ ನಿರೀಕ್ಷೆಯಲ್ಲಿದ್ದರು. ಹಜ್ರತ್ ಮೀರಾಂ (ಖು)ರು ಪ್ರೌಢಾವಸ್ಥೆಗೆ ತಲುಪಿದರು. ಹಜ್‌ಗೈಯ್ಯುವ ನಿರ್ಧಾರ ಮಾಡಿದರು ಹಾಗೂ ಹಜ್‌ಗೈದು ಮದೀನಾ ಮುನವ್ವರಾಕ್ಕೆ

ತಲುಪಿದರು. ಆಗ ಈ ವಿಷಯವು ಹಜ್ರತ್‌ಶೇಖ ಮಕ್ಕಿ(ಖು)ರಿಗೆ ತಿಳಿಯಿತೋ ಸಂತೋಷಭರಿತರಾಗಿ ತಮ್ಮ ಬಳಿ ಕರೆದುಕೊಂಡರು ಹಾಗೂ ಹೀಗೆಂದರು. ನಿಮ್ಮ ಕಕ್ಕನವರು ನನಗೆ ಹೀಗೆ ಉಯಿಲು ರೂಪದಲ್ಲಿ ಆದೇಶಿಸಿರುವರು. ಯಾವಾಗ ತಾವು ಬರುವಿರೋ ಆವಾಗ ತಮ್ಮ ಎಲ್ಲ ವಸ್ತುಗಳನ್ನು ನಿಮಗೆ ತಲುಪಿಸಲು ಹೇಳಿರುವರು. ಅಲ್‌ಹಮ್ದುಲಿಲ್ಲಾಹ್! ಅಲ್ಲಾಹುವಿನ ಮಹಾಕೃಪೆಯಿಂದ ನನ್ನ ಆಯಸ್ಸು ವೃದ್ಧಿಸಿತು ಹಾಗೂ ನನ್ನ ಮುರ್ಷಿದ್‌ರ ಆಜ್ಞೆಯನ್ನು ಪೂರ್ಣಗೊಳಿಸಿದೆನು. ಹಜ್ರತ್‌ಶೇಖ ಮಕ್ಕಿ(ಖು)ರು ಹಜ್ರತ್ ಮೀರಾಂ(ಖು)ರಿಗೆ ಎಲ್ಲವನ್ನು ಒಪ್ಪಿಸಿ, ಹಜ್ರತ್‌ರ ನಿರ್ದೇಶನದಂತೆ ಅವರಿಗೆ ಖಿಲಾಫತ್ ನೀಡಿದರು. ಹಾಗೂ ಹೀಗೆಂದರು. ಖಾನ್‌ಖಾಹ್, ಮದರ್‌ಸಾ ನಿಮ್ಮ ಸುಪರ್ದಿಗೆ ತೆಗೆದುಕೊಳ್ಳಿರಿ. ಹಜ್ರತ್‌ರೆಂದರು ನನ್ನ ಸ್ವದೇಶ ಹಿಂದ್ ಇರುವದು. ಅದಕ್ಕಾಗಿ ಈ ಮದರಸಾ ಹಾಗೂ ಪುಸ್ತಕಗಳನ್ನು ಖಾನ್‌ಖಾಹ್ ನಿಮಗೆ ವಕ್ಫ್ ಮಾಡಿರುವೆನು.

ಹಜ್ರತ್‌ರು ಉಡುಪನ್ನು ಧರಿಸಿ, ಅವರಿಗೆ ವಿದಾಯ ಹೇಳಿ ತಮ್ಮ ದೇಶಕ್ಕೆ ಮರಳಿದರು.

ಒಂದು ದಿನ ಹಜ್ರತ್ ಮುಹಮ್ಮದ್(ಸ)ರು ಹೀಗೆ ಹೇಳಿದರು. ಓ ಸೈಯ್ಯದ್ ಮುಹಮ್ಮದ್ ನೀನು ನಿನ್ನ ಸ್ವದೇಶಕ್ಕೆ ಮರಳಿ ಅಲ್ಲಿಯ ಜನರಿಗೆ ಉಪದೇಶಿಸು, ನಿನ್ನ ನಿಜವಾದ ಸ್ಥಳ ಅದೇ ಆಗಿದೆ. ಅದರ ನಂತರ ಹಜ್ರತ್‌ರು ಹಜ್ರತ್ ಶಾಹ್(ಖು)ರ ಸಮಾಧಿಯ ಬಳಿ ಕುಳಿತು ಧ್ಯಾನಸ್ಥರಾದರು. ಅಲ್ಲಿಂದಲೂ ಇದೇ ಆಜ್ಞೆಯಾಯಿತು. ನಂತರ ತಮ್ಮ ದೇಶಕ್ಕೆ ಮರಳಿದರು. ಹಾಗೂ ಇಲ್ಲಿ ಜ್ಞಾನ ಪ್ರಸಾರದಲ್ಲಿ ತೊಡಗಿದರು. ಯಾವಾಗಲೂ ಜಾಮಿಯಾ ಮಸೀದೆ ಬಿಜಾಪುರದಲ್ಲಿ ಇರುತ್ತಿದ್ದರು. ಹಾಗೂ ತಮ್ಮ ಮದ್ರಸಾದಲ್ಲಿ ಧಾರ್ಮಿಕ ಜ್ಞಾನ ನೀಡುತ್ತಾ ಉಪದೇಶವನ್ನು ಸಾರ್ವಜನಿಕರಿಗೆ ನೀಡಿದರು. ತಮ್ಮ ಆಹಾರವನ್ನು ಶಾಹಿ ದಾಸೋಹ ಮನೆಯಿಂದ ಬರುವಂತೆ ವ್ಯವಸ್ಥೆಗೊಳಿಸಿದರು. ಒಂದು ವೇಳೆ ಯಾರಾದರೂ ಹಜ್ರತ್‌ರಿಗೆ ಉಣಬಯಸಿದರೆ ಆತನಿಗೆ ಅದು ಕಡ್ಡಾಯವಾಗುತ್ತಿತ್ತು. ಶಾಹೀ ದಾಸೋಹ ಮನೆಯಿಂದ ಬಡವರಿಗೆ, ಫಕೀರರಿಗೆ, ದರ್ವೇಶಿಗಳಿಗೆ ಮೊದಲು ನೀಡಬೇಕು. ಆ ವೇಳೆಯಲ್ಲಿ ಹಜ್ರತ್‌ರು ಅಷ್ಟನ್ನೇ ಸ್ವೀಕರಿಸುತ್ತಿದ್ದರು. ಎಷ್ಟು ಪ್ರಮಾಣದಲ್ಲಿ ಬಡವರು ಸ್ವೀಕರಿಸುತ್ತಿದ್ದರು ಈ ತೆರನಾಗಿ ಮೂರುವರ್ಷ ಕಳೆದರು.

ಹಜ್ರತ್ ಸೈಯ್ಯದ್ ಮೀರಾಂ ಮುಹಮ್ಮದ್ ಮುದರ್ರಿಸ್‌ರ ಪತ್ನಿ ಹಜ್ರತ್ ಬೀಬಿ ಅಮ್ತುಲ್‌ಹಸೀಬ್ ಸಾಹೆಬಾಖುದ್ದುಸಿರ್ರಾಹ ನಿಧನವಾದಾಗ ಹಜ್ರತ್‌ರ ದ್ವಿತೀಯ ಪುತ್ರರಾದ ಹಜ್ರತ್ ಸುಲ್ತಾನ್ ಸೈಯ್ಯದ್ ಅಬ್ದುಲ್ ರೆಹಮಾನ್ ಹುಸೈನಿ(ಖು)ರು ಜಾಮಿಯಾ ಮಸೀದೆಯ ಬಳಿ ತಾಯಿಯವರ ಸಮಾಧಿಗೈದರು ಹಾಗೂ ತೃತಿಯ ದಿನ ಸಮಾಧಿಯ

ಮೇಲ್ಗಡೆ ಕಟ್ಟಿಗೆಗಳಿಂದ ನಿರ್ಮಿಸಲ್ಪಟ್ಟ ಗುಂಬಜ್ ಇಟ್ಟರು. ಅದರ ವಿವರಣೆ ಹೀಗಿದೆ– ಓರ್ವ ಮುಸ್ಲಿಮೇತರ ರಾಜನು ಯಾರು ತಾಲೂಕಾ ಬಿದ್ನೂರ್‌ದ ರಾಜನಾಗಿದ್ದನು. ಒಂದು ಕಟ್ಟಿಗೆಯ ಮಹಲನ್ನು ಕಾಣಿಕೆಯ ರೂಪದಲ್ಲಿ ಅಲಿ ಆದಿಲ್‌ಶಾಹ್ ಬಿಜಾಪುರದ ಬಾದಶಾಹನಿಗೆ ಕಳುಹಿಸಿದ್ದನು. ಅವರು ತಮ್ಮ ಸೌಭಾಗ್ಯವೆಂದು ಬಗೆದು ಯಾವ ಮಹಲವು ಗುಂಬಜ್‌ದ ತೆರನಾಗಿತ್ತು. ಹಜ್ರತ್ ಬೀಬಿಯವರ ಸಮಾಧಿಯ ಮೇಲೆ ಇಟ್ಟನು ಹಜ್ರತ್ ಮೀರಾಂ ಸೈಯ್ಯದ್ ಮುಹಮ್ಮದ್ ಮುದರ್‍ರಿಸ್(ಖು)ರು ತೃತಿಯ ದಿನ ಫಾತೆಹಾಕ್ಕೆ ಬಂದರು ಹಾಗೂ ಈ ಮಹಲನ್ನು ನೋಡಿ ಹೀಗೆಂದರು. ಓ ಬಾಬಾ ಮಿಯಾಂಸಾಬ್ ನಾನು ನಿಧನ ಹೊಂದಿದರೆ ನೀವು ಇದೆ ತೆರನಾಗಿ ಪೂಜಿಸುವಿರಿ, ಅದಕ್ಕಾಗಿ ನಾನು ಈ ಪ್ರದೇಶದಲ್ಲಿ ಖಡಾಖಂಡಿತವಾಗಿ ಇರಲಾರೆ ಅಲ್ಲಾಹು ನನಗೆ ಈ ಪ್ರದೇಶದಲ್ಲಿ ಇರಿಸಲಾರನು. ಹಸನ್‌ಪುರೆದವರಾದ ಹಜ್ರತ್ ಸೈಯ್ಯದ್ ಅಬ್ದುಲ್ಲಾಹ್ ಸಿಬ್ಗತುಲ್ಲಾಹಿ(ಖು) ತಮ್ಮ ಪುಸ್ತಕವಾದ 'ಖುಲಾಸಯೆ ಸಿಬ್ಗತುಲ್ಲಾಹಿ'ಯಲ್ಲಿ ಹೀಗೆ ಬರೆದಿರುವರು. ಯಾವಾಗ ಹಜ್ರತ್ ಮೀರಾಂ ಸೈಯ್ಯದ್ ಮುಹಮ್ಮದ್ ಮುದರ್‍ರಿಸ್(ಖು)ರ ಅಂತ್ಯಕಾಲ ಸಮೀಪಿಸಿತು. ಆಗ ತಮ್ಮ ದ್ವಿತೀಯ ಪುತ್ರರಾದ ಹಜ್ರತ್ ಸುಲ್ತಾನ್ ಸೈಯ್ಯದ್ ಅಬ್ದುಲ್ ರೆಹಮಾನ್ ಹುಸೈನಿ(ಖು)ರಿಂದ ಹೇಳಿದರು. ನನ್ನ ಸಾವು ಸಮೀಪಿಸಿದೆ. ನನಗೆ ಹಜ್‌ಗಾಗಿ ಕಾಬಾಕ್ಕೆ ಕಳುಹಿಸಿರು. ಕಾರಣ ನಾನು ಅಲ್ಲಿಯೇ ನನ್ನ ಕೊನೆಯುಸಿರೆಳಿಯುವೆನು. ಹಾಗೂ ಮದೀನಾ ಮುನವ್ವರಾದ ಮಣ್ಣಿನಲ್ಲಿ ಮಣ್ಣಾಗುವೆನು. ಆಗ ಹಜ್ರತ್ ಸುಲ್ತಾನ್ ಸೈಯ್ಯದ್ ಅಬ್ದುಲ್ ರೆಹಮಾನ್‌ಹುಸೈನಿ(ಖು)ರು ಪ್ರಯಾಣದ ಸಿದ್ಧತೆಗೈದರು. ಹಜ್ರತ್ ಮೀರಾಂ ಸೈಯ್ಯದ್ ಮುಹಮ್ಮದ್ ಮುದರ್‍ರಿಸ್(ಖು)ರು ಖಿಲಾಫತ್‌ದ ಉಡುಪು ಹಾಗೂ ಉತ್ತರಾಧಿಕಾರತ್ವವನ್ನು ಹಜ್ರತ್ ಸುಲ್ತಾನ್ ಸೈಯ್ಯದ್ ಅಬ್ದುಲ್ ರೆಹಮಾನ್ ಹುಸೈನಿ(ಖು)ರಿಗೆ ಅರ್ಪಿಸಿದರು. ಹಾಗೂ ೩೦೦ ಮುರೀದ್ ಹಾಗೂ ಅನುಯಾಯಿಗಳನ್ನು ಜೊತೆಗೆ ಕರೆದುಕೊಂಡು ಮಕ್ಕಾಕ್ಕೆ ಪ್ರಯಾಣಗೈದರು. ಆಗ ಅಸಂಖ್ಯ ಜನರು ಹಜ್ರತ್‌ರ ಮುರೀದ್‌ರಾದರು. ಕೊನೆಯಲ್ಲಿ ಜನರು ಸಾಗರೋಪಾದಿಯಲ್ಲಿ ಬರತೊಡಗಿದರು. ಆಗ ಹಜ್ರತ್‌ರು ಒಂದು ಮಣ್ಣಿನ ಕುಡಿಕೆಯಲ್ಲಿ ಪಾನಕ ಮಾಡಿಸಿ ಅದರಲ್ಲಿಂದ ಪ್ರತಿಯೊಬ್ಬರಿಗೂ ಒಂದೊಂದು ಬಟ್ಟಲು ನೀಡಿ ತಮ್ಮ ಸಮೃದ್ಧಿದಾಯಕ ಶಿಷ್ಯತ್ವದಲ್ಲಿ ತೆಗೆದುಕೊಂಡರು.

ಯಾವಾಗ ಹಜ್ರತ್ ಮೀರಾಂ ಸೈಯ್ಯದ್ ಮುಹಮ್ಮದ್ ಮುದರ್‍ರಿಸ್(ಖು)ರು ಹಜ್‌ಯಾತ್ರೆಗೆ ಹೊರಡುವ ವಿಷಯವು ಹಜ್ರತ್ ಖ್ವಾಜಾ ಅಮೀನುದ್ದೀನ್ ಆಲಾ ಇವರಿಗೆ ತಲುಪಿದಾಗ ಅವರು ಹೀಗೆಂದರು. ಹಜ್ರತ್‌ರು ತಮ್ಮೊಂದಿಗೆ ನಗರದ ಸಮೃದ್ಧಿಯನ್ನು ಜೊತೆಗೊಯ್ಯುತ್ತಿದ್ದಾರೆ. ಕೊನೆಗೆ ಹೀಗೆಯೇ ಆಯಿತು. ಯಾವಾಗ

ಖ್ವಾಜಾರವರ ಮಾತು ಹಜ್ರತ್‌ರ ಕಿವಿಗೆ ಬಿದ್ದಿತು ಆಗ ಅವರು ಹೀಗೆಂದರು–ಈಗ ಪ್ರದೇಶದ ಸಮೃದ್ಧಿಯು 'ಮಜಜೂಬ್' (ಮಸ್ತಮಲಂಗ್)ರ ಕೈಯ್ಯಲ್ಲಿದೆ.

ಹಜ್ರತ್ ಮೀರಾಂ ಸೈಯ್ಯದ್ ಮುಹಮ್ಮದ್ ಮುದರ್ರಿಸ್(ಖ) ತಮ್ಮ ಮೂರನೆಯ ಪುತ್ರರಾದ ಹಜ್ರತ್ ಸುಲ್ತಾನ್ ಸೈಯ್ಯದ್ ಕರೀಮ್ ಮುಹಮ್ಮದ್ ಹುಸೈನಿ(ಖ)ರಿಗೆ ಖಿಲಾಫತ್ ನೀಡಿ ಶನಿವಾರ ರಜ್ಜಬ್ ತಿಂಗಳ ೫ನೆಯ ದಿನಾಂಕ ಹಿಜ್ರಿಶಕೆ ೧೦೮೩ಕ್ಕೆ ತಮ್ಮ ಜೇಷ್ಠ ಪುತ್ರ ಹಜ್ರತ್‌ಷಾಹ್ ಜೈನುದ್ದೀನ್ ಹಾಗೂ ಹಜ್ರತ್‌ರ ಪುತ್ರರಾದ ಷಾ ಸಿಬ್ಗತುಲ್ಲಾಹ್ ದ್ವಿತೀಯ(ಖ)ರನ್ನು ಜೊತೆಗೆ ಕರೆದುಕೊಂಡು ಮಕ್ಕಾ ಮುವಜ್ಜಮಾಕ್ಕೆ ಹೊರಟರು. ಸ್ಪಷ್ಟವಾಗಿ ಹಜ್ರತ್ ಮೀರಾಂ ಸೈಯ್ಯದ್ ಮುಹಮ್ಮದ್ ಮುದರ್ರಿಸ್(ಖ)ರು ರಂಗೀನ್ ಮಸೀದೆಯ ಸೂಫಿ ವಂಶಜರಾದ ಹಜ್ರತ್ ಮೌಲಾನಾ ಅಹ್ಮದ್ ಜುಬೇರಿ(ಖ)ರ ಸುಪುತ್ರಿಯಾದ ಬೀಬಿ ಅಮ್ತುಲ್‌ಹಸೀಬ್‌ರೊಂದಿಗೆ ವಿವಾಹವಾದರು. ಹಜ್ರತ್ ಮೌಲಾನಾ ಅಹ್ಮದ್ ಜುಬೇರಿ(ಖ)ರು ಹಜ್ರತ್ ಜುಬೇರ್ ಸಹಾಬಿ (ಮುಹಮ್ಮದ್(ಸ)ರ ಸಂಗಾತಿ)ಯವರ ವಂಶದವರಾಗಿರದ್ದಾರೆ. ಬೀಬಿ ಅಮ್ತುಲ್ ಹಸೀಬ್ ಅವರ ಹೊಟ್ಟೆಯಲ್ಲಿ ಓರ್ವ ಪುತ್ರಿ ಹಾಗೂ ಮೂವರು ಪುತ್ರರು ಜನಿಸಿದರು. ಅವರ ಪುತ್ರಿ ಮಾಸಹಾಬಾ(ಖ) ಮುಹಮ್ಮದ್ ಜುಬೇರಿ(ಖ)ರೊಂದಿಗೆ ವಿವಾಹವಾದರು. ಇವರಿಂದ ಓರ್ವ ಪುತ್ರ ಸಿಬ್ಗತುಲ್ಲಾಹ್‌ರು ಜನಿಸಿದರು. ತಮ್ಮ ಹನ್ನೆರಡನೆಯ ವರ್ಷದಲ್ಲಿ ನಿಧನರಾದರು. ಜೇಷ್ಠ ಪುತ್ರ ಷಾಹ ಜೈನುದ್ದೀನ್ ಹುಸೈನಿ(ಖ) ದ್ವಿತೀಯ ಪುತ್ರರಾದ ಹಜ್ರತ್ ಸುಲ್ತಾನ್ ಸೈಯ್ಯದ್ ಅಬ್ದುಲ್ ರೆಹಮಾನ್ ಹುಸೈನಿ(ಖ) ತಮ್ಮ ತಂದೆಯವರ ಪೀಠಾಧಿಕಾರಿಯಾದರು. ಮೂರನೆಯ ಪುತ್ರರಾದ ಹಜ್ರತ್ ಸುಲ್ತಾನ್ ಸೈಯ್ಯದ್ ಕರೀಂ ಮುಹಮ್ಮದ್ ಹುಸೈನಿ(ಖ) ಇರುವರು.

ಹಜ್ರತ್ ಮೀರಾಂ ಸೈಯ್ಯದ್ ಮುಹಮ್ಮದ್ ಮುದರ್ರಿಸ್(ಖ) ಮದೀನಾ ತಯ್ಯಬಾಕ್ಕೆ ಹೋಗುವ ಮೊದಲು ತಮ್ಮ ಮದ್ರಸಾದಲ್ಲಿ ಸರ್ವರಿಗೂ ಯಾರು ಜ್ಞಾನದ ಇಚ್ಛುಕರಾಗಿದ್ದರು. ಅವರಿಗೆ ವಿದ್ಯೆ ದಯಪಾಲಿಸುತ್ತಿದ್ದರು. ಆ ಕಾರಣಕ್ಕೆ ಹಜ್ರತ್‌ರ ಬಿರುದು 'ಮುದರ್ರಿಸ್'(ಶಿಕ್ಷಕ) ಎಂದಾಯಿತು. ಹಜ್ರತ್‌ರ ಮದ್ರಸಾದಲ್ಲಿ ಓರ್ವ ಯಕ್ಷನ (ಜಿನ್ನ) ಪುತ್ರನು ಓದುತ್ತಿದ್ದನು. ಒಂದು ಸಲ ಹಜ್ರತ್‌ರ ಸಂಬಂಧಿಗಳು ಉಪವಾಸದಿಂದಿದ್ದರು. ಮನೆಯಲ್ಲಿ ಮಕ್ಕಳು ಮೂರು ದಿನದಿಂದ ಏನನ್ನೂ ತಿಂದಿರಲಿಲ್ಲ. ಅವರು ಉಪವಾಸವಿರುವ ವಿಷಯವು ಜಾಹೀರಾಯಿತು. ಈ ವಿಷಯವು ಜಿನ್ನನ ಮಗನ ಗಮನಕ್ಕೂ ಬಂದಿತು. ಆತನು ತನ್ನ ತಂದೆಯ ಭಂಡಾರದಿಂದ ಚಿನ್ನದ ನಾಣ್ಯಗಳ ಚೀಲಗಳನ್ನು ಹಜ್ರತ್‌ರ ಕೋಣೆಯಲ್ಲಿ ತಂದಿಟ್ಟನು. ಹಜ್ರತ್‌ರು ಜಾಮಿಯಾ ಮಸೀದೆಯ ಹೌದಿನ ಬಳಿ ವಜೂ(ಅಂಗಶುದ್ಧಿ)ಗಾಗಿ ಹೋಗಿದ್ದರು. ನಂತರ ಮರಳಿ ಕೋಣೆಯ ಬಾಗಿಲನ್ನು ತೆರೆಯಬೇಕೆಂದರೆ ಚಿನ್ನದ ನಾಣ್ಯಗಳ

ಚೀಲಗಳು ಬಹಳ ಇರುವದರಿಂದ ಬಾಗಿಲು ತೆರೆಯಲ್ಪಡಲಿಲ್ಲ. ಹಜ್ರತ್ ಇದರ ಕಾರಣವೇನೆಂದು ಕೇಳಿದರು. ಆಗ ಜಿನ್ನ್‌ನ ಪುತ್ರನು ಹೀಗೆಂದನು-ಹಲಾಲ್(ಶುದ್ಧ) ರೀತಿಯ ಗಳಿಕೆಯ ಚಿನ್ನದ ನಾಣ್ಯಗಳ ಚೀಲಗಳನ್ನು ನನ್ನ ತಂದೆಯ ಆಸ್ತಿಯಿಂದ ತಮ್ಮ ಆಪ್ತರ ಸದ್ಬಳಕೆಗಾಗಿ ತಂದಿರುವೆನು ಸ್ವೀಕರಿಸಬೇಕು. ಆಗ ಹಜ್ರತ್‌ರು ಕೇಳಿದರು ನೀನು ಯಾರು? ನಾನು 'ಜಿನ್'ವಂಶಜನಾಗಿದ್ದೇನೆ. ಹಜ್ರತ್‌ರು ಕೋಪದಿಂದ ಆತನತ್ತ ದೃಷ್ಟಿಬೀರಿ ಹೀಗೆಂದರು-ನಿನ್ನ ಚಿನ್ನದ ನಾಣ್ಯಗಳ ಚೀಲಗಳನ್ನು ಬೇಗನೆ ಇಲ್ಲಿಂದ ತೆಗೆದುಕೊಂಡು ಹೋಗು ಇಲ್ಲದಿದ್ದರೆ ನಾಶವಾಗುವೆ! ತಕ್ಷಣ ಆ (ಯಕ್ಷವು)ಜಿನ್ನವು ತನ್ನ ಚೀಲಗಳನ್ನು ತೆಗೆದುಕೊಂಡು ಹೋಯಿತು.

ಒಂದು ದಿನ ಓರ್ವ ಹಾವಾಡಿಗ ಹಜ್ರತ್‌ರ ಮದರಸಾದ ಬಳಿ ತನ್ನ ಪುಂಗಿಯನ್ನು ಊದಿ ಆಟ ತೋರಿಸುತ್ತಿದ್ದನು. ಆ ಸಮಯದಲ್ಲಿ ಹಲವಾರು ಜನ ಹಜ್ರತ್ ಮೀರಾಂ ಸೈಯ್ಯದ್ ಮುಹಮ್ಮದ್ ಮುದರ್ರಿಸ್(ಖು)ರ ಸಭೆಯಲ್ಲಿ ಹಾಜರಿದ್ದರು. ಅವರಲ್ಲಿ ಉಪರೋಕ್ತ ಜಿನ್(ಯಕ್ಷ)ನ ಮಗನೂ ಸಹ ಇದ್ದನು. ಆತನು ಹಜ್ರತ್‌ರೊಂದಿಗೆ ವಿನಂತಿಸಿದನು. ತಮ್ಮ ಆಜ್ಞೆಯಾದರೆ ನಾನು ಸರ್ಪದ ರೂಪ ತಳೆಯುವೆನು. ತಾವು ಆ ಹಾವಾಡಿಗನನ್ನು ಕರೆಯಿಸಿ ಹಿಡಿಯಲು ಹೇಳಿರಿ ಹಾಗೂ ತಮಾಷೆ ನೋಡಿರಿ, ಹಜ್ರತ್‌ರು ಆತನಿಗೆ ಅನುಮತಿ ನೀಡಿದರು. ಆಗ ಆತನು ಹಾವಿನ ರೂಪ ತಾಳಿ ಒಂದು ಮೂಲೆಯ ರಂಧ್ರದಲ್ಲಿ ಕುಳಿತುಕೊಂಡನು. ಆ ಕಡೆ ಹಾವಾಡಿಗನನ್ನು ಕರೆದು ಹಜ್ರತ್‌ರು ಈ ಹಾವನ್ನು ಹಿಡಿ ಎಂದರು ಆಗ ಆತನು ಬಹುವಿಧವಾಗಿ ಮಂತ್ರಿಸಿದನು ಆದರೆ ಯಶಸ್ವಿಯಾಗಲಿಲ್ಲ. ಕೊನೆಗೆ ಆತನು ಅನಿವಾರ್ಯವಾಗಿ ಏನನ್ನೋ ಓದಿ ಮಣ್ಣಿನ ಮೇಲೆ ಮಂತ್ರಿಸಿದನು ಹಾಗೂ ಹಾವಿನೆಡೆಗೆ ಎಸೆದನು. ಆಗ ಹಾವೂ ಸಹ ಅತ್ಯಂತ ಅನಿವಾರ್ಯವಾಗಿ ಆ ರಂಧ್ರದಿಂದ ಹೊರಬಂದಿತು. ಹಾಗೂ ಆತನ ಬುಟ್ಟಿಯಲ್ಲಿ ಸೇರಿಕೊಂಡಿತು. ಅದೇ ಸಂತೋಷದಲ್ಲಿ ಹಾವಾಡಿಗನು ಅದನ್ನು ತೆಗೆದುಕೊಂಡು ಹೊರಹೊರಟನು. ಮತ್ತೆ ಹಜ್ರತ್‌ರು ಆತನಿಗೆ ಆದೇಶಿಸಿದರು. ಅದನ್ನು ಬಿಟ್ಟುಬಿಡು. ಹಾವಾಡಿಗನು ನಾನು ಅದನ್ನು ಯಾವ ಕಾರಣಕ್ಕೂ ಬಿಡಲಾರೆ ಅದರ ಸಹಾಯದಿಂದ ನನ್ನ ಹೊಟ್ಟೆ ತುಂಬಿಕೊಳ್ಳುವೆನು. ಕೊನೆಗೆ ಹಜ್ರತ್‌ರು ಬಹುವಿಧವಾಗಿ ತಿಳಿಹೇಳಿ, ಸ್ವಲ್ಪ ಹಣವನ್ನು ನೀಡಿ ಅದನ್ನು ಬಿಡಿಸಿಕೊಂಡರು. ಕೊನೆಗೆ ಹಾವಾಡಿಗ ಹೋದ ನಂತರ ಹಜ್ರತ್‌ರು ಜಿನ್‌ನ ಮಗನೊಂದಿಗೆ ಕೇಳಿದರು. ನಿನ್ನ ಸ್ಥಿತಿ ಏನಾಗಿತ್ತು. ಆಗ ಜಿನ್ನನ ಪುತ್ರನು ಹೀಗೆಂದನು-ಯಾವಾಗ ಆತನು ಮಣ್ಣನ್ನು ಮಂತ್ರಿಸಿ ನನ್ನ ಮೇಲೆ ಎಸೆದನು ಆಗ ಆತನ ಬುಟ್ಟಿಯ ಹೊರತಾಗಿ ಎಲ್ಲ ಪ್ರದೇಶವು ಅಗ್ನಿಮಯವಾಗಿತ್ತು. ಅದಕ್ಕಾಗಿ ನಾನು ಅನಿವಾರ್ಯವಾಗಿ ಆತನ ಬುಟ್ಟಿಯಲ್ಲಿ ಪ್ರವೇಶಿಸಿದೆನು. ಆಗ ಹಜ್ರತ್‌ರು ಆತನಿಗೆ ಎಚ್ಚರಿಕೆ ನೀಡಿದರು. ಮತ್ತೆ

ಎಲ್ಲಿಯೂ ಹೀಗೆ ಮಾಡಬೇಡ ಮತ್ತು ಅಂದಿನಿಂದ ಆತನ ಓದನ್ನು ನಿಲ್ಲಿಸಿದರು. ಇದರಿಂದ ಆತನ ಬರುವಿಕೆಯೂ ನಿಲ್ಲಲ್ಪಟ್ಟಿತು.

ಹಜ್ರತ್ ಮೀರಾಂ ಸೈಯ್ಯದ್ ಮುಹಮ್ಮದ್ ಮುದರ್ರಿಸ್(ಖ)ರ ಓರ್ವ ಶಿಷ್ಯರಾದ ಅಬ್ದುಲ್ ಅಲಿಯವರು ಇದ್ದರು. ಹಜ್ರತ್‌ರಿಗೆ ಅತಿಯಾದ ಗೌರವ ನೀಡುತ್ತಿದ್ದರು. ಮತ್ತು ಸದಾಕಾಲ ಅವರ ಸೇವೆಯಲ್ಲಿ ತೊಡಗಿರುತ್ತಿದ್ದರು. ಹಜ್ರತ್ ಮಿಯಾಂ ಷಮ್ಸುಜ್ಜುಹಾ ಸೂಫಿ(ಖ)ರು ತಮ್ಮ ಪತ್ರಗಳಲ್ಲಿ ಹೀಗೆ ಬರೆದಿರುವರು. ಅಬ್ದುಲ್ ಅಲಿಯವರು ತೀವ್ರವಾದ ರೋಗದಿಂದ ಬಳಲಿ ನಿಧನ ಹೊಂದಿದರು. ಅವರ ಶವಕ್ಕೆ ಸ್ನಾನ ಮಾಡಿಸಿ ಕಫನ್ ತೊಡಿಸಿ ದಫನ್‌ಗಾಗಿ ಹೊರಟು ದಾರಿಯಲ್ಲಿ ಅಂತಿಮ ನಮಾಜ್‌ಗಾಗಿ ಜಾಮಿಯಾ ಮಸೀದೆಯಲ್ಲಿ ತರಲಾಯಿತು. ಆಗ ಹಜ್ರತ್‌ರು ಶವದ ಬಳಿ ಬಂದು ಹೀಗೆಂದರು –ಕಫನ್ ಬಿಚ್ಚಿರಿ ಹಾಗೂ ಆತನ ಅಂತಿಮ ದರ್ಶನಕ್ಕಾಗಿ ಆತನ ಮುಖ ನೋಡುವೆನು. ಯಾವಾಗ ಕಫನ್ ತೆರೆಯಲಾಯಿತೋ ಆಗ ತಮ್ಮ ಹಸ್ತವನ್ನು ಅವರ ಹಣೆಯ ಮೇಲಿರಿಸಿ ಹೀಗೆ ಉಚ್ಚರಿಸಿದರು. ಓ, ಮಿಯಾಂ ಅಬ್ದುಲ್ ಅಲಿ ನಿನಗೆ ಇದು ಹೇಗೆ ಉಚಿತವೆನಿಸಿತು. ನಾನು ವಿದಾಯ ಹೇಳದೇ ನೀನು ಅದು ಹೇಗೆ ಹೊರಟುಹೋದಿ? ಅವರು ತತ್‌ಕ್ಷಣ ಕಣ್ತೆರೆದು ಮುಗುಳ್ನಕ್ಕರು ಮತ್ತು ಒಂದು ಕ್ಷಣದ ನಂತರ ಕಣ್ಣು ಮುಚ್ಚಿಕೊಂಡರು ಹಾಗೂ ಮೃತ್ಯು ಹೊಂದಿದರು.

ಮಿಯಾಂ ನುಸ್ರತಿಯವರು ದಖನಿ ಭಾಷೆಯ ಗ್ರಂಥವಾದ 'ಗುಲ್ಷನೇ ಇಷ್ಕ'ದ ಲೇಖಕರಾಗಿರುವರು. ಅವರು ಹಜ್ರತ್ ಮೀರಾಂ ಸೈಯ್ಯದ್ ಮಹಮ್ಮದ್ ಮುದರ್ರಿಸ್(ಖ)ರ ಸೇವೆಯಲ್ಲಿ ಬೈಯ್ಯತ್‌ಗಾಗಿ ಆಗಮಿಸಿದರು. ಆಗ ಹಜ್ರತ್‌ರು ಹೀಗೆ ಕೇಳಿದರು. ನೀವು ಯಾವ ಪಂಥದಲ್ಲಿ ಶಿಷ್ಯತ್ವ ಸ್ವೀಕರಿಸಬಯಸುತ್ತೀರಿ ಹಾಗೂ ಯಾವ ಮಹಾಪುರುಷರಲ್ಲಿ ದೃಢನಂಬುಗೆ ಇಡುತ್ತೀರಿ ನುಸ್ರತಿಯವರು ಹೀಗೆಂದರು. ಹಜ್ರತ್ ಖ್ವಾಜಾ ಸೈಯ್ಯದ್ ಮುಹಮ್ಮದ್ ಗೇಸುದರಾಜ್‌ರೊಂದಿಗೆ ನಂಬುಗೆ ಇಡುವೆನು ಅದನ್ನಾಲಿಸಿ ಅವರನ್ನು 'ಚಿಷ್ತಿಯಾ ಪರಂಪರೆ'ಯಲ್ಲಿ ಶಿಷ್ಯತ್ವವನ್ನು ದಯಪಾಲಿಸಿದರು. ಹಾಗೂ ಹೀಗೆಂದರು ನೀವು ಖ್ವಾಜಾರನ್ನು ಸ್ತುತಿಸಿ ದ್ವಿಪದಿಯನ್ನು ಬರೆಯಿರಿ. ಏಕೆಂದರೆ ನೀವು ಹಜ್ರತ್‌ರೊಂದಿಗೆ ತುಂಬು ನಂಬುಗೆ ಹೊಂದಿದ್ದೀರಿ.

'ಖುಲಾಸಾಯೆ ಸಿಬ್ಗತುಲ್ಲಾಹ್' ಎಂಬ ಗ್ರಂಥದಲ್ಲಿ ಲೇಖಕರು ಹೀಗೆ ಬರೆದಿರುವರು. ಒಂದು ದಿನ ಹಜ್ರತ್ ಮೀರಾಂ ಸೈಯ್ಯದ್ ಮುಹಮ್ಮದ್ ಮುದರ್ರಿಸ್(ಖ)ರು ಸ್ವತಃ ಹೀಗೆಂದರು ನನ್ನಲ್ಲಿ ಮೂರು ವಿಶೇಷಗಳಿದ್ದವು. ಅವುಗಳನ್ನು ಮೂವರು ಪುತ್ರರಲ್ಲಿ ಹಂಚಿದೆನು. ಮೊದಲು ಹಜ್ರತ್‌ಶಾಹ್ ಜೈನುದ್ದೀನ್(ಖ)ರಿಗೆಹಜ್, ತಸವ್ವುಪ್ ಆಚರಣೆಯ ಜ್ಞಾನವನ್ನು ಮಿಯಾಂಸಾಬ್ ಅಂದರೆ ಹಜ್ರತ್ ಸುಲ್ತಾನ್ ಸೈಯ್ಯದ್

ಅಬ್ದುಲ್‌ರೆಹಮಾನ್ ಹುಸೈನಿಯವರಿಗೆ ಹಾಗೂ 'ಕುರ್‌ಆನ್ ಷರೀಫ್‌ದ ಕಂಠಪಾಠ' ಮೂರನೆಯವರಾದ ಹಜ್ರತ್‌ಸಾಬ್ ಅಂದರೆ ಹಜ್ರತ್ ಸೈಯ್ಯದ್ ಕರೀಂ ಮುಹಮ್ಮದ್ ಹುಸೈನಿಯವರಿಗೆ ನೀಡಿದೆನು.

ಹಜ್ರತ್ ಮೀರಾಂ ಸೈಯ್ಯದ್ ಮುಹಮ್ಮದ್ ಮುದರ್ರಿಸ್‌ರ ಖಲೀಫಾ ಹಜ್ರತ್ ಸೈಯ್ಯದ್ ಅಹ್ಮದ್ ಜೋನ್‌ಪುರಿ(ಖು)ರು ಉಲ್ಲೇಖಿಸಿರುವರು ಯಾವಾಗ ಹಜ್ರತ್‌ರು ಬಿಜಾಪುರದಿಂದ 'ಕಾಬಾ'ಕ್ಕೆ ಹೊರಟರು ಹಾಗೂ ರಂಜಾನಿನ ೧೧ನೆಯ ದಿನ ಹಿಜ್ರಿಶಕೆ ೧೦೮೪ರಂದು ಅಲ್ಲಿ ತಲುಪಿದರು. ಹಾಗೂ ಹಜ್ ಪೂರ್ತಿಗೊಳಿಸಿ ಒಂದು ವರ್ಷದವರೆಗೆ ಅಲ್ಲಿಯೇ ನೆಲೆಸಿದರು ಹಾಗೂ ಮರುವರುಷ ಷವ್ವಾಲಿನ ೨ನೆಯ ದಿನ ಮದೀನಾ ಮುನವ್ವರಾದತ್ತ ಹೊರಟರು ಹಾಗೂ ಹಾದಿಯಲ್ಲಿಯೇ ತೀವ್ರ ತೆರನಾಗಿ ರೋಗದಿಂದ ಬಳಲಿದರು. ಷವ್ವಾಲಿನ ೨೪ನೆಯ ದಿನದಂದು ಹಿಜ್ರಿಶಕೆ ೧೦೮೫ರಂದು ಶನಿವಾರದಂದು 'ಬೈರಅಲಿ' ಸ್ಥಳಕ್ಕೆ ತಲುಪಿದರು. ಹಾಗೂ ರೋಜಯೆ ಮುಬಾರಕ್ ಜನಾಬೆ ರಿಸಾಲತ್ ಪನಾ ಹಜ್ರತ್ ಮುಹಮ್ಮದ್ ಸ್ವಲ್ಲಲ್ಲಾಹು ಅಲೈಹಿ ವ ಸ್ವಲ್ಲಮರ ದರ್ಶನ ಗೈದು ಹೀಗೆ ಉಚ್ಚರಿಸಿದರು. ಅಲ್ಲಾಹುವಿನ ಇಚ್ಛೆಯು ಇದೇ ಆಗಿದೆ. ನಾನು ಮದೀನಾದಲ್ಲಿ ಜೀವಂತವಾಗಿ ಹೋಗಲಾರೆನು ಹಾಗೂ ಇಲ್ಲಿಯೇ ಮೃತ್ಯು ಹೊಂದುವೆನು. ಹಾಗೂ ತಮ್ಮ ಜೇಷ್ಠ ಪುತ್ರರಾದ ಹಜ್ರತ್‌ಶಾಹ್ ಜೈನುದ್ದೀನ್(ಖು)ರಿಗೆ ಹೀಗೆ ಉಯಿಲು ಮಾಡಿದರು. ನನ್ನ ಶವವನ್ನು ಮದೀನಾಕ್ಕೆ ಒಯ್ಯಿರಿ ಹಾಗೂ ಅಲ್ಲಿಯ ಮಹಾಪುರುಷರಿಗೆ ತಿಳಿಸಿರಿ ಅವರು ಎಲ್ಲಿ ಇಚ್ಛಿಸುವರೋ ಅಲ್ಲಿ ದಫನ್ ಮಾಡಲಿ! ನಂತರ ಕುರ್‌ಆನನ್ನು ಓದಿ ಜಿಕ್ರಯೆ ಕಲ್ಮಯೆ ಷಹಾದತ್‌ದಲ್ಲಿ (ಕಲ್ಮಾದ ಜಪ ಮಾಡುತ್ತಾ) ಲೀನಾರಾಗಿ ನಿಧನ ಹೊಂದಿದರು. ಹಜ್ರತ್‌ರ ನಿಧನದ ಇಸ್ವಿಯು 'ಹುಜ್ನೆಅಜೀಂ' (ಅತ್ಯಂತ ದುಃಖದಾಯಕ ವಿಷಯ) ಅಂದರೆ ೧೦೮೫ ಎಂದಿರುವದು. ಹಾಗೂ ಜನನದ ದಿನಾಂಕವು 'ಮಶಾಯಿಖ್‌ನವಾಜ್' ೧೦೧೦ ಇರುವದು. "ಖುಲಾಸಯೆ ಸಿಬ್ಗತುಲ್ಲಾಹಿ"ಯ ಗ್ರಂಥಕರ್ತರು ಹೀಗೆ ಬರೆದಿರುವರು ಹಜ್ರತ್ ಶಾಹ್ ಜೈನುದ್ದೀನ್(ಖು) ಹಜ್ರತ್ ಮೀರಾಂ ಸೈಯ್ಯದ್ ಮುದರ್ರಿಸ್‌ರ ಪವಿತ್ರ ಶವವನ್ನು 'ಬೈರಅಲಿ'ಯಲ್ಲಿ ಸ್ನಾನಗೈದು, ಕಫನ್ ತೊಡಿಸಿ ಹಜ್ರತ್‌ರ ತಾಬೂತ್‌ನ್ನು ೩೦೦ ಮುರೀದ್‌ರೊಂದಿಗೆ ಮದೀನಾ ಮುನ್ವರಾದ ಜನ್ನತುಲ್ ಬಖಿಯಲ್ಲಿ ತೆಗೆದುಕೊಂಡು ಹೋದರು ಹಾಗೂ ಹಜ್ರತ್‌ರ ಹೇಳಿಕೆಯಂತೆ ಅಲ್ಲಿಯ ಷರೀಫ್‌ರೊಂದಿಗೆ ಮಾತನಾಡಿದರು. ಆ ಷರೀಫ್‌ರಿಗೆ ಮೊದಲೇ ಸ್ವಪ್ನದಲ್ಲಿ ಹಜ್ರತ್ ಮುಹಮ್ಮದ್ ಮುಸ್ತಫಾ(ಸ)ರು ಹೀಗೆ ಸೂಚಿಸಿದ್ದರು. ನನ್ನ ಪುತ್ರ ಸೈಯ್ಯದ್ ಮುಹಮ್ಮದ್(ರ)ರ ಶವವು ಬರುವದು ಅವರನ್ನು ಷಾಹ್ ಸಿಬ್ಗತುಲ್ಲಾಹ್‌ರ ಸಮಾಧಿಯ ಬಳಿಯಲ್ಲಿ ದಫನ್‌ಗೈಯ್ಯಿರಿ, ನಂತರ ಷರೀಫರು ಪವಿತ್ರ ಶವವನ್ನು 'ಜನ್ನತೆಬಖಿ' ಕಬರಸ್ತಾನದಲ್ಲಿ ಹಜ್ರತ್‌ಶಾಹ್(ಖು)ರ ಸಮಾಧಿಯ ಬಳಿ ಹೀಗೆ ದಫನ್‌ಗೈದರು.

ಹಜ್ರತ್‌ಶಾಹ್ ಸಿಬ್ಗತುಲ್ಲಾಹ್‌ರ ನಾಭಿಯ ಬಳಿ ಹಜ್ರತ್‌ರ ಶಿರವು ಬರುವಂತೆ ಸಮಾಧಿಸ್ಥಗೊಳಿಸಿದರು. ಮೂರನೆಯ ದಿನ ಜಿಯಾರತ್‌ವಿತ್ತು. ಆ ದಿನ ಹಜ್ರತ್‌ಶಾಹ್ ಜೈನುದ್ದೀನ್(ಖು)ರ ಪುತ್ರರಾದ ಹಜ್ರತ್‌ಶಾಹ್ ಸಿಬ್ಗತುಲ್ಲಾಹ್ ಸಾನಿ (ದ್ವಿತೀಯ)ರನ್ನು ಮದೀನಾದ ವಿದ್ವಾಂಸರು, ಸಾರ್ವಜನಿಕರ ಸಮ್ಮುಖದಲ್ಲಿ ಪೀಠಾಧಿಕಾರಿಯ ಪಟ್ಟವನ್ನು ನೀಡಿ ಖಿಲಾಫತ್‌ದ ಉಡುಗೆ ತೊಡಿಸಿದರು.

ಸ್ಪಷ್ಟವಿದೆ, ಈ ಉಪರೋಕ್ತ ಉಲ್ಲೇಖದಂತೆ ಷಾಹ್ ಜೈನುದ್ದೀನ್ ಹುಸೈನಿಯವರ ಸಂತಾನ, ಹಜ್ರತ್ ಸುಲ್ತಾನ್ ಸೈಯದ್ ಅಬ್ದುಲ್ ರೆಹಮಾನ್ ಹುಸೈನಿಯವರಿಗೆ ಹಜ್ರತ್ ಮೀರಾಂ ಸೈಯ್ಯದ್ ಮುಹಮ್ಮದ್(ಖು)ರಿಂದ ಖಿಲಾಫತ್ ದೊರೆತಿತ್ತೋ ಅದಕ್ಕಿಂತಲೂ ಈ ಖಿಲಾಫತಕ್ಕೆ ಶ್ರೇಷ್ಠತೆ ನೀಡಿದ್ದಾರೆ. ಹಜ್ರತ್ ಸೈಯ್ಯದ್ ಅಲಿ ಮುಹಮ್ಮದ್ ಹುಸೈನಿ(ಖು) 'ತಜಲ್ಲಿಯಾತೆ ರೆಹಮಾನಿ' ಪುಸ್ತಿಕೆಯಲ್ಲಿ ಹೀಗೆ ಬರೆದಿರುವರು ಹಜ್ರತ್ ಮೀರಾಂ ಸೈಯ್ಯದ್ ಮುಹಮ್ಮದ್ ಮುದರ್ರಿಸ್(ಖು) ೩೦ ವರ್ಷಗಳಿಗಿಂತ ಹೆಚ್ಚುಕಾಲ ಬಿಜಾಪುರದಲ್ಲಿ ವಾಸಿಸಿದರು. ಇವರಿಂದ ನೂರಕ್ಕೂ ಹೆಚ್ಚು ಜನರಿಗೆ ಖಿಲಾಫತ್ ದೊರೆಯಿತು. ಸಂಕ್ಷಿಪ್ತದಲ್ಲಿ ಎಷ್ಟು ಹೆಸರುಗಳು ಲಭಿಸಿದವೋ ಅಷ್ಟನ್ನು ಇಲ್ಲಿ ಬರೆಯಲಾಗಿದೆ.

ಹಜ್ರತ್ ಮೀರಾಂ ಸೈಯ್ಯದ್ ಮುಹಮ್ಮದ್ ಮುದರ್ರಿಸ್(ಖು)ರ ಖಲೀಫಾಗಳ ಪಟ್ಟಿ

೧) ಹಜ್ರತ್ ಸುಲ್ತಾನ್ ಸೈಯ್ಯದ್ ಅಬ್ದುಲ್ ರೆಹಮಾನ್ ಹುಸೈನಿ ದ್ವಿತೀಯ ಪುತ್ರ ಹಾಗೂ ಪೀಠಾಧಿಕಾರಿ

೨) ಹಜ್ರತ್ ಶಾಹ್ ಜೈನುದ್ದೀನ್ ಜೇಷ್ಠಪುತ್ರ.

೩) ಹಜ್ರತ್ ಸೈಯ್ಯದ್ ಕರೀಂ ಮುಹಮ್ಮದ್ ಹುಸೈನಿ ಕಿರಿಯಪುತ್ರ

೪) ಹಜ್ರತ್ ಮೌಲಾನಾ ಮುಹಮ್ಮದ್ ಜುಬೈರಿ(ಖು)ಅಳಿಯ

೫) ಹಜ್ರತ್‌ಶಾಹ್ ಮುಸ್ತಫಾ, ಸಹೋದರಿಯ ಪುತ್ರ.

೬) ಹಜ್ರತ್ ಸೈಯ್ಯದ್ ಅಹ್ಮದ್ ಜೋನ್‌ಪುರಿ.

೭) ಹಜ್ರತ್ ಸೈಯ್ಯದ್ ಅಬ್ದುಲ್ ರಹೀಂ.

೮) ಹಜ್ರತ್ ಸೈಯ್ಯದ್ ಅಬ್ದುಲ್ ರಸೂಲ್

೯) ಹಜ್ರತ್ ಸೈಯ್ಯದ್ ಮೂಸಾ

೧೦) ಹಜ್ರತ್ ಮೀಯಾಂ ಅಬ್ದುಲ್ ಅಲಿ

೧೧) ಹಜ್ರತ್ ಸೈಯ್ಯದ್ ಅಬ್ದುಲ್ ಲತೀಫ್

೧೨) ಹಜ್ರತ್ ಮೀಯಾಂ ಖಾಸಿಂ ಸೂಫಿ

೧೩) ಹಜ್ರತ್ ಸೈಯ್ಯದ್ ಮೀರಾಂ ಮುಫ್ತಿ.

೧೪) ಹಜ್ರತ್ ಶಾಹ್ ಹಬೀಬ್.

೧೫) ಹಜ್ರತ್ ಹಾಜಿ ಅಬುಲ್ ಖಾಸಿಂ.

೧೬) ಹಜ್ರತ್ ಮಖ್ದುಮ್ ಶಾಹ್.

೧೭) ಹಜ್ರತ್ ಶೇಖ ಅಮಾನಲ್ಲಾಹ್.

೧೮) ಹಜ್ರತ್ ದರ್ವೇಶ್ ಅಲಿ.

೧೯) ಹಜ್ರತ್ ಶೇಖ ಮುಹಿಯುದ್ದೀನ್

೨೦) ಹಜ್ರತ್ ಜಮಾಲ್ ಮುಹಮ್ಮದ್

೨೧) ಹಜ್ರತ್ ಶಾಹ್ ಮನ್ಸೂರ್

೨೨) ಹಜ್ರತ್ ಮುಹಮ್ಮದ್ ಮೋಹ್ಸಿನ್.

೨೩) ಹಜ್ರತ್ ಬುರ್ಹಾನ್ ಮುಹಮ್ಮದ್.

೨೪) ಹಜ್ರತ್ ಮೀರಾಂ ಸಾಹೇಬ್.

೨೫) ಹಜ್ರತ್ ಮಿರ್ಜಾಸಾಹಬ್

೨೬) ಹಜ್ರತ್ ಬಾವಾಸಾಹಬ್ ಗಾಝಿ.

೨೭) ಹಜ್ರತ್ ಬಾಬಾ ಮಿಯಾಂ

೨೮) ಹಜ್ರತ್ ಸೈಯ್ಯದ್ ಅಬ್ದುಲ್‌ರಜಾಕ್

೨೯) ಹಜ್ರತ್ ಶೇಖ ಹಬೀಬುಲ್ಲಾಹ್.

೩೦) ಹಜ್ರತ್ ಶಾಹ್ ಅಬ್ದುಲ್ಲಾಹ್

೩೧) ಹಜ್ರತ್ ಸಾದಿಕ್ ಮುಹಮ್ಮದ್

೩೨) ಹಜ್ರತ್ ಸಾಹೇಬ್ ಜು ಸಾಹೇಬ್

೩೩) ಹಜ್ರತ್ ಸೈಯ್ಯದ್ ಮುಹಮ್ಮದ್

೩೪) ಹಜ್ರತ್ ಸೈಯ್ಯದ್ ಅಬ್ದುಲ್ ಖಾದಿರ್

೩೫) ಹಜ್ರತ್ ಷರೀಫ್ ಹುಸೈನ್.

೩೬) ಹಜ್ರತ್ ಶೇಖ ದಾವೂದ್.

೩೭) ಹಜ್ರತ್ ಫಖಿ ಇಬ್ರಾಹಿಂ.

೩೮) ಹಜ್ರತ್ ಫಖಿ ಅಲಿ.

೩೯) ಹಜ್ರತ್ ಮೀರ ಖಾಸಿಂ(ಖು) ಇರುವರು.

೭೫. ಸೈಯ್ಯದ್ ಜೈನುದ್ದೀನ್ ಊರ್ಫ್ ಶಾಸಾಹೇಬ್(ಖು)

ಹಜ್ರತ್ ಮೀರಾಂ ಸೈಯ್ಯದ್ ಮುಹಮ್ಮದ್ ಮುದರ್ರಿಸ್(ಖು)ರ ಜೇಷ್ಠ ಪುತ್ರರಾದ ಇವರು ಧಾರ್ಮಿಕ ಜ್ಞಾನ ಹಾಗೂ ಸೂಫಿಜ್ಞಾನದಲ್ಲಿ ಪರಿಪೂರ್ಣತೆ ಸಾಧಿಸಿದ್ದರು. ದೇವನಿಷ್ಠೆಯಲ್ಲಿ ಏಕಾಂತವಾಸದಲ್ಲಿ ಹಾಗೂ ದರವೇಶಿತನ ಅಪ್ಪಿಕೊಳ್ಳುವದರಲ್ಲಿ ಅಚಲರಾಗಿದ್ದರು. ಜ್ಞಾನ ಹಾಗೂ ಬೈಯ್ಯತ್, ಸಮೃದ್ಧಿ ಹಾಗೂ ಖಿಲಾಫತ್‌ವನ್ನು ತಮ್ಮ ತಂದೆಯುವರಿಂದ ಪಡೆದರು. ತಮ್ಮ ತಂದೆಯುವರೊಂದಿಗೆಯೇ 'ಹಜ್‌ಯಾತ್ರೆ'ಕೈಗೊಂಡರು. ತಂದೆಯವರ ನಿಧನದ ಸಮಯದಲ್ಲಿ ಅವರ ಜೊತೆಗಿದ್ದರು. ಕೆಲ ಸಮಯದ ನಂತರ ಮದೀನಾ ತಯ್ಯಬಾದಿಂದ ಬಿಜಾಪುರ ನಗರಕ್ಕೆ ಆಗಮಿಸಿದರು. ಕೆಲದಿನ ಇಲ್ಲಿ ಇದ್ದು ಮತ್ತೆ ಮಕ್ಕಾ ಹಾಗೂ ಮದೀನಾ ಯಾತ್ರೆಗೆ ಹೋಗುವ ಇಚ್ಛೆ ಹೊಂದಿದರು. ಹಾಗೂ ಹಾದಿಯಲ್ಲಿ ಹಡಗಿನಲ್ಲಿಯೇ ಕೊನೆಯುಸಿರೆಳೆದರು. ಹಡಗಿನವರು ತಮ್ಮ ರೂಢಿಯಂತೆ ಜನಾಜಾ(ಶವ)ದ ಅಂತಿಮ ಪ್ರಾರ್ಥನೆ ನಮಾಜ್‌ಗೈದು ಜಲಸಮಾಧಿಗೊಳಿಸುವದು ಎಂದು ನಿರ್ಧರಿಸಿದರು. ಆದರೆ ಹಜ್ರತ್‌ರ ಪುತ್ರರಾದ ಹಜ್ರತ್ ಸೈಯ್ಯದ್ ಸಿಬ್ಗತುಲ್ಲಾಹ್(ಖು)ರು ತಂದೆಯ ಜೊತೆಗಿದ್ದರು. ಈ ವಿಷಯವನ್ನು ನಿರಾಕರಿಸಿದರು. ಈ ವಿಷಯದ ಮೇಲೆಯೇ ಚರ್ಚೆ ನಡೆಯುತ್ತಿರುವಾಗ ಸಮುದ್ರದಲ್ಲಿ ಬಿರುಗಾಳಿ ಬೀಸಿತು ಹಾಗೂ ಹಡಗುಗಳು ಅಲುಗಾಡತೊಡಗಿದವು. ಅಕಸ್ಮಿಕವಾಗಿ ಆ ಹಡಗು 'ಯಮನ್' ಪ್ರದೇಶದ ದಂಡೆಗೆ ತಲುಪಿತು. ಹಡಗಿನ ಜನರು ಅಲ್ಲಿ ಇಳಿದರು. ಹಾಗೂ ಹಜ್ರತ್‌ರನ್ನು ಅಲ್ಲಿ ದಫನ್ ಮಾಡಿದರು. ಹಜ್ರತ್‌ರ ಪುತ್ರರಾದ ಸೈಯ್ಯದ್ ಸಿಬ್ಗತುಲ್ಲಾಹ್(ಖು)ರೂ ಮಹಾಪುರುಷರಾಗಿದ್ದರು. "ದಾವತೆ ಅಸ್ಮಾ ಹಾಗೂ ಅಮಲಿಯಾತ್" ಜ್ಞಾನದಲ್ಲಿ ಪ್ರಭುತ್ವ ಹೊಂದಿದ್ದರು. ಹಜ್‌ಯಾತ್ರೆ

ಪರಿಪೂರ್ಣಗೊಳಿಸಿದರು. ಹಾಗೂ 'ಅರ್ಕಾಟ್'ದಲ್ಲಿ ಸಮಾಧಿಸ್ಥರಾದರು. ಹಜ್ರತ್‌ರ ಸಂತಾನವು ಹಾಗೂ ಸಂಬಂಧಿಗಳು ಅರ್ಕಾಟ್‌ನಲ್ಲಿ ಇರುವರು. ಇಂದಿನವರೆಗೂ ಅವರ ವಂಶವು ಅಸ್ತಿತ್ವದಲ್ಲಿರುವದು. ಹಜ್ರತ್ ಹಾಜಿ ಸೈಯ್ಯದ್ ಹಸನ್(ಖು) ತಮ್ಮ ಕಾಲದ ಮಹಾಪುರುಷರಲ್ಲಿ ಓರ್ವರಾಗಿದ್ದರು. ಇವರ ಸಮಾಧಿ ಸ್ಥಳವು ಬಿಜಾಪುರದ ಕೋಟೆಯ ಒಳಗಡೆ ಸೀಬಾಜಾರ್ (ಗಚ್ಚಿಮಹಲ್)ದಲ್ಲಿ ಇರುವದು. ಇವರು ಹಜ್ರತ್ ಸೈಯ್ಯದ್ ಸಿಬಗತುಲ್ಲಾಹ್(ಖು)ರ ಪುತ್ರರಾಗಿರುವರು.

ಹಜ್ರತ್‌ರ ನಿಧನವು ರಜ್ಜಬ್ ತಿಂಗಳ ೧೭ನೆಯ ದಿನಾಂಕ ಹಿಜ್ರಿಶಕೆ ೧೧೬೭ರಂದು ಆಯಿತು. ಹಜ್ರತ್‌ರ ನಿಧನದ ದಿನಾಂಕವನ್ನು 'ಪೇಶ್ವಾಯಿ ಕಾಮಿಲ್ ಅಜ್‌ಜಹಾಂ ರಫ್ತ್' ಎಂದು ಹೇಳಲಾಗಿದೆ ಅದರರ್ಥವು ೧೧೬೭ ಎಂದಾಗುತ್ತದೆ.

■

೭೬. ಹಜ್ರತ್‌ಶಾಹ ಸಿಬಗತುಲ್ಲಾಹ ದ್ವಿತೀಯ (ಖು)

ಹಜ್ರತ್‌ಶಾಹ ಸಿಬಗತುಲ್ಲಾಹ್ ದ್ವಿತೀಯ(ಖು) ಶವ್ವಾಲ್ ತಿಂಗಳ ೪ನೆಯ ದಿನಾಂಕದಂದು ಹಿಜ್ರಿಶಕೆ ೧೧೩೧ರಂದು ನಿಧನರಾದರು. ನಿಧನ ದಿನಾಂಕ 'ಮಾ ವಸಾಲ್ ಬ ಜಿಕ್ರಅಲ್ಲಾಹ್' ೧೧೩೧ ಎಂದು ಹೇಳಿರುವರು. ಹಜ್ರತ್‌ರ ಸಮಾಧಿ ಸ್ಥಳವು ಮಹ್ಮದಪುರ ನಗರದಲ್ಲಿ ಉರ್ಫ್ ಅರ್ಕಾಟ್‌ದಲ್ಲಿ ಹಸನ್‌ಪುರ ಎಂಬ ಸ್ಥಳದಲ್ಲಿ ಉಪಸ್ಥಿತಿ ಇರುವದು. ಹಜ್ರತ್ ಸೈಯ್ಯದ್ ಹಸನ್(ಖು)ರ ಸಹೋದರ ಹಜ್ರತ್ ಸೈಯ್ಯದ್ ಮುಹಮ್ಮದ್ ಪೀರ(ಖು) ಇರುವರು. ಅವರ ಸಮಾಧಿಯು ಅಹ್ಮದಾಬಾದ್ ಗುಜರಾತನಲ್ಲಿರುವದು ಹಜ್ರತ್‌ರ ಪವಾಡಗಳು ಇಂದಿಗೂ ಜಾರಿಯಲ್ಲಿವೆ. ಹಜ್ರತ್‌ರ ಉರುಸ್‌ನ ದಿನ ಸಾವಿರಾರು ಸಂಖ್ಯೆಯಲ್ಲಿ ಜನ ಸೇರುವರು. ಹಜ್ರತ್ ಹಾಜಿ ಸೈಯ್ಯದ್ ಹಸನ್ ಖಾದ್ರಿಯವರ ಇನ್ನೋರ್ವ ಸಹೋದರರಿರುವರು ಅವರ ಸಮಾಧಿಯು ಅಲ್ಲಾಪುರ ಅಗಸಿಯ ಹೊರಗಡೆ ಉಪಸ್ಥಿತವಿರುವದು.

ಹಜ್ರತ್‌ರ ನಾಮಧೇಯವು ಸೈಯ್ಯದ್ ಮೆಹಮೂದ್ ಸಾಹೇಬ ಹುಸ್ಸೈನಿ(ಖು) ಇರುವದು. ಹಜ್ರತ್‌ರ ನಿಧನದ ದಿನಾಂಕವು 'ಖುದ್ವತುಸ್ಸಾಲಿಕೀನ್' ಎಂದಿರುವದು.

'ಖುಲಾಸಯೇ ಸಿಬಗ್‌ತಲ್ಲಾಹೀ' ಗ್ರಂಥಕರ್ತರು ಹೀಗೆ ಬರೆದಿರುವರು. ಹಜ್ರತ್ ಮಿಯಾಂ ಸೈಯ್ಯದ್ ಮುಹಮ್ಮದ್ ಮುದರ್‍ರಿಸ್(ಖು) ನಿಧನರಾದರು. ಆಗ ಹಜ್ರತ್‌ರ ಪುತ್ರರಾದ ಹಜ್ರತ್‌ಶಾಹ್ ಜೈನುದ್ದೀನ್ ಪುಸ್ಸೈನಿ(ಖು) ಮದೀನಾ ಮುನವ್ವರಾದಲ್ಲಿ ಎರಡು ತಿಂಗಳವರೆಗೆ ಇದ್ದು ತಮ್ಮ ವಾಸಸ್ಥಳವಾದ ಬಿಜಾಪುರಕ್ಕೆ ತಮ್ಮ ತಂದೆಯವರ

ಶಿಷ್ಯರಾದ ಸುಮಾರು ಮೂರುನೂರು ಜನರ ಜೊತೆ ಮರಳಿ ಬಂದರು ಹಾಗೂ ಕೆಲ ಕಾಲದವರೆಗೆ ಬಿಜಾಪುರದಲ್ಲಿದ್ದರು. ಮತ್ತೆ ತಮ್ಮ ಮೊಮ್ಮಗರಾದ ಹಜ್ರತ್ ಸೈಯ್ಯದ್ ಕರೀಂ ಮುಹಮ್ಮದ್ ದ್ವಿತೀಯ ಪುತ್ರರಾದ ಹಜ್ರತ್‌ಶಾಹ್ ಸಿಬಗತಲ್ಲಾಹ್ ಸಾನಿಯವರಿಗೆ ಖಿಲಾಫತ್ ಹಾಗೂ ಪೀಠಾಧಿಪತಿಯನ್ನಾಗಿಸಿ ತಮ್ಮ ಚಿಕ್ಕ ಮೊಮ್ಮಗರಾದ ಹಜ್ರತ್ ಹಾಜಿ ಸೈಯ್ಯದ್ ಹಸನ್(ಖು)ರಿಗೂ ತಮ್ಮ ಜೊತೆ ಕರೆದುಕೊಂಡು 'ಕಾಬಾ'ಕ್ಕೆ ಹೊರಟರು. ಹೋಗುವಾಗ ತಮ್ಮ ಸಹೋದರರ ಪುತ್ರ ಹಜ್ರತ್‌ಶಾಹ್ ಖಾಸಿಂ ಹುಸೈನಿ(ಖು)ರಿಗೆ ತಮ್ಮ ಶಿಷ್ಯನನ್ನಾಗಿಸಿ ಖಿಲಾಫತ್ ನೀಡಿದರು. ಹಾಗೂ ಅದೇ ಗ್ರಂಥದಲ್ಲಿ ಹೀಗೆ ಬರೆಯಲಾಗಿದೆ. ಯಾವಾಗ ಹಜ್ರತ್‌ರು ಕಾಬಾಕ್ಕೆ ಹೊರಡಲು ನಿಶ್ಚಯಿಸಿ ಬಿಜಾಪುರದಿಂದ ಹೊರಟು ಕರ್ನೂಲಕ್ಕೆ ಹೋದರು ಅಲ್ಲಿಂದ 'ಕಡಪಾ'ಕ್ಕೆ ಬಂದರು. ಇಲ್ಲಿಂದ ತಮ್ಮ ಮೊಮ್ಮಗ ಹಜ್ರತ್ ಹಾಜಿ ಸೈಯ್ಯದ್ ಹಸನ್(ಖು)ರಿಗೆ ತಮ್ಮ ಜೊತೆ ಕರೆದುಕೊಂಡು 'ಅರ್ಕಾಟ್'ದತ್ತ ಹೊರಟರು. ಅಲ್ಲಿ ಕೆಲ ತಿಂಗಳು ಇದ್ದು ನವಾಬ್ ಹಿರಾಸತ್‌ಖಾನ್ ಇತ್ಯಾದಿ ಜನರಿಗೆ ಶಿಷ್ಯರನ್ನಾಗಿಸಿ ಮಲ್‌ಬಾರಕ್ಕೆ ಹೋದರು. ಅಲ್ಲಿಂದ ಹಡಗಿನಲ್ಲಿ ಸವಾರರಾಗಿ 'ಕಾಬಾ'ಕ್ಕೆ ಹೋದರು. ೧೪೦ಜನರು ಅವರ ಜೊತೆಗಿದ್ದರು. ಪ್ರಯಾಣಕ್ಕೆ ಬೇಕಾಗುವ ಅವಶ್ಯ ಸಾಮಗ್ರಿ ಹಾಗೂ ಕುದುರೆ, ರೂಪಾಯಿಗಳುಳ್ಳ ಪಲ್ಲಕ್ಕಿ ಇದ್ದವು. ಎಲ್ಲವನ್ನು ಬಡವರಲ್ಲಿ ಹಾಗೂ ನಿರಾಶ್ರಿತರಲ್ಲಿ ಹಂಚಿದರು. ಕಾಬಾಕ್ಕೆ ತಲುಪಿದರು. ಅಲ್ಲಿ ಕೆಲ ತಿಂಗಳು ಇದ್ದು 'ಹಜ್'ಗೈದು ಮದೀನಾ ಮುನವ್ವರಾಕ್ಕೆ ಹೋದರು. ಹಾಗೂ ಹಜ್ರತ್ ಮುಹಮ್ಮದ್(ಸ)ರ ಜಿಯಾರತ್‌ಗೈದು ಹಜ್ರತ್‌ಶಾಹ್ ಸಿಬಗತಲ್ಲಾಹ್ ನಾಯಬೇರಸೂಲ್, ಸ್ವಲ್ಲಲ್ಲಾಹು ಅಲೈಹಿ ವಸ್ವಲ್ಲಮ್ ಸಮಾಧಿಯ ದರ್ಶನ ಹಾಗೂ ಹಜ್ರತ್ ಸೈಯ್ಯದ್ ಮುಹಮ್ಮದ್ ಮುದರ್‍ರಿಸ್(ಖು)ರ ಸಮಾಧಿದರ್ಶನಗೈದು, ತಮ್ಮ ಉದ್ದೇಶ ಪೂರ್ತಿಗೊಳಿಸಿಕೊಂಡರು. ಕೆಲ ದಿನ ಅಲ್ಲಿ ಇದ್ದು ಬಗ್ದಾದ್ ಷರೀಫ್‌ಕ್ಕೆ ಹೊರಟರು. ಹಡಗಿನಲ್ಲಿ ಒಂದು ವಾರದವರೆಗೆ ತೀವ್ರವಾಗಿ ಕಾಯಿಲೆಯಿಂದ ಬಳಲಿದರು. ಶುಕ್ರವಾರದ ರಾತ್ರಿ ೨೨ನೆಯ ದಿನಾಂಕ, ಸಫರ ತಿಂಗಳಲ್ಲಿ ಹಿಜ್ರಿಶಕೆ ೧೧೨೯ರಲ್ಲಿ ನಿಧನ ಹೊಂದಿದರು. ಹಜ್ರತ್‌ಹಾಜಿ ಹಸನ್(ಖು) ಹಾಗೂ ಜೊತೆಯಲ್ಲಿದ್ದ ೧೪೦ ಜನರು ಹಾಗೂ ಹಡಗಿನ ಒಡೆಯನು ಪವಿತ್ರ ಶವಕ್ಕೆ ಸ್ನಾನಗೈದು ಅಂತಿಮ ನಮಾಜ್ ಸಲ್ಲಿಸಿ, ಯಥಾಪ್ರಕಾರ ಸಮುದ್ರದಲ್ಲಿ ಜಲಸಮಾಧಿ ಗೈಯ್ಯಬೇಕು ಹಜ್ರತ್‌ಹಾಜಿ ಹಸನ್(ಖು) ತಮ್ಮ ಪುಸ್ತಿಕೆಯಲ್ಲಿ ಹೀಗೆ ಬರೆದಿರುವರು. ಆ ರಾತ್ರಿ ಸಮುದ್ರದಿಂದ ಅಗೋಚರವಾಣಿ ಪ್ರಸ್ತುತವಾಯಿತು. ಶಾಜೈನುದ್ದೀನ್‌ರ ಶವವನ್ನು ಸಮುದ್ರದಲ್ಲಿ ಬಿಡಬೇಡಿರಿ. ಇಲ್ಲದಿದ್ದರೆ ನೀವೆಲ್ಲ ನಾಶವಾಗುತ್ತೀರಿ. ಈ ವಾಣಿಯನ್ನು ಎಲ್ಲರೂ ಆಲಿಸಿದರು. ಇಂಥದರಲ್ಲಿ ಬಿರುಗಾಳಿ ಬೀಸಿತು. ಹಾಗೂ ಹಡಗಿನ ಚಾಲಕನು ಹಡಗನ್ನು ನಡೆಸದಾದನು. ಎಲ್ಲರೂ ವಿಚಲಿತಗೊಂಡಿದ್ದರು. ಆಗ ಹಡಗು 'ನಹಾಪ್ರದೇಶ'ದ ಯಮನ್ ಅರಣ್ಯದ ಸಮೀಪ

ತಲುಪಿತು. ಹಾಗೂ ಬಿರುಗಾಳಿ ಸ್ಥಗಿತಗೊಂಡಿತು. ಬೆಳಗಾಗಲು ಎಲ್ಲರೂ ಅಲ್ಲಾಹುವಿಗೆ ಕೃತಜ್ಞತೆ ಸಲ್ಲಿಸಿ, ಪವಿತ್ರಶವಕ್ಕೆ ಸ್ನಾನಮಾಡಿಸಿ, ಕಫನ್ ತೊಡಿಸಿ, ಹಡಗಿನಿಂದ ಸಮುದ್ರದ ದಂಡೆಗೆ ತಲುಪಿಸಿದರು. 'ಫಜಾ' ಪ್ರದೇಶದ ಜನರು ಈ ಸುದ್ದಿ ಕೇಳಿ ಅಲ್ಲಿ ಹಾಜರಾದರು. ಆಗ ಅಂತಿಮ ನಮಾಜ್ ಸಲ್ಲಿಸಿ ಅಲ್ಲಿಯೇ ದಫನ್ ಮಾಡಿದರು. ಹಜ್ರತ್ ಹಾಜಿ ಹಸನ್ ತಮ್ಮ ಜೊತೆಗಾರರೊಂದಿಗೆ ಅಲ್ಲಿ ಮೂರು ದಿನದವರೆಗೆ ಇದ್ದರು. ನಂತರ ಹಜ್ರತ್ ಸೈಯ್ಯದ್ ಅಬ್ದುಲ್ ಖಾದಿರ್ (ರ)ರವರ 'ಜಿಯಾರತ್'ಗಾಗಿ ಬಗ್ದಾದ್ ಷರೀಫ್‌ಕ್ಕೆ ಹೊರಟರು. ಹಜ್ರತ್ ಶಾಹ ಜೈನುದ್ದೀನ್(ಖು)ರ ನಿಧನದ ದಿನಾಂಕವನ್ನು 'ಗುಲೇ ಗುಲಬನ್ ವ ಗುಲ್ಜಾರೆ ತರೀಖತ್' ಎಂದಿರುವರು. ಅದರ ಒಟ್ಟು ಸಂಖ್ಯೆ ೧೧೭೯ ಆಗುವದು. ಹಜ್ರತ್ ಶಾಹ್ ಜೈನುದ್ದೀನ್(ಖು)ರ ಪತ್ನಿಯವರಾದ ಹಜ್ರತ್ ಬೀಬಿ ಸುಲ್ತಾನ್ ಸಹಾಬಾ ಬಿನ್ತ(ಮಗಳು) ಹಜ್ರತ್‌ಶಾ ಮೂಸಾ ಬಿನ್ ಹಜ್ರತ್‌ಶಾ ಅಬ್ದುಲ್ ಲತೀಫ್ ಖಾದ್ರಿ(ಖು) ಇದ್ದರು. ಇವರಿಂದ ಮೂವರು ಪುತ್ರಿಯರು ಹಾಗೂ ಓರ್ವ ಪುತ್ರ ಜನಿಸಿದರು.

'ರೋಜವತಲ್ ಔಲಿಯಾ'ದ ಲೇಖಕನು ಹಜ್ರತ್‌ಶಾಹ್ ಜೈನುದ್ದೀನ್(ಖು)ರ ಜೊತೆಗಾರರು ಕೊನೆಯ ಘಟ್ಟದಲ್ಲಿ ಹಜ್ರತ್ ಹಾಜಿ ಹಸನ್(ಖು)ರ ಸ್ಥಳದಲ್ಲಿ ಹಜ್ರತ್ ಶಾ ಸಿಬಗತಲ್ಲಾಹ್ ಸಾನಿ(ಖು)ರ ಉಪಸ್ಥಿತಿ ಎಂದು ಬರೆದಿರುವರು. ಸಂಪ್ರದಾಯದಂತೆ ತಪ್ಪೆಂದು ತಿಳಿದು ಬರುವದು ಒಂದು ವೇಳೆ ಅವರ ಗ್ರಹಿಕೆಯು ಹೀಗೆ ಆಗಿರುವದು ಅಥವಾ ಬರಹಗಾರರ ಬರಹದಲ್ಲಿ ಹೀಗೆ ಇರುವದು. ಇವೆರಡೂ ಸಾಧ್ಯತೆಗಳು ಇರುವವು. ಇಲ್ಲದಿದ್ದರೆ ಈ ಭಿನ್ನತೆ ಆಗುತ್ತಿರಲಿಲ್ಲ. ಏನೆ ಆಗಲಿ ಉಪರೋಕ್ತ ಉಲ್ಲೇಖವು ಅದೇ ವಂಶದವರಾದ ಓರ್ವ ಮಹಾಪುರುಷರು ಬರೆದಿರುವದರಿಂದ ಹೆಚ್ಚಿಗೆ ನಂಬಲರ್ಹವಾಗಿದೆ. ಹಜ್ರತ್‌ರ ಸಂತಾನದಿಂದ ಈಗ ಯಾರೂ ಉಳಿದಿರುವದಿಲ್ಲ. ಕೇವಲ ಸೈಯ್ಯದ್ ಶಾ ಮುಹಮ್ಮದಲ್ ಹುಸೈನಿ ಸಿಬ್ಗತೆಇಲಾಹಿ ಶಿಷ್ಯ ಹಾಗೂ ಖಲೀಫಾ, ಪೀರ್ ದಸ್ತಗೀರ್ (ಖು)ಹಾಗೂ ಅವರ ನಾಲ್ಕು ಪುತ್ರರು ಸೈಯ್ಯದ್ ಫಜಲುಲ್ಲಾಹ್ ಹುಸೈನಿ ಸೈಯ್ಯದ್ ಜೈನುದ್ದೀನ್ ಹುಸೈನಿ, ಸೈಯ್ಯದ್ ಅಲಿ ಮುಹಮ್ಮದ್ ಹುಸೈನಿ ಹಾಗೂ ಸೈಯ್ಯದ್ ಅಬ್ದುಲ್ಲಾಹ್ ಹುಸೈನಿ ಇರುವರು.

■

೭೭. ಹಜ್ರತ್ ಸೈಯ್ಯದ್ ಅಬ್ದುಲ್ ರೆಹಮಾನ್ ಉರ್ಫ್ ಮಿಯಾಂಸಾಬ್(ಖ)

ಇವರು ಹಜ್ರತ್ ಸೈಯ್ಯದ್ ಮುಹಮ್ಮದ್ ಮುದರ್‍ರಿಸ್(ಖ)ರ ದ್ವಿತೀಯ ಪುತ್ರ ಹಾಗೂ ಪೀಠಾಧಿಪತಿ ಆಗಿರುವರು. ಮಹಾಪುರುಷರು, ಸೂಫಿತ್ವದ ಮೇರು ಶಿಖರ ತಲುಪಿದವರಾಗಿದ್ದರು. ಉಪದೇಶ ನೀಡುತ್ತಿದ್ದರು. 'ತಜಲ್ಲಿಯಾತೆ ರೆಹ್ಮಾನಿ'ಯಲ್ಲಿ ಯಾವುದು ಅವರ ಪುತ್ರರಿಂದ ಬರೆಯಲ್ಪಟ್ಟ ಗ್ರಂಥವಾಗಿದೆ. ಹಜ್ರತ್‌ರ ಬಳಿ ಕೊಡುಗೆ ರೂಪದಲ್ಲಿ ಕಾಣಿಕೆಗಳು ಬಹಳಷ್ಟು ಬರುತ್ತಿದ್ದವು. ಅವರು ಅದನ್ನು ತಮ್ಮ ಬಳಿ ಇಡುತ್ತಿರಲಿಲ್ಲ. ಹಾಗೂ ಅಲ್ಲಾಹುವಿನಲ್ಲಿ ಹಲವು ಸಲ ಹೀಗೆ ಪ್ರಾರ್ಥಿಸುತ್ತಿದ್ದರು. ಓ ಅಲ್ಲಾಹ್! ಹೀಗೆ ಮಾಡು, ನಾನು ನಿಧನ ಹೊಂದಿದಾಗ ಮನೆಯಲ್ಲಿ ಏನೂ ಇರದಿರಲಿ ಹಾಗೂ ನನ್ನ ಕಫನ್ ದಫನ್‌ವು ಸಾಲಗೈದು ಮಾಡಲಿ! ನಿಧನಕ್ಕಿಂತ ೨೨ ವರ್ಷ ಪೂರ್ವದಲ್ಲಿ ಹಜ್ರತ್ ಗೌಸುಲ್ ಆಜಂ(ರ) ರವರ ಉರುಸಿನ ದಿನ ಹಜ್ರತ್‌ರ ಓರ್ವ ಶಿಷ್ಯನು ಊಟದ ತಟ್ಟೆಯನ್ನು ಹಜ್ರತ್‌ರ ಎದುರಿಗೆ ತಂದಿಟ್ಟನು. ಹಜ್ರತ್‌ರ ಹಲವಾರು ಖಲೀಫಾಗಳು ಅಲ್ಲಿ ಉಪಸ್ಥಿತರಿದ್ದರು. ಹಜ್ರತ್‌ರು ಅವರಿಂದ ಹೀಗೆ ಕೇಳಿದರು. ಯಾರ ಗುರುವು ನಿಧನವಾಗುತ್ತಾನೋ ಆಗ ಆತನ ಶಿಷ್ಯರು, ಉರೂಸ್ ಗೈಯ್ಯುವರು. ಶಿಷ್ಯರು ಉತ್ತರಿಸಿದರು. ಯಾರು ಆ ದುರಾದೃಷ್ಟ ಶಿಷ್ಯನಿರುವನು. ಗುರುವಿನ ಉರೂಸ್ ಮಾಡಲಾರನು. ಹಜ್ರತ್ ಮುಗುಳ್ನಕ್ಕರು. ಹಾಗೂ ಹೀಗೆಂದರು. ಇನ್ಷಾಅಲ್ಲಾಹ್‌ತ್‌ಆಲಾ (ದೇವನಿಚ್ಛಿಸಿದರೆ) ಈ ಫಕೀರನು ಶಿಷ್ಯರಿಗೆ ಈ ಅವಕಾಶ ನೀಡಲಾರನು. ಅಲ್ಲಾಹು ಹೀಗೆ ಮಾಡುವನು. ಆ ದಿನವೇ ರಬ್ಬಿಯುಸ್ಸಾನಿ ಉರುಸ್ ಇರುವದು. ನಿಧನದ ಸಮಯದಲ್ಲಿ ತಮ್ಮ ಪುತ್ರರಿಗೆ ಹೀಗೆ ಕೇಳುತ್ತಿದ್ದರು. ಹಜ್ರತ್ ಗೌಸುಲ್ ಆಜಂ(ರ)ರ ಉರುಸ್ ಯಾವಾಗ ಇರುವದು. ನಿಧನದ ಸಮಯದಲ್ಲಿ ತಮ್ಮ ಪುತ್ರರಿಗೆ ಹೀಗೆ ಕೇಳುತ್ತಿದ್ದರು. ಹಜ್ರತ್ ಗೌಸುಲ್ ಆಜಂ(ರ) ರ ಉರುಸ್ ಯಾವಾಗ ಇರುವದು. ಇನ್ಷಾಅಲ್ಲಾಹ್ ತಲಾ (ದೇವನಿಚ್ಛಿಸಿದರೆ) ನಿನ್ನ ನಿಧನವು ಅಂದೇ ಆಗುವದು. ಅವರು ಹೇಳಿದ ಪ್ರಕಾರವೇ ರಬ್ಬಿಯುಸ್ಸಾನಿಯ ೧೧ನೆಯ ದಿನಾಂಕದಂದು ಹಿಜ್ರಿಶಕೆ ೧೧೨೦ರಲ್ಲಿ ನಿಧನ ಹೊಂದಿದರು. ಹಜ್ರತ್‌ರ ಸಮಾಧಿಯು ಪಟ್ಟಣದ ಒಳಗೆ ಜಾಮಿಯಾ ಮಸೀದೆಯ ಹತ್ತಿರ ಪೂರ್ವ ದಿಕ್ಕಿನೆಡೆಗೆ ಹಜ್ರತ್‌ರ ತಾಯಿಯ ಸಮಾಧಿಯ ಪಕ್ಕದಲ್ಲಿ ಇರುವದು. ಹಜ್ರತ್‌ರು ಸ್ವತಃ ತಾಯಿಯವರ ಗುಂಬಜ್ ನಿರ್ಮಿಸಿದ್ದರು ಹಾಗೂ ತಮ್ಮ ಸಮಾಧಿಯ ಪಕ್ಕದಲ್ಲಿ ಹಜ್ರತ್‌ರ ಪತ್ನಿಯವರ ಸಮಾಧಿ ಇರುವದು. 'ನಫ್ಸೆ ರೆಹ್ಮಾನಿ' ಎಂಬ ಫಾರ್ಸಿ ಭಾಷೆಯ ಪ್ರಸಿದ್ಧ ಪತ್ರಿಕೆ ಇರುವದು. ಹಜ್ರತ್‌ರಿಂದಲೇ ಬರೆಯಲ್ಪಟ್ಟಿರುವದು. ಹಾಗೂ ಶೇಖ ಅಲಿ ಲೇಖಕರು 'ನವಾಯಿದೆ ಅಲೈ' ಎಂಬ ಹೆಸರಲ್ಲಿ ಅರಬ್ಬಿ ಭಾಷೆಗೆ ಅದನ್ನು ಅನುವಾದಿಸಿರುವರು.

'ಖುಲಾಸಯೇ ಸಿಬಗ್‌ತುಲ್ಲಾಹ್' ಎಂಬ ಗ್ರಂಥದ ಗ್ರಂಥಕರ್ತರು ಹೀಗೆ ಬರೆದಿರುವರು. ಹಜ್ರತ್ ಮೀರಾಂ ಸೈಯ್ಯದ್ ಮುಹಮ್ಮದ್ ಮುದರ್‍ರಿಸ್(ಖು) 'ಕಾಬಾಕ್ಕೆ' ಹೋಗುವ ನಿರ್ಧಾರ ಮಾಡಿದರು. ತಮ್ಮ ಜೇಷ್ಠ ಪುತ್ರ ಹಜ್ರತ್ ಶಾ ಜೈನುದ್ದೀನ ಹುಸೈನಿ (ಖು)ರಿಗೆ ಕರೆದು ಕೇಳಿದರು. ಓ! ಪುತ್ರನೆ ಶಾಸಾಹೇಬ್ ನಾನು ನನ್ನ ಖಿಲಾಫತ್ ಹಾಗೂ ಪೀಠವನ್ನು ನಿನಗೆ ದಯಪಾಲಿಸುವೆನು. ನೀನು ಏನು ಹೇಳುವಿ? ಹಜ್ರತ್‌ರಿಗೆ ಅವರ ಪುತ್ರರು ಹೀಗೆಂದರು ಈ ಭಾರ ಎತ್ತುವದು ನನ್ನಿಂದ ಸಾಧ್ಯವಾಗದು. ಮತ್ತೆ ತಮ್ಮ ತೃತಿಯ ಪುತ್ರರಾದ ಹಜ್ರತ್ ಸುಲ್ತಾನ್ ಸೈಯ್ಯದ್ ಕರೀಂ ಮುಹಮ್ಮದ್ ಹುಸೈನಿ(ಖು)ರಿಂದ ಕೇಳಿದರು. ಓ! ಪುತ್ರನೆ ಹಜ್ರತ್‌ಸಾಬ್ ನಾನು ನನ್ನ ಖಿಲಾಫತ್ ಹಾಗೂ ನಿನಗೆ ಪೀಠವನ್ನು ನೀಡುವೆನು ನೀನೇನ್ನುವಿ? ಅವರೂ ತಮ್ಮ ಹಿರಿಯ ಸಹೋದರನಂತೆ ಹಿಂಜರಿದರು. ಹಜ್ರತ್‌ರು ಹೀಗೆ ಯೋಚಿಸಿದರು. ಬಿಜಾಪುರದ ಸರ್ವ ಸೂಫಿವಂಶಜರನ್ನು ಸೇರಿಸಿ ತಮ್ಮ ಅಳಿಯರಾದ ಹಜ್ರತ್ ಮೌಲಾನಾ ಮುಹಮ್ಮದ್ ಜುಬೈರಿ (ಖು)ರಿಗೆ ಯಾರು ಜ್ಞಾನ ಸಾಗರವಾಗಿದ್ದರು. ಹಾಗೂ ಸೂಫಿ ಜ್ಞಾನದಲ್ಲಿ ತಮಗೆ ತಾವೇ ಸಾಟಿಯಾಗಿದ್ದರು. ಅವರನ್ನು ತಮ್ಮ ಖಲೀಫಾ ಹಾಗೂ ಪೀಠಾಧಿಪತಿಯನ್ನಾಗಿಸಲು ನಿರ್ಧರಿಸಿದರು.

ಒಂದು ದಿನ ಹಜ್ರತ್‌ರು ತಮ್ಮ ಕೋಣೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ಹಜ್ರತ್ ಸುಲ್ತಾನ್ ಸೈಯ್ಯದ್ ಅಬ್ದುಲ್ ರೆಹಮಾನ್ ಹುಸೈನಿ(ಖು) ಹಜ್ರತ್‌ರ ಕಾಲುಗಳನ್ನು ಒತ್ತುತ್ತಾ ಹೀಗೆಂದರು–ನಮಗೆ ಅನ್ಯಾಯ ಮಾಡುತ್ತಿದ್ದೀರಿ, ಇದನ್ನು ಕೇಳುತ್ತಲೇ ಹಜ್ರತ್‌ರು ಎದ್ದು ಕುಳಿತರು. ಹಾಗೂ ಹೀಗೆ ಕೇಳಿದರು. ಓ ಬಾಬಾಮಿಯಾಂಸಾಬ್ ನಾನು ನಿಮ್ಮೊಂದಿಗೆ ಏನು ಅನ್ಯಾಯವೆಸಗಿದೆನು? ಹಜ್ರತ್‌ರು ಹೀಗೆಂದರು ಖಿಲಾಫತ್ ಹಾಗೂ ಪೀಠಾಧಿಕಾರವು ಪುತ್ರರ ಹಕ್ಕಾಗಿದೆ. ಆದರೆ ತಾವು ಅಳಿಯರಿಗೆ ನೀಡುತ್ತಿದ್ದೀರಿ. ಈ ಕಾರಣಕ್ಕೆ ನಮಗೆ ಅನ್ಯಾಯವಾಗಿದೆ. ಹಜ್ರತ್‌ರು ಹೀಗೆಂದರು ಓ ಬಾಬಾಮಿಯಾಂಸಾಹೇಬ್ ನಾನು ಬಾಬಾಶಾಸಾಬ್, ಹಾಗೂ ಬಾಬಾ ಹಜ್ರತ್‌ಸಾಬ್‌ರಿಗೆ ಖಿಲಾಫತ್ ಹಾಗೂ ಪೀಠಾಧಿಕಾರ ನೀಡುವೆನೆಂದರೆ ಅವರು ಅದನ್ನು ನಿರಾಕರಿಸಿದರು. ಹಾಗೂ ಹೀಗೆಂದರು ಈ ಭಾರವನ್ನು ನಮ್ಮಿಂದ ಎತ್ತಲಾಗುವದಿಲ್ಲ. ನಿಮ್ಮ ಸಿರಿವಂತ ಚಲನೆಯನ್ನು ಗಮನಿಸಿ ನಿಮಗೂ ಕೇಳಲಿಲ್ಲ. ಏಕೆಂದರೆ ಈ ಭಾರವನ್ನು ಎತ್ತಲು ನಿಮ್ಮಿಂದಲೂ ಆಗದು ಈಗ ನೀವೇನೆನ್ನುತ್ತೀರಿ? ಆಗ ತಂದೆಯವರಿಗೆ ಹೀಗೆ ಹೇಳಿದರು. ನಿಮ್ಮ ಕೃಪಾದೃಷ್ಟಿ ನನ್ನ ಮೇಲಾದರೆ ಈ ಭಾರವೆಲ್ಲ ಹಗುರ ಹೂವಾಗುವದು. ಹೇಗೆಂದರೆ ಖುತ್ಬುಲ್ ಖತ್ತಾಬ್ ಹಜ್ರತ್ ಶಾ ಸಿಬ್ಗತುಲ್ಲಾಹ್‌ರು ಹೀಗೆಂದಿರುವರು 'ಏಕ್ ನಜರ್ ಆಶಿಕ್‌ಕಿ ಚಾಲಿಸ್ ಛಿಲ್ಲೊಂಸೆ ಬೆಹತರ್ ಹೈ' ಗುರುವಿನ ಒಂದು ಕೃಪಾ ದೃಷ್ಟಿಯು ನಲ್ವತ್ತು ಬಾರಿ ಧ್ಯಾನಕ್ಕೆ

ಕೂಡ್ರುವುದಕ್ಕಿಂತಲೂ ಉತ್ತಮವಾಗಿದೆ. ಈ ಮಾತನ್ನು ಆಲಿಸಿದ ನಂತರ ತಮ್ಮ ಪುತ್ರನಿಗೆ ನೆಲದ ಮೇಲೆ ಮಲಗಿಸಿ ತಮ್ಮ ಪವಿತ್ರ ನಾಲಿಗೆಯಿಂದ ತಮ್ಮ ಪುತ್ರನ ಪವಿತ್ರ ಎದೆಯನ್ನು ನೆಕ್ಕಿದರು. ಅದರೊಂದಿಗೆಯೇ ಹೃದಯದಲ್ಲಿದ್ದ ಕಲ್ಮಶ ಹಾಗೂ ಲೋಕಪ್ರೀತಿ ಹೊರಟು ಹೋಯಿತು. ಹೃದಯವು ಕನ್ನಡಿಯಂತೆ ಶುಭ್ರಗೊಂಡಿತು. ಆಗ ಹಜ್ರತ್‌ರು ಅನುಪಮ ವಲಿಯಲ್ಲಾಹ್ ಆದರು. ಭೂಮಿ ಹಾಗೂ ಆಕಾಶದಲ್ಲಿರುವ ಎಲ್ಲ ರಹಸ್ಯಗಳು ಹಜ್ರತ್‌ರಿಗೆ ಗೋಚರವಾದವು. ಮತ್ತೆ ಹಜ್ರತ್‌ರು ತಮ್ಮ ಬಳಿಯ ಖಿಲಾಫತ್ತಿನ ಉಡುಪು ಅವರು ಹಜ್ರತ್ ಶಾಹ್ ಸಿಬಗತಲ್ಲಾಹ್‌ರಿಂದ ಹಜ್ರತ್‌ಶೇಖ ಅಬ್ದುಲ್ ಅಜೇರಿ ಮುಹಮ್ಮದ್ ಏಲಕ್ಕಿಯವರಿಂದ ಪಡೆದುಕೊಂಡಿದ್ದರೋ ಅದನ್ನು ತಮ್ಮ ಪುತ್ರನಿಗೆ ನೀಡಿದರು. ಹಾಗೂ ಜೋಹರ್ ನಮಾಜ್‌ಕ್ಕಾಗಿ ಕೋಣೆಯಿಂದ ಹೊರಬಂದರು. ಆಗ ಈರ್ವರೂ ಮಹಾಪುರುಷರ ಮುಖಚರ್ಯೆಯು ಒಂದೇ ಸಮನಾಗಿತ್ತು. ಯಾರೂ ಗುರುತು ಹಿಡಿಯಲು ಸಾಧ್ಯವಿರಲಿಲ್ಲ. ಹಜ್ರತ್ ಪೀರ್ ದಸ್ತಗೀರ್(ಖು)ರು ಹೀಗೆ ಹೇಳುತ್ತಿದ್ದರು. ಆ ಸಮಯದಲ್ಲಿ ಹಜ್ರತ್ ಸುಲ್ತಾನ್ ಸೈಯ್ಯದ್ ಅಬ್ದುಲ್ ರೆಹಮಾನ್ ಹುಸೈನಿ(ಖು)ರು ತಮ್ಮ ತಂದೆಯವರಿಂದ ಮೂರು ವಿಷಯದಲ್ಲಿ ವಿನಂತಿಸಿದರು. ಮೊದಲನೆಯದು ನನಗೆ ಜ್ಞಾನವಿಲ್ಲ, ಜ್ಞಾನ ಒದಗಿಸಿರಿ, ಎರಡನೆಯದು ನನ್ನ ಮನೆಯ ಮುಂದೆ ಆನೆ ಇದ್ದವು. ಈಗ ಮನೆಯಲ್ಲಿ ಉಪವಾಸ ಇರಬೇಕು. ಮೂರನೆಯದು ಯಾವ ವ್ಯಕ್ತಿಯೂ ನನಗಿಂತ ಮುಂದುವರಿಯದಿರಲಿ ಹಜ್ರತ್ ಮೀರಾಂ ಸೈಯ್ಯದ್ ಮುಹಮ್ಮದ್ ಮುದರ್ರಿಸ್(ಖು)ರು ಹೀಗೆಂದರು ದೇವನಿಚ್ಛಿಸಿದರೆ ಹೀಗೆಯೇ ಆಗುವದು. ಮತ್ತೆ ತಮ್ಮ ಪವಿತ್ರ ನಾಲಿಗೆ ಹಜ್ರತ್ ಸೈಯ್ಯದ್ ಅಬ್ದಲ್ ರೆಹಮಾನ್(ಖು)ರ ಬಾಯಿಯಲ್ಲಿ ಇರಿಸಿದರು. ಹಾಗೂ ಅದನ್ನು ಚೀಪಲು ಹೇಳಿದರು. ಹಜ್ರತ್‌ರು ಹಾಗೆಯೇ ಮಾಡಿದರು. ಅದರೊಂದಿಗೆಯೇ ಹಜ್ರತ್‌ರಿಗೆ ಸಮಸ್ತ ಜ್ಞಾನವು ಲಭಿಸಿತು. ನಂತರದ ಎರಡೂ ವಿನಂತಿಗಳೂ ನಿಜವಾದವು. ಹಾಗೂ ಅದರ ಪರಿಣಾಮವು ಹಜ್ರತ್‌ಪೀರ್ ದಸ್ತಗೀರ(ಖು)ರವರೆಗೆ ಮುಂದುವರಿಯಿತು.

ಯಾವನಾದರೂ ಹಜ್ರತ್ ಸುಲ್ತಾನ್ ಸೈಯ್ಯದ್ ಅಬ್ದುಲ್ ರೆಹಮಾನ್(ಖು)ರ ಸನ್ನಿಧಿಯಲ್ಲಿ ದುರ್ವರ್ತನೆಗೈದರೆ ತಕ್ಷಣವೇ ಆತನಿಗೆ ಶಿಕ್ಷೆ ಲಭಿಸುವದು. ಹಜ್ರತ್ ಮೀರಾಂ ಸೈಯ್ಯದ್ ಮುಹಮ್ಮದ್ ಮುದರ್ರಿಸ್‌ರ ಉರುಸಿನ ದಿನದಂದು ಸರ್ವ ಸೇವಕರು, ಶಿಷ್ಯರೂ ಇನ್ನಿತರರು ಮಹಾಪುರುಷರ ಸಮಾಧಿಗಳ ಮೇಲೆ ಗಂಧ ಅರ್ಪಿಸುವಂತೆಯೇ ಹಜ್ರತ್ ಅಬ್ದುಲ್ ರೆಹಮಾನ್(ಖು)ರು ತಮ್ಮ ಶಿರಭಾಗದ ಮೇಲೆ ಗಂಧ ಸಲ್ಲಿಸಿ ಕೇಳುತ್ತಿದ್ದರು. ಪಟ್ಟಣದ ನ್ಯಾಯಾಧೀಶ ಹಾಗೂ ವಿದ್ವಾಂಸರು ಈ ಸಂಪ್ರದಾಯಕ್ಕೆ ನವೀನಾಚರಣೆಯಂದು ಬಗೆದು ಅದನ್ನು ತಡೆಯಬೇಕೆಂದು ಯೋಚಿಸಿದರು. ಆದರೆ ಅವರಿಂದ ಅದು ಸಾಧ್ಯವಾಗಲಿಲ್ಲ. ಬದಲಾಗಿ ಅವರು ಸ್ವತಃ

ಶಿಕ್ಷೆ ಪಡೆದರು. ಹಜ್ರತ್ ಪೀರ್ ದಸ್ತಗೀರರು ಹೀಗೆ ಹೇಳುತ್ತಿದ್ದರು. ಬಾದಶಹ ಔರಂಗಜೇಬನು ಬಿಜಾಪುರ ಪಟ್ಟಣವನ್ನು ಜಯಿಸಿದ ನಂತರ ಪಟ್ಟಣದೊಳಗೆ ಆಗಮಿಸಿ ತಂಗಿದನು. ಇದೇ ಅವಧಿಯಲ್ಲಿ ಉರುಸ್ ಷರೀಫ್ ಬಂದಿತು. ರೂಢಿಯಂತೆ ಉರೂಸುತ್ಸವವು ಆಚರಿಸಲ್ಪಡತೊಡಗಿತು. ಬಾದಶಹನು ಈ ಉರೂಸುತ್ಸವದ ವಿವರವನ್ನು ತಿಳಿದುಕೊಂಡನು. ಬಾದಶಹನು ಈ ಕಾರ್ಯವನ್ನು ಶರೀಯತ್ತಿನ ವಿರುದ್ಧವೆಂದು ಬಗೆದು ತನ್ನ ಓರ್ವ ವಿದ್ವಾಂಸನನ್ನು ಅಲ್ಲಿ ಕಳುಹಿಸಿದನು. ಹಾಗೂ ಈ ರೂಢಿಯನ್ನು ತಡೆಯಬೇಕೆಂದು ನಿರ್ದೇಶಿಸಿ ಕಳುಹಿಸಿದನು. ಈ ಉದ್ದೇಶದಿಂದ ಅವರು ಇಲ್ಲಿ ಆಗಮಿಸಿದಾಗ ಅಸಂಖ್ಯ ಜನಜಂಗುಳಿಯು ಸೇರಿತ್ತು. ಈ ಕಾರಣದಿಂದ ವಿದ್ವಾಂಸರಿಗೆ ಏನನ್ನೂ ಮಾಡಲು ಸಾಧ್ಯವಾಗಲಿಲ್ಲ. ಬಾದಶಹನು ಸ್ವಲ್ಪ ಸಮಯದವರೆಗೆ ಕಾಯ್ದು ತನ್ನ ಮಂತ್ರಿವರ್ಯರಿಗೆ ಕಳುಹಿಸಿದನು. ಅವರೂ ಸಹ ಅಲ್ಲಿ ಸಭೆಯಲ್ಲಿ ಕುಳಿತುಕೊಂಡುಬಿಟ್ಟರು. ಕೊನೆಗೆ ಬಾದಶಹನೇ ಸ್ವತಃ ಆಗಮಿಸಿದನು. ಆಗ ಹಜ್ರತ್‌ರ ಶಿಷ್ಯರಲ್ಲಿ ೧೨೦೦ಜನ ಶಸ್ತ್ರಧಾರಿಗಳಾಗಿ ಕುಳಿತುಕೊಂಡಿದ್ದರು. ಆಲಂಗೀರರ ಆಗಮನದ ಸುದ್ಧಿ ತಿಳಿದು ಹಜ್ರತ್‌ರಲ್ಲಿ ವಿನಂತಿಸಿದರು. ಆಜ್ಞೆಯಾದರೆ ಈಗಲೇ ಬಾದಶಹನನ್ನು ಮುಗಿಸಿಬಿಡುವೆವು. ಹಜ್ರತ್‌ರೆಂದರು. ನೀವು ಸುಮ್ಮನಿರಿ ಆತನು ಷರೀಯತ್ತಿನ ಆದೇಶವನ್ನು ಜಾರಿಗೊಳಿಸಲು ಬಂದಿರುವನು. ಒಂದು ವೇಳೆ ನಮ್ಮಿಂದ ನಿಜವಾಗಿಯೂ ಷರಿಯತ್ತಿನ ವಿರೋಧ ಜರಗುತ್ತಿದ್ದರೆ ನಿಸ್ಸಂದೇಹವಾಗಿ ಈ ಕಾರ್ಯವು ಷರಿಯತ್ತಿನ ವಿರೋಧಿಯರದು ಕಾನೂನನ್ನು ಜಾರಿಗೊಳಿಸಲಿ ನೀವು ಇದರಲ್ಲಿ ತಡೆಯೊಡ್ಡಬೇಡಿರಿ. ಬಾದಶಾಹನು ಸಭೆಯಲ್ಲಿ ಆಗಮಿಸಿದಾಗ ಅದೇವೇಳೆ ಗಂಧ ಸಲ್ಲಿಸುವ ಕಾರ್ಯಕ್ರಮವು ಪ್ರಾರಂಭವಾಯಿತು. ಆ ವೇಳೆ ಬಾದಶಹನೂ ಸಹ ವೇಗದಿಂದ ಹೋಗಿ ತಾನೂ ಸಹ ಗಂಧ ಅರ್ಪಿಸಿದನು. ಆ ಕಾರ್ಯವು ಸಂಪನ್ನಗೊಂಡಿತು ಹಾಗೂ ಬಾದಶಹ ಮರಳಿ ಹೋದನು. ಆಗ ಆತನ ಸಹವರ್ತಿಗಳು ಹೀಗೆಂದರು. ಜಹಾಂಪನಾ! ತಾವಂತೂ ಈ ಕಾರ್ಯವನ್ನು ತಡೆಯಲೆಂದು ಹೋಗಿದ್ದೀರಿ ಆದರೆ ಇದರಲ್ಲಿ ಎಂಥಹ ರಹಸ್ಯ ಅಡಗಿದೆ ತಾವು ಸ್ವತಃ ಈ ಕಾರ್ಯಕ್ಕೆ ಮುಂದಾಗಿ ಗಂಧವನ್ನು ಅರ್ಪಿಸಿದಿರಿ. ಆಗ ಬಾದಶಹ ಹೀಗೆಂದನು. ಈ ಕಾರ್ಯವು ಷರಿಯತ್ತಿನ ವಿರೋಧವಾಗಿ ಜರುಗುತ್ತಿದೆಯೆಂದು ತಿಳಿದು ತಡೆಯಬಯಸಿದ್ದೆನು. ಆದರೆ ನಾನು ಯಾವಾಗ ಈ ಸಭೆಯಲ್ಲಿ ಪಾಲ್ಗೊಂಡೆನು ಆಗ ನೋಡುತ್ತೇನೆ ಹಜ್ರತ್ ಮುಹಮ್ಮದ್(ಸ) ಪ್ರವಾದಿಗಳು ಆ ಸಭೆಯಲ್ಲಿ ಹಾಜರಿರುವರು ಹಾಗೂ ಸ್ವತಃ ತಮ್ಮ ಪವಿತ್ರ ಕೈಗಳಿಂದ ಗಂಧವನ್ನರ್ಪಿಸಿದರು. ಮತ್ತೇನಿತ್ತು! ನನಗೆ ಬೇರೆ ದಾರಿಯೇ ಇರಲಿಲ್ಲ ಹಾಗೂ ನಾನು ಗಂಧವನ್ನು ಮುಂದಾಗಿ ಅರ್ಪಿಸಿ ಬಂದೆನು. ಈ ಸಂಪ್ರದಾಯವು ಮುಂದುವರಿಯಲು ಕಾರಣ ಇದಾಗಿದೆ. ಸೂಫಿ ವಂಶಜರಲ್ಲಿ ಈ ರೂಢಿಯೂ ಜಾರಿಯಲ್ಲಿದೆ. ಯಾವಾಗ ಓರ್ವ ಶೇಖನು ಒಂದು ಸ್ಥಳದಿಂದ

ಮತ್ತೊಂದು ಸ್ಥಳಕ್ಕೆ ನಿರ್ಗಮಿಸಿದಾಗ ಆತನ ಪೀಠಾಧಿಕಾರಿ ಅಥವಾ ಖಲೀಫಾ ಅವರ ಉರೂಸುತ್ಸವ ಮಾಡುವರು ಹಾಗೂ ಅವರ ಸಮಾಧಿಯ ಮೇಲೆ ಗಂಧ ಅರ್ಪಿಸುವರು. ಹಾಗೆಯೇ ಯಾವಾಗ ಹಜ್ರತ್ ಮೀರಾಂ ಸೈಯ್ಯದ್ ಮುಹಮ್ಮದ್ ಮುದರ್ರಿಸ್(ಖು)ರು ಮದೀನಾ ಮುನವ್ವರಾದಲ್ಲಿ ಸಮಾಧಿಸ್ಥರಾದರು. ಆಗ ಅವರ ಪೀಠಾಧಿಪತಿಗಳು ಹಜ್ರತ್ ಸುಲ್ತಾನ್ ಸೈಯ್ಯದ್ ಅಬ್ದುಲ್‌ರೆಹಮಾನ್(ಖು)ರಿಗೆ ಕಡ್ಡಾಯವಾಯಿತು. ಏನೆಂದರೆ ತಮ್ಮ ಗುರುಗಳ ಉರುಸನ್ನುಗೈಯ್ಯುವದು. ಅದಕ್ಕಾಗಿ ಹಜ್ರತ್‌ರು ಬಿಜಾಪುರದಲ್ಲಿ ಉರುಸುತ್ಸವಗೈದರು ಹಾಗೂ ಗಂಧ ಅರ್ಪಿಸುವ ಕಾರ್ಯವು ಉಳಿಯುತ್ತದೆ. ಆಗ ಹಜ್ರತ್‌ರು ಆ ಕಾಲದಿಂದ ಪ್ರತಿವರ್ಷವೂ ಷವ್ವಾಲ ತಿಂಗಳ ೨೪ನೆಯ ದಿನಾಂಕದಂದು ತಮ್ಮ ತಂದೆಯವರ ಉರುಸನ್ನು ಹೀಗೆಯೇ ಆಚರಿಸಲಾಗುತ್ತದೆ. ಆದರೆ ಈ ಕಾರ್ಯವು ರೂಢಿಗಿಂತ ಭಿನ್ನವಾಗಿತ್ತು. ಅದನ್ನು ಜನರು ನವೀನಾಚರಣೆಯೆಂದು ಬಗೆದು ವಿರೋಧಿಸುತ್ತಿದ್ದರು. ಆದರೆ ಅದರ ನಿಜಾಂಶವನ್ನು ತಿಳಿಯಲಿಲ್ಲ. ಉರುಸು ಏನಿದೆ? ಅಲ್ಲಾಹುವಿನ ಗೆಳೆಯರ ಉತ್ಸವವಿರುವದು ಅದರಿಂದ ಅವರ ಪವಿತ್ರ ಆತ್ಮದ ಸಂತೃಪ್ತಿಗೆ ಕಾರಣವಾಗುವದು. ಅದರ ವಿವರವು 'ಮುರಾದುಲ್ ಮವ್ ಯ್ಯುದೀನ್' ಗ್ರಂಥದಲ್ಲಿ ಬರೆಯಲಾಗಿದೆ. ಉದಾಹರಣೆಗಾಗಿ ಈ ಗ್ರಂಥದಲ್ಲಿ ಹೇಳಿರುವ ಎರಡು ವಿವರಣೆಗಳು ಸಾಕಾಗುತ್ತವೆ. ಒಂದು-ಹಜ್ರತ್‌ಶಾಹ್ ಅಲಾವುಲ್‌ಹಕ್ ಖಾದ್ರಿ(ಖು) ಅವರ ವಿವರದಲ್ಲಿ ಇದೆ. ಎರಡನೆಯದು-ಹಜ್ರತ್ ಸತ್ತೀಮಾ ಸಾಹೇಬಾ (ರ.ಅ) ಇವರ ವಿವರದಲ್ಲಿ ಇದೆ.

ಈ ವಿವರಣೆಯ ಸಾರಾಂಶವು ಹೀಗಿರುವದು-ಉರೂಸುತ್ಸವದ ಆಚರಣೆ ಹಾಗೂ ಗಂಧ ಅರ್ಪಿಸುವಿಕೆಯು ವಾಸ್ತವದಲ್ಲಿ ಸಮಾಧಿಸ್ಥರ ಪವಿತ್ರ ಆತ್ಮಕ್ಕೆ ಸಲ್ಲಿಸುವ ಗೌರವವಾಗಿದೆ. ಈ ಸಂದರ್ಭದಲ್ಲಿ ಸಮಾಧಿಯಂತೂ ಇಲ್ಲಿ ಇರಲಿಲ್ಲ. ಆದರೆ ಸುಲ್ತಾನ್ ಸೈಯ್ಯದ್ ಅಬ್ದುಲ್ ರೆಹಮಾನ್(ಖು)ರಿಗೆ ತಮ್ಮ ತಂದೆಯವರು ಸೈಯ್ಯದ್ ಮುಹಮ್ಮದ್ ಹೆಸರಿನಿಂದ ಕರೆದು ತಮ್ಮ ಶಿಷ್ಯಗಣಕ್ಕೆ ಹಾಗೂ ಆಪ್ತರಿಗೆ ಹೀಗೆ ಹೇಳಿದ್ದರು. ತಮ್ಮನ್ನು ಸೈಯ್ಯದ್ ಅಬ್ದುಲ್ ರೆಹಮಾನ್‌ರಲ್ಲಿ ಕಾಣಿರಿ. ಈ ಫರ್ಮಾನವು ಈ ವಿಷಯಕ್ಕೆ ಸಾಕ್ಷಿಯಾಗಿದೆ. ಏನೆಂದರೆ-ಹಜ್ರತ್‌ರು ತಮ್ಮ ತಂದೆಯವರಂತೆಯೇ ಆದರು. ಈ ಯೋಜನೆಯಿಂದಾಗಿ ಹಜ್ರತ್‌ರು ತಮ್ಮ ತಲೆಯ ಮೇಲೆ ಗಂಧ ಅರ್ಪಿಸಿಕೊಳ್ಳಲು ಸಿದ್ಧರಾದರು. ಏಕೆಂದರೆ ಸಮಾಧಿಗಳ ಶಿರ ಭಾಗದಲ್ಲಿ ಗಂಧವನ್ನು ಅರ್ಪಿಸಲಾಗುತ್ತದೆ. ಅದಕ್ಕಾಗಿ ಇವರು ತಮ್ಮ ತಲೆಯ ಮೇಲೆ ಗಂಧ ಅರ್ಪಿಸಿಕೊಳ್ಳಲು ನಿರ್ಧರಿಸಿದರು. ಹಜ್ರತ್ ಸುಲ್ತಾನ್ ಸೈಯ್ಯದ್ ಅಬ್ದುಲ್‌ರೆಹಮಾನ್ (ಖು) ನಿಧನದ ನಂತರ ಹಜ್ರತ್‌ರ ಪುತ್ರರು ಹಾಗೂ ಪೀಠಾಧಿಕಾರಿಗಳೂ ಆದ ಹಜ್ರತ್ ಸುಲ್ತಾನ್ ಸೈಯ್ಯದ್ ಅಲಿ ಮುಹಮ್ಮದ್ ಹುಸೈನಿ(ಖು)ರು ತಮ್ಮ ತಂದೆಯಂತೆಯೇ ಆಗಿ ಹೋಗಿದ್ದರು. ಈ ಸಂಪ್ರದಾಯವನ್ನು ಮುಂದುವರೆಸಿದರು. ಈ ರೂಢಿಯು

ನಿರಂತರವಾಗಿ ಇಂದಿನವರೆಗೂ ಸಾಗಿ ಬಂದಿರುವದು. ಏನೆಂದರೆ ಇವರ ವಂಶದಲ್ಲಿ ಯಾರು ಪೀಠಾಧಿಕಾರಿಗಳು ಆಗಿರುವರು. ಅವರ ತಲೆಯ ಮೇಲೆ ಷವ್ವಾಲ ತಿಂಗಳ ೨೪ನೆಯ ದಿನಾಂಕದಂದು ಗಂಧ ಅರ್ಪಿಸಲಾಗುತ್ತದೆ.

ಸೂಫಿ ಹಜ್ರತ್ ಷಂಶುಜ್ಜುಹಾ ಹಜ್ರತ್ ಸುಲ್ತಾನ್ ಸೈಯ್ಯದ್ ಅಬ್ದುಲ್ ರೆಹಮಾನ್(ಖು)ರ ಖಲೀಫಾ ಆಗಿದ್ದರು. ಅವರು ಹೀಗೆನ್ನುತ್ತಾರೆ. ಒಂದು ವೇಳೆ ಯಾರಿಗಾದರೂ ಹಜ್ರತ್ ಗೌಸುಲ್ ಸಖ್ಲೈನ್ ಮೆಹಬೂಬ್ ಸುಬಹಾನಿ(ರ.ಅ)ರ ಮುಖಚರ್ಯೆಯನ್ನು ನೋಡಬಯಸುವದಾದರೆ ನನ್ನ ಮುರ್ಷಿದ್‌ರ ಮುಖಚರ್ಯೆಯನ್ನು ನೋಡುವ ಬಯಕೆ ಹೊಂದಲಿ.

ಯಾವಾಗ ಹಜ್ರತ್ ಸೈಯ್ಯದ್ ಅಬ್ದುಲ್ ರೆಹಮಾನ್(ಖು) ನಫ್ಸೆರೆಹ್ಮಾನಿ ಬರೆದರು ಆಗ ಅದರ ಮೇಲೆ ಬಹಳಷ್ಟು ವಿದ್ವಾಂಸರು ಚರ್ಚೆಗೆ ಮುಂದಾದರು. ಹಾಗೂ ವಿಮರ್ಶಿಸಿದರು. ಕೊನೆಗೆ ತಮ್ಮ ಅಲ್ಪಜ್ಞಾನದ ಅರಿವು ಉಂಟಾಗಿ ಹಜ್ರತ್‌ರ ಶಿಷ್ಯರಾಗಿ ಪರಿವರ್ತನೆ ಹೊಂದಿದರು. 'ಮಖ್ತುಬಾತೆ ರೆಹ್ಮಾನಿ'ಯೂ ಸಹ ಹಜ್ರತ್‌ರು ತಮ್ಮ ಪುತ್ರ ಹಜ್ರತ್ ಸುಲ್ತಾನ್ ಸೈಯ್ಯದ್ ಅಲಿ ಮುಹಮ್ಮದ್ ಹುಸೈನಿ(ಖು)ರ ಹೆಸರಿನಲ್ಲಿ ಬರೆದಿರುವರು. ಇದು ತಿಳಿದಿರಲಿ ಏನೆಂದರೆ ಹಜ್ರತ್ ಸೈಯ್ಯದ್ ಅಬ್ದುಲ್ ರೆಹಮಾನ್(ಖು)ರಿಂದ ಪ್ರಸ್ತುತ ಒಂದು ಪವಾಡವು ಜರುಗಿದೆ. ಅದೇನೆಂದರೆ ಬಿಜಾಪುರದ ಮಸೀದೆ ಹಾಗೂ ಗುಮ್ಮಟಗಳು ಯಾವವು ಜೀರ್ಣ ಸ್ಥಿತಿಯಲ್ಲಿರುವವು ಅವುಗಳ ಪುನರುತ್ಥಾನಕ್ಕಾಗಿ ಬಾಂಬೆಯ ರಾಜ್ಯಪಾಲನು ಈ ಜಾಹಿರಾತು ನೀಡಿದನು. ಯಾರು ಈ ಪವಿತ್ರ ಸ್ಥಳಗಳ ವಾರೀಸುದಾರರಾಗಿರುವರೋ ಅವರು ಒಂದು ತಿಂಗಳ ಅವಧಿಯಲ್ಲಿ ಜಿಲ್ಲಾಧಿಕಾರಿಯ ಕಚೇರಿಯಲ್ಲಿ ಆಗಮಿಸಿ ಒಂದು ಒಪ್ಪಿಗೆ ಪತ್ರವನ್ನು ಬರೆದು ಕೊಡಬೇಕು. ಏನೆಂದರೆ ತಮ್ಮ ಪ್ರದೇಶದ ತಮಗೆ ಸಂಬಂಧ ಬರುವ ಮಸೀದೆ ಅಥವಾ ಗುಮ್ಮಟವನ್ನು ಪುನರುತ್ಥಾನಗೊಳಿಸಿ ಉತ್ತಮ ಸ್ಥಿತಿಯಲ್ಲಿ ಇರಿಸಬೇಕು. ಒಂದು ವೇಳೆ ಈ ಆದೇಶವನ್ನು ಪಾಲಿಸದಿದ್ದರೆ ಆ ಮಸೀದೆ, ಹಾಗೂ ಗುಮ್ಮಟಗಳು ಸರಕಾರದ ಅಧೀನ ಆಗುವವು. ಮತ್ತೆ ಅನಂತರ ಅವುಗಳ ಮೇಲೆ ಯಾರದೇ ಅಧಿಕಾರ ಉಳಿಯುವದಿಲ್ಲ. ಯಾರು ಈ ಪ್ರಕಟಣೆಯನ್ನು ಗಮನಿಸಿದರು ಅವರೆಲ್ಲ ಸ್ವತಃ ಕಚೇರಿಗೆ ಹೋಗಿ ತಮ್ಮ ಪ್ರದೇಶದ ಮಸೀದೆ ಹಾಗೂ ಗುಮ್ಮಟಗಳನ್ನು ಉಳಿಸಿಕೊಂಡರು. ಯಾವ ವಾರಸುದಾರರು ತಮ್ಮ ಹಕ್ಕನ್ನು ಪ್ರತಿಪಾದಿಸಲಿಲ್ಲವೋ ಅವುಗಳೆಲ್ಲವೂ ಬ್ರಿಟಿಷ್ ಸರಕಾರದ ವಶಕ್ಕೆ ಒಳಪಟ್ಟವು ಮತ್ತೆ ಅದರ ನಂತರ ಯಾರ ಅಧಿಕಾರವು ಅವುಗಳ ಮೇಲೆ ಉಳಿಯಲಿಲ್ಲ. ಸಂಕ್ಷಿಪ್ತದಲ್ಲಿ ಹಜ್ರತ್ ಸುಲ್ತಾನ್ ಸೈಯ್ಯದ್ ಅಬ್ದುಲ್ ರೆಹಮಾನ್ ಹುಸೈನಿ(ಖು)ರ ಗುಮ್ಮಟಕ್ಕಾಗಿಯೂ ಸಹ ಕೆಲವು ಜನರು ಹಕ್ಕು ಪ್ರತಿಪಾದಿಸಿದರು. ಆದರೆ ಅವರಲ್ಲಿ ಸುಭದ್ರ ಪ್ರಮಾಣಗಳಿರದೇ ಇರುವದರಿಂದ

ಅವರ ಅರ್ಜಿಯು ನಿರಾಕರಿಸಲ್ಪಟ್ಟಿತು. ಹಾಗೂ ದರ್ಗಾ ಷರೀಫವು ಬ್ರಿಟಿಷರ ಪಾಲಾಯಿತು. ಅಂದರೆ ಅಲ್ಲಿ ದರ್ಗಾದ ಸಂರಕ್ಷಣೆಗೆ ಯಾರೂ ಇರಲಿಲ್ಲ. ಗುಂಬಜಿನ ಬಾಗಿಲನ್ನೂ ಸಹ ತೆಗೆದುಕೊಂಡು ಹೋಗಿದ್ದರು. ಹಾಗೂ ಅದನ್ನು ಕುರಿಗಳನ್ನು ಕಟ್ಟಲು ಉಪಯೋಗಿಸಲಾಗುತ್ತಿತ್ತು. ಅದಕ್ಕಾಗಿ ಆ ಕಾಲದ ಇಂಜನೀಯರ್‌ರಿಂದ ಒಂದು ಗೋಡೆ ನಿರ್ಮಿಸಲಾಗಿತ್ತು. ಕೇವಲ ಓರ್ವ ವ್ಯಕ್ತಿಯು ಒಳಹೊರಗೆ ಬಂದು ಹೋಗುವಷ್ಟು ಸ್ಥಳ ಬಿಡಲಾಗಿತ್ತು. ಯಾವಾಗ ಈ ವಿಷಯವು ಓರ್ವ ಸಾಹೇಬರ ಬಾಯಿಂದ ಹಜ್ರತ್ ಪೀರ್ ದಸ್ತಗೀರ್‌ರಿಗೆ ತಲುಪಿತೋ ಆಗ ಅವರು ಬಹಳ ವಿವ್ಹಲಗೊಂಡರು. ಕೊನೆಗೆ ಜಮಾದುಸ್ಸಾನಿ ತಿಂಗಳಲ್ಲಿ ೧೩೦೭ ಹಿಜ್ರಿಶಕೆಯಲ್ಲಿ ಬಿಜಾಪುರಕ್ಕೆ ಆಗಮಿಸಿದರು ಮತ್ತೆ ಇಲ್ಲಿ ತಲುಪಿದ ನಂತರ ಕಾಳಜಿಯೊಂದಿಗೆ 'ಹೊಸ ಬಾಗಿಲನ್ನು' ಸಿದ್ಧಗೊಳಿಸಲಾಯಿತು. ವಿಚಾರಿಸಲಾಗಿ ತಿಳಿದು ಬಂದದ್ದೇನೆಂದರೆ ಇಂಜನೀಯರ್(ಅಭಿಯಂತ)ರ ಅನುಮತಿ ಇಲ್ಲದೇ ಗೋಡೆಯನ್ನು ಕೆಡವಿ ಬಾಗಿಲನ್ನು ಕೂಡ್ರಿಸಲು ಸಾಧ್ಯವಿಲ್ಲ. ಆ ಕಾರಣದಿಂದ ಅಭಿಯಂತರಿಗೆ ಈ ಕಾರ್ಯಪೂರ್ತಿಯ ಉದ್ದೇಶದಿಂದ ಪತ್ರವನ್ನು ಬರೆಯಲಾಯಿತು. ಆದರೆ ಆತನು ಸ್ಪಷ್ಟವಾಗಿ ನಿರಾಕರಿಸಿದನು. ಈ ಉತ್ತರದಿಂದಾಗಿ ಹಜ್ರತ್ ಪೀರ್ ದಸ್ತಗೀರ(ಖು)ರು ರಾತ್ರಿಇಡೀ ನಿದ್ರಿಸಲಿಲ್ಲ ಹಾಗೂ ಆ ಕಡೆಗೆ ಹಜ್ರತ್ ಸುಲ್ತಾನ್ ಸೈಯ್ಯದ್ ಅಬ್ದುಲ್ ರೆಹಮಾನ್(ಖು) ಕೈಯಲ್ಲಿ ಸೋಟೆ ಹಿಡಿದು ಇಂಜಿನಿಯರ್‌ನ ಸ್ವಪ್ನದಲ್ಲಿ ತಲುಪಿದರು. ಹಾಗೂ ಹೀಗೆ ಹೇಳುತ್ತಾ ಬಡಿಯತೊಡಗಿದರು. ನನ್ನ ಪುತ್ರನು ಬಾಗಿಲನ್ನು ಕೂಡ್ರಿಸಲು ಅನುಮತಿ ಕೇಳಿದರೆ ನೀನು ನಿರಾಕರಿಸುತ್ತೀಯಾ? ಇದನ್ನು ಆಲಿಸಿದ ಆತನು ಗಾಬರಿಗೊಂಡು ನಿದ್ರೆಯಿಂದ ಎಚ್ಚೆತ್ತನು ಹಾಗೂ ಬೆಳ್ಳಂಬೆಳಿಗ್ಗೆಯೇ ಹಜ್ರತ್ ಪೀರ್ ದಸ್ತಗೀರ(ಖು)ರಿಗೆ ಕೇಳಿದನು. 'ತಾವು ಬಾಗಿಲನ್ನು ಕೂಡ್ರಿಸ ಬಯಸುತ್ತೀರಾ?' 'ಹಜ್ರತ್‌ರೆಂದರು ಹೌದು ಫಕೀರನು ಇದೇ ಉದ್ದೇಶಪೂರ್ತಿಗಾಗಿ ಇಲ್ಲಿಗೆ ಆಗಮಿಸಿರುವನು. ಆಗ ಆತನು ಕೇಳಿದನು. ಬಾಗಿಲು ಸಿದ್ಧವಿದೆಯೇ ಅವರೆಂದರು ಹೌದು. ಮತ್ತೆ ಇಂಜನೀಯರ್‌ನು ಆ ಬಾಗಿಲನ್ನು ಸೂಕ್ಷ್ಮವಾಗಿ ಅವಲೋಕಿಸಿ ಅವುಗಳಲ್ಲಿ ಕೆಲ ಕಟ್ಟಿಗೆಗಳು 'ಗಟ್ಟಿ'ಯಾಗಿರಲಿಲ್ಲ. ಅವುಗಳನ್ನು ತೆಗೆದು ಗಟ್ಟಿಗೊಳಿಸಿ ಅಲ್ಲಿ ಹಾಜರಿದ್ದ ಜನರನ್ನುದ್ದೇಶಿಸಿ ಬಾಗಿಲನ್ನು ಕೂಡ್ರಿಸುವದಕ್ಕಾಗಿ ಗೋಡೆಯನ್ನು ಒಡೆಯಿರಿ, ಗೋಡೆಯನ್ನು ಒಡೆಯಲಾಯಿತು. ಆ ವೇಳೆಯಲ್ಲಿ ಇಂಜಿನಿಯರ್‌ನು ಕೇಳಿದನು. ತಾವು ಸಂತೋಷಗೊಂಡಿರಾ? ಹಜ್ರತ್ ಪೀರ್ ದಸ್ತಗೀರರು ಹೇಳಿದರು. ಹೌದು ಸಂತೋಷವಂತೂ ಆಗಿದೆ. ಆದರೆ ಈ ದರ್ಗಾಷರೀಫವನ್ನು ನನ್ನ ಸುಪರ್ದಿಗೆ ನೀಡಬೇಕು. ಅದನ್ನು ರಿಪೇರಿಗೊಳಿಸುವೆನು. ಇಂಜನೀಯರ್ ಹೀಗೆಂದನು–ನನ್ನ ವ್ಯಾಪ್ತಿಯಲ್ಲಿ ಬರುವ ಕೆಲಸವನ್ನು ಮಾಡಿದ್ದೇನೆ. ಆದರೆ ನೀವು ಹೇಳುವ ಕಾರ್ಯವು ಕಲೆಕ್ಟರ್‌ರ ಕಾರ್ಯ ವ್ಯಾಪ್ತಿಗೆ ಸಂಬಂಧಿಸಿದೆ ತಾವು ಅವರನ್ನು ಭೇಟಿಯಾಗಿರಿ ಹೀಗೆ

ಹೇಳಿ ಅಲ್ಲಿಂದ ಹೊರಟು ಹೋದರು. ಮತ್ತೆ ಹಜ್ರತ್ ಪೀರ್ ದಸ್ತಗೀರರು ತಮ್ಮ ಪೂರ್ವಜರ ಉರೂಸುತ್ಸವವನ್ನು ಮಾಡಿದರು. ಯಾವಾಗ ಹಜ್ರತ್‌ಪೀರ್ ದಸ್ತಗೀರರು ಹಜ್ರತ್ ಅಬ್ದುಲ್ ರಜಾಕ್ ಖಾದ್ರಿ(ಖು)ರ ಜಿಯಾರತ್‌ಗಾಗಿ ಹೋದರೋ ಆಗ ಇಂಜಿನೀಯರ್‌ನು ಇವರನ್ನು ನೋಡಿ ತನ್ನ ಮನೆಗೆ ಕರೆದುಕೊಂಡು ಹೋದನು. ಹಾಗೂ ವಿನಯಪೂರ್ವಕವಾಗಿ ಆತಿಥ್ಯ ಮಾಡಿದನು. ಆ ಸಮಯದಲ್ಲಿ ಕಲೆಕ್ಟರನು ವೀಕ್ಷಣೆಗೆಂದು ಆಗಮಿಸಿದ್ದನು. ಆ ಕಾರಣದಿಂದ ಹಜ್ರತ್‌ರು ಅರ್ಜಿಯನ್ನು ಕಳಿಸಿ ದರ್ಗಾಷರೀಫದಲ್ಲಿ ಕಸಗುಡಿಸುವದಕ್ಕಾಗಿ ಹಾಗೂ ದೀಪ ಬೆಳಗಿಸುವದಕ್ಕಾಗಿ ಓರ್ವ ಸೇವಕನನ್ನು ನೇಮಿಸಿದರು. ಹಾಗೂ ಅಲ್ಲಿಯ ಕಾರ್ಯಕಲಾಪ ಹಾಗೂ ಉರುಸುತ್ಸವಕ್ಕಾಗಿ ಸೈಯ್ಯದ್ ಶಾಹ್ ರೋಷನ್ ಅಲಿಸಾಹೇಬ್ ಖಾದ್ರಿ ಶತ್ತಾರಿ ಸಿಬ್ಗತಲ್ಲಾಹಿಯವರಿಗೆ 'ಮುತವಲ್ಲಿ'ಯನ್ನಾಗಿಸಿದರು. ಆಗಿನಿಂದ ಈ ಸಂಪ್ರದಾಯವು ಜಾರಿಯಲ್ಲಿದೆ. ನಂತರ ಹಜ್ರತ್‌ಪೀರ್ ದಸ್ತಗೀರರು ಮದ್ರಾಸಕ್ಕೆ ಮರಳಿದ ನಂತರ ಕಲೆಕ್ಟರ್‌ನಿಂದ ಉತ್ತರ ಬಂದಿತು. ಏನೆಂದರೆ ಈ ಗುಮ್ಮಟವು ಬ್ರಿಟಿಷ ಸರಕಾರದ ಸುಪರ್ದಿಗೆ ಬಂದಿರುವದು. ಆ ಕಾರಣಕ್ಕೆ ಇದನ್ನು ನಿಮಗೆ ಒಪ್ಪಿಸಲಾಗುವದಿಲ್ಲ. ಮತ್ತೆ ಬಾಂಬೆ ಸರಕಾರಕ್ಕೆ ಬರೆಯಲಾಗಲು ಅಲ್ಲಿಂದಲೂ ಕಲೆಕ್ಟರ್‌ನ ಉತ್ತರವನ್ನು ಜೊತೆಗಿಟ್ಟು ಕಳುಹಿಸಿರಿ ಎಂದು ಉತ್ತರ ಬಂದಿತು. ಆಗ ಹಜ್ರತ್ ಪೀರ್ ದಸ್ತಗೀರರು ಈ ದಾಖಲೆ ಪತ್ರಗಳನ್ನು ಈ ಪುಸ್ತಕದ ಅನುವಾದಕರಿಗೆ ಅಂದರೆ ನನಗೆ ನೀಡಿದರು. ನಾನು ಈ ಕಾರ್ಯದಲ್ಲಿ ತೊಡಗಿದೆನು. ೧೮ ಜಿಲ್‌ಹಜ್ಜಾ ೧೩೭೯ ಹಿಜ್ರಿಶಕೆಯಲ್ಲಿ ಹಜ್ರತ್‌ಪೀರ್ ದಸ್ತಗೀರರ ನಿಧನವಾಯಿತು. ಅದರ ನಂತರ ಈ ಫಕೀರನಿಗೆ ಆಕಸ್ಮಿಕವಾಗಿ ಶಾ ಸಾಬ್‌ರೊಂದಿಗೆ ೧೧ ರಬ್ಬಿಯುಸ್ಸಾನಿ ೧೩೧೦ರಲ್ಲಿ ಉರೂಸ್ ಷರೀಫ್‌ದಲ್ಲಿ ಭಾಗವಹಿಸಲು ಬಿಜಾಪುರಕ್ಕೆ ಹೋಗುವ ಸೌಭಾಗ್ಯ ಲಭಿಸಿತು. ಆಗ ಹಜ್ರತ್ ಹಾಷಿಂ ಪೀರ್ ದಸ್ತಗೀರರ ದರ್ಗಾಷರೀಫದಲ್ಲಿ ಜನಾಬ್ ಸೈಯ್ಯದ್ ಶಾಹ್ ವಜಿಯುದ್ದೀನ್ ಹುಸ್ಸೈನಿ ಅಲ್ವಿ ಹಾಷ್ಮಿ ಗುಜರಾತಿ(ಖು)ರು ಆ ಸಹಾಯಕನಾದ ಇಂಜಿನೀಯರ್‌ರಿಗೆ ಕರೆಸಿ ಭೇಟಿ ಮಾಡಿಸಿದರು ಹಾಗೂ ಆತನೊಂದಿಗೆ ಈ ವಿಷಯದ ಕುರಿತು ಕೇಳಲಾಯಿತು. ಆಗ ಆತನೆಂದನು ಯಾವಾಗ ಹಜ್ರತ್‌ರು ಇಲ್ಲಿಗೆ ಆಗಮಿಸಿದ್ದರು. ನಮಗೆ ತಿಳಿದು ಬಂದಿತು. ಅವರು ಇಲ್ಲಿಯ ವಾರಸುದಾರರಾಗಿದ್ದಾರೆ. ಆವಾಗಿನಿಂದ ನಾವು ನಮ್ಮ ಕಬ್ಜಾ ಬಿಟ್ಟುಕೊಟ್ಟೆವು. ಹಾಗೂ ಈ ಗುಮ್ಮಟದ ರಿಪೇರಿಗಾಗಿ ಸರಕಾರದಿಂದ ಮೂರುನೂರು ರೂಪಾಯಿ ಮಂಜೂರಾಗಿದ್ದವು. ಒಂದು ವೇಳೆ ತಾವು ರಿಪೇರಿ ಮಾಡಿಸದಿದ್ದರೆ ನಮಗೆ ಅನುಮತಿ ನೀಡಿರಿ ಸರಕಾರದ ವತಿಯಿಂದ ಮಾಡಲಾಗುವದು. ಒಂದುವೇಳೆ ಸಂಪೂರ್ಣ ಪುನರ್ನಿರ್ಮಾಣ ಮಾಡುವವರಿದ್ದರೆ ೫೦೦೦ ರೂಪಾಯಿ ಖರ್ಚು ಬರುವದು. ವಿಷಾದದ ಮಾತೆಂದರೆ ಈ ವಿಷಯವು ಹಜ್ರತ್‌ಪೀರ ದಸ್ತಗೀರರು ಇದ್ದಾಗ ತಿಳಿದು ಬರಲಿಲ್ಲ. ಈ ವಿಷಯವನ್ನು ಇಲ್ಲಿ ಕ್ರೋಢಿಕರಿಸುವ ಉದ್ದೇಶವೆಂದರೆ

ಈ ಕಠಿಣಕಾರ್ಯವು ಕೇವಲ ಹಜ್ರತ್ ಸುಲ್ತಾನ್ ಸೈಯ್ಯದ್ ಅಬ್ದುಲ್ ರೆಹಮಾನ್ ಹಾಗೂ ಹಜ್ರತ್ ಪೀರ್ ದಸ್ತಗೀರ(ಕು)ರ ಕರಾಮತ್ತಿನಿಂದ ಕೈಗೂಡಿತು. ಇಲ್ಲದಿದ್ದರೆ ಬ್ರಿಟಿಷ್‌ರು ಈ ಅರ್ಜಿಯನ್ನು ಪರಿಗಣಿಸಿ ಉತ್ತರಿಸುವದು ಅಸಾಧ್ಯದ ಮಾತಾಗಿತ್ತು.

ಒಂದು ವಂಶಾವಳಿಯು ಹಜ್ರತ್ ಸೈಯ್ಯದ್ ಕರೀಂ ಮುಹಮ್ಮದ್ ಹುಸೈನಿ ಸಿಬ್ಗತಲ್ಲಾಹಿ(ಖು)ರ ಸಂತಾನದಲ್ಲಿ ಬಿಜಾಪುರದಲ್ಲಿ ಲಭಿಸಿತು. ಅದನ್ನು ನೋಡಲಾಗಿ ಹಾಗೂ 'ಖುಲಾಸಯೇ ಸಿಬ್ಗತಲ್ಲಾಹಿ'ಯ ಗ್ರಂಥಕರ್ತನ ಬರಹದಿಂದ ಇದು ಸ್ಪಷ್ಟವಾಗುವದು. ಏನೆಂದರೆ ಹಜ್ರತ್‌ರು ಬೀಬಿ ಹಜ್ರತ್‌ಸಾಹಬಾ(ಖು) ಬಿನ್ತ್(ಪುತ್ರಿ) ಹಜ್ರತ್ ಸೈಯ್ಯದ್ ಜೋನ್‌ಪುರಿಯೊಂದಿಗೆ ವಿವಾಹಗೈದರು. ಇವರಿಂದ ಓರ್ವ ಪುತ್ರಿ ಹಜ್ರತ್ ಬೀಬಿ ಹಬೀಬ್ ಸಾಹೇಬಾ ಹಜ್ರತ್ ಸೈಯ್ಯದ್ ಕರೀಂ ಮುಹಮ್ಮದ್ ಹುಸೈನಿಯವರ ಪುತ್ರರಾದ ಹಜ್ರತ್‌ಶಾಹ್ ಅಜೀಜುಲ್ಲಾಹ್‌ರ ಪತ್ನಿಯಾಗಿದ್ದರು. ಇವರಿಗೆ ಆರು ಪುತ್ರರಾದರು.

೧) ಹಜ್ರತ್ ಸುಲ್ತಾನ್ ಸೈಯ್ಯದ್ ಅಲಿ ಮುಹಮ್ಮದ್‌ಲ್ ಹುಸೈನಿ(ಖು) ಇವರು ತಮ್ಮ ತಂದೆಯವರ ಪೀಠಾಧಿಕಾರಿಗಳು.

೨) ಹಜ್ರತ್‌ಶಾಹ್ ಮೀರಾಂ ಸಾಹೇಬ್(ಖು) ಇವರು ಬಿಜಾಪುರದಲ್ಲಿ ರಂಜಾನಿನ ೩ನೆಯ ದಿನಾಂಕದಂದು ನಿಧನರಾದರು. ಇವರ ಪುತ್ರರು ಹಜ್ರತ್ ಸೈಯ್ಯದ್ ಕರೀಂ ಮುಹಮ್ಮದ್ ಉರ್ಫ್ ಷಾ ಹಜ್ರತ್‌ಸಾಹೇಬ್(ಖು) ಇರುವರು. ಅವರ ನಿಧನವು ಬಿಜಾಪುರದಲ್ಲಿ ಜಿಲ್‌ಹಜ್ಜಾದ ೨೭ನೇ ದಿನಾಂಕದಂದು ಹಿಜ್ರಿಶಕೆ ೧೧೨೬ರಂದು ಆಯಿತು ಹಾಗೂ ನಿಧನದ ದಿನಾಂಕವು 'ಮಗಮೂಮ್' (೧೧೨೬) ಇರುವದು. ಇವರ ಈರ್ವರು ಪುತ್ರರಿದ್ದರು. ಓರ್ವರು ಹಜ್ರತ್ ಬಡೇಸಾಹೇಬ್(ಖು) ಅವರ ನಿಧನವು ಬಳ್ಳಾರಿಯಲ್ಲಿ ಶಾಬಾನಿನ ೧೧ನೆಯ ದಿನಾಂಕದಂದು ಆಯಿತು ಹಾಗೂ ೨ನೆಯ ಪುತ್ರರು ಬುರ್ಹಾನ್‌ಸಾಬ್(ಖು) ಯಾರ ನಿಧನವು ಬಿದನೂರಿನಲ್ಲಿ ಜಿಲ್ಹಜ್ಜಾದ ೨ನೆಯ ದಿನಾಂಕದಂದು ಆಯಿತು.

೩) ಮೂರನೆಯ ಪುತ್ರರಾದ ಹಜ್ರತ್‌ಶಾಹ್ ವಲೀಯಲ್ಲಾಹ್(ಖು) ತಾಜಪುರ ಷರೀಫನವರು ಅರ್ಕಾಟದ ಸಮೀಪ ಶಾಬಾನಿನ ೨೧ನೆಯ ದಿನಾಂಕದಂದು ೧೧೮೮ ಹಿಜ್ರಿ ಶಕೆಯಲ್ಲಿ ಸಂತಾನರಹಿತರಾಗಿ ನಿಧನ ಹೊಂದಿದರು.

೪) ಷಾಹ್ ಇಬ್ರಾಹಿಂಸಾಬ್(ಖು) ಇವರು ಬಿಜಾಪುರದಲ್ಲಿ ಮೊಹರಮ್ಮಿನ ೧೧ನೆಯ ದಿನಾಂಕದಂದು ೧೧೬೬ ಹಿಜ್ರಿಶಕೆಯಲ್ಲಿ ಸಂತಾನವಿಲ್ಲದೇ ಮರಣ ಹೊಂದಿದರು.

೫) ಐದನೆಯ ಪುತ್ರರಾದ ಹಜ್ರತ್‌ಶಾಹ್ ಹಬೀಬ್‌ಸಾಹೇಬ್(ಖ) ಇವರು ಹಜ್‌ಗಾಗಿ ಕಾಬಾ ಷರೀಫಕ್ಕೆ ಹೋದರು. ನಂತರ ಅವರ ಯಾವುದೇ ಸುದ್ದಿಯು ಲಭಿಸಲಿಲ್ಲ.

೬) ಆರನೆಯ ಪುತ್ರರು ಹಜ್ರತ್‌ಶಾಹ್ ಬುರ್ಹಾನ್‌ಸಾಬ್(ಖ) ಇವರು ಬಿಜಾಪುರದಲ್ಲಿ ರಂಜಾನ್ ತಿಂಗಳ ೧೯ನೆಯ ದಿನಾಂಕದಂದು ಇಹಲೋಕ ತ್ಯಜಿಸಿದರು. ಇವರಿಗೂ ಸಂತಾನವಿರಲಿಲ್ಲ.

ಹಜ್ರತ್ ಸುಲ್ತಾನ್ ಸೈಯ್ಯದ್ ಅಬ್ದುಲ್ ರೆಹಮಾನ್(ಖ)ರು ೬೩ನೆಯ ವಯಸ್ಸಿನಲ್ಲಿ ನಿಧನರಾದರು. 'ಗಮಅಜ್‌ಅಲಂ' (೧೧೧೯) ಮಾಷುಕೆ ರೆಹಮಾನ್‌ಶುದ್(೧೧೧೯) ವಸ್ಲೆ ಆಶಿಕ್‌ವ ಮಾಶಿಕ್(೧೧೧೯) ಜಾಹೆಆಲಿ ರಫಿಯುದ್ದರ್ಜಾತ್(೧೧೧೯) ಖಾತಮುಲ್ ಔಲಿಯಾ(೧೧೨೦) ಈ ತಾರೀಖುಗಳು ಓದುಗರಿಗೆ ಸಂಶಯಕ್ಕೀಡು ಮಾಡುತ್ತವೆ. ನಿಧನದ ದಿನಾಂಕವು ೧೧೧೯ ಇದೆಯೇ ಇಲ್ಲ ೧೧೨೦ ಇದೆಯೇ, '೧೧೧೯' ಬಹಳ ಸಲ ಬಂದಿರುವದರಿಂದ ಯುಕ್ತಿ ಇದನ್ನೇ ಪುರಸ್ಕರಿಸುತ್ತದೆ. ಏಕೆಂದರೆ ೧೧೨೦ ಒಂದೇ ಸಲ ಬಂದಿದೆ. ಆದರೆ ೧೧೧೯, ೫ ಸಲ ಬಂದಿರುವದು.

ಹಜ್ರತ್ ಸುಲ್ತಾನ್ ಸೈಯ್ಯದ್ ಅಬ್ದುಲ್ ರೆಹಮಾನ್ ಹುಸೈನಿ(ಖ)ರ ಖಲೀಫಾರ ಹೆಸರುಗಳು :

೧) ಹಜ್ರತ್ ಸೈಯ್ಯದ್ ಅಲಿ ಮುಹಮ್ಮದ್ ಹುಸೈನಿ ಪುತ್ರ ಹಾಗೂ ಪೀಠಾಧಿಕಾರಿಗಳು.

೨) ಹಜ್ರತ್ ಮುಹಮ್ಮದ್ ಹುಸೈನ್ ಊರ್ಫ್ ಇಮಾಮ್‌ಸಾಬ್ ಮುದರ್ರಿಸ್.

೩) ಸೈಯ್ಯದ್ ಮುಹಮ್ಮದ್ ಜೋನ್‌ಪುರಿ.

೪) ಹಜ್ರತ್ ಷಂಷುಜ್ಜುಹಾ ಸೂಫಿ.

೫) ಹಜ್ರತ್ ಶೇಖ ಅಹ್ಮದ್.

೬) ಹಜ್ರತ್ ನಿಜಾಮುದ್ದೀನ್ ಅಲಿ.

೭) ಹಜ್ರತ್ ಮುಹಮ್ಮದ್ ಮುಜ್ತಬಾ ಖಾದ್ರಿ.

೮) ಹಜ್ರತ್ ಅಹ್ಮದ್ ಅಬುತುರಾಬ್.

೯) ಹಜ್ರತ್ ಶೇಖ ಮೂಸಾ.

೧೦) ಹಜ್ರತ್ ಶೇಖ ಹಸನ್.

೧೧) ಹಜ್ರತ್ ಹಾಜಿ ಫತಹ್ ಮುಹಮ್ಮದ್.

೧೨) ಹಜ್ರತ್ ಬಾಬಾಸಾಹೇಬ್ ಜುಬೈರಿ.

೧೩) ಹಜ್ರತ್ ನೂರುದ್ದೀನ್ ಮುಹಮ್ಮದ್.

೧೪) ಹಜ್ರತ್ ಶೇಖ ಅಬ್ದುಲ್ಲಾಹ್.

೧೫) ಹಜ್ರತ್ ಸೈಯ್ಯದ್ ಮುಹಮ್ಮದ್.

೧೬) ಹಜ್ರತ್ ಸೈಯ್ಯದ್ ಮಖ್ದೂಮ್

೧೭) ಹಜ್ರತ್ ಶೇಖ ಹುಸೈನ್.

೧೮) ಹಜ್ರತ್ ಶೇಖ ಮುಹಿಯುದ್ದೀನ್.

೧೯) ಹಜ್ರತ್ ಶೇಖ ಅಬ್ದುಲ್ ರಹೀಂ.

೨೦) ಹಜ್ರತ್ ಶೇಖ ಅಬ್ದುಸ್ಸಲಾಂ.

೨೧) ಹಜ್ರತ್ ಬಾಬಾ ಶಾಹ್ ಹುಸೈನ್

೨೨) ಹಜ್ರತ್ ಶೇಖ ಅಜ್ಮತಲ್ಲಾಹ್.

೨೩) ಹಜ್ರತ್ ಶಾಹ್ ಜೈನುದ್ದೀನ್.

೨೪) ಹಜ್ರತ್ ಶೇಖ ಅಲಿ.

೨೫) ಹಜ್ರತ್ ಸೈಯ್ಯದ್ ಅಬ್ದುಲ್ ಫತಃ.

೨೬) ಹಜ್ರತ್ ಮುಹಮ್ಮದ್ ಅಲಿ.

೨೭) ಹಜ್ರತ್ ಸೈಯ್ಯದ್ ಬಡೇನಾನ್ನೂರಲಿ.

೨೮) ಹಜ್ರತ್ ಶೇಖ ಅಹ್ಮದ್ ಮುತ್ತನ್ನಿ.

೨೯) ಹಜ್ರತ್ ಶೇಖ ಅಬ್ದುಲ್‌ಖಾದಿರ್.

೩೦) ಹಜ್ರತ್ ಶೇಖ ಮುಲ್ಲಾ ಇಬ್ರಾಹಿಂ.

೩೧) ಹಜ್ರತ್ ಶೇಖ ಲಾಡ ಮುಹಮ್ಮದ್.

೩೨) ಹಜ್ರತ್ ಶೇಖ ಹಮೀದ್ ಖುದ್ದುಸ್ಸಲ್ಲಾಹ್.

■

೭೮. ಹಜ್ರತ್ ಸೈಯ್ಯದ್ ಅಲಿ ಮುಹಮ್ಮದ್(ಖು)

ಹಜ್ರತ್‌ರ ಪುತ್ರ ಹಾಗೂ ಪೀಠಾಧಿಕಾರಿ ಹಜ್ರತ್ ಸೈಯ್ಯದ್ ಅಲಿ ಮುಹಮ್ಮದ್(ಖು) ತಮ್ಮ ಕಾಲದ ಮಹಾಪುರುಷರಾಗಿದ್ದರು. 'ತಜಲ್ಲಿಯಾತೆ ರೆಹ್ಮಾನಿ' ಪುಸ್ತಿಕೆಯ ಗ್ರಂಥಕರ್ತರು ಆಗಿದ್ದಾರೆ. ಅರ್ಕಾಟದಲ್ಲಿ ಸಮಾಧಿಸ್ಥರಾಗಿರುವರು. ಹಾಗೂ ಇವರ ಸಂತಾನವೂ ಸಹ ಅರ್ಕಾಟದಲ್ಲಿಯೇ ಸಮಾಧಿಗೊಂಡಿರುವದು.

ಹಜ್ರತ್ ಸೈಯ್ಯದ್ ಅಲಿ ಮುಹಮ್ಮದ್(ಖು) ೧೦೭೬ ಹಿಜ್ರಿಶಕೆಯಲ್ಲಿ

ಬಿಜಾಪುರದಲ್ಲಿ ಜನಿಸಿದರು. ಇವರ ಜನುಮದಿನದ ದಿನಾಂಕವನ್ನು 'ರಜಿಯಲ್ಲಾಹ್' ಎಂದಿರುವವರು. ಇವರು ತಮ್ಮ ತಂದೆಂಯವರ ಖಲೀಫಾ ಹಾಗೂ ಪೀಠಾಧಿಕಾರಿಯಾಗಿರುವರು. 'ತಜಲ್ಲಿಯಾತೆ ರೆಹ್ಮಾನಿ' ಪುಸ್ತಕವು ಇವರಿಂದಲೇ ಬರೆಯಲ್ಪಟ್ಟಿದೆ. ನವಾಬ್ ಸಾದತ್‌ಲ್ಲಾಖಾನ್ ಸುಬೇದಾರ ಮುಹಮ್ಮದ್‌ಪುರ ಉರ್ಫ್ ಅರ್ಕಾಟದ ಅಧಿಕಾರಾವಧಿಯಲ್ಲಿ ಹಜ್ರತ್‌ರು ಇಲ್ಲಿಗೆ ಆಗಮಿಸಿದರು. ಹಾಗೂ ಅರ್ಕಾಟಿನ ಕೋಟೆಯೊಳಗೆ ಒಂದು ಮಸೀದೆಯಲ್ಲಿ ವಾಸಿಸಿದರು. ಆ ಮಸೀದೆಯು ಇಂದಿನವರೆಗೂ ಹಜ್ರತ್‌ರ ಹೆಸರಿನಿಂದಲೇ ಪ್ರಸಿದ್ಧಿಗೊಂಡಿದೆ. ತಾಜಖಾನ್ ಜಮಾದಾರ್‌ನು ಹಜ್ರತ್‌ರಿಂದ ಬೈಯ್ಯತ್ ಪಡೆದನು. ಹಾಗೂ ತಾಜಪುರವು ಅವರ ಹೆಸರಿನಿಂದಲೇ ಪ್ರಸಿದ್ಧಿಯಾಗಿತ್ತು. ಅದು ಅರ್ಕಾಟಿನ ಹತ್ತಿರ ಇದೆ. ಅವರನ್ನು ಬಹಳೇ ಗೌರವಪೂರ್ವಕವಾಗಿ ಕರೆತರಲಾಯಿತು. ಮತ್ತೆ ಅಲ್ಲಿ ಹಜ್ರತ್‌ರಿಗಾಗಿ ಒಂದು ಮಸೀದೆ ಹಾಗೂ ಖಾನ್‌ಖಾಹ್ ನಿರ್ಮಿಸಲಾಯಿತು. ಮತ್ತು ಅವರ ಮಕ್ಕಳ ಗ್ರಂಥಾಲಯದ ಸ್ಥಳದಲ್ಲಿ ಒಂದು ಗುಮ್ಮಟವನ್ನು ನಿರ್ಮಿಸಲಾಯಿತು. ಹಾಗೂ ಗುಮ್ಮಟಿನ ಪಕ್ಕದಲ್ಲಿ ಒಂದು ಬೃಹತ್ ಪುಷ್ಕರಣಿ ನಿರ್ಮಿಸಲಾಯಿತು. ಈ ಪುಷ್ಕರಣಿಗೆ 'ಶಿಫಾ ಪುಷ್ಕರಣಿ' ಎಂದು ಅನ್ನುವರು. ಏನೆಂದರೆ ಅದರೊಳಗಿನ ನೀರಿನ ವಿಶೇಷವಿದಾಗಿದೆ. ಜ್ವರದಿಂದ ಬಳಲುವ ವ್ಯಕ್ತಿಯು ಆ ನೀರಿನಿಂದ ಸ್ನಾನಗೈದರೆ ಆತನು ರೋಗಮುಕ್ತನಾಗುವನು ಹಾಗೂ ಬೇರೆ ರೋಗಗಳೂ ಸಹ ಅದರಿಂದ ಮುಕ್ತವಾಗುವವು. ತಾಜ್‌ಖಾನ್‌ರು ಹಜ್ರತ್‌ರ ಉರುಸುತ್ಸವದಲ್ಲಿ ಪುಷ್ಕರಣಿಯ ಸಮೀಪದ ಗೋಡೆಯಲ್ಲಿ ಒಂದು ಲಕ್ಷ ಇಪ್ಪತ್ತೈದು ಸಾವಿರ ದೀಪಗಳನ್ನು ಬೆಳಗುತ್ತಿದ್ದರು. ಇದರ ಕುರುಹುಗಳು ಇಂದಿಗೂ ಕಂಡುಬರುತ್ತವೆ. ತಾಜ್‌ಖಾನ್‌ನೂ ಸಹ ಗುಮ್ಮಟಿನ ಅಡಿಭಾಗದಲ್ಲಿ ಖಾನ್‌ಖಾಹ್‌ದ ಸಮೀಪ ಆತನದೇ ಉಯಿಲಿನಂತೆ ದಫನ್ ಮಾಡಲಾಯಿತು. ಆತನ ಸಮಾಧಿಯ ಚೌಕಟ್ಟು ಕರಿಕಲ್ಲುಗಳಿಂದ ನಿರ್ಮಿಸಲಾಗಿದೆ.

ಹಜ್ರತ್ ಟೀಪು ಔಲಿಯಾ ಅವರು ಹಜ್ರತ್ ಖ್ವಾಜಾ ಅಮೀನುದ್ದೀನ್ ಆಲಾರ ಶಿಷ್ಯರಾಗಿರುವರು. ಅವರ ಸಮಾಧಿಯು ಅರ್ಕಾಟ್‌ನಲ್ಲಿದೆ. ಹಜ್ರತ್ ಸೈಯ್ಯದ್ ಅಲಿ ಮುಹಮ್ಮದ್(ಖು)ರ ಸಮಕಾಲೀನರಾಗಿದ್ದರು. ಆ ಕಾಲದಲ್ಲಿ ಅರ್ಕಾಟ್ ಪಟ್ಟಣದಲ್ಲಿ ೩೬೦ ಸೂಫಿ ವಂಶಸ್ಥರು ಹಾಗೂ ಫಕೀರರ ಮನೆಗಳಿದ್ದವು. ಹಜ್ರತ್ ಟೀಪೂ ಔಲಿಯಾ(ಖು) ಸದಾಕಾಲ ನಗ್ನರಾಗಿರುತ್ತಿದ್ದರು. ಅಲ್ಲಿಯ ಹಿರಿಯ ಸೂಫಿಗಳು ಆ ಕಡೆಯಿಂದ ಹೋಗುತ್ತಿದ್ದರೂ ಇವರು ಗಮನ ನೀಡುತ್ತಿರಲಿಲ್ಲ ಹಾಗೂ ಒಂದು ವೇಳೆ ಹಜ್ರತ್ ಸೈಯ್ಯದ್ ಅಲಿ ಮುಹಮ್ಮದ್(ಖು) ಅಲ್ಲಿಂದ ಸಾಗುತ್ತಿದ್ದರೆ ಅವರು ಅಲ್ಲಿಗೆ ಬರುವ ಮುಂಚೆಯೇ ಅವರು ಹೀಗೆನ್ನುತ್ತಿದ್ದರು. 'ಮಹಾಪುರುಷರು ಬರುತ್ತಿದ್ದಾರೆ ಬಟ್ಟೆ ಕೊಡಿ ಹಾಗೂ ಬಟ್ಟೆ ತರುತ್ತಿದ್ದಂತೆಯೇ ತಮ್ಮ ಸೊಂಟಕ್ಕೆ ಸುತ್ತಿಕೊಳ್ಳುತ್ತಿದ್ದರು.

ಹೀಗಾಗಿ ಹಜ್ರತ್ ಸೈಯ್ಯದ್ ಅಲಿ ಮುಹಮ್ಮದ್(ಖು)ರ ಗೌರವವು ಅತ್ಯುನ್ನತವಾಗಿತ್ತು. ಮತ್ತು ಈ ಕಾರಣದಿಂದಾಗಿ ಅಲ್ಲಿಯ ೩೬೦ ಮನೆಗಳಲ್ಲಿ ಹಜ್ರತ್‌ರ ಮನೆಯು 'ಶ್ರೇಷ್ಠ ಮನೆ' ಎನಿಸಿತು. ಹಾಗೂ ಇಂದಿನವರೆಗೂ ತಾಜ್‌ಪುರದ ಆ ಮನೆಯು 'ಶ್ರೇಷ್ಠಮನೆ'ಯೆಂದೇ ಅನ್ನಿಸಿಕೊಳ್ಳುತ್ತದೆ. 'ಹಜ್ರತ್ ಉಮರೆ ಮಸ್ನೂನ'- ಅಂದರೆ ಹಜ್ರತ್ ಮುಹಮ್ಮದ್ ಪೈಗಂಬರರ ವಯಸ್ಸು ೬೩. ಹಜ್ರತ್‌ರೂ ಸಹ ತಮ್ಮ ೬೩ನೆಯ ವಯಸ್ಸಿನಲ್ಲಿ ರಬ್ಬಿವುಲ್ ಅವ್ವಲ್‌ದ ೭ನೆ ದಿನಾಂಕದಂದು ೧೧೯೮ ಹಿಜ್ರಿಶಕೆಯಂದು ನಿಧನ ಹೊಂದಿದರು. ಹಜ್ರತ್‌ರ ನಿಧನದ ದಿನಾಂಕವು 'ವರಿಜ್ವಾಅನಾ' (೧೧೩೮) ಇರುವದು. ಹಜ್ರತ್‌ರ ಜನನದ ದಿನಾಂಕ-ಹಾಗೂ ಮರಣದ ದಿನಾಂಕಗಳನ್ನು ಒಂದು ದ್ವಿಪದಿಯಲ್ಲಿ ಹೀಗೆ ಹೇಳಲಾಗಿದೆ.

'ರಜಿಯಲ್ಲಾಹ್ ತವಲ್ಲುದ್ ಬ ದಾನ
ವರಿಜ್ವಾಅನಾ ವಿಸಾಲ್ ಷರೀಫ್।
ಹಜ್ರತ್‌ರ ಸಮಾಧಿಯು ತಾಜಪುರದ ಗುಮ್ಮಟಿನ ಒಳಗೆ ಇದೆ.

ಹಜ್ರತ್‌ರ ಧರ್ಮಪತ್ನಿಯವರಾದ ಹಜ್ರತ್ ಬೀಬಿ ಅಜೀಸಾಹಬಾ(ಖು) ಅವರು ನವಾಬ್ ಸರ್ಫ್ರಾಜ್‌ಖಾನ್‌ರ ಪುತ್ರಿಯಾಗಿದ್ದರು. ಅವರೂ ಸಹ ಶ್ರೇಷ್ಠ ಸೂಫಿಗಳಾಗಿದ್ದರು. ಹಜ್ರತ್ ಪೀರ್ ದಸ್ತಗೀರ(ಖು) ಹೀಗೆ ಹೇಳುತ್ತಿದ್ದರು. ಏನೆಂದರೆ ಒಂದು ದಿನ ಹಸನಪುರದಿಂದ ಅವರ ಚಿಕ್ಕಪ್ಪನ ಮಗ ಹಜ್ರತ್‌ಶಾಹ್ ಸಿಬಗತಲ್ಲಾಹ್ ಇಬ್ನ ಹಜ್ರತ್‌ಶಾಹ ಜೈನುದ್ದೀನ್‌ರು ತಮ್ಮೊಂದಿಗೆ ಐವತ್ತು ಜನರನ್ನು ಅತಿಥಿಗಳನ್ನಾಗಿ ಕರೆದುಕೊಂಡು ಮದ್ಯಾಹ್ನದ ಹೊತ್ತಿನಲ್ಲಿ ಆಗಮಿಸಿದರು. ನಿತ್ಯದಂತೆ ಇಲ್ಲಿ ಆಗ ಅನ್ನದ ಎರಡು ಪಾತ್ರೆಗಳು ಸಿದ್ಧವಿದ್ದವು. ಹಜ್ರತ್ ಸೈಯ್ಯದ್ ಅಲಿ ಮುಹಮ್ಮದ್(ಖು)ರು ತಮ್ಮ ಪತ್ನಿಯವರಿಗೆ ಹೇಳಿದರು. ಹಸನಪುರದಿಂದ ೫೦ ಜನ ಅತಿಥಿಗಳು ಆಗಮಿಸಿರುವರು. ಆ ವೇಳೆ ಅನ್ನವನ್ನು ಮನೆಯೊಳಗಿನಿಂದ ನೀವು ಬಡಿಸಿರಿ ಆಗ ಹಜ್ರತ್ ಬೀಬಿಯವರು ಪಾತ್ರೆಯ ಬಳಿಗೆ ಕುಳಿತು ಪಾತ್ರೆಯ ಮೇಲಿನಿಂದ ತಟ್ಟೆಯನ್ನು ಸರಿಸಿ ತಮ್ಮ ದುಪ್ಪಟ್ಟಾ ಮುಚ್ಚಿದರು. ಹಾಗೂ ಸೇವಕರಿಂದ ಹೀಗೆ ಹೇಳಿದರು. ದಾವಣಿಯ ಕೆಳಗಿನಿಂದ ಅನ್ನವನ್ನು ತೆಗೆದುಕೊಳ್ಳಿರಿ ಯಾವಾಗ ಹೊರಗಿನಿಂದ ಈ ಸಂದೇಶ ಬಂದಿತು ಎಲ್ಲ ಅತಿಥಿ ಮಹನೀಯರು ಹೊಟ್ಟೆ ತುಂಬ ತಿಂದು ಸಂತೃಪ್ತರಾಗಿರುವರು. ಈಗ ಅನ್ನವನ್ನು ಕಳುಹಿಸಬೇಡಿರಿ ಆಗ ಬೀಬಿಯವರು ಅಲ್ಲಿಂದ ಎದ್ದರು. ಸೇವಕರು ಏನನ್ನು ನೋಡುತ್ತಾರೆ. ಪಾತ್ರೆಯಲ್ಲಿ ಅನ್ನವು ತುಂಬಿಕೊಂಡೇ ಇತ್ತು! ಹಜ್ರತ್ ಬೀಬಿ(ಖು)ರಿಂದ ಈರ್ವರು ಪುತ್ರಿಯರು ಹಾಗೂ ಮೂವರು ಪುತ್ರರು ಜನಿಸಿದರು.

೧) ಓರ್ವ ಪುತ್ರಿ ಹಜ್ರತ್ ಜಮಾಲ್‌ಷಾಹ್ ಬೀಬಿ(ಖು)ರು ಹಜ್ರತ್ ಸೈಯ್ಯದ್ ಕರೀಂ ಮುಹಮ್ಮದ್(ಖು)ರ ಪುತ್ರರಾದ ಹಜ್ರತ್‌ಷಾಹ್ ಖಾಸಿಂ ಹುಸೈನಿ(ಖು)ರೊಂದಿಗೆ ವಿವಾಹವಾದರು.

೨) ದ್ವಿತೀಯ ಪುತ್ರಿಯವರಾದ ಹಜ್ರತ್‌ಷಾಹ್ ಬೀಬಿ(ಖು)ರು ಹಜ್ರತ್ ಸೈಯ್ಯದ್ ಮುಹಮ್ಮದ್ ಸುರ್ಖಿಮುಯಿ(ಖು)ರನ್ನು ವಿವಾಹವಾದರು.

೩) ಹಿರಿಯ ಪುತ್ರರಾದ ಹಜ್ರತ್ ಸೈಯ್ಯದ್ ಮುಹಮ್ಮದ್ ಸಾನಿ(ಖು) ಪೀಠಾಧಿಪತಿಗಳು.

೪) ದ್ವಿತೀಯ ಪುತ್ರರಾದ ಹಜ್ರತ್ ದಸ್ತಗೀರಸಾಬ(ಖು)ರು ಬಿಜಾಪುರ ಸಮೀಪವಿರುವ ಕಾಖಂಡಕಿ ಗ್ರಾಮದಲ್ಲಿ ರಜ್ಜಬ್ ತಿಂಗಳ ೫ನೆಯ ದಿನಾಂಕದಂದು ಸಂತಾನರಹಿತರಾಗಿ ಮರಣವನ್ನಪ್ಪಿದರು.

೫) ಮೂರನೆಯ ಪುತ್ರರಾದ ಹಜ್ರತ್ ಸೈಯ್ಯದ್‌ಷಾಹ್ ಮೆಹಮೂದ್ ಸಾಹೇಬ್(ಖು) ಇವರಿಗೆ ಈರ್ವರು ಪುತ್ರರು. ಚಿಕ್ಕಂದಿನಲ್ಲಿಯೇ ಮೃತ್ಯು ಹೊಂದಿದರು ಹಾಗೂ ಇವರು ತಾಜಪುರ ಷರೀಫನಲ್ಲಿ ರಂಜಾನಿನ ೧೬ನೆಯ ದಿನಾಂಕದಂದು ಹಿಜ್ರಿಶಕೆ ೧೧೯೦ರಲ್ಲಿ ನಿಧನ ಹೊಂದಿದರು. ಹಜ್ರತ್‌ರ ಮರಣದ ದಿನಾಂಕವು 'ಮಖಜನೆ ಅಸ್ರಾರ್‌ಹೂ ಬೂದ' (ಗೌಪ್ಯಗಳ ನಿಧಿ) ಇರುವದು.

ಹಜ್ರತ್‌ಷಾಹ್ ಮೆಹಮೂದ್ ಸಾಹೇಬ್(ಖು)ರು ಮಹಾಪುರುಷರಾಗಿದ್ದರು. ಉಲ್ಲೇಖವಿದೆ. ಯಾವಾಗ ಹೈದರ್ ಅಲಿಖಾನ್ ಮೈಸೂರಿನ ಆಡಳಿತಗಾರನಾಗಿದ್ದನು ಅರ್ಕಾಟಿನ ಮೇಲೆ ಸೈನ್ಯದೊಂದಿಗೆ ದಾಳಿ ಮಾಡಿದನು. ಆ ವೇಳೆ ತಾಜ್‌ಪುರದ ಗುಮ್ಮಟಿನ ಬಳಿ ಒಂದು ಬೇವಿನ ಮರವಿತ್ತು. ಅದು ಗುಮ್ಮಟವನ್ನು ಕಾಣಿಸದಂತೆ ಇರುವದರಿಂದ ಅದನ್ನು ಕತ್ತರಿಸಲು ಆದೇಶ ನೀಡಿದನು. ಆಗ ಅದನ್ನು ಕತ್ತರಿಸಲೆಂದು ಜನರು ಆಗಮಿಸಿದರು. ಈ ಸುದ್ದಿಯು ಹಜ್ರತ್‌ಷಾಹ್ ಮೆಹಮೂದ್(ಖು)ರಿಗೆ ಮುಟ್ಟಿತು. ಹಜ್ರತ್‌ರು ಅಲ್ಲಿಗೆ ಆಗಮಿಸಿ ಹೀಗೆ ಹೇಳಿದರು. ಯಾವ ವ್ಯಕ್ತಿಯು ಈ ಮರವನ್ನು ಕತ್ತರಿಸುವನು ಅವನು ಸ್ವತಃ ಕತ್ತರಿಸಲ್ಪಡುವನು. ಆದರೆ ಆಗಲೇ ಓರ್ವ ವ್ಯಕ್ತಿಯು ಆ ಮರಕ್ಕೆ ಕೊಡಲಿಯನ್ನು ತಾಗಿಸಿದ್ದನು. ಅದು ಅವನ ಕಾಲ ಮೇಲೆಯೇ ಬಿದ್ದಿತು. ಹಾಗೂ ಬೆರಳು ಕತ್ತರಿಸಲ್ಪಟ್ಟಿತು. ಆ ವ್ಯಕ್ತಿಯು ಹೆದರಿ ಅಲ್ಲಿಂದ ದೂರ ಹೋದನು. ಮತ್ತೊಬ್ಬ ವ್ಯಕ್ತಿಯು ಮುಂದೆ ಬಂದು ಯತ್ನಿಸಿದಾಗ ಆತನೂ ಗಾಯಗೊಂಡನು. ಕೊನೆಗೆ ಆಡಳಿತಗಾರನಾದ ಹೈದರ ಅಲಿಗೆ ಈ ವಿಷಯ

ತಿಳಿಯಿತು. ಹಜ್ರತ್‌ರು ಹೇಗೆ ಹೇಳಿದ್ದರೋ ಹಾಗೆಯೇ ಜರುಗಿದೆ. ಹೈದರನು ಗಿಡವನ್ನು ಕತ್ತರಿಸುವದರಿಂದ ಹಿಂದೆ ಸರಿದನು.

ಸೈಯ್ಯದ್ ಅಲಿ ಮುಹಮ್ಮದ್ ಹುಸೈನಿ(ಖು)ರ ಖಲೀಫಾಗಳು :

- ಹಜ್ರತ್ ಸೈಯ್ಯದ್ ಮುಹಮ್ಮದ್ ಸಾನಿ(ಖು) ಪೀಠಾಧಿಕಾರಿಗಳು.
- ಹಜ್ರತ್ ಸೈಯ್ಯದ್ ದಸ್ತಗೀರಸಾಬ್ ಹಾಗೂ ಹಜ್ರತ್ ಸೈಯ್ಯದ್ ಮೆಹಮೂದ್‌ಸಾಬ್.

ಈ ಮೂವರು ಖಲೀಫಾಗಳಿದ್ದರು ಉಳಿದವರ ಹೆಸರುಗಳು ತಿಳಿದು ಬಂದಿಲ್ಲ.

ಹೀಗೆ ಹೇಳಲಾಗುತ್ತದೆ ಹಜ್ರತ್‌ರ ಅಳಿಯರಾದ ಸೈಯ್ಯದ್ ಮುಹಮ್ಮದ್‌ಸಾಬ್ ಸುರ್ಖಮುಯಿ(ಖು)ರೂ ಸಹ ಹಜ್ರತ್‌ರ ಖಲೀಫಾರಲ್ಲಿ ಓರ್ವರಾಗಿರಬಹುದು.

■

೭೯. ಹಜ್ರತ್ ಸೈಯ್ಯದ್ ಮುಹಮ್ಮದ್ ಸಾನಿ(ಖು) ದಸ್ತಗೀರ ದೋ ಆಲಂ(ಖು) ಎಂದು ಪ್ರಸಿದ್ಧರು

ಇವರು ಹಜ್ರತ್ ಸುಲ್ತಾನ್ ಸೈಯ್ಯದ್ ಅಲಿ ಮುಹಮ್ಮದ್ ಹುಸೈನಿ(ಖು)ರ ಜೇಷ್ಠ ಪುತ್ರ ಹಾಗೂ ಪೀಠಾಧಿಕಾರಿಗಳಾಗಿರುವರು. ೧೧೦೭ ಹಿಜ್ರಿಶಕೆಯಲ್ಲಿ ಜನಿಸಿದರು. ತಮ್ಮ ತಂದೆಯವರಿಂದ ಬೈಯ್ಯತ್ ವ ಖಿಲಾಫತ್ ಪಡೆದರು. ತಮ್ಮ ಕಾಲದ ಮಹಾಪುರುಷರಲ್ಲಿ ಓರ್ವರಾಗಿರುವರು. ಇವರಿಂದ ಬಹಳಷ್ಟು ಪವಾಡಗಳು ಜರುಗಿವೆ.

ಯಾವಾಗ ಹಜ್ರತ್‌ರು ಹೊರಗೆ ಹೊರಡುತ್ತಿದ್ದರು. ಹಜ್ರತ್‌ರ ಪಲ್ಲಕ್ಕಿಯ ಮುಂಭಾಗದ ಕಟ್ಟಿಗೆಗೆ ಪಲ್ಲಕ್ಕಿ ಎತ್ತುವವರು ಹೆಗಲು ನೀಡುತ್ತಿರಲಿಲ್ಲ. ಹಿಂಭಾಗದ ಕಟ್ಟಿಗೆಗಳಿಗೆ ತಮ್ಮ ಹೆಗಲು ನೀಡುತ್ತಿದ್ದರು. ಹಜ್ರತ್‌ರು ಬಹಳಷ್ಟು ಸಲ ಟೀಪೂ ಔಲಿಯಾ(ಖು)ರ ಮನೆಗೆ ಹೋಗುತ್ತಿದ್ದರು. ಏಕೆಂದರೆ ಈ ಈರ್ವರು ಮಹಾಪುರುಷರ ನಡುವೆ ಅತ್ಯಂತ ಗಾಢವಾದ ಸ್ನೇಹಸಂಬಂಧವಿತ್ತು. ಯಾವಾಗ ಹಜ್ರತ್‌ರ ಪಲ್ಲಕ್ಕಿಯು ಅರ್ಕಾಟ್‌ನಲ್ಲಿ ಪ್ರವೇಶಿಸುತ್ತಿತ್ತು. ಆಗ ಹಜ್ರತ್ ಟೀಪೂ ಔಲಿಯಾ(ಖು)ರು ಅಂತರ್ಜ್ಞಾನದಿಂದ ತಿಳಿದು ಅಲ್ಲಿಗೆ ಹೋಗಿ ಹಜ್ರತ್‌ರನ್ನು ಸ್ವಾಗತಿಸಲು ಮುಂದಾಗಿ ಹಾಗೂ ಪಲ್ಲಕ್ಕಿಯ ಮುಂಭಾಗಕ್ಕೆ ತಮ್ಮ ಹೆಗಲು ನೀಡುತ್ತಿದ್ದರು. ಆಗ ಹಜ್ರತ್ ದಸ್ತಗೀರ್ ದೋ ಆಲಂ(ಖು)ರು ಹೇಳುತ್ತಿದ್ದರು ಟೀಪೂ ಹೆಗಲು ನೀಡಬೇಡ ಹಿಂದೆ ಸರಿ, ಆಗ ಟೀಪೂ ಹೇಳುತ್ತಿದ್ದರು. ದಸ್ತಗೀರ್ ಸುಮ್ಮನಿರಿ ಇದರಲ್ಲಿ ದಖಲು ನೀಡಬೇಡಿರಿ.

ಹೀಗೆಯೇ ಹೇಳುತ್ತಾ ಪಲ್ಲಕ್ಕಿಯು ಅವರ ಮನೆ ತಲುಪುತ್ತಿತ್ತು. ಹಜ್ರತ್‌ರು ಸ್ವಲ್ಪವೇಳೆ ಅಲ್ಲಿ ಕಳೆಯುತ್ತಿದ್ದರು. ಮತ್ತೆ ಅಲ್ಲಿಂದ ಮರಳುವಾಗ ಹಜ್ರತ್ ಟೀಪೂ ಮೊದಲಿನಂತೆಯೇ ಪಲ್ಲಕ್ಕಿಯ ಮುಂಭಾಗಕ್ಕೆ ಹೆಗಲು ನೀಡಿ ಕಂದಕ ಎಂದರೆ ಅರ್ಕಾಟಿನ ಸರಹದ್ದಿನವರೆಗೆ ತಲುಪಿಸಿ ಮರಳುತ್ತಿದ್ದರು.

ಹಜ್ರತ್ ದಸ್ತಗೀರ್ ದೋ ಆಲಂ ಒಂದು ಸಲ ಮೈಸೂರಕ್ಕೆ ಹೋದರು ಅದೇ ಪಟ್ಟಣದಲ್ಲಿ ತಮ್ಮ ೬೩ನೆಯ ವಯಸ್ಸಿನಲ್ಲಿ ಹಿಜ್ರಿಶಕೆ ೧೧೯೯ರ ಷವ್ವಾಲ ತಿಂಗಳ ಮೊದಲನೆಯ ದಿನಾಂಕದಂದು ಈ ಲೋಕಕ್ಕೆ ವಿದಾಯ ಹೇಳಿದರು. ಇವರ ಮರಣದ ದಿನಾಂಕವನ್ನು 'ಪೀರಾನೇಪೀರ್ ದಸ್ತಗೀರ್' (೧೧೯೯) ಎಂದು ನಮೂದಿಸಿರುವರು. ಅವರ ಮೃತದೇಹವನ್ನು ಬಟ್ಟೆಯಲ್ಲಿ ಆಚ್ಛಾದಿಸಿ ತಾಜಪುರ ಷರೀಫಕ್ಕೆ ತರಲಾಯಿತು. ಹಾಗೂ ಗುಂಬಜಿನ ಒಳಗೆ ತಮ್ಮ ತಂದೆಯವರ ಸಮಾಧಿಯ ಬಳಿಗೆ ಪೂರ್ವದಿಕ್ಕಿನೆಡೆಗೆ ದಫನ್ ಮಾಡಲಾಯಿತು. ಹಾಗೂ ಮೈಸೂರಿನಿಂದ ಹಜ್ರತ್‌ರ ಶವವನ್ನು ತರುವಾಗ ಯಾವ ಯಾವ ಸ್ಥಳದಲ್ಲಿ ನಿಲ್ಲಿಸಲಾಗುತ್ತಿತ್ತು, ಆಡಳಿತಗಾರನ ಕಡೆಯಿಂದ ಅಲ್ಲಲ್ಲಿ ಒಂದು ಮಸೀದೆ ಹಾಗೂ ತಂಗುದಾಣವನ್ನು ನಿರ್ಮಿಸಲಾಯಿತು. ಹಜ್ರತ್ ದಸ್ತಗೀರ್ ದೋ ಆಲಂ(ಖು)ರಿಗೆ ಅವರ ಪತ್ನಿಯವರಾದ ಹಜ್ರತ್ ಬೀಬಿ ಸಾಹೇಬ್ ಜಾನಿ ಸಾಹೇಬಾ(ಖು) ಅವರು ಷಾಹ್ ಹಜ್ರತ್ ಸಾಹೇಬ್ ಅಲ್ವಿಯವರ ಪುತ್ರಿ, ಅವರು ಹಜ್ರತ್‌ಷಾಹ್ ರಜ್ಜಿಸಾಹೇಬ(ಖು)ರ ಅಳಿಯರಾಗಿದ್ದರು. ಇವರಿಂದ ಓರ್ವ ಪುತ್ರಿ ಹಜ್ರತ್ ಬೀಬಿ ಹಜ್ರತ್‌ಸಾಹೇಬಾ ಯಾರು ಹಜ್ರತ್ ಸೈಯ್ಯದ್ ಖಾಸಿಂ ಸಾಹೇಬ್‌ರ ಪತ್ನಿಯಾಗಿದ್ದರು. ಹಾಗೂ ಇನ್ನೋರ್ವ ಪುತ್ರ ಹಜ್ರತ್ ಸಾನಿ ಶಾಹ್ ಸಿಬ್ಗತುಲ್ಲಾಹ್(ಖು) ಜನಿಸಿದರು. ಇವರಿಗೆ ತಮ್ಮ ಪೀಠಾಧಿಪತಿಯನ್ನಾಗಿಸಿದರು. ಹೀಗೆನ್ನಲಾಗುತ್ತದೆ. ತಮ್ಮ ಅಳಿಯರಾದ ಹಜ್ರತ್ ಸೈಯ್ಯದ್ ಖಾಸಿಂ ಸಾಹೇಬ್(ಖು)ರಿಗೂ ಸಹ ಖಲೀಫಾರನ್ನಾಗಿಸಿದರು. ಅವರ ಉಳಿದ ಖಲೀಫಾಗಳ ಹೆಸರು ತಿಳಿದುಬಂದಿಲ್ಲ.

■

೮೦. ಹಜ್ರತ್ ಸಾನಿ ಶಾಹ್‌ಸಿಬ್ಗತಲ್ಲಾಹ್ ಹುಸೈನಿ (ಖು)

ಇವರು ಹಜ್ರತ್ ಸೈಯ್ಯದ್ ಮುಹಮ್ಮದ್ ಸಾನಿ(ಖು)ರ ಪುತ್ರರು ಹಾಗೂ ಪೀಠಾಧಿಕಾರಿಗಳೂ ಆಗಿರುವರು. ಇವರು ೧೧೩೨ಹಿಜ್ರಿಶಕೆಯಲ್ಲಿ ಜನಿಸಿದರು. ಹಾಗೂ ತಮ್ಮ ಕಾಲದ ಅತ್ಯುನ್ನತ ಸೂಫಿವರ್ಯರಾಗಿದ್ದರು. ಇವರಿಂದ ಅಸಂಖ್ಯ ಪವಾಡಗಳು ಜರುಗಿದವು.

ಬಹಾದ್ದೂರ್‌ನೆಂದು ಪ್ರಸಿದ್ಧನಾದ ಹೈದರ್ ಅಲಿಖಾನನು ಅರ್ಕಾಟಿನ ಮೇಲೆ ದಾಳಿ ಮಾಡಿದನು. ಆಗ ರಾಯಿಜಿ ಎಂಬ ಹೆಸರಿನ ವ್ಯಕ್ತಿಯು ನವಾಬ್ ವಾಲಾಜಾ

ಅರ್ಕಾಟಿನ ಆಡಳಿತಗಾರ ಹಾಗೂ ದೀವಾನ್‌ನಾಗಿದ್ದನು. ತನ್ನ ಬಳಿ ಸಾಕಷ್ಟು ಸಂಖ್ಯೆಯ ಸೈನಿಕರಿರದೇ ಇರುವದರಿಂದ ಯುಕ್ತಿ ಪೂರ್ವಕವಾಗಿ ಆತನು ತಾಳೆ ಮರಗಳನ್ನು ಮನುಷ್ಯರ ಎತ್ತರದಷ್ಟು ಉಳಿಸಿ ಉಳಿದದ್ದನ್ನು ಮೇಲಿನಿಂದ ಕತ್ತರಿಸಿ ಹಾಗೂ ಆ ಮರಗಳ ಕತ್ತರಿಸಿದ ಭಾಗಗಳಿಗೆ ಸೈನಿಕರ ಉಡುಪು ತೊಡಿಸಿ ವೈರಿಗಳನ್ನು ಎದುರಿಸಿದನು. ಏಕೆಂದರೆ ಆ ಕಡೆಗೆ ಈ ಯುಕ್ತಿಯ ಯೋಜನೆಯ ಕುರಿತು ಅರಿವಿರಲಿಲ್ಲ. ಆದುದರಿಂದ ಅವರು ಒಂದು ಬ್ರಹದ್ ಸೈನ್ಯವಿದೆ ಎಂದು ಬಗೆದು ಯುದ್ಧವನ್ನು ಮುಂದುವರೆಸಿದರು. ಆದರೆ ಯಾವಾಗ ಅವರಿಗೆ ಇದು ಕೇವಲ ರಾಯಜಿಯ ಚಾಣಾಕ್ಷತನದ ಕಾರ್ಯವಿದೆ ಎಂದು ತಿಳಿದಾಗ ತೀಕ್ಷ್ಣವಾಗಿ ದಾಳಿ ಮಾಡಿದರು. ಹಾಗೂ ರಾಯಜಿಯನ್ನು ಬಂಧಿಸಿ ಅವಮರ್ಯಾದೆಯೊಂದಿಗೆ ಬಹಾದ್ದೂರನ ಬಳಿಗೆ ಕರೆದುಕೊಂಡು ಹೊರಟರು. ಆ ವೇಳೆ ರಾಯಜಿಯು ವೈರಿಯ ಸೈನಿಕರೊಂದಿಗೆ ಹೀಗೆ ವಿನಂತಿಸಿಕೊಂಡನು. ನನಗೆ ಹಜ್ರತ್ ಸೈಯ್ಯದ್ ಅಲಿ ಮುಹಮ್ಮದ್ ಹುಸೈನಿ(ಖು)ರ ಗುಂಬಜಿನ ಬಳಿಯಿಂದ ಕರೆದುಕೊಂಡು ಹೋಗಿರಿ, ಸೈನಿಕರು ಹಾಗೆಯೇ ಮಾಡಿದರು. ಹಜ್ರತ್ ಸಾನಿ ಶಾಹ್ ಸಿಬಗ್‌ತಲ್ಲಾಹ್(ಖು) ಗುಂಬಜಿನ ಪ್ರಾಂಗಣದಲ್ಲಿ ಉಪಸ್ಥಿತರಿದ್ದರು. ಆಗ ರಾಯಜಿಯು ನಮ್ರನಾಗಿ ಹೀಗೆ ವಿನಂತಿಸಿಕೊಂಡನು. ಇಂದಿನವರೆಗೂ ನಾನು ನಿಮ್ಮ ಕೃಪೆ ಹಾಗೂ ದಯೆಯ ನೆರಳಿನಲ್ಲಿ ತುಂಬು ಮರ್ಯಾದೆಯೊಂದಿಗೆ ಬದುಕನ್ನು ಕಳೆದೆನು ಆದರೆ ಇಂದು ತುಂಬಾ ಅವಮರ್ಯಾದಿತನಾಗಿ ಬಂಧಿತಗೊಂಡು ಹೊರಟಿದ್ದೇನೆ. ಆಗ ಹಜ್ರತ್‌ರು ತಮ್ಮ ಪವಿತ್ರನಾಲಿಗೆಯಿಂದ ಹೀಗೆ ಉಸುರಿದರು. ಈಗ ನೀನು ಅದೆಷ್ಟು ಅವಮರ್ಯಾದಿತನಾಗಿ ಹೊರಟಿದ್ದೀಯೋ ಅಷ್ಟೆಯೇ ಅಥವಾ ಅದಕ್ಕಿಂತಲೂ ಒಂದು ತೂಕ ಹೆಚ್ಚು ಮರ್ಯಾದೆಯೊಂದಿಗೆ ಮರಳುವಿ. ಆತನನ್ನು ಬಹಾದ್ದೂರನ ಎದುರಿನಲ್ಲಿ ಪ್ರಸ್ತುತಪಡಿಸಲಾಯಿತೋ ಆಗ ಬಹಾದ್ದೂರನು ಹೀಗೆಂದನು. 'ನೀನು ತುಂಬಾ ಚಾಣಾಕ್ಷತನ ತೋರಿ, ಸಮಯ ಸ್ಫೂರ್ತಿಯ ಯೋಜನೆಯೊಂದಿಗೆ ನಮ್ಮ ಸೈನಿಕರನ್ನು ಹೈರಾಣಾಗಿಸಿದಿ! ರಾಯಿಜಿಯು ಹೀಗೆಂದನು–ನಾನು ಏನೆಲ್ಲವನ್ನು ಮಾಡಿದೆನೋ ಅದೆಲ್ಲವೂ ನನ್ನ ಒಡೆಯನಾದ ನವಾಬ್‌ವಾಲಾಜಾನ ಹಿತವನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಉಪ್ಪಿನ ಋಣ ನೆನೆದು ಹೀಗೆ ಮಾಡಿದೆನು. ಓರ್ವ ಆಜ್ಞಾಧಾರಕ ವಿಧೇಯ ಸೇವಕನಿಗೆ ಇದು ಅತ್ಯವಶ್ಯವಾಗಿದೆ. ಆತನು ಸದಾಕಾಲ ತನ್ನ ಒಡೆಯನ ಹಿತವನ್ನು ಬಯಸಬೇಕು.

ಬಹಾದ್ದೂರನಿಗೆ ಈ ಉತ್ತರವು ತುಂಬಾ ಹಿಡಿಸಿತು. ಪ್ರಫುಲ್ಲಿತ ಮನಸ್ಸಿನೊಂದಿಗೆ ಆತನನ್ನು ಸ್ವತಂತ್ರಗೊಳಿಸಿದನು. ರಾಯಿಜಿಯು ಮತ್ತೆ ಹೀಗೆಂದನು. ನಾನು ತುಂಬಾ ಅವಮರ್ಯಾದಿತನಾಗಿ ಇಲ್ಲಿ ತರಿಸಲ್ಪಟ್ಟಿರುವೆನು ಹಾಗೂ ಇಲ್ಲಿಂದ ತುಂಬು ಮರ್ಯಾದೆಯೊಂದಿಗೆ ಮರಳಿಸುವಿರೆಂದು ಇಚ್ಛಿಸುತ್ತೇನೆ. ಆಗ ಬಹಾದ್ದೂರನು

ಆತನನ್ನು ಪಲ್ಲಕ್ಕಿಯಲ್ಲಿ ಕೂಡ್ರಿಸಿ ಜೊತೆಗೆ ಆತನ ಎಲ್ಲ ಸಹವರ್ತಿಗಳೊಂದಿಗೆ ಸಕಲ ಮರ್ಯಾದೆಯೊಂದಿಗೆ ಮರಳಿ ಕಳುಹಿಸಿದನು. ರಾಯಿಜಿಯ ಬೇಡಿಕೆಯಂತೆ ಸೈನ್ಯವು ಮತ್ತೆ ಆತನನ್ನು ಹಜ್ರತ್‌ರ ಗುಂಬಜಿನ ಬಳಿಗೆ ಕರೆತಂದರು. ಸನಿಹಕ್ಕೆ ಬಂದನೋ ಪಲ್ಲಕ್ಕಿಯಿಂದ ಇಳಿದನು. ಹಾಗೂ ಹಜ್ರತ್‌ಸಾನಿ ಶಾಹ್ ಸಿಬಗತಲ್ಲಾಹ್‌ರ ಸನ್ನಿಧಿಯಲ್ಲಿ ಹಾಜರಾಗಿ ಅವರ ಪಾದಕ್ಕೆರಗಿದನು. ಹಾಗೂ ಅವಮರ್ಯಾದಿತನಾಗಿ ಹೋಗಿ ತುಂಬು ಮರ್ಯಾದೆಯೊಂದಿಗೆ ಮರಳಿದ ವಿಷಯವನ್ನು ಅರುಹಿದನು.

ಹಜ್ರತ್ ಖ್ವಾಜಾ ರೆಹ್ಮತುಲ್ಲಾಹ್ ಖಿದ್ದುಸ್ಸಿರ್ರಹು ಅವರ ಸಮಾಧಿಸ್ಥಳವು ರೆಹಮತಾಬಾದ್ ನೆಲ್ಲೂರು ಪ್ರದೇಶದಲ್ಲಿ ಇರುವದು.

ಹಜ್ರತ್‌ರು ಒಂದು ಸಲ ಯಾವುದೋ ಕಾರಣಕ್ಕಾಗಿ ಮುನಿಸಿಕೊಂಡು ನವಾಬ್‌ವಾಲಾಜಾನನ್ನು 'ಕಾಫಿರ್' ಎಂದರು. ನವಾಬ್ ಸಾಹೇಬನು ವಿದ್ವಾಂಸರು, ಸೂಫಿವಂಶಸ್ಥರು ಹಾಗೂ ಮುಫ್ತಿಗಳಿಂದ ಫತ್ವಾ ಬಯಸಿದನು. ಎಲ್ಲ ವಿದ್ವಜ್ಜನರು ಯಾರು ಕಾಫಿರ್ ಎಂದಿದ್ದಾರೋ ಅವರಿಗೆ 'ಕಾಫಿರ್' ಎಂದು ಫತ್ವಾ ನೀಡಿದರು. ಈ ಫತ್ವಾವನ್ನು ನವಾಬ್ ಸಾಹೇಬ್‌ನು ಅರ್ಕಾಟಕ್ಕೆ ಕಳುಹಿಸಿದನು. ಈ ವಿಷಯ ತಿಳಿದ ಕೂಡಲೆ ಖ್ವಾಜಾ ಸಾಹೇಬರು ಗಾಬರಿಗೊಂಡರು. ತಕ್ಷಣವೆ ಹಜ್ರತ್ ಸಾನಿ ಶಾಹ್ ಸಿಬ್ಗತಲ್ಲಾಹ್(ಖ)ರಿಗೆ ಒಂದು ಪತ್ರವನ್ನು ಎಷ್ಟು ನಮ್ರತೆಯೊಂದಿಗೆ ಬರೆದರೆಂದರೆ– ಓರ್ವ ಕಿರಿಯ ಸಹೋದರನು ಹಿರಿಯ ಸಹೋದರನಿಗೆ ಬರೆಯುವ ರೀತಿಯಲ್ಲಿತ್ತು. ಇದರೊಂದಿಗೆ ಈ ವಿನಂತಿಯೂ ಇತ್ತು. ಏನೆಂದರೆ ಈಗ ನನ್ನ ಮರ್ಯಾದೆಯು ನಿಮ್ಮ ಕೈಯಲ್ಲಿದೆ. ಯಾವಾಗ ಆ ಫತ್ವಾವು ಹಜ್ರತ್‌ರ ಬಳಿ ಬಂದಿತೋ ಆಗ ಹಜ್ರತ್‌ರು ಹೀಗೆಂದರು–ಮೊದಲು ಇದನ್ನು ತಿಳಿಸಿರಿ ಯಾರು ಯಾರಿಗೆ 'ಕಾಫಿರ್' ಎಂದರು. ಫತ್ವಾ ತಂದಿರುವ ವ್ಯಕ್ತಿಯು ಹೀಗೆಂದನು ಖ್ವಾಜಾ ರೆಹ್ಮತುಲ್ಲಾಹ್‌ರು ನವಾಬ್‌ನಿಗೆ 'ಕಾಫಿರ್' ಎಂದರು. ಹಜ್ರತ್‌ರೆಂದರು ನವಾಬ್‌ನಿಗೆ ಹೇಳಿರಿ ಫಕೀರರು ನಿಮಗ್ನತೆಯ ಸ್ಥಿತಿಯಲ್ಲಿ ಇರುತ್ತಾರೆ. ಆಗ ಅವರ ಬಾಯಿಂದ ಏನಾದರೂ ಹೊರಟು ಬಿಡುತ್ತದೆ. ಅವರ ಮಾತಿನಿಂದ ದುಃಖಿತನಾಗಬಾರದು ಹಾಗೂ ಮುನಿಸಿಕೊಳ್ಳಬಾರದು ಎಂದು ಹೇಳಿ ಆ ಫತ್ವಾವನ್ನು ತಮ್ಮ ಬಳಿಯೇ ಇರಿಸಿಕೊಂಡರು. ಹಜ್ರತ್‌ಪೀರ್ ದಸ್ತಗೀರ್(ಖ) ಹೇಳಿರುವರು. ಆ ಫತ್ವಾ ಹಾಗೂ ಪತ್ರವನ್ನು ತಮ್ಮ ಹಿರಿಯ ಸಹೋದರರಾದ ಹಜ್ರತ್ ಸಾನಿ ಸೈಯ್ಯದ್ ಮೀರಾಂ ಮುಹಮ್ಮದ್ ಮುದರ್ರಿಸ್‌ರ ಪೆಟ್ಟಿಗೆಯಲ್ಲಿ ಇಂದಿನವರೆಗೂ ಇರುವವು. ವಿಷಾದವಿದೆ ಈ ಅನುವಾದಕನು ಅದನ್ನು ನೋಡುವ ಇಚ್ಛೆ ವ್ಯಕ್ತಪಡಿಸಲಿಲ್ಲ. ಇಲ್ಲದಿದ್ದರೆ ಅದೂ ಸಹ ನೋಡುವ ಭಾಗ್ಯ ಲಭಿಸುತ್ತಿತ್ತು. ಅದರ ಸಂಪೂರ್ಣ ವಿವರಣೆ ಈ ಸಂದರ್ಭದಲ್ಲಿ ಪ್ರಸ್ತುತಪಡಿಸ ಬಹುದಾಗಿತ್ತು. ಹಜ್ರತ್ ಸಾನಿ ಶಾಹ್ ಸಿಬಗತುಲ್ಲಾಹ್(ಖ)ರು ಉಮರ್ ಮಸ್ನೂನ್

ಎಂದರೆ ೬೩ನೆಯ ವಯಸ್ಸಿನಲ್ಲಿ ಜೀಖಾಯಿದಾದ ೨೫ನೆಯ ದಿನಾಂಕದಂದು ೧೧೯೪ ಹಿಜ್ರಿಶಕೆಯಲ್ಲಿ ಈ ನಶ್ವರ ಜಗತ್ತಿನಿಂದ ನಿತ್ಯ ನಿರಂತರವಿರುವ ಲೋಕಕ್ಕೆ ಪಯಣ ಬೆಳೆಸಿದರು. ಹಜ್ರತ್‌ರ ಅಜ್ಜಂದಿರಾದ ಹಜ್ರತ್ ಸುಲ್ತಾನ್ ಸೈಯ್ಯದ್ ಅಲಿ ಮುಹಮ್ಮದ್‌ರ ಪಕ್ಕದಲ್ಲಿ ಸಮಾಧಿಸ್ಥರಾಗಿರುವರು. ಅವರ ಮರಣದ ದಿನಾಂಕವನ್ನು ಈ ರೀತಿ ಬರೆಯಲಾಗಿದೆ.

'ಶಹಿನ್‌ಶಾಹೇ ದೀನ್ ಸಿಬ್ಗತುಲ್ಲಾಹ್ ಕರ್ದ'
ಶುದಾ ಮಜಹರೆ ಸಿಬ್ಗತುಲ್ಲಾಹ್ ಜಹಾಂ।
ಜ ಸಾಲೆ ವಿ ಸಾಲಶ್ ಬಗುಫ್ತಾ ಸುರೋಷ್

ಫಿರೋಶುದ್ ಜಹೆ ಆಫ್ತಾಬೆ ಜಮಾ

ಸಿಬಗತಲ್ಲಾಹ್‌ರು ಧರ್ಮದ ದೊರೆಯಾಗಿರುವರು. ಅಲ್ಲಾಹುವಿನ ಪ್ರಕಾಶವು ಅವರಲ್ಲಿ ಪ್ರಜ್ವಲಿತಗೊಂಡಿದೆ. ಸರೋಷ್ ಕವಿಯು ಅವರ ನಿಧನದ ದಿನಾಂಕವನ್ನು ಹೀಗೆ ಹೇಳಿರುವರು. ಲೋಕದ ಸೂರ್ಯ ಇಂದು ಅಸ್ತಂಗತನಾದನು.

ಶಾಹ್ ವಲಿಯಲ್ಲಾಹ್ ಸಾಹೇಬ್ ಉರ್ಫ್ ರಜ್ಜಿ ಸಾಹೇಬ್(ಖು)ರ ಅಳಿಯಂದಿರಾದ ಶಾ ಹಜ್ರತ್ ಸಾಹೇಬ್ ಅಲ್ವಿಯವರ ಪುತ್ರರಾದ ಹಜ್ರತ್‌ಶಾಹ್ ಬುರ್ಹಾನ್ ಸಾಹೇಬ್ ಅಲ್ವಿಯವರ ಪುತ್ರಿ ಹಜ್ರತ್ ಬೀಬಿ ಫಾತೀಮಾ ಸಾಹೇಬಾ(ಖು) ಇವರು ಹಜ್ರತ್ ಸಾನಿ ಶಾಹ್ ಸಿಬಗತಲ್ಲಾಹ್‌ರ ಪತ್ನಿಯಾಗಿದ್ದರು.

ಇವರಿಗೆ ಮೂವರು ಪುತ್ರಿಯರು ಹಾಗೂ ಈರ್ವರೂ ಪುತ್ರರು ಜನಿಸಿದರು. ಓರ್ವ ಪುತ್ರಿಯಾದ ಹಜ್ರತ್ ಬೀಬಿ ಸಾಹೇಬ್‌ಜಾನಿ ಸಾಹೇಬಾ(ಖು) ಹಜ್ರತ್ ಸೈಯ್ಯದ್ ಉಮರ್ ಮೆಹಜಾರ್‌ರ ಪತ್ನಿಯಾಗಿದ್ದರು.

ಎರಡನೆಯ ಪುತ್ರಿಯವರಾದ ಹಜ್ರತ್ ಬೀಬಿ ರೆಹಮಾನ್ ಸಾಹೇಬಾ(ಖು)ಯವರು ಸೈಯ್ಯದ್ ಖಾಸಿಂ ಸಾಹೇಬರ ಪತ್ನಿಯಾಗಿದ್ದರು. ಸೈಯ್ಯದ್ ಖಾಸಿಂ ಸಾಹೇಬ್(ಖು) ಇವರು ಹಜ್ರತ್ ಸೈಯ್ಯದ್ ಉಮರ್ ಮೆಹಜಾರ್‌ರ ಸಹೋದರರಾಗಿದ್ದಾರೆ.

ಮೂರನೆಯ ಪುತ್ರಿ ಹಜ್ರತ್ ಬೀಬಿ ಸುಲ್ತಾನ್ ಸಾಹೇಬಾ(ಖು) ಹಜ್ರತ್ ಬಡೇಸಾಹೇಬರ ಪತ್ನಿಯಾಗಿದ್ದರು.

ಜೇಷ್ಠ ಪುತ್ರರಾದ ಹಜ್ರತ್ ಸೈಯ್ಯದ್ ಮುಹಮ್ಮದ್ ಸಾಲಿಸ್‌ರು ದಸ್ತಗೀರ್ ದೋ ಆಲಂ ಸಾನಿ(ಖು) ಎಂದು ಪ್ರಸಿದ್ದರು.

ಕಿರಿಯ ಪುತ್ರ ಹಜ್ರತ್ ಸೈಯ್ಯದ್ ಅಲಿ ಮುಹಮ್ಮದ್ ಸಾನಿ ಉರ್ಫ್ ಅಲಿ ಪೀರಾಂ ಸಾಹೇಬ್ ಕಿಬ್ಲಾ(ಖು) ಇರುವರು.

ಹಜ್ರತ್‌ಸಾನಿಶಾಹ್ ಸಿಬ್ಗತಲ್ಲಾಹ್(ಖು)ರ ಖಲೀಫಾಗಳು :

೧) ಹಜ್ರತ್ ಸೈಯ್ಯದ್ ಮುಹಮ್ಮದ್ ಸಾಲಿಸ್ ಉರ್ಫ್ ದಸ್ತಗೀರ ದೋ ಆಲಂ ಸಾನಿ(ಖು) ಜೇಷ್ಠ ಪುತ್ರರು ಹಾಗೂ ಪೀಠಾಧಿಕಾರಿಗಳಾಗಿರುವರು.

೨) ಹಜ್ರತ್ ಸೈಯ್ಯದ್ ಶಾಹ್ ಉಮರ್ ಮೆಹಜಾರ್(ಖು)

೩) ಹಜ್ರತ್ ಸಾಖಿ ಅಲೈ ಸಾಹೇಬ್(ಖು)

೪) ಹಜ್ರತ್ ಅಕ್ಬರ್ ಸಾಹೇಬ್ (ಖು)

೫) ಹಜ್ರತ್ ರೆಹಮಾನ್ ಶಾಹ್ ಸಾಹೇಬ್(ಖು)

೬) ಹಜ್ರತ್ ಖುತ್ಬಿ ಸಾಹೇಬ್ (ಖು)

■

೮೧. ಹಜ್ರತ್ ಸೈಯ್ಯದ್ ಮುಹಮ್ಮದ್ ಹುಸೈನಿ ಉರ್ಫ್ ದಸ್ತಗೀರ್ ದೋ ಆಲಂ ಸಾನಿ

ಇವರು ಹಜ್ರತ್‌ಸಾನಿ ಶಾಹ್ ಸಿಬಗತಲ್ಲಾಹ್‌ರ ಜೇಷ್ಠ ಪುತ್ರರು ಹಾಗೂ ಪೀಠಾಧಿಕಾರಿಗಳು ಆಗಿರುವರು. ಇವರು ೧೧೭೭ ಹಿಜ್ರಿಶಕೆಯಲ್ಲಿ ಜನಿಸಿದರು. ಇವರು ತಮ್ಮ ತಂದೆಯವರಿಂದ ಬೈಯ್ಯತ್ ಹಾಗೂ ಖಿಲಾಫತ್ ಪಡೆದರು. ಇವರು ತಮ್ಮ ತಂದೆಯವರಂತೆಯೇ ಪವಾಡ ಪುರುಷರಾಗಿದ್ದರು. ಇವರಿಂದಲೂ ಸಹ ಅಸಂಖ್ಯ ಪವಾಡಗಳು ಜರುಗಿವೆ.

ತಾಜಪುರದ ಕೆರೆಯಲ್ಲಿ ದೊಡ್ಡ ಮೀನುಗಳಿದ್ದವು. ಅವುಗಳಿಗೆ ಮರಲ್ ಎಂದು ಕರೆಯಲಾಗುತ್ತದೆ ಅವು ಬಹಳಷ್ಟು ಇದ್ದವು. ಹಜ್ರತ್ ಸೈಯ್ಯದ್ ಅಮೀನುದ್ದೀನ್ ಖಾದ್ರಿ ಅಜ್ಮತುಲ್ಲಾಹಿ ಉರ್ಫ್ ಅಮೀನ್ ಪಾಶಾ ಸಾಹೇಬ್(ಖು) ಅವರಿಗೆ ಹಜ್ರತ್ ದಸ್ತಗೀರ್ ದೋ ಆಲಂ ಸಾನಿ(ಖು) ರೊಂದಿಗೆ ಗಾಢ ಸ್ನೇಹವಿತ್ತು. ಒಂದು ದಿನ ಹೀಗೆ ಯೋಚನೆ ಮಾಡಿದರು. ತಾಜಪುರದ ಹೊಂಡದಲ್ಲಿ ಮರಲ್ ಮೀನುಗಳು ಬಹಳ ಇರುವವು. ಅಲ್ಲಿ ಹೋಗಿ ತಿನ್ನಬೇಕು. ಇಲ್ಲಿ ಹಜ್ರತ್ ದಸ್ತಗೀರ್ ದೋ ಆಲಂರು ಜನರಿಗೆ ಮೀನು ಹಿಡಿದುಕೊಂಡು ಹೋಗಲು ಅನುಮತಿ ನೀಡಿದರು. ಎಲ್ಲ ಮೀನುಗಳು ಹಿಡಿಯಲ್ಪಟ್ಟವು. ಅದರ ನಂತರ ಅಮೀನ್ ಪಾಶಾಸಾಹೇಬ್ ಬಂದರು. ಹಜ್ರತ್‌ರು ಅವರನ್ನು ನೋಡಿದ ಕೂಡಲೆ ಹೀಗೆಂದರು. ಮಿಯಾ

ಅಮೀನ್‌ಪಾಶಾ ನೀವು ಮೀನನ್ನು ತಿನ್ನಲು ಬಂದಿರುವಿರಿ ಆದರೆ ಇಲ್ಲಿ ಮೀನುಗಳು ಖಾಲಿಯಾದವು. ಶಾಹ್ ಸಾಹೇಬರು ಪ್ರತಿಯಾಗಿ ಹೀಗೆಂದರು. ದಸ್ತಗೀರ್ ಯಾವಾಗ ನಿಮಗೆ ತಿಳಿದಿದೆ ನಾನು ಮೀನನ್ನು ತಿನ್ನಲೆಂದು ಬಂದಿರುವೆನು ಮತ್ತೆ ನನಗಾಗಿ ಏಕೆ ಉಳಿಸಲಿಲ್ಲ. ಹಜ್ರತ್‌ರು ಮಂದಹಾಸ ಬೀರುತ್ತ ಹೀಗೆಂದರು–ಹೌದು ಸಹೋದರ ನಿಮ್ಮ ಪಾಲು ಬರುವದು. ಅಕಸ್ಮಿಕವಾಗಿ ಅದೇ ದಿನ ಸಾರ್ವಜನಿಕರು ತಾಜಪುರದ ಕೆರೆಯ ಮೀನುಗಳನ್ನು ಸಹ ಹಿಡಿದರು. ಅಲ್ಲಿಯೂ ಸಹ ಅಸಂಖ್ಯೆ ಮೀನುಗಳು ಇದ್ದವು. ಸಾರ್ವಜನಿಕರು ಎರಡು ಬುಟ್ಟಿಗಳಷ್ಟು ಮೀನುಗಳನ್ನು ಹಜ್ರತ್‌ರ ಸೇವೆಯಲ್ಲಿ ಶೃದ್ಧಾಪೂರ್ವಕ ಕಾಣಿಕೆಯಾಗಿ ಅರ್ಪಿಸಿದರು. ಆಗ ಹಜ್ರತ್‌ರೆಂದರು ಅಮೀನ್‌ಸಾಬ ತೆಗೆದುಕೊಳ್ಳಿ ಇದು ನಿಮ್ಮ ಪಾಲಿಗೆ ಬಂದಿರುವವು. ಮತ್ತೆ ಆ ವೇಳೆ ಶಾಹ್ ಸಾಹೇಬರ್ ಬೇಡಿಕೆಗೆ ಅನುಗುಣವಾಗಿ ಕೆಲವು ಸಿಹಿ, ಕೆಲವು ಹುಳಿ, ಅಡುಗೆ ಮಾಡಿ ಸಾರಿನ ರೂಪದಲ್ಲಿ ಮತ್ತೆ ಕೆಲವು ಎಣ್ಣೆಯಲ್ಲಿ ಹುರಿಯಲಾಯಿತು. ಉಳಿದವುಗಳನ್ನು ಹಂಚಲಾಯಿತು.

ಹಜ್ರತ್ ದಸ್ತಗೀರ್ ದೋ ಆಲಂ(ಖು)ರ ಆತಿಥ್ಯವು ಎಷ್ಟು ಪ್ರಸಿದ್ಧವಾಗಿತ್ತೆಂದರೆ ಯಾವುದೇ ಧರ್ಮದ ಅನುಯಾಯಿಯಾದ ಪ್ರವಾಸಿಗನು ಬಂದರೆ ಹಜ್ರತ್‌ರು ಆ ಅತಿಥಿಯ ಆತಿಥ್ಯ ವಹಿಸುತ್ತಿದ್ದರು. ಒಂದು ವೇಳೆ ಮುಸ್ಲಿಂ ಬಂದರೆ ಆತನಿಗೆ ಸಿದ್ಧ ಆಹಾರ ನೀಡುತ್ತಿದ್ದರು. ಹಾಗೂ ಹಿಂದೂ ಅತಿಥಿ ಬಂದರೆ ಅಕ್ಕಿ, ಬೆಲ್ಲ, ಇತ್ಯಾದಿ ಅವಶ್ಯಕ ವಸ್ತುಗಳನ್ನು ಕೊಡುತ್ತಿದ್ದರು. ಹಜ್ರತ್ ಪೀರ್ ದಸ್ತಗೀರ ಹೇಳುತ್ತಾರೆ. ಒಂದು ದಿನ ಓರ್ವ ಸಾಯಿ ಬಂದನು. ಹಜ್ರತ್‌ರು ಮೂರು ದಿನಗಳವರೆಗೆ ಆತನಿಗೆ ಆತಿಥ್ಯ ನೀಡಿದರು. ಆತನು ನೋಡಿದನು. ಈ ಸ್ಥಳವು ಬಹಳೇ ಸಮೃದ್ಧಿದಾಯಕ ಸ್ಥಳವಾಗಿದೆ. ದಿನನಿತ್ಯ ಸಾವಿರಾರು ಜನರಿಗೆ ಸಮೃದ್ಧಿ ತಲುಪುತ್ತದೆ. ಮತ್ತೆ ತನ್ನ ಮರಳುವಿಕೆಯ ಸಮಯದಲ್ಲಿ ಹಜ್ರತ್‌ರ ಬಳಿ ಹೋದನು. ಹಜ್ರತ್‌ರು 'ಹುಕ್ಕಾ' ಸೇದುತ್ತಿದ್ದರು. ಹಜ್ರತ್‌ರಿಂದ ಸ್ವಲ್ಪ ಬೆಂಕಿಯನ್ನು ಬೇಡಿದನು. ಹಜ್ರತ್‌ರೆಂದರು ತೆಗೆದುಕೊಳ್ಳಿ, ಮತ್ತೆ ಒಂದು ತಾಮ್ರದ ನಾಣ್ಯವನ್ನು ಕೇಳಿದಾಗ ಅರ್ಧಆಣೆ ನೀಡಿದರು. ಆತನು ತನ್ನ ಚಲುಮೆಯಲ್ಲಿ ಅದನ್ನಿಟ್ಟು ಹಾಗೂ ಒಂದು ಬರಿದಾದ ತೆಂಗಿನಿಂದ ಬೂದಿಯನ್ನು ತೆಗೆದು ಅದರ ಮೇಲಿಟ್ಟನು ಹಾಗೂ ಹುಕ್ಕಾ ಸೇದಿದನು. ನಂತರ ಚಿಲುಮೆ ಬಾಗಿಸಿದನು. ಮತ್ತೆ ಅದು ಆರಿದ ಮೇಲೆ ಆ ಅರ್ಧ ಆಣೆಯನ್ನು ಬೂದಿಯಿಂದ ತೆಗೆದು ಝಾಡಿಸಿದನು. ಅದು ಹಸಿರು ಹೊನ್ನಾಗಿ ಪರಿವರ್ತಿತವಾಗಿತ್ತು. ಮತ್ತೆ ಆ ಬಂಗಾರ ಹಾಗೂ ತೆಂಗು ಹಜ್ರತ್‌ರಿಗೆ ಅರ್ಪಿಸಿ ಹೀಗೆಂದನು ನಿಮ್ಮ ಮನೆಯ ಖರ್ಚು ಬಹಳವಿದೆ. ನಿಮ್ಮ ಬಳಿ ಇರಿಸಿಕೊಳ್ಳಿ ಎಂದು ಹೇಳಿ ಹೊರಟು ಹೋದನು. ಹಜ್ರತ್ ದಸ್ತಗೀರ್ ದೋ ಆಲಂ(ಖು) ಆ ಎರಡೂ ವಸ್ತುಗಳನ್ನು ತಮ್ಮ ಧರ್ಮಪತ್ನಿಗೆ

ಒಪ್ಪಿಸಿದರು. ಹಜ್ರತ್ ಬೀಬಿ(ಖ)ರು ಮೇಣದ ಹಾಗೆ ಮೆತ್ತಗಾಗಿದ್ದು ಆ ಬಂಗಾರವನ್ನು ಅದನ್ನು ಓರ್ವ ಸೇವಕನ ಹತ್ತಿರ ಕಳುಹಿಸಿದರು. ಅದನ್ನು ಉಂಗುರವನ್ನಾಗಿಸಿಕೊಂಡು ಬರಬೇಕು. ಆತನು ನೋಡಿದನು. ಇದು ಅಮೂಲ್ಯ ವಸ್ತುವಾಗಿದೆ. ಆತನೆಂದನು. ಇದು ಬಹಳವಿದೆ. ಒಂದು ವೇಳೆ ತಮ್ಮ ಆದೇಶವಾದರೆ ಇದರಿಂದ ಈ ಗುಲಾಮರು ಅರ್ಧಭಾಗ ತೆಗೆದುಕೊಳ್ಳುವನು. ಹಾಗೂ ಉಳಿದರ್ಧದಲ್ಲಿ ಉಂಗುರ ಮಾಡಿಕೊಂಡು ಬರುವೆನು. ಹಜ್ರತ್‌ಬೀಬಿ ಹೇಳಿದರು ಆಗಲಿ ಹಾಗೆಯೇ ಮಾಡು ಮತ್ತೆ ಆ ವ್ಯಕ್ತಿಯು ಅರ್ಧಭಾಗದಲ್ಲಿ ತಾಮ್ರವನ್ನು ಸೇರಿಸಿದಾಗ ೧೨ ಮಾಸಿಯಷ್ಟು ಆಯಿತು. ಅದರಲ್ಲಿ ಅರ್ಧಭಾಗ ತಾನು ತೆಗೆದುಕೊಂಡನು. ಉಳಿದರ್ಧ ಭಾಗದಲ್ಲಿ ಉಂಗುರ ಮಾಡಿಸಿಕೊಂಡು ಬಂದನು. ಹಜ್ರತ್ ದಸ್ತಗೀರ ದೋ ಆಲಂ(ಖ)ರಿಂದ ವಿನಂತಿಸಿದನು. ಅದರಿಂದ ಸ್ವಲ್ಪ ಬೂದಿ ನೀಡಿರಿ ಹಜ್ರತ್‌ರು ಮನೆಯೊಳಗಿನಿಂದ ಆ ತೆಂಗನ್ನು ತಂದರು ಹಾಗೂ ಕೆರೆಯತ್ತ ನಡೆದರು ಹಾಗೂ ಈ ಸೇವಕನನ್ನು ಸಹ ತಮ್ಮ ಜೊತೆಯಲ್ಲಿ ಕರೆದುಕೊಂಡು ಹೋದರು. ಅಲ್ಲಿ ತಲುಪಿ ಆ ಬೂದಿಯನ್ನು ನೀರಿನಲ್ಲಿ ಹಾಕಿದರು. ಸೇವಕನು ಇದನ್ನು ನೀರಿನಲ್ಲಿ ಎಸೆಯದಂತೆ ಬೇಡಿಕೊಳ್ಳುತ್ತಿದ್ದನು. ಹಜ್ರತ್‌ರು ನಿಲ್ಲು ಹೇಳುವೆನು ಯಾವಾಗ ಎಲ್ಲ ಬೂದಿಯು ನೀರಿನಲ್ಲಿ ಸೇರಿತೋ ಆಗ ಈ ತೆಂಗಿನಲ್ಲಿ ನೀರನ್ನು ತೆಗೆದುಕೊಂಡು ಅಲ್ಲಾಡಿಸಿ ಎಸೆದರು ಹಾಗೂ ತೆಂಗನ್ನೂ ಸಹ ಕೆರೆಯಲ್ಲಿ ಎಸೆದರು. ಸೇವಕನೆಂದನು. ಒಂದು ವೇಳೆ ಈ ವಸ್ತುವು ಹಜ್ರತ್‌ರ ಉಪಯೋಗದ ವಸ್ತುವಾಗಿರದಿದ್ದರೆ ಈ ಗುಲಾಮನಿಗೆ ನೀಡಬಹುದಾಗಿತ್ತು. ಹಜ್ರತ್‌ರು ಹೀಗೆಯೇ ಅದನ್ನು ಕೆರೆಗೆ ಎಸೆದಿರಿ.

ಆಗ ಹಜ್ರತ್‌ರೆಂದರು, ಓ ಸೇವಕನೆ ನೀನು ಈಗ ಸ್ವಲ್ಪ ಬೂದಿಯನ್ನು ಬೇಡಿದೆ. ಫಕೀರನು ನಿನಗೆ ನೀಡುತ್ತಿದ್ದರೆ ಉಳಿದ ಶಿಷ್ಯರು ಇದನ್ನು ಬಯಸುತ್ತಿದ್ದರು. ಅವರಿಗೂ ನೀಡಬೇಕಾಗುತ್ತಿತ್ತು. ಹೀಗೆಯೇ ಒಬ್ಬರಿಂದೊಬ್ಬರಿಗೆ ಸುದ್ಧಿ ಹರಡುತ್ತಾ ಅರ್ಕಾಟ್, ರಾಣಿಪೇಟ್, ವೇಲೂರ ಹಾಗೂ ಇನ್ನಿತರ ಎಲ್ಲ ಪ್ರದೇಶಗಳಿಗೆ ಹಬ್ಬುತ್ತಿತ್ತು. ಏನೆಂದರೆ ತಾಜಪುರದ ದಸ್ತಗೀರ ರಸಾಯನ ಹಂಚುತ್ತಾನೆ ಮತ್ತೆ ಎಲ್ಲ ಕಡೆಯಿಂದ ಜನರು ಬರುತ್ತಿದ್ದರು. ಎಲ್ಲಿಯವರೆಗೆ ಆ ಬೂದಿ ಇರುತ್ತಿತ್ತೋ ಅದನ್ನು ನೀಡಬೇಕಾಗುತ್ತಿತ್ತು. ಮತ್ತೆ ಯಾವಾಗ ಅದು ಮುಗಿಯುತ್ತಿತ್ತೋ ಆಗ ಅದು ಮುಗಿಯಿತು ಎಂದು ಹೇಳಬೇಕಾಗುತ್ತಿತ್ತು. ಆ ಮಾತನ್ನು ಜನರು ಒಪ್ಪುತ್ತಿರಲಿಲ್ಲ. ನಂಬುತ್ತಿರಲಿಲ್ಲ. ಹಾಗೂ ಹೀಗೆನ್ನುತ್ತಿದ್ದರು ತಾಜಪುರದ ದಸ್ತಗೀರ 'ಸುಳ್ಳ'ನಾಗಿದ್ದಾನೆ. ಆ ಕಾರಣಕ್ಕೆ ಫಕೀರನು ಒಂದೇ ಸಲಕ್ಕೆ ಅಧ್ಯಾಯ ಮುಗಿಸಿದನು.

ಓರ್ವ ವ್ಯಕ್ತಿ 'ಬುಡನ್‌ಅಲಿ' ಎಂಬ ಹೆಸರಿನಿಂದ ತಾಜಪುರ್ ಷರೀಫ್‌ದಲ್ಲಿ ಇರುತ್ತಿದ್ದರು. ಅವರಿಗೆ 'ರಸವಿದ್ಯೆ'ಯ ಬಗ್ಗೆ ಬಹಳ ಆಸಕ್ತಿಯಿತ್ತು. ಅವರ ಮೇಲೆ

ಹಜ್ರತ್‌ರ ಕೃಪಾದೃಷ್ಟಿಯಿತ್ತು. ಒಂದು ದಿನ ಅವರು ತಮ್ಮ ಮನೆಯಲ್ಲಿ ರೂಢಿಯಂತೆ ಭಟ್ಟಿ ಊದುತ್ತಿದ್ದರು. ಹಜ್ರತ್‌ರು ಸಾವಕಾಶವಾಗಿ ಅವರ ಹಿಂದಿನಿಂದ ಬಂದು ಹೆಗಲು ಮೇಲೆ ಕೈಯಿಟ್ಟು ಕೇಳಿದರು. 'ಬುಡನ್‌ಅಲಿ' ಏನು ಮಾಡುತ್ತಿದ್ದೀರಿ. ಏನು ಇದರಿಂದ 'ಬಂಗಾರ' ಉಂಟಾಗುತ್ತದೆಯೇ? ದಸ್ತಗೀರರೆ ತಾವು ಇಲ್ಲಿಗೆ ಯಾಕೆ–ಬಂದಿರಿ, ನಾವು ಏನಾದರೂ ಮಾಡಿಕೊಳ್ಳುತ್ತೇವೆ. ತಮಗೆ ಇದರಿಂದ ಏನು ಉಪಯೋಗ? ಹಜ್ರತ್‌ರು ಹೇಳಿದರು. ಓ ಬುಡನ್ ಅಲಿ, ಇದರಿಂದ ಏನಾಗುತ್ತದೆ? ಕೊನೆಗೆ ಆತನು ಅನಿವಾರ್ಯವಾಗಿ ಈ ವಿಧಿವಿಧಾನದ ರಹಸ್ಯವನ್ನು ವಿವರಿಸಿದನು. ಹಜ್ರತ್‌ರು ನಸುನಕ್ಕು ಹೇಳಿದರು. ಓ ಬುಡನ್ ಅಲಿ ಇದರಿಂದ ಏನೂ ಆಗುವದಿಲ್ಲ. ಒಂದು ವೇಳೆ ಯಶಸ್ವಿಯಾಗಬೇಕೆಂದರೆ ಹೀಗೆ ಮಾಡು ನಿನ್ನ ಉದ್ದೇಶಪೂರ್ತಿಯಾಗುವದು. ಬುಡನ್ ಅಲಿಯು ಹೀಗೆಂದನು. ಹೇಳಿರಿ ಏನು ಮಾಡಬೇಕು ಹಜ್ರತ್‌ರೆಂದರು–ಸೀಸವನ್ನು ತೆಗೆದುಕೊಂಡು ಮೋಅಸದಲ್ಲಿ ಕುದಿಸು ಹಾಗೂ ಮೆಹ್‌ವಾ ಹಣ್ಣಿನ ರಸದಲ್ಲಿ ಅದ್ದಿರಿ ಹೀಗೆ ೧೨೦ ಸಲ ಮಾಡಿರಿ ಅದು ಗಟ್ಟಿಯಾಗುವದು. ಆಗ ಅದನ್ನು ಇಂಥಿಂಥಹ ಬೇರಿನಲ್ಲಿ ಇರಿಸಿ ಶಾಖ ನೀಡಿರಿ ಆಗ ಅದು ಬಂಗಾರವಾಗಿ ಪರಿವರ್ತಿತವಾಗುವುದು. ಬುಡನ್ ಅಲಿಯು ಅದನ್ನು ತಮಾಷೆಯಂದು ಬಗೆದರು. ಹಜ್ರತ್‌ರೆಂದರು ಮೊದಲು ಮಾಡಿಯಾದರೂ ನೋಡಿರಿ ಒಂದುವೇಳೆ ನಾನು ಹೇಳಿದಂತೆ ಆಗದಿದ್ದರೆ ದಸ್ತಗೀರ 'ಸುಳ್ಳ'ನಿದ್ದಾನೆ ಎಂದು ಹೇಳಿರಿ. ಏಕೆಂದರೆ ಆತನ ಅದೃಷ್ಟದಲ್ಲಿ ಅದು ಇರಲಿಲ್ಲ. ಹೀಗಾಗಿ ಈ ಕಾರ್ಯವೆಸಗುವ ಮನಸ್ಸೇ ಮಾಡಲಿಲ್ಲ. ಯಾವಾಗ ಹಜ್ರತ್ ದಸ್ತಗೀರ ದೋ ಆಲಂರು ನಿಧನರಾದರು. ಆಗ ಜನರು ಹಜ್ರತ್‌ರ ಕರಾಮತ್ತುಗಳನ್ನು ವಿವರಿಸುತ್ತಿದ್ದರು. ಬುಡನ್ ಅಲಿ ಸಾಹೇಬರು ಹಜ್ರತ್‌ರೊಂದಿಗೆ ನಡೆದ ಸಂಭಾಷಣೆಯ ವಿವರವನ್ನು ಹೇಳಿದರು. ಜನರು ಅವರಿಗೆ ಕೇಳಿದರು. ನೀವು ಹಜ್ರತ್‌ರನ್ನು 'ವಲಿ'ಯೆಂದು ಬಗೆಯುತ್ತಿರೋ ಇಲ್ಲವೋ? ಅವರೆಂದರು ನಿಸ್ಸಂದೇಹವಾಗಿ ಅವರು ಸೂಫಿಗಳಾಗಿದ್ದರು. ಮತ್ತೆ ಹೀಗಿದೆಯೆಂದರೆ–ವಲಿಯವರ ನಾಲಿಗೆಯಿಂದ 'ಸುಳ್ಳು' ಎಂದಾದರೂ ಹೊರಡುವುದೆ? ಅವರೆಂದರು ಇಲ್ಲ.

ಜನರು ಅವರೊಂದಿಗೆ ಹೀಗೆ ಹೇಳಿದರು. ಮತ್ತೆ ನೀವು ಯಾಕೆ ಈ ಮಾತನ್ನು ಸುಳ್ಳೆಂದು ತಿಳಿದಿರಿ. ಈ ಸಂಭಾಷಣೆ ಜರುಗಿದಾಗ ಅವರಿಗೆ ಮನದಟ್ಟಾಯಿತು. ಯಾಕೆ ಅದನ್ನು ಪ್ರಯೋಗಿಸಿ ನೋಡಬಾರದು. ಅವರು ಹೇಳಿದಂತೆ ಮಾಡಿದಾಗ ಸೀಸವು ಗಟ್ಟಿಯಾಯಿತು. ಈಗ ಬೂದಿ ಸೇರಿಸುವುದು ಉಳಿಯಿತು. ಅದಕ್ಕಾಗಿ ಹಜ್ರತ್‌ರು ಯಾವ ಬೇರುಗಳನ್ನು ಹೇಳಿದ್ದರು ಅದನ್ನು ಮರೆತರು. ಇದರ ದುಃಖವು ಅವರಿಗೆ ಅತೀವವಾಗಿ ಉಳಿಯಿತು.

ಹಜ್ರತ್ ದಸ್ತಗೀರ್ ದೋ ಆಲಂ ಸಾನಿ(ಖ)ರು ಉಮರ್ ಮಸ್ನೂನ್ ಅಂದರೆ ೬೩ನೆಯ ವಯಸ್ಸಿನಲ್ಲಿ ಜಮಾದಿಲ್ ಅವ್ವಲ್‌ದ ೩೦ನೆಯ ದಿನ ೧೨೪೦ ಹಿಜ್ರಿಶಕೆಯಂದು ನಿಧನರಾದರು. ಯಾವಾಗ ಹಜ್ರತ್‌ರ ಶವಯಾತ್ರೆ ಸಾಗಿತೋ ಆಗ ಮೋಡಗಳು ನೆರಳನ್ನು ಬೀರಿದ್ದವು. ಹಜ್ರತ್‌ರ ಕುದುರೆಯು ಶವದ ಮುಂದೆ ಕಣ್ಣೀರಿಡುತ್ತಾ ಸಾಗುತ್ತಿತ್ತು. ಹಾಗೂ ಹುಲ್ಲು ಧಾನ್ಯ ಮೇಯುವುದನ್ನು ಬಿಟ್ಟುಬಿಟ್ಟಿತ್ತು.

ಹಜ್ರತ್‌ರ ಸಮಾಧಿಯು ಗುಂಬಜಿನ ಒಳಗಡೆ ಹಜ್ರತ್‌ರ ತಂದೆಯವರ ಅಂದರೆ ಹಜ್ರತ್ ಸಾನಿ ಶಾಹ್ ಸಿಬಗತಲ್ಲಾಹ್(ಖ)ರ ಸಮಾಧಿಯ ಪಕ್ಕದಲ್ಲಿ ಪಶ್ಚಿಮ ದಿಕ್ಕಿಗೆ ಇರುವದು.

ಹಜ್ರತ್ ದಸ್ತಗೀರ್ ದೋ ಆಲಂ(ಖ)ರ ಪತ್ನಿ ಹಜ್ರತಾ ಬೀಬಿ ಶೆಹಜಾದಿ ಬಿ ಸಾಹಬಾ ಬಿನ್ ಅಹ್ಮದ್‌ಸಾಬ್‌ರಿಂದ ಓರ್ವ ಪುತ್ರಿ ಅವರ ವಿವಾಹವು ಹಜ್ರತ್ ಸೈಯ್ಯದ್ ಉಮರ್ ಮೆಹಜಾರ್(ಖ)ರ ಪುತ್ರ ಗೌಸಪೀರಾಂ ಸಾಹೇಬ್‌ರೊಂದಿಗೆ ಜರುಗಿತ್ತು.

ಈರ್ವರು ಪುತ್ರರು ಓರ್ವರು ಹಜ್ರತ್‌ಶಾಹ್ ಸಿಬಗತಲ್ಲಾಹ್ ಸಾಲಿಸ್(ಖ) ಎರಡನೆಯವರು ಹಜ್ರತ್‌ಸೈಯ್ಯದ್‌ಮುಹಿಯುದ್ದೀನ್‌ಖಾದ್ರಿ(ಖ) ಜನಿಸಿದರು. ಹಜ್ರತ್ ಸೈಯ್ಯದ್ ಮುಹಿಯುದ್ದೀನ್(ಖ) ನಿಧನರಾದರು ಹಾಗೂ ಹಜ್ರತ್‌ಶಾಹ್ ಸಿಬಗತಲ್ಲಾಹ್ ಸಾಲಿಸ್(ಖ)ರು ತಮ್ಮ ತಂದೆಯವರಿಂದ ಬೈಯತ್ ವ ಖಿಲಾಫತ್‌ದ ಸಮೃದ್ಧಿ ಹೊಂದಿ ಪೀಠಾಧಿಪತಿಗಳಾದರು. ಹಜ್ರತ್ ಶಾಹ್ ಸಿಬಗತಲ್ಲಾಹ್ ಸಾಲಿಸ್ (ಖ)ರಿಗೆ ಮೂವರು ಪುತ್ರಿಯರು, ಮೂವರು ಪುತ್ರರು ಇದ್ದರು.

ಓರ್ವ ಪುತ್ರಿಯಾದ ಬಿ ಜಾನ್ ಬಿ ಸಾಹೇಬಾ ಇವರು ಸಾಹೇಬ್ ಜು ಸಾಹೇಬ ಇವರಿಗೆ ವಿವಾಹವಾದರು. ಇವರು ಹಜ್ರತ್ ಸೈಯ್ಯದ್ ಗೌಸಪೀರಾಂಸಾಹೇಬ್ ಸಿಬಗತಲ್ಲಾಹ್ ಇವರ ಪುತ್ರರಾಗಿದ್ದಾರೆ ಹಾಗೂ ಸೈಯ್ಯದ್ ಉಮರ್‌ಶಾಹ್ ಸಾಹಬ್ ಮೆಹಜಾರ್ ಮೈಸೂರಿಯವರ ಮೊಮ್ಮಗರಾಗಿದ್ದಾರೆ.

ಇವರಿಂದ ಓರ್ವ ಪುತ್ರ ಸೈಯ್ಯದ್ ಮುಹಮ್ಮದ್ ಉರ್ಫ್ ಪೀರ್ ಜಿಯೋ ೧೨ ವರ್ಷದ ವಯಸ್ಸಿನಲ್ಲಿ ಮೃತ್ಯು ಹೊಂದಿದರು.

ಮೊದಲ ಪತ್ನಿಯಾದ ಬಿ ಜಾನ್ ಬಿ ಸಾಹೇಬಾರವರ ನಿಧನದ ನಂತರ ಅವರ ಸಹೋದರಿಯಾದ ಬೀ ಸಾಹಬಾ ಇವರನ್ನು ಎರಡನೆಯ ಮದುವೆಯಾದರು. ಅವರಿಂದ ಓರ್ವ ಪುತ್ರಿ ಸಾಹೇಬ್‌ಜಾದಿ ಬಿ ಸಾಹಬಾ ಇವರು ಸೈಯ್ಯದ್ ವಲಿ ಮುಹಿಯುದ್ದೀನ ಸಾಹೇಬ್ ಖಾದ್ರಿ ವ ಶತ್ತಾರಿ ಇವರ ಪತ್ನಿಯಾಗಿದ್ದಾರೆ.

ಮೂರನೆಯ ಪುತ್ರಿಯು ಚಿಕ್ಕ ವಯಸ್ಸಿನಲ್ಲಿಯೇ ನಿಧನರಾದರು. ಹಾಗೂ ಓರ್ವ ಜೇಷ್ಠ ಪುತ್ರರಾದ ಹಜ್ರತ್ ಸೈಯ್ಯದ್ ಮುಹಮ್ಮದ್ ಸಾಹೇಬ್ ಉರ್ಫ್ ದಸ್ತಗೀರ್ ಸಾಹೇಬ್ ೭ನೆಯ ವಯಸ್ಸಿನಲ್ಲಿ ತೀರಿಕೊಂಡರು.

ಎರಡನೆಯ ಪುತ್ರರಾದ ಹಜ್ರತ್ ಸೈಯ್ಯದ್ ಅಬ್ದುಲ್ ರೆಹಮಾನ್(ಖು) ತಮ್ಮ ತಂದೆಯವರ ಖಲೀಫಾ ಹಾಗೂ ಪೀಠಾಧಿಕಾರಿಯಾದರು. ೨೭ನೆಯ ವಯಸ್ಸಿನಲ್ಲಿ ೨೭ನೆಯ ಷವ್ವಾಲದಂದು ಸಂತಾನರಹಿತರಾಗಿ ನಿಧನ ಹೊಂದಿದರು.

ಮೂರನೆಯ ಪುತ್ರರಾದ ಸೈಯ್ಯದ್ ಅಲಿ ಮುಹಮ್ಮದ್ ಅಲ್ ಹುಸೈನಿ ಉರ್ಫ್ ಪೀರಾಂ ಸಾಹೇಬ್ ಪ್ರಸ್ತುತ ಪೀಠಾಧಿಕಾರಿ ತಮ್ಮ ಎರಡನೆಯ ಸಹೋದರ ಸೈಯ್ಯದ್ ಅಬ್ದುಲ್ ರೆಹಮಾನ್ ಹುಸೈನಿಯವರಿಂದ ಬೈಯತ್ ವ ಖಿಲಾಫತ್ ಪಡೆದರು. ಅವರ ಮೃತ್ಯುವಿನ ನಂತರ ದರ್ಗಾದ ಸಜ್ಜಾದೆ ನಶೀನ್ (ಪೀಠಾಧಿಪತಿ)ರಾದರು

ಹಜ್ರತ್ ಸುಲ್ತಾನ್ ಸೈಯ್ಯದ್ ಅಬ್ದುಲ್ ರೆಹಮಾನ್ ಹುಸೈನಿಯವರ ವಂಶದಲ್ಲಿ ಇವರೊಬ್ಬರೇ ಉಳಿದಿರುವರು. ಅಲ್ಲಾಹು ಅವರನ್ನು ನೂರುವರುಷದ ಸುದೀರ್ಘ ಆಯುಷ್ಯ ದಯಪಾಲಿಸಲಿ ಹಾಗೂ ಇವರಿಂದಲೂ ಇವರ ಪೂರ್ವಜರಂತೆ ಸಮೃದ್ಧಿ ಲಭಿಸಲಿ. ಇವರಿಗೆ ಈರ್ವರು ಪುತ್ರರು ಇರುವರು. ಓರ್ವರು ಸೈಯ್ಯದ್ ಮುಹಮ್ಮದ್ ಸಾಬ ಸಲ್ಲಮಾ ಅಲ್ಲಾಹ್‌ತಾಲಾ.

ಎರಡನೆಯವರು ಸೈಯ್ಯದ್ ಬುರ್ಹಾನುದ್ದೀನ್ ಸಾಹೇಬ್ ಸಲ್ಲಮಾ ಅಲ್ಲಾಹ್‌ತಆಲಾ ಅಲ್ಲಾಹು ಇವರ ಆಯಸ್ಸು ವೃದ್ಧಿಸಲಿ ಇವರಿಂದ ವಂಶವೃದ್ಧಿಯಾಗಲಿ.

ಹಜ್ರತ್ ಸೈಯ್ಯದ್ ಮುಹಮ್ಮದ್ ಸಾಲಿಸ್ ಉರ್ಫ್ ದಸ್ತಗೀರ್ ದೋ ಆಲಂ ಸಾನಿ(ಖು)ರ ಖಲೀಫಾಗಳು :

೧) ಹಜ್ರತ್ ಸೈಯ್ಯದ್ ಅಲಿ ಮುಹಮ್ಮದ್ ಸಾನಿ ಉರ್ಫ ಅಲೀ ಪೀರಾಂ ಸಾಹೇಬ್(ಖು) ಕಿರಿಯ ಸಹೋದರರು.

೨) ಹಜ್ರತ್ ಶಾಹ್ ಸಿಬ್ಗತ್‌ಅಲ್ಲಾಹ್ ಸಾಲಿಸ್(ಖು) ಜೇಷ್ಠ ಪುತ್ರ ಹಾಗೂ ಪೀಠಾಧಿಕಾರಿ.

೩) ಹಜ್ರತ್ ಸೈಯ್ಯದ್ ಮುಹಿಯುದ್ದೀನ್ ಸಾಹೇಬ್(ಖು) ಕಿರಿಯ ಪುತ್ರರು.

೪) ಹಜ್ರತ್ ಸೈಯ್ಯದ್ ಮುಹಮ್ಮದ್ ಗೌಸ್(ಖು) ಸಹೋದರಿಯ ಪುತ್ರ ಹಾಗೂ ಅಳಿಯ.

೫) ಖಾನ್ ಸಾಹೇಬ್,(ಖು) ಸೈಯ್ಯದ್ ಅಬ್ದುಲ್‌ಖಾದಿರ್ ಖಿಲ್ಲೆದಾರ್ ಬೆಂಗಳೂರು ಇವರ ಸಹೋದರರು.

೬) ಸೈಯ್ಯದ್ ಕರೀಂ ಮುಹಮ್ಮದ್ ಉರ್ಫ ಹಜ್ರತ್ ಸಾಹೇಬ್(ಖು)

೭) ಮುಹಮ್ಮದ್ ಖಾಸಿಂ ಮದನಿ(ಖು)

೮) ಯಖೀನ್ ಶಾಹ್(ಖು)

೯) ಗುಲಾಮ ಅಬ್ದುಲ್ ಖಾದಿರ್(ಖು)

೧೦)ಸೈಯ್ಯದ್ ಹಬೀಬುಲ್ಲಾಹ್(ಖು)

■

೮೨. ಹಜ್ರತ್ ಸೈಯ್ಯದ್ ಅಲಿ ಮುಹಮ್ಮದ್ ಸಾನಿ ಅಲ್ ಹುಸೈನಿ (ಖು)

ಇವರು ಹಜ್ರತ್ ಸಾನಿ ಶಾಹ್ ಸಿಬಗತ್‌ಲ್ಲಾಹ್ ಹುಸೈನಿ(ಖು)ರ ಪುತ್ರರು ಹಾಗೂ ಹಜ್ರತ್ ಸೈಯ್ಯದ್ ಮುಹಮ್ಮದ್ ಹುಸೈನಿ ಉರ್ಫ್ ದಸ್ತಗೀರ್ ದೋ ಆಲಂ ಸಾನಿಯವರ ಕಿರಿಯ ಸಹೋದರರು ಹಾಗೂ ಖಲೀಫಾ ಇರುವರು. ಇವರ ತಂದೆಯವರ ನಿಧನದ ಸಮಯದಲ್ಲಿ ಇವರ ವಯಸ್ಸು ೪ ವರ್ಷವಿತ್ತು. ಇವರು ತಮ್ಮ ಹಿರಿಯ ಸಹೋದರರಾದ ಹಜ್ರತ್ ದಸ್ತಗೀರ್ ದೋ ಆಲಂ ಸಾನಿ(ಖು)ರಿಂದ ತರಬೇತಿ ಹೊಂದಿ ಆಧ್ಯಾತ್ಮಿಕ, ಲೌಕಿಕ, ಪಾರಲೌಕಿಕ ಜ್ಞಾನವನ್ನು ಹೊಂದಿದರು ಹಾಗೂ ಬೈಯ್ಯತ್ ವ ಖಿಲಾಫತ್ ಹೊಂದಿದರು. ಇವರ ಹೊಗಳಿಕೆಗೆ ತಕ್ಕ ಸಚ್ಚಾರಿತ್ರ್ಯದ ಶ್ಲಾಘನೆಯು ಜನರ ನಾಲಿಗೆಯ ಮೇಲಿದೆ. ಇವರು ಅಲ್ಲಾಹುವಿನ ಸ್ಮರಣೆಯಲ್ಲಿ ಜಪತಪಗಳಲ್ಲಿ ಎಷ್ಟು ನಿಮಗ್ನರಾಗಿರುತ್ತಿದ್ದರೆಂದರೆ ಇವರಿಗೆ ಈ ಜಗದ ಪರಿವೆಯೇ ಎಳ್ಳಷ್ಟು ಇರುತ್ತಿರಲಿಲ್ಲ.

ಒಂದು ದಿನ ದಿವಾನ್ ನವಾಬ್ ಕರ್ನಾಟಕರು ಇವರ ಸನ್ನಿಧಿಯಲ್ಲಿ ಹಾಜರಾದರು. ಓರ್ವ ವ್ಯಕ್ತಿಯು ಬಂದು ಗೌರವ ಸಲ್ಲಿಸಿದನು. ಆಗ ಹಜ್ರತ್‌ರು ತಮ್ಮ ರೂಢಿಯಂತೆ ಎದ್ದು ನಿಂತರು. (ಅವರು ಸಣ್ಣವ, ದೊಡ್ಡವರೆನ್ನದೇ ಪ್ರತಿಯೊಬ್ಬರಿಗೂ ಗೌರವಪೂರ್ವಕವಾಗಿ ಎದ್ದು ನಿಲ್ಲುತ್ತಿದ್ದರು) ಆತನಿಗಾಗಿಯೂ ಎದ್ದು ನಿಂತರು. ಆಗ ದಿವಾನ್ ಸಾಹೇಬ್‌ರು ಮನಸ್ಸಿಲ್ಲದೇ ಹಜ್ರತ್‌ರೊಂದಿಗೆ ಎದ್ದು ನಿಲ್ಲಬೇಕಾಯಿತು. ಆ ವ್ಯಕ್ತಿಯು ಯಾವುದೇ ಕಾರ್ಯಕ್ಕಾಗಿ ತಾಯಿತವನ್ನು ನೀಡಲು ವಿನಂತಿಸಿದನು. ಹಜ್ರತ್‌ರು ನೀಡಿದರು ಹಾಗೂ ಕೇಳಿದರು ಬಾಬಾ! ನಿನ್ನ ಬದುಕು ಹೇಗೆ ಕಳೆಯುತ್ತಿದೆ?

ಹಜ್ರತ್‌ರೆ ಈರ್ವರು ಬಾಲಕಿಯರನ್ನು ಇಟ್ಟುಕೊಂಡು ಮರ್ಯಾದೆಯೊಂದಿಗೆ ಬದುಕುತ್ತಿದ್ದೇನೆ.

ಹಜ್ರತ್‌ರು ವಿಷಾದಿಸುತ್ತಾ ಹೀಗೆಂದರು ಹೌದು ಏನು ಮಾಡುವಿ? ಹೇಗಾದರೂ ೪ ದಿನ ಕಳೆಯಬೇಕಾಗಿದೆ.

ಆ ವ್ಯಕ್ತಿಯು ಅಲ್ಲಿಂದ ಹೊರಟು ಹೋದನು. ದಿವಾನ್‌ಸಾಬ್‌ರೂ ಹೊರಟುಹೋದರು. ಸಭೆಯಲ್ಲಿಂದ ಓರ್ವ ವ್ಯಕ್ತಿಯು ಕೇಳಿದನು. ಓ ಹಜ್ರತ್‌ರೆ ನೀವು ಆ ವ್ಯಕ್ತಿಗೆ ಗೌರವ ನೀಡಿದಿರಿ ಏಕೆ? ಆಗ ವ್ಯಕ್ತಿಯು ಹೇಳಿದನು. ನಿಮ್ಮೆದುರಿಗೆ ಆ ವ್ಯಕ್ತಿಯು ಈರ್ವರು ಹುಡುಗಿಯರನ್ನು ಇಟ್ಟಿರುವೆನು ಎಂದನು. ಅದರಿಂದ ಅವರು ವೇಶ್ಯೆಯರೆಂದು ತಿಳಿದು ಬರುತ್ತದೆ. ಆತನ ಖರ್ಚು ಅವರ ಗಳಿಕೆಯಿಂದ ಆಗುತ್ತದೆ. ಇಂಥವನಿಗೆ ಗೌರವ ಎಂಥದ್ದು. ಹಜ್ರತ್‌ರು ಕೇಳಿದರು. ಆತನು ಮುಸ್ಲಿಂ ಇರುವನೇ? ಹೌದು ಹಜ್ರತ್‌ರೆಂದರು ನಾನು ಓರ್ವ ಮುಸ್ಲಿಮನಿಗೆ ಗೌರವ ಸಲ್ಲಿಸಿದೆನು.

ಓರ್ವ ಸೈಯ್ಯದ್ ಅಹ್ಮದ್ ಹೆಸರಿನ ವೃದ್ಧನು ಅಬ್ದಾಲ್ (ತಸವ್ವುಫ್‌ನಲ್ಲಿ ಔಲಿಯಾರ ಒಂದು ಗುಂಪು ಯಾರ ಸುಪರ್ದಿಗೆ ಜಗತ್ತನ್ನು ನೀಡಲಾಗಿದೆ) ಇದ್ದರು. ಅವರು ಮೈಸೂರಿಗೆ ಬಂದರು. ಅವರ ಸ್ವಭಾವವಿತ್ತು ಯಾವ ವ್ಯಕ್ತಿಯು ಅವರ ಎದುರಿಗೆ ಬಂದರೆ ಆತನ ಮೇಲೆ ಕೃಪಾದೃಷ್ಟಿ ಬೀರುತ್ತಿದ್ದರು. ಆತನ ಹೃದಯದಿಂದ ಅಲ್ಲಾಹುವಿನ ಧ್ವನಿ ಬರುತ್ತಿತ್ತು. ಒಂದು ವೇಳೆ ಆತನು ಯಾರ ಶಿಷ್ಯನು ಇರದಿದ್ದರೆ ಹಜ್ರತ್ ಸೈಯ್ಯದ್ ಅಹ್ಮದ್‌ರ ಶಿಷ್ಯನಾಗುತ್ತಿದ್ದನು. ಅಥವಾ ಆಪ್ತನಾಗುತ್ತಿದ್ದನು. ಅದಕ್ಕಾಗಿ ಮೈಸೂರಿನ ಎಲ್ಲ ಸೂಫಿವಂಶಸ್ಥರು ಆ ವೃದ್ಧನ ಆಪ್ತರಾದರು. ಆ ಕಾಲದಲ್ಲಿ ಹಜ್ರತ್‌ರು (ಸೈಯ್ಯದ್ ಅಲಿ ಮುಹಮ್ಮದ್ ಸಾನಿ) ಆ ಕಡೆಗೆ ಹೋಗುವ ಸಂದರ್ಭ ಒದಗಿ ಬಂದಿತು. ಈ ಸುದ್ದಿ ಕೇಳಿ ಹಜ್ರತ್‌ರು ಅವರ ಮನೆಗೆ ಹೋಗುವ ಇಚ್ಛೆ ವ್ಯಕ್ತಪಡಿಸಿದರು. ಅವರು ಹೇಗಿದ್ದಾರೆ ಎಂದು ನೋಡುವ ಕುತೂಹಲ ಹೊಂದಿದರು. ಇಂಥದ್ದರಲ್ಲಿ ಹಜ್ರತ್‌ರ ಹಿರಿಯ ಸಹೋದರಿ ಹಜ್ರತ್ ಸೈಯ್ಯದ್ ಉಮರ್ ಮೆಹಜಾರ್‌ರ ಪತ್ನಿಯಾಗಿದ್ದರು. ಹೀಗೆಂದರು–ಸಹೋದರನೇ ಆ ವ್ಯಕ್ತಿ ಬಂದು ನಮ್ಮ ಎಲ್ಲ ಶಿಷ್ಯರನ್ನು ಸೆಳೆದುಕೊಂಡಿರುವನು. ಮತ್ತೆ ನೀನು ಏಕೆ ಅವರ ಬಳಿ ಹೋಗುವಿ? ಹಜ್ರತ್‌ರೆಂದರು ಓ ಸಹೋದರಿ ಒಂದು ವೇಳೆ ಅವರು ಅಂಥಹ ಮಹಾಪುರುಷರಾಗಿರುವರೆಂದರೆ ಏನು ತಪ್ಪಿದೆ? ಅವರ ಪಾದರಕ್ಷೆ ಎತ್ತಿಕೊಳ್ಳುವೆವು. ಮತ್ತೆ ಅಲ್ಲಿಂದ ಹಜ್ರತ್‌ರು ಅವರ ಮನೆಗೆ ಹೋದರು. ಆ ಸಮಯದಲ್ಲಿ ಅವರ ಶಿಷ್ಯರು ಹಾಗೂ ಅನುಯಾಯಿಗಳು ಹಾಜರಿದ್ದರು. ಹಜ್ರತ್‌ರು ಎದುರಿಗೆ ಬಂದಾಗ ಸೈಯ್ಯದ್ ಅಹ್ಮದ್ ಸಾಹೇಬರು ಹಜ್ರತ್‌ರ ಮೇಲೆ ದೂರದಿಂದಲೇ ಗಮನಿಸಿದರು. ಅದರಿಂದ ಏನೂ ಪರಿಣಾಮ ಆಗಲಿಲ್ಲ. ಯಾವಾಗ ಹಜ್ರತ್‌ರ ಸಮೀಪ ಬಂದು

ಮತ್ತೆ ಗಮನ ಹರಿಸಿದರು. ಅದರಿಂದಲೂ ಏನೂ ಉಪಯೋಗ ಆಗಲಿಲ್ಲ. ಕೊನೆಗೆ ಹಜ್ರತ್‌ರು ಅವರ ಸಭೆಯಲ್ಲಿ ತಲುಪಿ ಅಸ್ಸಲಾಮು ಅಲೈಕುಂ ಹೇಳಿ ಕುಳಿತುಕೊಂಡರು. ಸೈಯ್ಯದ್ ಸಾಹೇಬರು ಮತ್ತೆ ಗಮನ ಹರಿಸಿದರು. ಈಗಲೂ ಏನೂ ಆಗಲಿಲ್ಲ. ಕೊನೆಗೆ ಅನಿವಾರ್ಯವಾಗಿ ತಮ್ಮ ಬಳಿಯ ದಿಂಬನ್ನು ಎತ್ತಿ ಬದಿಗೆ ಇಟ್ಟರು. ಹಜ್ರತ್‌ರ ಎದುರು ಬಂದು ಕುಳಿತರು ಹಾಗೂ ಹಜ್ರತ್‌ರ ಮೇಲೆ ದೃಷ್ಟಿ ಬೀರಿದರು. ಹಜ್ರತ್‌ರು ಆ ವೇಳೆಯಲ್ಲಿ ತಾಂಬೂಲ ಸೇವಿಸುತ್ತಿದ್ದರು. ಉಗುಳಿ ಅವರತ್ತ ಗಮನ ಹರಿಸಿದರು. ಸ್ವಲ್ಪ ಸಮಯದ ನಂತರ ಸೈಯ್ಯದ್ ಸಾಹೇಬ್ ನಮ್ರರಾಗಿ ನಿಮಗ್ನತೆಯಿಂದ ಹೊರಬಂದರು ಹಾಗೂ ಹೀಗೆಂದರು– ಈ ಗುರಾಣಿಯನ್ನು ಅಡ್ಡ ಹಿಡಿಯುವದೇಕೆ? ಹಜ್ರತ್‌ರೆಂದರು ಒಂದು ವೇಳೆ ನಿಮ್ಮ ಖಡ್ಗವು ತೀಕ್ಷ್ಣವಾಗಿದ್ದರೆ ಗುರಾಣಿಯನ್ನು ಕತ್ತರಿಸುವದು. ಅದರೊಂದಿಗೆ ಸೈಯ್ಯದ್ ಸಾಹೇಬ್ ತಮ್ಮ ಸ್ಥಳಕ್ಕೆ ಹೋಗಿ ಕುಳಿತುಕೊಂಡರು ಹಾಗೂ ಹಜ್ರತ್‌ರು ಅಸ್ಸಲಾಮು ವಾಲೈಕುಂ(ನಿಮ್ಮ ಮೇಲೆ ದೇವನ ದಯೆ ವರ್ಷಿಸಲಿ) ಎಂದು ಹೇಳಿ ಅಲ್ಲಿಂದ ಎದ್ದು ಹೊರ ಬಂದರು. ಹಾಗೂ ತಮ್ಮ ಸಹೋದರಿಯ ಮನೆಗೆ ಬಂದರು. ಆಗ ಹಜ್ರತ್ ಬೀಬಿಯವರು ನೆಮ್ಮದಿ ರಹಿತರಾಗಿ ತಮ್ಮ ದಾವಣಿಯನ್ನು ಹಿಡಿದು ಬರಿತಲೆಯಿಂದ ಕಿಬ್ಲಾಭಿಮುಖವಾಗಿ ಅಲ್ಲಾಹುವಿನ ದರ್ಬಾರಿನಲ್ಲಿ ದುವಾ ಮಾಡುವಲ್ಲಿ ಮಗ್ನರಾಗಿದ್ದರು. ಯಾವಾಗ ಹಜ್ರತ್‌ರು ಒಳಗೆ ಪ್ರವೇಶಿಸಿದರು ಆಗ ಹಜ್ರತ್ ಬೀಬಿ ಕೇಳಿದರು. ಸಹೋದರನೇ ಏನು ನೀನು ಅವರವನಾಗಿಬಿಟ್ಟೆಯಾ? ಹಜ್ರತ್‌ರೆಂದರು–ಇಲ್ಲ. ಇಂಥದ್ದರಲ್ಲಿ ಹಜ್ರತ್ ಬೀಬಿಯವರ ಪುತ್ರರಾದ ಹಜ್ರತ್ ಸೈಯ್ಯದ್ ಮುಹಮ್ಮದ್ ಸಿಬಗತ್‌ಇಲಾಹಿ(ಖು) ಹಾಗೂ ಇತರರೊಂದಿಗೆ ಅಲ್ಲಿ ತಲುಪಿದರು ಹಾಗೂ ಅಲ್ಲಿ ನಡೆದ ಘಟನೆ ಪ್ರಸ್ತುತ ಪಡಿಸಿದರು. ಹಜ್ರತ್‌ರಿಂದ ಅವರ ಸಹೋದರಿ ಕೇಳಿದರು. ಆ ಮಾತು ಏನಿತ್ತು ನೀವು ಕೇಳಿದಿರಿ. ಹಜ್ರತ್‌ರೆಂದರು–ಸಹೋದರಿ ಅವರು ನನಗೆ ನೋಡಿದರು ಹಾಗೂ ನಾನು ನನ್ನ ಪೀರ್‌ರಿಗೆ ನೋಡಿದೆನು. ಇಲ್ಲಿ ಅವರ ಬೇಳೆ ಬೇಯಲಿಲ್ಲ. ಅವರು ನಮ್ರರಾದರು ಅದರೊಂದಿಗೆ ಹಜ್ರತ್ ಬೀಬಿಯು ಅವರನ್ನು ಕಟ್ಟೆಯ ಮೇಲೆ ಕೂಡ್ರಿಸಿ ಹಜ್ರತ್‌ರ ಮೇಲಿನಿಂದ ಮೂರು ಸಲ 'ಸದಕಾಃ' ಇಳಿಸಿದರು. (ದೃಷ್ಟಿ ನಿವಾಳಿಸಿ ತೆಗೆದರು)

ಹಜ್ರತ್‌ರಿಗೆ ಈ ಪ್ರಪಂಚದ ಮೋಹ ಇರಲಿಲ್ಲ. ಹಜ್ರತ್‌ರ ಶಿಷ್ಯರು ಹಾಗೂ ಆಪ್ತರು ಏನೆಲ್ಲ ಕಾಣಿಕೆ ಅರ್ಪಿಸುತ್ತಿದ್ದರು. ಹಜ್ರತ್‌ರು ಅವೆಲ್ಲವನ್ನು ತಮ್ಮ ಸೇವಕನಿಗೆ ನೀಡುತ್ತಿದ್ದರು ಎಂದೂ ಸಹ ಲೆಕ್ಕ ಕೇಳುತ್ತಿರಲಿಲ್ಲ. ಹಜ್ರತ್ ಪೀರ್ ದಸ್ತಗೀರ್ ಹೀಗೆ ಹೇಳುತ್ತಿದ್ದರು. ಏನೆಂದರೆ ಒಂದು ಸಲ ಹಜ್ರತ್‌ರು ನೆಲ್ಲೂರಿನೆಡೆಗೆ ಹೋದರು. ಹಜ್ರತ್‌ರು ಜೊತೆಗಿದ್ದರು. ದಾರಿಯಲ್ಲಿ ಕಾಣಿಕೆ ಕೊಡುಗೆಗಳು ಬಹಳೇ ಅರ್ಪಿತವಾಗುತ್ತಿದ್ದವು. ಸೇವಕನು ಅನುಮತಿ ಪಡೆಯದೇ ಖರ್ಚು ಮಾಡುತ್ತಿದ್ದನು.

ಯಾವಾಗ ಕೇಳುತ್ತಿದ್ದರು ಸೇವಕನೇ ಏನಾದರೂ ಇದೆಯೋ... ಸೇವಕನೆನ್ನುತ್ತಿದ್ದನು ಇಲ್ಲ ಮುಗಿಯಿತು. ಈ ಮಾತು ಹಜ್ರತ್ ಪೀರ್ ದಸ್ತಗೀರ್‌ರಿಗೆ ಹಿಡಿಸಲಿಲ್ಲ. ಅವರು ಪ್ರತಿದಿನ ಅವನಿಂದ ಖರ್ಚುವೆಚ್ಚದ ಲೆಕ್ಕ ತೆಗೆದುಕೊಳ್ಳಹತ್ತಿದರು. ಒಂದು ದಿನ ಹಜ್ರತ್‌ರು ದುಡ್ಡನ್ನು ಎಣಿಸುತ್ತಿದ್ದರು. ಹಜ್ರತ್‌ರು ಅಲ್ಲಿಗೆ ಬಂದರು ಹಾಗೂ ಹೀಗೆಂದರು. ಪುತ್ರನೇ ನೀನು ನಿನ್ನ ಬೆರಳನ್ನು ನೋಡಿಕೋ! ಆಗ ಹಜ್ರತ್‌ರು ತಮ್ಮ ಬೆರಳನ್ನು ನೋಡಿದರು. ಯಾವುದರಿಂದ ದುಡ್ಡನ್ನು ಎಣಿಸುತ್ತಿದ್ದರು ಅದು ಕಪ್ಪಗಾಗಿದೆ. ಹಜ್ರತ್‌ರೆಂದರು ಪುತ್ರನೇ ಅದನ್ನು ಎಣಿಸುವದರಿಂದ ಕಪ್ಪುಕಲೆ ಬಂದಿತು. ಅದರತ್ತ ಲಕ್ಷ್ಯವಹಿಸಿ ಎಣಿಸುತ್ತಿದ್ದಿಯಾ ಇದರಿಂದ ಹೃದಯದ ಮೇಲೆ ಅದೆಷ್ಟು ಗಾಢ ಕಪ್ಪುಕಲೆ ಆವೃತವಾಗುತ್ತಿರಬಹುದು.

ಯಾವಾಗ ಹಜ್ರತ್‌ರು ಮೈಸೂರಿನಲ್ಲಿ ಷವ್ವಾಲ ತಿಂಗಳ ೯ನೆಯ ದಿನಾಂಕದಂದು ೧೨೬೨ಹಿಜ್ರಿಶಕೆಯಲ್ಲಿ ಇದ್ದರು ಆಗ ಅಲ್ಲಿಯೇ ನಿಧನ ಹೊಂದಿದರು. ಅವರನ್ನು ಅಲ್ಲಿ ೧ ವರ್ಷದವರೆಗೆ ಅವರ ಪವಿತ್ರ ಶವವನ್ನು ಸಂರಕ್ಷಿಸಿ ಇಡಲಾಯಿತು. ಒಂದು ವರ್ಷದ ನಂತರ ಅವರ ಶವವುಳ್ಳ ಪೆಟ್ಟಿಗೆಯನ್ನು ತಾಜಪುರಕ್ಕೆ ತರಲಾಯಿತು. ದಫನಗೈಯ್ಯುವ ದಿನದಂದು ಅರ್ಕಾಟ್ ವೆಲ್ಲೂರ್, ರಾಣಿಪೇಟ್, ಬೆಂಗಳೂರು, ಮದ್ರಾಸ್ ಹಾಗೂ ಸುತ್ತಮುತ್ತಲಿನಿಂದ ಸಾವಿರಾರು ಸಂಖ್ಯೆಯಲ್ಲಿ ಜನರು ನೆರೆದರು. ಬಹಳಷ್ಟು ಜನರು ಸಂಶಯಪಡುತ್ತಿದ್ದರು. ಏನೆಂದರೆ ಶವವನ್ನು ಸಂರಕ್ಷಿಸಿ ದೀರ್ಘ ಅವಧಿಯಾಯಿತು. ಈ ಅವಧಿಯಲ್ಲಿ ಶವದ ಸ್ಥಿತಿಯು ಏನಾಗಿದೆಯೋ ಎಂಬ ಆತಂಕ ಕಾಡತೊಡಗಿತು. ಪರ್ದಾ ಹಿಡಿದು ಶವವನ್ನು ಗೋರಿಯಲ್ಲಿ ಇಳಿಸಬೇಕು ಎಂದರು ಆಗ ಹಜ್ರತ್ ಸೈಯ್ಯದ್ ಮುಹಮ್ಮದ್ ಸಾಹೇಬ್ ಬಿನ್ ಸೈಯ್ಯದ್ ಉಮರ್ ಮೆಹಜಾರ್(ಖು)ರು ಹೇಳಿದರು. ಹಜ್ರತ್‌ರು ಸಾಅದಾತ್ ಸೂಫಿವಂಶಸ್ಥರಾಗಿದ್ದು ಹಾಗೂ ಶಾ ಸಿಬಗತ್‌ಲ್ಲಾಹ್ ನಾಯಿಬೇರಸೂಲಲ್ಲಾಹ್‌ರ ಸಂತತಿಯಿಂದಿರುವರು. ಪರ್ದಾದ ಅವಶ್ಯಕತೆಯಿಲ್ಲ. ಯಾವಾಗ ಹಜ್ರತ್‌ರ ಶವಪೆಟ್ಟಿಗೆಯನ್ನು ತೆರೆಯಲಾಯಿತು. ಸುಬಹಾನಲ್ಲಾಹ್! ಏನು ನೋಡುತ್ತಾರೆ!! ಕಫನ್ನಿನ ಮೇಲೆ ಒಂದು ಕಲೆಯೂ ಇಲ್ಲ. ಕಫನ್ ಬಿಚ್ಚಿದಾಗ ದೇಹವು ಸ್ಫಟಿಕದಂತೆ ನಿರ್ಮಲವಾಗಿತ್ತು. ಎಷ್ಟೆಂದರೆ ಸ್ವಲ್ಪ ಹೊತ್ತಿನ ಹಿಂದೆ ಉಸಿರು ನಿಂತಿದೆಯೇನೋ ಎಂಬಂತೆ! ಹಾಗೂ ಈಗಲೇ ಸ್ವಚ್ಛ, ಶುಭ್ರ ಕಫನ್ ತೊಡಿಸಲಾಗಿದೆಯೇನೋ ಎಂಬಂತಿತ್ತು. ಹಜ್ರತ್‌ರಿಗೆ ತಾಜಪುರ ಷರೀಫದಲ್ಲಿ ಗುಂಬಜಿನ ಹೊರಗಡೆಗೆ ಪೂರ್ವ ದಿಕ್ಕಿನೆಡೆಗೆ ಸಮಾಧಿಸ್ಥಗೊಳಿಸಲಾಯಿತು.

ಹಜ್ರತ್‌ರು ಮೈಸೂರಿನಲ್ಲಿ ಅಸ್ವಸ್ಥರಾದರು ಹಾಗೂ ಮರಣಕ್ಕಿಂತ ಮೂರು ದಿನ ಪೂರ್ವದಲ್ಲಿ ಎಲ್ಲರನ್ನು ಸೇರಿಸಿ, ಹಜ್ರತ್‌ರು ತಮ್ಮ ಹಸ್ತವನ್ನು ಭೂಮಿಯ ಮೇಲೆ

ಬಡಿದು ಈ ಆಯತ್ (ಸೂಕ್ತ)ವನ್ನು ಓದಿದರು. 'ಬಿ ಐಯ್ಯಿ ಅರ್ಜಿನ್ ತಮೂತು' (ಸೂರಃ ಲುಕ್ಮಾನ್) ಎಂದರೆ ಈ ಸಂಕೇತವಿತ್ತು. ನಾವು ಇಲ್ಲಿಯೇ ಕೊನೆಯುಸಿರೆಳೆಯುವೆವು. ನಂತರ ಮೂರು ದಿನಗಳ ಬಳಿಕ ಯಾವಾಗ ಮರಣದ ಸಮಯ ಸನ್ನಿಹಿತವಾಯಿತೋ ಆಗ ಹಜ್ರತ್‌ರು ತಮ್ಮ ಮುಖವನ್ನು ಒಂದೆಡೆಗೆ ಹೊರಳಿಸಿ ಅಲ್ಲಾಹುವಿನ ಆರಾಧನೆಯಲ್ಲಿ ಲೀನವಾಗಿದ್ದರು. ಪೀರ್ ದಸ್ತಗೀರ್(ಖ)ರ ಹೇಳಿಕೆ ಏನೆಂದರೆ ನಾನು ಇಲ್ಲಲ್ಲಾಹ್ ಎಂದಾಗ ಹಜ್ರತ್‌ರು ಏನೊಂದನ್ನು ಉತ್ತರಿಸಲಿಲ್ಲ. ಮತ್ತೆ ಇಲ್ಲಲ್ಲಾಹ್ ಎಂದೆ ಆಗಲೂ ಉತ್ತರ ಸಿಗಲಿಲ್ಲ. ಮೂರನೆಯ ಸಲ 'ಇಲ್ಲಲ್ಲಾಹ್' ಎಂದಾಗ ಹಜ್ರತ್‌ರು ಕಣ್ತೆರೆದು ಹೇಳಿದರು. 'ಮುಝ್ಕೊ ಮಾಲೂಮ್ ಹೈ' (ನನಗೆ ತಿಳಿದಿದೆ) ಎಂದರು. ಹಜ್ರತ್ ಸೈಯ್ಯದ್ ಮುಹಮ್ಮದ್ ಸಾಹಬ್ ಸಿಬಗತಲ್ಲಾಹ್(ಖ) ಇದರ ರಹಸ್ಯ ಹೀಗೆ ಭೇದಿಸಿದರು. ಹಜ್ರತ್‌ರು ಇಲ್ಲಲ್ಲಾಹ ಎಂದಾಗ ನನಗೆ ತಿಳಿದಿದೆ ಎಂದು ಏನು ಹೇಳಿದರೋ ಅದು ಕೇವಲ ತನ್ನ ಪುತ್ರನ ಸಾಂತ್ವನಕ್ಕಾಗಿ ಇತ್ತು. ಯಾರು ಅಲ್ಲಾಹುವಿನ ಆಪ್ತರಾಗಿರುವರೋ ತಮ್ಮ ಕೊನೆಯ ಗಳಿಗೆಯಲ್ಲಿ ಅಲ್ಲಾಹುವಿನ ದರ್ಶನಗೈಯ್ಯುವ ಅದಮ್ಯ ಇಚ್ಛೆಯಲ್ಲಿ ತಮ್ಮನ್ನು ತಾವು ತನ್ಮಯತೆಯ ಸಮುದ್ರದಲ್ಲಿ ಮುಳುಗಿಸಿಕೊಳ್ಳುತ್ತಾರೆ ಹಾಗೂ ಈ ದೇಹವನ್ನು ಅಚಲವಾಗಿಸುತ್ತಾರೆ.

ಹಜ್ರತ್ ಬುರ್ಹಾನುದ್ದೀನ್ ಸಾಹೇಬ್ ಅಲ್ವಿಯವರ ಪುತ್ರರಾದ ಸೈಯ್ಯದ್ ಮುರ್ತುಜಾಸಾಬ್ ಅಲ್ವಿಯವರ ಪುತ್ರಿಯಾದ ಹಜ್ರತ್ ಬೀಬಿ ಸುಲ್ತಾನ್ ಸಾಹಬಾ(ಖ) ಇವರು ಹಜ್ರತ್ ಸೈಯ್ಯದ್ ಅಲಿ ಮುಹಮ್ಮದ್ ಸಾನಿ(ಖ)ರ ಪತ್ನಿಯಾಗಿದ್ದರು. ಇವರಿಗೆ ಈರ್ವರು ಪುತ್ರರು.

ಹಜ್ರತ್ ಮೀರಾಂ ಸೈಯ್ಯದ್ ಮುಹಮ್ಮದ್ ಅಲ್‌ಸಾನಿ ಅಲ್ ಹುಸೈನಿ(ಖ) ಯಾರು ದಸ್ತಗೀರ್(ಖ)ರ ಸಹೋದರರಾಗಿದ್ದರು. ತಮ್ಮ ತಂದೆಯವರಿಂದ ಬೈಯ್ಯತ್ ಹಾಗೂ ಖಿಲಾಫತ್ ಹೊಂದಿದರು. ಅತ್ಯುತ್ತಮ ಚಾರಿತ್ರ್ಯದ ಧಣಿಯಾಗಿದ್ದರು. ಆಧ್ಯಾತ್ಯ ವಿದ್ಯೆಯಲ್ಲಿ ಉತ್ತುಂಗಕ್ಕೇರಿದರು. ಇವರು ಮೊಹರಮ್ಮಿನ ೧೯ನೆಯ ದಿನಾಂಕದಂದು ೧೨೮೭ ಹಿಜ್ರಿಶಕೆಯಲ್ಲಿ ನಿಧನರಾದರು. ಹಜ್ರತ್‌ರನ್ನು ಅವರ ತಂದೆಯ ಸಮಾಧಿಯ ಪಕ್ಕದಲ್ಲಿ ದಫನ್ ಮಾಡಲಾಯಿತು. ಅವರ ಪಕ್ಕದಲ್ಲಿ ಸೈಯ್ಯದ್ ಮುಹಮ್ಮದ್ ಸಾಹೇಬ್ ಸಿಬ್ಗತ್‌ಲ್ಲಾಹಿ ಬಿನ್ ಸೈಯ್ಯದ್ ಉಮರ್ ಮೆಹಜಾರ್‌ರು ಸಮಾಧಿಸ್ಥರಾಗಿರುವರು.

ಯಾವಾಗ ಹಜ್ರತ್‌ರ ಪ್ರಾಣಪಕ್ಷಿ ಹಾರಿ ಹೋಯಿತೋ ಆಗ ಹಜ್ರತರ ಶಿರಃಭಾಗವು ಪೀರ್ ದಸ್ತಗೀರ(ಖ)ರ ತೊಡೆಯ ಮೇಲೆ ಇತ್ತು. ಕೊನೆಯುಸಿರೆಳೆದ ನಂತರ ಹಜ್ರತ್‌ರ ಎರಡೂ ಕಣ್ಣುಗಳು ತೆರೆದುಕೊಂಡೇ ಇದ್ದವು. ಪೀರ್ ದಸ್ತಗೀರರು ಹೇಳಿದರು. ಸಹೋದರ! ಕಣ್ಣುಗಳೆರಡನ್ನು ಮುಚ್ಚಿಕೋ! ಕಣ್ಣುಗಳನ್ನು ಏಕೆ ತೆರೆದಿಟ್ಟಿದ್ದಿಯೇ?

ಹೀಗೆ ಉಚ್ಚರಿಸಿದಾಗ ಹಜ್ರತ್‌ರು ತಮ್ಮ ಕಣ್ಣುಗಳನ್ನು ತಕ್ಷಣ ಮುಚ್ಚಿಕೊಂಡರು. ಸುಬಹಾನಲ್ಲಾಹ್ ಹಜ್ರತ್‌ರ ಕೊನೆಗಳಿಗೆಯೂ ಪವಾಡಸದೃಶವಾಗಿತ್ತು.

■

೮೩. ಪೀರ್ ದಸ್ತಗೀರ ಮುರ್ಷದನಾ ವ ಮೌಲಾನಾ ಸೈಯ್ಯದ್ ಶಾಹ್ ಬುರ್ಹಾನುದ್ದೀನ್ ಅಲ್ ಹುಸೈನಿ ಅಲ್‌ಖಾದ್ರಿ ಅಲ್ ಶತ್ತಾರಿ ಸಿಬಗತಲ್ಲಾಹಿ (ಖು)

ಇಬ್ನ ಹಜ್ರತ್ ಸೈಯ್ಯದ್ ಅಲಿ ಮುಹಮ್ಮದಲ್ ಸಾನಿ ಅಲ್ ಹುಸೈನಿ ಅಲ್‌ಖಾದ್ರಿ ಉರ್ಫ್ ಅಲಿ ಪೀರಾಂ ಸಾಹೇಬ್ ಇಬ್ನ ಹಜ್ರತ್ ಸಾನಿ ಸೈಯ್ಯದ್ ಶಾಹ್ ಸಿಬ್ಗತ್‌ಲ್ಲಾಹಿ ಅಲ್ ಹುಸೈನಿ ಅಲ್ ಖಾದ್ರಿ ಇಬ್ನ ಹಜ್ರತ್ ಸೈಯ್ಯದ್ ಮುಹಮ್ಮದ್ ಅಲ್ ಸಾನಿ ಅಲ್ ಹುಸೈನಿ ಅಲ್ ಖಾದ್ರಿ ಉರ್ಫ್ ದಸ್ತಗೀರ್ ಸಾಹೇಬ ಇಬ್ನ ಹಜ್ರತ್ ಸೈಯ್ಯದ್ ಅಲಿ ಮುಹಮ್ಮದ್ ಅಲ್ ಹುಸೈನಿ ಅಲ್ ಖಾದ್ರಿ ಇಬ್ನ ಹಜ್ರತ್ ಸುಲ್ತಾನ್ ಸೈಯ್ಯದ್ ಅಬ್ದುಲ್ ರೆಹಮಾನ್ ಅಲ್ ಹುಸೈನಿ ಅಲ್ ಖಾದ್ರಿ ಇಬ್ನ ಹಜ್ರತ್ ಮೀರಾಂ ಸೈಯ್ಯದ್ ಮುಹಮ್ಮದ್ ಮುದರ್ರಿಸ್ ಅಲ್ ಹುಸೈನಿ ಅಲ್ ಖಾದ್ರಿಯವರ ಸಹೋದರ ಹಜ್ರತ್‌ಶಾಹ್ ಸಿಬಗತ್‌ಅಲ್ಲಾಹ್ ನಾಯಿಬೆ ರಸೂಲ(ಖು).

ಹಜ್ರತ್ ಸೈಯ್ಯದ್ ಅಲಿ ಮುಹಮ್ಮದ್ ಅಲ್‌ಸಾನಿ ಅಲ್ ಹುಸೈನಿ ಅಲ್‌ಖಾದ್ರಿ ಉರ್ಫ್ ಅಲಿ ಪೀರಾಂ ಸಾಹೇಬರ ಪುತ್ರರಾದ ಸೈಯ್ಯದ್ ಶಾಹ್ ಬುರ್ಹಾನುದ್ದೀನ್ ಅಲ್ ಹುಸೈನಿ ಅಲ್ ಖಾದ್ರಿ ಅಲ್ ಶತ್ತಾರಿ ಸಿಬಗತ್‌ಲ್ಲಾಹಿ(ಖು) ಇವರು ಮಹಾಪುರುಷರು. ತಮ್ಮ ಕಾಲದ ಅಪೂರ್ವ ಜ್ಞಾನಿಗಳು. "ಮಾರಿಫತ್" ಜ್ಞಾನದ ತುದಿ ಮುಟ್ಟಿದವರು. ವಿದ್ವಾಂಸರು, ಲೌಕಿಕ ಪಾರಲೌಕಿಕ ಜ್ಞಾನದ ಶಿಖರವಾಗಿದ್ದರು. "ಶರೀಯತ್" ಹಾಗೂ "ತರೀಖತ್" ಜ್ಞಾನದ ಸೂರ್ಯರಾಗಿದ್ದರು. ಶರೀಯತನ್ನು ಕಟ್ಟುನಿಟ್ಟಾಗಿ ಪಾಲಿಸುವವರಾಗಿದ್ದರು. ಅನುಯಾಯಿಗಳು, ಶ್ರದ್ಧಾಳುಗಳು ಹೃದಯಕ್ಕೆ ತಂಪೆರಗುವ ಹುಣ್ಣಿಮೆಯ ಚಂದ್ರವಾಗಿದ್ದರು. ತಮ್ಮ ತಂದೆಯವರ ನಂತರ ಪೀಠಾಧೀಶರಾಗಿ ಉಪದೇಶ ನೀಡುವಲ್ಲಿ ನಿರತರಾದರು. ಹಜ್ರತ್‌ರ ಜನ್ಮದಿನವು೨೪ ಶಾಅಬಾನ್ ೧೨೨೫ ಹಿಜ್ರಿಶಕೆ ಇರುವದು ಹಾಗೂ ಹಜ್ರತ್‌ರ ಜನ್ಮದಿನದ ದಿನಾಂಕವನ್ನು 'ಜಿಯಾಯಿ ದೀದ'ಯೇ ಸೈಯ್ಯದ್ ಅಲಿ ಬುಲಂದ್ ಮಕಾನ್" (೧೨೨೫) ಎಂದಿರುವದು.

ಇವರು ತಮ್ಮ ೧೭ನೆಯ ವಯಸ್ಸಿನಲ್ಲಿ ತಮ್ಮ ತಂದೆಯವರಿಂದ ಖಿಲಾಫತ್ ಹಾಗೂ ಜಪತಪಗಳ ಸಮೃದ್ಧಿ ಹಾಗೂ ಖಾದ್ರಿಯಾ, ಶತ್ತಾರಿಯಾ, ಚಿಷ್ತಿಯಾ, ಫಿರ್ದೋಸಿಯಾ ಸೆಹರ್‌ವರ್ದಿಯಾ, ನಕ್ಷಬಂದಿಯಾ, ಹಮ್‌ದಾನಿಯಾ, ಆದಿ

ಪರಂಪರೆಯ ಸಮೃದ್ಧಿ ಪಡೆದರು ಹಾಗೂ ಈ ಪರಂಪರೆಗಳಲ್ಲಿ ಶಿಷ್ಯತ್ವವನ್ನು ನೀಡುವ ಅಧಿಕಾರ ಹೊಂದಿದ್ದರು. ಇವರ ಸಚ್ಚಾರಿತ್ರದ ಪ್ರಸಿದ್ಧಿಯು ದೂರದೂರದವರೆಗೆ ಹಬ್ಬಿತ್ತು. ಇವರ ಮೃದು ಸ್ವಭಾವವು ಚುಂಬಕದಂತೆ ಶಿಷ್ಯವೃಂದವನ್ನು ಸೆಳೆಯುತ್ತಿತ್ತು. ಇದರಿಂದಾಗಿ ಅಸಂಖ್ಯ ಜನರು ಇವರ ಶಿಷ್ಯತ್ವವನ್ನು ಸ್ವೀಕರಿಸಿದರು ಹಾಗೂ ಬಹಳಷ್ಟು ಜನರು ಇವರ ಕೃಪಾದೃಷ್ಟಿಗೆ ತುಡಿಯುತ್ತಿದ್ದರು. ಇದರೊಂದಿಗೆಯೇ ಅಮೀರರು, ಆಡಳಿತಗಾರರು ಹಜ್ರತ್‌ರ ಸೇವಕರಲ್ಲಿ ಗಣಿಸಲ್ಪಡುವರು. ಅರ್ಕಾಟಿನ ಖಾನದಾನ್ ವಾಲಾಜಾಹಿಯ ಹಲವಾರು ಜನರು ಹಜ್ರತ್‌ರ ಆಪ್ತರಾಗಿರುವರು. ಅದಕ್ಕಾಗಿ ಆಲಿಜನಾಬ್ ನವಾಬ್ ಮುಹಮ್ಮದ್‌ಮುನವ್ವರಖಾನ್ ಬಹಾದ್ದೂರ್ ಪ್ರಿನ್ಸ್‌ಆಫ್ ಅರ್ಕಾಟ್ ಹಾಗೂ ಇವರ ಈರ್ವರು ಸಹೋದರರು ನವಾಬ್ ಗುಲಾಮ್ ಮುಹಮ್ಮದ್ ಗೌಸ ಸಾಹೇಬ್ ಬಹಾದ್ದೂರ್ ಹಾಗೂ ನವಾಬ್ ಮುಹಮ್ಮದ್ ಅಲಿಖಾನ್ ಬಹಾದ್ದೂರ್ ಹಾಗೂ ಅವರ ಮಾತೋಶ್ರೀಯವರಾದ ನವಾಬ್ ಖುರ್ಷಿದುನ್ನಿಸ್ಸಾ ಬೇಗಮ್ ಸಾಹೆಬಾ, ಹಾಗೂ ಅವರ ಪುತ್ರರು, ಸೊಸೆಯರು, ಇತರರೆಲ್ಲರೂ ಹಜ್ರತ್‌ರ ಶಿಷ್ಯಗಣದಲ್ಲಿರುವರು ಮತ್ತು ಈಗ ಗೌಸಿಯಾ ಬೇಗಂ ಸಾಹೆಬಾ ಹಾಗೂ ಜನಾಬ್ ರೆಹಮುನ್ನಿಸ್ಸಾ ಬೇಗಂ ಸಾಹೇಬಾ, ಪುತ್ರಿಯಾದ ನವಾಬ್ ಅಜೀಮ್‌ಜಾಹ್ ಬಹಾದ್ದೂರ್, ಸ್ವರ್ಗೀಯ ಪ್ರಿನ್ಸ್ ಆಫ್ ಅರ್ಕಾಟ್‌ರೂ ಸಹ ಹಜ್ರತ್‌ರ ಅನುಯಾಯಿಗಳಾಗಿದ್ದರು. ಆದರೆ ಈ ವಂಶದಲ್ಲಿ ಪ್ರಿನ್ಸ್ ಆಫ್ ಅರ್ಕಾಟ್ ತೋರಿಸಿದಷ್ಟು ಶ್ರದ್ಧೆಯನ್ನು ಬೇರೆಯವರು ಮೀರಿಸಲಾಗಲಿಲ್ಲ. ಅವರ ನಂತರ ಬೇರೆಯ ಶಿಷ್ಯರಲ್ಲಿ ಜನಾಬ್ ಮೌಲ್ವಿ ಹಾಜಿ ಅಹ್ಮದ್ ಅಲಿಸಾಹೆಬ್, ದಿವಾನ್ ಪ್ರಿನ್ಸ್ ಆಫ್ ಅರ್ಕಾಟ್ ಅವರೊಂದಿಗೆ ಗಾಢ ಸ್ನೇಹ ಹೊಂದಿದ್ದರು. ಅದಕ್ಕಾಗಿ ಅವರನ್ನು ಹಜ್ರತ್ ಪೀರ್ ದಸ್ತಗೀರ್ ತಮ್ಮ ಪತ್ರಗಳಲ್ಲಿ 'ಭಾಯಿ ಸಾಹಬ್' ಎಂದು ಬರೆಯುತ್ತಿದ್ದರು. ತಮ್ಮ ಕೊನೆಯ ಸಮಯದಲ್ಲಿ ದಿವಾನ್ ಸಾಹೇಬರಿಗೆ ತಮ್ಮ ಎಲ್ಲ ವ್ಯವಹಾರಗಳಿಗೆ ವಕೀಲರನ್ನಾಗಿಸಿದರು. ಹಜ್ರತ್ ಪೀರ್ ದಸ್ತಗೀರ್ ಅವರು ತಾವು ಏನು ಸೇವಿಸುತ್ತಿದ್ದರೋ ಅದನ್ನೇ ಅನುಯಾಯಿ, ಶಿಷ್ಯ, ಆಪ್ತ ಹಾಗೂ ಪ್ರವಾಸಿಗರಿಗೆ ಹಂಚಲಾಗುತ್ತಿತ್ತು. ಸಂಕ್ಷಿಪ್ತವಾಗಿ ಹಜ್ರತ್‌ಪೀರ್ ದಸ್ತಗೀರರು ಅನುಪಮ ಚಾರಿತ್ರ್ಯದ ಧಣಿಯಾಗಿದ್ದರು. 'ತಸರ್ರುಫಾತೆ ಬುರ್ಹಾನಿ' ಪುಸ್ತಿಕೆಯ ಲೇಖಕರಿಂದ ಸಂಗ್ರಹಿಸಿದ ಒಂದು ಪದ್ಯ ಹೀಗಿದೆ.

ಮುರ್ಷಿದೇ ಕಾಮಿಲ್ ಅಯಾಂ ಹೈ
ಸೈಯ್ಯದ್ ಬುರ್ಹಾನ್ ಶಾಹ್ ।

ಸರಹಕ್‌ಕೆ ರಾಜದಾಂ ಹೈಂ–
ಸೈಯ್ಯದ್ ಬುರ್ಹಾನ್ ಶಾಹ್ ॥

ಗೌಸುಲ್ ಆಜಂ ಕೆತಸದ್ದುಖ್ ಸೆ ಮುರೀದೌಂಕೆ ತಮಾಮ್ ।
ಹಪ್ತ ಕೆ ದಿನ್ ಪಾಸಬಾನ್ ಹೈಂ ಸೈಯ್ಯದ್ ಬುರ್ಹಾನ್ ಶಾಹ್॥

ಹೈಂ ಫನಾಫೀ ಅಲ್ಲಾಹ್ ಕೆ ಅಸ್ರಾರ್ ಉನ್‌ಪರ್ ಮುನಕಶ್ಫಫ್ ।
ವಕ್ಫ್ ರಾಜ್‌ನಿಹಾಂ ಹೈಂ, ಸೈಯ್ಯದ್ ಬುರ್ಹಾನ್ ಶಾಹ್॥

ಸಿಬ್ಗತ್‌ಲ್ಲಾಹಿ ಮಕಾನ್ ಕಿ ರೋಷನೀ ಹೈ ಆಪ್ ಸೆ ।
ನೂರೆ ಶಮಾ ಖಾನದಾನ್ ಹೈಂ, ಸೈಯ್ಯದ್ ಬುರ್ಹಾನ್ ಶಾಹ್ ॥

ಕ್ಯಾ ಅಜಬ್ ರಾಹೆಜಲಾಲತ್ ಸೆ ನಿಕಲ್ ಆವೂಂಅಗರ್ ।
ಮೀರೀ ರೆಹಬರ್ ಬೇಗುಮಾಂ ಹೈ ಸೈಯ್ಯದ್ ಬುರ್ಹಾನ್ ಶಾಹ್ ॥

ರೋಜೆ ಮೆಹಶರ್ ಪಾಂವೂ ಲಗಜಶ್ ಮೇರಾ ಕ್ಯಾ ಮಜಾಲ್ ।
ದಸ್ತಗೀರೇ ಬೇ ಕಸಾಂ ಹೈಂ ಸೈಯ್ಯದ್ ಬುರ್ಹಾನ್ ಶಾಹ್ ॥

ಖಿತ್ತಯೆ ಮದ್ರಾಸ್ ಕೋ ಹಾಸಿಲ್‌ನ ಕ್ಯೊಂ ಕರ್ ಹೋಷರ್ಫ್ ।
ಪೀರ್ ಏ ಕಾಮಿಲ್ ಮೇರೆ ವಹಾಂ ಹೈಂ ಸೈಯ್ಯದ್ ಬುರ್ಹಾನ್ ಶಾಹ್ ॥

ಸಾಧನೆಯ ಶಿಖರವೇರಿ ಕಂಗೊಳಿಸುತ್ತಿದ್ದಾರೆ ಸೈಯ್ಯದ್ ಬುರ್ಹಾನ್‌ಷಾಹ್।
ಅಲ್ಲಾಹುವಿನ ರಹಸ್ಯಜ್ಞಾನವನ್ನು ಅರಿಯುವವರಾಗಿದ್ದಾರೆ. ಸೈಯ್ಯದ್ ಬುರ್ಹಾನ್‌ಷಾಹ್॥

ಗೌಸೆ ಆಜ್ಜಂರ ಸಮೃದ್ಧಿಯಿಂದ ಸಕಲ ಸೇವಕರನು ನ್ಯಾಯ ನಿರ್ಣಯ ದಿನದಂದು ರಕ್ಷಿಸುವವರು ಸೈಯ್ಯದ್ ಬುರ್ಹಾನ್‌ಷಾಹ್।

ಅಲ್ಲಾಹುವಿನಲ್ಲಿ ಲೀನವಾಗುವ ರಹಸ್ಯಗಳೆಲ್ಲವೂ ಬಹಿರಂಗಗೊಂಡಿವೆ ಸೈಯ್ಯದ್ ಬುರ್ಹಾನ್‌ಷಾಹ್‌ರಲ್ಲಿ।

ಆಕಾಶವಾಣಿಯ ರಹಸ್ಯವನ್ನರಿಯುವವರಾಗಿದ್ದಾರೆ ಸೈಯ್ಯದ್ ಬುರ್ಹಾನ್‌ಷಾಹ್॥

ಸಿಬಗತುಲ್ಲಾಹಿಯವರ ಮನೆಯ ದೀಪ ಬೆಳಗಿದೆ ಇವರಿಂದ..
ವಂಶದ ನಂದಾದೀಪವಾಗಿದ್ದಾರೆ ಸೈಯ್ಯದ್ ಬುರ್ಹಾನ್‌ಷಾಹ್।

ಅಂತಿಮ ದಿನದ ನ್ಯಾಯನಿರ್ಣಯದಂದು ಕಾಲುಗಳು ಕಂಪಿಸಲು, ಅಧೈರ್ಯ ಕಾಡದು ನಮ್ಮ ಆಪ್ತ ಬಂಧು, ಸಹಾಯಕರಿರುವರು ಸೈಯ್ಯದ್ ಬುರ್ಹಾನ್‌ಷಾಹ್॥

ಇದರಲ್ಲಿ ಆಶ್ಚರ್ಯವೇನಿದೆ? ಒಂದು ವೇಳೆ ನಾನು ಕತ್ತಲೆಯಿಂದ ಹೊರಬಂದರೆ...
ನನ್ನ ಮಾರ್ಗದರ್ಶಕರಿರುವರು ಸೈಯ್ಯದ್ ಬುರ್ಹಾನ್‌ಷಾಹ್
ಮದ್ರಾಸ್ ಪ್ರದೇಶಕ್ಕೆ ಪ್ರಸಿದ್ಧಿಯಾದರೂ ಹೇಗೆ ದೊರೆಯದು ಷರ್ಫ್।
ಅಲ್ಲಿರುವರು ನನ್ನ ತುಂಬು ನಂಬಿಗೆಯ ಮುರ್ಷಿದ್ ಸೈಯ್ಯದ್ ಬುರ್ಹಾನ್‌ಷಾಹ್॥

ಹಜ್ರತ್‌ರ ಪವಾಡಗಳು ಬಹಳಷ್ಟು ಪ್ರಸಿದ್ಧಿ ಪಡೆದಿವೆ. ಈ ಅನುವಾದಕನ ಮಿತಿಯಿಂದಾಗಿ ಎಲ್ಲವನ್ನೂ ಸಂಗ್ರಹಿಸಲು ಸಾಧ್ಯವಿಲ್ಲ ಆದರೂ ಅದರಲ್ಲಿ ಕೆಲವಾರು ಕರಾಮತ್ತುಗಳನ್ನು ಸಮೃದ್ಧಿಯ ರೂಪದಲ್ಲಿ ಓದುಗರಿಗೆ ಸಮರ್ಪಿಸಲಾಗುತ್ತಿದೆ.

ಓರ್ವ ಅರಬ್ ದೇಶದ ಪವಿತ್ರ ಮಕ್ಕಾ ನಗರದಲ್ಲಿ ವಾಸಿಸುತ್ತಿದ್ದ ವ್ಯಕ್ತಿಯು ಅನುಪಮ ವ್ಯಕ್ತಿತ್ವದ ಧಣಿಯಾಗಿದ್ದರು. ಯಾವಾಗಲೂ ಅವರ ಅದಮ್ಯ ಇಚ್ಛೆ ಇದಾಗಿತ್ತು. ಏನೆಂದರೆ ಖಾದ್ರಿಯಾ ಸಿಲ್‌ಸಿಲಾದ ಪೀರ್‌ರಿಂದ ಬೈಯ್ಯತ್ ಪಡೆಯಬೇಕು. ಬಹಳಷ್ಟು ರೀತಿಯಲ್ಲಿ ಶೋಧ, ಪ್ರಯತ್ನ ನಡೆಸಿದರೂ ಫಲ ದೊರೆಯಲಿಲ್ಲ. ಒಂದು ದಿನ ಅಲ್ಲಾಹುವಿನ ದರ್ಬಾರಿನಲ್ಲಿ ತುಂಬಾ ಏಕಾಗ್ರಚಿತ್ತರಾಗಿ, ನಮ್ರರಾಗಿ ಅತ್ಯಂತ ವಿನೀತರಾಗಿ ಪ್ರಾರ್ಥಿಸಿದರು. ಯಾ ರಬ್ಬುಲ್ ಆಲಮೀನ್! (ಓ! ಇಹಪರದ ಒಡೆಯನೇ) ನನ್ನ ಇಡೀ ಆಯುಷ್ಯವು ಬೈಯ್ಯತ್ ತೆಗೆದುಕೊಳ್ಳಬೇಕೆಂಬ ಬಯಕೆಯಲ್ಲಿಯೇ ತೀರಿತು. ಈ ಸಕಲ ಬಯಕೆಗಳನ್ನು ಈಡೇರಿಸುವವನೇ ನನ್ನ ಈ ಬಯಕೆಯನ್ನೂ ಪೂರ್ತಿಗೊಳಿಸು, ಮುರ್ಷದೇ ಕಾಮಿಲ್‌ರನ್ನು ಭೇಟಿ ಮಾಡಿಸು ಹಾಗೂ ಬೈಯ್ಯತ್ ಮಾಡಿಸು ಇದೇ ವಿಚಾರದಲ್ಲಿ ನಿಮಗ್ನರಾಗಿ ರಾತ್ರಿಯಲ್ಲಿ ನಿದ್ರೆ ಹೋದರು. ಸ್ವಪ್ನದಲ್ಲಿ ಏನು ನೋಡುತ್ತಾರೆ! ಒಂದು ಸಭೆಯು ಸೇರಿದೆ ಆ ಸಭೆಯಲ್ಲಿ ಹಜ್ರತ್ ಸೈಯ್ಯದ್ ಗೌಸ್ ಮುಹಿಯುದ್ದೀನ್ ಅಬ್ದುಲ್‌ಖಾದಿರ್ ಜಿಲಾನಿ ಉಪಸ್ಥಿತರಿರುವರು. ಈ ಅರಬ್ಬಿನ ವ್ಯಕ್ತಿಯು ಅಲ್ಲಿ ಹಾಜರಾದರು. ಹಾಗೂ ತಮ್ಮ ಬಯಕೆ ವ್ಯಕ್ತಪಡಿಸಿದರು. ಆಜ್ಞೆಯಾಯಿತು. ಹಿಂದ್ ದೇಶದಲ್ಲಿ ಹಜ್ರತ್ ಸೈಯ್ಯದ್ ಶಾಹ್ ಬುರ್ಹಾನುದ್ದೀನ್ ಹುಸೈನಿ(ಖು) ಇರುವರು. ಹೋಗಿ ಅವರಿಂದ ಬೈಯ್ಯತ್ ಪಡೆಯಿರಿ. ಅವರು ಮತ್ತೊಮ್ಮೆ ವಿನಂತಿಸಿದರು. ನಾನು ಆ ಹಜ್ರತ್‌ರನ್ನು ನೋಡಿಲ್ಲ. ಹೇಗೆ ಭೇಟಿಯಾಗುವೆನು. ಆ ಸಭೆಯಲ್ಲಿ ಹಜ್ರತ್ ಪೀರ್(ಖು)ರೂ ಸಹ ಇದ್ದರು. ಜನಾಬ್ ಗೌಸ್‌ಪಾಕ್(ರ)ರು ಹಜ್ರತ್‌ರ ಮುಖಚರ್ಯೆಯನ್ನು ತೋರಿಸಿದರು. ಆ ವೇಳೆ ಹಜ್ರತ್‌ರು ಬೈಯ್ಯತ್ ನೀಡುವ ವೇಳೆ ತೊಡುವ ಉಡುಪು ಧರಿಸಿದ್ದರು. ಆ ಅರಬ್ಬಿನ ವ್ಯಕ್ತಿಯು ಸ್ವಪ್ನದಿಂದ ಜಾಗರ ಅವಸ್ಥೆಗೆ ಮರಳಿ ಹಜ್ರತ್‌ರನ್ನು ಹುಡುಕಲು ಪ್ರಾರಂಭಿಸಿದರು. ಹಗಲಿರುಳು ಪ್ರಾರ್ಥನೆಯಲ್ಲಿ ತೊಡಗಿ ಯಾ ಅಲ್ಲಾಹು! ನನಗೆ ಹಿಂದ್‌ನಲ್ಲಿಯ ಆ ಗುರುವನ್ನು ಭೇಟಿ ಮಾಡಿಸು ಎಂದು ನಿರಂತರ ಪ್ರಾರ್ಥಿಸುತ್ತಿದ್ದರು. ಆಗ 'ಹಜ್' ಸಮೀಪಿಸಿತು. ಹಜ್‌ಗಾಗಿ ಯಾವಾಗ ಎಲ್ಲರೂ ಸೇರಹತ್ತಿದರು. ಮದ್ರಾಸಿನವರೂ ಕೂಡ ಅಲ್ಲಿಗೆ ಬಂದಿದ್ದರು. ಅವರಿಂದ ತಿಳಿದದ್ದೇನೆಂದರೆ ಹಜ್ರತ್‌ರು ಮದ್ರಾಸಿನಲ್ಲಿರುವರು. ಆ ವ್ಯಕ್ತಿಯೂ ಸಹ ಮಕ್ಕಾದಿಂದ ಪ್ರಯಾಣ ಬೆಳೆಸಿ ಮದ್ರಾಸಿಗೆ ಬಂದರು. ಹಜ್ರತ್‌ರ ಸನ್ನಿಧಿಯಲ್ಲಿ ಗೌರವದೊಂದಿಗೆ ತಲೆಬಾಗಲು ಹಾಜರಾದರು. ಯಾವಾಗ ಹಜ್ರತ್‌ರು ತಮ್ಮ ಕೋಣೆಯಿಂದ ಹೊರ ಬಂದರು ಆಗ ಅವರ ದೇಹದ

ಮೇಲೆ ಅದೇ ಉಡುಪು ಇತ್ತು. ಯಾವುದನ್ನು ಸ್ವಪ್ನದಲ್ಲಿ ಹಜ್ರತ್ ಗೌಸ್‌ಪಾಕ್‌ರು ಪರಿಚಯಿಸಿದ್ದರು. ಆ ಅರಬ್ ವ್ಯಕ್ತಿಯು ಮುಖಚರ್ಯೆ ನೋಡುತ್ತಲೇ ಹಜ್ರತ್‌ರೆದುರು ಬಾಗಿದರು. ಹಾಗೂ ಬೈಯ್ಯತ್ತಿನ ಸಮೃದ್ಧಿ ಪಡೆಯುವಲ್ಲಿ ಸಫಲರಾದರು ಹಾಗೂ ಮರಳಿ ಮಕ್ಕಾ ಮುವಜ್ಜಮಾಕ್ಕೆ ಮರಳಿದರು. ಈ ಘಟನೆಯು ಮದ್ರಾಸ್ ಪಟ್ಟಣದಲ್ಲಿ ಬಹಳೇ ಪ್ರಸಿದ್ಧವಾಗಿದೆ.

ಮದ್ರಾಸಿನಲ್ಲಿ ಓರ್ವ ತಖಿ ನವಾಜ್‌ಖಾನ ಹೆಸರಿನ ವ್ಯಕ್ತಿಯು ಹೀಗೆ ಹೇಳುತ್ತಿದ್ದರು. ಏನೆಂದರೆ-ಯಾರೊಬ್ಬರ ಮುರೀದ್‌ರಾಗುವದರಲ್ಲಿ ಏನು ಅರ್ಥವಿದೆ? ಅತ್ಯಂತ ದಕ್ಷ ಮುರ್ಷದ್ ಸಿಕ್ಕರೆ ಮುರೀದ್ ಆಗಬೇಕು. ಹಜ್ರತ್ ಪೀರ್(ಖು)ರಲ್ಲಿಯೂ ಈ ವ್ಯಕ್ತಿಗೆ ಅಲ್ಪ ಸ್ವಲ್ಪ ಸಂದೇಹವಿತ್ತು. ಆದರೆ ಒಂದು ದಿನ ಸ್ವಪ್ನದಲ್ಲಿ ನೋಡುತ್ತಾನೆ. ಮದ್ರಾಸಿನ ಜಾಮಿಯಾ ಮಸೀದೆ ವಾಲಾಜಾಹಿಯಲ್ಲಿ ಒಂದು ಮೈಯ್ಯತ್(ಶವ)ವನ್ನು ತಂದಿರುವರು. ಆ ಶವಯಾತ್ರೆಯಲ್ಲಿ ಸಾವಿರಾರು ಜನ ಸೇರಿರುವರು. ಈ ವ್ಯಕ್ತಿಯೂ ಈ ಜನಸಾಗರದಲ್ಲಿ ಹಜ್ರತ್ ಮುಹಮ್ಮದ್(ಸ)ರನ್ನು ಸಹ ಕಂಡು ಚಕಿತನಾಗಿ ಪ್ರತಿಯೊಬ್ಬರಲ್ಲಿಯೂ ಈ 'ಜನಾಜಾ' (ಶವ)ವು ಯಾರದಿದೆ ಇದರಲ್ಲಿ ಹಜ್ರತ್ ಮುಹಮ್ಮದ್(ಸ)ರೂ ಹಾಜರಿರುವರು ಜನರು ಹೀಗೆಂದರು ನಿನಗೆ ತಿಳಿದಿಲ್ಲವೇ? ಈ ಪವಿತ್ರ ಶವವು ಹಜ್ರತ್ ಸೈಯ್ಯದ್‌ಶಾಹ್ ಬುರ್ಹಾನುದ್ದೀನ್ ಹುಸೈನಿ(ಖು)ರವರದಿದೆ. ಏನಿತ್ತು ಸ್ವಪ್ನದಿಂದ ಜಾಗರಾವಸ್ಥೆಗೆ ತಲುಪಿದ ಕೂಡಲೇ ತನ್ನ 'ಸಣ್ಣತನ' ಹಾಗೂ ಅಪನಂಬಿಕೆಯ ಎಳೆಯಿಂದಾಗಿ ತುಂಬಾ ಲಜ್ಜಿತಗೊಂಡು ಹಜ್ರತ್‌ರ ಸನ್ನಿಧಿಗೆ ವಿನಮ್ರನಾಗಿ ಆಗಮಿಸಿ ಇಡೀ ಘಟನೆಯ ವಿವರವನ್ನು ವಿಶದಪಡಿಸಿದನು. ಹಾಗೂ ಬೈಯ್ಯತ್ತಿನ ಸಮೃದ್ಧಿ ಹೊಂದಿದನು.

ಮುಹಮ್ಮದ್ ಖಾದಿರ್‌ಅಸದ್‌ಉರ್ಫ್‌ಖಾದಿರ್‌ಬಾಷಾಸಾಹೇಬ್, ಅರ್ಕಾಟ್‌ನವರು ಯಾರು ಹಜ್ರತ್ ಪೀರ್(ಖು)ರ ಶಿಷ್ಯರಲ್ಲಿ ಓರ್ವರಾಗಿರುವರು. ಹೀಗೆ ಹೇಳುತ್ತಾರೆ ಪ್ರತಿವರ್ಷ ಹಜ್ರತ್‌ರು ತಾಜಪುರಕ್ಕೆ ಹೋಗುವಾಗ ನನ್ನ ಮನೆಗೆ ಬರುತ್ತಿದ್ದರು. ಆದರೆ ಒಂದು ವರ್ಷ ಹಜ್ರತ್‌ರು ರೂಢಿಯಂತೆ ಅರ್ಕಾಟಿನ ಮಸೀದೆಯಲ್ಲಿ ಬಂದರು. ನಾನು ಮನೆಗೆ ಆಮಂತ್ರಿಸಿದೆನು. ಏಕೆಂದರೆ ಹಜ್ರತ್‌ರಿಗೆ ಮೊಸರು ಬಲು ಇಷ್ಟವಾಗುತ್ತಿತ್ತು ಹಾಗೂ ಹಲವಾರು ಬಾರಿ ನನ್ನ ಮನೆಯಲ್ಲಿಯ ಮೊಸರನ್ನು ತಿನ್ನುತ್ತಿದ್ದರು. ಅದಕ್ಕಾಗಿ ನಾನು ನನ್ನ ಪತ್ನಿಗೆ ಹೀಗೆಂದೆನು ಮೊಸರನ್ನು ತುಂಬಾ ಜಾಗೃತೆಯಿಂದ ಹೆಪ್ಪುಕೂಡಿಸಿರಿ. ಹಜ್ರತ್‌ರು ಯಾವಾಗ ಬಂದರೋ ಹಾಗೂ ಭೋಜನ ವ್ಯವಸ್ಥೆ ಮಾಡಲಾಯಿತು. ಆ ಸಮಯದಲ್ಲಿ ತಿಳಿದು ಬಂದಿದ್ದೇನೆಂದರೆ ಮರೆವೆಯಿಂದ ಮೊಸರನ್ನು ಹೆಪ್ಪು ಹಾಕಿರಲಿಲ್ಲ. ಕೇವಲ ಹಾಲು ಮಾತ್ರ ಇದೆ. ನನಗೆ ಬಹಳ ಖೇದವುಂಟಾಯಿತು. ಅನಿವಾರ್ಯವಾಗಿ ಹಾಲನ್ನೇ ಒಂದು ಪಾತ್ರೆಯಲ್ಲಿ ಹಾಕಿ

ಹಜ್ರತ್‌ರ ಮುಂದೆ ತಂದಿರಿಸಿದೆನು. ಸ್ವಲ್ಪ ಸಮಯದ ನಂತರ ಯಾವಾಗ ಹಾಲನ್ನಿಟ್ಟ ಪಾತ್ರೆಯೆಡೆಗೆ ದೃಷ್ಟಿಹರಿಸಿದೆನು ಆಗ ನೋಡುತ್ತೇನೆ, ಪಾತ್ರೆಯಲ್ಲಿ ಸಮೃದ್ಧವಾದ ಮೊಸರು ಹೆಪ್ಪುಗಟ್ಟಿದೆ! ಇದರ ನಂತರ ಈ ಘಟನೆಯನ್ನು ಹಜ್ರತರಿಗೆ ವಿವರಿಸಿದೆನು ಆಗ ಹಜ್ರತ್‌ರು ಸಮೃದ್ಧಿಗಾಗಿ ಪ್ರಾರ್ಥಿಸಿದರು.

ಜನಾಬ್ ಹಜ್ರತ್‌ಶಾಹ್ ಬಾಖಿ ಸಾಹೇಬ್ ಕಿಬ್ಲಾ ಸಿಬಗತ್‌ಲ್ಲಾಹಿ(ಖು) ಹೇಳುತ್ತಾರೆ ಯಾವ ದಿನ ಹಜ್ರತ್(ಖು)ರು ಮದ್ರಾಸಿನಲ್ಲಿ ಹಜ್ರತ್ ಬಾಖಿ ಸಾಹೇಬರ ಪುತ್ರರಾದ ಮುಹಮ್ಮದ್ ಮೆಹಮೂದ್‌ರಿಗೆ ಬೈಯ್ಯತ್ತಿನಿಂದ ಸಮೃದ್ಧಗೊಳಿಸಿದರು. ಒಂದು ಹೂವಿನ ಮಾಲೆ ಯಾವುದನ್ನು ಬೈಯ್ಯತ್ತಿನ ವೇಳೆಯಲ್ಲಿ ಹಜ್ರತ್‌ರಿಗೆ ಅರ್ಪಿಸಲಾಗುತ್ತದೆ. ಆ ಮಾಲೆಯನ್ನು ತಮ್ಮ ಶಿಷ್ಯರಾದ ಹಜ್ರತ್ ಮುಹಮ್ಮದ್ ಮೆಹಮೂದ್‌ರ ಕೊರಳಿಗೆ ಹಾಕಿ ಗೌರವಿಸಿದರು. ಆಗ ನನ್ನ ಸುಪುತ್ರನು ಆ ಮಾಲೆಯನ್ನು ತುಂಬು ಶ್ರದ್ಧೆಯೊಂದಿಗೆ ಸಮೃದ್ಧಿದಾಯಕವೆಂದು ಬಗೆದು ತಮ್ಮ ಪೆಟ್ಟಿಗೆಯಲ್ಲಿ ಆಸ್ಥೆಯೊಂದಿಗೆ ಇರಿಸಿ ಮಸ್ಕೂನಾ ಗ್ರಾಮಕ್ಕೆ ಯಾವುದು ಗಂಗಾವತಿಯ ಬಳಿ ಇರುವದು ಅಲ್ಲಿಗೆ ತಂದರು. ನಾನು ಕೇಳಿದನು ನನಗಾಗಿ ಏನು ಕಾಣಿಕೆ ತಂದಿರುವಿರಿ? ಬೈಯ್ಯತ್ತಿನ ಕಾಣಿಕೆಯ ಹೊರತಾಗಿ ಏನನ್ನೂ ತರಲಿಲ್ಲ. ಆದರೆ ಹಜ್ರತ್‌ರು ತಮ್ಮ ಕೊರಳಿನಿಂದ ಒಂದು ಹೂ ಮಾಲೆ ನನಗೆ ನೀಡಿರುವರು ಅದನ್ನು ತಂದಿರುವೆನು. ಈ ಸಂಭಾಷಣೆಯು ಬೈಯ್ಯತ್ ಪಡೆದು ಬಂದ ೯ ದಿನಗಳ ನಂತರ ನಡೆಯುತ್ತಿತ್ತು. ಸುಪುತ್ರನು ಆ ಪೆಟ್ಟಿಗೆಯನ್ನು ತಂದು ನನ್ನ ಮುಂದಿರಿಸಿದರು. ಆ ವೇಳೆಗೆ ಅಲ್ಲಿ ಮಖ್ದೂಮ್ ಅಲಿ ಸಾಹೇಬ್ ಹಾಗೂ ಅನೇಕ ಫಾರಸಿಶಿಕ್ಷಕರು ಹಾಗೂ ೮–೧೦ ಜನ ಅವರೊಂದಿಗೆ ಹಾಜರಿದ್ದರು. ಅವರ ಎದುರಲ್ಲಿ ಪೆಟ್ಟಿಗೆಯನ್ನು ತೆರೆಯಲಾಯಿತು. ಪೂಮಾಲೆಯನ್ನು ಹೊರತೆಗೆದರು. ಆಶ್ಚರ್ಯದ ಮಾತೆಂದರೆ ಪೂಮಾಲೆಯು ತಾಜಾತನದಿಂದ ಪರಿಮಳ ಬೀರುತ್ತಿತ್ತು. ಹೀಗೆನಿಸುತ್ತಿತ್ತು. ಅವತ್ತೇ ಆ ಹೂಮಾಲೆಯನ್ನು ಸಂತೆಯಿಂದ ತರಲಾಗಿದೆ. ಆದರೆ ಆ ನಡುವೆ ೯ ದಿನದ ಸಮಯ ಗತಿಸಿತ್ತು. ಹೂವು ಅದೇ ಆಗ ಅರಳಿದಂತಿದ್ದವು. ಮತ್ತು ಪೆಟ್ಟಿಗೆಯು ತುಂಬಾ ಭದ್ರವಾಗಿ ಮುಚ್ಚಲ್ಪಡುವ ಪೆಟ್ಟೆಗೆಯಾಗಿತ್ತು. ಗಾಳಿಯಾಡುವ ಪ್ರಶ್ನೆಯೇ ಇರಲಿಲ್ಲ.

ಯಾವಾಗ ಆಲಿಜನಾಬ್ ನವಾಬ್ ಮಿರ್ಜಾ ಫೈರೋಜ್ ಹುಸೈನ್‌ಖಾನ್ ಬಹಾದ್ದೂರ್ ರಿಜೆಂಟ್ ಹಾಗೂ ಜನಾಬ ನವಾಬ ಖೈರುನ್ನಿಸ್ಸಾ ಬೇಗಂ ಸಾಹೇಬಾ ಇವರ ಸುದೀರ್ಘ ಪ್ರಯತ್ನದಿಂದಾಗಿ ಹಜ್ರತ್ ಮುಹಮ್ಮದ್(ಸ)ರ ಪವಿತ್ರ ನಿಲುವಂಗಿಯನ್ನು ದೆಹಲಿ ನಗರದಿಂದ ತಂದು ಬಹಳೇ ಗೌರವ, ಶ್ರದ್ಧೆ, ಆಸ್ಥೆ ಹಾಗೂ ಪೂರ್ಣ ನಂಬಿಕೆಯೊಂದಿಗೆ ಕೋಹ್ ಪೆಲುವಾರಮ್ ಒಂದು ಬೆಟ್ಟವಿದೆ. ಅದು ಮದ್ರಾಸಿನಿಂದ ನಾಗೂರಷರೀಫ್‌ದ ಹಾದಿಯಲ್ಲಿ ಇರುವದು. ಅಲ್ಲಿ ಅದನ್ನು

ತಂದು ಇರಿಸಲಾಯಿತು. ಹಾಗೂ ಮದ್ರಾಸಿನ ಪವಿತ್ರ ಯಾತ್ರಾ ಸ್ಥಳವಾಗಿ ಪರಿವರ್ತಿಸಿ ಅಲ್ಲಿ ದರ್ಶನಾರ್ಥಿಗಳಿಗೆ ಪವಿತ್ರ ನಿಲುವಂಗಿಯನ್ನು ಜಿಯಾರತ್‌ಗೈಯ್ಯುವ ಸೌಭಾಗ್ಯ ಕಲ್ಪಿಸಲೆಂದು ಅಲ್ಲಿ ಬೆಟ್ಟದ ಮೇಲೆ ಒಂದು ಬೃಹತ್ ಕಟ್ಟಡ ನಿರ್ಮಿಸಿ ಹಾಗೂ ಪವಿತ್ರ ನಿಲುವಂಗಿಯನ್ನು ಇರಿಸಿದ ಕಟ್ಟಡದ ಮೇಲೆ ಗೌರವಾರ್ಥ ಒಂದು ಗುಂಬಜವನ್ನು ನಿರ್ಮಿಸಲಾಯಿತು. ಆದರೆ ನವಾಬ್ ಬಹಾದ್ದೂರ್‌ರಿಗೆ ಈ ಯೋಚನೆ ಹಾಗೂ ಚಿಂತೆ ಕಾಡಿತು. ಮೊದಲನೆಯ ವರ್ಷ ೧೨ ರಬ್ಬಿವುಲ್ ಅವ್ವಲದಂದು ಹಜ್ರತ್ ಮುಹಮ್ಮದ್(ಸ) ಉರೂಸುತ್ಸವವಿರುವದು. ಈ ಪವಿತ್ರ ನಿಲುವಂಗಿಯ ಜಿಯಾರತ್‌ವನ್ನು ಯಾವ ಮಹಾಪುರುಷರಿಂದ ಮಾಡಿಸಲಿ, ಇದೇ ಯೋಚನೆಯಲ್ಲಿ ಒಂದು ದಿನ ನವಾಬ್ ಬಹಾದ್ದೂರರು ಸ್ವಪ್ನದಲ್ಲಿ ಕಂಡರು. ಒಂದು ಪ್ರಕಾಶದಿಂದ ತುಂಬಿದ ಬಯಲು ಪ್ರದೇಶವಿದೆ ಅದರಲ್ಲಿ ಒಂದು ಬಲು ಸುಂದರವಾದ ಬೃಹತ್ ಕಟ್ಟಡವಿದೆ ಅದರ ಹಿಂದೆಯೇ ಮತ್ತೊಂದು ಮನೆಯಿದೆ. ಸಾವಿರಾರು ಜನರ ಬಂದು ಹೋಗುವಿಕೆ ನಿರಂತರವಾಗಿ ಅಲ್ಲಿ ನಡೆದಿದೆ. ನಾನು ಕೇಳಿದೆನು ಈ 'ಮನೆ' ಯಾರದಿದೆ. ತಿಳಿದು ಬಂದಿದ್ದೇನೆಂದರೆ ಈ 'ಮನೆ'ಯು ಹಜ್ರತ್ ಸೈಯ್ಯದ್ ಶಾಹ್ ಬುರ್ಹಾನುದ್ದೀನ್ ಅಲ್ ಹುಸೈನಿ ಸಾಹೇಬರ ಮುರ್ಷದ್(ಗುರು)ವಿನದ್ದು ಇದೆ. ನಾನೂ ಸಹ ಆ ಸಮೃದ್ಧಿದಾಯಕವಾದ ಮನೆಯಲ್ಲಿ ಪ್ರವೇಶಿಸಿದೆನು ನೋಡುತ್ತೇನೆ. ಒಂದು ಪೀಠವನ್ನು ಅಲಂಕರಿಸಲಾಗಿದೆ. ಅದರ ಮೇಲೆ ಓರ್ವ ಮಹಾಪುರುಷರು, ಸುಂದರ ಮೊಗದವರೂ, ಅತ್ಯುತ್ತಮ ಚಾರಿತ್ರ್ಯದ ಧಣಿಗಳು ಅದರ ಮೇಲೆ ಆಸೀನರಾಗಿರುವರು. ಆ ಪ್ರಭಾವಿ ಮಹಾಪುರುಷರ ಮನೆಯಲ್ಲಿ ಅವರ ಪಕ್ಕದಲ್ಲಿ ಒಂದು ದ್ವಾರವಿದೆ. ಅದನ್ನು ಒಂದು ಪರ್ದಾ ಆಚ್ಛಾದಿಸಿದೆ ಹಾಗೂ ಈ ಮಾತು ಪ್ರಸಿದ್ಧಗೊಂಡಿದೆ. ಆ ಪರ್ದಾ ಇರುವ ಕೋಣೆಯ ಒಳಗಡೆ ಹಜ್ರತ್ ಬೀಬಿ ಫಾತೀಮತುಜ್ಜಹರಾ ರಜಿಯಲ್ಲಾಹ್ ಅನಹಾ (ಮುಹಮ್ಮದ್(ಸ)ರ ಪುತ್ರಿ) ಇರುವರು. ಹಾಗೂ ಆ ಮಹಾಪುರುಷರ ಬಳಿ ಹಜ್ರತ್ ಸೈಯ್ಯದ್ ಬುರ್ಹಾನುದ್ದೀನ್ ಅಲ್ ಹುಸೈನಿ ಉರ್ಫ್ ಪೀರ್ ದಸ್ತಗೀರರೂ ಅಲ್ಲಿ ಉಪಸ್ಥಿತರಿರುವರು. ನಾನು ಸಹ ಎದುರಿನಲ್ಲಿ ಕುಳಿತುಕೊಂಡೆನು ಆ ಮಹಾಪುರುಷರು ನನ್ನೆಡೆಗೆ ಗಮನಹರಿಸಿ ಹೇಳಿದರು. ಪವಿತ್ರ ನಿಲುವಂಗಿಯ ಜಿಯಾರತ್‌ನ್ನು ಹಜ್ರತ್ ಸೈಯ್ಯದ್ ಶಾಹ್ ಬುರ್ಹಾನುದ್ದೀನ್ ಅಲ್ ಹುಸೈನಿಯವರಿಂದ ಗೈಯ್ಯಿರಿ ಪರ್ದಾದ ಒಳಗಿನಿಂದ ಮಹಾಪುರುಷರಿಗೆ ಫಾತೇಹಾಕ್ಕಾಗಿ ಕರೆ ಬಂದಿತು. ಆಗ ಅವರು ಹಜ್ರತ್ ಪೀರ್ ದಸ್ತಗೀರ್(ಖು)ರ ಕಡೆಗೆ ದೃಷ್ಟಿಬೀರಿ 'ಒಳಗೆ ಹೋಗಿ ಫಾತೇಹಾ ಗೈಯ್ಯಿರಿ' ಎಂದರು. ಹಜ್ರತ್‌ರು ಅವರ ಆದೇಶವನ್ನು ಪಾಲಿಸಿದರು. ಅದರ ನಂತರ ಒಳಗಿನಿಂದ ಎರಡು ಪಾತ್ರೆಗಳಲ್ಲಿ ಐದು, ಐದು ಲಾಡುಗಳನ್ನಿಟ್ಟುಕೊಂಡು ಹೊರ ತಂದರು. ಇದರಲ್ಲಿ ಒಂದು ಭಾಗವು ನನಗೆ ತಲುಪಿತು. ಹಾಗೂ ಈ ಸಂದೇಶ ನೀಡಲಾಯಿತು. ಈ ಸಮೃದ್ಧಿದಾಯಕ ಕಾಣಿಕೆಯು ಕೇವಲ ನಿಮಗಾಗಿ ಇದೆ.

ಎರಡನೆಯ ಭಾಗವು ಯಾರದಿತ್ತೆಂದು ತಿಳಿಯಲಿಲ್ಲ. ಆ ಸಿಹಿಯು ಎಂಥಹ ಅದ್ಭುತ ರುಚಿಯುಳ್ಳದ್ದಾಗಿತ್ತೆಂದರೆ ನಾನು ನನ್ನ ಇಡೀ ಜೀವಮಾನದಲ್ಲಿಯೇ ಅಂಥಹ ರುಚಿಕರವಾದ ಸಿಹಿಯ ಸ್ವಾದವನ್ನು ಅನುಭವಿಸಿರಲಿಲ್ಲ. ಬೆಳಿಗ್ಗೆ ಜಾಗೃತಾವಸ್ಥೆಗೆ ತಲುಪಿದಾಗ ನಾನು ಈ ಸ್ವಪ್ನವನ್ನು ಹಜ್ರತ್ ಪೀರ್(ಖು) ಸನ್ನಿಧಿಯಲ್ಲಿ ಹಾಜರಾಗಿ ಪ್ರಸ್ತುತಪಡಿಸಿದೆನು. ಹಾಗೂ ನಾನು ಆಣೆ ಪ್ರಮಾಣ ಮಾಡಿ ಹೇಳುತ್ತೇನೆ. ಈ ಸ್ವಪ್ನವು ಸತ್ಯವಾಗಿಯೂ ಇದ್ದಂತೆಯೇ ವಿವರಿಸಿರುವೆನು. ಅದಕ್ಕಾಗಿ ಹಜ್ರತ್‌ರು ಆ ದಿನದ ಜಿಯಾರತ್ ಹಾಗೂ ಪವಿತ್ರ ನಿಲುವಂಗಿಯ ಸೇವೆಗಾಗಿ ಒಪ್ಪಿಗೆ ನೀಡಿದರು. ಇಲ್ಲಿ ಇದು ಸ್ಪಷ್ಟವಾಗುವದು ಏನೆಂದರೆ ಯಾವಾಗ ಮಗ್ಗುಲಿನ ಕೋಣೆಯಲ್ಲಿ ಹಜ್ರತ್ ಬೀಬಿ ಫಾತೀಮ ತುಜ್ಜಹರಾ(ರ) ಇದ್ದರು. ಫಾತೇಹಾಗಾಗಿ ಕರೆ ಬಂದಿತು ಹಾಗೂ ಪೀರ್(ಖು)ರು ಆದೇಶ ಪಾಲನೆಗೈದು ಒಳಗೆ ಹೋಗಿ ಫಾತೇಹಾ ನೀಡಿದರು. ಹಾಗೂ ಈ ಮನೆಯಲ್ಲಿ ಹಜ್ರತ್‌ರ ಮುರ್ಷದ್ ಇರುವರು. ಅವರು 'ಹಜ್ರತ್ ಅಲಿ' ಆಗಿರುವರು. ಏಕೆಂದರೆ ಆ ಮನೆಯಲ್ಲಿ ಬೀಬಿ ಫಾತೀಮುಜ್ಜಹರಾರವರು ಇರುವರು. ಈ ಮಾತನ್ನು ಪುರಸ್ಕರಿಸುತ್ತದೆ. ಹಜ್ರತ್ ಪೀರ್ ದಸ್ತಗೀರ್‌ರಿಗೆ ಅವರ ಪೂರ್ವಜರು ಹಾಗೂ ಮುರ್ಷದರು ಪೀಳಿಗೆಯಿಂದ ಪೀಳಿಗೆಗೆ ಹಾಯ್ದು ಅವರನ್ನು ಖಿಲಾಫತ್ ತಲುಪುತ್ತದೆ. ಅದಕ್ಕಾಗಿ ಅಲಿ ಮುರ್ತುಜಾ ಕರಮುಲ್ಲಾಹ್ ವಜಿಹ್‌ರೇ ಮುರ್ಷದರಾಗಿವರು.

ಆದರೆ ವಿಷಾದವಿದೆ, ನವಾಬ್ ಮಿರ್ಜಾ ಫೈರೋಜ್ ಹುಸೈನ್ ಖಾನ್ ಬಹಾದ್ದೂರ್‌ರ ಆಯುಷ್ಯವು ಕೈಕೊಟ್ಟಿತು. ಜಿಯಾರತ್ ಷರೀಫ್‌ದ ಮೊದಲೇ ೧೩೦೬ ಹಿಜ್ರಿಶಕೆಯ ಸಫರ್ ತಿಂಗಳ ಮೊದಲನೆಯ ದಿನಾಂಕದಂದು ನಿಧನರಾದರು. ಹಾಗೂ ಅದೇ ಕೊಹೆಪೆಲ್ವಾರಮ್‌ದ ಬೆಟ್ಟದ ಮೇಲೆ 'ಪವಿತ್ರ ನಿಲುವಂಗಿ' ಇರುವ ಗುಂಬಜಿನ ಎದುರಲ್ಲಿ ಸಮಾಧಿಸ್ಥರಾದರು. ಜನಾಬ್ ಮಿರ್ಜಾ ಇಸ್ಮಾಯಿಲ್ ಖಾನ್ ಸಾಹೇಬರು ಅವರು ದಿವಂಗತ ನವಾಬ್ ಸಾಹೇಬರ ಸಹೋದರಿಯ ಪುತ್ರರಾಗಿದ್ದರು. ಹಾಗೂ ಅವರ ಈರ್ವರು ಪುತ್ರರಾದ ನವಾಬ್ ಸಾಹೇಬ್ ಜನಾಬ ಮಿರ್ಜಾ ವಾಜಿದ್ ಹುಸೈನ್‌ಖಾನ್‌ಸಾಬ್ ಹಾಗೂ ಜನಾಬಮಿರ್ಜಾ ಖುರ್ಷಿದ ಹುಸೈನ್ ಖಾನ್‌ಸಾಬ್‌ರ ವತಿಯಿಂದ ೧೨ ರಬ್ಬಿವುಲ್ ಅವ್ವಲ್ ೧೩೦೬ ಹಿಜ್ರಿಶಕೆಯಲ್ಲಿ ಉರೂಸುತ್ಸವ ಜರುಗಿತು. ಆಗ ಹಜ್ರತ್ ಪೀರ್ ದಸ್ತಗೀರ್(ಖು)ರು ದಿವಂಗತರಾದ ನವಾಬ್‌ರು ಒಪ್ಪಿಸಿದಂತೆ ಹಜ್ರತ್‌ರು ಕೋಹೆಷರೀಫಕ್ಕೆ ಹೋಗಿ ಜಿಯಾರತ್‌ಗೈದರು.

ಮುಹಮ್ಮದ್ ಬಹಾವುದ್ದೀನ್ ಸಾಹೇಬರು ಹೇಳಿರುವಂತೆ ಒಂದು ದಿನ ಓರ್ವ ಸಾಹೇಬರ ಮನೆಯಲ್ಲಿ ಸಮಾರಂಭವಿತ್ತು. ಹಜ್ರತ್ ಪೀರ್(ಖು)ರಿಗೂ ಆಮಂತ್ರಣವಿತ್ತು. ಹಜ್ರತ್‌ರು ವಜೀಫಾ(ಧ್ಯಾನ)ವನ್ನು ಮಾಡುವಲ್ಲಿ ನಿರತರಾಗಿದ್ದರಿಂದ ಹೋಗಲು

ತಡವಾಯಿತು. ಆತಿಥ್ಯವಹಿಸಿದವರು ಹೀಗೆ ಯೋಚಿಸಿ ಏನೆಂದರೆ ಹಜ್ರತ್‌ರ ಜೊತೆಗೆ ೨-೩ ಸೇವಕರು ಬರಬಹುದು ಎಂದು ಬಗೆದು, ಭೋಜನವನ್ನು ತೆಗೆದಿರಿಸಲಾಯಿತು. ಉಳಿದ ಅತಿಥಿಗಳಿಗೆಲ್ಲ ಊಟ ಮಾಡಿಸಿದರು. ಹಾಗೂ ಸಿದ್ಧ ಅಡುಗೆಯೆಲ್ಲವೂ ಮುಗಿಯಿತು. ಯಾವಾಗ ಹಜ್ರತ್‌ರು ಆಗಮಿಸಿದರೋ ತಮ್ಮ ಜೊತೆಗೆ ೧೦-೧೨ಜನ ಅನುಯಾಯಿಗಳನ್ನೂ ಕರೆತಂದರು. ಅವರಲ್ಲಿ ನಾನೂ ಓರ್ವನಾಗಿದ್ದೆನು. ಆತಿಥ್ಯವಹಿಸಿದವರು ಚಿಂತಿತರಾದರು. ಏಕೆಂದರೆ ಅವರು ೩-೪ ಜನರಿಗೆ ಆಗುವಷ್ಟು ಮಾತ್ರ ಭೋಜನ ತೆಗೆದಿರಿಸಿದ್ದರು. ಹಜ್ರತ್‌ರು ಅವರು ಚಿಂತಿತರಾಗಿರುವದನ್ನು ಅರಿತರು ಹಾಗೂ ಹೀಗೆಂದರು ಈಗ ಯಾವ ತೆರನಾಗಿ ಆಹಾರ ಸಿದ್ಧವಿದೆಯೋ ಅದನ್ನು ಭೋಜನಕ್ಕಾಗಿ ತಂದಿರಿಸಿರಿ ಮತ್ತು ಅದರ ಮೇಲೆ ಶ್ವೇತ ಅರಿವೆಯನ್ನು ಅಚ್ಛಾದಿಸಿರಿ ಹಾಗೂ ಎಲ್ಲರೆದುರಿಗೆ ಖಾಲಿ ಪಾತ್ರೆಗಳನ್ನು ಇರಿಸಿರಿ ಆತಿಥ್ಯವಹಿಸಿದವರು ಹಾಗೆಯೇ ಮಾಡಿದರು. ಹಜ್ರತ್‌ರು ತಮ್ಮ ಸ್ವಹಸ್ತದಿಂದ ಎಲ್ಲರಿಗೂ ಬಡಿಸಿದರು. ಎಲ್ಲರೂ ಸಂತೃಪ್ತವಾಗುವವರೆಗೆ ಆಹಾರ ಸೇವಿಸಿದರು. ಎಲ್ಲರ ಭೋಜನವಾದ ನಂತರವೂ ಇನ್ನೂ ಆಹಾರವುಳಿಯಿತು. ಹೀಗೆ ಹಜ್ರತ್‌ರ ಪವಿತ್ರ ಹಸ್ತದಿಂದ ಬಡಿಸಲಾದ ಆಹಾರವು ಸಮೃದ್ಧಿದಾಯಕವಾಗಿ ಪರಿಣಮಿಸಿತು.

'ತಸರ್ರುಫಾತೆ ಬುರ್ಹಾನಿ'ಯ ಲೇಖಕರು ವಿವರಿಸಿರುವಂತೆ ತಮ್ಮ ಮನೆ ಮಂದಿಯೆಲ್ಲಾ ಹಜ್ರತ್‌ರ ಪವಿತ್ರ ಹಸ್ತದಿಂದ ಬೈಯ್ಯತ್‌ಗೈದಿದ್ದರು. ಒಂದು ಸಲ ರಾಯಚೂರಿನಲ್ಲಿ 'ಕಾಲರಾ'ದ ರೋಗವು ಹಬ್ಬಿತು ಅದೇ ರೋಗದಿಂದ ಈ ಲೇಖಕನ ಪತ್ನಿಯು ಬಳಲತೊಡಗಿದಳು ಬಹಳಷ್ಟು ರೀತಿಯ ಚಿಕಿತ್ಸೆ ಮಾಡಿಸಿದರೂ ಪರಿಣಾಮ ಕಂಡುಬರಲಿಲ್ಲ. ಒಂದು ದಿನದಲ್ಲಿಯೇ ಜೀವನದ ಅಂತಿಮ ಘಟಕ್ಕೆ ತಲುಪಿದರೇನೋ ಎಂದೆನಿಸಿತು. ಆಗ ಇನ್ನೇನೂ ದಾರಿ ಕಾಣದೇ ಕೇವಲ ಹಜ್ರತ್‌ರತ್ತ ಏಕಾಗ್ರರಾಗಿ ಗಮನ ಹರಿಸುವದು ಒಳಿತು ತರಬಹುದೆಂದೆನಿಸಿತು. ಅದೇ ಯೋಚನೆಯಿಂದ ಕಷ್ಟದ ಕಡಲು ದಾಟಬಹುದು ಯಾವಾಗ ಅರ್ಧರಾತ್ರಿ ಕಳೆಯಿತೋ ರೋಗಿಯ ಅವಸ್ಥೆಯು ಮತ್ತಷ್ಟು ಹದಗೆಟ್ಟಿತು. ಕಣ್ಣುಗಳು ಅಚಲವಾಗಿ ಮೇಲೆ ನೆಟ್ಟಿದ್ದವು. ಹೀಗೆನುಸುತ್ತಿತ್ತು. ಈಗಲೋ ಆಗಲೋ ಜೀವ ಹೋಗುತ್ತದೆ ಎಂದೆನಿಸುತ್ತಿತ್ತು. ಲೇಖಕನು ಈ ದುಃಸ್ಥಿತಿಯನ್ನು ಕಂಡು ಕಲ್ಮಯೇತಯ್ಯ ಬಾ-ಅಂದರೆ 'ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹ್' ಓದ ತೊಡಗಿದನು ಮತ್ತು ಇದೇ ಸಮಯದಲ್ಲಿ ರೋಗಿಯು ಅಕಸ್ಮಿಕವಾಗಿ ಎರಡೂ ಕೈಗಳನ್ನೆತ್ತಿ ತಮ್ಮ ಮುಖದವರೆಗೂ ತಂದರು. ಮತ್ತೆ 'ಓದುತ್ತೇನೆ, ಓದುತ್ತೇನೆ' ಎನ್ನುತ್ತಾ ಕಲ್ಮಯೆ ತಯ್ಯಬಾ-'ಲಾ ಇಲಾಹ್ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹ್' ಓದಿ ತಮ್ಮ ಮುಖದ ಮೇಲೆ ಕೈಯಾಡಿಸಿಕೊಂಡರು. ಎಚ್ಚರಗೊಂಡರು. ಹಾಗೂ ಹೀಗೆಂದರು. ಇದೀಗ ಹಜ್ರತ್‌ಪೀರರ ಮನೆಯಲ್ಲಿದ್ದೆನು. ಹಜ್ರತ್‌ರು ಓರ್ವ ಸೇವಕನ ಕೈಯಿಂದ ನೀರು ತರಿಸಿದರು. ಅದರ ಮೇಲೆ ದುವಾ

ಓದಿ ನನಗೆ ನೀಡಿ ಹೀಗೆಂದರು, ಕಲ್ಮಾ ಓದಿ ಇದನ್ನು ಕುಡಿಯಿರಿ, ನಾನು ಓದುತ್ತೇನೆ ಎಂದು ಹೇಳಿ ಓದಿ ಕುಡಿದುಕೊಂಡೆನು ಹಾಗೂ ಎಚ್ಚರಾದೆನು. ಅದರ ನಂತರ ರೋಗಿಯ ಸ್ಥಿತಿಯು ಉತ್ತಮವಾಗುತ್ತಾ ದಿನದಿಂದ ದಿನಕ್ಕೆ ಆರೋಗ್ಯದಲ್ಲಿ ವೃದ್ಧಿ ಕಂಡುಬರುತ್ತಾ ಎಂಟು ದಿನಗಳ ಅವಧಿಯಲ್ಲಿ ಎಷ್ಟೊಂದು ಸ್ವಾಸ್ಥ್ಯ ಲಭಿಸಿತೆಂದರೆ ರೋಗವೇ ಆಗಿರಲಿಲ್ಲ ಎನಿಸಿತು.

ಹಾಜಿ ಮುಹಮ್ಮದ್ ದಾವೂದ್ ಸಾಹೇಬ್ ಮನಿಯಾರ, ಸಾಕೀನ್ ಗುಲಬರ್ಗಾ ಷರೀಫ್‌ದವರಾಗಿದ್ದು ಈಗ ಅವರ ಅಂಗಡಿಯು ರಾಯಚೂರಿನಲ್ಲಿದೆ. ಹಜ್ರತ್‌ಪೀರ್ ದಸ್ತಗೀರ್(ಖು)ರಿಂದ ಬೈಯ್ಯತ್ ಪಡೆದಿರುವರು. ತಾವು ಮುರೀದರಾದ ಘಟನೆಯನ್ನು ಹೀಗೆ ವಿವರಿಸಿರುವರು. ನಾನು ಬೈಯ್ಯತ್ ತೆಗೆದುಕೊಳ್ಳುವ ಮೊದಲು ಒಂದು ಸ್ವಪ್ನವನ್ನು ನೋಡಿದೆನು ನಾನು ಯಾವುದೋ ಒಂದು ಮನೆಯಲ್ಲಿ ಹೋಗಿರುವೆನು. ಇದಕ್ಕಿಂತ ಮೊದಲು ನಾನು ಆ ಮನೆಯನ್ನು ನೋಡಿರಲಿಲ್ಲ. ಆ ಮನೆಯಲ್ಲಿ ಒಂದು ಕಡೆಗೆ ಒಂದು ಕೋಣೆ ಇರುವದು. ಅದರ ಬಾಗಿಲು ಮುಚ್ಚಿರುವದು ಹಾಗೂ ಆ ಕೋಣೆಯ ಬಾಗಿಲಿನ ಮೇಲೆ ಒಂದು ಫಲಕ (ತೊಗರಾ ಅಲ್ಲಾ ಎಂದು ಮೇಲೆ ಹಾಗೂ ಮುಹಮ್ಮದ್(ಸ) ಎಂದು ಕೆಳಗೆ ಕಟ್ಟಿಗೆಯ ಮೇಲೆ ಬರೆಯಲ್ಪಟ್ಟಿದೆ) ಅದು ತೂಗಲ್ಪಟ್ಟಿದೆ. ನಾನು ಅಲ್ಲಿಗೆ ಹೋಗಿ ಕುಳಿತುಕೊಂಡೆನು ಅದೇ ಸಮಯದಲ್ಲಿ ಕೋಣೆಯ ಬಾಗಿಲು ತೆರೆಯಿತು ಹಾಗೂ ಒಳಗಿನಿಂದ ಓರ್ವ ವೃದ್ಧ, ಸುಂದರ ಮೊಗದ, ಬಿಳಿಯ ಗಡ್ಡದ, ಮಹಾಪುರುಷರು ಹೊರಬಂದರು ಹಾಗೂ ನನ್ನ ಕೈಯ್ಯಲ್ಲಿ ಒಂದು ಕುರ್‌ಆನ್ ಷರೀಫ್ ನೀಡಿದರು. ಆಗಲೇ ನಾನು ಕನಸಿನಿಂದ ಹೊರಬಂದೆನು. ನಂತರ ನಾನು ನಿರಂತರವಾಗಿ ಈ ಸ್ವಪ್ನದ ಅರ್ಥ ಹಾಗೂ ಆ ಮನೆಯ ಹುಡುಕಾಟದಲ್ಲಿ ತೊಡಗಿಕೊಂಡು ಅಲ್ಲಾಹುವಿನಲ್ಲಿ ಸದಾಕಾಲ ಪ್ರಾರ್ಥಿಸುತ್ತಾ 'ಯಾ ಅಲ್ಲಾಹ್! ಆ ಮನೆಯು ಎಲ್ಲಿರುವದು? ಆ ಮಹಾಪುರುಷರೊಂದಿಗೆ ಯಾವಾಗ ಭೇಟಿಯ ಸೌಭಾಗ್ಯ ಲಭಿಸುವದು ಎಂದು ವಿಚಲಿತನಾಗಿ ಪ್ರಾರ್ಥಿಸುತ್ತಲಿದ್ದೆನು. ಕೆಲ ದಿನಗಳ ನಂತರ ನಾನು ನನ್ನ ವ್ಯವಹಾರಕ್ಕಾಗಿ ಮದ್ರಾಸಕ್ಕೆ ಹೋಗುವ ಅವಕಾಶ ಲಭಿಸಿತು. ನನ್ನ ಓರ್ವ ಹಿತೈಷಿಯಾದ ಫಕೀರ್ ಮುಹಮ್ಮದ್ ಸಾಹೇಬರು ರಾಯಚೂರಿನಲ್ಲಿ ನಿಜಾಮ ಸರ್ಕಾರದ ನೌಕರಿಯಲ್ಲಿದ್ದರು. ಒಂದು ಪತ್ರವನ್ನು ಕೊಟ್ಟು ಹೀಗೆ ಹೇಳಿದರು. ನನ್ನ ಮುರ್ಷದ್ ಸೈಯ್ಯದ್ ಶಾಹ್ ಬುರ್ಹಾನುದ್ದೀನ್ ಅಲ್ ಹುಸೈನಿ ಅಲ್ ಖಾದ್ರಿ ಅಲ್‌ಶತ್ತಾರಿ ಸಿಬಗತ್‌ಲ್ಲಾಹಿ ಮದ್ರಾಸಿನಲ್ಲಿ ಮಲ್‌ಖಡಿಯಲ್ಲಿಯ ಜಾಮಬಜಾರ್ ಓಣಿಯಲ್ಲಿ ಇರುವರು. ಕೇಳಿ ತಲುಪಿಸಿರಿ ಹಾಗೂ ನೀವೂ ಸಹ ಹಜ್ರತ್‌ರ ದರ್ಶನ ಫಲ ಪಡೆಯಿರಿ. ನಾನು ನನ್ನ ವ್ಯವಹಾರದಲ್ಲಿಯೇ ಬಿಡುವು ಸಿಗದೇ ಇರುವದರಿಂದ ಆ ಪತ್ರವನ್ನು ತಲುಪಿಸಲಾಗಲಿಲ್ಲ.

ಯಾವಾಗ ರಾಯಚೂರಕ್ಕೆ ಮರುಳುವ ದಿನದಂದು ನಾನಿದ್ದ ಪಟ್ಟಣದಿಂದ ಮಲ್‌ಖಿಡಿಗೆ ಬಂದೆನು ಹಾಗೂ ಹಜ್ರತ್‌ರ ಮನೆಗೆ ತಲುಪಿದೆನು. ಆಗಲೇ ಹಜ್ರತ್‌ರು ಸಭೆಯಿಂದ ನಿರ್ಗಮಿಸಿದ್ದರು. ಅಲ್ಲಿ ಹಾಜರಿದ್ದವರಲ್ಲಿಯ ಓರ್ವ ಶ್ರದ್ಧಾಳು ಬಹಾವುದ್ದೀನ್ ಸಾಹೇಬರು ಹಜ್ರತ್‌ರಿಗೆ ನಾನು ಭೇಟಿಯಾಗುವ ಕುರಿತು ತಿಳಿಸಿದರು. ನಾನು ಅವರ ಮನೆಯಲ್ಲಿ ಕೂತಾಗ ನೋಡುತ್ತೇನೆ ಈ ಮನೆಯು ಅದೇ ಮನೆಯಾಗಿದೆ ಯಾವುದನ್ನು ನಾನು ಸ್ವಪ್ನದಲ್ಲಿ ನೋಡಿದ್ದೆನು ಹಾಗೂ ಕೋಣೆಯ ಬಾಗಿಲೂ ಸಹ ಹಾಗೆಯೇ ಮುಚ್ಚಲ್ಪಟ್ಟಿದೆ. ಮತ್ತು ಫಲಕವು ಹಾಗೆಯೇ ತೂಗಲ್ಪಟ್ಟಿದೆ. ಅದರ ಮೇಲೆ ಅಲ್ಲಾಹು ಹಾಗೂ ಮುಹಮ್ಮದ್(ಸ)ರ ಹೆಸರೂ ಸಹ ಬರೆಯಲ್ಪಟ್ಟಿದೆ. ಇಷ್ಟು ನೋಡುತ್ತಲೇ ನಾನು ನಾನಾಗಿ ಉಳಿಯಲಿಲ್ಲ. ಸಂತೋಷದ ಸಂಭ್ರಮದಲ್ಲಿ ಮುಳಿಗೆದ್ದೆನು. ಇದೇ ಸಮಯದಲ್ಲಿ ಕೋಣೆಯ ಬಾಗಿಲು ತೆರೆಯಿತು. ಹಾಗೂ ಹಜ್ರತ್‌ರು ಹೊರಬಂದರು. ನೋಡುತ್ತೇನೆ ಸ್ವಪ್ನದಲ್ಲಿ ಕಂಡ ಮಹಾಪುರುಷರೂ ಇವರೇ ಆಗಿರುವರು. ಯಾರು ನನಗೆ 'ಕುರ್‌ಆನ್ ಷರೀಫನ್ನು' ನೀಡಿದ್ದರು. ನೋಡುತ್ತಲೇ ಗೌರವದಿಂದ ತಲೆ ಬಾಗಿದೆನು. ಹಾಗೂ ಜನಾಬ್ ಫಕೀರ್ ಮುಹಮ್ಮದ್ ಸಾಹೇಬರು ನೀಡಿದ್ದ ಪತ್ರವನ್ನು ಹಜ್ರತ್‌ರಿಗೆ ತಲುಪಿಸಿದೆನು. ಹಾಗೂ ಮನಸ್ವೀಪೂರ್ವಕವಾಗಿ 'ಬೈಯ್ಯತ್' ನೀಡಲು ವಿನಂತಿಸಿದೆನು. ಹಜ್ರತ್‌ರು ಸಹ ಸಮೃದ್ಧಿದಾಯಕವಾದ 'ಬೈಯತ್' ನೀಡಿದರು. ರಾಯಚೂರಕ್ಕೆ ಅಂದೇ ಮರಳುವದು ನಿಶ್ಚಯವಾಗಿತ್ತಾದರೂ ಮನಸ್ಸು ಬದಲಿಸಿ ಹಜ್ರತ್‌ರ ಸೇವೆಯಲ್ಲಿ ೨-೩ ದಿನಗಳವರೆಗೆ ತೊಡಗಿ ನಂತರ ಮರಳಿದೆನು.

ಹಜ್ರತ್ ಪೀರ್(ಖ)ರು 'ತಸರ್ರೂಫಾತೆ ಬುರ್ಹಾನಿಯ' ಲೇಖಕನಿಗೆ ಹೀಗೆ ಹೇಳಿದರು. ಬಾವಾ ಹಾಜಿ ದಾವೂದ್ ಸಾಹೇಬರು ಬೈಯ್ಯತ್‌ದ ವೇಳೆಯಲ್ಲಿ ಯಾವಾಗ ಈ ಫಕೀರನ ಕೈಯಲ್ಲಿ ಕೈಯನ್ನಿಟ್ಟಾಗ ಮೂರ್ಛಿತರಾಗಿದ್ದರು. ಅಲ್ಲಾಹುವು ಅವರಿಗೆ ನೇರದಾರಿ ಕಲ್ಪಿಸಿದನು. ಹಾಗೂ ಹಾಜಿಸಾಹೇಬರ ವಿವರಣೆಯಿದೆ ಬೈಯ್ಯತ್‌ದ ವೇಳೆ ನನ್ನ ಹಸ್ತವು ಹಜ್ರತ್ ಪೀರ್ ದಸ್ತಗೀರರ ಕೈಯಲ್ಲಿರುವಾಗ ಏನಿತ್ತು ಹಜ್ರತ್ ಮುಹಮ್ಮದ್(ಸ)ರ ಕೈಯಲ್ಲಿಯೇ ಇತ್ತೆಂದು ಭಾಸವಾಯಿತು. ಸುಬಹಾನಲ್ಲಾಹ್! ಹೀಗಾಯಿತು. ಅಲ್ಲಾಹು ಕುರ್‌ಆನಿನಲ್ಲಿ ಮುಹಮ್ಮದ್(ಸ) ರೊಂದಿಗೆ ಹೇಳುತ್ತಾನೆ- ಇನ್ನಲ್ಲಝೀನ ಯುಬಾಯಿ ಊನಕ ಇನ್ನಮಾ ಯೂಬಾಯಿ ಊನಲ್ಲಾಹ್: ಯದುಲ್ಲಾಹಿ ಫೌಕ ಐದಿಹಿಮ್(ಸೂರೆ ಫತಃ/ಆಯತ್) 'ಯಾರು ನಿಮ್ಮೊಂದಿಗೆ ಕೈಗೂಡಿಸುವರೋ ಅವರು ಅಲ್ಲಾಹುವಿನೊಂದಿಗೆ ಕೈಗೂಡಿಸುತ್ತಾರೆ, ಅಲ್ಲಾಹುವಿನ ಹಸ್ತವು ಹಜ್ರತ್‌ರ ಮೇಲಿದೆ. ಒಂದುವೇಳೆ ದಕ್ಷರಾದ ಮುರ್ಷದ್‌ರು ಸಿಕ್ಕರೆ ಮುರೀದ್‌ರ ಬಯಕೆಗಳೆಲ್ಲವೂ ಪೂರ್ತಿಯಾಗುತ್ತವೆ. ಜಜಾಕಮ್ ಅಲ್ಲಾಖೈರ್ (ಅಲ್ಲಾಹುವಿನ ದಯೆಯು ವರ್ಷಿಸುತ್ತದೆ)

ಮೌಲ್ವಿ ತಜಮ್ಮೂಲ್ ಹುಸ್ಯೆನ್‌ಖಾನ್ ಬಹಾದ್ದೂರ್‌ರ ವಿವರಣೆಯಿದೆ ಯಾವಾಗ ನಾನು ನನ್ನ ಪೀರರಾದ ಮೌಲ್ವಿ ಮುಹಮ್ಮದ್ ಅಬ್ದುಲ್‌ಗಫ್ಫೂರ್ ಖಾನ್ ಮುಜ್ಜದ್ದೀದಿ. ನಕ್ಷಬಂದಿ ಷಹಾ ಜಹಾಂಪುರಿಯವರ ಸೇವೆಯಲ್ಲಿ ತೊಡಗುವದಕ್ಕಾಗಿ ಮದ್ರಾಸಿನಿಂದ ಅಲೀಗಢ ಜಿಲ್ಲೆಯ ಬೇಕಹಂಪುರಕ್ಕೆ ಹೋದಾಗ ಪೀರ್‌ರು ಇದೇ ಸಮಯದಲ್ಲಿ ನನ್ನಿಂದ ಹೀಗೆ ಕೇಳಿದರು. ಏನು, ಮದ್ರಾಸಿನಲ್ಲಿ ಯಾರಾದರೂ ಸೂಫಿ ವಂಶಸ್ಥರು ಇರುವರೇ? ನಾನೆಂದೆನು ಹೌದು, ಜನಾಬ್ ಸೈಯ್ಯದ್ ಶಾಹ್ ಬುರ್ಹಾನುದ್ದೀನ್ ಅಲ್ ಹುಸೈನಿ ಖಾದ್ರಿ(ಖು) ಇರುವರು. ಪೀರ್‌ರು ಮತ್ತೆ ಕೇಳಿದರು. ಏನು ಅವರು ವೃದ್ಧರಾಗಿದ್ದಾರೆಯೇ ನಾನೆಂದೆನು ಹೌದು! ಏನು ಖಾದ್ರಿ ಪಂಥದಲ್ಲಿ ಬೈಯ್ಯತ್ ಮಾಡುವರೇ ನಾನೆಂದೆನು ಹೌದು, ಮತ್ತೆ ಯಾರಿರುವರು? ನಾನು ಇನ್ನಿಬ್ಬರ ಹೆಸರನ್ನು ತೆಗೆದುಕೊಂಡೆನು. ಹಜ್ರತ್‌ರು ಮತ್ತೆರಡು ಹೆಸರು ಕೇಳಿ ನಿರ್ಲಕ್ಷಿಸಿದರು ಹಾಗೂ ಅವರ ಹೆಸರನ್ನು ತೆಗೆದುಕೊಳ್ಳಬೇಡಿರಿ ಎಂದರು. ಅವರ ಮುಖದ ಮೇಲೆ ಹಜ್ರತ್‌ರ ವಿವರಣೆ ಆಲಿಸುವಾಗ ಇದ್ದ ಉತ್ಸುಕತೆ ಹಾಗೂ ಪ್ರಸನ್ನತೆ ಈ ಜನರ ಹೆಸರು ಕೇಳಿದಾಗ ಇರಲಿಲ್ಲ. ನನ್ನ ನಂಬಿಕೆಗೆ ಹಜ್ರತ್ ಪೀರ್ ದಸ್ತಗೀರ್‌ರ ಮೇಲೆ ಇನ್ನಷ್ಟು ಪುಷ್ಟಿ ಸಿಕ್ಕಿತು. ಹಾಗೂ ಸದಾಕಾಲ ಅವರ ಮುರೀದ್‌ನಂತೆಯೇ ಅವರ ಸೇವೆಯಲ್ಲಿ ಹಾಜರಾಗತೊಡಗಿದೆನು.

ಏನೆಂದರೆ ಉಪರೋಕ್ತ ಬಹಾದ್ದೂರ್ ಮೌಲ್ವಿ ತಜಮ್ಮುಲ್ ಹುಸ್ಯೆನ್‌ಖಾನ್‌ರ ವಿವರಣೆಯೂ ಇದೆ ನಾನು ಒಂದು ದಿನ ನನ್ನ ಚಂಚಲ ಮನಃಸ್ಥಿತಿಯ ತೊಂದರೆಗೊಳಗಾಗಿ ಕೆಟ್ಟಕೆಟ್ಟ ಯೋಚನೆಗಳು ಬರತೊಡಗಿರುವದರಿಂದ ಹಜ್ರತ್‌ರ ಸನ್ನಿಧಿಯಲ್ಲಿ ಒಂದಿರುಳು ಹಾಜರಾದೆನು. ಹಾಗೂ ಇನ್ನೇನು ನನ್ನ ಮನದ ಸ್ಥಿತಿಯನ್ನು ವಿವರಿಸಬೇಕು. ನಾನು ಏನಾದರೂ ಹೇಳುವ ಮೊದಲೇ ಹಜ್ರತ್‌ರು ನನ್ನೆಡೆಗೆ ದೃಷ್ಟಿಬೀರಿ ಹೀಗೆಂದರು ಬಾವಾ! ಈ ಮನಸ್ಸಿಗೆ ಅಲ್ಲಾಹುವು ಈ ಶಕ್ತಿಯನ್ನು ನೀಡಿರುವನು. ನೀವು ಯಾವ ಕಡೆಗೆ ಹೊರಳಿಸುವಿರೋ ಆ ಕಡೆಗೆ ಹೊರಳುವದು, ಯಾವ ಕಡೆಗೆ ಹೆಚ್ಚು ವಾಲುವುದೋ ಮನುಷ್ಯನನ್ನು ಆ ಕಡೆಗೆಯೇ ಒಯ್ಯುವುದು ಮನಸ್ಸಿನ ಸ್ಥಿತಿಯು ಒಂದು ವೇಳೆ ಹೀಗೆ ವಿಪರೀತವಾಗಿದ್ದರೆ ದೂರ ಮಾಡಿ ಒಳಿತಿನೆಡೆಗೆ ತಿರುಗಿಸಿ ಅಲ್ಲಾಹುವಿನ ಸ್ಮರಣೆಯಲ್ಲಿ ಏಕೆ ತೊಡಗಿಸಿಕೊಳ್ಳುವದಿಲ್ಲ. ಗೌರವಾನ್ವಿತರಾದ ಬಹಾದ್ದೂರರ ವಿವರಣೆ ಹೀಗಿದೆ. ಹಜ್ರತ್ ಪೀರ್ ದಸ್ತಗೀರ್‌ರು ಈ ವಿವರಣೆಯನ್ನು ಈ ತೆರನಾಗಿ ನೀಡಿದರು. ತಕ್ಷಣವೇ ನನಗೆ ಸಂತೃಪ್ತಿಯ ಭಾವ-ಅನುಭವವಾಯಿತು. ಹಾಗೂ ನಾನು ನನ್ನ ಕೆಟ್ಟ ಯೋಚನೆಗಳ ಮೇಲೆ ನಿಯಂತ್ರಣ ಸ್ಥಾಪಿಸಿದೆನು.

ಉಪರೋಕ್ತ ಬಹಾದ್ದೂರರ ವಿವರಣೆಯಿದೆ. ಹಜ್ರತ್ ಪೀರ್ ದಸ್ತಗೀರರ ಸನ್ನಿಧಿಯಲ್ಲಿ

ಪದೇ ಪದೇ ಹಾಜರಾಗುತ್ತಿದ್ದೆನು. ಯಾವಾಗ ಹಾಜರಿ ನೀಡುತ್ತಿದ್ದೆನೋ ಆಗೆಲ್ಲ ನನಗೆ ಜಪತಪದ ಆದೇಶವಾಗುತ್ತಿತ್ತು. ಒಂದು ಸಲ ನಾನು ಅತೀವ ಚಿಂತಿತನಾಗಿ ಹಜ್ರತ್‌ರ ಎದುರು ಹಾಜರಾದೆನು. ಆಗ ಹಜ್ರತ್‌ರು ನನ್ನಸ್ಥಿತಿ ಅರಿತು ತುಂಬಾ ದಯಾಳುವಾಗಿ 'ಯಾ ಶೇಖ ಅಬ್ದುಲ್ ಖಾದಿರ್ ಜೀಲಾನಿ ಶೈನಲ್ಲಾಹ್'ದ ಜಪ ಮಾಡಲು ಅನುಮತಿಸಿದರು. ಹಾಗೂ ಹೀಗೆಂದರು ತಕ್ಷಣ ಹೋಗಿ ಪ್ರಾರಂಭಿಸು ನಾನು ಅವರ ಆದೇಶವನ್ನು ಅಕ್ಷರಶಃ ಪಾಲಿಸಿದೆನು. ಯಾವಾಗ ಚಿಲ್ಲಾ(ಒಂದು ಅವಧಿಯವರೆಗೆ ಏಕಾಂತದಲ್ಲಿ ಮುರ್ಷಿದ್‌ರು ಹೇಳಿರುವ ಆಯಾ ಸಮಯದಲ್ಲಿ ನಿರಂತರವಾಗಿ, ಜಪ ಮಾಡುವದಕ್ಕೆ ಚಿಲ್ಲಾ ಎನ್ನುವರು) ಮುಗಿಯುತ್ತಿದ್ದಂತೆಯೇ ಕೊನೆಯ ದಿನದಂದು ನನಗೆ ಕನಸಿನಲ್ಲಿ ಹೀಗೆ ಕಂಡುಬಂದಿತು. ನಾನು ಸಂಗಾತಿಗಳೊಂದಿಗೆ ಹಜ್ರತ್ ತಮೀಮ್ ಅನ್ಸಾರಿ(ರ)ರ ಜಿಯಾರತ್‌ಗಾಗಿ ಕೋಲಮ್‌ಕ್ಕೆ ಹೋದೆನು. ದೋಣಿಯಿಂದ ಇಳಿದು ಪವಿತ್ರ ಸಮಾಧಿಸ್ಥಳದೆಡೆಗೆ ಹೊರಟಾಗ ನೋಡುತ್ತೇನೆ. ಆ ಕಡೆಯಿಂದ ಓರ್ವ ವೃದ್ಧರು ಗೋಧಿ ವರ್ಣದವರು, ತೆಳ್ಳಗಿದ್ದರು. ಎದುರಿಗೆ ಬಂದರು. ಅವರು ನನ್ನೊಂದಿಗೆ ಹೇಳಿದರು. ಈ ಮಹಾಪುರುಷರು ಈ ಸ್ಥಳದ 'ಕುತುಬ್' ಇರುವರು. ನಾನು ಯಾವಾಗ ಜನರಿಂದ ಈ ಮಾತು ಕೇಳಿದೆನೋ ಸಂಗಾತಿಗಳಿಂದ ದೂರ ಸರಿದು ಹಜ್ರತ್‌ರಿಗೆ ಸಲ್ಲಾಂ ಸಲ್ಲಿಸಿ ಅವರೊಂದಿಗೆ ಹೋದೆನು. ನನ್ನ ಪ್ರತಿಯೊಂದು ಬಯಕೆಗಳ ಪೂರ್ತಿಗಾಗಿ ವಿನಂತಿಸುತ್ತಾ ಅವರ ಹಿಂದೆ ಹಿಂದೆ ನಡೆದೆನು. ಆ ಮಹಾಪುರುಷರು ಸಂಕೋಚಪಟ್ಟರು ಆದರೆ ನಾನು ನನ್ನ ಹಟ ಬಿಡಲಿಲ್ಲ. ಅವರು ಎಷ್ಟು ಸಾಧ್ಯವೋ ಅಷ್ಟು ವೇಗವಾಗಿ ಅಲ್ಲಿಂದ ಹೋದರು. ಕಾಲ ಕೆಳಗಿನ ಭೂಮಿಯೇ ಸರಿಯುತ್ತಿದೆ ಎಂದೆನಿಸಿತು ಹಾಗೂ ನಾನೂ ಸಹ ಅವರ ಹೆಜ್ಜೆಯಲ್ಲಿ ಹೆಜ್ಜೆಯಿಡುತ್ತಾ ಅವರಷ್ಟೇ ವೇಗವಾಗಿ ಅವರ ಹಿಂದೆ ಸಾಗಿದೆನು. ಸ್ವಲ್ಪ ಹೊತ್ತಿನಲ್ಲಿಯೇ ಸಾವಿರಾರು ಮೈಲುಗಳ ಅಂತರವನ್ನು ನೀಗಿಸಿ ಆ ವೃದ್ಧರ ಜೊತೆ ಒಂದು 'ದರ್ಗಾ'ದಲ್ಲಿ ಹೋದೆನು. ಅಲ್ಲಿ ಹೋಗಿ ಆ ವೃದ್ಧರು ಸಮಾಧಿಯ ಮೇಲೆ ಹೂವಿನ ಚಾದರ ಅರ್ಪಿಸಿದರು. ಹಾಗೂ ಫಾತೆಹಾ ನೀಡಿ ದರ್ಗಾದ ಹೊರಗೆ ಹೋಗ ಬಯಸುತ್ತಿದ್ದರು. ನಾನು ಅವರ ಉಡಿಯನ್ನು ಹಿಡಿದುಕೊಂಡೆನು. ಹಾಗೂ ಅವರೆದುರು ಆ ಸಮಾಧಿಯ ಆಣೆ ನೀಡಿ ನನ್ನ ಬಯಕೆ ಪೂರೈಸಲು ಕೇಳಿಕೊಂಡೆನು ಆ ವೇಳೆ ಆ ವೃದ್ಧರು ಹೀಗೆಂದರು. ನೀವು ಬಹಳ ದೊಡ್ಡ ಪ್ರಮಾಣದ ಆಣೆ ನೀಡಿದ್ದೀರಿ ಹೀಗಾಗಿ ಅನಿವಾರ್ಯವಾಗಿ ಒಂದು 'ಜಪ' ನೀಡುವೆನು ನೀವು ರಾತ್ರಿಯ ಮೂರನೆಯ ಪ್ರಹರದಲ್ಲಿ ಸ್ನಾನಮಾಡಿ ಅಂಗಶುದ್ಧಿಯೊಂದಿಗೆ ಜಪಿಸಿರಿ ನಿಮ್ಮ ಬಯಕೆಗಳು ಈಡೇರುವವು. ಇದನ್ನು ಹೇಳಿ ಒಂದು 'ಕಾಗದ'ವನ್ನು ನನಗೆ ನೀಡಿದರು. ನಾನು ಕುತೂಹಲದಿಂದ ಆ ಕಾಗದವನ್ನು ಆಗಲೇ ಓದಬಯಸಿದೆ. ಆದರೆ ಅದೇ ವೇಳೆಯಲ್ಲಿ ಮನೆಯವರು ಯಾವುದೇ ಕೆಲಸಕ್ಕಾಗಿ ನನ್ನನ್ನು ಎಚ್ಚರಿಸಿದರು. ನಾನು

ತುಂಬಾ ವಿಹ್ವಲಿತಗೊಂಡು ಹಜ್ರತ್‌ಪೀರ್ ದಸ್ತಗೀರ್‌ರ ಸೇವೆಯಲ್ಲಿ ಹಾಜರಾಗಿ ವಿಷಯ ವಿವರಿಸಿದೆನು. ಹಜ್ರತ್‌ರೆಂದರು. ನೀನು ಬಹಳೇ ದುರಾದೃಷ್ಟದವನಾಗಿದ್ದಿ ಇಂಥಹ ಅಮೂಲ್ಯವಾದ ಸಂಪತ್ತು ನಿನ್ನ ಕೈಯ್ಯಿಂದ ಜಾರಿ ಹೋಯಿತು. ನಾನೆಂದೆನು ಮತ್ತೆ ಅದನ್ನು ಪಡೆಯಲು ಇರುವ ದಾರಿ ಯಾವುದು? ತಿಳಿಸಿರಿ. ಹಜ್ರತ್‌ರೆಂದರು ಈಗ ಇದರ ಹೊರತಾಗಿ ಬೇರೆ ದಾರಿಯಿಲ್ಲ.ನೀನು ಈ ಉದ್ದೇಶ ಪೂರ್ತಿಗಾಗಿ ಹಜ್ರತ್ ತಮೀಮ್ ಅನ್ಸಾರಿ(ರ) ಅವರ ದರ್ಗಾ ಷರೀಫಕ್ಕೆ ಹೋಗಿ ವಿನಂತಿಸು. ಆದೇಶದಂತೆ ಹಾಗೆಯೇ ಮಾಡಿದೆ ನಿರಂತರ ೩ ದಿನಗಳವರೆಗೆ ಸತತವಾಗಿ ಅತ್ಯಂತ ನಮ್ರತೆಯಿಂದ ಬೇಡಿಕೊಳ್ಳುತ್ತಲಿದ್ದೆ ೩ನೆಯ ದಿನ ಸ್ವಪ್ನದಲ್ಲಿ ಓರ್ವ ವೃದ್ಧರು ಆಗಮಿಸಿ ಹೀಗೆ ಹೇಳಿದರು. ನೀನು ಮದೀನಾ ಮುನವ್ವರಾಕ್ಕೆ ಹೋಗು ಅಲ್ಲಿ ನಿನ್ನ ಉದ್ದೇಶ ಪೂರ್ತಿಯಾಗುವದು. ನಾನು ಯಾವಾಗ ಈ ವಿಷಯವನ್ನು ಹಜ್ರತ್‌ರೊಂದಿಗೆ ಪ್ರಸ್ತಾಪಿಸಿದೆನು ಹಜ್ರತ್‌ರೆಂದರು ಹೋಗು! ಈಗ ಉದ್ದೇಶ ಈಡೇರುವ ದಾರಿ ಸಿಕ್ಕಿತು.

ಜೀಖಾಯಿದಾದ ೨೦ನೆಯ ದಿನಾಂಕ, ಹಿಜ್ರಿಶಕೆ ೧೩೯೮ರಲ್ಲಿ ೨೧ನೆಯ ರಾತ್ರಿಯಂದು ಹಜ್ರತ್‌ಪೀರ್ ದಸ್ತಗೀರ್(ಖು)ರವರು ರೋಗಗ್ರಸ್ತರಾದರು. ತಕ್ಷಣವೇ ಹಕೀಂ ಮುಹಮ್ಮದ್ ಗೌಸ್ ಸಾಹೇಬರ ಚಿಕಿತ್ಸೆಯು ಪ್ರಾರಂಭವಾಯಿತು. ಆದರೆ ಸಂತೃಪ್ತಿದಾಯಕ ಪರಿಣಾಮ ಕಂಡು ಬರಲಿಲ್ಲ. ಏಕೆಂದರೆ ಈ ಅನುವಾದಕಾರನು ಹಜ್ರತ್‌ರ ಎದುರಿನಲ್ಲಿದ್ದನು. ನಾಲ್ಕೂ ಕಡೆಗೆ ಪತ್ರಗಳನ್ನೂ, ತಂತಿ–ಮೂಲಕವೂ, ಶಿಷ್ಯವೃಂದ ಹಾಗೂ ಖಲೀಫಾಗಳಿಗೆ ತಿಳಿಸಲಾಯಿತು. ಮರುದಿನವೇ ಸೈಯ್ಯದ್ ಶಾಹ್ ರೋಶನ್ ಅಲಿ ಸಾಹೇಬ್ ಖಾದ್ರಿಯವರು ತಮ್ಮ ಕುಟುಂಬದೊಂದಿಗೆ ರಾಯಚೂರಿನಿಂದ ಮದ್ರಾಸಕ್ಕೆ ಆಗಮಿಸಿದರು.

ಸೈಯ್ಯದ್ ಶಾಹ್ ಸದರ್‌ಆಲಂ ಸಾಹೇಬ್ ಖಾದ್ರಿಯವರು ಕೊಯಂಬತ್ತೂರನಿಂದ ಸೈಯ್ಯದ್‌ಶಾಹ್ ಹೈದರ್‌ಅಲಿಸಾಹೇಬ್ ಖಾದ್ರಿ ಹಾಗೂ ಸೈಯ್ಯದ್‌ಶಾಹ್ ಅಮೀನುದ್ದೀನ್ ಖಾದ್ರಿ ಅರ್ಕಾಟಿನಿಂದ ಹಜ್ರತ್‌ಖಾದ್ರಿ ಖತ್ತೀಬ್ ಅದೋನಿಯಿಂದ ಹಾಜರಾದರು. ಶಿಷ್ಯರು ಹಾಗೂ ಹಿತೈಷಿಗಳು ನೆಲ್ಲೂರು, ವೆಲ್ಲೂರ, ಬೆಂಗಳೂರು, ಮೈಸೂರು, ರಾಯಚೂರು, ಹೈದರಾಬಾದ್ ಹಾಗೂ ಸುತ್ತಲಿಂದ ಬರತೊಡಗಿದರು. ಹಾಗೂ ಪ್ರತಿಕ್ಷಣ ಗುಂಪುಗುಂಪಾಗಿ ಆಗಮಿಸಿ ಹಜ್ರತ್‌ರ ಕದಂಬೋಸಿಗೈದು ಸಮೃದ್ಧಿ ಹೊಂದುತ್ತಿದ್ದರು. ರೋಗಾವಸ್ಥೆಯಲ್ಲಿಯೂ ಬೈಯ್ಯತ್ ತೆಗೆದುಕೊಳ್ಳುವವರ ಸಂಖ್ಯೆಯು ಇಮ್ಮಡಿ, ಮುಮ್ಮಡಿಯಾಯಿತು. ಪ್ರತಿದಿನ ಬೆಳಿಗ್ಗೆ ಹಾಗೂ ಸಾಯಂಕಾಲ ಬೈಯ್ಯತ್‌ದ ಸಮಾರಂಭ ಏರ್ಪಡುತ್ತಿತ್ತು. ದಿನನಿತ್ಯ ನೂರಾರು ಜನ 'ಮುರೀದ್' (ಶಿಷ್ಯ)ರಾಗುತ್ತಿದ್ದರು. ಈ ದಿನಗಳಲ್ಲಿ ಹಾಜಿ, ಮೌಲ್ವಿ ಸೈಯ್ಯದ್ ಮುಹಮ್ಮದ್ ಇಸ್ಹಾಕ್ ಸಾಹೇಬ್

ತರಾಜಶ್‌ಖಾನ್ ಬಹಾದ್ದೂರ ಎಂದು ಪ್ರಸಿದ್ಧರಾದವರೂ ಸಹ ಯಾರು ಮದ್ರಾಸಿನಲ್ಲಿ ಮಹಾವಿದ್ವಾಂಸರಾಗಿದ್ದರು. ಹಾಜರಾಗಿ ಹಜ್ರತ್‌ರ ಪವಿತ್ರ ಹಸ್ತದಿಂದ ಬೈಯ್ಯತ್ ಪಡೆದರು. ಈ ಅವಧಿಯಲ್ಲಿ ಸುಮಾರು ೧೨೦೦ಕ್ಕಿಂತಲೂ ಹೆಚ್ಚು ಜನರು ಬೈಯ್ಯತ್ ಸಮೃದ್ಧಿ ಪಡೆದರು. ಈ ಬೈಯ್ಯತ್ ನೀಡುವ ಪರಂಪರೆಯು ಹಜ್ರತ್‌ರ ನಿಧನದ ಕ್ಷಣದವರೆಗೂ ಜಾರಿಯಲ್ಲಿತ್ತು.

ಹಜ್ರತ್ ಪೀರ್ ದಸ್ತಗೀರ್‌ರ ರೋಗಾವಸ್ಥೆಯು ದಿನದಿಂದ ದಿನಕ್ಕೆ ಉಲ್ಭಣಿಸುತ್ತಲೇ ಹೋಯಿತು. ಬಹಳಷ್ಟು ವೈದ್ಯರು ಚಿಕಿತ್ಸೆ ನೀಡಿದರೂ ಪರಿಣಾಮ ಕಂಡುಬರಲಿಲ್ಲ. ಸಾವಿಗಿಂತ ೮ ದಿನ ಮೊದಲು ಔಷಧಿ ಹಾಗೂ ಊಟವನ್ನು ತ್ಯಜಿಸಿದರು. ಸದಾಕಾಲ ಅಲ್ಲಾಹುವಿನ ಸ್ಮರಣೆಯಲ್ಲಿ ತನ್ಮಯರಾಗಿರುತ್ತಿದ್ದರು. ಮರಣದ ಗಳಿಗೆಯವರೆಗೂ ಉಪದೇಶ ಜಾರಿಯಲ್ಲಿಟ್ಟರು. ಪ್ರತಿಯೊಬ್ಬರ ಸಲುವಾಗಿ ಪ್ರಾರ್ಥಿಸುತ್ತಿದ್ದರು.

ಜಿಲ್‌ಹಜ್ಜಾದ ೧೮ನೆಯ ದಿನಾಂಕದಂದು ೧೩೪೮ಹಿಜ್ರಿಶಕೆಯಂದು ಬುಧವಾರದ ಮುಂಜಾವಿನಲ್ಲಿ ಸಂಪೂರ್ಣವಾಗಿ ಅಲ್ಲಾಹುವಿನತ್ತ ಚಿತ್ತ ನೆಟ್ಟರು. ಜಗದ ಪರಿವೆಯೇ ಇರಲಿಲ್ಲ. ಅವರ ಸುತ್ತಲೂ ಅವರ ಆಪ್ತರೆಲ್ಲರೂ ಸೇರಿದ್ದರು. ಬೆಳಿಗ್ಗೆಯ ೧೧ ಘಂಟೆಯ ಸುಮಾರಿಗೆ ಅಲ್ಲಾಹುವಿನ ನಾಮ ಸ್ಮರಿಸುತ್ತಲೇ ಪ್ರಾಣ ಪಕ್ಷಿ ಹಾರಿ ಹೋಯಿತು. 'ಇನ್ನಲಿಲ್ಲಾಹಿ ವ ಇನ್ನು ಇಲಹೆ ರಾಜೀಊನ್' ಮೌಲ್ವಿ ತಜಮ್ಮುಲ್ ಹುಸೈನ್‌ಖಾನ್ ಬಹಾದ್ದೂರರ ಉಲ್ಲೇಖವಿದೆ ನಾನು ಅಂದು ಬೆಳಿಗ್ಗೆ ೮ ಘಂಟೆಯ ಸಮಯಕ್ಕೆ ನಿದ್ರಾವಶನಾಗಿದ್ದೆ ಸ್ವಪ್ನದಲ್ಲಿ ನೋಡಿದೆನು. ಓರ್ವ ವ್ಯಕ್ತಿಯು ಹೀಗೆ ಹೇಳುತ್ತಿದ್ದಾನೆ. ಹಜ್ರತ್‌ಪೀರ್ ದಸ್ತಗೀರ್(ಖು) ಈ ಇಹಲೋಕದಿಂದ ಪರಲೋಕಕ್ಕೆ ಪಯಣ ಬೆಳೆಸಿದರು. ಈ ಸ್ವಪ್ನದಿಂದಾಗಿ ನನ್ನ ಕಣ್ತೆರೆಯಿತು. ವಿಹ್ವಲಿತನಾಗಿ ಮನೆಯಿಂದ ಹೊರಬಂದೆನು ಹಾಗೂ ಸೇವಕನಿಗೆ ತಕ್ಷಣವೇ ಸುದ್ಧಿ ತಿಳಿದು ಬರಲೆಂದು ಕಳುಹಿಸಿದೆ. ಆತ ಮರಳಿ ಬಂದಾಗ ಹಜ್ರತ್‌ರ ನಿಧನದ ಸುದ್ಧಿಯನ್ನು ತಂದನು. ಆಗ ಸುತ್ತ ಪ್ರದೇಶದಲ್ಲೆಲ್ಲಾ ವಿಷಾದದ ಛಾಯೆ ಆವರಿಸಿತು. ಹಾಗೂ ಎಲ್ಲೆಡೆಗೂ ಹಾಹಾಕಾರವೆದ್ದಿತು. ಸಾವಿರಾರು ಶಿಷ್ಯರು ಹಾಗೂ ಆಪ್ತರು ಹಾಗೂ ಸರ್ವ ಸಾರ್ವಜನಿಕರು ಹಜ್ರತ್‌ರ ಅಂತಿಮ ದರ್ಶನಕ್ಕೆಂದು ಆಗಮಿಸತೊಡಗಿದರು. ದಿನಪೂರ್ತಿ ಹಾಗೂ ಇರುಳಲ್ಲೂ ಇದೇ ಸ್ಥಿತಿ ಮುಂದುವರೆಯಿತು. ಎಷ್ಟು ಗದ್ದಲವಿತ್ತೆಂದರೆ ಮರುದಿನ ಗುರುವಾರ ಬೆಳಿಗ್ಗೆ ೭ ಗಂಟೆಗೆ ಮನೆಯಿಂದ ಶವಯಾತ್ರೆ ಹೊರಟಿತು. ಅಂದು ಜನಜಾತ್ರೆ ಎಷ್ಟಾಯಿತೆಂದರೆ ಪೊಲೀಸ್‌ಪಡೆಗೂ ತುಂಬಾ ತೊಂದರೆ ಅನುಭವಿಸಬೇಕಾಯಿತು. ಹಜ್ರತ್‌ರ ತಾಬೂತ್‌ದ ಮೇಲೆ ಆಚ್ಛಾದಿಸಿರುವ ಪುಷ್ಪಗಳನ್ನು ಸಮೃದ್ಧಿದಾಯಕವೆಂದು ಜನರು ಮುಗಿಬಿದ್ದು ನಾಲ್ಕಾರು ಹೂವು ಶ್ರದ್ಧೆಯೊಂದಿಗೆ ತೆಗೆದುಕೊಂಡು ಹೋಗುತ್ತಿದ್ದರು.

ತಾಬೂತ್ ೮ ಘಂಟೆಗೆ ಜಾಮಿಯಾ ಮಸೀದೆ ವಾಲಾಜಾಹಿಗೆ ತಲುಪಿತು. ಹಾಗೂ ಹಜ್ರತ್ ಮೀರಾಂ ಸೈಯ್ಯದ್‌ಶಾಹ್ ಮುಹಮ್ಮದ್ ಅಲ್ ಹುಸೈನಿ ಅಲ್‌ಖಾದ್ರಿಯವರು ಹಜ್ರತ್ ಸೈಯ್ಯದ್ ಶಾಹ್ ಕರೀಂ ಮುಹಮ್ಮದಲ್ ಹುಸೈನಿ ಸಿಬಗತ್‌ಲ್ಲಾಹಿಯವರ ಸಂತಾನದಿಂದಿರುವರು. ಅಂತಿಮ ಪ್ರಾರ್ಥನೆ(ಜನಾಜಾನಮಾಜ್) ಸಲ್ಲಿಸಿದರು. ನಂತರ ಇದೇ ಜನಜಂಗುಳಿಯೊಂದಿಗೆ ಹಜ್ರತ್‌ರ ತಾಬೂತನ್ನು ರೇಲ್ವೆಸ್ಟೇಷನಕ್ಕೆ ತರಲಾಯಿತು. ಅಂದು ನಗರಪಾಲಿಕೆಯ ವತಿಯಿಂದ ಹಜ್ರತ್‌ರ ಮನೆಯಿಂದ ಸ್ಟೇಷನ್‌ದವರೆಗೂ ಜಲಸಿಂಚನ ಮಾಡಲಾಗಿತ್ತು. ಹಾಗೂ ಸ್ಟೇಷನ್‌ದ ಒಳಗೆ ಪ್ಲಾಟ್‌ಫಾರ್ಮಿನ ಮೇಲೆ ರತ್ನಗಂಬಳಿ ಹಾಸಲಾಗಿತ್ತು. ಸ್ಪೇಷಲ್ ಟ್ರೈನ್ ಸಿದ್ಧವಿತ್ತು. ಪವಿತ್ರ ತಾಬೂತನ್ನು ಇಡಲಾಯಿತು. ಅದಕ್ಕಿಂತ ಮೊದಲು ರಾತ್ರಿ ಹಾಗೂ ಮುಂಜಾವಿನ ರೈಲಿನಿಂದ ಸಾವಿರಾರು ಜನರು ತಾಜಪುರ್ ಷರೀಫಕ್ಕೆ ಹೋಗಿದ್ದರು. ನವಾಬ್ ಸಾಹೇಬ್ ಪ್ರಿನ್ಸ್ ಆಫ್ ಅರ್ಕಾಟ್ ಹಾಗೂ ಅವರ ಸಹೋದರರು, ಅಮೀರರು ಹಾಗೂ ವಿದ್ವಾಂಸರು ಗೌರವಾನ್ವಿತರು, ಶಿಷ್ಯರು, ಆಪ್ತರು ಈ ವಿಶೇಷ ರೈಲಿನಿಂದ ಪ್ರಯಾಣ ಬೆಳೆಸಿ ೧ ಗಂಟೆಗೆ ಅರ್ಕಾಟ್ ತಲುಪಿದರು. ಅಲ್ಲಿಂದ ತಾಬೂತ್‌ನ್ನು ಇಳಿಸಿ ಜನಸಾಗರದೊಂದಿಗೆ ನಡೆಯುತ್ತಾ ಸಾಗಿದರು. ನವಾಬ್ ಪ್ರಿನ್ಸ್ ಆಫ್ ಅರ್ಕಾಟ್‌ರೂ ಸಹ ತಮ್ಮ ಮನೆಯಿಂದ ಮದ್ರಾಸಿನ ಸ್ಟೇಷನ್‌ವರೆಗೂ ಹಾಗೂ ಅರ್ಕಾಟಿನ ಸ್ಟೇಷನ್‌ದಿಂದ ತಾಜಪುರ್‌ವರೆಗೂ (ತಮ್ಮ ವಿಶೇಷ ವಾಹನವಿದ್ದರೂ ಅದನ್ನು ಬಳಸದೇ) ಶ್ರದ್ಧಾಪೂರ್ವಕ ಹೃದಯವನ್ನು ಭಾರವನ್ನಾಗಿಸಿಕೊಂಡು ಸುಮಾರು ೯ ಮೈಲಿನವರೆಗೆ ನಡೆಯುತ್ತಲೇ ಸಾಗಿದರು. ಇಂತಹ ಆಸ್ಥೆ, ನಮ್ರತೆ ಹಾಗೂ ವಿನಯದ ಪ್ರಕಟಣೆ, ಬೇರೆಯವರಲ್ಲಿ ಸಿಗುವದು ದುರ್ಲಭವೇ ಸರಿ. ಅಂತಿಮ ಯಾತ್ರೆಯಲ್ಲಿ ಭಾಗವಹಿಸಿದ ಜನರೆಲ್ಲರೂ ಹಜ್ರತ್‌ರ ವಿದಾಯದಿಂದಾಗಿ ಶೋಕತಪ್ತರಾಗಿದ್ದರು. ಆಗಲೇ ಸ್ವಲ್ಪ ಹೊತ್ತು ಆಕಾಶದಿಂದ ಮಳೆಯೂ ಸುರಿಯಿತು. ಈ ಜನಸಾಗರದ ಜೊತೆಗೆ ಸುತ್ತಮುತ್ತಲಿನ ಪ್ರದೇಶದಿಂದಲೂ ಸೂಫಿ ವಂಶಸ್ಥರು, ಶ್ರದ್ಧಾಳುಗಳು, ಹಿಂದೂ, ಮುಸ್ಲಿಂರೆಲ್ಲರೂ ಏಕಪ್ರಕಾರವಾದ ಶ್ರದ್ಧೆಯ ಪುಷ್ಪಗಳನ್ನರ್ಪಿಸಿದರು. ಅಪರಾಹ್ನ ನಮಾಜ್‌ನ ಹೊತ್ತಿನವರೆಗೂ ಜನ ಬರುತ್ತಲೇ ಇದ್ದರು. ಅಪರಾಹ್ನದ ನಮಾಜಿನ ನಂತರ (ಅಸರ್ ನಮಾಜ್) ಹಜ್ರತ್‌ರ ತಂದೆಯವರಾದ ಸೈಯ್ಯದ್ ಶಾಹ್ ಅಲಿ ಮುಹಮ್ಮದ್ ಅಲ್‌ಸಾನಿ ಅಲ್ ಹುಸೈನಿಯವರ ಪಾದದಡಿಯಲ್ಲಿ ಹಜ್ರತ್‌ರು ಸಮಾಧಿಸ್ಥರಾದರು. ಈಗ ಈ ಶ್ರದ್ಧಾಸ್ಥಳವು ಸಮೃದ್ಧಿದಾಯಕವಾಗಿ ಪರಿವರ್ತಿತವಾಗಿದೆ.

ಹಜ್ರತ್‌ರ ಪವಾಡಗಳ ಪ್ರಸಿದ್ಧಿಯು ಜನಸಾಮಾನ್ಯರಲ್ಲಿ ನಿತ್ಯದ ಮಾತಾಗಿತ್ತು. ಪ್ರಿನ್ಸ್ ಆಫ್ ಅರ್ಕಾಟ್ ನವಾಬ್ ಬಹಾದ್ದೂರ್ ಹಾಗೂ ಹಜ್ರತ್ ಪೀರ್ ಸಾಹೇಬ್‌ರು

ನಲ್ವತ್ತು ದಿನದ ಕಾರ್ಯಕ್ರಮಕ್ಕೆ ೨-೩ ದಿನ ಮೊದಲೇ ತಾಜಪುರಕ್ಕೆ ಆಗಮಿಸಿದರು. ಅಲ್ಲಿ ಅನಾವೃಷ್ಟಿಯಿಂದ ಉಂಟಾದ ಛಾಯೆ ಗಾಢವಾಗಿತ್ತು. ತಾಜಪುರ ಷರೀಫದ ಗುಮ್ಮಟಿನ ಬಳಿಯ ಕೆರೆಯು ಎಲ್ಲ ಕಡೆಗೂ ನೀರಿಗಾಗಿ ಸೌಲಭ್ಯ ಕಲ್ಪಿಸಲು ಮೂಲವಾಗಿತ್ತು. ಆದರೆ ಆ ಕೆರೆಯು ಒಣಗಿ, ನೀರಿಗಾಗಿ ಹಾಹಾಕಾರವೆದ್ದಿತ್ತು. ಕೆರೆಯ ಮಧ್ಯಭಾಗದಲ್ಲಿ ಅಲ್ಪ ಮಾತ್ರದ ನೀರು ಉಳಿದಿತ್ತು. ಸರಕಾರದ ವತಿಯಿಂದ ೧೦-೧೨ ಬಂಡಿಗಳಷ್ಟು ನೀರು ಸರಬರಾಜು ಮಾಡಲು ಯೋಚಿಸಿದರು. ಹಾಗೂ ಕೆರೆಯ ಹೂಳು ತೆಗೆಯಲು ಯೋಚಿಸಲಾಯಿತು. ಆದರೆ ೪ ಘಂಟೆ ಸುಮಾರಗೆ ಮೋಡಗಳು ಕಪ್ಪಾಗಿ, ಧಾರಾಕಾರ ಮಳೆ ಪ್ರಾರಂಭವಾಯಿತು. ಸ್ವಲ್ಪ ಸಮಯದಲ್ಲಿಯೇ ಕೆರೆಯು ತುಂಬಲ್ಪಟ್ಟಿತು. ಹೀಗೆ ಎಲ್ಲ ತೊಂದರೆಗಳು ನೀಗಿದವು. ಒಂದು ವಿಶೇಷವೆಂದರೆ ಈ ಮಳೆಯು ತಾಜಪುರದ ಹೊರತಾಗಿ ಸುತ್ತಮುತ್ತಲಿನ ಯಾವ ಪ್ರದೇಶದಲ್ಲೂ ಆಗಿರಲಿಲ್ಲ. ಇದು ಹಜ್ರತ್‌ರ ಪವಾಡವೆಂದು ಜನ ಬಗೆದರು.

ನಲ್ವತ್ತನೆಯ ದಿನದ ಕಾರ್ಯಕ್ರಮದ ಅಂಗವಾಗಿ 'ಫಾತೆಹಾ' ನೀಡಿದ ನಂತರ ರಾತ್ರಿ ಅತಿಥಿಗಳಿಗೆ ಊಟದ ವ್ಯವಸ್ಥೆ ಹಾಗೂ ಮರುದಿನ ಬೆಳಿಗ್ಗೆ ಸರ್ವರಿಗೂ ಭೋಜನ ಮಾಡಿಸಬೇಕು ಎಂದು ಯೋಚಿಸುತ್ತಿದ್ದರು. ಮತ್ತೆ ಯಾವಾಗ ಸಂಜೆಗೆ ಮಗರಿಬ್ ನಮಾಜ್ ನಂತರ ಅತಿಥಿಗಳ ಊಟ ಪ್ರಾರಂಭವಾಯಿತು. ಅದರೊಂದಿಗೆಯೇ ಸಾವಿರಾರು ಜನರ ಆಗಮನ ಪ್ರಾರಂಭವಾಯಿತು. ಹಾಗೂ ಗುಂಪುಗುಂಪಾಗಿ ಜನರು ಊಟಕ್ಕಾಗಿ ಬರುತ್ತಿದ್ದರು. ಏಕೆಂದರೆ ಹಜ್ರತ್‌ರ ಈ ಸ್ವಾಭಾವವಾಗಿತ್ತು. ಅವರ ಬಳಿಯಿಂದ ಯಾರೂ ಹಸಿವೆಯಿಂದ ಹೋಗುತ್ತಿರಲಿಲ್ಲ. ಇದೇ ಕಾರಣದಿಂದಾಗಿ ಇಡೀ ರಾತ್ರಿ ಅಡಿಗೆ ಸಿದ್ಧಗೊಳ್ಳುತ್ತಿತ್ತು. ಹಾಗೂ ಶ್ರದ್ಧಾಳುಗಳು ಸೇವಿಸುತ್ತಿದ್ದರು. ಮತ್ತೆ ಮರುದಿನ ಬೆಳಿಗ್ಗೆಯಿಂದ ಸಾಯುಂಕಾಲದವರೆಗೂ ಜನರು ಭೋಜನ ಸ್ವೀಕರಿಸುತ್ತಲಿದ್ದರು. ಈ ವ್ಯವಸ್ಥೆಯನ್ನು ವ್ಯವಸ್ಥಿತವಾಗಿಗೈಯ್ಯುವಲ್ಲಿ ಅನೇಕಾನೇಕ ಆಪ್ತರು ಮುಂದಾಳುಗಳಾಗಿದ್ದರು. ವಿಶೇಷವಾಗಿ ಸೈಯ್ಯದ್ ಗುಲಾಮ್ ರಸೂಲ ಸಾಹೇಬ್ ಹಾಗೂ ಮುಹಿಯುದ್ದೀನ್ ಹುಸೈನ್ ಸಾಹೇಬ್ ಉರ್ಫ್ ಮಿಯಾಜಾನಿ ಯಾರ ಶ್ರಮ ಹಾಗೂ ಪರಿಶ್ರಮದ ಊಹೆ ಮಾಡಲೂ ಸಾಧ್ಯವಿಲ್ಲ. ಅಲ್ಲಾಹು ಅವರ ಮೇಲೆ ದಯೆ ವರ್ಷಿಸಲಿ. ಈ ತೆರನಾದ ಬ್ರಹತ್ ವ್ಯವಸ್ಥೆಯು ಅತ್ಯಂತ ಸಹಜವಾಗಿ ಜರುಗಲು ಹಜ್ರತ್‌ರ ಕೃಪಾಶಿರ್ವಾದವೇ ಕಾರಣವೆಂದರೆ ಅತಿಶಯೋಕ್ತಿಯಲ್ಲ.

ನಿಧನದ ಸಮಯದಲ್ಲಿ ಹಜ್ರತ್‌ರ ವಯಸ್ಸು ೮೫ ವರ್ಷವಾಗಿತ್ತು. ದಿವಂಗತ ಹಜ್ರತ್ ಸೈಯ್ಯದ್ ಅಬ್ದುಲ್ ರೆಹಮಾನ್ ಸಾಹೇಬ್ ಉರ್ಫ್ ಸಾಹೇಬ್ ಪೀರಾಂ ಸಾಹೇಬ್‌ರ ಪುತ್ರಿಯಾದ ಹಾಷಿಂ ಬೀಬಿ ಸಾಹೇಬಾ ಉರ್ಫ್ ಬಡಿಬೀ ಸಾಹೇಬಾ ಹಜ್ರತ್‌ರ ಪತ್ನಿಯಾಗಿರುವರು.

ಹಜ್ರತ್ ಪೀರ ದಸ್ತಗೀರ್(ಖು)ರ ಸಂತಾನವಿರಲಿಲ್ಲ. ಆದರೆ ಹಜ್ರತ್‌ರ ದೊಡ್ಡಪ್ಪರ ಮಗಳು ಪೀರಾನ್ ಸಾಹೆಬ್ ಕಿಬ್ಲಾ ಇರುವರು.

ಹಜ್ರತ್ ಸೈಯ್ಯದ್ ಮಹಮೂದಲ್ ಹುಸೈನಿ ಅಲ್‌ಖಾದ್ರಿ ದಸ್ತಗೀರ್ ದೋ ಆಲಂ ಸಾನಿ(ಖು)ರ ಮೊಮ್ಮಗರಾದ ಹಜ್ರತ್ ಸಾನಿ ಸೈಯ್ಯದ್ ಶಾ ಅಲಿ ಮುಹಮ್ಮದಲ್ ಹುಸೈನಿ ಅಲ್ ಖಾದ್ರಿ ಅಲ್ ಶತ್ತಾರಿ ಸಿಬ್ಗತಲ್ಲಾಹಿ ಹಜ್ರತ್‌ರ ಪೀಠಾಧಿಕಾರಿಯಾಗಿ ಇರುವರು. ಹಾಗೂ ಇವರೇ ಹಜ್ರತ್ ತಾಜಪುರ ಷರೀಫ್‌ದ ಪೀಠಾಧಿಕಾರಿಯೂ ಆಗಿದ್ದಾರೆ. ಅತ್ಯಂತ ವಿನಯವಂತರು ಆಗಿರುವ ಹಜ್ರತ್‌ರಿಗೆ ಅವರ ಶಿಷ್ಯರು, ಹಿತೈಷಿಗಳು ಅನುಯಾಯಿಗಳು ಹಜ್ರತ್ ಪೀರ್ ದಸ್ತಗೀರ್(ಖು)ರಿಗೆ ಯಾವ ವಿಧವಾಗಿ ಗೌರವಾದರ, ಆಸ್ಥೆ, ಶ್ರದ್ಧೆಯೊಂದಿಗೆ ನಮ್ರತೆ ತೋರುತ್ತಿದ್ದರೋ ಅದೇ ವಿಧವಾಗಿ ಈ ಹಜ್ರತ್‌ರಿಗೂ ನೀಡುವರು.

ಹಜ್ರತ್ ಪೀರ್ ದಸ್ತಗೀರ್(ಖು)ರ ಖಲೀಫಾಗಳು :

೧) ಸೈಯ್ಯದ್ ಶಾಹ್ ಮುಹಮ್ಮದ್‌ಲ್ ಹುಸೈನಿ ಅಲ್‌ಖಾದ್ರಿ ಸಿಬ್ಗತಲ್ಲಾಹಿ ಯಾರು ಹಜ್ರತ್ ಸೈಯ್ಯದ್ ಮುಹಿಯುದ್ದೀನ್ ಹುಸೈನಿಯವರ ಪುತ್ರರೂ ಹಾಗೂ ಹಜ್ರತ್ ಸೈಯ್ಯದ್ ಶಾಹ್ ಜೈನುದ್ದೀನ್ ಅಲ್ ಹುಸೈನಿ ಇಬ್ನ ಸೈಯ್ಯದ್ ಮೀರಾಂ ಮುದರ್ರಿಸ್ ಅಲ್ ಹುಸೈನಿಯವರ ಸಂತಾನದಿಂದ ಇರುವರು. ೨೭ನೆಯ ಮೊಹರಮ್ ಹಿಜ್ರಿಶಕೆ ೧೨೯೪ರಲ್ಲಿ ಹಜ್ರತ್‌ರಿಂದ ಮದ್ರಾಸಿನಲ್ಲಿ ಬೈಯ್ಯತ್ ಹೊಂದಿದರು. ಹಾಗೂ ಅದೇ ವರ್ಷ ಶವ್ವಾಲ ತಿಂಗಳ ೯ನೆಯ ದಿನಾಂಕದಂದು ತಾಜಪುರ್ ಷರೀಫ್‌ದಲ್ಲಿ ಹಜ್ರತ್ ದಾದಾಪೀರ್(ಖು)ರಾರ ಉರುಸುತ್ಸವ ಸಂದರ್ಭದಲ್ಲಿ ಖಿಲಾಫತ್ ಪಡೆದರು.

೨) ಅನುವಾದಕರಾದ ಶಾಹ್ ಸೈಫುಲ್ಲಾಹ್‌ಖಾದ್ರಿ ಅಲ್ ಶತ್ತಾರಿ ಸಿಬ್ಗತ್‌ಲ್ಲಾಹಿ ಹಿಜ್ರಿಶಕೆ ೧೨೮೦ರಲ್ಲಿ ಹಜ್ರತ್ ಪೀರ್ ದಸ್ತಗೀರರಿಂದ ಬೈಯ್ಯತ್ ಪಡೆದರು. ಯಾವಾಗ ಅಲ್ಲಾಹುವಿನತ್ತ ಪರಿಪೂರ್ಣವಾಗಿ ಚಿತ್ತವು ಮಗ್ನವಾಗತೊಡಗಿತೋ ಆಗ ನಾಗೂರ್ ಷರೀಫಕ್ಕೆ ಹೋಗಿ ಚಿಲ್ಲಾ ಕೂತರು. ಷವ್ವಾಲದ ೯ನೆಯ ದಿನಾಂಕದಂದು ೧೩೦೩ ಹಿಜ್ರಿಶಕೆಯಂದು ಹಜ್ರತ್ ದಾದಾಪೀರ್ ಸಾಹೇಬ್ ಕಿಬ್ಲಾರ ಉರುಸಿನ ದಿನದಂದು ತಾಜಪುರ ಷರೀಫದಲ್ಲಿ ಖಿಲಾಫತ್‌ದ ಸಮೃದ್ಧಿಯನ್ನು ಹೊಂದಿದರು.

೩) ಹಜ್ರತ್ ಸೈಯ್ಯದ್ ಶಾಹ್ ಮುಹಿಯುದ್ಧೀನ್ ಹುಸೈನ್ ಖಾದ್ರಿ ಅವರು ಮೀರ್ ಇಮಾಮ್ ಅಲಿ ರಜದಿಯವರ ಪುತ್ರರಾಗಿರುವರು. ಯಾರು ಅರಬ್ಬಿ ವಿದ್ವಾಂಸರಾಗಿದ್ದರು. ಕುರ್‌ಆನ್‌ನ್ನು ಶ್ರಾವ್ಯವಾಗಿ ಪಠಿಸುವದರಲ್ಲಿ

ಹಾಗೂ ಕವಿತ್ವದಲ್ಲಿ ಪ್ರಭುತ್ವ ಸಾಧಿಸಿದ್ದರು. ಹಜ್ರತ್ ಸೈಯ್ಯದ್ ಉಮರ್ ಮೆಹಜಾರ್(ಋ)ರ ಪುತ್ರರಾದ ಸೈಯ್ಯದ್ ಮುಹಮ್ಮದಲ್ ಹುಸೈನಿ ಅಲ್ ಖಾದ್ರಿ ಅಲ್ ಶತ್ತಾರಿ ಸಿಬ್ಗತ್‌ಲ್ಲಾಹಿಯವರಿಂದ ಖಾದ್ರಿಯಾ ಪರಂಪರೆಯಲ್ಲಿ ಇವರಿಗೆ ಬೈಯ್ಯತ್ ಲಭಿಸಿತ್ತು. ಇವರು ರಜ್ಜಬ್ ತಿಂಗಳ ೨೬ನೆಯ ದಿನಾಂಕ ಹಿಜ್ರಿಶಕೆ ೧೩೦೪ರಂದು ಗುರುವಾರದಂದು ಮದ್ರಾಸಿನಲ್ಲಿ ಹಜ್ರತ್ ಪೀರ್ ದಸ್ತಗೀರ್(ಋ)ರ ಪವಿತ್ರ ಹಸ್ತದಿಂದ ಖಿಲಾಫತ್ ಪಡೆದರು. ಹಾಗೂ ಮೊಹರಮ್ ತಿಂಗಳ ೨೨ನೆಯ ದಿನಾಂಕ ಹಿಜ್ರಿಶಕೆ ೧೩೦೮ರಂದು ನಿಧನ ಹೊಂದಿದರು.

೪) ಹಜ್ರತ್ ಸೈಯ್ಯದ್ ಶಾಹ್ ಹೈದರ್ ಅಲಿ ರಜ್ವಿ ಖಾದ್ರಿ ಅಲ್ ಶತ್ತಾರಿ ಸಿಬ್ಗತ್‌ಲ್ಲಾಹಿ ಅವರು ಹಜ್ರತ್ ಸೈಯ್ಯದ್ ಶಾಹ್ ಜಲಾಲ್ ಬುಖಾರಿ ಖಾದ್ರಿ ಸೆಹರ್‌ವರ್ದಿ ಉರ್ಫ್ ಮಗ್ದೂಮ್ ಜಹಾಂನಿಂಯಾನ ಜಹಾನ್‌ಗಷ್ತ(ಋ)ರ ಸಂತಾನದಿಂದ ಇರುವರು ಹಾಗೂ ಇವರು ಅರ್ಕಾಟ್‌ದವರಾಗಿದ್ದಾರೆ. ಇವರೂ ೯ನೆಯ ಷವ್ವಾಲ ೧೩೦೪ ಹಿಜ್ರಿಶಕೆಯಂದು ತಾಜಪುರ ಷರೀಫದಲ್ಲಿ ಹಜ್ರತ್ ದಾದಾಪೀರ್ ಸಾಹೇಬ್ ಕಿಬ್ಲಾರ ಉರುಸಿನ ಸಂದರ್ಭದಲ್ಲಿ ಹಜ್ರತ್ ಪೀರ್ ದಸ್ತಗೀರರಿಂದ ಖಿಲಾಫತ್ ಪಡೆದರು.

೫) ಶಾಹ್ ಹಜ್ರತ್ ಸಾಹೇಬ್ ಖಾದ್ರಿ ಅಲ್‌ಶತ್ತಾರಿ ಸಿಬ್ಗತ್‌ಲ್ಲಾಹಿ ಅಧೋನಿಯ ಜಾಮಿಯಾ ಮಸೀದೆಯ ಖತೀಬರಾಗಿದ್ದರು. ಇವರು ಮೊಹರಂ ತಿಂಗಳ ೧೭ನೆಯ ದಿನಾಂಕ, ರವಿವಾರದಂದು ಹಿಜ್ರಿಶಕೆ ೧೩೦೬ರಲ್ಲಿ ಮದ್ರಾಸಿನಲ್ಲಿ ಬೈಯ್ಯತ್ ಹಾಗೂ ಖಿಲಾಫತ್ ಪಡೆದರು.

೬) ಹಾಜಿ ಸೈಯ್ಯದ್ ಶಾಹ್ ರೋಶನ್ ಅಲಿ ಖಾದ್ರಿ ಅಲ್ ಶತ್ತಾರಿ ಸಿಬ್ಗತ್‌ಲ್ಲಾಹಿ, ಮುಹಮ್ಮದಾಬಾದ್ ಅಂದರೆ ಬೀದರ್ ಜಿಲ್ಲೆಯ ಉದಗೀರ ಊರಿನವರು. ಪ್ರಸ್ತುತ ಈಗ ಅವರು ರಾಯಚೂರಿನಲ್ಲಿ ವಾಸವಾಗಿರುವರು. ಇವರು ಸಾಅದಾತ್ ವಂಶಸ್ಥರು. ಬಹಳೇ ಉನ್ನತ ವ್ಯಕ್ತಿತ್ವದ ಧಣಿಯಾಗಿರುವರು. ವಿನಯಶೀಲರು 'ತಸರ್ರೂಫಾತೇ ಬುರ್ಹಾನಿ'ಯ ಲೇಖಕರು ಆಗಿರುವರು. ರೋಜವತಲ್ ಔಲಿಯಾ ಗ್ರಂಥದ ಉರ್ದು ಅನುವಾದಕರಾದ ಸೈಯ್ಯದ್ ಶಾಹ್ ಸೈಫುಲ್ಲಾಹ್ ಖಾದ್ರಿಯವರೊಂದಿಗೆ ಗಾಢ ಸಂಬಂಧವಿತ್ತು. ರಜ್ಜಬ್ ತಿಂಗಳ ೧೫ನೆಯ ದಿನಾಂಕ ಹಿಜ್ರಿಶಕೆ ೧೩೦೧ರಲ್ಲಿ ಮದ್ರಾಸಿನಲ್ಲಿ ಇವರು ಮೌಲಾನಾ ಪೀರ್ ದಸ್ತಗೀರರ ಸನ್ನಿಧಿಯಲ್ಲಿ ಹಾಜರಾಗಿ ಬೈಯ್ಯತ್ ಪಡೆದರು. ಯಾವಾಗ ಪೀರ್ ದಸ್ತಗೀರ್(ಋ) ಬಿಜಾಪುರಕ್ಕೆ ಬರುವ

ಬಯಕೆಯಿಂದ ರಾಯಚೂರಿನಲ್ಲಿ ತಂಗಿದರು. ಅಲ್ಲಿ ಹಜ್ರತ್‌ರಿಂದ ನೂರಾರು ಜನರು ಬೈಯ್ಯತ್ತಿನ ಸಂಪತ್ತಿನಿಂದ ಸಮೃದ್ಧರಾದರು. ಹಾಗೂ ಜಮಾದುಸ್ಸಾನಿ ತಿಂಗಳ ೨೧ನೆಯ ದಿನಾಂಕದಂದು ಹಿಜ್ರಿಶಕೆ·೧೩೦೭ರಲ್ಲಿ ರಾಯಚೂರಿನಲ್ಲಿ ಸೂಫಿವಂಶಸ್ಥರ ಎದುರಿನಲ್ಲಿ ಹಜ್ರತ್ ಪೀರ್ ದಸ್ತಗೀರ್‌ರಿಂದ ಖಿಲಾಫತ್ ಪಡೆದರು.

೭) ಸೈಯ್ಯದ್‌ಶಾಹ್ ಅಜೀಜುಲ್ಲಾಹ್ ಅಲ್ ಹುಸೈನಿ ಅಲ್‌ಖಾದ್ರಿ ವ ಶತ್ತಾರಿ ಸಿಬ್ಗತ್‌ಲ್ಲಾಹಿ ಜಹಾಗೀರದಾರ ಇವರು ನಂದ್ಯಾಳ ತಾಲೂಕಾ ಬಾಗೇವಾಡಿ ಬಿಜಾಪುರ ಜಿಲ್ಲೆಯವರು.

ಇವರು ಹಜ್ರತ್ ಮೀರಾಂ ಸೈಯ್ಯದ್ ಮುಹಮ್ಮದ್ ಮುದರ್‌ರಿಸ್ ಅಲ್ ಹುಸೈನಿ ಖಾದ್ರಿಯವರ ಸಹೋದರಿಯ ಪುತ್ರರಾಗಿರುವರು. ಹಾಗೂ ಸೈಯ್ಯದ್ ಮುಹಮ್ಮದ್ ಶರೀಫ್‌ಸಾಬರ ಸಂತಾನದಿಂದಿರುವರು. ಇವರ ಪೂರ್ವಜರಿಗೆ ಸಿಬ್ಗತ್‌ಲ್ಲಾಹಿ ವಂಶದಿಂದ ಖಿಲಾಫತ್ ಲಭಿಸಿತ್ತು. ಯಾವಾಗ ಹಜ್ರತ್ ಪೀರ ದಸ್ತಗೀರರು ರಾಯಚೂರು, ಗುಲ್ಬರ್ಗಾದಿಂದ ತಮ್ಮ ಪೂರ್ವಜರಾದ ಹಜ್ರತ್ ಸೈಯ್ಯದ್‌ಶಾಹ್ ಅಬ್ದುಲ್ ರೆಹಮಾನ್‌ರ ಜಿಯಾರತ್ತಿಗಾಗಿ ಬಿಜಾಪುರಕ್ಕೆ ಬಂದರೋ ಆಗ ಇವರಿಗೆ ರಜ್ಜಬ್ ತಿಂಗಳ ೧೧ನೆಯ ದಿನಾಂಕ ಹಿಜ್ರಿಶಕೆ ೧೩೦೭ರಂದು ಹಜ್ರತ್ ಪೀರ್ ದಸ್ತಗೀರರು ತಮ್ಮ ಪೂರ್ವಜರ ಗುಮ್ಮಟಿನ ಎದುರು ಖಿಲಾಫತ್ ನೀಡಿದರು.

೮) ಹಾಜಿ ಮೌಲ್ವಿಶಾಹ್ ಜಹೂರುದ್ದೀನ್ ಅಹ್ಮದ್ ಖಾದ್ರಿ ವ ಶತ್ತಾರಿ ಇವರು ನವಾಜ್ ಗೌಸಿಯಾ ಬೇಗಮ್ ಸಾಹೇಬರ ಅಳಿಯರಾಗಿರುವರು. ಉತ್ತಮ ವ್ಯಕ್ತಿತ್ವದವರಾಗಿರುವರು. ಯಾವಾಗ ನವಾಬ್ ಮುಹಮ್ಮದ್ ಮುನವ್ವರ್‌ಖಾನ್ ಬಹಾದ್ದೂರ್ ಪ್ರಿನ್ಸ್ ಆಫ್ ಅರ್ಕಾಟ್‌ದೊಂದಿಗೆ ಪೀರ್ ಮುರ್ಷದ್ ಕಿಬ್ಲಾರ ಜಿಯಾರತ್‌ಗಾಗಿ ತಾಜಪುರ ಷರೀಫಕ್ಕೆ ಹೋಗಿದ್ದರು. ಆಗ ಜಿಲ್‌ಹಜ್ಜಾದ ೭ನೆಯ ದಿನಾಂಕ ಹಿಜ್ರಿಶಕೆ ೧೩೦೭ರಂದು ಹಾಗೂ ಅವರ ಬಯಕೆಯಂತೆ ಹಜ್ರತ್ ಪೀರ್ ದಸ್ತಗೀರ್‌ರು ಖಿಲಾಫತ್ ನೀಡಿದರು.

೯) ಶಾಹ್ ಅಮೀನುದ್ದೀನ್ ಸಾಹೇಬ್ ಖಾದ್ರಿ ಅಲ್ ಶತ್ತಾರಿ ಸಿಬ್ಗತ್‌ಲ್ಲಾಹಿ ಇವರು ಅರ್ಕಾಟಿನವರಾಗಿದ್ದಾರೆ. ಇವರು ಮಹಾವಿದ್ವಾಂಸರು ಹಾಗೂ ವಿನಯಶೀಲ ವ್ಯಕ್ತಿತ್ವದವರು ಆಗಿದ್ದರು. ಇವರು ಸೂಫಿವಂಶಸ್ಥರು ಆಗಿರುವರು. ಹಜ್ರತ್ ಪೀರ್ ದಸ್ತಗೀರ್‌ರು ಇವರನ್ನು ಷವ್ವಾಲ್ ತಿಂಗಳ ೯ನೆಯ ದಿನಾಂಕದಂದು ಹಿಜ್ರಿಶಕೆ ೧೩೦೮ರಂದು ಹಜ್ರತ್ ದಾದಾಪೀರ್ ಸಾಹೇಬರ ಉರುಸುತ್ಸವದಂದು ಖಿಲಾಫತ್ ನೀಡಿದರು.

೧೦) ಸೈಯ್ಯದ್ ಶಾಹ್ ಮುಹಿಯುದ್ದೀನ್ ಅಲ್ ಹುಸೈನಿ ಅಲ್ ಖಾದ್ರಿ ವ ಶತ್ತಾರಿ ಸಿಬ್ಗತ್‌ಲ್ಲಾಹಿ ಉರ್ಫ ಸಾಹೇಬ್ ಪೀರಾಂ ಇವರು ಸೈಯ್ಯದ್ ಶಾಹ್ ಅಹ್ಮದ್ ಹುಸೈನ್ ಸಿಬ್ಗತ್‌ಲ್ಲಾಹಿ ಉರ್ಫ್ ಖಾದಿರ್ ಮೀರಾಂ ಸಾಹೇಬ್ ಖಾದ್ರಿಯವರ ಪುತ್ರರಾಗಿರುವರು. ಇವರ ತಂದೆಯವರ ನಿಧನವು ೧೩ನೆಯ ರಂಜಾನ್‌ದಂದು ಹಿಜ್ರಿಶಕೆ ೧೩೦೮ರಂದು ಆಯಿತು. ಇವರ ತಂದೆಯವರ ನಲ್ವತ್ತನೆಯ ದಿನದ ಫಾತೆಹಾ ಕಾರ್ಯಕ್ರಮದಂದು ೨೪ನೆಯ ಷವ್ವಾಲದಂದು ಹಜ್ರತ್ ಪೀರ್ ದಸ್ತಗೀರರು ಇವರ ತಂದೆಯವರ ವಿನಂತಿ ಹಾಗೂ ಉಯಿಲಿನಂತೆ ಮದ್ರಾಸಿನಲ್ಲಿ ಕರಮ್‌ಪಾಕ್ ಓಣಿಯಲ್ಲಿ ಖಿಲಾಫತ್ ನೀಡಿ ಸಮೃದ್ಧಗೊಳಿಸಿದರು.

೧೧) ಸೈಯ್ಯದ್ ಶಾಹ್ ಸದರ್ ಆಲಂ ಸಾಹೇಬ್ ಖಾದ್ರಿ ವ ಶತ್ತಾರಿ ಸಿಬ್ಗತ್‌ಲ್ಲಾಹಿ ಅವರು ಸೂಫಿ ವಂಶಸ್ಥರಾಗಿರುವರು. ಇವರು ಉನ್ನತ ವ್ಯಕ್ತಿತ್ವದವರಾಗಿದ್ದರು. ಇವರು ಅನುವಾದಕರೊಂದಿಗೆ ಗಾಢಸ್ನೇಹ ಹೊಂದಿದ್ದರು. ಹಾಗೂ ಇವರು ಕೊಯಂಬುತ್ತೂರಿನವರಾಗಿದ್ದಾರೆ. ಹಜ್ರತ್ ಪೀರ್ ದಸ್ತಗೀರ್‌ರಿಂದ 'ನಫ್ಸೆರೆಹ್ಮಾನಿಯಾ'ದ ಅಧ್ಯಯನಗೈದರು. ಶವ್ವಾಲ ತಿಂಗಳ ೯ನೆಯ ದಿನಾಂಕ, ಹಿಜ್ರಿಶಕೆ ೧೩೦೯ರಂದು ದಾದಾಪೀರ್ ಸಾಹೇಬರ ಉರುಸುತ್ಸವದಂದು ಹಜ್ರತ್‌ಪೀರ್ ದಸ್ತಗೀರ್‌ರು ಖಿಲಾಫತ್ ನೀಡಿದರು.

■

೮೪. ಹಜ್ರತ್ ಸೈಯ್ಯದ್ ಕರೀಂ ಮುಹಮ್ಮದ್ (ಖು)

ಇವರು ಹಜ್ರತ್ ಸೈಯ್ಯದ್ ಮುಹಮ್ಮದ್ ಮುದರ್ರಿಸ್(ಖು)ರ ಕಿರಿಯ ಪುತ್ರರಾಗಿರುವರು. ಇವರು ತಮ್ಮ ತಂದೆಯ ಉನ್ನತ ವ್ಯಕ್ತಿತ್ವದ ಪ್ರತಿಬಿಂಬವಾಗಿದ್ದರು. ಇವರು ತಮ್ಮ ತಂದೆಯವರಿಂದ ಬೈಯ್ಯತ್ ಹಾಗೂ ಖಿಲಾಫತ್ ಪಡೆದರು. ಹಜ್ರತ್ ಸೈಯ್ಯದ್ ಅಬ್ದುಲ್ ರೆಹಮಾನ್ (ಖು)ರ ಗುಮ್ಮಟಿನ ಬಳಿ ಬೇರೆಯ ಗುಮ್ಮಟಿನಲ್ಲಿ ಸಮಾಧಿಸ್ಥರಾಗಿರುವರು. ಇವರ ಉರುಸುತ್ಸವ ಜಮಾದಿಲ್ ಆಖಿರ್‌ದ ೨೪ನೆಯ ದಿನಾಂಕದಂದು ಇರುವದು. ಹಿಜ್ರಿಶಕೆ ೧೧೧೦೫ರಲ್ಲಿ ನಿಧನರಾದರು. ಇವರ ಸಂತಾನವು ಬಿಜಾಪುರ ರಾಯಚೂರು ಹಾಗೂ ಅರ್ಕಾಟಿನಲ್ಲಿ ಇರುವದು.

ಇವರ ಕರಾಮತ್ತುಗಳು ಅಸಂಖ್ಯ ಇರುವವು. ಇವರ ಬದುಕಿನ ಬಹಳಷ್ಟು ಘಟನೆಗಳನ್ನು 'ನುಸ್ಖಯೆ ಖುಲಾಸಯೇ ಸಿಬ್ಗತ್‌ಲ್ಲಾಹಿ' ಎಂಬ ಗ್ರಂಥದಲ್ಲಿ

ಕ್ರೋಢಿಕರಿಸಲಾಗಿದೆ. ಅದರ ಲೇಖಕರು ಹಜ್ರತ್‌ರ ಮೊಮ್ಮಗರಾದ ಸೈಯ್ಯದ್ ಅಬ್ದುಲ್ಲಾಹ್ ಅಲ್‌ಹುಸೈನಿ ಅಲ್‌ಖಾದ್ರಿ ಸಿಬ್ಗತ್‌ಲ್ಲಾಹಿ ಇರುವರು.

ಹಜ್ರತ್‌ರು ಮಹಾನ್ ಸಾಧಕರು. ದೇವನಿಷ್ಠರು ಹಾಗೂ ಸದಾಕಾಲ ಆಧ್ಯಾತ್ಮ ಜ್ಞಾನ ಸಾಧನೆಯಲ್ಲಿ ನಿರತರಾಗಿ ಇರುತ್ತಿದ್ದರು. ಶ್ರಮಜೀವಿಗಳು, ಹಜ್ರತ್‌ರ ದೇವಭಯ ಹಾಗೂ ಶ್ರಮಯುಕ್ತ ಜೀವನ ಬಲು ಪ್ರಸಿದ್ಧವಾಗಿದೆ.

ಇವರು ಪಟ್ಟಣದ ಹೊರಪ್ರದೇಶದಲ್ಲಿ ಅರಣ್ಯ ಭಾಗದಲ್ಲಿ ಏಕಾಂತಪ್ರಿಯರಾಗಿ ಅಲ್ಲಾಹುವಿನ ಸ್ಮರಣೆಯಲ್ಲಿ ನಿಮಗ್ನರಾಗಿರುತ್ತಿದ್ದರು. ರಾತ್ರಿಯ ವೇಳೆ ತೋಳಗಳು ಸುತ್ತ ತಿರುಗುತ್ತ ಹಜ್ರತ್‌ರ ರಕ್ಷಣೆ ಮಾಡುತ್ತಿದ್ದವು.

ಹಲವಾರು ಬಾರಿ ಹಜ್ರತ್‌ರು ತಮ್ಮ ಶಿಷ್ಯರಿಗೆ ಹೀಗೆ ಹೇಳುತ್ತಿದ್ದರು. ನಾನು ಈ ಜಗದ ಬೆಂಕಿಯಿಂದ ಹೆದರುವದಿಲ್ಲ. ಆದರೆ ನರಕದ ಬೆಂಕಿಯು ಬಲು ತೀಕ್ಷ್ಣವಾಗಿದೆ. ಯಾವಾಗ ಹಜ್ರತ್‌ರು ಪೀಠಾಧಿಕಾರಿಯಾದರು ಆಗ ಸರ್ವರಿಗಾಗಿ ಬೋಧನೆಯ ದ್ವಾರ ತೆರೆದರು. ಹಜ್ರತ್‌ರು ದೇವನಿಷ್ಠರಾಗಿದ್ದರು. ಏನನ್ನೂ ಕೂಡಿಸಿ ಇಡುತ್ತಿರಲಿಲ್ಲ.

ಒಂದು ದಿನ ಓರ್ವ ವ್ಯಕ್ತಿ ಹಜ್ರತ್‌ರಿಂದ ಒಂದು ತಾಯಿತವನ್ನು ಬಯಸಿದನು. ಅವನ ಇಚ್ಛೆಯು ಬಾದಶಹನ ಸಾಂಗತ್ಯ ಹೊಂದುವುದಾಗಿತ್ತು. ಆತನ ವಿನಂತಿಯನ್ನು ಹಜ್ರತ್‌ರು ಮನ್ನಿಸಿ ಎರಡು ತಾಯಿತಗಳನ್ನು ಬರೆದರು. ಒಂದು ಆ ವ್ಯಕ್ತಿಗೆ ನೀಡಿದರು. ಅಲ್ಪ ಅವಧಿಯಲ್ಲಿಯೇ ಅಲಿಆದಿಲ್‌ಶಾಹ್ ಬಾದಶಹನ ಭೇಟಿಯಾಯಿತು. ಹಾಗೂ ಆಪ್ತಸ್ನೇಹದ ಜೊತೆಗೆ ಮಹತ್ವದ ಅಧಿಕಾರವೂ ಲಭಿಸಿತು. ಹಾಗೂ ೨ನೆಯ ತಾಯಿತವನ್ನು 'ಮಾಡಿ'ನಲ್ಲಿ ಇಟ್ಟಿದ್ದರು. ಅಂದಿನಿಂದ ಹಜ್ರತ್‌ರ ಬಳಿ ಜನರ ಬಂದುಹೋಗುವಿಕೆ ಹೆಚ್ಚಾಯಿತು. ಈ ಗದ್ದಲ ಹಾಗೂ ಜನಜಂಗುಳಿ ಹೆಚ್ಚುತ್ತಲೇ ಹೋಗುವದನ್ನು ಕಂಡು ಹಜ್ರತ್‌ರು ಯೋಚಿಸಿದರು. ಇದರ ಕಾರಣ ಏನಿರಬಹುದು? ಜನ ಸಾಗರದಂತೆ ಬರುವದರಿಂದ ಅಲ್ಲಾಹುವಿನ ಸ್ಮರಣೆಯಲ್ಲಿ ಹಾಗೂ ಏಕಾಂತಕ್ಕೆ ಭಂಗ ಬರುತ್ತಿದೆ. ಆಗ ಇದಕ್ಕೆ ಈ ತಾಯಿತವೇ ಕಾರಣವಾಗಿದೆ ಎಂದು ತಿಳಿದು ಅದನ್ನು ಮಾಡಿನಿಂದ ಹೊರತಂದು ಮನೆಯ ಬಳಿ ಇರುವ ಉಪ್ಪಿನ ನೀರಿನ ಬಾವಿಯಲ್ಲಿ ಎಸೆದರು. ಅದರ ಪರಿಣಾಮವಾಗಿ ಆ ಬಾವಿಯ ನೀರು 'ಸಿಹಿನೀರಾಗಿ' ಪರಿವರ್ತಿತವಾಯಿತು. ಅಂದಿನಿಂದ ನಿರಂತರವಾಗಿ ಪಟ್ಟಣದ ಜನರು ಹಾಗೂ ಜಾಮಿಯಾ ಮಸೀದೆಯ ಬಳಿಯಿರುವ ಜನರು ಈ ಬಾವಿಯಿಂದ ನೀರನ್ನು ಒಯ್ಯತೊಡಗಿದರು.

ಹಜ್ರತ್ ಮೀರಾಂ ಸೈಯ್ಯದ್ ಮುಹಮ್ಮದ್ ಮುದರ್ರಿಸ್(ಖ)ರು ಯಾವಾಗ ಬಿಜಾಪುರ ಷರೀಫ್‌ದಿಂದ ಮದೀನಾ ಮುನವ್ವರಾಕ್ಕೆ ಹೊರಡಲು ಅನುವಾದರು.

ಎಲ್ಲ ಸೂಫಿವಂಶಸ್ಥರು ಹಜ್ರತ್‌ರನ್ನು ಭೇಟಿಯಾಗಿ ಹೀಗೆಂದರು. ತಾವಂತೂ ಇಲ್ಲಿಂದ ಹೊರಟು ಹೋಗುತ್ತಿದ್ದೀರಿ ಜೊತೆಗೆ ಇಲ್ಲಿಯ ಸಮೃದ್ಧಿಯನ್ನು ಒಯ್ಯುತ್ತಿದ್ದೀರಿ. ಹಜ್ರತ್‌ರೆಂದರು ಹಾಗೆ ಬಗೆಯಬೇಡಿರಿ, ನನ್ನ ಕಿರಿಯ ಪುತ್ರ ಸೈಯ್ಯದ್ ಕರೀಂ ಮುಹಮ್ಮದ್‌ರಿಗೆ ಬಿಟ್ಟು ಹೋಗುತ್ತಿದ್ದೇನೆ ಏಕೆಂದರೆ ಈ ಪಟ್ಟಣಕ್ಕೆ ಯಾವುದೇ ಕೆಟ್ಟ ದೃಷ್ಟಿ ಬೀಳದಿರಲಿ ನಿಜಕ್ಕೂ ಹಾಗೆಯೇ ಆಯಿತು. ಹಜ್ರತ್ ಸೈಯ್ಯದ್ ಕರೀಂ ಮುಹಮ್ಮದ್(ಖು)ರು ಇರುವವರೆಗೂ ಪಟ್ಟಣವು ಸಮೃದ್ಧಿಯಿಂದ ತುಂಬಿ ತುಳುಕುತ್ತಿತ್ತು. ಆಲಂಗೀರ ಬಾದಶಹನು ಪಟ್ಟಣವನ್ನು ತನ್ನ ವಶಕ್ಕೆ ತೆಗೆದುಕೊಂಡು ಸಿಕಂದರ ಆದಿಲಶಾಹನನ್ನು ಬಂಧಿಸಿದಾಗ ೩ ಲಕ್ಷಣಗಳು ಗೋಚರಿಸಿದವು.

೧) ಆಲಂಗೀರನು ತನ್ನ ಅಧಿಕಾರ ಸ್ಥಾಪಿಸಿದನು. ಜನರು ನಿರ್ಗತಿಕರಾದರು.

೨) 'ಒಣಬರ'ವೆಂಬ ಕ್ಷಾಮ ವ್ಯಾಪಿಸಿತು.

೩) ಒಂದು ಜನಪದೋಧ್ವಂಸರೋಗವಾದ 'ಪ್ಲೇಗ್' ಹಬ್ಬಿತ್ತು. ಆ ಮಹಾಮಾರಿಯಿಂದಾಗಿ ಇಡೀ ಕುಟುಂಬಕ್ಕೆ ಕುಟುಂಬಗಳೇ ನಿರ್ನಾಮವಾದವು. ಹಾಗೂ ಬಿಜಾಪುರ ಪಟ್ಟಣವು ಸ್ಮಶಾನಸದೃಶವಾಯಿತು.

ಹಜ್ರತ್‌ರ ಧರ್ಮಪತ್ನಿಯವರಾದ ಅಜೀಸಾಹಬಾ ಇವರು ಬಿಜಾಪುರದ ರಂಗೀನ ಮಸೀದೆಯ ಸೂಫಿ ವಂಶಸ್ಥರಾದ ಹಜ್ರತ್ ಜುಬೇರಿಯವರ ಪುತ್ರಿಯಾದ ಇವರಿಗೆ ಓರ್ವ ಪುತ್ರಿ ಹಾಗೂ ನಾಲ್ವರು ಪುತ್ರರಿದ್ದರು. ಅವರ ಹೆಸರು ಸಾಹೇಬ್ ಜಾನಿಸಾಹೆಬಾ ಇವರಿಗೆ ಹಜ್ರತ್ ಸಾನಿ ಸೈಯ್ಯದ್‌ಶಾಹ್ ಸಿಬ್ಗತಲ್ಲಾಹಿ ಅಲ್‌ಹುಸೈನಿ ಅಲ್‌ಖಾದ್ರಿ ಇವರೊಂದಿಗೆ ವಿವಾಹ ಮಾಡಿದರು. ಇವರಿಂದ ಓರ್ವಪುತ್ರ ಹಜ್ರತ್‌ಹಾಜಿ ಸೈಯ್ಯದ್ ಹಸನ್‌ಸಾಹೇಬ್ ಜನಿಸಿದರು.

ನಾಲ್ವರು ಪುತ್ರರು : ಸೈಯ್ಯದ್ ಅಬ್ದುಲ್‌ಖಾದಿರ್, ಸೈಯ್ಯದ್ ಮುಹಮ್ಮದ್, ಸೈಯ್ಯದ್ ಶಾಹ್ ಕಾಸಿಂ, ಸೈಯ್ಯದ್ ಶಾಹ್ ಅಜೀಜುಲ್ಲಾಹ್.

ಹಜ್ರತ್‌ರು ಕುರ್‌ಆನ್‌ನ್ನು ಕಂಠಸ್ಥಗೊಳಿಸಿದವರು ಅಲ್ಲಾಹುವಿನ ಸ್ಮರಣೆಯಲ್ಲಿ ಸದಾಕಾಲ ನಿರತರು ಹಾಗೂ ಏಕಾಂತ ಪ್ರಿಯರು ಆಗಿದ್ದರು. ಯಾವಾಗ ಹಜ್ರತ್‌ರ ಅಂತಿಮ ಸಮಯವು ಬಂದಿತೋ ಆಗ ಹಜ್ರತ್‌ರು ತಮ್ಮ ಈರ್ವರು ಪುತ್ರರು ಹಜ್ರತ್ ಸೈಯ್ಯದ್ ಅಬ್ದುಲ್ ಖಾದಿರ್ ಸಾಹೇಬ್ ಹಾಗೂ ಸೈಯ್ಯದ್ ಮುಹಮ್ಮದ್ ಸಾಹೇಬರಿಗೆ ಖಿಲಾಫತ್ ನೀಡಿದರು. ಈ ಈರ್ವರೂ ಪುತ್ರರು ಕುರ್‌ಆನ್ ಕಂಠಸ್ಥಗೊಳಿಸಿದರು. ಹಾಗೂ ಮಹಾವಿದ್ವಾಂಸರು ಆಗಿದ್ದರು. ಇಡೀ ರಾತ್ರಿ ಹಜ್ರತ್‌ರು ಕುರ್‌ಆನ್ ಪಠಣದಲ್ಲಿ ತೊಡಗಿ ಶುಕ್ರವಾರದ ಮುಂಜಾವಿನಲ್ಲಿ ಜಮಾದುಸ್ಸಾನಿ ತಿಂಗಳ ೨೦ನೆಯ ದಿನಾಂಕದಂದು ಹಿಜ್ರಿಶಕೆ ೧೧೦೫ರಂದು ನಿಧನರಾದರು.

ಇವರು ಬಿಜಾಪುರ ನಗರದ ಜಾಮಿಯಾ ಮಸೀದೆಯ ಬಳಿ ಇರುವ ಗುಮ್ಮಟಿನಲ್ಲಿ ಸಮಾಧಿಸ್ಥರಾಗಿರುವರು. ಇವರ ಮೊಮ್ಮಗ ಹಜ್ರತ್ ಹಾಜಿ ಹಸನ್‌ಸಾಹೇಬ್ ಖಾದ್ರಿ(ಖು)ರು ಬರೆದ 'ರಿಸಾಲಯೇ ಜಮ್ಹೂರಿಯಾ'ದಲ್ಲಿ ಇವರ ಜೀವನದ ಸಮಗ್ರ ಘಟನೆಗಳು ನಮೂದಿಸಲ್ಪಟ್ಟಿರುವವು.

ಹಜ್ರತ್‌ರ ನಾಲ್ವರು ಪುತ್ರರಲ್ಲಿ ಓರ್ವರು ಪೀಠಾಧೀಶ ಸೈಯ್ಯದ್ ಅಬ್ದುಲ್ ಖಾದಿರ್ ಸಾಹೇಬ್ ಖಾದ್ರಿ ಇದ್ದರು. ಇವರ ಪತ್ನಿಯ ಹೆಸರು ಶರೀಫಾ ಬಿನ್ತ(ಪುತ್ರಿ) ನವಾಬ್ ಹುನರ್‌ಖಾನ್ ಇರುವರು ಇವರ ಓರ್ವ ಪುತ್ರರಾದ ಸೈಯ್ಯದ್ ಕರೀಂ ಮುಹಮ್ಮದ್ ಚಿಕ್ಕ ವಯಸ್ಸಿನಲ್ಲಿಯೇ ಮೃತ್ಯುವಶರಾದರು. ಹಜ್ರತ್‌ರ ನಿಧನದ ದಿನಾಂಕವು ಮೊಹರಂ ತಿಂಗಳ ೧೨ನೆಯ ದಿನವಾಗಿದೆ. ಇವರ ಸಮಾಧಿಸ್ಥಳವು ಬಿಜಾಪುರ ನಗರದ ಜಾಮಿಯಾ ಮಸೀದೆಯ ಬಳಿ ಇರುವದು. ಅವರ ಮೃತ್ಯುವಿನ ನಂತರ ಅವರ ಎರಡನೆಯ ಪುತ್ರ ಹಜ್ರತ್ ಹಾಫೀಜ್ ಸೈಯ್ಯದ್ ಮುಹಮ್ಮದ್ ಸಾಹೇಬ್ ಖಾದ್ರಿ, ಕಾವ್ಯಾನಾಮ ಫಿರಾಖಿ, 'ಮೀರಾತಲ್ ಹಷ್ರ' ಪುಸ್ತಕದ ಲೇಖಕರು ಪೀಠಾಧೀಶರಾದರು. ಇವರ ಪತ್ನಿ ಜೈನಬ್ ಸಾಹೆಬಾ ಬಿನ್ತ್(ಪುತ್ರಿ) ಹಜ್ರತ್ ಖಾದಿರ್ ಸಾಹೇಬ್ ಇವರು ಸೂಫಿ ವಂಶಸ್ಥರು. ಇವರಿಗೆ ಓರ್ವ ಪುತ್ರ, ಹಾಗೂ ಈರ್ವರು ಪುತ್ರಿಯರು ಇರುವರು.

ಓರ್ವ ಪುತ್ರಿಯಾದ ಫಾತಿಮಾ ಸಾಹೇಬಾ ಹಜ್ರತ್ ಹೈದರ್‌ಸಾಹೇಬ್‌ಖಾದ್ರಿ ಅನಾಹೊಸೂರುರ ಪತ್ನಿಯಾಗಿರುವರು.

ಎರಡನೆಯ ಪುತ್ರಿಯಾದ ಹಜ್ರತ್ ಬೀಬಿಸಾಹೇಬಾ ಹಜ್ರತ್ ಸೈಯ್ಯದ್ ಸಾಹೇಬ್ ಖಾದ್ರಿ ದೋಮ್ತೆಯವರ ಪತ್ನಿಯಾಗಿದ್ದರು. ಇನ್ನು ಪುತ್ರರಾದ ಸೈಯ್ಯದ್ ಹಸನ್ ಸಾಬ್ ಖಾದ್ರಿ ಸಿಬ್ಗತ್‌ಲ್ಲಾಹಿ ಇರುವರು. ಇವರ ನಿಧನವು ರಬ್ಬಿವುಲ್ ಅವ್ವಲ್ ತಿಂಗಳ ೨೧ನೆಯ ದಿನಾಂಕದಂದು ಆಯಿತು. ಇವರ ಸಮಾಧಿಯು ರಾಯಚೂರಿನ ಒಳಕೋಟೆ (ಅಂದರೂನಿಕಿಲ್ಲಾ) ಆಸಾರ ಶರೀಫಿನ ಸರಹದ್ದಿನಲ್ಲಿರುವದು. ಇವರ ನಿಧನದ ದಿನಾಂಕವನ್ನು 'ಫಿ ಹಿಫ್ಜುಲ್ಲಾಹ್' ಅಂದರೆ ೧೧೪೪ ಇರುವದು.

ಮೂರನೆಯ ಪುತ್ರರಾದ ಹಾಫೀಜ್ ಸೈಯ್ಯದ್ ಅಜೀಜುಲ್ಲಾಹ್ ಖಾದ್ರಿ ಇರುವರು. ಇವರ ಪತ್ನಿ ಹಬೀಬ್ ಸಾಹೇಬಾ ಬಿನ್ತ(ಪುತ್ರಿ) ಹಜ್ರತ್ ಸುಲ್ತಾನ್ ಸೈಯ್ಯದ್ ಅಬ್ದುಲ್ ರೆಹಮಾನ್ ಹುಸೈನಿ(ಖು) ಇರುವರು.

ಇವರಿಗೆ ಮೂವರು ಪುತ್ರರು–ಸೈಯ್ಯದ್ ಅಬ್ದುಲ್ ರೆಹಮಾನ್ ಸಾಹೇಬ್, ಸೈಯ್ಯದ್ ಆಜಮ್ ಸಾಹೇಬ್, ಸೈಯ್ಯದ್ ಯೂಸುಫ್ ಸಾಹೇಬ್ ಹಾಗೂ ಓರ್ವ ಪುತ್ರಿ ಅಜಿಸಾಹೇಬಾ ಇವರು ಮುಹಮ್ಮದ್ ಸಾಹೇಬ್ ಸುರ್ಖಿಮೋಯೆಯವರ ಪುತ್ರರಾದ ಮೂಸಾ ಸಾಹೇಬರ ಪತ್ನಿಯಾಗಿರುವರು.

ಹಜ್ರತ್‌ರ ನಿಧನವು ರಬ್ಬಿವುಲ್ ಅವ್ವಲ್ ಮಾಸದ ೨೪ನೆಯ ದಿನಾಂಕ ಹಿಜ್ರಿಶಕೆ ೧೧೪೬ರಂದು ಆಯಿತು. ಇವರ ಸಮಾಧಿಯು ಜಾಮಿಯಾ ಮಸೀದೆ ಬಿಜಾಪುರದ ಬಳಿ ಇರುವದು. ಇವರ ನಿಧನದ ದಿನಾಂಕವು 'ರಫ್ತ ಸೂಯಿ ಬಖಾ ಅಜೀಜಲ್ಲಾಹ್।

ಗೋಬೂದ ಹಾಫೀಜ್ ಕಲಾಮಲ್ಲಾಹ್ ॥

ಎಂಬ ದ್ವಿಪದಿಯಲ್ಲಿದೆ–ಇದರ ಒಟ್ಟು ಸಂಖ್ಯೆಯು ೧೧೪೬ ಎಂದಾಗುವದು.

ನಾಲ್ಕನೆಯ ಪುತ್ರರಾದ ಹಜ್ರತ್‌ಶಾಹ್ ಖಾಸಿಂ ಹುಸ್ಸೈನಿ ಅಲ್ ಖಾದ್ರಿ ಇರುವರು. ಇವರ ಧರ್ಮಪತ್ನಿಯವರು–ಸೈಯ್ಯದ್ ಅಲಿ ಮುಹಮ್ಮದಲ್ ಹುಸ್ಸೈನಿಯವರ ಪುತ್ರಿಯಾದ ಜಮಾಲ್‌ಶಾ ಬೀಬಿ ಇರುವರು. ಇವರಿಗೆ ನಾಲ್ವರು ಪುತ್ರರು–ಹಾಫೀಜ್ ಸೈಯ್ಯದ್ ಅಲಿ ಮುಹಮ್ಮದ್ ಸಾಹೇಬ್, ಶಾ ಜೈನುದ್ದೀನ್ ಸಾಹೇಬ್, ಶಾ ಅಬ್ದುಲ್ ರೆಹಮಾನ್ ಸಾಹೇಬ್, ಹಾಫೀಜ್‌ಸೈಯ್ಯದ್ ಕರೀಂ ಮುಹಮ್ಮದ್ ಸಾಹೇಬ್ ಓರ್ವ ಪುತ್ರಿಯಾದ ಹಬೀಬ್ ಸಾಹೇಬಾ ಇವರು ಸೈಯ್ಯದ್ ಮುಸ್ತಫಾ ಸಾಹೇಬ್‌ರ ಪತ್ನಿಯಾಗಿದ್ದರು.

ಹಜ್ರತ್‌ರ ನಿಧನವು ಜಮಾದುಸ್ಸಾನಿ ತಿಂಗಳ ೧೭ನೆಯ ದಿನಾಂಕ, ಹಿಜ್ರಿಶಕೆ೧೧೯೬ ಇರುವದು. ಇವರ ಸಮಾಧಿಯು ಸಾತಲ್‌ಗಡದ ಲಾಲಾಪೇಟದಲ್ಲಿರುವ ಗುಂಬಜಿನ ಒಳಭಾಗದಲ್ಲಿ ಇರುವದು. ಇವರ ನಿಧನದ ದಿನಾಂಕವನ್ನು 'ಶಾ ಖಾಸಿಂ ಕಲಂದರ್ ಖಾದಿರ್' ಇರುವದು(೧೧೯೬).

ಹಜ್ರತ್ ಕರೀಂ ಮುಹಮ್ಮದ್ ಹುಸ್ಸೈನಿ ಅಲ್ ಖಾದ್ರಿ ಸಿಬ್ಗತ್‌ಲ್ಲಾಹಿಯವರ ಪುತ್ರ ಸಂತಾನದಿಂದ ಈಗ ಬಿಜಾಪುರದಲ್ಲಿ ಸೈಯ್ಯದ್ ಮನ್ ಅಲ್ಲಾಹ್ ಹುಸ್ಸೈನಿ ಸಾಹೇಬ್ ಹಾಗೂ ಸೈಯ್ಯದ್ ಬದರ್ ಹುಸ್ಸೈನಿ ಸಾಹೇಬ್ ಇರುವರು. ಹಾಗೂ ಸೈಯ್ಯದ್ ಜಮಾಲುದ್ದೀನ್ ಹುಸ್ಸೈನಿ ಸಾಹೇಬ್ ಹಾಗೂ ಅವರ ಪುತ್ರರಾದ ಸೈಯ್ಯದ್ ಮುರ್ತುಜಾ ಸಾಹೇಬ್ ಸೈಯ್ಯದ್ ಹುಸ್ಸೈನಿ ಬಾದಶಾಹ ಸಾಹೇಬ್, ಸೈಯ್ಯದ್ ಜೈನುದ್ದೀನ್ ಸಾಹೇಬ್, ಸೈಯ್ಯದ್ ಬುರ್ಹಾನುದ್ದೀನ್ ಸಾಹೇಬ್ ಇರುವರು.

ಸೈಯ್ಯದ್ ದಾದೇಪೀರ್ ಹುಸ್ಸೈನಿ ಸಾಹೇಬ್ ಹಾಗೂ ಅವರ ಪುತ್ರರಾದ ಸೈಯ್ಯದ್ ಮುಹಮ್ಮದ್ ಸಾಹೇಬ್ ಹಾಗೂ ಸೈಯ್ಯದ್ ದಸ್ತಗೀರ್ ಸಾಹೇಬ್ ಇರುವರು ಹಾಗೂ ಸೈಯ್ಯದ್ ಯೂಸುಫ್ ಹುಸ್ಸೈನಿ ಸಾಹೇಬ್ ಹಾಗೂ ಅವರ ಪುತ್ರರಾದ ಸೈಯ್ಯದ್‌ಗೌಸ ಮುಹಿಯುದ್ದೀನ್ ಸಾಹೇಬ್, ಸೈಯ್ಯದ್ ಅಬ್ದುಲ್ಲಾಹ್ ಸಾಹೇಬ್, ಸೈಯ್ಯದ್ ಅಮೀನುದ್ದೀನ್ ಸಾಹೇಬ್ ಇರುವರು. ಇವರು ಬಿಜಾಪುರದ ದರ್ಗಾದ ಸೇವೆಯಲ್ಲಿ ತೊಡಗಿದವರಾಗಿದ್ದಾರೆ ಹಾಗೂ ಫತೇಹಪುರದಲ್ಲಿ ಆಸ್ತಿಯೂ ಇರುವದು. ಅದಕ್ಕಾಗಿ ಇವರು ಫತೇಹಪುರದವರು ಎನ್ನಿಸಿಕೊಳ್ಳುವರು.

ಮದ್ರಾಸಿನಲ್ಲಿರುವ ಸಾತ್‌ಗಡದಲ್ಲಿ ಸೈಯ್ಯದ್‌ಶಾಹ್ ಮುಹಮ್ಮದ್‌ಗೌಸ್ ಹುಸೈನಿ ಅಲ್‌ಖಾದ್ರಿ ಉರ್ಫ್ ಗೌಸಪೀರಾಂ ಸಾಹೇಬ್ ಹಾಗೂ ಅವರ ಪುತ್ರರು ಇರುವರು.

ಮದ್ರಾಸಿನ ನೀಲೂರಿನಲ್ಲಿ ಸೈಯ್ಯದ್‌ಶಾಹ್ ಮುಹಮ್ಮದ್ ಗೌಸ್ ಹಸನಿಅಲ್‌ಖಾದ್ರಿ ಉರ್ಫ ಪೀರ್‌ಗೌಸ್ ಸಾಹೇಬ್ ಹಾಗೂ ಅವರ ಪುತ್ರರು ಸೈಯ್ಯದ್‌ಶಾಹ್ ಅಬ್ದುಲ್‌ರಜಾಕ್ ಹಸ್ನಿ ಅಲ್‌ಖಾದ್ರಿ ಸೈಯ್ಯದ್‌ಶಾಹ್ ಅಬ್ದುಲ್‌ಗಾಫ್ಫಾರ್ ಹಸ್ನಿ ಅಲ್‌ಖಾದ್ರಿ ಊರ್ಫ ಸೈಯ್ಯದ್ ಸಾಹೇಬ್ ಇರುವರು.

ಸೈಯ್ಯದ್ ಶಾಹ ಸಿಬ್ಗತ್‌ಲ್ಲಾಹ್ ಅಲ್ ಹಸನಿ ಅಲ್ ಖಾದ್ರಿಯವರ ಪುತ್ರರಾದ ಸೈಯ್ಯದ್ ಮುಹಮ್ಮದ್ ಅಲ್ ಹಸನಿ ಅಲ್‌ಖಾದ್ರಿ ಇರುವರು.

ಮದ್ರಾಸಿನಲ್ಲಿ ಮೀರಾಂ ಸೈಯ್ಯದ್ ಶಾಹ್ ಮುಹಮ್ಮದ್ ಅಲ್‌ಹಸನಿ ಅಲ್‌ಖಾದ್ರಿ ಇವರ ಪುತ್ರರಾದ ಸೈಯ್ಯದ್ ಶಾಹ್ ಮುಹಮ್ಮದ್ ಹಬೀಬುಲ್ಲಾಹ್ ಹುಸೈನಿ ಅಲ್‌ಖಾದ್ರಿ ಸೈಯ್ಯದ್ ಶಾಹ್ ಮೆಹಮೂದಲ್ ಅಲ್ ಹಸ್ನಿ ಅಲ್‌ಖಾದ್ರಿ ಇರುವರು.

ಸೈಯ್ಯದ್ ನದೀಮುಲ್ಲಾಹ್ ಹುಸೈನಿ ಅಲ್‌ಖಾದ್ರಿ, ಸೈಯ್ಯದ್ ಶಾಹ್ ಅಹ್ಮದ್ ಹುಸೈನಿ ಅಲ್‌ಖಾದ್ರಿ ಇವರು ಹೈದರಾಬಾದ್‌ನಲ್ಲಿ ಇರುವರು. ಇವರನ್ನು ಹೊರತುಪಡಿಸಿ ಸೈಯ್ಯದ್ ಕರೀಂ ಮುಹಮ್ಮದ್ ಹುಸೈನಿಯವರ ಸಂತಾನವು ವಿವಿಧ ಸ್ಥಳಗಳಲ್ಲಿರುವುದು. ಅವರ ವಿವರವು ಅನುವಾದಕನಿಗೆ ಲಭ್ಯವಾಗಿಲ್ಲದಿರುವದರಿಂದ ಇಲ್ಲಿ ದಾಖಲಿಸಲಾಗಿಲ್ಲ.

■

೮೪(ಅ). ಹಜ್ರತ್ ಶೇಖ್ ಇಲ್ಮುಲ್ಲಾಹ್ ಮುಹದ್ದಿಸ್(ಖು)

ಇವರು ಹಜ್ರತ್ ಮುಹಮ್ಮದ್(ಸ) ಪೈಗಂಬರರ ಚಿಕ್ಕಪ್ಪನವರಾದ ಹಜ್ರತ್ ಸೈಯ್ಯದನಾ ಅಬ್ಬಾಸ್(ರ.ಅ)ಅವರ ಸಂತಾನದಿಂದ ಇರುವರು.

ಇವರು ಬಿಜಾಪುರದ ಶ್ರೇಷ್ಠ ಸೂಫಿವರ್ಯರೂ ಅತ್ಯುತ್ತಮ ಶಿಕ್ಷಕರು ಹಾಗೂ ಹದೀಸ್‌ದ (ಪ್ರವಾದಿಯವರ ವಚನರತ್ನಗಳ) ವಿದ್ವಾಂಸರು. ತಮ್ಮ ಕಾಲದ ಎಲ್ಲ ಸೂಫಿವಂಶಸ್ಥರೊಂದಿಗೆ ಹಾಗೂ ವಿದ್ವಾಂಸರು ಹಾಗೂ ಜ್ಞಾನಿಗಳೊಂದಿಗೆ ಉತ್ತಮ ಬಾಂಧವ್ಯವಿರಿಸಿಕೊಂಡು ಸಮೃದ್ಧಿ ಪಡೆದರು. ಹಜ್ರತ್ ಶೇಖ ಹಾಗೂ ಮುಹಮ್ಮದ್ ಇದ್ರೂಸ್ ಇವರಿಂದ ಖಿಲಾಫತ್ ಪಡೆದುಕೊಂಡರು.

ಹಜರ್‌ಶಾಫಿ ಮಿಸ್ರಿಮಕ್ಕಿಯವರ ಪುತ್ರರಾದ ಹಜ್ರತ್ ಶೇಖ ಶುಹಾಬುದ್ದೀನ್ ಇವರಿಂದ ಹದೀಸ್‌ಜ್ಞಾನವನ್ನು ಪಡೆದು ಪ್ರಮಾಣ ಪತ್ರ ಹೊಂದಿದರು. ಹಜ್ರತ್‌ಷಾಹ್ ಹಾಷಿಂ ಹುಸೈನಿ ಅಲ್ವಿ(ಖು)ಯವರಿಂದಲೂ ಜ್ಞಾನಪ್ರಾಪ್ತಿ ಮಾಡಿಕೊಂಡರು.

ತಮ್ಮ ಸ್ವದೇಶದಿಂದ ಹೊರಟು ಬುರ್ಹಾನ್‌ಪುರ್ ಖಾಂದೇಶಕ್ಕೆ ಬಂದು ವಾಸಿಸತೊಡಗಿದರು. ಶಿಷ್ಯರನ್ನು ಶಿಕ್ಷಣ ನೀಡುವಲ್ಲಿ ನಿರತರಾಗಿದ್ದರು. ಸುಲ್ತಾನ್ ಇಬ್ರಾಹಿಂ ಆದಿಲ್‌ಶಾಹ್ ದ್ವಿತಿಯ ಹಜ್ರತ್‌ರ ಪ್ರಸಿದ್ಧಿ ತಿಳಿದುಕೊಂಡು ಬಿಜಾಪುರಕ್ಕೆ ಆಹ್ವಾನಿಸಿದನು. ಹಜ್ರತ್‌ರು ಬಾದಶಹನ ಬಯಕೆಯಂತೆ ಬಿಜಾಪುರಕ್ಕೆ ಆಗಮಿಸಿ ಇಲ್ಲಿಯೇ ವಾಸಿಸತೊಡಗಿದರು. ನಗರದವರು ಹಜ್ರತ್‌ರ ವಾಸ್ತವ್ಯವು ಈ ಪ್ರದೇಶಕ್ಕೆ ಸಮೃದ್ಧಿದಾಯಕವೆಂದು ಬಗೆದು ಅವರಿಂದ ಆಧ್ಯಾತ್ಮಜ್ಞಾನದ ಸಮೃದ್ಧಿಯನ್ನು ಪಡೆದರು.

ಹಜ್ರತ್‌ರು ಬಿಜಾಪುರಕ್ಕೆ ಆಗಮಿಸಲು ತಮ್ಮ ಅಳಿಯ ಹಾಗೂ ಶಿಷ್ಯರಾದ ಮುಲ್ಲಾ ಶೇಖ ನಸೀರ್ ಇವರು ಇಲ್ಲಿರುವದು ಒಂದು ಕಾರಣವಾಗಿತ್ತು. ಮುಲ್ಲಾ ಶೇಖ ನಸೀರರ ತೀಕ್ಷ್ಣ ಬುದ್ಧಿಮತ್ತೆ, ಅಪಾರ ತಿಳಿವಳಿಕೆ ಹಾಗೂ ಪಾದರಸದಂತಹ ಚುರುಕಾದ ವ್ಯಕ್ತಿತ್ವ ಎಷ್ಟೊಂದು ಉನ್ನತವಾಗಿತ್ತೆಂದರೆ ಇವರನ್ನು ಮೀರಿಸಲು ಯಾರಿಗೂ ಸಾಧ್ಯವೇ ಇರಲಿಲ್ಲ. ಇವರ ಸ್ಮರಣ ಶಕ್ತಿಯು ಎಷ್ಟು ತೀಕ್ಷ್ಣವಾಗಿತ್ತೆಂದರೆ ಒಮ್ಮೆ ಒಂದು ಪುಸ್ತಕವು ಕಣ್ಣೆದುರು ಹಾಯ್ದು ಹೋದರೆ ಜೀವನ ಪರ್ಯಂತ ಒಂದು ಅಕ್ಷರ, ಒಂದು ವಾಕ್ಯವನ್ನು ಇವರು ಮರೆಯುತ್ತಿರಲಿಲ್ಲ. ಒಂದು ವೇಳೆ ಒಂದು ತತ್ವವು ಅವರ ಕಿವಿಗೆ ಬಿದ್ದರೆ ಅದನ್ನು ಸದಾಕಾಲ ನೆನಪಿನಲ್ಲಿಡುತ್ತಿದ್ದರು. ಒಂದುದಿನ ಇಸ್ಲಾಮಿ ಕಾನೂನಿನ ಶಿಕ್ಷಣ ನೀಡುತ್ತಿರುವಾಗ ಯಾವುದೇ ವಿಷಯ ಕುರಿತು ಪ್ರಶ್ನೆಯೆನ್ನೆತ್ತಿದ್ದರು ಆಗ ಹಜ್ರತ್‌ಶೇಖರು ಅದನ್ನು ಅತ್ಯಂತ ಸೂಕ್ತ ರೀತಿಯಲ್ಲಿ ಪ್ರಮಾಣದೊಂದಿಗೆ ಉತ್ತರಿಸಿದರು. ಆದರೂ ಹಜ್ರತ್ ನಸೀರ್‌ರಿಗೆ ಅದರಿಂದ ತೃಪ್ತಿ ಸಿಗಲಿಲ್ಲ. ಅವರ ಚತುರ ಬುದ್ಧಿಯು ಅದನ್ನು ಸ್ವೀಕರಿಸಲಿಲ್ಲ. ಹಾಗೂ ತಮ್ಮ ದೃಷ್ಟಿಧೋರಣೆಯನ್ನು ಪ್ರಕಟಪಡಿಸಿದರು. ಶೇಖರು ಉತ್ತರ ರೂಪದಲ್ಲಿ ಇಮಾಮೇ ಆಜಂ ಹಜ್ರತ್ ಅಬೂ ಹನೀಫಾ ಹೀಗೆ ಉತ್ತರಿಸಿರುವರು. ಆಗ ನಸೀರ್‌ರೆಂದರು– ಹೂವ ರಜೂಲುನ್ ವ ಅನಾ ರಜುಲುನ್(ಆತ ಓರ್ವ ಗಂಡಸನಾದರೆ ನಾನು ಓರ್ವ ಗಂಡಸು) ನಾನು ಇಮಾಮ್‌ರ ಹೇಳಿಕೆಯನ್ನು ಏಕೆ ದೃಢಿಕರಿಸಲಿ? ಈ ಮಾತಿನಿಂದ ಹಜ್ರತ್‌ಶೇಖರು ನೊಂದುಕೊಂಡರು. ಹಜ್ರತ್ ಇಮಾಮ್ ಆಜಂರ ಹೇಳಿಕೆಯನ್ನು ಪ್ರಶ್ನಿಸುವೆಯಾ? ಎಂದರು. ಹಾಗೂ ಕೋಪದ ಅವಸ್ಥೆಯಲ್ಲಿ ಮನೆಯೊಳಗೆ ಹೋಗಿ ಬಿಚ್ಚುಗತ್ತಿಯನ್ನು ತಂದು ಶೇಖನಸೀರ್‌ರ ಬಳಿ ತಲುಪಿದರು. ಈ ಸಂದರ್ಭವನ್ನು ಗಮನಿಸಿದ ನಸೀರ್‌ರು, ಶೇಖರ ಕ್ರೋಧವು ನಾನಿಲ್ಲಿಂದ ಹೋಗದೇ ಶಮನಗೊಳ್ಳುವದಿಲ್ಲ. ಇದ್ದ ಸ್ಥಿತಿಯಲ್ಲಿಯೇ ಮನೆಯಿಂದ ಹೊರಬಂದು ಪ್ರವಾಸದಲ್ಲಿ ಹೊರಟರು. ಹಜ್ರತ್‌ರೂ ಸಹ ಅವರನ್ನು ಹಿಂಬಾಲಿಸಿದರು. ನಸೀರ್‌ರು ಎಲ್ಲಿ ತಂಗುತ್ತಿದ್ದರೋ ಶೇಖ್ ಇವರೂ ಸಹ ಅಲ್ಲಿ ಹೋಗಿ ಇವರ ವಿಳಾಸವನ್ನು ವಿಚಾರಿಸುತ್ತಿದ್ದರು. ಹೀಗೆಯೇ ಹಿಂಬಾಲಿಸುತ್ತ ವಿಳಾಸ ಕೇಳುತ್ತಾ ಬುರ್ಹಾನಪುರ ಖಾಂದೇಶಕ್ಕೆ ತಲುಪಿದರು. ಇವರು ತಮ್ಮ ಹಠ ಬಿಡದೇ ಇಷ್ಟು ಸುದೀರ್ಘ ಪ್ರಯಾಣ

ಮಾಡಿ ಹಿಂಬಾಲಿಸಿ ಬಂದದ್ದನ್ನು ಕಂಡು ತಕ್ಷಣವೇ ನಸೀರರು ಮರಳಿ ಬಿಜಾಪುರಕ್ಕೆ ಬಂದರು.

ಈ ಅವಧಿಯಲ್ಲಿ ಬಿಜಾಪುರವು ಮಹಾವಿದ್ವಾಂಸರಿಂದ, ಮಹಾಜ್ಞಾನಿಗಳಿಂದ, ಮಹಾಪುರುಷರಿಂದ ತುಂಬಿ ತುಳುಕುತ್ತಿತ್ತು. ಶೇಖ ನಸೀರ್‌ರು ಮಹಾಜ್ಞಾನಿಗಳೊಂದಿಗೆ ತದ್ವಿದ್ ಸಂಭಾಷಣೆ ಹಾಗೂ ಚರ್ಚೆ ಸಂವಾದ ನಡೆಸಿ ಅವರನ್ನು ಮೀರಿಸುತ್ತಿದ್ದರು. ಜ್ಞಾನಿಗಳು ಅವರಿಂದ ಬೇಸರ ಪಟ್ಟುಕೊಂಡರು. ಯಾವಾಗ ನಸೀರರು ಬಿಜಾಪುರದಿಂದ ಹೊರಟು ಒಂದು ಅರಣ್ಯ ಪ್ರದೇಶದಲ್ಲಿ ತಲುಪಿದರು. ಆಗ ಓರ್ವ ವೃದ್ಧೆಯು ಇವರನ್ನು ಭೇಟಿಯಾಗಿ 'ರಜಸ್ರಾವದ ಎಷ್ಟು ವರ್ಣಗಳಿರುತ್ತವೆ?' ಶೇಖನಸೀರ್‌ರು ಚಿಂತಿತರಾದರು ಆಗ ಆ ವೃದ್ಧೆ ಹೇಳಿದರು. ವಿಷಾದವಿದೆ. ನಿನ್ನ ಜ್ಞಾನದ ಮೇಲೆ, ಇಂಥ ಕ್ಷುಲ್ಲಕ ಜ್ಞಾನವನ್ನಿಟ್ಟುಕೊಂಡು ಹಜ್ರತ್ ಇಮಾಮ್ ಆಜಂರ ಉತ್ತರವನ್ನು ಸಂದೇಹಿಸುವಿಯಾ? ಹಾಗೂ ಹೂವ ರಜೂಲೂನ್ ವ ಅನಾ ರಜೂಲುನ್। ಎನ್ನುವುದೇ! ಶೇಖ ನಸೀರರ ಮೇಲೆ ಈ ಮಾತಿನ ಪ್ರಭಾವ ಎಷ್ಟಾಯಿತೆಂದರೆ ಅವರು ತಕ್ಷಣವೇ ಮೂರ್ಛೆ ಹೊಂದಿದರು. ಯಾವಾಗ ಎಚ್ಚರವಾಯಿತೋ ನೋಡುತ್ತಾರೆ ಆಗ ಅಲ್ಲಿ ಯಾರೂ ಇರಲಿಲ್ಲ.

ಹಜ್ರತ್ ಶೇಖ ಇಲ್ಮಲ್ಲಾಹ್(ಖ)ರಿಂದ ಅಸಂಖ್ಯ ಜನರಿಗೆ ಬೈಯ್ಯತ್ ವ ಖಿಲಾಫತ್‌ದ ಸಮೃದ್ಧಿ ಪ್ರಾಪ್ತಿಯಾಯಿತು. ಇವರು ಜಿಲ್‌ಹಜ್ಜಾ ತಿಂಗಳ ೧೧ರಂದು ಹಿಜ್ರಿಶಕೆ ೧೦೨೪ರಲ್ಲಿ ನಿಧನ ಹೊಂದಿದರು. ಪಟ್ಟಣದ ಕೋಟೆಯ ಹೊರಗಡೆ ಅಲ್ಲಾಪುರ ಅಗಸಿಯ ಹೊರಗೆ ಮುಸ್ತಫಾಬಾಗ್‌ದಲ್ಲಿ ಸಮಾಧಿಸ್ಥರಾಗಿರುವರು. ಇವರ ನಿಧನದ ದಿನಾಂಕವನ್ನು 'ಉಸ್ತಾದ್ ಅಹಲೇ ಹದೀಸ್' ೧೦೨೪ ಎಂದು ಬರೆಯಲಾಗಿದೆ. ಹಜ್ರತ್‌ರ ಸಂತಾನದಿಂದ, ಹಾಗೂ ಮುಂಬರುವ ಪೀಳಿಗೆಯಿಂದ ಹಲವಾರು ಜನರು ವಿದ್ವಾಂಸರು ಶಿಕ್ಷಕರು ಹಾಗೂ ಸೂಫಿಗಳು ಆಗಿ ಹೋಗಿರುವರು. ಇವರ ಪುತ್ರರಾದ ಹಜ್ರತ್‌ಶೇಖ ಅಬುಹನೀಫಾರವರೂ ಮಹಾಪುರುಷರಾಗಿದ್ದರು. ಇವರಿಂದಲೂ ಬೈಯ್ಯತ್ ಹಾಗೂ ಶಿಕ್ಷಣದ ವ್ಯವಸ್ಥೆ ಜಾರಿಯಲ್ಲಿತ್ತು. ಇವರ ಸಮಾಧಿ ಸ್ಥಳದ ವಿಳಾಸ ತಿಳಿದು ಬಂದಿಲ್ಲ.

■

೮೫. ಹಜ್ರತ್‌ಶೇಖ ಅಬುಲ್ ಮಾಲಿ(ಖು)

ಇವರು ಹಜ್ರತ್‌ರ ಜೇಷ್ಠ ಪುತ್ರರಾಗಿರುವರು. ಇವರು ಮಜಜೂಬ್(ನಿಮಗ್ನ) ವ್ಯಕ್ತಿತ್ವದವರಾಗಿದ್ದರು. ಹಗಲಿರುಳೂ ಅಲ್ಲಾಹುವಿನ ಸ್ಮರಣೆಯಲ್ಲಿ ಮುಳುಗಿರುತ್ತಿದ್ದರು. ಆಗಾಗ ತಮ್ಮ ತಂದೆಯವರ ಜಿಯಾರತ್‌ಗಾಗಿ ಹೋಗಿ ಅಲ್ಲಿಯೇ ಮಗ್ನರಾಗಿ ಕುಳಿತುಕೊಂಡು ಬಿಡುತ್ತಿದ್ದರು. ರಾತ್ರಿಯಾಗುತ್ತಿತ್ತು. ಹಾಗೂ ಪಟ್ಟಣದ ಕೋಟೆಯ ದ್ವಾರವು ಮುಚ್ಚಲ್ಪಡುತ್ತಿತ್ತು. ಯಾವಾಗ ಬೆಳಗು ಹರಿಯುತ್ತಿತ್ತೋ ಆಗ ಅವರು ತಮ್ಮ ಕೋಣೆಯಿಂದ ಹೊರಬರುತ್ತಿದ್ದರು. ಹಜ್ರತ್‌ರಿಂದ ಈರ್ವರು ಪುತ್ರರು ಜನಿಸಿದರು. ಹಜ್ರತ್‌ರ ಸಮಾಧಿಯು ಅವರ ತಂದೆಯವರ ಸಮಾಧಿಯ ಪಕ್ಕದಲ್ಲಿ ಇರುವದು.

೮೬. ಹಜ್ರತ್ ಶೇಖ ಅಬುತುರಾಬ್ ಮುದರ್ರಿಸ್(ಖು)

ಇವರು ಬಿಜಾಪುರದ ಪ್ರಸಿದ್ಧ ಧಾರ್ಮಿಕ ಶಿಕ್ಷಣ ತಜ್ಞರು ಆಗಿರುವರು. ಜ್ಞಾನಿಗಳು, ವಿದ್ವಾಂಸರು, ಪ್ರಸಿದ್ಧ ಮಹಾಪುರುಷರು ಆಗಿ ಹೋದಂತಹ ಸೂಫಿ ವಂಶಸ್ಥರು ಆಗಿದ್ದಾರೆ. ಇವರು ತಮ್ಮ ಪ್ರಾಥಮಿಕ ಜ್ಞಾನವನ್ನು,(ಮಾಕೂಲ ವಮನಕೂಲ)ವ್ಯಾಕರಣ ಹಾಗೂ ಪ್ರಮಾಣಬದ್ಧ ಬರಹದ ಮಾಹಿತಿಯನ್ನು ಗುರುಗಳಾದ ಹಜ್ರತ್ ಖಾಜಿ ಸೈಯ್ಯದ್ ಮುಹಮ್ಮದ್ ಅಲಿ(ಖು) ಇವರಿಂದ ಪಡೆದರು. ಅಸಂಖ್ಯ ಜನರು ಇವರಿಂದ ಜ್ಞಾನಜ್ಯೋತಿ ಬೆಳಗಿಕೊಂಡು ಬದುಕಿನಲ್ಲಿ ಹಾಗೂ ಧಾರ್ಮಿಕ, ಆಧ್ಯಾತ್ಮಿಕ ಜ್ಞಾನ ಸಾಧನೆಯಲ್ಲಿ ಉನ್ನತಿ ಸಾಧಿಸಿದರು. ಇವರು ಶಿಕ್ಷಣ ನೀಡುವ ಪರಿಯು ಜಗದ್ವಿಖ್ಯಾತವಾಯಿತು. ಪ್ರಮುಖವಾಗಿ ಹಿಂದೂಸ್ಥಾನ ದೇಶದ ಅನೇಕ ಪ್ರಾಂತಗಳಲ್ಲಿ ಹಾಗೂ ದಖನ್ನಿನಲ್ಲಿ ಅತಿ ಹೆಚ್ಚು ಪ್ರಸಿದ್ಧಿ ಹೊಂದಿತು. ಇವರ ಶಿಷ್ಯರಲ್ಲಿ ಅನೇಕರು ಮಹಾವಿದ್ವಾಂಸರು ಆಗಿರುವರು. ಹಜ್ರತ್‌ರು ಒಂದು ಬೆಳಿಗ್ಗೆಯಿಂದ ಸಾಂಯಕಾಲದ ಸಮಯದವರೆಗೆ ಜ್ಞಾನಪ್ರಸಾರದ ಕಾರ್ಯದಲ್ಲಿ ತೊಡಗಿಕೊಂಡಿರುತ್ತಿದ್ದರು. ಹಾಗೂ ತಮ್ಮ ಬಳಿಯ ಗಡಿಯಾರವನ್ನು ಬಳಸಿಕೊಂಡು ಒಂದು ನಿರ್ಧಿಷ್ಟ ಅವಧಿಯವರೆಗೆ ಪ್ರತಿಯೋರ್ವ ಶಿಷ್ಯರನ್ನು ವ್ಯಯಕ್ತಿಕವಾಗಿ ಗಮನ ಹರಿಸಿ ಅವರನ್ನು ಉದ್ಧರಿಸುತ್ತಿದ್ದರು. ಮುಲ್ಲಾ ನಿಜಾಮರು ಹಜ್ರತ್‌ರಿಂದ ಜ್ಞಾನದಲ್ಲಿ ಪರಿಪೂರ್ಣತೆ ಹೊಂದಿದ್ದರು. ಬಾದಶಹ ಆಲಂಗೀರ್‌ರು ಮುಲ್ಲಾ ನಿಜಾಮರ ಶಿಷ್ಯರಾಗಿರುವರು. ಹಾಗೂ ತಮ್ಮ ಗುರುಗಳಾದ ಮುಲ್ಲಾ ನಿಜಾಮರಿಂದ ಅವರ ಗುರುಗಳಾದ ಹಜ್ರತ್ ಶೇಖ ಅಬುತುರಾಬ್(ಖು)ರ ಪ್ರಶಂಸೆಯನ್ನು ಕೇಳಿ ಅವರನ್ನು ಭೇಟಿಯಾಗುವ ಉತ್ಸುಕತೆ ತೋರಿದರು. ಆದರೆ ಯಾವಾಗ ಬಿಜಾಪುರವನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಆಗ ಹಜ್ರತ್‌ರು ಈ

ನಶ್ವರ ಜಗತ್ತಿನಿಂದ ವಿಮುಖರಾಗಿದ್ದರು. ಬಾದಶಾಹ ತುಂಬು ಆಸ್ಥೆಯೊಂದಿಗೆ ನಮ್ರನಾಗಿ ಹಜ್ರತ್‌ರ ಸಮಾಧಿ ಸ್ಥಳಕ್ಕೆ ಹೋಗಿ ಅವರ ಸಮಾಧಿಯ ಜಿಯಾರತ್‌ಗೈದರು.

ಹಜ್ರತ್‌ರ ನಿಧನವು ಸಫರ್ ತಿಂಗಳ ೨೦ನೆಯ ದಿನಾಂಕದಂದು ಹಿಜ್ರಿಶಕೆ-೧೦೮೬ಕ್ಕೆ ಆಯಿತು. ಇವರ ಸಮಾಧಿ ಸ್ಥಳವು ಹಜ್ರತ್‌ರ ಅಜ್ಜಂದಿರಾದ ಹಜ್ರತ್ ಶೇಖ ಇಲ್ಮುಲ್ಲಾಹ್ ಮುಹದ್ದಿಸ್(ಖು)ರ ಸಮಾಧಿಯ ಪಕ್ಕದಲ್ಲಿ ಇರುವದು.

ಹಜ್ರತ್‌ರ ಪುತ್ರಿಯ ಸಂತಾನದಿಂದ ಸೈಯ್ಯದ್ ಮುರ್ತುಜಾ, ಸೈಯ್ಯದ್ ಅಬ್ದುಲ್ ಲತೀಫ್ ಸೈಯ್ಯದ್ ಮೆಹಮೂದ್ ಸಮ್‌ದಾನಿ ಗಚ್ಚಿಮಹಲನವರು ಇರುವರು.

■

೮೭. ಹಜ್ರತ್ ಖಾಜಿ ಆಜುದ್ದೀನ್ ಮುಹಮ್ಮದ್(ಖು)

ಇವರು ಬಿಜಾಪುರದ ಮಹಾಪುರುಷರಲ್ಲಿ ಓರ್ವರು, ವಿದ್ಯಾದಾನಗೈಯ್ಯುವ ವಿದ್ವಾಂಸರಲ್ಲಿ ಪ್ರಮುಖರು. ಹಜ್ರತ್‌ಶೇಖ ಅಬುತುರಾಬ್ ಮುದರ್ರಿಸ್‌ರ ಸಹೋದರರಾಗಿರುವರು. ಇವರ ವ್ಯಕ್ತಿತ್ವದಲ್ಲಿ ದೇವನಿಷ್ಠೆ ಹಾಗೂ ಪಾವಿತ್ರ್ಯತೆ ಪ್ರತಿಫಲಿಸುತ್ತಿತ್ತು. ಇವರು ಸುಲ್ತಾನ ಮುಹಮ್ಮದ್ ಆದಿಲ್‌ಶಾಹನ ಕಾಲದಲ್ಲಿ ನ್ಯಾಯಾಧೀಶರ ಹುದ್ದೆಯನ್ನು ಅಲಂಕರಿಸಿದ್ದರು. ಷರಿಯತ್ತಿನ ಕಾನೂನನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಿದ್ದರು. ಓರ್ವ ವ್ಯಕ್ತಿಯು ಹಜ್ರತ್‌ರ ಎದುರು 'ಸುಳ್ಳು ಪ್ರಮಾಣ ಮಾಡಿ ಹೋದನು ಹಾಗೂ ದಾರಿಯಲ್ಲಿಯೇ ಆ ಸುಳ್ಳು ಪ್ರಮಾಣದಿಂದಾಗಿ ಅಸುನೀಗಿದನು ಎಂದು ಹೇಳಲಾಗುತ್ತದೆ.

ಓರ್ವ ವ್ಯಕ್ತಿಯು ಹಜ್ರತ್‌ರ ಗ್ರಂಥಾಲಯದ ಸಂರಕ್ಷಕನಾಗಿದ್ದನು. ಆತನು ನಿರಕ್ಷರಿಯಾಗಿದ್ದನು. ನ್ಯಾಯಾಲಯದಲ್ಲಿ ಮೊಕದ್ದಮೆ ನಡೆಯುವಾಗ, ನಿಷ್ಕರ್ಷೆಯಾಗುವಾಗ ಹಜ್ರತ್‌ರು ಸಮಗ್ರವಾಗಿ ವಾದಸರಣಿ, ಸಾಕ್ಷ್ಯ ಹಾಗೂ ವಾಸ್ತವಾಂಶಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದರಲ್ಲದೇ ಅದಕ್ಕೆ ಪೂರಕವಾದ ಗ್ರಂಥಗಳನ್ನು ತಮ್ಮ ಗ್ರಂಥಾಲಯದಿಂದ ತರಿಸುತ್ತಿದ್ದರು. ತೀರ್ಮಾನ ನೀಡುವ ಮೊದಲು ಆಯಾ ಮೊಕದ್ದಮೆಗಳಿಗೆ ಸಂಬಂಧಿಸಿದ ಗ್ರಂಥಗಳನ್ನು ಅವಲೋಕಿಸಿ ಪರಿಹಾರ ಹುಡುಕಿಕೊಳ್ಳುತ್ತಿದ್ದರು. ಮತ್ತು ಆ ನಿರಕ್ಷರಿಯಾದ ಗ್ರಂಥಪಾಲಕನು ಆಯಾ ಗ್ರಂಥಗಳನ್ನು ಹಜ್ರತ್‌ರು ಅವಲೋಕಿಸುವಾಗ ತಾನೂ ಸಹ ಆಯಾ ಸಮಸ್ಯೆ ಆಯಾ ಪರಿಹಾರ ಮನದಟ್ಟು ಮಾಡಿಕೊಳ್ಳುತ್ತಿದ್ದನಲ್ಲದೇ ಆ ಪರಿಹಾರವು ಯಾವ ಗ್ರಂಥದಲ್ಲಿ ಎಷ್ಟನೆಯ ಪುಟದಲ್ಲಿ ಯಾವ ಅಧ್ಯಾಯದಲ್ಲಿ ಬಂದಿದೆ ಎಂಬುದನ್ನು ಸಹ ನೆನಪಿನಲ್ಲಿಟ್ಟುಕೊಳ್ಳುತ್ತಿದ್ದನು. ಕೆಲದಿನಗಳಲ್ಲಿಯೇ ಆತನು ಷರಿಯತ್ತಿನ ಕಾನೂನಿನ

ಮೇಲೆ ಅದೆಷ್ಟು ಹಿಡಿತ ಸಾಧಿಸಿದನೆಂದರೆ ಅತ್ಯಂತ ಅಧಿಕೃತತೆ ಆತನ ಜ್ಞಾನದಲ್ಲಿತ್ತು. ತನ್ನ ಕಾಲದ ನ್ಯಾಯಪರಿಣಿತರಲ್ಲಿ ಓರ್ವ ಪ್ರಮುಖನಾಗಿ ಪರಿಗಣಿಸಲ್ಪಡತೊಡಗಿದನು. ಒಂದು ವೇಳೆ ಆತನಲ್ಲಿ ಯಾವುದೇ ವ್ಯಕ್ತಿಯು ಯಾವುದೇ ಸಮಸ್ಯೆಯ ಪರಿಹಾರವನ್ನು ಬಯಸಿದ ತಕ್ಷಣವೇ ಉತ್ತರ ರೂಪದಲ್ಲಿ ಗ್ರಂಥದ ಹೆಸರು, ಅಧ್ಯಾಯ, ಪುಟಸಂಖ್ಯೆ ಎಲ್ಲವನ್ನು ವಿವರಿಸುತ್ತಿದ್ದನು. ಪ್ರಮಾಣೀಕರಿಸುವದಕ್ಕಾಗಿ ಯಾರಾದರೂ ಆಯಾ ಗ್ರಂಥವನ್ನು ತೆಗೆದು ನೋಡಿದರೆ ಅದು ಶತಃ ಪ್ರತಿಶತ ಸರಿಯಾಗಿರುತ್ತಿತ್ತು.

ಆಲಂಗೀರ್ ಬಾದಶಹನು ಬಿಜಾಪುರವನ್ನು ವಶಪಡಿಸಿಕೊಂಡಾಗ ಈ ವ್ಯಕ್ತಿಯು ವಿದ್ವಾಂಸರೊಂದಿಗೆ ಚರ್ಚೆ ಸಂವಾದಕ್ಕಿಳಿಯುತ್ತಿದ್ದನು. ಅಲ್ಲದೇ ಇಂತಹ ಸೂಕ್ಷ್ಮ ಪ್ರಶ್ನೆಗಳನ್ನು ಕೇಳುತ್ತಿದ್ದನೆಂದರೆ ವಿದ್ವಾಂಸರಿಗೆ ಯೋಚನೆಗೀಡು ಮಾಡುತ್ತಿದ್ದವು. ಆಲಂಗೀರ್ ಬಾದಶಹನು ಆತನ ಈ ಪ್ರಸಿದ್ಧಿಯನ್ನು ಕೇಳಿ ತನ್ನ ದರಬಾರಕ್ಕೆ ಕರೆಯಿಸಿ ಮುಖಾಮುಖಿಯಾಗಿ ಕೆಲ ಸಮಸ್ಯೆಗಳನ್ನು ಕೇಳಿದನು. ಹಾಗೂ ಇವರಿಂದ ಸಂತೃಪ್ತಿದಾಯಕ ಉತ್ತರ ಪಡೆದು, ಇವರಲ್ಲಿರುವ ಫಿಕ್ಹ ಅಂದರೆ ಷರೀಯತ್ತಿನ ಕಾನೂನಿನ ಅಪ್ರತಿಮ ಜ್ಞಾನಕ್ಕೆ ತಲೆಬಾಗಿ ಇವರನ್ನು ಸನ್ಮಾನಪೂರ್ವಕವಾಗಿ ಸೋಲಾಪುರದ ನ್ಯಾಯಾಧೀಶನನ್ನಾಗಿ ನೇಮಿಸಿದನು. ಹಜ್ರತರ ಸಾಮಿಪ್ಯದಿಂದ ಅದೆಂಥ ಅಪರೂಪದ ವ್ಯಕ್ತಿತ್ವ ರೂಪುಗೊಂಡಿತು. ಎಂಬುದು ಈ ಘಟನೆಯಿಂದ ಸಾಬೀತಾಗುತ್ತದೆ. ಹಜ್ರತ್‌ರು ರಬ್ಬಿವುಲ್ ಅವ್ವಲ್ ತಿಂಗಳ ೫ನೆಯ ದಿನಾಂಕದಂದು ನಿಧನ ಹೊಂದಿದರು.

ಅಥೋನಿಯಲ್ಲಿ ಹಜ್ರತ್‌ರ ಸಮಾಧಿ ಇರುವದು.

■

೮೮. ಹಜ್ರತ್ ಮೌಲಾನಾ ಮುಹಮ್ಮದ್ ಜುಬೇರಿ (ಖ)

ಇವರು ಇಬ್ರಾಹಿಂ ಆದಿಲ್‌ಶಾಹನ ಅವಧಿಯಲ್ಲಿ ಗುಜರಾತಿನ ಅಹ್ಮದಾಬಾದ್‌ದಿಂದ ಬಿಜಾಪುರಕ್ಕೆ ಆಗಮಿಸಿದರು.

ಇವರು ಮಹಾವಿದ್ವಾಂಸರು ಹಾಗೂ ಆಧ್ಯಾತ್ಮಿಕ ಜ್ಞಾನದ ಸಾಧಕರಾಗಿದ್ದರು.

ಇವರ ವೃದ್ಧಾವಸ್ಥೆಯಲ್ಲಿ ಶೇಖ ನಸೀರ್‌ರು ಇಲ್ಲಿ ಶಿಕ್ಷಕರಾಗಿದ್ದರು. ಇಲ್ಲಿಯ ವಿದ್ವಾಂಸರು ಅವರ ವಾದ-ವಿವಾದದಿಂದ ಬೇಸತ್ತಿದ್ದರು. ಹಾಗೂ ನಗರದ ಶಿಕ್ಷಕ ವಲಯಕ್ಕೆ ಸಂವಾದದಲ್ಲಿ ಏನಾದರೂ ಆರೋಪ ಮಾಡುತ್ತಿದ್ದರು.ಆಗ ಆಡಳಿತಗಾರರು ಹಾಗೂ ನಗರದ ಜನರು ಹಜ್ರತ್ ಮೌಲಾನಾರ ಸನ್ನಿಧಿಯಲ್ಲಿ ವಿನಂತಿಸಿದರು.

ಒಂದು ವೇಳೆ ಶೇಖ ನಸೀರರನ್ನು ಸಂವಾದ ಚರ್ಚೆಗೆ ಕರೆದು ಅವರನ್ನು ಮೀರಿಸುವ ವಿದ್ವಾಂಸರನ್ನು ನೇಮಿಸಿ ಸಭೆ ನಡೆಸಿದರೆ ಶೇಖ ನಸೀರರು ಮೆತ್ತಗಾಗಬಹುದು. ಈ ನಗರದ ಪ್ರತಿಷ್ಠೆಯೂ ಉಳಿಯುವುದು. ಹಜ್ರತ್‌ರು ವೃದ್ಧಾವಸ್ಥೆಗೆ ತಲುಪಿ ಬಲಹೀನರಾಗಿದ್ದರು. ಜ್ಞಾನಪ್ರಸಾರದ ಕಾರ್ಯವನ್ನು ಸ್ಥಗಿತಗೊಳಿಸಿ ದೇವನ ಸ್ಮರಣೆಯಲ್ಲಿ ಏಕಾಂತಪ್ರಿಯರಾಗಿ ವಾಸಿಸತೊಡಗಿದ್ದರು. ಈ ಸಂವಾದದಲ್ಲಿ ಭಾಗವಹಿಸಲು ತಮ್ಮ ವೃದ್ಧಾಪ್ಯದ ಸಮಸ್ಯೆಯನ್ನು ಮುಂದಿಟ್ಟು ನಿರಾಕರಿಸಿದರು. ಹಾಗೂ ಹೀಗೆಂದರು ಶೇಖ ನಸೀರ್ ಓರ್ವ ಯುವಕನಾಗಿದ್ದಾನೆ. ಆತನ ಪ್ರಕೃತಿಯಲ್ಲಿ ಕಾರಂಜಿಯಂತೆ ಸಿಡಿಯುವ ಸ್ವಭಾವ ಅಡಗಿದೆ ಹಾಗೂ ಆತನಿಗೆ ಸರ್ವವಿಧದ ಜ್ಞಾನವು ಸಮಗ್ರ ರೂಪದಲ್ಲಿ ತಿಳಿದಿದೆ. ಈ ವೃದ್ಧಾವಸ್ಥೆಯಲ್ಲಿ ಸ್ಮರಣಶಕ್ತಿ ಕುಂದಿದೆ ಆ ಕಾರಣಕ್ಕಾಗಿ ನಾನು ಅವರೊಂದಿಗೆ ಸಂವಾದಕ್ಕಿಳಿಯಲು ತಯ್ಯಾರಿಲ್ಲ. ಆಗ ಈ ಜನರು ಅತ್ಯಂತ ವಿನಮ್ರತೆಯಿಂದ ಹಕ್ಕೊತ್ತಾಯ ಮಾಡಿದಾಗ ಹಜ್ರತ್‌ರು ಸಂವಾದದಲ್ಲಿ ಭಾಗವಹಿಸಲು ಒಪ್ಪಿದರು. 'ವ ಅಮ್ಮಸ್ಸಾಯಿಲ ಫಲಾತನ್‌ಹರ್' ಹಾಗೂ ನೀವು ಯಾರಾದರೂ ನಿಮಗೆ ವಿನಂತಿಸಿದರೆ ನಿರಾಕರಿಸಬೇಡಿರಿ.

ಮರುದಿನ ಜ್ಞಾನಕ್ಕೆ ಸಂಬಂಧಿಸಿದ ಸಮಸ್ಯೆಗಳ ಪರಿಹಾರವನ್ನು ಕಾಗದದ ಚೂರುಗಳಲ್ಲಿ ಬರೆದು ಜೇಬಿನಲ್ಲಿ ಇಟ್ಟುಕೊಂಡರು. ಸಮಯಕ್ಕೆ ಸರಿಯಾಗಿ ಸಂವಾದದ ಸಭೆಯಲ್ಲಿ ಪಾಲ್ಗೊಂಡರು. ಆಗ ಶೇಖ ನಸೀರರು ತಮ್ಮ ಜ್ಞಾನದ ಬಲದಿಂದ ಕ್ಲಿಷ್ಟವಾದ ಸಮಸ್ಯೆಗಳನ್ನು ಹಜ್ರತ್‌ರ ಮುಂದಿಡತೊಡಗಿದರು. ಹಾಗೂ ಉದ್ದುದ್ದ ಮಾತುಗಳುಳ್ಳ ಭಾಷಣವನ್ನು ಮಾಡತೊಡಗಿದರು. ಯಾವಾಗ ಅವರ ಪ್ರಶ್ನೆಗಳು ಹಾಗೂ ಭಾಷಣ ಪೂರ್ತಿಯಾಯಿತೋ ಆಗ ಹಜ್ರತ್ ಮೌಲಾನಾರವರು ತಮ್ಮ ಕಿಸೆಯಿಂದ ಒಂದು ಕಾಗದದ ಚೂರನ್ನು ತೆಗೆದು ಶೇಖ ನಸೀರರಿಗೆ ಕೊಟ್ಟರು. ಅದರಲ್ಲಿ ಅವರ ಕ್ಲಿಷ್ಟ ಪ್ರಶ್ನೆಗಳಿಗೆ ಸರಿಯಾದ ಹಾಗೂ ಸರಳವಾದ ಉತ್ತರಗಳಿದ್ದವು. ಇದೇ ತೆರನಾಗಿ ಬೇರೆಯ ವಿಷಯದಲ್ಲಿ ಶೇಖನಸೀರರು ಕೇಳಿದ ಪ್ರಶ್ನೆಗೆ ಉತ್ತರವಾಗಿ ಬೇರೊಂದು ಕಾಗದದ ಚೂರು ನೀಡಿದರು. ಅದರಲ್ಲಿ ಆ ಸಮಸ್ಯೆಯ ಪರಿಹಾರವಿತ್ತು. ಇದೇ ತೆರನಾಗಿ ಪದೇ ಪದೇ ಹೀಗೆಯೇ ನಡೆಯಲು ಶೇಖ ನಸೀರ್‌ರು ಸಂವಾದದಿಂದ ಹಿಂದೆ ಸರಿದರು. ಹಾಗೂ ಹೀಗೆಂದರು ಪಾವಿತ್ರ್ಯತೆಯ ಉನ್ನತ ಹಂತ ತಲುಪಿದ ಅಲ್ಲಾಹುವಿನ ಸ್ಮರಣೆಯಲ್ಲಿ ಸಂಪೂರ್ಣವಾಗಿ ಮುಳುಗಿದ ಮಹಾಪುರುಷರೊಂದಿಗೆ ವಾದ–ವಿವಾದ ಮುಂದುವರೆಯಲಾರದು ಎಂದು ಬಗೆದು ತಕ್ಷಣವೇ ಹಜ್ರತರೆದರು ಬಾಗಿ 'ಕದಂಬೋಸಿ'ಗೈದರು ಅಲ್ಲದೇ ಅವರ ಆಧ್ಯಾತ್ಮ ಜ್ಞಾನದ ಸಾಧನೆಯನ್ನು ಮನದುಂಬಿ ಹೊಗಳುತ್ತಾ ಸಾಗಿದರು.

ಹಜ್ರತ್ ಮೌಲಾನಾರವರ ನಿಧನವು ಸಫರ್ ತಿಂಗಳ ೧೪ನೆಯ ದಿನಾಂಕದಂದು

ಆಯಿತು. ಹಿಜ್ರಿಶಕೆ ತಿಳಿದು ಬಂದಿಲ್ಲ. ಇವರು ನಗರದ ಹೊರಭಾಗದಲ್ಲಿ ಬಹಮನಪಲ್ಲಿ ದ್ವಾರದ ಬಳಿ ಕಾಸಿಂ ತಾಲಾಬ್‌ದ ಹತ್ತಿರ ಸಮಾಧಿಸ್ಥರಾಗಿರುವರು. ಇವರ ಪತ್ನಿ ಹಾಗೂ ಮೂವರು ಪುತ್ರರು ಇವರ ಪಕ್ಕದಲ್ಲಿಯೇ ಸಮಾಧಿಸ್ಥರಾಗಿರುವರು. ಇವರ ಕಕ್ಕನ ಮಗ ಹಜ್ರತ್ ಮಿಯಾಂ ರಹೀಂ ಮುಹಮ್ಮದ್‌ರು ದೇವನಿಷ್ಠತೆಯಲ್ಲಿ ಪ್ರಸಿದ್ಧಿ ಹೊಂದಿದ್ದರು. ನಗರದ ಹೊರವಲಯದಲ್ಲಿ ಜೆಹರಾಪುರದಲ್ಲಿ ಸಮಾಧಿಸ್ಥರಾಗಿರುವರು.

■

೮೯. ಹಜ್ರತ್ ಖಾಜಿ ಇಬ್ರಾಹಿಂ ಜುಬೇರಿ (ಖ)

ಇವರು ಇಲ್ಲಿಯ ಶಿಕ್ಷಣವೇತ್ತರೂ, ವಿದ್ವಾಂಸರೂ ಆಗಿರುವರು. ಹಾಗೂ ಆಧ್ಯಾತ್ಮಿಕ ಜ್ಞಾನ ಸಾಧನೆಯೊಂದಿಗೆಯೇ ಲೌಕಿಕ ಜ್ಞಾನದಲ್ಲೂ ಸಹ ಪಾರಂಗತರಾಗಿದ್ದರು. ಇವರು ಅಲಾವುಲ್ಲಾಹ್(ಖ) ಎಂದು ಪ್ರಸಿದ್ಧರಾದ ಹಜ್ರತ್ ಶೇಖ್ ಜಾನ್‌ಅಲ್ಲಾಹ್‌ರಿಂದ ವಿದ್ಯೆ ಪ್ರಾಪ್ತಿಗೊಳಿಸಿಕೊಂಡರು. ಈ ಗುರುಗಳ ಸಮಾಧಿಯು ಬುರ್ಹಾನ್‌ಪುರ ಖಾಂದೇಶದಲ್ಲಿರುವದು. ಹಜ್ರತ್ ಜುಬೇರಿಯವರು ಸೆಹರ್‌ವರ್ದಿಯಾ ಪರಂಪರೆಯಲ್ಲಿ ಅನುಮತಿ ಹಾಗೂ ಖಿಲಾಫತ್ ಪಡೆದರು. ಕೆಲ ಸಮಯದವರೆಗೆ ಅತ್ಯಂತ ದಕ್ಷ ರೀತಿಯಲ್ಲಿ ಖಾಜಿ ನಗರದ (ನ್ಯಾಯಾದೀಶ)ರ ಹುದ್ದೆಯನ್ನು ನಿಭಾಯಿಸಿದರು.

ಉಲ್ಲೇಖವಿದೆ, ಒಂದು ದಿನ ನ್ಯಾಯಾಲಯದಲ್ಲಿ ನ್ಯಾಯ ಪಡೆಯುವದಕ್ಕಾಗಿ ಓರ್ವ ವೃದ್ಧೆಯು ಹಜ್ರತ್‌ರನ್ನು ಭೇಟಿಯಾಗಲು ಬಂದಳು. ಜನಜಂಗುಳಿಯ ಗದ್ದಲದಿಂದಾಗಿ ಹಜ್ರತ್‌ರನ್ನು ಮುಖತಃ ಭೇಟಿ ಮಾಡುವದು. ಅಲ್ಲಿ ಸಾಧ್ಯವಾಗಲಿಲ್ಲ ಹೀಗಾಗಿ ನ್ಯಾಯಾಲಯದ ಸಂಕೀರ್ಣದಿಂದ ನೇರವಾಗಿ ಹಜ್ರತ್‌ರ ಮನೆಗೆ ಹೋದಳು. ಅಲ್ಲಿ ಹಜ್ರತ್‌ರ ಪತ್ನಿಯು ತರಕಾರಿಯನ್ನು ಸ್ವಚ್ಛಗೊಳಿಸುತ್ತಿದ್ದರು. ಹಜ್ರತ್‌ರು ತಮ್ಮ ದೇವನಿಷ್ಠೆ ಹಾಗೂ ಕಟ್ಟುನಿಟ್ಟಾದ ನ್ಯಾಯಪಾಲನೆ, ಶಿಸ್ತುಬದ್ಧ ನಡುವಳಿಕೆಯಿಂದ ಎಷ್ಟು ಪಾರದರ್ಶಕ ವ್ಯಕ್ತಿತ್ವ ರೂಪಿಸಿಕೊಂಡಿದ್ದರೆಂದರೆ ನಿಷಿದ್ಧವಾದವುಗಳನ್ನಂತೂ ವರ್ಜಿಸುತ್ತಿದ್ದರು. ಜೊತೆಗೆ ವೃಥಾ ಸಂಶಯ ಪಡುವದೂ ಸಹ ನಿಷಿದ್ಧವಾದದ್ದೆಂದು ಬಗೆಯುತ್ತಿದ್ದರು. ಈ ಕಾರಣಕ್ಕಾಗಿ ಹಜ್ರತ್‌ರು ತಮ್ಮ ಪತ್ನಿಯ ಹೊರತಾಗಿ ಬೇರೆ ಯಾರಿಗೂ ಅಡುಗೆ ಸಿದ್ಧಗೊಳಿಸಲು ಅನುಮತಿ ನೀಡುತ್ತಿರಲಿಲ್ಲ. ಆದರೆ ಇಂದು ಈ ವೃದ್ಧೆಯು ಹಜ್ರತ್‌ರ ಬಳಿ ಬಂದ ಕಾರಣವನ್ನು ಅವರ ಪತ್ನಿಯೆದುರು ವಿವರಿಸಿ ಹೆಣ್ಣುಮಕ್ಕಳ ಅಭ್ಯಾಸ ಬಲದಂತೆ ಅವಳೂ ಸಹ ತರಕಾರಿಯನ್ನು ಸ್ವಚ್ಛಗೊಳಿಸುವದರಲ್ಲಿ ಹಜ್ರತ್‌ರ ಪತ್ನಿಯೊಂದಿಗೆ ಕೈಗೂಡಿಸಿದಳು ಹಾಗೂ ಹಜ್ರತ್‌ರು ಭೋಜನಕ್ಕೆ ಆಗಮಿಸಿದಾಗ ನನ್ನ ಈ ಸ್ಥಿತಿಗತಿಯನ್ನು ವಿವರಿಸಿರಿ ಎಂದು ವಿನಂತಿಸಿಕೊಂಡಳು.

ಎಂದಿನಂತೆ ಹಜ್ರತ್‌ರು ತಮ್ಮ ನಿತ್ಯದ ಸಮಯಕ್ಕೆ ಊಟಕ್ಕಾಗಿ ಮನೆಗೆ ಆಗಮಿಸಿದರು ಮೊದಲನೆಯ ತುತ್ತನ್ನು ಬಾಯಿಯಲ್ಲಿ ತೆಗೆದುಕೊಂಡ ತಕ್ಷಣವೇ ಜೋರಾಗಿ ಹೊರಹಾಕಿದರು ಉಗುಳುತ್ತಾ, ಉಗುಳುತ್ತಾ ಪತ್ನಿಗೆ ಕೇಳಿದರು. ಈ ಭೋಜನಕ್ಕೆ ಏನಾಗಿದೆ? ಇದರಲ್ಲಿ ಶಂಕೆಯ ವಾಸನೆ ತುಂಬಿದೆ. ಆಗ ಅವರ ಪತ್ನಿಯು ಅಲ್ಲಾಹುವಿನ ಕೃಪೆಯಿಂದ ನಿತ್ಯ ತೆಗೆದುಕೊಳ್ಳುವ ಎಚ್ಚರಿಕೆ ಇಂದೂ ಸಹ ಪಾಲಿಸಲಾಗಿದೆ ಎಂದರು ಆಗ ಹಜ್ರತ್‌ರು ಒಂದು ವೇಳೆ ಇದು ಸತ್ಯವಾದರೆ ಮತ್ತೇಕೆ ಇದರಲ್ಲಿ ಶಂಕೆಯ ವಾಸನೆ ಸೇರಿದೆ. ಆಗ ಹಜ್ರತ್‌ರ ಪತ್ನಿಯವರಿಗೆ ಹೊಳೆಯಿತು. ಅಡುಗೆಯ ಸಿದ್ಧತೆಯಲ್ಲಿ ಯಾವ ತಪ್ಪು ಎಸಗಿಲ್ಲ ಆದರೆ ಓರ್ವ ವೃದ್ಧೆಯು ತನ್ನ ಅಹವಾಲನ್ನು ತೆಗೆದುಕೊಂಡು ಬಂದಿದ್ದಳು ನ್ಯಾಯಾಲಯದಲ್ಲಿ ಜನರ ಗದ್ದಲದಿಂದಾಗಿ ತಮಗೆ ಭೇಟಿಯಾಗಲು ಸಾಧ್ಯವಾಗದೆ ಇಲ್ಲಿಗೆ ಆಗಮಿಸಿದ್ದಳು. ತನ್ನ ಅಹವಾಲನ್ನು ನನ್ನೆದುರಿಗೆ ತೋಡಿಕೊಂಡು ನನ್ನ ಜೊತೆ ತರಕಾರಿಯನ್ನು ಆಯಲು ಕೈಗೂಡಿಸಿದಳು. ಹಾಗೂ ಹೀಗೆಂದಳು ತಾವು ಭೋಜನಕ್ಕೆ ಬಂದಾಗ ತನ್ನ ಈ ಅಹವಾಲನ್ನು ತಮ್ಮ ಗಮನಕ್ಕೆ ತರಲು ವಿನಂತಿಸಿದಳು. ಆಗ ಹಜ್ರತ್‌ರೆಂದರು ಇದೇ ಆ ಶಂಕೆಯ ವಾಸನೆಯಾಗಿದೆ. ನಿಮಗೆ ಗೊತ್ತಿದೆಯೇ ಇಂದು ನಾನು ಮುಖ್ಯನ್ಯಾಯಾಧೀಶನ ಸ್ಥಾನದಲ್ಲಿರುವೆನು ನಿರಪೇಕ್ಷೆಯೊಂದಿಗೆ ಜನರ ಅಹವಾಲನ್ನು ಆಲಿಸಿ ನ್ಯಾಯ ತೀರ್ಮಾನ ಮಾಡುವದು ನನ್ನ ಕರ್ತವ್ಯವಾಗಿದೆ. ಆದರೆ ಇಂದು ಆ ವೃದ್ಧೆ ತನ್ನ ಅಹವಾಲನ್ನು ನಿಮ್ಮೆದುರಿಗೆ ಹೇಳುತ್ತಾ ಬಂದು ತರಕಾರಿಯನ್ನು ಆಯ್ದಿದ್ದಳು. ಅವಳ ತೀರ್ಮಾನವೂ ಏನೊಂದನ್ನು ಸ್ವೀಕರಿಸದೇ ನಾನು ನ್ಯಾಯ ಒದಗಿಸುವದಾಗಿತ್ತು. ಆದರೆ ಅವಳು ತರಕಾರಿಯನ್ನು ಆಯುವಲ್ಲಿ ಸಹಾಯ ಮಾಡಿರುವದೂ ಸಹ ನನ್ನ ಮೇಲೆ ಒಂದು ಋಣವಾಗಿದೆ. ಅದು ಲಾಭದ ರೂಪದಲ್ಲಿ ಇಂದು ಅವಳಿಂದ ನನಗೆ ದೊರಕಿದೆ. ಹೀಗೆ ಲಾಭ ಪಡೆಯುವದೂ ಸಹ ಭ್ರಷ್ಟಾಚಾರವಾಗಿದೆ. ಒಂದು ವೇಳೆ ಈ ತುತ್ತನ್ನು ಸೇವಿಸುತ್ತಿದ್ದರೆ ಅಲ್ಲಾಹುವಿನ ದೃಷ್ಟಿಯಲ್ಲಿ ನಾನು ತಪ್ಪಿತಸ್ಥ ಹಾಗೂ ಭ್ರಷ್ಟಾಚಾರಿಯಾಗುತ್ತಿದ್ದೆ. ಇಂದಿನಿಂದ ನಾನು ಈ ಹುದ್ದೆಯನ್ನೇ ತ್ಯಜಿಸುತ್ತೇನೆ ಎಂದು ಹೇಳಿ ನೇರವಾಗಿ ಹೋಗಿ ತಮ್ಮ ರಾಜೀನಾಮೆಯನ್ನು ಸಲ್ಲಿಸಿದರು.

ಹಜ್ರತ್ ಖಾಜಿಯುವರು ರಜ್ಜಬ್ ತಿಂಗಳ ೧೨ನೆಯ ದಿನಾಂಕದಂದು ಹಿಜ್ರಿಶಕೆ ೧೧೯೪ರಲ್ಲಿ ಇಹಲೋಕವನ್ನು ತ್ಯಜಿಸಿದರು. ಇವರ ಸಮಾಧಿಯು ರಂಗೀನ ಮಸೀದೆಯ ಬಳಿಯಿರುವ ಎತ್ತರದ ಸ್ಥಳದಲ್ಲಿ ಸ್ಥಿತವಾಗಿರುವದು. ಇವರ ಸಂತಾನ ಹಾಗೂ ಸಂಬಂಧಿಗಳ ಸಮಾಧಿಗಳೂ ಸಹ ಇಲ್ಲಿಯೇ ಇರುವವು.

■

೯೦. ಹಜ್ರತ್ ಮೌಲಾನಾ ಮುಹಮ್ಮದ್ ಜುಬೇರಿ ಸಾನಿ (ಖು)

ಇವರು ಮಹಾವಿದ್ವಾಂಸರು, ದೇವನಿಷ್ಠರು ಹಾಗೂ ನ್ಯಾಯಪ್ರಿಯರೂ ಆಗಿದ್ದರು. ತಮ್ಮ ಚಿಕ್ಕಪ್ಪರಾದ ಮೌಲಾನಾ ಖಾಜಿ ಇಬ್ರಾಹಿಂ ಜುಬೇರಿಯವರಿಂದ ಜ್ಞಾನಪ್ರಾಪ್ತಿ ಮಾಡಿಕೊಂಡರು. ಇವರ ನಂತರ ತಮ್ಮ ತಾಯಿಯ ಸಹೋದರಿಯ ಪತಿಯವರಾದ ಹಜ್ರತ್ ಸೈಯ್ಯದ್ ಮುಹಮ್ಮದ್ ಮುದರ್‍ರಿಸ್(ಖು)ರಿಂದಲೂ ಸಹ ಶಿಕ್ಷಣ ಪಡೆದರು ಇವರಿಂದಲೇ ಬೈಯ್ಯತ್ ಹಾಗೂ ಖಿಲಾಫತ್ ಹೊಂದಿ ಅನುಯಾಯಿಗಳಿಗೆ ಮಾರ್ಗದರ್ಶನದ ಬೆಳಕಲ್ಲಿ ಸಾಗಿಸುತ್ತಿದ್ದರು. 'ಕಷ್ಫೂಲ್ ಅಸ್ರಾರ್' ಎಂಬ ಚಿಕ್ಕ ಪುಸ್ತಿಕೆಯನ್ನು ಬರೆದರು. ಫವಾಯಿದೆ ಅಲ್ಯೈ ಪುಸ್ತಕದ ಗ್ರಂಥಕರ್ತರಾದ ಪಜ್ರತ್ ಶೇಖ ಅಲಿ(ಖು)ರವರು ಪಜ್ರತ್‌ರ ಶಿಷ್ಯ ಹಾಗೂ ಅನುಂಯಾಯಿಗಳಲ್ಲಿ ಓರ್ವರಾಗಿರುವರು. ಮುಹಮ್ಮದ್ ಹುಸೈನ್ ಖುದ್ದುಸಿಯವರು ಹಜ್ರತ್ ಅಲಿ ಶೇಖರವರ ಶಿಷ್ಯರಾಗಿರುವರು. ಆಲಂಗೀರ ಬಾದಶಹನು ಮುಹಮ್ಮದ್ ಹುಸೈನ್ ಖುದ್ದುಸಿ ಉರ್ಫ್ ಇಮಾಂಸಾಹೇಬ್ ಮುದರ್‍ರಿಸ್‌ರನ್ನು ಸ್ವತಃ ಭೇಟಿಯಾಗಿ ಅವರ ಜ್ಞಾನ ಸಾಮರ್ಥ್ಯ ಅರಿತು ನನಗೆ ದಖ್ಖನ್ನಿನಿಂದ ಒಂದು ಅಮೂಲ್ಯ ಕೊಡುಗೆ ದೊರೆತಿದೆ ಅದು ಹಜ್ರತ್ ಮುಹಮ್ಮದ್ ಹುಸೈನಿಯವರ ರೂಪದಲ್ಲಿದೆ. ಹಾಗೂ ಮತ್ತೊಂದು ಸಲ ಆಲಂಗೀರ್ ಬಾದಶಹನ ಮುಖದಿಂದ ಹಜ್ರತ್‌ರ ಸ್ತುತಿ ಹಾಗೂ ಪ್ರಶಂಸೆಯ ರೂಪದಲ್ಲಿ ಇವರೇ ಈ ತೆರನಾಗಿ ಉನ್ನತ ವ್ಯಕ್ತಿತ್ವದ ಧಣಿಯಾಗಿದ್ದಾರೆಂದರೆ ಇವರ ಗುರುಗಳಾದ ಆ ಸಮರ್ಥರು ಅದೆಂಥಹ ದಕ್ಷರಾಗಿರಬಹುದು! ಎಂದು ಆಶ್ಚರ್ಯ ವ್ಯಕ್ತಪಡಿಸಿದ್ದರು. ಇವರ ಸಮಾಧಿ ಸ್ಥಳವು ಮುಹಮ್ಮದಾಬಾದ್ ಬೀದರ್‌ನಲ್ಲಿ ಸ್ಥಿತವಿರುವದು.

ಹಜ್ರತ್ ಮೌಲಾನಾ ಮುಹಮ್ಮದ್ ಜುಬೇರಿ ಸಾನಿಯವರ ನಿಧನವು ಶವ್ವಾಲ ತಿಂಗಳ ೨೩ನೆಯ ದಿನಾಂಕದಂದು ಹಿಜ್ರಿಶಕೆ ೧೧೮೮ರಲ್ಲಿ ಆಯಿತು. ಹಜ್ರತ್‌ರ ಸಮಾಧಿ ಸ್ಥಳವು ಕೋಟೆಯೊಳಗೆ ನಗರದ ಬಾಗೇಬಹಿಷ್ತದಲ್ಲಿ ಯಾವುದನ್ನು ಹಜ್ರತ್‌ರ ಶಿಷ್ಯರಾದ ಮುಹಮ್ಮದ್ ಯೂಸುಫ್‌ರು ಕಾಣಿಕೆಯಾಗಿ ಅರ್ಪಿಸಿದ್ದರು. ಅಲ್ಲಿ ಇರುವದು ಇವರ ಸುಪುತ್ರ ಮುಹಮ್ಮದ್ ಸಿಬ್ಗತಲ್ಲಾಹ್ ತಮ್ಮ ೧೨ನೆಯ ವಯಸ್ಸಿನಲ್ಲಿ ಇಹಲೋಕ ತ್ಯಜಿಸಿದರು. ತಮ್ಮ ತಂದೆಯವರ ಸಮಾಧಿಯ ಪಕ್ಕದಲ್ಲಿಯೇ ಸಮಾಧಿಸ್ಥರಾಗಿರುವರು. ಹಜ್ರತ್‌ರ ಚಿಕ್ಕಪ್ಪನವರಾದ ಹಜ್ರತ್ ಖಾಜಿ ಮುಹಮ್ಮದ್ ಇಬ್ರಾಹಿಂ(ಖು)ರ ಪುತ್ರ ಶೇಖ ಮುಹಮ್ಮದ್‌ರೂ ಸಹ ಅಲ್ಲಿಯೇ ಸಮಾಧಿಸ್ಥರಾಗಿರುವರು.

ಇವರ ಸಂತಾನದಿಂದ ಮುಹಮ್ಮದ್ ಸಾಹೇಬರ ಮೂವರು ಪುತ್ರರು ಇಸ್ಮಾಯಿಲ್ ಸಾಹೇಬ್, ಅಜ್ಮತ್ ಸಾಹೇಬ್, ದಸ್ತಗೀರ್ ಸಾಹೇಬ್ ಹಾಗೂ ಮೊಹಿಯುದ್ದೀನ್

ಬಾದಶಹ ಸಾಹೇಬ್‌ರವರ ಮೂವರು ಪುತ್ರರು : ಅಬ್ದುಲ್ ರಹೀಂ ಸಾಹೇಬ್, ಖಾದಿರ್‌ಸಾಹೇಬ್, ಲತೀಫ್ ಸಾಹೇಬ್ ಜುಬೇರಿ ರಂಗೀನ್ ಮಸೀದೆಯವರು ಬಿಜಾಪುರದಲ್ಲಿ ಇರುವರು.

■

೯೧. ಹಜ್ರತ್ ಶೇಖ ಮುಹಮ್ಮದ್ ಅರಬ್ (ಖು)

ಇವರು ಆಧ್ಯಾತ್ಮಿಕ ಜ್ಞಾನ ಸಾಧಕರು, ಮಹಾಪುರುಷರು ಹಾಗೂ ಕುರ್‌ಆನ್ ಕಂಠಸ್ಥಗೊಳಿಸಿಕೊಂಡವರು ಆಗಿದ್ದರು. ಸುಲ್ತಾನ್ ಅಲಿ ಆದಿಲ್‌ಶಾಹ ದ್ವಿತೀಯ ದೊರೆಯು ಹಜ್ರತ್‌ರಿಂದ ಶಿಕ್ಷಣ ಪಡೆದವರಲ್ಲಿ ಓರ್ವರು. ಮದೋನ್ಮತ್ತ ಆನೆಯನ್ನು ಹಜ್ರತ್‌ರ ಎದುರು ತರಲಾಗಿ ಹಜ್ರತ್ ಶಾಂತ ಸ್ವಭಾವದೊಂದಿಗೆ ತಮ್ಮ ಪವಿತ್ರ ಹಸ್ತವನ್ನು ಅದರ ಹಣೆ ಮೇಲೆ ನೇವರಿಸಿದಾಗ ಅದು ನಮ್ರವಾಗಿ ನತಮಸ್ತಕವಾಗುತ್ತಿತ್ತು.

ಇವರ ಸಮಾಧಿ ಸ್ಥಳವು ಖಾಜಿ ಇಬ್ರಾಹಿಂ ಜುಬೇರಿಯವರ ಸಮಾಧಿಯ ಪೂರ್ವದಿಕ್ಕಿನಲ್ಲಿ ಇರುವದು. ಇವರ ಮೂವರು ಪುತ್ರರು ಕುರ್‌ಆನ್ ಕಂಠಸ್ಥ (ಹಾಫೀಜೇ ಕುರ್‌ಆನ್) ಗೊಳಿಸಿಕೊಂಡವರು. ಅವರ ಹೆಸರುಗಳು ಹೀಗಿವೆ ೧) ಹಜ್ರತ್ ಶೇಖ ಅಬ್ದುಲ್‌ಖಾದಿರ್ ೨) ಹಜ್ರತ್ ಶೇಖ ಅಬ್ದುಲ್ ಗಫೂರ್ ಹಾಗೂ ೩) ಹಜ್ರತ್ ಶೇಖ ಇಬ್ರಾಹಿಂ ಇವರು ಸಿಕಂದರ್ ಆದಿಲ್‌ಶಾಹನ ಗುರುಗಳಾಗಿದ್ದರು.

ಹಾಫೀಜ್ ಅಬ್ದುಲ್ ಗಫೂರ್(ಖು) ಸುಮಧುರ ಕಂಠದ ದೊರೆಯಾಗಿದ್ದರು. ಅವರು ಕುರ್‌ಆನ್‌ನ್ನು ತಮ್ಮ ಸುಮಧುರವಾದ ಕಂಠದಿಂದ ಉಸಿರುತ್ತಿದ್ದರು. ಆಲಂಗೀರ್ ಬಾದಶಹನು ಬಿಜಾಪುರದ ಮೇಲೆ ವಿಜಯ ಸಾಧಿಸಿದಾಗ ತಾನು ಅಬ್ದುಲ್ ಗಫೂರ್ ಅವರಿಗೆ ಭೇಟಿಯಾಗಿ ಬಿಜಾಪುರದಲ್ಲಿ ನನಗೆ ಲಭಿಸಿದ ನಿಜವಾದ ನಿಧಿಯೆಂದರೆ ಇದು ಎಂದು ಹಜ್ರತ್‌ರತ್ತ ಬೆರಳು ತೋರಿದನು. ಹಾಗೂ ಹಜ್ರತ್‌ರಿಗೆ ತಮ್ಮ ಇಮಾಮ್ ಎಂದು ನೇಮಿಸಿದನು. ಬಾದಶಹ ಆಲಂಗೀರರು ಹಜ್ರತ್‌ರ ಧ್ವನಿಯ ಮಾಧುರ್ಯದಿಂದ ಸಂತೃಪ್ತಿ ಹಾಗೂ ನಿಮಗ್ನರಾಗುತ್ತಿದ್ದರು.

ಓರ್ವ ಅರಬನು ಹಜ್ರತ್‌ರ ಕುರ್‌ಆನಿನ ನಾದಮಯ ಓದನ್ನು ಆಲಿಸುವ ಇಚ್ಛೆಯಿಂದ ತನ್ನ ದೇಶ ತ್ಯಜಿಸಿ ಹಜ್ರತ್‌ರ ಬಳಿ ಆಗಮಿಸಿದರು. ತಮ್ಮ ಬಯಕೆ ವ್ಯಕ್ತಪಡಿಸಿದರು. ಹಜ್ರತ್‌ರು ಸೂರಯೇ ಹೂದ್–(ಕುರ್‌ಆನಿನ ಅಧ್ಯಾಯ) ಸುಮಧುರ ಕಂಠದೊಂದಿಗೆ ಪಠಿಸಲು ಪ್ರಾರಂಭಿಸಿದರು. ಹಾಗೂ ಆ ಅಧ್ಯಾಯವು ಇತ್ತ ಪೂರ್ತಿಗೊಂಡಿತು ಅತ್ತ ಅರಬ್‌ನ ಪ್ರಾಣಪಕ್ಷಿಯು ಹಾರಿಹೋಯಿತು. ಹಜ್ರತ್‌ರು

ಆಲಂಗೀರ್ ಬಾದಶಹನ ಸೈನ್ಯದ ಜೊತೆಗಿದ್ದರು ಹಾಗೂ ಅಲ್ಲಿಯೇ ನಿಧನರಾದರು. ಇವರು ಮಹಾಔಲಿಯಾ ಆಗಿದ್ದರು.

■

೯೨. ಹಜ್ರತ್ ಶೇಖ ಮನ್ಸೂರ್ (ಖ)

ಇವರು ಧರ್ಮ ಪ್ರಸಾರದಲ್ಲಿ ನಿತ್ಯ ನಿರಂತರವಾಗಿ ತೊಡಗಿದ್ದ ಮಹಾ ಪುರುಷರಾಗಿದ್ದರು. ಅಮಲಿಯಾತ ಹಾಗೂ ನಕ್ಷಿಯಾತ್(ಆಧ್ಯಾತ್ಮಿಕ ವಿದ್ಯೆಯಲ್ಲಿ)ದಲ್ಲಿ ಇವರನ್ನು ಮೀರಿಸುವವರು ಯಾರೂ ಇರಲಿಲ್ಲ. ಸುಲ್ತಾನ ಆದಿಲ್‌ಶಾಹ್ ಹಾಗೂ ಮುಹಮ್ಮದ್ ಆದಿಲ್‌ಶಾಹ್ ಹಾಗೂ ಸಿಕಂದರ್ ಆದಿಲ್‌ಶಾಹ್‌ರು ಹಜ್ರತ್‌ರನ್ನು ಅಪಾರವಾಗಿ ಗೌರವಿಸುತ್ತಿದ್ದರು. ಇವರ ಸಮಾಧಿಯು ನಗೀನಾಬಾಗ್‌ದಲ್ಲಿದೆ. ಕವಿ ಸಾಮ್ರಾಟ್‌ರಾದ ಶೇಖ ನುಸ್ರತಿಯವರ ಹಜ್ರತ್‌ರ ಸಹೋದರರಾಗಿರುವರು ಹಜ್ರತ್‌ರ ಸಮಾಧಿಯ ಪಕ್ಕದಲ್ಲಿಯೇ ಸಮಾಧಿಸ್ಥರಾಗಿರುವರು.

ಹಜ್ರತ್‌ರ ಸಂತಾನದಿಂದ ಜಾಫರ್‌ಸಾಹೇಬ್ ಹಾಗೂ ಸಾಹೇಬ್‌ಹಸನ್ ನಗೀನಾಬಾಗ್‌ವಾಲೆ ಗೊಳಸಂಗಿಯಲ್ಲಿ ಇರುವರು.

■

೯೩. ಶೇಖ ಇಸ್ಮಾಯಿಲ್ ಮುಹದ್ದೀಸ್ (ಖ)

ಇವರು ಬಿಜಾಪುರದ ಶ್ರೇಷ್ಠ ಸೂಫಿವಂಶಸ್ಥರು ಹಾಗೂ ಹದೀಸ್‌ನ ಜ್ಞಾನಪಾರಂಗತರಲ್ಲಿ ಪ್ರಮುಖರು. ಇವರು ಹಜ್ರತ್ ಶೇಖ ಶಮ್ಸುದ್ದೀನ್ ಮುಹಮ್ಮದ್ ಮುಲ್ತಾನಿಯವರ ಸಂತಾನದಿಂದ ಇರುವರು ಹಾಗೂ ಇಬ್ರಾಹಿಂ ಆದಿಲ್‌ಶಾಹ ದ್ವಿತೀಯನ ಅವಧಿಯ ಮಹಾಪುರುಷರಲ್ಲಿ ಓರ್ವರಾಗಿರುವರು. ಇವರ ಸಮಾಧಿ ಸ್ಥಳವು ಜೋಹರಾಪುರದಲ್ಲಿ ಹಜ್ರತ್ ಮೌಲಾನಾ ಹಬೀಬುಲ್ಲಾಹ್ ಸಿಬ್ಗತ್‌ಲ್ಲಾಹಿಯವರ ದರ್ಗಾದ ಬಳಿ ಸ್ಥಿತವಿರುವರು.

■

೯೪. ಹಜ್ರತ್ ಶೇಖ ಅಬ್ದುಲ್‌ರೆಹಮಾನ್ ಮುತ್ತಖಿ (ಖ)

ಇವರು ಇಬ್ರಾಹಿಂ ಆದಿಲ್‌ಶಾಹನ ಅವಧಿಯಲ್ಲಿ ತಮ್ಮ ಜನ್ಮಸ್ಥಳವಾದ ಗುಜರಾತಿನಿಂದ ಪ್ರಯಾಣ ಬೆಳೆಸಿ ಈ ನಗರಕ್ಕೆ ಆಗಮಿಸಿದರು. ತಮ್ಮ ದೇವನಿಷ್ಠೆ ಹಾಗೂ ಆಧ್ಯಾತ್ಮಿಕ ಜ್ಞಾನ ಸಾಧನೆಯ ಬಲದಿಂದ ಜನಸಾಗರಕ್ಕೆ ಸಮೃದ್ಧಿಯನ್ನು

ತಲುಪಿಸಿದರು. ಷರೀಯತ್ತಿನ್ನು ಕಟ್ಟುನಿಟ್ಟಾಗಿ ಪಾಲಿಸುತ್ತ, ಏಕದೇವೋಪಾಸನೆಯಲ್ಲಿ ನಿರತರಾಗಿ ಅಲ್ಲಾಹುವಿನ ಸ್ಮರಣೆಯಲ್ಲಿ ಸದಾಕಾಲ ಮಗ್ನರಾಗಿ ಸುತ್ತಲ ಪ್ರದೇಶಕ್ಕೆ ಪರಂಜ್ಯೋತಿಯಾಗಿ ಬೆಳಗಿದರು. ಸತ್ಯ ಹಾಗೂ ಮಿಥ್ಯದ ಸ್ಪಷ್ಟ ಗೆರೆಯೆಳೆದು ಜ್ಞಾನ ಪ್ರಸಾರ ಮಾಡಿದರು. ಅಲ್ಲದೇ ಅಲ್ಲಾಹುವಿನ ಆರಾಧನೆಯಲ್ಲಿ ಜೀವನಪರ್ಯಂತ ತೊಡಗಿಕೊಂಡಿದ್ದರು. ಸದಾಚಾರವೇ ಇವರ ಸದ್ವರ್ತನೆಯ ಮೇಲೆ ಹೆಮ್ಮೆ ಪಡುತ್ತಿತ್ತು.

ಹಜ್ರತ್ ಶೇಖ ಅಲಿ ಮುತ್ತಖಿ ಗುಜರಾತಿಯವರು ಇವರ ಬದುಕಿನ ಸತ್ಯತೆಯನ್ನು ಅರಿತು ಇವರಿಂದ ಒಂದು ಹಿಡಿಯಷ್ಟು .ಯನ್ನು ಕೇಳಿ ಪಡೆದರು. ಹಾಗೂ ಇದನ್ನು ಸಹ ಹೇಳಲಾಗುತ್ತದೆ. ಓರ್ವ ಮಹಾ ಪುರುಷರು ಹಜ್ರತ್‌ರ ತಕ್ವಾ(ದೇವನಿಷ್ಠೆ) ಪರಹೇಜಾಗಾರಿ (ಪ್ರಾಮಾಣಿಕ ಜೀವನ) ಗಾಥೆಯ ಪ್ರಸಿದ್ಧಿಯನ್ನು ಕೇಳಿ ದೆಹಲಿಯಿಂದ ಬಿಜಾಪುರಕ್ಕೆ ಆಗಮಿಸಿ ಹಜ್ರತ್‌ರ ಸಾಂಗತ್ಯದಲ್ಲಿದ್ದರು. ಹಜ್ರತ್‌ರು ಹಿಜ್ರಿಶಕೆ ೧೦೭೮ರಲ್ಲಿ ತಮ್ಮ ೧೪೯ನೆಯ ವಯಸ್ಸಿನಲ್ಲಿ ಇಹಲೋಕವನ್ನು ತ್ಯಜಿಸಿದರು. ಇವರ ಸಮಾಧಿಯು ಫತೇಹ್ ದರವಾಜಾ (ಮನಗೂಳಿ ಅಗಸಿಯ) ಹೊರಗಡೆ ಇರುವದು.

■

೯೫. ಹಜ್ರತ್ ಖಾಜಿ ಅಬ್ದುಲ್ಲಾಹ್ (ಖ)

ಇವರು ಇಬ್ರಾಹಿಂ ಆದಿಲ್‌ಶಾಹ್‌ನ ಅವಧಿಯಲ್ಲಿ ತಮ್ಮ ಪ್ರದೇಶವಾದ ಗುಜರಾತಿನಿಂದ ಬಿಜಾಪುರಕ್ಕೆ ಆಗಮಿಸಿದರು. ತಕ್ವಾ(ದೇವನಿಷ್ಠ) ಇಲ್ಮೆಹದೀಸ್ (ಹದೀಸಜ್ಞಾನ) ಹಾಗೂ ಫಿಕ್ಹ(ಶರೀಯತ್ತಿನ ಕಾನೂನು)ದಲ್ಲಿ ಪ್ರಭುತ್ವ ಸಾಧಿಸಿದ್ದರು. ಹಾಗೂ ಹಜ್ರತ್‌ರು ಹಜ್ರತ್‌ಶಾಹ್ ವಜಿಯುದ್ದೀನ್ ಹುಸೈನಿ ಅಲ್ವಿ ಗುಜರಾತಿಯವರಿಂದ ಖಿಲಾಫತ್ ಪಡೆದಿರುವರು. ಹಜ್ರತ್‌ಶಾಹ್ ಸಿಬ್ಗತ್‌ಲ್ಲಾಹ್ ಹುಸೈನಿಯವರಿಂದಲೂ ಸಮೃದ್ಧಿಯನ್ನು ಪಡೆದರು. ಹಜ್ರತ್ ಮೌಲಾನಾ ಹಬೀಬುಲ್ಲಾಹ್ ಸಿಬ್ಗತ್‌ಲ್ಲಾಹಿಯವರೊಂದಿಗೆ ಸಾಂಗತ್ಯ ಹಾಗೂ ಆಪ್ತ ಸಂಬಂಧವಿರಿಸಿಕೊಂಡಿದ್ದರು. ಹಜ್ರತ್‌ರ ಸಮಾಧಿ ಸ್ಥಳವು ಫತೇಹ್ ದರ್ವಾಜಾದ ಹೊರಗಡೆ ಇರುವದು.

■

೯೬. ಹಜ್ರತ್‌ಶೇಖ ಅಹ್ಮದ್ ಮುಹದ್ದಿಸ್(ಖ)

ಇವರು ಮಹಾವಿದ್ವಾಂಸರು, ಶಿಕ್ಷಣವೇತ್ತರು, ಫಿಕ್ಹ, ಷರಿಯತ್ತಿನ ಕಾನೂನು ತಜ್ಞರು ಹಾಗೂ ಹದೀಸ್‌ಜ್ಞಾನದ ಮೇಲೆ ಪ್ರಾವಿಣ್ಯತೆ ಪಡೆದವರಾಗಿದ್ದರು. ಹಜ್ರತ್ ಖಾಜಿ ಅಬ್ದುಲ್ಲಾಹ್(ಖ)ರ ಅಳಿಯ ಹಾಗೂ ಸಹೋದರನ ಪುತ್ರರಾಗಿರುವರು.

ಹಜ್ರತ್‌ರ ಸಮಾಧಿಯು ಹಾಗೂ ಸೈಯ್ಯದ್ ಮುಹಮ್ಮದ್ ಮುದರ್ರಿದ್(ಖು)ರ ತಂದೆಯವರಾದ ಹಜ್ರತ್ ಸೈಯ್ಯದ್ ಅಬ್ದುಲ್ ರೆಹಮಾನ್(ಖು)ರ ಸಮಾಧಿಯು ಫತೇಹ ದರವಾಜಾದ ಹೊರಗಡೆ ಒಂದೇ ಪ್ರಾಂಗಣದಲ್ಲಿ ಸ್ಥಿತವಿರುವವು. ಹಜ್ರತ್‌ರ ಸಂತಾನವು ಬಿಜಾಪುರದಲ್ಲಿ ಇರುವದು.

■

೯೭. ಹಜ್ರತ್ ಶೇಖ ಮುಜ್ತಬಾ ಉರ್ಫ ಬಡೇ ಸಾಹೇಬ್ ಮನ್ನೂರಿ (ಖು)

ಬಹು ಪ್ರಸಿದ್ಧಿ ಹೊಂದಿದವರಾಗಿದ್ದಾರೆ ಹಾಗೂ ಬೃಹತ್ ರೂಪದ ಆಸ್ತಿವಂತರಾಗಿದ್ದರು. ಇವರ ಸಮಾಧಿಯು ಜಾಮಿಯಾ ಮಸೀದೆಯ ಬಳಿಯ ಬಾರ್ಘಾರಿನಲ್ಲಿ ಇರುವದು. ಹಜ್ರತ್‌ರ ಸಮಾಧಿಯ ಮೇಲೆ ಒಂದು ಸುಂದರ ಗುಂಬಜ್ ನಿರ್ಮಿಸಲಾಗಿದೆ. ಇವರು ಶೇಖ ಅಹ್ಮದ್ ಮುಹದ್ದಿನ್(ಖು)ರ ಮೊಮ್ಮಗರಾಗಿದ್ದಾರೆ. ಹಜ್ರತ್‌ರ ಸಂತಾನವು ಮನ್ನೂರಿನಲ್ಲಿರುವದು.

ಪ್ರಸ್ತುತ ಹಜ್ರತ್‌ರ ಸಂತಾನದಲ್ಲಿ ಕರೀಂ ಮೊಹಿಯುದ್ದೀನ್ ಸಾಹೇಬ್ ಹಾಗೂ ಬಡೇ ಸಾಹೇಬ್ ಉಪಸ್ಥಿತರಿರುವರು.

■

೯೮. ಹಜ್ರತ್ ಖಾಜಿ ಅಸ್ಕರಿ ರೆಹ್ಮತಲ್ಲಾ ಅಲೈ

ಇವರು ಮುಖ್ಯ ನ್ಯಾಯಾಧೀಶರು, ದೇವನಿಷ್ಠರು ಹಾಗೂ ಚಾರಿತ್ರ್ಯದ ಉನ್ನತ ಸ್ತರದವರಾಗಿದ್ದರು. ಹಜ್ರತ್‌ರ ನಾಮಧೇಯವು ಸೈಯ್ಯದ್ ಅಹ್ಮದ್ ಇರುವದು. ಇಬ್ರಾಹಿಂ ಆದಿಲ್‌ಶಾಹ್‌ನ ಅವಧಿಯಲ್ಲಿ ಸೈನ್ಯದ ನ್ಯಾಯಾಧೀಶರಾಗಿದ್ದರು. ಹಜ್ರತ್‌ರ ಜೀವನ ಘಟನೆಗಳು ವಿವರವಾಗಿ ತಿಳಿದು ಬಂದಿಲ್ಲ. ನಗರದ ಒಳಗಡೆ ಹಜ್ರತ್‌ರ ಸಮಾಧಿ ಸ್ಥಳವಿದೆಯಾದರೂ ಎಲ್ಲಿದೆ ಎಂಬುದು ಗುರುತಿಸಲಾಗಿಲ್ಲ.

■

೯೯. ಹಜ್ರತ್ ಖಾಜಿ ಸೈಯ್ಯದ್ ಸೈಫುಲ್ಲಾಹ್ (ಖು)

ಇವರು ಬಿಜಾಪುರದ ಪ್ರಸಿದ್ಧ ನ್ಯಾಯಾಧೀಶರಲ್ಲಿ ಓರ್ವರಾಗಿರುವರು. ಅತ್ಯಂತ ಪ್ರಾಮಾಣಿಕರು, ದೇವನಿಷ್ಠರು, ನ್ಯಾಯಪ್ರಿಯರು ಆಗಿದ್ದರು. ಸುಲ್ತಾನ್ ಮುಹಮ್ಮದ್

ಆದಿಲ್‌ಶಾಹನ ಅವಧಿಯಲ್ಲಿ ಬಿಜಾಪುರ ಪ್ರದೇಶದ ಖಾಜಿ (ನ್ಯಾಯಾಧೀಶ)ರಾಗಿದ್ದರು. ಹಜ್ರತ್‌ರ ಜೀವನ ಚರಿತ್ರೆಯ ವಿವರಗಳು ಲಭ್ಯವಾಗಿಲ್ಲ. ಹಜ್ರತ್‌ರ ಸಮಾಧಿಯ ಸ್ಥಳವು ತಿಳಿದುಬಂದಿಲ್ಲ. ಆದರೆ ನಗರದ ಒಳಭಾಗದಲ್ಲಿ ಇರುವದು.

■

೧೦೦. ಹಜ್ರತ್ ಆಲಂಗೆ ಮಜಜೂಬ್ (ಖ)

ಇವರು ಪ್ರಸಿದ್ಧ ಮಜಜೂಬ್ (ಸಂಪೂರ್ಣ ನಿಮಗ್ನತೆಯ ಸ್ಥಿತಿಯಲ್ಲಿರುವವರು ಯಾರಿಗೆ ಈ ಜಗದ ಪರಿವೆಯೇ ಇರುವದಿಲ್ಲ)ರಲ್ಲಿ ಓರ್ವರು. ಮೊಹರಂ ತಿಂಗಳ ೧೯ನೆಯ ದಿನಾಂಕದಂದು ನಿಧನರಾದರು. ಹಜ್ರತ್‌ರ ಸಮಾಧಿಯು ಫತೇಹ ದರವಾಜಾ ಬಳಿ ಇರುವದು. ಹಜ್ರತ್‌ರ ಸಹೋದರಿಯಾದ 'ಫತೇಶಾ' ಸಹ ದೇವನಲ್ಲಿ ಸದಾಕಾಲ ಲೀನವಾಗಿರುತ್ತಿದ್ದರು.

■

೧೦೧. ಹಜ್ರತ್ ಶಾಹ್ ನಂಗೇ ಮಜಬೂಬ್(ಖ)

ಇವರು ಸದಾಕಾಲವೂ ನಿಮಗ್ನತೆಯಲ್ಲಿ ತಲ್ಲೀನರಾಗಿದ್ದುಕೊಂಡ, ಅಂತಜ್ಞಾನದ ಧಣಿಯಾಗಿದ್ದರು. ಸ್ವತಂತ್ರ ಪ್ರವೃತ್ತಿಯ ಫಕೀರರಾಗಿದ್ದರು. ಇವರೆಂದೂ ಬಟ್ಟೆ ಧರಿಸುತ್ತಿರಲಿಲ್ಲ.

ಆನಾಬ್ ಸೈಯದುಸ್ಸಾದಾತ್ ಹಜ್ರತ್‌ಶಾಹ ಮುರ್ತುಜಾಖಾದ್ರಿಯವರಿಂದ ಸಮೃದ್ಧಿ ಹೊಂದಿದ್ದರು. ಹಾಗೂ ಹಜ್ರತ್‌ಶಾಹ್ ಆಲಂಗೆ ಮಜಬೂಬ್‌ರ ಸಮಕಾಲೀನರಾಗಿದ್ದರು.

ಬಿಜಾಪುರದ ವಿನಾಶ ಹಾಗೂ ಸುಲ್ತಾನರ ಆಳ್ವಿಕೆ ಕೊನೆಗಾಣುವಿಕೆಯ ಅವಧಿಯ ಪೂರ್ವದಲ್ಲಿ ಹಜ್ರತ್‌ಶಾಹ ನಂಗೇ ಮಜಬೂಬ್(ಖ) ಹೀಗೆ ಹೇಳುತ್ತಿದ್ದರು. 'ಮೊಘಲರಿಗೆ ಕರೆಸುವೆನು ಹಾಗೂ ಬಿಜಾಪುರವನ್ನು ಆತನಿಗೆ ಒಪ್ಪಿಸುವೆನು. ಹಜ್ರತ್‌ಶಾಹ ಆಲಂಗೆ(ಖ) ಅವರು ಅನ್ನುತ್ತಿದ್ದರು. ಒಂದು ವೇಳೆ ಮೊಘಲರನ್ನು ಕರೆಸುತ್ತಿಯಾದರೆ ಆತನು ನಿನಗೆ ಬಟ್ಟೆ ತೊಡಿಸುವನು. ಹೀಗೆಯೇ ಈರ್ವರೂ ಮಹಾಪುರುಷರ ಮಾತಿನ ಸತ್ಯವು ಅಲ್ಪಸಮಯದಲ್ಲಿಯೇ ಪ್ರಕಟವಾಯಿತು.

ಬಿಜಾಪುರ ಸುಲ್ತಾನರ ಆಳ್ವಿಕೆಯು ಸಿಕಂದರ್ ಆದಿಲ್‌ಶಾಹನ ಕೈಯಿಂದ ತಪ್ಪಿತು ಹಾಗೂ ಆಲಂಗೀರ್ ಬಾದಶಹನ ವಶವಾಯಿತು.

ಹಜ್ರತ್‌ಶಾಹ ನಂಗೇ ಮಜಬೂಬ್(ಖ)ರ ಸ್ವತಂತ್ರ ಪ್ರವೃತ್ತಿ ಹಾಗೂ ಬಟ್ಟೆ ಧರಿಸದಿರುವಿಕೆಯನ್ನು ಕೇಳಿ ಆಲಂಗೀರ ಬಾದಶಹನು ಇವರನ್ನು ಕರೆಯಿಸಿದನು ಹಾಗೂ ಬಟ್ಟೆ ತೊಡಲು ಹೇಳಿದನು. ಆದರೆ ಅವರು ನಿರಾಕರಿಸಿದನು. ಕೊನೆಗೆ ಒತ್ತಾಯಪೂರ್ವಕವಾಗಿ ಬಟ್ಟೆ ತೊಡಿಸಿದರು. ಮುಂದೆ ಇವರಿಗೆ ಎಲ್ಲಿಯಾದರೂ ಬೆತ್ತಲೆ ಕಂಡರೆ ಬಟ್ಟೆ ತೊಡಿಸುತ್ತಿದ್ದರು.

ಇವರ ನಿಧನವು ಸಫರ್ ತಿಂಗಳ ೨೨ನೇ ದಿನಾಂಕ ೧೭೧೩ ಇಸ್ವಿಯಲ್ಲಿ ಆಯಿತು. ಅರ್ಕಕಿಲ್ಲಾದ ಕಂದಕ್ಕಿನ ದಕ್ಷಿಣ ಭಾಗದಲ್ಲಿ ಸಮಾಧಿಸ್ಥರಾಗಿರುವರು.

ಇವರ ಸಮಾಧಿ ಸ್ಥಳವು ಈಗಿನ ಕೇಂದ್ರ ಬಸ್ ನಿಲ್ದಾಣ ಸಮೀಪವಿರುವ ದಾತ್ರಿ ಮಸೀದೆಯ ಬಳಿ ಇರುವುದು.

■

೧೦೨. ಹಜ್ರತ್ ಮಿಯಾಂ ಭೋಲಾ ಫಕೀರ್(ಖ)

ಇವರು ಫಕೀರ (ಅಲ್ಲಾಹುವಿನ ನಾಮದಿಂದ ಹಾಗೂ ಅಲ್ಲಾಹುವಿನ ಸಂತೃಪ್ತಿ ಪಡೆಯಬೇಕೆಂಬ ಕಾರಣಕ್ಕಾಗಿ ಅಲ್ಲಾಹುವಿಗಾಗಿ ಉಪವಾಸವಿರುವನು.) ಹಾಗೂ ದರವೇಶಿ ಇದ್ದರು.

ಸುಲ್ತಾನ್ ಮುಹಮ್ಮದ್ ಆದಿಲ್‌ಶಾಹ್‌ನ ಸೈನ್ಯದ ಸೇನಾಧಿಪತಿಯಾದ ರುಸ್ತುಂ ವ ಜಮಾ ಹಜ್ರತ್‌ರ ಅನುಯಾಯಿಯಾಗಿದ್ದನು. ಹಜ್ರತ್‌ರ ಜೀವನ ಚರಿತ್ರೆಯ ವಿವರಗಳು ಲಭ್ಯವಾಗಿಲ್ಲ. ಹಜ್ರತ್‌ರ ಸಮಾಧಿ ಸ್ಥಳವು ಇಬ್ರಾಹಿಂ ಆದಿಲ್‌ಶಾಹ್‌ರ ಗೋರಿಯ ಬಳಿ ಪೂರ್ವ ದಿಕ್ಕಿಗೆ ಇರುವದು.

■

೧೦೩. ಹಜ್ರತ್ ಮಿಯಾ ಖಾಕಸಾರ್(ಖ)

ಇವರು ಅಂತರ್ಜ್ಞಾನಿಗಳು, ಫಕೀರರೂ ಆಗಿದ್ದರು. ಇವರ ಜೀವನಗಾಥೆಯ ವಿವರಗಳು ಲಭ್ಯವಾಗಿಲ್ಲ. ಹಜ್ರತ್‌ರ ಸಮಾಧಿಯು ಬೆಹಲೂಲ್‌ಪುರಾದಲ್ಲಿ ಇರುವದು. ಹಜ್ರತ್‌ರ ಸಮಾಧಿಯ ಮೇಲೆ ಗುಂಬಜ್ ನಿರ್ಮಿಸಲ್ಪಟ್ಟಿದೆ. ಸಮಾಧಿಯು ಅಮೃತಶಿಲೆಯದ್ದಾಗಿದೆ.

■

೧೦೪. ಹಜ್ರತ್ ಶಾಹ್ ಮೆಹಮೂದ್ ಭಡಂಗ್ (ಖು)

ಇವರು ಶ್ರಮಜೀವಿಗಳು, ಅಂತಜ್ಞಾನಿಗಳು, ಅಂತರ್‌ಧ್ಯಾನಿಗಳು, ಸದಾಕಾಲ ಜಪದಲ್ಲಿ ತೊಡಗಿರುವ ದರವೇಶಿಯಾಗಿದ್ದರು. ಇವರು ಮದಾರಿಯಾ ಪಂಥದಿಂದ (ಶಾಹ್ ಮದಾರ್‌ರ ಅನುಯಾಯಿಗಳು) ಅನುಮತಿ ಹೊಂದಿದ್ದರು. ಮದಾರಿ ಮಲಂಗ್‌ವು ಫಕೀರರ ಒಂದು ಜ್ಞಾನಶಾಖೆಯಾಗಿದೆ. ಜೀವನ ಪರ್ಯಂತ ಏಕಾಂತವಾಸಿಯಾಗಿದ್ದರು. ಫ಼ಜ್ರತ್ ಮೀರಾಂ ಜುಮ್ಮನ್(ಖು)ರಿಂದ ಖಿಲಾಫತ್ ಪಡೆದರು. ಹಜ್ರತ್ ಮೀರಾಂ ಜುಮ್ಮನ್(ಖು)ರು ಬದಿಯುದ್ದೀನ್ ಮದಾರ್(ಖು)ರ ಶಿಷ್ಯ ಹಾಗೂ ಖಲೀಫಾ ಆಗಿರುವರು.

ಹಜ್ರತ್ ಶಾಹ್ ಮೆಹಮೂದ್ ಭಡಂಗ್(ಖು)ರ ವಯಸ್ಸು ೨೦೦ ವರ್ಷಗಳಿಗಿಂತಲೂ ಹೆಚ್ಚಾಗಿತ್ತು. ಇವರ ಸಮಾಧಿಯು ಕೋಟೆಯ ಹೊರವಲಯದಲ್ಲಿ ಬರುವ ಜೋಹರಾಪುರದಲ್ಲಿ ಇರುವದು.

■

೧೦೫. ಹಜ್ರತ್ ಶಾಹ್ ಮುಹಮ್ಮದ್ ಜಂಗಿ(ಖು)

ಇವರು ಮಹಾಪುರುಷರಾಗಿರುವರು. ತಬಖಾತ್ ಪಂಥದಲ್ಲಿ ಖಿಲಾಫತ್ ಪಡೆದಿದ್ದರು. ರಬ್ಬಿಯುಸ್ಸಾನಿ ತಿಂಗಳ ೨೯ರಂದು ನಿಧನರಾದರು. ಹಜ್ರತ್‌ರ ಸಮಾಧಿಯು ಕೋಟೆಯ ಹೊರಗಡೆ ಜೋಹರಾಪುರದಲ್ಲಿ ಇರುವದು. ಶಾಹ್‌ಜಂಗಿಯವರ ತಕಿಯಾ(ತಲೆದಿಂಬು) ಹಾಗೂ ಮನೆ ಪ್ರಸಿದ್ಧವಾಗಿದೆ.

ಹಜ್ರತ್‌ರ ಸಂತಾನದಿಂದ ಹುಸ್ಸೈನಿ ಪೀರ್, ಹುಸ್ಸೈನಿ ಪೀರ್ ಶಂಸುದ್ದೀನ್ ಸಲಾವುದ್ದೀನ್ ಇತರರು ಅಫಜಲ್‌ಪುರ್ ಉರ್ಫ್ ತಕಿಯಾ ಶಾಹ್‌ಜಂಗಿಯಲ್ಲಿ ಇರುವರು. ಆಸ್ತಿ ಇರುವದು. ಹಜ್ರತ್‌ರ ವಾರ್ಷಿಕ ಉರುಸುತ್ಸವ ಪ್ರತಿವರ್ಷದಲ್ಲಿ ನಡೆಯುವದು.

■

*

ಬಿಜಾಪುರದ ಮಹಿಳಾ ಸೂಫಿಗಳು

೧೦೬. ಹಜ್ರತ್ ಬೀಬಿ ಖ್ವಾಂದಮಾ ಸಾಹಬಾ(ರ.ಅಲೈಹಾ)

ಇವರು ಈ ನಗರದ ಪರಿಪೂರ್ಣ, ದಕ್ಷ ಹಾಗೂ ಅಲ್ಲಾಹುವಿನ ಅಸ್ತಿತ್ವವನ್ನು ಅರಿತು ಮಹಿಳಾ ಸೂಫಿಯಾಗಿದ್ದಾರೆ. ಇವರು ಹಜ್ರತ್ ಐನುದ್ದೀನ್ ಗಂಜುಲ್ ಉಲೂಮ್ ಜುನೈದಿಯವರ ಪುತ್ರಿಯಾಗಿದ್ದಾರೆ. ಹಾಫೀಜೆ ಕುರ್‌ಆನ್(ಕುರ್‌ಆನ್ ಕಂಠಪಾಠ ಗೈದವರು) ಆಗಿದ್ದರು. ಚಚ್ಚಾ ಬಿ, ಹಾಗೂ ಸತ್ತಿ ಮಾ ಸಾಹೇಬಾ) ಎಂಬ ಹೆಸರುಗಳಿಂದಲೂ ಪ್ರಸಿದ್ಧರು. ಇವರ ಸಮಾಧಿ ಸ್ಥಳವು ಹಜ್ರತ್ ಗಂಜುಲ್ ಉಲೂಮ್‌ರ ದರ್ಗಾದ ಪೂರ್ವದಿಕ್ಕಿನಲ್ಲಿ ಸ್ವಲ್ಪ ದೂರದಲ್ಲಿ ಇರುವದು. ಹಜ್ರತ್ ಬೀಬಿ ಖ್ವಾಂದನೂರ ಸಮಾಧಿಯ ಪಕ್ಕದಲ್ಲಿ ಇವರ ಪುತ್ರರೂ ಸಮಾಧಿಸ್ಥರಾಗಿರುವರು. ಸುತ್ತಲೂ ಪ್ರಾಂಗಣ ನಿರ್ಮಿಸಲಾಗಿದೆ.

ಆ ಕಾಲದಲ್ಲಿ ಓರ್ವ ಕಳ್ಳನು ಒಂದು ಕುದುರೆಯನ್ನು ಕದ್ದುಕೊಂಡು ಹೊರಟಿದ್ದನು. ದಾರಿಯಲ್ಲಿ ಸಾಗುತ್ತಿದ್ದಾಗ ಹಜ್ರತ್‌ರ ಸಮಾಧಿಯ ಬಳಿ ಬಂದಾಗ ಬೆಳಗಾಯಿತು. ಕಳ್ಳನು ಗಾಬರಿಯಾಗಿ ದರ್ಗಾದ ಅಂಗಣದಲ್ಲಿ ಕುಳಿತುಕೊಂಡನು. ಹಾಗೂ ತುಂಬು ಆಸ್ಥೆಯಿಂದ, ಅತ್ಯಂತ ವಿನೀತನಾಗಿ ಈ ತಪ್ಪಿತಸ್ಥನ ಪ್ರಾಣ ಹಾಗೂ ಮರ್ಯಾದೆ ಉಳಿಸಿಕೊಳ್ಳಿರೆಂದು ಬೇಡತೊಡಗಿದನು. ಆಗ ಬೀಬಿಯವರ ಪವಾಡದಿಂದಾಗಿ ಆ ಕುದುರೆ ಆಕೃತಿ ಹಾಗೂ ಬಣ್ಣ ಬದಲಾಗಿ ಬೇರೆಯೇ ವಿಧದ ಕುದುರೆಯಾಯಿತು. ಅದರಿಂದಾಗಿ ಆತನನ್ನು ಯಾರೂ ತಡೆಯಲಿಲ್ಲ. ಆಗ ಆ ವ್ಯಕ್ತಿಯು ತುಂಬಾ ಸಮಾಧಾನಗೊಂಡು ಸಂತಸಭರಿತನಾಗಿ ಅಲ್ಲಿಂದ ಉಳಿದಿದ್ದಕ್ಕೆ ಋಣದ ಪ್ರತೀಕವಾಗಿ ಸಮಾಧಿಯ ಸುತ್ತ ಪ್ರಾಂಗಣ ನಿರ್ಮಿಸಿದನು.

ರಬ್ಬಿಯುಸ್ಸಾನಿ ತಿಂಗಳ ೫ನೆಯ ದಿನಾಂಕದಂದು ಉರುಸುತ್ಸವವು ಜರುಗುವದು.

ಇವರ ತಂದೆಯವರಾದ ಹಜ್ರತ್ ಗಂಜುಲ್ ಉಲೂಮ್‌ರು ಮೊದಲು ಇಲ್ಲಿಯೇ ಸಮಾಧಿಸ್ಥರಾಗಿದ್ದರು. ನಂತರ ಅಲ್ಲಿಂದ ಸ್ಥಳಾಂತರಗೊಂಡರು. ಅದಕ್ಕಾಗಿ ಅರ್ಧ ಸಮಾಧಿಯು ಪ್ರಾಂಗಣದ ಹೊರಗಡೆ, ಅರ್ಧಭಾಗ ಒಳಗಡೆ ಇಂದಿಗೂ ಗೋಚರಿಸುವದು.

■

೧೦೭. ಹಜ್ರತ್ ಬೀಬಿ ಷಂಸಾಮಾ ಸಾಹಬಾ ರಹ್ಮತಲ್ಲಾ ಅಲೈಹಾ

ಇವರು ಅಲ್ಲಾಹುವಿನ ಸಂಪ್ರೀತಿಗಳಿಸಿಕೊಂಡವರು. ಮಹಾನ್ ಸೂಫಿಗಳು ಹಾಗೂ ಇವರ ತಲೆಮಾರು ಹಜ್ರತ್ ಖ್ವಾಜಾ ಸೈಯ್ಯದ್ ಮುಹಮ್ಮದ್ ಹುಸೈನಿ ಗೇಸುದರಾಜ್‌ರನ್ನು ಹೋಗಿ ಸೇರುತ್ತದೆ. ಇವರು ಚಿಸ್ತಿಯಾ ಪರಂಪರೆಯವರಾಗಿದ್ದಾರೆ. ಇವರ ಜೀವನಗಾಥೆಯ ವಿವರ ಲಭ್ಯವಾಗಿಲ್ಲ. ಸಮಾಧಿಸ್ಥಳವು ಜೆಹರಾಪುರ ದ್ವಾರದ ಹೊರಗಡೆ ಫಖರಾಬಾದ್‌ದಲ್ಲಿ ಇರುವದು. ಇವರ ಸಮಾಧಿಯ ಮೇಲೆ ಗುಂಬಜ್ ನಿರ್ಮಿಸಲಾಗಿದೆ. ಉರುಸುತ್ಸವವು ರಜ್ಜಬ್ ತಿಂಗಳ ೧೬ನೆಯ ದಿನಾಂಕದಂದು ಇರುವದು. ಗುಂಬಜಿನಲ್ಲಿ ನಾಲ್ಕು ಸಮಾಧಿಗಳು ಪುರುಷರದ್ದಾಗಿವೆ. ಅವುಗಳಲ್ಲಿ ಒಂದು ಸಮಾಧಿಯು ಹಜ್ರತ್‌ಶಾಹ್ ಹಸನ್ ಫಕ್ರಾಬಾದಿ(ಖ)ರದು ಇರುವದು. ಇವರು ಸಂಬಂಧಿಗಳಲ್ಲಿ ಬರುವರು.

ಇವರ ಸಂತಾನ ಇರುವದಿಲ್ಲ. ಆದರೆ ವಾರ್ಷಿಕ ಉರುಸನ್ನು ಓಣಿಯವರು ಗೈಯ್ಯುತ್ತಾರೆ.

■

೧೦೮. ಹಜ್ರತ್ ರಾಜಿ ಲೌಶತಿ(ರ ಅ)

ಇವರು ಬಿಜಾಪುರದ ಅಲ್ಲಾಹುವಿನ ಸಂಪ್ರೀತಿಗಳಿಸಿದ ಸೂಫಿವರ್ಯರಾಗಿದ್ದಾರೆ. ಇವರಿಂದ ಅನೇಕ ಕರಾಮತ್ತುಗಳು ಜರುಗಿವೆ. ಇವರ ಸಮಾಧಿಸ್ಥಳವು ಹಜ್ರತ್ ಮೌಲಾನಾ ಹಬೀಬುಲ್ಲಾಹ್ ಸಿಬ್ಗತ್‌ಲ್ಲಾಹಿ(ಖ)ರ ಸಮಾಧಿಯಾದ (ಮೋತಿ ಗುಂಬಜ್ ಎಂದು ಪ್ರಸಿದ್ಧ)ದ ಪಶ್ಚಿಮ ಭಾಗದ ಹೊರವಲಯದಲ್ಲಿ ಇರುವದು.

ಇವರು ಸಮಾಧಿಸ್ಥಗೊಂಡ ದಿನ, ಅಂದು ರಾತ್ರಿಯಲ್ಲಿ 'ಕಫನ್ ಕಳ್ಳರು' ಕಫನ್ ಕದಿಯಲೆಂದು ಇವರ ಸಮಾಧಿಯ ಬಳಿ ಬಂದರು. ಹಾಗೂ ಸಮಾಧಿಯನ್ನು ತೆರೆದು ಕಫನ್ ಕದಿಯಲೆಂದು ಸಿದ್ಧರಾದರು. ಆಗ ಇವರ ಕರಾಮತ್ತಿನಿಂದಾಗಿ

ಅವರ ದೃಷ್ಟಿ ಕಳೆದುಹೋಯಿತು. ಅಂಧರಾಗಿ ಮರಳಿ ಹೋದರೂ ಇವರ ನಿಧನದ ದಿನಾಂಕ ಹಾಗೂ ಹಿಜ್ರಿಶಕೆ ತಿಳಿದುಬಂದಿಲ್ಲ.

■

೧೧೯. ಹಜ್ರತ್ ಬೀಬಿ ನಯೀಮಾ ಬಡೀ ಸಾಹೇಬಾ ಎಂದೇ ಪ್ರಸಿದ್ಧರು

ಇವರು ಇಲ್ಲಿಯ ಶ್ರೇಷ್ಠತೆಯ ಸೂಫಿಯಾಗಿದ್ದರು. ಹಾಗೂ ಹಜ್ರತ್ ಮೌಲಾನಾ ಸಿಬ್ಗತ್‌ಲ್ಲಾಹಿಯವರ ಮಾತೋಶ್ರೀಯಾಗಿರುವರು. ಪವಾಡ ಜರುಗಿಸಿದವರಾಗಿರುವರು. ಇವರು ತಮ್ಮ ಪುತ್ರರಾದ ಮೌಲಾನಾ ಹಬೀಬುಲ್ಲಾಹ್ ಸಿಬ್ಗತ್‌ಲ್ಲಾಹ್‌ರಿಂದ ಬೈಯ್ಯತ್ ತೆಗೆದುಕೊಂಡು ಮುರೀದ್‌ರಾದರು. ಮೌಲಾನಾ(ಖು)ರ ಹೇಳಿಕೆಗಳ ಸಂಗ್ರಹದ ಪುಸ್ತಿಕೆಯಲ್ಲಿ ಹೀಗೆ ಬರೆಯಲಾಗಿದೆ. ಯಾವಾಗಿನಿಂದ ಇವರು ಮುರೀದ್‌ರಾದರೋ ವಜೀಫಾ(ಜಪ) ಜಿಕ್ರ್(ಸ್ಮರಣೆ)ಯಲ್ಲಿ ಲೀನರಾದರು. ಆ ಆರಾಧನಾಕ್ರಮದಲ್ಲಿ ಅದೆಂಥಹ ಉನ್ನತಿಯನ್ನು ಸಾಧಿಸಿದರೆಂದರೆ ಆ ಆರಾಧನೆಯ ಬಲದಿಂದ ಅಗೋಚರ ಲೋಕ, ಲೋಕದವರು ಹಾಗೂ ಆತ್ಮಗಳನ್ನು ಸಹ ಸಹಜವಾಗಿ ನೋಡತೊಡಗಿದರು. ಹಜ್ರತ್ ಮೌಲಾನಾ ಹೀಗೆನ್ನುತ್ತಾರೆ. ಯಾವಾಗ ಇವರ ನಿಧನವಾಯಿತೋ ಆಗ ನಾನು ಇವರ ವಂಶಾವಳಿಯ ಪತ್ರವನ್ನು ಇವರ ಕೈಯಲ್ಲಿಡಬೇಕೆಂದು ಬಗೆದೆ. ಆದರೆ ದಫನ್ ಮಾಡುವಾಗ ಬೇರೆಯವರ ಕೈಯಲ್ಲಿದ್ದ ಆ ವಂಶಾವಳಿ ಪತ್ರವು ಕಳೆದುಹೋಯಿತು. ಹೀಗೆನಿಸುತ್ತಿತ್ತು. ಅವರು ಶೀಘ್ರವಾಗಿ ಕಫನ್‌ದಿಂದ ಕೈಯನ್ನು ಹೊರತೆಗೆದು ಆ ವಂಶಾವಳಿಪತ್ರ ಸ್ವೀಕರಿಸಿದರೆನಿಸಿತು. ಕಫನ್(ಶವಕ್ಕೆ ಉಡಿಸಿದ ಬಟ್ಟೆ) ತೆಗೆದು ನೋಡಿದರೆ ಆ ವಂಶಾವಳಿ ಪತ್ರವು ಇವರ ಬಲಗೈಯಲ್ಲಿ ಇತ್ತು. ೧೧೩೫ ಹಿಜ್ರಶಕೆಯಲ್ಲಿ ನಿಧನರಾಗಿದ್ದಾರೆ. "ಫರಿಷ್ತಾ ದುವ್ವಮ್"(೧೧೩೫) ಎಂದು ಮರಣ ದಿನಾಂಕ ಬರೆಯಲಾಗಿದೆ.

ಹಜ್ರತ್ ಮೌಲಾನಾ(ಖು)ರ ಗುಂಬಜಿನಲ್ಲಿ ಹಜ್ರತ್ ಬಲಭಾಗಕ್ಕೆ ಇವರ ಸಮಾಧಿಯಿರುವುದು.

■

೧೧೦. ಹಜ್ರತ್ ಸಿತ್ತಿ ಮಾಸಾಬಾ (ರ.ಅ)

ಇವರು ಆದಿಲ್‌ಶಾಹಿ ಕಾಲದ ಮಹಿಳಾ ಸೂಫಿಗಳಲ್ಲೋರ್ವರು. ಇವರಿಂದ ಹಲವಾರು ಕರಾಮತ್ತುಗಳು ಜರುಗಿವೆ. ಇವರು ಹಜ್ರತ್ ಮೌಲಾನಾ ಹಬೀಬುಲ್ಲಾಹ್‌ರಿಂದ ಬೈತ್ ಪಡೆದು ಅವರ ಸಾಂಗತ್ಯದಲ್ಲಿದ್ದರು. ತಮ್ಮ ಜೀವಿತ ಕಾಲದಲ್ಲಿ ಎರಡು ಸಲ ಅಲ್ಲಾಹುವಿನ ಪ್ರಕಾಶವನ್ನು ಸವಿದರು ಹಾಗೂ ಒಂದು ಸಲ ಹಜ್ರತ್ ಮುಹಮ್ಮದ್ (ಸ) ಪವಿತ್ರ ಮುಖಚರ್ಯೆಯ ದರ್ಶನ ಪಡೆದರು ಹಾಗೂ ಇನ್ನೂ ತಮ್ಮ ಆಯುಷ್ಯ ಎಷ್ಟು ಉಳಿದಿದೆ ಎಂದು ಸ್ಪಷ್ಟವಾಗಿ ಹೇಳುತ್ತಿದ್ದರು ಹಾಗೂ ಈ ಹದೀಸಿನ ಪ್ರಕಾರ 'ಲಾ ತಕ್ರಹೂ ರಿಜಾ ಅಕೂಮ್ ಅಲತ್ ಅಕ್ಲಿ ಫಇನ್ನಲ್ಲಾಹ್ ಯುತ್ ಇಮ್‌ಹುಮ್ ವ ಯುಸ್ಕೀಹಿಮ್' ನೀವು ಯಾರಾದರೂ ತಿನ್ನಿಸಿದರೆ ಸ್ವೀಕರಿಸಿರಿ ನಿಸ್ಸಂದೇಹವಾಗಿ ಅಲ್ಲಾಹುವೇ ಅವರನ್ನು ಉಣ್ಣಿಸುತ್ತಾನೆ ಹಾಗೂ ಕುಡಿಸುತ್ತಾನೆ. ಸಾವಿನ ದವಡೆಯಲ್ಲಿರುವಾಗ ಪರಲೋಕದಿಂದ ಆಹಾರ ಸ್ವೀಕರಿಸಿ, ಜಲಪಾನಗೈದು ಸಂತೃಪ್ತರಾಗುತ್ತಿದ್ದರು. ಜಮಾದುಸ್ಸಾನಿ ತಿಂಗಳ ೭ನೆಯ ದಿನಾಂಕದಂದು ಹಿಜ್ರಿಶಕೆ ೧೦೩೭ರಲ್ಲಿ ಇಹಲೋಕ ತ್ಯಜಿಸಿದರು. ಇವರ ನಿಧನದ ದಿನಾಂಕವನ್ನು ಹೀಗೆ ಬರೆಯಲಾಗಿದೆ. 'ಅಯಾತು ಪ್ಫಾಹ್‌ತಲ್‌ಜಿ' 'ಓ ಸ್ವರ್ಗದ ಸೇಬಿನ ಹಣ್ಣೇ' ಎಂದಿದೆ. ಇವರ ಸಮಾಧಿಯು ಹಜ್ರತ್ ಮೌಲಾನಾ ಹಬೀಬುಲ್ಲಾಹ್ ಸಿಬ್ಗತಲ್ಲಾಹಿ(ಖು)ರ ಸಮಾಧಿಸ್ಥಳದ ಪಶ್ಚಿಮದಲ್ಲಿ ನ್ಹನ್ನೆ ಮಲೀಕ್ ಹಾಗೂ ಬಡೇ ಮಲೀಕ್‌ರ ಗುಂಬಜಿನ ಬಳಿಯಲ್ಲಿ ಪ್ರಾಂಗಣದಲ್ಲಿದೆ. 'ನಫಾನಲ್ಲಾಹು ಬೀ ಬರ್ ಕಾತಿಹಾ ಅಲ್ಲಾಹನು ಅವರ ಸಮೃದ್ಧಿಯಿಂದ ನಮಗೆ ಫಲ ನೀಡಲಿ.

■

೧೧೧. ಹಜ್ರತ್ ಬೀಬೀ ಖಾದ್ರಿಯಾ

ಇವರು ಬಿಜಾಪುರದ ಶ್ರೇಷ್ಠ ಸೂಫಿವರ್ಯರಲ್ಲಿ ಓರ್ವರಾಗಿರುವರು. ಅದೃಷ್ಟಜ್ಞಾನದ ಧಣಿಯಾಗಿದ್ದರು. 'ಮಕ್ಸೂದಲ್ ಮುರಾದ್' ಪುಸ್ತಿಕೆಯಲ್ಲಿ ಹಿಗೆ ಬರೆಯಲಾಗಿದೆ. ಹಜ್ರತ್ ಪೀರ್ ದಸ್ತಗೀರ್ ಶಾಹ್ ಹಾಷಿಂ ಹುಸೈನಿ ಅಲ್ವಿ (ಖು)ರು ಹೀಗೆ ಹೇಳುತ್ತಾರೆ. ಓರ್ವ ಫಕೀರನನ್ನು ನೋಡಿದೆನು. ಆತನು ಈ ಬೀಬಿ ಖಾದ್ರಿಯಾ(ರ) ಇವರು ಹಜ್ರತ್ ಅಬ್ದುಲ್ ಖಾದಿರ್ ಜಿಲಾನಿಯವರ ವಂಶಸ್ಥರಾಗಿದ್ದರು. ಆ ಫಕೀರರು ಇವರ ಹೊರತಾಗಿ ಇನ್ನಾವ ಮಹಿಳೆಯರನ್ನೂ ಗೌರವಿಸುತ್ತಿರಲಿಲ್ಲ. ಇವರ ಸಮಾಧಿಸ್ಥಳ,

ಜೀವನ ವಿವರ, ನಿಧನ ದಿನಾಂಕ ಹಾಗೂ ಇಚ್ವಿಯು ತಿಳಿದುಬಂದಿಲ್ಲ. ಆದರೆ ಇವರ ಸಮಾಧಿಯು ನಗರದ ಒಳಭಾಗದಲ್ಲಿ ಇದೆ.

■

೧೧೨. ಹಜ್ರತ್ ಬೀಬೀ ಸಾಲಿಹಾ ಮಾಸಾಬಾ (ರ)

ಇವರು ಅತ್ಯುನ್ನತ ದರ್ಜೆಯ ಸೂಫಿವರ್ಯರಾಗಿದ್ದರು. ಇವರು ಹಜ್ರತ್‌ಶಾಹ್ ಹಾಷಿಂ ಹುಸೈನಿಯವರ ಧರ್ಮಪತ್ನಿಯಾಗಿದ್ದರು ಹಾಗೂ ಇವರು ರಂಜಾನಿನ ಪವಿತ್ರ ಲೈಲತಲ್ ಕದ್ರ– (ಕುರ್‌ಆನ್ ಅವತೀರ್ಣಗೊಂಡ ರಾತ್ರಿ) ಗುರುತಿಸಿದರು.

ಒಂದು ರಾತ್ರಿ ಇವರು ತಮ್ಮ ಕೋಣೆಯಲ್ಲಿ ಆರಾಧನೆಯಲ್ಲಿ ನಿರತರಾಗಿದ್ದರು. ಪವಿತ್ರರಾತ್ರಿಯ (ಶಬೇಕದರ್) ಲಕ್ಷಣಗಳು ಗೋಚರಿಸತೊಡಗಿದವು. ಗಿಡ ಮರಗಳು, ಬಂಡೆಗಲ್ಲುಗಳು. ಸಜ್ದಾ(ಬಾಗುವಿಕೆ)ದಲ್ಲಿ ಹೋದವು. ಇವರು ಇದರ ಸತ್ಯಾಸತ್ಯತೆಯ ಪ್ರಮಾಣಕ್ಕಾಗಿ ತಮ್ಮ ದುಪಟ್ಟಾವನ್ನು ಒಂದು ಮರದ ಮೇಲೆ ಹಾಕಿದರು. ಹಾಗೂ ಯಾವಾಗ ಆ ಮರವು ಸಜ್ದಾದ ಸ್ಥಿತಿಯಿಂದ ಎದ್ದು ನಿಲ್ಲಲು ಆ ದುಪ್ಪಟ್ಟಾವು ಆ ಎತ್ತರದ ಮರದ ತುದಿಯಲ್ಲಿ ತೂಗಾಡುತ್ತಿತ್ತು. ಅದನ್ನು ಎಲ್ಲ ಜನರು ತಮ್ಮ ಕಣ್ಣಿನಿಂದ ನೋಡಿದರು.

ಪವಿತ್ರ ಬಿಜಾಪುರ ನಗರದಲ್ಲಿ ಸಮಾಧಿಸ್ಥರಾಗಿರುವ ಹಲವಾರು ಸೂಫಿವರ್ಯರ ಜೀವನಗಾಥೆ, ಕೆಲಘಟನೆಗಳು ಹಾಗೂ ಕೆಲ ಪವಾಡಗಳು, ಸಮಾಧಿ ಇರುವ ಸ್ಥಳ ವಿವರಣೆಯು ಈ ಗ್ರಂಥದಲ್ಲಿ ಉಲ್ಲೇಖಿಸಲಾಗಿದೆ. ಇದನ್ನು ಹೊರತುಪಡಿಸಿ, ದೇವನಿಷ್ಠ, ವಿದ್ವಾಂಸರು, ಖಾಜಿ(ನ್ಯಾಯಾಧೀಶರು) ದರವೇಶಿಗಳು, ಫಕೀರರು ಇವರ ಕೆಲವರ ಕೆಲವಿವರಣೆಗಳನ್ನು ಬರೆಯಲಾಗಿದೆ. ಆದರೆ ಈ ಪಟ್ಟಣದಲ್ಲಿ ಹಾಗೂ ಹೊರಗಡೆ ಬಹಳಷ್ಟು ಸೂಫಿಗಳು ಸಮಾಧಿಸ್ಥರಾಗಿರುವರು. ಅವರ ಬದುಕಿನ ಘಟನೆಗಳು ಹಾಗೂ ಸಮಾಧಿಸ್ಥಳಗಳ ವಿವರವು ತಿಳಿದುಬಂದಿಲ್ಲ. ಅದಕ್ಕಾಗಿ ಈ ಗ್ರಂಥಕರ್ತನ ಮನದಲ್ಲಿ ಯೋಚನೆ ಮೂಡಿತು. ಅದೇನೆಂದರೆ ಹಜ್ರತ್‌ಶಾಹ್ ಅಬುಲ್ ಹಸನ್ ಸಾನಿ ಖಾದ್ರಿ(ಖು)ರು ಹಿಜ್ರಿಶಕೆ ೧೧೯೬ರಲ್ಲಿ ಸೂಫಿವಂಶಸ್ಥರ, ಮಜಬೂಬ್ (ನಿಮಗ್ನ ಜನರ)ರ ಫಕೀರರ, ವಿದ್ವಾಂಸರ, ಶಿಕ್ಷಕರ, ಶಿಕ್ಷಣತಜ್ಞರ ಹೆರುಗಳನ್ನು ಒಂದೆಡೆಗೆ ಸಂಗ್ರಹಿಸಿರುವರು. ಅದನ್ನೂ ಸಹ ಈ ಗ್ರಂಥದ ಕೊನೆಯಲ್ಲಿ ಅಳವಡಿಸಲಾಗಿದೆ.

ಕೆಲವು ಕಡೆಗೆ ಈ ಗ್ರಂಥಕರ್ತನು ಸೂಕ್ತ ರೀತಿಯಲ್ಲಿ ಬದಲಾವಣೆ ಮಾಡಿಕೊಂಡಿರುವನು. ಕೆಳಗೆ ವಿವರಿಸಲಾದ ಸೂಫಿಗಳ ವಿವರಗಳ ಪಟ್ಟಿಯನ್ನು

ಸಿದ್ಧಗೊಳಿಸಲಾಗಿದೆ. ಅದರಲ್ಲಿ ೫ ಭಾಗಗಳಿವೆ. ಮೊದಲ ಭಾಗದಲ್ಲಿ ಪುಟಸಂಖ್ಯೆ ಇರುವದು. ಎರಡನೆಯ ಭಾಗದಲ್ಲಿ ಹೆಸರುಗಳು, ಮೂರನೆಯ ಭಾಗದಲ್ಲಿ ಮರಣದ ದಿನಾಂಕ, ಇಸ್ವಿ ಹಾಗೂ ನಾಲ್ಕನೆಯ ಭಾಗದಲ್ಲಿ ಯಾರ ಸಮಾಧಿಸ್ಥಳವು ತಿಳಿದು ಬಂದಿದೆಯೋ ಅದನ್ನು ನಮೂದಿಸಲಾಗಿದೆ. ಐದನೆಯ ಭಾಗದಲ್ಲಿ ಅವಶ್ಯವಿರುವ ವಿವರ ದಾಖಲಿಸಲಾಗಿದೆ.

ಈ ಪಟ್ಟಿಯ ಕೊನೆಯಲ್ಲಿ ಕೆಲ ಹೆಸರುಗಳು ಮೂಲಕೃತಿಯಲ್ಲಿ ಇರಲಿಲ್ಲ. ಅವುಗಳನ್ನು ಸೇರಿಸಲಾಗಿದೆ. ಅದಕ್ಕಾಗಿ ಈ ಪಟ್ಟಿಯು ಈ ಮಹಾಪುರುಷರ ವಾರ್ಷಿಕ ಉರೂಸುತ್ಸವವನ್ನು ಆಚರಿಸುವವರಿಗೆ ಸಹಾಯವಾಗುವದು ಹಾಗೂ ಸಾರ್ವಜನಿಕರಿಗೆ ಒಂದು ಉತ್ತಮ ಕೈಪಿಡಿಯಾಗಿ ಸಮಾಧಿಸ್ಥಳಗಳ ವಿವರವನ್ನು ನೀಡುವದು.

ಓ ಅಲ್ಲಾಹ್ ! ನಮ್ಮನ್ನು ಗುಣವಂತರನ್ನಾಗಿ ಪರಿಗಣಿಸು ! ಹಾಗೂ ಅಂತಿಮದಿನದ ವಿಚಾರಣೆ ಹಾಗೂ ನ್ಯಾಯ ನಿರ್ಣಯ ದಿನದಂದು ಹಾಗೂ ನ್ಯಾಯ ನಿರ್ಣಯ ದಿನದಂದು ನಿನ್ನ ಸಮೀಪಸ್ಥ ಸ್ನೇಹಿತರ ಗುಂಪಿನಲ್ಲಿ ಎಬ್ಬಿಸು !

ಈ ಪುಸ್ತಕ 'ರೌಜತುಲ್ ಔಲಿಯಾಯೆ ಬಿಜಾಪುರ'ವು 1352ರ 9ನೆಯ ತಿಂಗಳ ಮೊದಲನೆಯ ಹತ್ತುದಿನಗಳಲ್ಲಿ ಬುಧವಾರದಂದು ಮುಕ್ತಾಯಗೊಂಡಿತು !!

ಅಲ್ಲಾಹುವು ತನ್ನ ಆಪ್ತಪ್ರವಾದಿ ಮುಹಮ್ಮದ್ (ಸ)ರ ಮೇಲೆ ನಮ್ಮ ಹಾಗೂ ಸಕಲಸೃಷ್ಟಿಗಳ ಪರವಾಗಿ ಅಗಣಿತ, ಅಸಂಖ್ಯ 'ದರೂದ್ ವ ಸಲಾಂ' ಅರ್ಪಿಸು. ಅವರ ಮೇಲೆ ಸದಾಕಾಲ ನಿರಂತರವಾಗಿ ಶಾಂತಿಯನ್ನು ವರ್ಷಿಸು...

ಈ ಪುಸ್ತಕದ ಲೇಖಕ ಹಾಗೂ ಹಸ್ತಪ್ರತಿ ಸಿದ್ಧಪಡಿಸಿದವರಿಗೆ ಅಲ್ಲಾಹುವಿನ ಮಹಾನ್ ಪ್ರವಾದಿ ಹಾಗೂ ಅವರ ಸಂತಾನದ ಆಶೀರ್ವಾದದ ಫಲರೂಪದಲ್ಲಿ ಸಮೃದ್ಧಿಯನ್ನು ನೀಡು. ನಮ್ಮ ದಾರಿ ಸುಗಮಗೊಳಿಸು...

■

*

ಸಮಾರೋಪ

(ಹಾಜಿ ಸೈಯದ್ ಶಾಹ ರೋಷನ್‌ಅಲಿ ಖಾದ್ರಿ ವ ಶತ್ತಾರಿ ಅವರಿಂದ)

ಹಜ್ರತ್ ಪೀರ್ ಓ ದಸ್ತಗೀರ ಮುರ್ಷದ್‌ನಾ ವ ಮೌಲಾನಾ ಹಜ್ರತ್ ಸೈಯದ್ ಶಾಹ ಬುರ್ಹಾನುದ್ದೀನ ಅಲ್‌ಹುಸೈನೀ ಶತ್ತಾರಿ ಸಿಬ್ಗತ್‌ಲ್ಲಾಹಿಯವರ ಶಿಷ್ಯ ಹಾಗೂ ಖಲೀಫಾನಾದ ನಾನು ಹಾಜಿ ಸೈಯದ್ ಶಾಹ ರೋಷನ್ ಅಲಿ ಖಾದ್ರಿ ವ ಶತ್ತಾರಿ ಸಿಬ್ಗತ್‌ಲ್ಲಾಹಿಯು ಔಲಿಯಾಗಳಲ್ಲಿ ಪ್ರೇಮ ಹಾಗೂ ಅಸ್ಥೆಯುಳ್ಳ ಜನರಿಗಾಗಿ ಹೀಗೆ ಈ ವಿಷಯವನ್ನು ಪ್ರಸ್ತುತಪಡಿಸುವೆನು.

ದಾರುಲ್ ಜಫರ್ ಶಹರ್ (ಗೌರವಾನ್ವಿತ ಪಟ್ಟಣವಾದ) ಬಿಜಾಪುರದಲ್ಲಿ ಮೊದಮೊದಲಲ್ಲಿ ಹಿಜ್ರಿ ಶಕೆ ೫೫೫ರಲ್ಲಿ ನಿಧನರಾದ ಹಾಜಿ ರೂಮಿಯವರು ಇಲ್ಲಿಗೆ ಆಗಮಿಸಿದರು. ತದನಂತರ ಔಲಿಯಾಗಳ ಬರುವಿಕೆ ಪ್ರಾರಂಭವಾಯಿತು. ಹೀಗೆ ಎಲ್ಲ ಕಡೆಯಿಂದಲೂ ಒಬ್ಬರ ನಂತರ ಒಬ್ಬರು, ನಂತರ ಹಿಂಡು ಹಿಂಡಾಗಿ ಸೂಫಿಗಳು ಬರತೊಡಗಿದರು.

ಹಜ್ರತ್ ಮುಹಮ್ಮದ ಇಬ್ರಾಹಿಂ ಸಾಹೇಬ ಖಾದ್ರಿ ವ ಶತ್ತಾರಿಯವರು ಅನೇಕ ಗ್ರಂಥಗಳಿಂದ ಸಂಗ್ರಹಿಸಿ ಬಿಜಾಪುರಕ್ಕೆ ಆಗಮಿಸಿದ ಔಲಿಯಾಗಳು ಹಾಗೂ ವಿದ್ವಾಂಸರ ಕುರಿತು ಅವರ ಜೀವನ ಚರಿತ್ರೆ, ಆಗ ನಡೆದ ಘಟನೆಗಳ ವಿವರವನ್ನು ಫಾರ್ಸಿ ಭಾಷೆಯಲ್ಲಿ 'ರೌಜತ್‌ಲ್ ಔಲಿಯಾ' ಎಂದು ಗ್ರಂಥದ ಹೆಸರಿಸಿ ಬರೆದರು.

ಈ ಗ್ರಂಥವು ಸದ್ಯಕ್ಕೆ ಅಪರೂಪದ್ದಾಗಿದ್ದು ಅಲಭ್ಯವಾಗಿದೆ. ಹಾಗೂ ಈ ಗ್ರಂಥವು ಫಾರ್ಸಿ ಭಾಷೆಯಲ್ಲಿ ಇರುವುದರಿಂದ ಪ್ರತಿಯೋರ್ವ ವ್ಯಕ್ತಿಯು ಅದರ ಲಾಭವನ್ನು ಪಡೆಯಲಾಗುತ್ತಿರಲಿಲ್ಲ. ಅದಕ್ಕಾಗಿ ಬಹಳೇ ಕಷ್ಟಗಳನ್ನೆದುರಿಸಿ ಈ ಗ್ರಂಥವನ್ನು ಪಡೆದು ಫಾರ್ಸಿ ಭಾಷೆಯಲ್ಲಿಯೇ ಮುದ್ರಣಪಡೆಸಲಾಯಿತು. ಇದೇ ಸಮಯದಲ್ಲಿ ಹಜ್ರತ್ ಶಾಹ ಸೈಫುಲ್ಲಾ ಸಾಹೇಬ್ ಖಾದ್ರಿ ವ ಶತ್ತಾರಿ ಸಿಬ್ಗತಲ್ಲಾಹಿಯವರು ರಾಯಚೂರಕ್ಕೆ

ಆಗಮಿಸಿದರು ಹಾಗೂ ನನ್ನ ಬಯಕೆಯಂತೆ ಎಂಟು ತಿಂಗಳವರೆಗೆ ನನ್ನ ಮನೆಯಲ್ಲಿ ವಿರಮಿಸಿ ಬಹಳ ಕಷ್ಟಪಟ್ಟು ಉರ್ದು ಭಾಷೆಗೆ ತರ್ಜುಮೆಗೊಳಿಸಿದರು. ಪುಸ್ತಕದ ಕೊನೆಯ ಭಾಗದಲ್ಲಿ ಒಂದು ಸುದೀರ್ಘವಾದ ಪಟ್ಟಿಯನ್ನು ಸೇರಿಸಲಾಯಿತು. ಆ ಔಲಿಯಾಗಳ ಸುದೀರ್ಘ ಪಟ್ಟಿಯು ಹಜ್ರತ್ ಶಾಹ ಅಬುಲ್ ಹಸನ್ ಸಾನಿ ಖಾದ್ರಿ ಬಿಜಾಪುರಿಯವರು ತಮ್ಮ ಅಂತರ್ಜ್ಞಾನದಿಂದ ಹಾಗೂ ದಿವ್ಯದೃಷ್ಟಿಯಿಂದ ಗ್ರಹಿಸಿ ಸಂಗ್ರಹಿಸಲಾದ ಅದರಲ್ಲಿ ಮಹಾಪುರುಷರ, ವಿದ್ವಾಂಸರ, ಧಾರ್ಮಿಕ ಪಂಡಿತರ ಬಾದಶಹರ, ಮಂತ್ರಿಗಳ ಹಾಗೂ ಆದಿಲಶಾಹಿ ಸುಲ್ತಾನರ ಆಪ್ತರ ಪಟ್ಟಿಯನ್ನು ವಿವರಿಸಲಾಗಿತ್ತು.

ಶಾಹ ಸಾಹೇಬರು ಆ ಪಟ್ಟಿಯನ್ನು ಐದು ಭಾಗಗಳಲ್ಲಿ ವಿಂಗಡಿಸಿ ವಿವರಿಸಿದ್ದರು. ಈ ವಿವರವು ಸೂಫಿಗಳ ವಂಶಸ್ಥರು ಹಾಗೂ ಹಿತೈಷಿಗಳಿಗೆ, ಅನುಯಾಯಿಗಳಿಗೆ ಉರುಸುತ್ಸವವನ್ನು ಆಚರಿಸಲು ಅತ್ಯಂತ ಸಹಾಯಕವಾಗಿ ಪರಿಣಮಿಸಿತು ಹಾಗೂ ಸಾರ್ವಜನಿಕರಿಗೆ, ಉತ್ಸುಕರಿಗೆ ಈ ಪಟ್ಟಿಯು ಒಂದು ಮಾರ್ಗದರ್ಶಕ ವಿವರದ ರೂಪದಲ್ಲಿ ಲಭ್ಯವಿದ್ದು, ಮಹಾಪುರುಷರ ಸಮಾಧಿಗಳ ಸ್ಥಳ, ನಿಧನ ದಿನಾಂಕ, ಹಿಜ್ರಶಕೆ ಇತ್ಯಾದಿ ವಿವರಗಳು ಒಂದೆಡೆಗೆ ಸಿಗುವವು.

ರಾಯಚೂರಿನಿಂದ ಶಾಹ್ ಸೈಫುಲ್ಲಾ ಸಾಹೇಬರು ಮರಳಿ ಮದ್ರಾಸಕ್ಕೆ ಹೋಗುವಾಗ ನಾನು ಶಾಹ್ ಸಾಹೇಬರಿಂದ ಈ ಗ್ರಂಥದ ಪ್ರಕಟಣೆಯ ಹಕ್ಕನ್ನು ಪಡೆದು ಮುದ್ರಣ ಕಾರ್ಯವನ್ನು 'ಸಿಬ್ಗತೆ ಇಲಾಹಿ' ಮುದ್ರಣಾಲಯದಲ್ಲಿ ಪ್ರಾರಂಭಿಸಿದೆನು. ಕೆಲ ಪುಟಗಳ ಮುದ್ರಣಕಾರ್ಯವು ಪ್ರಾರಂಭವಾಗಿತ್ತು. ಆಗಲೇ ಶಾಹ್ ಸೈಫುಲ್ಲಾ ಸಾಹೇಬರು ರೋಗಗ್ರಸ್ತರಾಗಿ ಹಾಸಿಗೆ ಹಿಡಿದು ೧೮, ಜಿಲ್ ಹಜ್ಜಾ ಹಿಜ್ರಿ ಶಕೆ ೧೩೧೩ರಲ್ಲಿ ಮದ್ರಾಸಿನಲ್ಲಿ ಕೊನೆಯುಸಿರೆಳೆದರು. ಹಜ್ರತರ ಇಚ್ಛೆಯಂತೆ ಅವರ ಸಹೋದರರು ಅವರ ಮೃತದೇಹವನ್ನು ತಾಜಪುರಕ್ಕೆ ಒಯ್ದು ಹಜ್ರತ್ ಮುರ್ಷದ್‌ನಾ ಪೀರ್ ದಸ್ತಗೀರರ ಎದುರಲ್ಲಿ ಖಾನಖಾಹ್‌ದ ಮುಂಭಾಗದಲ್ಲಿ ದಫನ್‌ಗೈದರು. ನಾನೂ ಸಹ ಅವರ ಅಂತಿಮ ಯಾತ್ರೆಯಲ್ಲಿ ಭಾಗಿಯಾಗಿದ್ದೆನು.

ಶಾಹ ಸೈಫುಲ್ಲಾ ಸಾಹೇಬರ ಉನ್ನತ ವ್ಯಕ್ತಿತ್ವ ಹಾಗೂ ಅನುಪಮ ಗುಣಗಳನ್ನು ವಿವರವಾಗಿ ಬರೆಯಲು ತೊಡಗಿದರೆ ಒಂದು ಮಹದ್ಗ್ರಂಥವೇ ಆದೀತು. ಆದರೆ ನಾನು ಇಲ್ಲಿ ಅವುಗಳನ್ನು ಸಂಕ್ಷಿಪ್ತಗೊಳಿಸಿ ಹೀಗೆ ಹೇಳುವೆನು. ಇವರು ದೇವನಾಮದ ಜಪದಲ್ಲಿ ಮುಳುಗಿದ ಶ್ರಮಜೀವಿಗಳೂ ಪ್ರಕೃತಿಯಿಂದ ಕೋಮಲರು, ನಮ್ರರು ಹಾಗೂ ವಿನಯಶೀಲರೂ ಆಗಿದ್ದರು ಹಾಗೂ ಈ ಜಗತ್ತಿನಿಂದ ಜಗದ ಜನರಿಂದ ವಿಮುಖರಾಗಿ ತಮ್ಮ ಪೂರ್ವಜರ ಆಸ್ತಿಯನ್ನು ತ್ಯಜಿಸಿ ಏಕಾಂತವಾಸಿಗಳಾದರು. ಇವರು ಹಜ್ರತ್ ಪೀರ್ ದಸ್ತಗೀರ್(ಖ)ರಿಂದ ಬೈಯ್ಯತ್‌ನ್ನು ೧೨೮೦ ಹಿಜ್ರಿಶಕೆ

ಪಡೆದರು. ೧೩೦೩ ಹಿ.ಶ.ಯಲ್ಲಿ ಖಿಲಾಫತ್ ಹೊಂದಿದರು. ಇದರ ವಿವರವು 'ತಸರ್ರುಫಾತೇ ಬುರ್ಹಾನಿ' ಪುಸ್ತಿಕೆಯಲ್ಲಿ ಇರುವುದು. ೧೩೧೩ ಹಿ.ಶ. ಯಲ್ಲಿ ನಿಧನರಾದರು. ಬೈಯತ್‌ನಿಂದ ಹಿಡಿದು ಸಾವಿನವರೆಗೂ ಏಕಾಂತವಾಸದಲ್ಲಿಯೇ ಇದ್ದರು. ಇವರ ವಯಸ್ಸು ಸುಮಾರು ೫೦ ವರ್ಷದವರೆಗೆ ಇತ್ತು. ಹಜ್ರತ್ ಪೀರ್ ದಸ್ತಗೀರ್ (ಖು)ರು ಹಲವಾರು ಸಾರಿ ಪ್ರೀತಿಯಿಂದ 'ಮಿಯಾ' ನನ್ನ ಮಗನಾಗಿದ್ದಾನೆ ಎನ್ನುತ್ತಿದ್ದರು. ಹಾಗೂ ಯಾವಾಗಲೂ ಇವರನ್ನು 'ಮಿಯಾ' ಎಂದು ಕರೆಯುತ್ತಿದ್ದರು. ಈ ಸೆಳವು ಎಷ್ಟು ಗಾಢವಾಗಿತ್ತೆಂದರೆ ಹಜ್ರತ್ ಪೀರ ದಸ್ತಗೀರ್ (ಖು)ರ ನಿಧನವು ೧೮ ಜಿಲ್ ಹಜ್ಜಾದಂದೇ ಆಯಿತು.

ಹಜ್ರತ್ ಪೀರ್ ದಸ್ತಗೀರ(ಖು)ರ ದಫನ್ ಕಾರ್ಯವು ೧೯ ಜಿಲ್‌ಹಜ್ಜಾದಂದು ಸಾಯಂಕಾಲ ೪ ಗಂಟೆಗೆ ತಾಜಪೂರ ಷರೀಫದಲ್ಲಿ ಆಯಿತು. ಹಾಗೂ ಶಾಹ್ ಸಾಹೇಬರ ದಫನ್ ಕಾರ್ಯವೂ ಸಹ ೧೯ನೇ ಜಿಲ್ ಹಜ್ಜಾದ ಸಾಯಂಕಾಲ ೪ ಘಂಟೆಗೇ ತಾಜಪುರ ಷರೀಫದಲ್ಲಿಯೇ ಆಯಿತು. ಸುಬಹಾನಲ್ಲಾಹ! ಚುಂಬಕದಂಥ ಸೆಳವು, ಮುರ್ಷದ್ ಹಾಗೂ ಮರೀದ್‌ರ ನಡುವೆ ಆಕರ್ಷಣೆಇಲ್ಲಿದ್ದರೆ ಇಂಥದ್ದಿರಬೇಕು. ಅಲ್ಲಾಹುವು ಪ್ರತಿಯೋರ್ವ ಅನುಯಾಯಿಗೂ ಇಂತಹ ಸೌಭಾಗ್ಯ ಕರುಣಿಸಲಿ॥ ಆಮೀನ್.

ಚಾಹತೆ ಹೈಂ ಜಿಸ್ಕೊ ಬುಲಾತೆ ಹೈಂ ಯೂಂ।
ಶರಬತೇ ದೀದಾರ್ ಪಿಲಾತೆ ಹೈಂ ಯೂಂ॥
ಇಷ್ಟಪಟ್ಟು ಅವರು ಕರೆಯುತ್ತಾರೆ ಹೀಗೆ।
ದರ್ಶನದ ಅಮೃತವನು ಕುಡಿಸುತ್ತಾರೆ ಹೀಗೆ॥

ಶಾಹ ಸೈಫುಲ್ಲಾರಿಗೆ ಆ ರೋಗಾವಸ್ಥೆಯಲ್ಲಿ ಹಜ್ರತ್‌ಪೀರ್ ದಸ್ತಗೀರರ ದರ್ಶನವು ಸ್ವಪ್ನದಲ್ಲಿ ಆಯಿತು ಹಾಗೂ ಆದೇಶವಾಯಿತು. "ಖಿಲಾಫತ್" ನೀಡಿರಿ. ಆದರೆ ಇವರು 'ಯಾರಿಗೆ ಖಿಲಾಫತ್ ನೀಡಬೇಕು ಎಂಬ ವಿಷಯದಲ್ಲಿ ಚಿಂತಿತರಾದರು. ಯಾವಾಗ ಸಾವಿನ ಸಮಯವು ಸಮೀಪಿಸಿತೋ ಹಾಗೂ ಸ್ವಪ್ನದಲ್ಲಿಯೇ ತಾಜಪುರ ಷರೀಫಕ್ಕೆ ಕರೆಯಲಾಯಿತು. ನಂತರ ಅವರು ತಮ್ಮ ಸಹೋದರರಾದ ಶಾಹ ಮುಹಿಯುದ್ದೀನ್ ಹುಸೈನ್‌ಸಾಹೇಬ್ ಖಾದ್ರಿ ವ ಶತ್ತಾರಿ ಸಿಬ್ಗತ್‌ಲ್ಲಾಹಿ ಇವರೂ ಸಹ ಹಜ್ರತ್ ಪೀರ್ ದಸ್ತಗೀರರ ಶಿಷ್ಯರಾಗಿದ್ದರು. ಅವರಿಗೆ ಹಜರತ್‌ರ ಆದೇಶದಂತೆ ಖಿಲಾಫತ್ ನೀಡಿದರು.

ಇದು ಅತ್ಯಂತ ವಿಷಾದದಾಯಕ ಹಾಗೂ ದುಃಖದಾಯಕ ಸಂಗತಿ ಜರುಗಿತು. ಹಜ್ರತ್ ಪೀರ್ ದಸ್ತಗೀರ್(ಖು) ನಿಧನರಾಗಿ ಅಲ್ಪ ಸಮಯವೇ ಆಗಿತ್ತು. ಇನ್ನು

ಅವರ ಲೋಕವಿದಾಯದ ಶೋಕವು ಜನಮಾನಸದಿಂದ ದೂರವಾಗಿರಲಿಲ್ಲ. ಆಗಲೇ ಹಜ್ರತ್‌ರ ಧರ್ಮಪತ್ನಿಯವರಾದ ಪೀರಾನ್‌ಬೀಬೀ ಸಾಹೇಬಾರವರೂ ಸಹ ಮದ್ರಾಸಿನಲ್ಲಿ ರಂಜಾನ ತಿಂಗಳ ೨೪ನೆಯ ದಿನಾಂಕ ಹಿಜ್ರ ಶಕೆ ೧೩೧೩ರಂದು ನಿಧನ ಹೊಂದಿದರು. ಹೀಗೆ ಗಾಯದ ಮೇಲೆ ಬರೆಯೆಳದಂತೆ ದುಃಖದ ಗಾಢ ಛಾಯೆ ಎರಗಿತು. ಇವರ ಶವಪೆಟ್ಟಿಗೆಯನ್ನು ಅರ್ಕಾಟಿನ ನವಾಬರು ತುಂಬು ಅಸ್ಥೆಯೊಂದಿಗೆ ಮರುದಿನ ೨೫ನೆಯ ರಂಜಾನದಂದು ಸಹಭಾಗಿಯಾಗಿ ತಾಜಪುರ ಷರೀಫಕ್ಕೆ ವಿಶೇಷ ರೈಲಿನ ಮುಖಾಂತರ ಒಯ್ಯಲಾಯಿತು ಹಾಗೂ ಹಜ್ರತರ ದರ್ಗಾ ಷರೀಫದ ಒಳಾಂಗಣದಲ್ಲಿ ಮಸೀದಿಯ ಮಗ್ಗುಲಲ್ಲಿ ದಫನ್‌ಗೈಯಲಾಯಿತು.

ವಾಲಾಜಾಹಿಯವರ ವಂಶದ ವಿವರಣೆ :

ವಿಸ್ತ್ರತ ರೂಪದಲ್ಲಿದ್ದು ಈ ವಂಶದವರು ಹಜ್ರತ್ ಪೀರ್ ದಸ್ತಗೀರ್ ಸಿಬಗತಲ್ಲಾಹೀ(ಖ)ರ ಅತ್ಯಂತ ನಿಷ್ಠಾವಂತ, ಆಸ್ಥೆಯುಳ್ಳ ಶ್ರುದ್ಧಾಳುಗಳಾಗಿದ್ದು ಅವರ ವಿವರಣೆಯು ಈ ಮೊದಲು ಬಂದಿರುವದು.

ದಖ್ಖನ್ ಹಾಗೂ ಉತ್ತರ ಭಾರತದಲ್ಲಿ ಈ ರೋಜತುಲ್ ಔಲಿಯಾಯೆ ಬಿಜಾಪುರದ ಉರ್ದು ಅನುವಾದವನ್ನು ಓದುವ ಓದುಗರು ಅಸಂಖ್ಯವಾಗಿರುವರು. ಸಿಬ್ಗತಲ್ಲಾಹ ವಂಶದ ವಿವಿರವು ಅತ್ಯಂತ ವಿಶದರೂಪದಲ್ಲಿ ವಿಶ್ಲೇಷಣೆಗೊಳಪಟ್ಟು ದುದರಿಂದ ಈ ಗ್ರಂಥವು ಅವರ ಶಿಷ್ಯವೃಂದ(ಮರೀದರು) ಹಾಗೂ ಅವರಲ್ಲಿ ಅಸ್ಥೆಯುಳ್ಳ ಶ್ರದ್ಧಾಳುಗಳಿಗೆ ಒಂದು ಅತ್ಯಮೂಲ್ಯ ನಿಧಿಯಾಗಿ ಪರಿಣಮಿಸಿದೆ. ಇದರಿಂದ ತಮ್ಮ ಮುರ್ಷಿದ್‌ರ ಸಮಸ್ತ ವಿವರಗಳು ಸಮಗ್ರವಾಗಿ ತಿಳಿಯಲ್ಪಡುತ್ತವೆ.

ಈ ಗ್ರಂಥದ ಮುಕ್ತಾಯದ ನಂತರ ಒಂದು ವಿಶೇಷ ವಿವರವುಳ್ಳ ಪಟ್ಟಿಯು ರಾಯಚೂರಿನ ಸೂಫಿಗಳ ಕುರಿತು ಎಷ್ಟು ಲಭ್ಯವಾದವೋ ಅವರ ಹೆಸರುಗಳನ್ನು ಘಟನೆಗಳ ವಿವರಗಳೊಂದಿಗೆ, ಉರುಸಿನ ದಿನಾಂಕವನ್ನು ಅವಶ್ಯವೆಂದು ಬಗೆದು ಇಲ್ಲಿ ಸೇರಿಸಲಾಗಿದೆ. ಇದರಿಂದ ಓದುಗರು ಇದರ ಲಾಭವನ್ನೂ ಪಡೆಯಬಹುದಾಗಿದೆ.

■

*

ರಾಯಚೂರಿನ ಸೂಫಿಗಳು

'ಪರಮ ದಯಾಳುವೂ, ಕರುಣಾನಿಧಿಯೂ ಆದ ಅಲ್ಲಾಹುವಿನ ನಾಮದೊಂದಿಗೆ......................

ಅಲ್ಲಾಹುವಿನ ಸ್ತುತಿ ಸ್ತೋತ್ರದ ನಂತರ ಮುಹಮ್ಮದ್(ಸ)ರ ಮೇಲೆ ಅಲ್ಲಾಹುವಿನ ದಯೆ ಹಾಗೂ ಕರುಣೆ ವರ್ಷಿಸಲಿ ಎಂದು ಪ್ರಾರ್ಥಿಸುತ್ತ – ಈ ಲೇಖಕನಾದ ಹಾಜಿ ಸೈಯದ್ ರೋಷನ್ ಅಲಿ ಖಾದ್ರಿ ವ ಶತ್ತಾರಿ ಸಿಬ್ಗತಲ್ಲಾಹಿಯು ಅಲ್ಲಾಹುವಿನ ದಾಸರಲ್ಲಿ ಹಾಗೂ ನೇರ ಮಾರ್ಗದಲ್ಲಿ ಸಾಗುವ ಇಚ್ಛುಕ ಬಂಧುಗಳಲ್ಲಿ ಹೀಗೆ ವಿನಂತಿಸಿಕೊಳ್ಳುವನು. ಏನೆಂದರೆ 'ರೋಜವತಲ್ ಔಲಿಯಾಯೇ ಬಿಜಾಪುರ್' ಗ್ರಂಥದಲ್ಲಿ ಬಹಳಷ್ಟು ಮಹಾಪುರುಷರ, ಸೂಫಿಗಳ ವಿವರವು ದಾಖಲಿಸಲ್ಪಟ್ಟಿದೆ. ಯಾರ ಪ್ರವೇಶದಿಂದಾಗಿ ಬಿಜಾಪುರ ಪ್ರದೇಶವು ಪವಿತ್ರತೆಯ ಉನ್ನತ ಸ್ಥಾನದ ಹೆಮ್ಮೆಗೆ ಪಾತ್ರವಾಯಿತು. ಅದಕ್ಕಾಗಿ ಈ ಲೇಖಕನ ಮನದಾಳದ ಬಯಕೆಯೂ ಒಡಮೂಡಿತು. ರಾಯಚೂರು ಪ್ರದೇಶದಲ್ಲಿಯೂ ಹಲವಾರು ಜನ ಸೂಫಿವರ್ಯರು ಹಾಗೂ ಮಹಾಪುರುಷರು ಸಮಾಧಿಸ್ಥರಾಗಿರುವರು ಇದರಿಂದಾಗಿ ರಾಯಚೂರು ಪ್ರದೇಶವೂ ಗೌರವಾನ್ವಿತ ಪ್ರದೇಶವಾಗಿ ಪರಿವರ್ತಿತವಾಯಿತು. ಈ ಸೂಫಿವರ್ಯರು ತುಂಬ ಪ್ರಾಚೀನ ಕಾಲದವರಾಗಿದ್ದಾರೆ. ಆಗ ಇಲ್ಲಿ ಇಸ್ಲಾಮಿನ ಸುಳಿವೂ ಇರಲಿಲ್ಲ.

ಹಜ್ರತ್ ಮುಂತಜಿಬುದ್ದೀನ್ ಜರ್ಜರಿ ಜರ್ ಬಕ್ಷ್ ಔರಂಗಾಬಾದಿ(ಖ)ರವರು ಕಳುಹಿಸಿದ ಹಜ್ರತ್ ಸೂಫಿ ಸರ್‌ಮಸ್ತರ (ಇವರ ಸಮಾಧಿಯು ಸಗರ ತಾಲೂಕಾ; ಜಿಲ್ಲಾ ಲಿಂಗಸೂರನಲ್ಲಿದೆ) ಇವರ ಸಹವರ್ತಿಗಳಾದ ಹಲವಾರು ಸೂಫಿಗಳು ದಖ್ಖನಿಗೆ ಆಗಮಿಸಿದರು. ಹಾಗೂ ಅಲ್ಲಿಂದ ಹೊರಟ ಹಜ್ರತ್ ಶೇಖ್ ಸಾಲಾರ್ ಸಾಹೇಬ್, ಇಮಾಮೆ ಔಲಿಯಾ(ಖ) ಹಾಗೂ ಹಜ್ರತ್ ಶೇಖ ಯುನುಸ್ ಸಾಹೇಬ್ ಬಕ್ಷಿ ಔಲಿಯಾ ಹಜ್ರತ್ ಶೇಖ್ ಅಹ್ಮದ್ ಅಲಂಬರ್ದಾರ್(ಖ) ಹಾಗೂ ಅನೇಕ

ಔಲಿಯಾಗಳೊಂದಿಗೆ ರಾಯಚೂರಿನಲ್ಲಿ ಜನರನ್ನು ಮೌಢ್ಯತೆಯ ಕೂಪದ ಅಂಧಕಾರದಿಂದ ಹೊರತೆಗೆದು ಧರ್ಮದ ಬೆಳಕಿಗೆ ತರಲು ಪ್ರಯತ್ನಿಸಿದರು. ಈ ಅವಧಿಯಲ್ಲಿ ಜರುಗಿದ ಸಂಘರ್ಷದಲ್ಲಿ ಹಲವಾರು ಸೂಫಿಗಳು ಹುತಾತ್ಮರಾದರು. ಹಾಗೂ ಇವರ ಹೊರತಾಗಿ ಇನ್ನಿತರ ಮಹಾಪುರುಷರು ಇಲ್ಲಿ ಇಸ್ಲಾಂ ಸ್ಥಾಪಿತವಾದ ಬಳಿಕ ಆಗಮಿಸಿದರು. ಇಲ್ಲಿ ಅನುಪಮ ಸೇವೆ ಸಲ್ಲಿಸಿ ಇಲ್ಲಿಯೇ ಸಮಾಧಿಸ್ಥರಾಗಿರುವರು. ಈ ಕಾರಣಕ್ಕಾಗಿ ನಾನು ಪೂರ್ವ ಅವಧಿಯ ಹಾಗೂ ಪಶ್ಚಾತ್ ಅವಧಿಯ ಎಲ್ಲ ಸೂಫಿಗಳ ನಾಮಧೇಯದ ಒಂದು ಪಟ್ಟಿಯನ್ನು ಸಿದ್ಧಗೊಳಿಸಿ ಅದು ಚಿರಸ್ಮರಣೀಯವಾಗಿ ಉಳಿಯಲಿ ಎಂಬ ಹೆಬ್ಬಯಕೆಯೊಂದಿಗೆ ಓದುಗರ ಗಮನಕ್ಕೆ ತಂದು ಒಂದು ಅಮೂಲ್ಯ ಕಾಣಿಕೆಯ ರೂಪದಲ್ಲಿ ಇಲ್ಲಿ ಅರ್ಪಿಸಿರುವೆನು. ಆದರೆ ವಿಷಾದದ ಸಂಗತಿಯೆಂದರೆ ಪ್ರಾಚೀನ ಕಾಲದ ಮಹಾಪುರುಷರ ಐತಿಹಾಸಿಕ ವಿವರಗಳುಳ್ಳ ಯಾವುದೇ ಗ್ರಂಥವು ಲಭ್ಯವಾಗಿಲ್ಲ.

ರಾಯಚೂರಿನಲ್ಲಿ ಜನಾಬ್ ಖಾಜಿ ಗುಲಾಮ ಹುಸೈನ್ ಸಾಹೇಬ್ ಅವರ ವಯಸ್ಸು ೮೫ ವರ್ಷವಾಗಿತ್ತು. ಅವರು ರಾಯಚೂರಿನ ಖಾಜಿಯಾಗಿದ್ದರು. ಅವರು ಮಹಾವಿದ್ವಾಂಸರಾಗಿದ್ದರು. ಅನುಪಮ ಧಾರ್ಮಿಕ ಪಂಡಿತರಾಗಿದ್ದರು. ಇಲ್ಲಿಯ ಸೂಫಿಯರ್ವರ ಚರಿತ್ರೆ, ಐತಿಹಾಸಿಕ ಘಟನೆಗಳನ್ನು ಅರಿತವರಾಗಿದ್ದರು. ಆದರೆ ಅತ್ಯಂತ ದುಃಖದಾಯಕ ಸಂಗತಿಯೆಂದರೆ ಇವರೂ ಸಹ ೨೩, ರಬ್ಬಿಯುಸ್ಸಾನಿ ೧೩೧೨ರಂದು ಇಹಲೋಕ ತ್ಯಜಿಸಿದರು. ಈ ಲೇಖಕನು ತನ್ನ ಬಯಕೆಯನ್ನು ಈಡೇರಿಸಿಕೊಳ್ಳುವುದಕ್ಕಾಗಿ ಅವರ ಜೀವಿತಾವಧಿಯಲ್ಲಿ ಪ್ರಾಚೀನ ಕಾಲದ ಮಹಾಪುರುಷರ ಪಟ್ಟಿಯನ್ನು ಸಿದ್ಧಗೊಳಿಸಿಕೊಂಡಿದ್ದನು. ಯಾವಾಗ ರಾಯಚೂರಿನ ಜನಾಬ್ ಶಾಹ್ ಸೈಫುಲ್ಲಾಹ ಖಾದ್ರಿಯವರು 'ರೋಜವತಲ್ ಔಲಿಯಾ' ಗ್ರಂಥದ ಅನುವಾದವನ್ನು ಪೂರ್ತಿಗೊಳಿಸಿದ ನಂತರ ಅವರ ಬಯಕೆಯಂತೆಯೂ ಈ ಪಟ್ಟಿಯನ್ನು ಈ ಗ್ರಂಥದೊಂದಿಗೆ ಸೇರಿಸಲಾಗಿದೆ. ಇದರಲ್ಲಿಯ ಮಾಹಿತಿಯು ಓದುಗರಿಗೆ ಸದುಪಯೋಗವಾಗಿ, ಮಹಾಪುರುಷರ ಸಮಾಧಿಗಳ ವಿವರವು ಲಭ್ಯವಾಗಿ ಅವರಿಗೆ ಜಿಯಾರತ್ ಸುಲಭವಾಗುವುದು ಹಾಗೂ ಇದರಿಂದಾಗಿ ಈ ಲೇಖಕನಿಗೆ ಸಮೃದ್ಧಿ ಲಭಿಸಲು ಕಾರಣೀಭೂತವಾಗುವುದು ಎಂಬ ಆಶಯವಿದೆ.

■

*

ರಾಯಚೂರಿನ ಪ್ರಾಚೀನ ಕಾಲದ ಸೂಫಿಗಳ ವಿವರ

೧. ಹಜ್ರತ್ ಪಂಜಬಿ ಬಯಾನ್ ಸಾಹಬಾ ಖುದ್ದುಸಿರ್ರಾಹಮ್

ಇವರಿಗೆ ಉನ್ನತ ದರ್ಜೆ ಲಭಿಸಿತ್ತು. ಇವರು ಮಲಿಕ್ ಹೂರಾನ್ ಆಡಳಿತಾವಧಿಯಲ್ಲಿ ರಾಯಚೂರಿಗೆ ಆಗಮಿಸಿ ಕೋಟೆಯ ಒಳಗಡೆ(ಅಂದರೂನಿ ಕಿಲಾ) ಅರ್ಕ ಬೆಟ್ಟದ ಮೇಲೆ ಒಂದು ಪುರಾತನ ದೇವಾಲಯವಿತ್ತು. ಅಲ್ಲಿ ಈಗ ಒಂದು ಶಿಲೆಯ ನಂದಿಯ ಭಗ್ನ ಮೂರ್ತಿಯಿದೆ. ಅಲ್ಲಿ ವಿಶ್ರಮಿಸಿದರು.

ಇವರೊಂದಿಗೆ ಚಂದರಬೆ, ಗೂಂಗಿಬೇ, ಜಚ್ಚಾ ಬೇ ಹಾಗೂ ಇವರ ಸಹೋದರರಾದ ಚಂದಾ ಹುಸೇನಿ ಸಾಹೇಬ್ ಹಾಗೂ ಉಸ್ತಾದ್ ಶೇಖ್ ರವಾನಿ ಸಾಹೇಬ್ ಇದ್ದರು. ಈ ಜನರ ಸಮಾಧಿಗಳು ಈ ಬೆಟ್ಟದ ಮೇಲೆಯೇ ಇವೆ. ಹಾಗೂ ಚಂದಾ ಹುಸೈನಿ(ಖು)ರ ಕುದುರೆಯ ಸಮಾಧಿಯೂ ಇಲ್ಲಿಯೇ ಇದೆ. ಅಲ್ಲಿಯ ವೃಕ್ಷಕ್ಕೆ ಯಾತ್ರಿಗಳು ತಮ್ಮ ಬಟ್ಟೆಯಿಂದ ಹರಿದು ವಸ್ತ್ರವನ್ನು ಕಟ್ಟುವರು.

ಈ ಜನರ ಸಮಾಧಿಗಳ ಬಳಿ ಒಂದು ವೃಕ್ಷವಿತ್ತು. ಅದರಿಂದ ಸಕ್ಕರೆ ಬೀಳುತ್ತಿತ್ತು. ಹಾಗೂ ಈಗಲೂ ಒಂದು ನಿಂಬೆಯ ಮರವಿದೆ. ಅದರ ಅರ್ಧ ಭಾಗವು ಸಮಾಧಿಗಳ ಮೇಲೆ ಇದೆ. ಅದರ ಎಲೆಗಳು ಸಿಹಿಯಾಗಿರುವವು ಉಳಿದ ಭಾಗದ ಎಲೆಗಳು ಕಹಿಯಾಗಿರುವವು. ಇವರ ಸಮಾಧಿಗಳು ಅರ್ಕಬೆಟ್ಟದ ಮೇಲೆ ಪ್ರತ್ಯೇಕ, ಪ್ರತ್ಯೇಕವಾಗಿ ಇರುವವು. ಹಾಗೂ ಇವರ ವಾರ್ಷಿಕ ಉರುತ್ಸವವು ಚಂದಾಸಾಹೇಬ್ ಮುಜಾವರರ ಕಡೆಯಿಂದ ೧೬ ರಜ್ಜಬಕ್ಕೆ ಆಚರಿಸಲಾಗುತ್ತದೆ.

■

೨. ಹಜ್ರತ್ ಶಾಹ್ ಅಬೂತಾ ಹುಸೈನೀ(ಋ)

ಇವರು ಪ್ರಾಚೀನ ಕಾಲದಲ್ಲಿ ರಾಯಚೂರಕ್ಕೆ ಆಗಮಿಸಿದರು. ಪವಾಡ ಪುರುಷರಾಗಿದ್ದರು. ಒಮ್ಮೆ ಓರ್ವ ಗೋಸಾಂವಿಯು ಇವರಿಗೆ ಎದುರಾಗಿ ತನ್ನ ಪವಾಡಶಕ್ತಿಯನ್ನು ಜಾಹೀರುಗೊಳಿಸಿದನು. ಆಗ ಇವರೂ ಸಹ ತಮ್ಮ ಬಲಪ್ರದರ್ಶಿಸಿ ಆತನನ್ನು ಶರಣಾಗಿಸಿದರು. ಆ ಗೋಸಾಂವಿಯು ಇಸ್ಲಾಂನ್ನು ಸ್ವೀಕರಿಸಿದನು. ಹಾಗೂ ಇವರ ಪಾದದಡಿಯಲ್ಲಿ ಸಮಾಧಿಸ್ಥನಾದನು. ಇವರ ಸಮಾಧಿಯು ಮನ್‌ಸಲಾಪುರದ ಕಬರಸ್ತಾನದಲ್ಲಿದೆ. ಇವರ ಮರಣ ದಿನಾಂಕ ತಿಳಿದು ಬಂದಿಲ್ಲ.

■

೩. ಹಜ್ರತ್ ಮಖ್ದೂಮ್ ಶೇಖ್ ಸಾಲಾರ್ ಸಾಹೇಬ್(ಋ)

ಹೀಗೆನ್ನಲಾಗುತ್ತದೆ, ಇವರು ಷಾಹ ನಸೀರುದ್ದೀನ್ ಚರಾಗ್ ದೆಹಲ್ವಿಯವರ ಸಹೋದರಿಯ ಪುತ್ರರಾಗಿದ್ದಾರೆ. ಇವರಿಗೆ 'ಇಮಾಮಲ್ ಔಲಿಯಾ' ಎಂಬ ಬಿರುದಿತ್ತು. ಇಂದು ಎಲ್ಲಿ ಇವರ ಸಮಾಧಿ ಇದೆಯೋ ಅಲ್ಲಿ ಒಂದು ದೇವಾಲಯವಿತ್ತು. ಹಜ್ರತ್‌ರು ತಮ್ಮ ದೈವೀಶಕ್ತಿಯಿಂದಾಗಿ ಅಲ್ಲಿಯೇ ಸಮಾಧಿಸ್ಥರಾದರು. ಆ ಕಾಲದ ಆಡಳಿತಗಾರನು ಆ ಸ್ಥಳವನ್ನು ಇವರಿಗಾಗಿಯೇ ಬಿಟ್ಟುಕೊಟ್ಟನು. ಮುಂದೆ ಅದೇ ಸ್ಥಳವು ಇಂದಿನ ಕೋಟೆಯ ಜಾಮಿಯಾ ಮಸೀದಿ ಎಂದು ಪ್ರಸಿದ್ಧವಾಗಿದೆ. ಹಜ್ರತ್‌ರ ವಾರ್ಷಿಕ ಉರೂಸುತ್ಸವವು ರಜ್ಜಬ್ ತಿಂಗಳ ೨೧ನೆಯ ದಿನಾಂಕದಂದು ಇಮಾಮ್‌ಸಾಬ್ ಬಿನ್ ಶೇಖ ಸಾಬ್‌ರ ಮುಂದಾಳತ್ವದಲ್ಲಿ ಜರುಗುತ್ತದೆ.

■

೪. ಹಜ್ರತ್ ಶೇಖ ಮಿಂಯಾ ಸಾಹೇಬ (ಋ)

ಇವರು ಹಜ್ರತ್ ಶೇಖ ಸಾಲಾರ ಸಾಹೇಬರ ಸಹೋದರರಾಗಿರುವರು. ಇವರ ಸಮಾಧಿಯ ಬಳಿಯಲ್ಲಿ ಒಂದು ಗವಿ ಇರುವುದು. ಅಲ್ಲಿ ಇವರು ಏಕಾಂತ ವಾಸದಲ್ಲಿದ್ದು 'ಚಿಲ್ಲಾ' ಕೂಡುತ್ತಿದ್ದರು.

ಇವರ ಸಮಾಧಿಯು ಆರ್ಕ ಕಿಲ್ಲೆಯ ಕಡೆ ಬೆಟ್ಟದಲ್ಲಿ ಟಾಂಕಿ ಸೆಹನ್ ಮಸೀದಿಯಲ್ಲಿದೆ. ಇವರ ಉರೂಸವು ಸಹ ೨೧ ರಜ್ಜಬದಂದು ಉಪರೋಕ್ತ ಇಮಾಮ್ ಸಾಹೇಬರೇ ಮಾಡುವರು.

೫. ಹಜ್ರತ್ ಶೇಖ ಯೂನುಸ್ ಸಾಹೇಬ್(ಖು)

ಇವರು ಪ್ರಾಚೀನ ಕಾಲದಲ್ಲಿ ರಾಯಚೂರಕ್ಕೆ ಆಗಮಿಸಿದರು. ತಮ್ಮ ಕಾಲದ ಮಹಾಪುರುಷರು. ಹಾಗೂ 'ಬಕ್ಷಿ ಔಲಿಯಾ' ಬಿರುದಿನಿಂದ ಪ್ರಸಿದ್ಧರಿರುವರು. ಇವರ ಸಮಾಧಿಯು ಅರ್ಕದ ಅಂದರೂನಿ ಕಿಲ್ಲಾದಲ್ಲಿ ಆಸಾರ ಷರೀಫ್‌ದ ಅಂಗಣದಲ್ಲಿ ಇದೆ. ಉರುಸಿನ ದಿನಾಂಕ ತಿಳಿದು ಬರಲಿಲ್ಲ.

■

೬. ಹಜ್ರತ್ ಶೇಖ ಅಲಿ ಶಹೀದ್ (ಖು)

ಇವರು ಪ್ರಾಚೀನ ಕಾಲದಲ್ಲಿ ಆಗಮಿಸಿದವರಲ್ಲಿ ಓರ್ವರು ಯುದ್ಧದಲ್ಲಿ ಹುತಾತ್ಮರಾಗಿರುವರು. ಪಶ್ಚಿಮ ದಿಕ್ಕಿಗೆ ತಲೆ ಹಾಗೂ ಪೂರ್ವ ದಿಕ್ಕಿಗೆ ಕಾಲು – ಈ ವಿಧವಾಗಿ ದಫನ್‌ರಾಗಿದ್ದಾರೆ. ನವಾಬ್ ದಾರಾಜಹಾಣ್ ಅವಧಿಯಲ್ಲಿ ಓರ್ವ ಮೌಲ್ವಿಯವರ ಮಾತನ್ನು ಕೇಳಿ ಉತ್ತರ ದಿಕ್ಕಿಗೆ ತಲೆಮಾಡಿ ಸಮಾಧಿ ನಿರ್ಮಿಸಿದರು. ಮರುದಿನ ಮತ್ತೆ ಪಶ್ಚಿಮ ದಿಕ್ಕಿಗೆ ತಲೆಯಾಗಿತ್ತು. ಇವರ ಸಮಾಧಿಯು ರಾಯಚೂರಿನಲ್ಲಿ ಸರಕಾರಿ ಉದ್ಯಾನದ ರಕ್ಷಣಾ ಗೋಡೆಯ ಬಳಿ ಸ್ಥಿತವಿರುವದು. ಉರುಸಿನ ದಿನಾಂಕ ತಿಳಿದುಬಂದಿಲ್ಲ.

■

೭. ಹಜ್ರತ್ ಶಾಹ ಕಮಲಪೋಶ್ ಸಾಹೇಬ್ (ಖು)

ಇವರ ಜೀವನ ಚರಿತ್ರೆ, ಘಟನೆ ಹಾಗೂ ಉರುಸಿನ ದಿನಾಂಕ ತಿಳಿದು ಬಂದಿಲ್ಲ. ಇವರ ಸಮಾಧಿಯು ಪಂಜಬೇಬೆ ಬೆಟ್ಟದ ಬಳಿಯಲ್ಲಿ ಇರುವುದು.

■

೮. ಹಜ್ರತ್ ಪೀರ್ ಬಾಲಿ ಸಾಹೇಬ್ (ಖು)

ಇವರೂ ಸಹ ಪ್ರಾಚೀನ ಕಾಲದವರು. ಒಂದು ವಿಷಯ ಪ್ರಸಿದ್ಧವಿದೆ. ಯಾರದೇ ಹೊಟ್ಟೆಯಲ್ಲಿ ಶೂಲ– (ತೀವ್ರವಾದ ನೋವು) ಬಂತಾದರೆ ಇವರ ಸಮಾಧಿಯ ಬಳಿ ಏನಾದರೂ ದವಸಧಾನ್ಯವಿಟ್ಟು ದಾನ ಮಾಡಿದರೆ ಗುಣ ಕಂಡುಬರುತ್ತದೆ.

ಇವರ ಸಮಾಧಿಯು ಕೋಟೆಯ ಹೊರಗೆ ಫತಾಹ ದರವಾಜಾ ಎದುರಿಗೆ, ಇದಕ್ಕೆ 'ಕಾಟಿ' ದರವಾಜಾ ಎಂತಲೂ ಕರೆಯುತ್ತಾರೆ. ಇಲ್ಲಿ ಇರುವದು ಇವರ ವಾರ್ಷಿಕ ಉರುಸವು ೩ನೇ ಶಾಬಾನ್‌ದಂದು. ಮೊಹಮ್ಮದಜಿ ಮುಜಾವರ ಹುಸೈನಿ ಆಲಂರ ನೇತೃತ್ವದಲ್ಲಿ ಜರುಗುವದು.

■

೯. ಹಜ್ರತ್ ಪೀರ ಅಲ್ಲಾವುದ್ದೀನ ಸಾಹೇಬ(ಖು)

ಇವರು ಪ್ರಾಚೀನ ಸೂಫಿಗಳಲ್ಲಿ ಓರ್ವರು. ಇವರ ಸಮಾಧಿಯ ಬಳಿಯ ಪೀಲೂ ವೃಕ್ಷದಿಂದ ಸಕ್ಕರೆ ಬೀಳುತ್ತಿತ್ತು. ಬ್ರಿಟಿಷರ ಕಾಲದಿಂದ ನಿಂತುಹೋಗಿದೆ. ಇವರ ಸಮಾಧಿಯು ಅಂದರೂನ ಫತಃ ದ್ವಾರದ, ಪೂರ್ವ ದಿಕ್ಕಿಗೆ ಇದೆ. ಇವರ ವಾರ್ಷಿಕ ಉತ್ಸವವು ಅಬೂ ಸಾಹೇಬ ಬಿನ್ ಮುಹಿಯುದ್ದೀನ್ ಸಾಹೇಬ್ ೧೬೧ ರಜ್ಜಬದಂದು ಆಚರಿಸುವರು.

■

೧೦. ಹಜ್ರತ್ ಶಾಹ ಮೀರ ಹಸನ್‌ಸಾಬ್ ಹಾಗೂ
೧೧ ಹಜ್ರತ್ ಶಾಹ ಮೀರ್ ಹುಸೈನ್‌ಸಾಬ್ (ಖು)

ಇವರು ಕುದುರೆ ಸವಾರಿ ಮಾಡುತ್ತಿದ್ದರು. ಹಾಗೂ ಕುದುರೆಯ ಪಾದಗಳ ಕುರುಹು ಇಂದಿಗೂ ಕಲ್ಲುಗಳ ಮೇಲೆ ಕಂಡು ಬರುತ್ತದೆ. ಒಂದು ಪವಾಡವು ಇಂದಿಗೂ ಜಾರಿಯಲ್ಲಿದೆ. ಒಂದು ವೇಳೆ ಮನೆಯಲ್ಲಿ ಹಾವು ಕಂಡು ಬಂದರೆ ಇವರ ಸಮಾಧಿಯ ಮಣ್ಣನ್ನು ತಂದು ಮನೆಯಲ್ಲಿ ಹಾಕಿದರೆ ಹಾವು ಅಲ್ಲಿಂದ ಹೊರಹೋಗುತ್ತದೆ. ಇವರ ಸಮಾಧಿಗಳು ರಾಯಚೂರಿನ ಆರ್ಕಕಿಲ್ಲಾದ ಒಳಗೆ ಉತ್ತರ ದಿಕ್ಕಿಗೆ ಒಂದೇ ಕಡೆ ಇರುವವು.

■

೧೨. ಹಜ್ರತ್ ಶೇಖ್ ಅಹ್ಮದ್ ಅಲಂಬರ್ದಾರ(ಖು)

ಇವರು ಪ್ರಾಚೀನ ಕಾಲದ ಸೂಫಿಗಳು, ಇವರಿಗೆ ಧ್ವಜವನ್ನು ಎತ್ತಿ ಹಿಡಿಯುವ ಹೊಣೆ ವಹಿಸಲಾಗಿತ್ತು. ಅದಕ್ಕೆ ಇವರನ್ನು ಅಲಂಬರ್ದಾರ್ ಎಂದರೆ ಧ್ವಜವಾಹಕರು ಎನ್ನುವರು. ಯಾರಿಗಾದರೂ ತೀವ್ರ ಜ್ವರ ಬಂದರೆ ಆ ರೋಗಿಗೆ ನಾಲ್ಕು ಸಲ ಇವರ

ಸಮಾಧಿಯ ಬಳಿ ಒಯ್ದು ದೃಷ್ಟಿ ತೆಗೆದರೆ ರೋಗಮುಕ್ತರಾಗುವರು. ಇವರ ಸಮಾಧಿಯು 'ಲಾಲ ಪಹಾಡಿ' ಯ ಹತ್ತಿರ ಶಾಹ್ ಕರೀಮುಲ್ಲಾಹ್‌ರ ಸಮಾಧಿಯ ಬಳಿ ಇರುವದು. ಇವರ ಉರುಸ್‌ವು ಮುರ್ತುಜಾ ಸಾಹೇಬ್, ನೂರ್‌ದಯಾರ್ ಮೊಹಲ್ಲಾದವರು ೧೧ ಶಾಬಾನಕ್ಕೆ ಆಚರಿಸುವರು.

■

೧೩. ಹಜ್ರತ್ ಶಾಹ್ ಅಬ್ದಾಲ್ ಹುಸೈನಿ ಉರ್ಫ್ ಪೀರ್ ಪಟೋಲಾ ಸಾಹೇಬ್ (ಖ)

ಇವರು ಪ್ರಾಚೀನ ಕಾಲದ ಸೂಫಿಗಳು. ಇವರ ಸಮಾಧಿ ಇರುವ ಸ್ಥಳವು ಮೊದಲು ಹನುಮಂತನ ಮಂದಿರವಾಗಿತ್ತು. ಇವರು ಅಲ್ಲಿಯೇ ವಾಸಿಸತೊಡಗಿದರು. ಈಗ ಹನುಮಾನ್ ಮೂರ್ತಿಯು ಕೆರೆಯಲ್ಲಿ ಇದೆ. ಇವರ ಸಮಾಧಿಯ ಮೇಲೆ ಒಂದು ಪುಟ್ಟ ಗುಂಬಜ್ ಇದೆ. ಇವರ ವಾರ್ಷಿಕ ಉರುಸುತ್ಸವವು ೨೧ ರಜ್ಜಬದಂದು ಅಬ್ದುಲ್ಲಾಹ ಸಾಹೇಬರ ಪುತ್ರರಾದ ಮೀರ್ ಹುಸೈನ್‌ರ ಕಡೆಯಿಂದ ಜರುಗುತ್ತದೆ. ಇವರ ಸಹವರ್ತಿಗಳಾದ ನ್ಯಾಮತಲ್ಲಾಹ ಶಾಹ್ ಸಾಹೇಬ್‌ರ ಸಮಾಧಿ ಇಲ್ಲಿಯೇ ಇರುವವು.

■

೧೪. ಹಜ್ರತ್ ಸೈಯದ್ ಅಹ್ಮದ್ ಸಾಹೇಬ್ (ಖ)

ಇವರ ಮರಣ ದಿನಾಂಕ ಉರುಸ್‌ದ ದಿನಾಂಕ ತಿಳಿದು ಬಂದಿಲ್ಲ. ಇವರ ಸಮಾಧಿಯು 'ಅಂದರೂನಿ ಅರ್ಕ ಕಿಲ್ಲಾ' ದಲ್ಲಿ ಹಜ್ರತ್ ಶೇಖ ಯುನೂಸ ಸಾಹೇಬ್ ಬಕ್ಷಿಯವರ ಪಾದದಡಿಯಲ್ಲಿ ಸ್ಥಿತವಿರುವುದು.

■

೧೫. ಹಜ್ರತಶಾಹ ಹಸನ್ ಸಾಹೇಬ ಘೌರಿ ಮಜಜೂಬ (ಖ)

ಇವರು ಪ್ರಾಚೀನ ಅವಧಿಯಲ್ಲಿ ರಾಯಚೂರಕ್ಕೆ ಆಗಮಿಸಿದರು. ಇವರ ಒಂದು ಕರಾಮತ್ತು ಹೀಗಿದೆ. ಯಾರದಾದರೂ ಕುದುರೆಗೆ ತ್ವಚೆರೋಗ(ಕುರ್‌ಕುರೆ)

ಬಂದರೆ ಆ ರೋಗಯುಕ್ತ ಕುದುರೆಯನ್ನು ಸಮಾಧಿಯ ಸುತ್ತಲೂ ಮೂರುಸಲ ತಿರುಗಿಸದಿರೆ ಗುಣ ಕಂಡುಬರುತ್ತದೆ. ಇವರ ಸಮಾಧಿಯು ಅಂದರೂನಿ ಕಿಲ್ಲಾದ ಪಶ್ಚಿಮದೆಡೆಗೆ ಇರುವದು. ಇವರ ಉರುಸಿನ ದಿನಾಂಕ ತಿಳಿದುಬಂದಿಲ್ಲ.

■

೧೬. ಹಜ್ರತ್ ಸೈಯದ್ ಶಾಹ ಅಹ್ಮದ್ ಸಾಹೇಬ್ (ಋ)

ಇವರೂ ಸಹ ಪ್ರಾಚೀನ ಕಾಲದಲ್ಲಿ ಆಗಮಿಸಿದರು. ಇವರ ಸಮಾಧಿಯು ಅಂದರೂನಿ ಕಿಲಾದ ಸೆಹಲಾನಿದ್ವಾರದ ಸಮೀಪವಿದೆ. ಉರುಸಿನ ದಿನಾಂಕ ತಿಳಿದುಬಂದಿಲ್ಲ. ಹಸನ್ ಮುಹಿಯುದ್ದೀನ್‌ರವರು ವಾರ್ಷಿಕ ಫಾತೇಹಾ ನಡೆಸುವರು.

■

೧೭. ಹಜ್ರತ್ ಪೀರ್ ಖಾಬಿಲ್ ಸಾಹೇಬ (ಋ)

ಇವರು ಪ್ರಾಚೀನ ಕಾಲದ ಸೂಫಿಗಳು, ಇವರು ಜಪಕ್ಕೆ (ಅಲ್ಲಾಹುವಿನ ನಾಮಸ್ಮರಣೆಯಲ್ಲಿ) ತೊಡಗಿರುವಾಗ ಇವರ ಶಿರವು ದೇಹದಿಂದ ಬೇರ್ಪಡುತ್ತಿತ್ತು. ಆ ವೇಳೆಯೇ ಯಾರೋ ಓರ್ವರು ನೋಡಿದರು. ಹಜ್ರತ್‌ರು ಹಾಗೆಯೇ ಮರಣವನ್ನಪ್ಪಿದರು. ಹೀಗಾಗಿ ಶಿರ ಹಾಗೂ ದೇಹ ಬೇರೆ ಬೇರೆಯಾಗಿ ದಫನ್ ಮಾಡಲಾಯಿತು. ಆ ಕುರುಹುಗಳು ಇಂದಿಗೂ ಇವೆ. ಇವರ ಸಮಾಧಿಯು ಕೋಟೆಯ ಹೊರಗೆ ಲಷ್ಕರ್ ಬಾಝಾರದಲ್ಲಿ ಧೋಂಡಿ ಮಸೀದೆಯ ಹಿಂದೆ ಇರುವುದು. ವಾರ್ಷಿಕ ಉತ್ಸವವನ್ನು ೨೪ನೆಯ ಶಾಬಾನ್‌ದಂದು ಹಾಜಿಸಾಬ್, ಚಂದಾಸಾಬ್, ಲಾಡ್ಲೆ ಸಾಹೇಬ್ ಹಾಗೂ ಖ್ವಾಜಾಭಾಯಿ ಧೋಂಡಿಯವರು ಆಚರಿಸುವರು.

■

೧೮. ಮಾಸೂಮ್ ಪೀರ್ ಸಾಹೇಬ್(ಋ)

ಇವರ ಜೀವನ ಚರಿತ್ರೆ ಲಭ್ಯವಾಗಿಲ್ಲ. ಇವರು ಹಜ್ರತ್ ಪೀರ್ ಖಾಬಿಲ್ ಸಾಹೇಬರ ಸಮಕಾಲೀನರಾಗಿದ್ದರು. ಇವರ ಸಮಾಧಿಯು ಹಜ್ರತ್‌ರ ಸಮೀಪವಿದೆ.

ಉರುಸಿನ ದಿನಾಂಕ ತಿಳಿದುಬಂದಿಲ್ಲ. ೨೪ನೆಯ ಶಾಬಾನ ಉಪರೋಕ್ತ ಜನರೇ ಗಂಧ ಅರ್ಪಿಸುವರು.

■

೧೯. ಹಜ್ರತ್ ವಲಿಪೀರ್ ಸಾಹೇಬ(ಖು)

ಇವರೂ ಸಹ ಪ್ರಾಚೀನ ಕಾಲದಲ್ಲಿ ರಾಯಚೂರಕ್ಕೆ ಆಗಮಿಸಿದರು. ಇವರ ಜೀವನ ಚರಿತ್ರೆ ತಿಳಿದು ಬಂದಿಲ್ಲ. ಇವರ ಸಮಾಧಿಯು ಲಷ್ಕರ್ ಬಾಝಾರ್‌ನಲ್ಲಿ ರಸ್ತೆಯ ಬದಿಗೆ ಉತ್ತರ ದಿಕ್ಕಿಗೆ ಇರುವದು.

■

೨೦. ಹಜ್ರತ್ ಶೇಖ ಬುರ್ಹಾನ್ ಶಹೀದ್ (ಖು)

ಇವರು ಪ್ರಾಚೀನ ಕಾಲದ ಸೂಫಿಗಳು, ಹಾಗೂ ಹುತಾತ್ಮರಾಗಿರುವರು. ಆ ಕಾಲದಲ್ಲಿ ಓರ್ವ ಫಕೀರನು ಇವರ ಸಮಾಧಿಯ ಬಳಿ ದುರ್ವರ್ತನೆ ಮಾಡಿದನು. ಸಮಾಧಿಯಿಂದ ಒಂದು ಖಡ್ಗ ಹೊರಬಂದಿತು. ಫಕೀರನು ಕಾಲಿಗೆ ಬುದ್ಧಿ ಹೇಳಿದನು. ಇವರ ಸಮಾಧಿಯು ಅರ್ಕಕಿಲ್ಲಾದ ಜಾಮಿಯಾ ಮಸೀದೆಯ ಒಳಗೆ ಇರುವ ಬಹಳಷ್ಟು ಸಮಾಧಿಗಳ ನಡುವೆ ಇರುವುದು. ಇವರ ಉರುಸಿನ ದಿನಾಂಕ ತಿಳಿದುಬಂದಿಲ್ಲ.

■

೨೧. ಹಜ್ರತ್ ಶಾಹಪೀರ್ ಗದಾಯೆ ಸಾಹೇಬ್(ಖು)

ಇವರೂ ಸಹ ಪ್ರಾಚೀನ ಸೂಫಿಗಳಲ್ಲಿ ಪ್ರಮುಖರು. ಇವರ ಆಶ್ರಯದಲ್ಲಿ ಯಾವುದೇ ವ್ಯಕ್ತಿಯು ಬಂದರೆ ಶೈತಾನ್‌ನು ಆತನನ್ನು ಚಂಚಲಗೊಳಿಸುವುದಿಲ್ಲ. ಓರ್ವ ವ್ಯಕ್ತಿಯು ಒಂದು ರಾತ್ರಿ ಲೈಂಗಿಕ ಸಂಪರ್ಕದ ನಂತರ ಭಾವಿಯಲ್ಲಿ ಸ್ನಾನ ಮಾಡಿದನು. ಸೈತಾನನು ಆಕ್ರಮಿಸಿದನು. ಆ ವ್ಯಕ್ತಿಯು ಹಜ್ರತ್‌ರ ಸಮಾಧಿಯ ಬಳಿ ಆಶ್ರಯ ಪಡೆದನು. ಸೈತಾನನು ಅನಿವಾರ್ಯವಾಗಿ ಅಲ್ಲಿಂದ ದೂರ ಹೋದನು.

ಇವರ ಸಮಾಧಿಯು ಅರ್ಕಕಿಲ್ಲೆಯ ಬಳಿ ಖಾಜಿ ಸಾಹೇಬರ ಮನೆಯ ಹತ್ತಿರ ಸ್ಟೇಷನ್ ರೋಡ್‌ನಲ್ಲಿ ಉತ್ತರ ದಿಕ್ಕಿನಲ್ಲಿ ಸ್ಥಿತವಿದೆ. ಉರುಸಿನ ದಿನಾಂಕ ತಿಳಿದು ಬಂದಿಲ್ಲ.

■

೨೨. ಹಜ್ರತ್ ಶಾಹ ಸೈಲಾನಿ ಸಾಹೇಬ್ (ಖು)

ಇವರೂ ಸಹ ಪ್ರಾಚೀನ ಕಾಲದವರಾಗಿದ್ದಾರೆ. ಇವರ ಸಮಾಧಿಯು ಅರ್ಕಕಿಲ್ಲಾದೆಡೆಗೆ ಸೆಹಲಾನಿ ಮಸೀದೆಯ ದ್ವಾರದ ಪಕ್ಕದಲ್ಲಿ ಒಂದು ಗುಮ್ಮಟಿನಲ್ಲಿ ಇರುವದು. ಇವರ ವಾರ್ಷಿಕ ಉರುಸು ರಜ್ಜಬ ತಿಂಗಳ ೧೧ನೆಯ ದಿನಾಂಕದಂದು ಕೋಟತಲಾರ್‌ವಾಲೆ ಸೈಯದ್ ಹುಸ್ಸೈನೀ ಪೀರಾಂ ಸಾಹೇಬರಿಂದ ಆಚರಿಸಲ್ಪಡುತ್ತಿತ್ತು.

■

೨೩, ೨೪. ಹಜ್ರತ್ ಶಾಹ ಹಂಗಡ ಸಾಹೇಬ ಹಾಗೂ ಹಜ್ರತ್‌ಶಾಹ ಕಬೀರ್ ಸಾಹೇಬ(ಖು)

ಇವರು ಪ್ರಾಚೀನ ಕಾಲದ ಸೂಫಿವರ್ಯರಾಗಿದ್ದಾರೆ. ಇವರೀರ್ವರೂ 'ಅರ್ಕಅಂದ್ರೂನಿ ಕಿಲ್ಲಾ'ದ ಪಶ್ಚಿಮ ದಿಕ್ಕಿಗೆ ಸೆಹಲಾನಿ ದ್ವಾರದ ಬಳಿ ಒಂದೇ ಸ್ಥಳದಲ್ಲಿ ಸಮಾಧಿಸ್ಥರಾಗಿರುವರು. ಇವರ ಉರುಸಿನ ದಿನಾಂಕವು ತಿಳಿದುಬಂದಿಲ್ಲ.

■

೨೫. ಹಜ್ರತ್ ಶಾಹ ಕರೀಮುಲ್ಲಾಹ್ ಸಾಹೇಬ್(ಖು)

ಇವರು ರಾಯಚೂರಕ್ಕೆ ಮೊದಮೊದಲಲ್ಲಿ ಬಂದ ಸೂಫಿಗಳಲ್ಲೋರ್ವರು. ಇವರ ಜೀವನದ ಘಟನೆಗಳು ಹಾಗೂ ಉರುಸಿನ ದಿನಾಂಕವು ತಿಳಿದುಬಂದಿಲ್ಲ. ಇವರ ಸಮಾಧಿಯು ರಾಯಚೂರಿನ ಕೋಟೆಯ ಹೊರಗಡೆ 'ಲಾಲ್ ಪಹಾಡಿ'ಯ ಉತ್ತರ ದಿಕ್ಕಿನಲ್ಲಿ ಹಾಗೂ ಹಜ್ರತ್ ಶೇಖ್ ಅಹ್ಮದ್ ಅಲಂ ಬರ್ದಾರ್‌ರ ಸಮೀಪ ತಹಸೀಲ್ದಾರ್ ಕಚೇರಿಯ ಬಳಿ ಇರುವುದು. ಅಲ್ಲಿ ಬಹಳಷ್ಟು ಹುತಾತ್ಮರು ಸಮಾಧಿಸ್ಥರಾಗಿರುವರೆಂದು ತಿಳಿದು ಬರುತ್ತದೆ. ಇವರ ವಾರ್ಷಿಕ ಉರುಸುತ್ಸವವನ್ನು ೧೬ನೇ ರಂಜಾನ್‌ದಂದು ಮುರ್ತುಜಾ ಸಾಹೇಬ ಸಾಕೀನ್ ರಾಯಚೂರದವರ ಮುಂದಾಳತ್ವದಲ್ಲಿ ನೆರವೇರುತ್ತದೆ.

■

೨೬. ಹಜ್ರತ್ ಅಲ್ಲಾಗನಿ ಸಾಹೇಬ್ (ಖ)

ಇವರೂ ಸಹಪ್ರಾಚೀನ ಕಾಲಿಂವರೇ ಆಗಿದ್ದಾರೆ. ಇವರ ಸಮಾಧಿಯು ನವರಂಗ್ ದ್ವಾರದ ಬಳಿ ಮಸೀದಿಯ ಹತ್ತಿರ ಇರುವುದು.

■

೨೭. ಹಜ್ರತ್ ಶೇಖ್ ರೂಹಾನಿ ಸಾಹೇಬ್(ಖ)

ಇವರ ಜೀವನ ಚರಿತ್ರೆಯು ಲಭ್ಯವಾಗಿಲ್ಲ. ಇವರ ಸಮಾಧಿಯು ಬುರ್ಜ ಅರ್ಕಕಿಲ್ಲಾದ ಬಳಿಯಲ್ಲಿರುವ ಪಂಜಬೀಬಿ ಬೆಟ್ಟದಲ್ಲಿ ಇರುವುದು.

■

೨೮. ಹಜ್ರತ್ ಶೇಕ್ ಯಹ್ಯಾಸಾಹೇಬ್ (ಖ)

ಇವರೂ ಪ್ರಾಚೀನ ಕಾಲದವರು. ಇವರ ಜೀವನ ಚರಿತ್ರೆಯೂ ಲಭ್ಯವಾಗಿಲ್ಲ. ಇವರ ಸಮಾಧಿಯು 'ಇದ್ಗಾಃ' ಮೈದಾನದ ಬಳಿ ಹಾಗೂ ಹೊಸ ಕಚೇರಿಯ ಹತ್ತಿರ ಪಶ್ಚಿಮಕ್ಕೆ ಇರುವದು.

■

೨೯. ಹಜ್ರತ್ ಸೈಯದ್ ಶಂಸ ಆಲಮ್ ಹುಸೈನಿ ಸಾಹೇಬ್ (ಖ)

ಇವರು ಲಿಂಗಸೂರು ಜಿಲ್ಲೆಯ ಶಾಹಪುರ 'ಗೋಗಿ'ಯಲ್ಲಿ ಸಮಾಧಿಸ್ಥರಾಗಿರುವ ಸೈಯದ್ ಶಾಹ್ ಚಂದಾಹುಸೈನಿಯವರ ಪುತ್ರರಾಗಿರುವರು. ಬೈಯತ್ ಹಾಗೂ ಖಿಲಾಪತ್‌ವನ್ನು ತಮ್ಮ ತಂದೆಯವರಿಂದ ಪಡೆದರು. ಇವರು ಸದಾಕಾಲ ಅಲ್ಲಾಹುವಿನ ಧ್ಯಾನದಲ್ಲಿ ನಿಮಗ್ನರಾಗಿರುತ್ತಿದ್ದರು.

ಇವರ ಕರಾಮತ್ತುಗಳು ಅಸಂಖ್ಯವಾಗಿರುವವು. ಈ ಪುಟ್ಟ ಪುಸ್ತಿಕೆಯಲ್ಲಿ ಎಲ್ಲವನ್ನೂ ವಿವರಿಸಲು ಅಸಾಧ್ಯವಾದ ಮಾತಾಗಿದೆ. ಒಂದೆರಡು ಪವಾಡಗಳನ್ನು ಅಲ್ಲಿಯ ಸಜ್ಜಾದೆಯವರಿಂದ ಹಾಗೂ ದಿವಂಗತ ಖಾಜಿಸಾಹೇಬ್‌ರಿಂದ ತಿಳಿದು ಬಂದಿರುವುದನ್ನು ಇಲ್ಲಿ ಪ್ರಸ್ತುತಪಡಿಸುತ್ತಿದ್ದೇನೆ.

ಯಾವಾಗ ಇವರು 'ಗೋಗಿ'ಯಲ್ಲಿದ್ದರು. ತಮ್ಮ ತಂದೆಯವರ ಸೇವೆಯಲ್ಲಿ ಅವರಿಗೆ ನಮಾಜಿನ ಮೊದಲು ವಜು, 'ಅಂಗಶುದ್ಧಿ'ಗಾಗಿ ನೀರನ್ನು ತಂದಿಟ್ಟರು. ಆಕಸ್ಮಿಕವಾಗಿ ಆ ಸಮಯದಲ್ಲಿ ಒಂದು ಕಾಗೆಯು ಬಂದು ಜಲಪಾನಗೈದು ಹಾರಿಹೋಯಿತು. ಹಜ್ರತ್‌ರ ತಂದೆಯವರು ಅದು ಕಾಗೆಯು ಕುಡಿದ ನೀರಾಗಿದೆ. 'ವಜೂ' ಗಾಗಿ ಬೇರೆಯ ನೀರನ್ನು ತನ್ನಿರಿ. ನಿಮ್ಮ 'ವಜೂವಿಗಾಗಿ' ಇಟ್ಟ ನೀರನ್ನು ಆ ಕಾಗೆ ಕುಡಿಯಿತು ಹಾಗೂ ಅದು ಜೀವಂತವಿದೆ. ಇನ್ನೂ ಹಜ್ರತ್‌ರ ಬಾಯಿಂದ ಈ ಮಾತು ಮುಗಿದಿರಲಿಲ್ಲ, ಆ ಕಾಗೆಯು ನೆಲಕ್ಕೆ ಬಿದ್ದು ಗತಪ್ರಾಣವಾಯಿತು. ಈ ಘಟನೆಯಿಂದ ವಿಚಲಿತರಾದ ಹಜ್ರತ್‌ರು ತಮ್ಮ ಪುತ್ರನಿಗೆ ಹೇಳಿದರು, ಈಗ ನಿಮಗೆ ಅನುಮತಿ ಇದೆ. ಇಲ್ಲಿಂದ ಬೇರೆಡೆಗೆ ಹೋಗಿ ನೀವು ಎಲ್ಲಿಯಾದರೂ ಇರಿ.

ಇವರಿಗೆ ವಿದಾಯ ಹೇಳುವಾಗ ಹಜ್ರತ್‌ರ ತಂದೆಯವರು ತಾಡವೃಕ್ಷದ ಎರಡು ಹಣ್ಣುಗಳನ್ನು ನೀಡಿ ಹೀಗೆ ಹೇಳಿದರು ಇವುಗಳನ್ನು ತೆಗೆದುಕೊಂಡು ಹೋಗಿರಿ, ನೀವು ರಾತ್ರಿಯಾಗಲು ಎಲ್ಲಿ ತಂಗುವಿರಿ ಅಲ್ಲಿ ಬೆಳಿಗ್ಗೆಯಾದೊಡನೆ ಆ ಹಣ್ಣುಗಳನ್ನು ನೋಡಿರಿ, ಒಂದು ವೇಳೆ ಅವುಗಳಲ್ಲಿ ಮೊಳಕೆಯೊಡೆದರೆ ಆ ಸ್ಥಳವೇ ನಿಮ್ಮ ವಾಸಸ್ಥಳವೆಂದು ಬಗೆಯಿರಿ. ಇಲ್ಲದಿದ್ದರೆ ಮುಂದಕ್ಕೆ ಸಾಗಿರಿ. ಅವರ ಆದೇಶವನ್ನು ಪಾಲಿಸಿ ಗೋಗಿಯಿಂದ ಹೊರಟು ಹಗಲಿರುಳು ಯಾತ್ರೆಯನ್ನು ಮುಂದುವರೆಸುತ್ತ ರಾಯಚೂರಕ್ಕೆ ಬಂದು ತಲುಪಿದರು. ಹಾಗೂ ಅಲ್ಲಿಯೇ ರಾತ್ರಿ ಕಳೆದರು ಮತ್ತು ಬೆಳಿಗ್ಗೆ ನಿತ್ಯದಂತೆ ಆ ಹಣ್ಣುಗಳತ್ತ ದೃಷ್ಟಿ ಬೀರಿದರು. ಅಲ್ಲಿ ಆ ಹಣ್ಣುಗಳಲ್ಲಿ ಮೊಳಕೆ ಮೂಡಿ ಬಂದಿರುವುದನ್ನು ಕಂಡರು ಹಾಗೂ ರಾಯಚೂರನ್ನೇ ಹಜ್ರತ್‌ರು ತಮ್ಮ ವಾಸಸ್ಥಳವನ್ನಾಗಿಸಿಕೊಂಡರು. ಹಾಗೂ ಆ ತಾಡ ವೃಕ್ಷಗಳು ಹಜ್ರತ್‌ರ ದರ್ಗಾ ಶರೀಫ್‌ದಲ್ಲಿ ಇದ್ದವು. ಪ್ರಸ್ತುತ ಹದಿನೈದು ವರ್ಷಗಳ ಹಿಂದೆ ಸಿಡಿಲು ಬಡಿದು ನೆಲಕ್ಕುರುಳಿದವು. ಆದರೆ ಅವುಗಳ ಕುರುಹು ಇಂದಿಗೂ ಇದೆ.

ಇವರು ಯಾವಾಗಲೂ ಒಂದು ಬೇವಿನ ಮರದ ಕೆಳಗೆ ಅಲ್ಲಾಹುವಿನ ಧ್ಯಾನದಲ್ಲಿ ಸದಾಕಾಲ ನಿಮಗ್ನರಾಗಿರುತ್ತಿದ್ದರು. ಒಂದು ದಿನ ಆ ಕಾಲದ ಆಡಳಿತಗಾರನ ಪತ್ನಿಯು ವಾಯುವಿಹಾರಕ್ಕಾಗಿ ಹೊರಟಳು ಮರಳುವ ಸಮಯದಲ್ಲಿ ಹಜ್ರತ್‌ರ ವಾಸಸ್ಥಳದ ಬಳಿಯಿಂದ ಬಂದಳು, ಹಜ್ರತ್‌ರ ಬಾಯಿಯಿಂದ ಮುಂಭಾಗದ ಎರಡು ಹಲ್ಲುಗಳು ಉದ್ದವಾಗಿದ್ದವು ಹಾಗೂ ಅವುಗಳು ತುಟಿಯಿಂದ ಹೊರಚಾಚಿದ್ದವು. ಆ ಸ್ತ್ರೀಯು ಹಜ್ರತ್‌ರನ್ನು ನೋಡಿ ಮನದಲ್ಲಿಯೇ ಹೀಗೆಂದಳು – ಫಕೀರನು ತುಂಬ ಸುಂದರನಾಗಿದ್ದಾನೆ ಆದರೆ ಎರಡು ಹಲ್ಲುಗಳು ಅದೆಷ್ಟು ಮುಂಚಾಚಿ ಮುಖವನ್ನೇ ವಿರೂಪಗೊಳಿಸಿವೆ ಎಂದುಕೊಳ್ಳುತ್ತ ಮನೆಯ ಹತ್ತಿರ ಬಂದಿರಲಿಲ್ಲ, ಅವಳ ಎಲ್ಲ ಹಲ್ಲುಗಳು ಉದುರಿಬಿದ್ದವು. ಆಗ ಅವಳು ತನ್ನ ಪತಿಯೆದುರಿಗೆ ನಡೆದ ಘಟನೆಯ

ವಿವರಗಳನ್ನು ಹೇಳಿದಳು. ಆಗ ಅವಳ ಪತಿಯು ತಕ್ಷಣವೇ ಹಜ್ರತ್‌ರ ಬಳಿಗೆ ಹೋಗಿ ನಮ್ರಳಾಗಿ ಕ್ಷಮೆ ಯಾಚಿಸು ಹಾಗೂ ನಿನ್ನ ಹಲ್ಲುಗಳು ಮೊದಲಿನಂತಾಗಲು ಬೇಡಿಕೋ..! ಆಗ ಅವಳು ಹಜ್ರತ್‌ರ ಸನ್ನಿಧಿಗೆ ಆಗಮಿಸಿದಳು, ಹಜ್ರತ್‌ರು ಧ್ಯಾನದಲ್ಲಿ ನಿರತರಾಗಿದ್ದರು. ಅಲ್ಪಸಮಯದ ಬಳಿಕ ಅವರೆಡೆಗೆ ಗಮನ ಹರಿಸಿದರು. ಆಗ ಅವಳು ತನ್ನ ತಪ್ಪನ್ನು ಒಪ್ಪಿಕೊಂಡು, ನಡೆದ ಘಟನೆಯನ್ನು ವಿವರಿಸಿ ಕ್ಷಮೆ ಯಾಚಿಸಿದಳಲ್ಲದೇ ತನ್ನ ಹಲ್ಲು ಮೊದಲಿನಂತಾಗಲು ಕೇಳಿಕೊಂಡಳು. ಹಜ್ರತ್‌ರು ಬಿದ್ದುಹೋದ ಎಲ್ಲ ಹಲ್ಲುಗಳನ್ನು ಬಾಯಿಂಯಲ್ಲಿ ಹಾಕಿಕೊಳ್ಳಲು ಹೇಳಿದರು. ಅವು ಮೊದಲಿದ್ದ ಹಾಗೇ ಹೊಂದಾಣಿಕೆಗೊಂಡವು. ಆ ದಿನದಿಂದ ಆ ಸ್ತ್ರೀಯು ಹಜ್ರತ್‌ರ ಅನುಯಾಯಿಯಾದಳು. ಅವಳು ಹಜ್ರತ್‌ರ ಸಮಾಧಿ, ಒಂದು ಮಸೀದೆ ಹಾಗೂ ಒಂದು ಯಾತ್ರಿ ನಿವಾಸ ನಿರ್ಮಿಸಿಕೊಟ್ಟಳು ಹಾಗೂ ಒಂದು ಭಾವಿಯನ್ನು ಸಹ ನಿರ್ಮಿಸಿಕೊಟ್ಟಳು. ಇಂದಿಗೂ ಅದು ಜನೋಪಯೋಗಿಯಾಗಿದೆ. ಪ್ರಸ್ತುತ ನಿವೃತ್ತ ತಹಶೀಲ್ದಾರರಾದ ರಾಯ ಲಲಿತಾ ಪ್ರಸಾದರು ತುಂಬಾ ಪ್ರಯತ್ನಗೈದು ಸರಕಾರದ ವತಿಯಿಂದ ಅಲ್ಲಿ ಒಂದು ಬಂಗ್ಲೆ (ಆಲಂಸರಾ) ಹಾಗೂ "ನೌಬತ್‌ಖಾನಾ" ಸಿದ್ಧಗೊಳಿಸಿದ್ದಾರೆ.

ಹಜ್ರತ್‌ರ ನಿಧನವು ೧೫, ಸಫರ್, ಹಿ.ಶ.೯೨ರಲ್ಲಿ ಆಯಿತು. 'ಬೇಶಕ್ ಶಂಸ ಆಲಂ ಬೂದಾದ್' ಎಂದು ನಿಧನ ದಿನಾಂಕವನ್ನು (೯೨) ವಿವರಿಸಿದ್ದಾರೆ. ಇಂದಿಗೂ ನಿರಂತರವಾಗಿ ವಾರ್ಷಿಕ ಉರುಸುತ್ಸವದ ನಿಮಿತ್ತ ತುಂಬ ವಿಜೃಂಭಣೆಯೊಂದಿಗೆ ಒಂದು ತಿಂಗಳಿನವರೆಗೂ ಮೇಳ ಜರುಗುತ್ತದೆ. ಹಿಂದೂ ಮುಸ್ಲಿಂರೆನ್ನದೇ ಹಜ್ರತ್‌ರಿಗೆ ಅತ್ಯಂತ ಶ್ರದ್ಧೆ ಹಾಗೂ ಆಸ್ಥೆಯೊಂದಿಗೆ ಎಲ್ಲರೂ ಕಾಣಿಕೆ ಅರ್ಪಿಸುತ್ತಾರೆ. ಹೀಗಾಗಿ ಇದೊಂದು ಭಾವೈಕ್ಯದ ಶ್ರದ್ಧಾ ಕ್ಷೇತ್ರವಾಗಿ ಪ್ರಸಿದ್ಧವಾಗಿದೆ. ಇವರ 'ದರ್ಗಾ' ರಾಯಚೂರಿನಿಂದ ಹೈದರಾಬಾದ್‌ಕ್ಕೆ ಹೋಗುವ ರಾಷ್ಟ್ರೀಯ ಹೆದ್ದಾರಿಯ ಬಳಿ ಇದೆ.

ಪ್ರಸ್ತುತ ಪೀಠಾಧಿಕಾರಿಗಳು ಉರುಸನ್ನು ಆಚರಿಸುತ್ತಾರೆ.

■

೩೦. ಹಜ್ರತ್ ಶೇಖ ಜಲಾಲ ಸಾಹೇಬ(ಖ)

ಹಜ್ರತ್‌ರ ಸಮಾಧಿಯು ರಾಯಚೂರಿನ ಪೂರ್ವ ಹಾಗೂ ಉತ್ತರ ದಿಕ್ಕಿನ ನಡುವೆ ಇರುವ ಮಸೀದೆಯ ಪಕ್ಕದಲ್ಲಿ ಒಂದು ಮನೆಯ ಬದಿಯಲ್ಲಿ ಹಜ್ರತ್‌ರ ಗುರುಗಳಾದ ಹಜ್ರತ್ ಶಾಹ ಹುಸೈನ ಸಾಹೇಬರ ಸಮಾಧಿಯಿದೆ. ಕೆಲವರು ಇವರ ಸಮಾಧಿಸ್ಥಳವನ್ನು 'ಚಿಲ್ಲಾ' ಎಂತಲೂ ಕರೆಯುವರು. 'ವಲ್ಲಾಹ ಆಲಮ್' ಇದರ ರಹಸ್ಯ ಅಲ್ಲಾಹುವಿಗೆ ಗೊತ್ತು.

ಯಾದಗಿರಿಯ ಬಳಿ ಗಲಸರವ್‌ನಲ್ಲಿ ಒಂದು ಸಮಾಧಿಯಿದೆ. ಅದು ಜಲಾಲುದ್ದೀನ್ ಸಾಹೇಬ್ ಡೋಂಗ್ರಿ ಇವರದು ಇರುತ್ತದೆ. ಹಜ್ರತ್ ಸೈಯದ್ ಶಂಸ ಆಲಂ ಹುಸೈನಿ(ಖ) ಇವರ ಸಹೋದರರಾಗಿರುವರು. ಈಗ ಇವರ ವಂಶದಲ್ಲಿ ಬಹಳೇ ವೃದ್ಧರಾಗಿದ್ದ ಸೈಯದ್ ಚಂದಾಹುಸೈನೀ ಡೋಂಗ್ರಿ ಇರುವರು. ಅವರ ಮುಖಾಂತರ ಈ ಗ್ರಂಥಕರ್ತನು ವಿಷಯ ಸಂಗ್ರಹಿಸಿರುವನು. ಈ ಹಜ್ರತ್‌ರು ತಮ್ಮ ಚಿಕ್ಕಪ್ಪನವರಾದ ಸೈಯದ್ ಶಂಸ ಆಲಂ ಹುಸೈನಿಯವರ ಜಿಯಾರತ್ತಿಗಾಗಿ ರಾಯಚೂರಕ್ಕೆ ಹೋಗಿ ಆ ಬೆಟ್ಟದ ಮೇಲೆ 'ಚಿಲ್ಲಾ' ಕುಳಿತಿದ್ದರು. ಅದಕ್ಕಾಗಿ ಈ ಬೆಟ್ಟವು 'ಜಲಾಲುದ್ದೀನ್ ಬೆಟ್ಟ' ಎಂದೇ ಪ್ರಸಿದ್ಧಗೊಂಡಿದೆ. ಹೀಗೂ ಹೇಳುತ್ತಾರೆ, ಯಾವಾಗ ಹಜ್ರತ್‌ರ ಗುರುಗಳ ನಿಧನವಾಯಿತೋ ಆಗ ಅವರನ್ನು ಒಳಗೇ ದಫನ್ ಮಾಡಲಾಯಿತು ನಂತರ ಇವರ ಶಿಷ್ಯರು ಹಾಗೂ ಆಪ್ತರು ಅಂಗಣದಲ್ಲಿ 'ಚಿಲ್ಲಾ' ಮಾಡತೊಡಗಿದರು. ಹಜ್ರತ್‌ರ ಉರುಸು ಜೀಖಾಯಿದಾದ ೨೪ನೆಯ ದಿನಾಂಕದಂದು ಹಸನ್ ಸಾಹೇಬರು ನೆರವೇರಿಸುತ್ತಾರೆ.

■

೩೧. ಹಜ್ರತ್ ಕಂಬಲ್ ಪೋಶ್ ಸಾಹೇಬ(ಖ)

ಎಲ್ಲರೂ ಹಜ್ರತ್‌ರನ್ನು ಈ ಹೆಸರಿನಿಂದಲೇ ಕರೆಯುತ್ತಾರೆ. ಅವರ ನಿಜನಾಮ ಏನೆಂದು ಅಲ್ಲಾಹುವಿಗೇ ಗೊತ್ತು. ಇವರ ಜೀವನ ಚರಿತ್ರೆ ಹಾಗೂ ನಿಧನ ದಿನಾಂಕ ತಿಳಿದುಬಂದಿಲ್ಲ. ಓಣಿಯವರೇ ಆವಾಗಾವಾಗ ಇವರ ಉರುಸ್ ಮಾಡುತ್ತಾರೆ. ಇವರ ಸಮಾಧಿಯು ರಾಯಚೂರಿನ ಉತ್ತರ ದಿಕ್ಕಿನಲ್ಲಿ ಸ್ವಲ್ಪ ದೂರದಲ್ಲಿನ ಬೆಟ್ಟದ ನಡುವೆ ಸೈಯದ್ ಜಲಾಲಸಾಹೇಬ್ ಹಾಗೂ ಸೈಯದ್ ಶಂಸ್ ಆಲಂ ಹುಸೈನಿ ದರ್ಗಾ ಬಳಿ ಇರುವ ಒಂದು ಮಸೀದೆಯ ಅಂಗಳದಲ್ಲಿ ಇರುವುದು. ಇಲ್ಲಿ ಹುತಾತ್ಮರ

ಸಮಾಧಿಗಳೂ ಇರುವವು. ಇದರಿಂದ ತಿಳಿದು ಬರುವುದೇನೆಂದರೆ ಹಜ್ರತ್‌ರೂ ಸಹ ಪ್ರಾಚೀನ ಕಾಲದಲ್ಲಿ ಆಗಮಿಸಿದ ಸೂಫಿಗಳಲ್ಲೋರ್ವರಾಗಿದ್ದಾರೆ.

ಸ್ಪಷ್ಟವಾಗುವುದೇನೆಂದರೆ ಆರಂಭದ ಕಾಲದಲ್ಲಿ ಸೂಫಿಗಳ ಒಂದು ಬೃಹತ್ ತಂಡವು ರಾಯಚೂರಕ್ಕೆ ಆಗಮಿಸಿತು ಹಾಗೂ ಅವರು ಕೋಟೆಯ ಹೊರಗಡೆ ಉತ್ತರ ದಿಕ್ಕಿನಲ್ಲಿ ಲಾಲ್ ಪಹಾಡಿಯ ಬಳಿಯಲ್ಲಿ ಈಗ ತಾಲೂಕಾ ತಹಸೀಲ್ದಾರ್ ಕಚೇರಿಯಿದೆ. ಅಲ್ಲಿ ವಾಸಿಸತೊಡಗಿದರು. ಹಾಗೂ ಯುದ್ಧದ ನಂತರ ಅಲ್ಲಿಂದ ಬೇರೆಡೆಗೆ ತಮ್ಮ ತಮ್ಮ ವಾಸಸ್ಥಳ ಬದಲಿಸಿಕೊಂಡರು. ಅಲ್ಲಿ ಈಗ ಅವರ ಸಮಾಧಿಗಳು ಇರುವವು. ಇದರ ಹೊರತಾಗಿ ಬಹಳಷ್ಟು ಸೂಫಿಗಳ ಹೆಸರು ತಿಳಿದುಬಂದಿಲ್ಲ. ಅವರು ಅಂದರೂನಿ ಕಿಲಾ ಹಾಗೂ ಹೊರಗೆ ಹಾಗೂ ಲಾಲ್ ಪಹಾಡಿಯ ಸುತ್ತಲೂ ಸಮಾಧಿಸ್ಥರಾಗಿರುವರು.

■

*

ಅರ್ವಾಚೀನ ಕಾಲದ ಸೂಫಿಗಳ ವಿವರ

೩೨. ಹಜ್ರತ್ ಸೈಯದ್ ಶಾಹ ಮಾಅರೂಫ್ ಖಮೀಸಿ ಅಲ್‌ಖಾದ್ರಿ (ಖ)

ಸಾಧಹೋರಾ, ಪಂಜಾಬ್‌ದಲ್ಲಿ ಸಮಾಧಿಸ್ಥರಾಗಿರುವ ಅಬೆಅಲ್‌ಹಯಾತ್(ಖ) ರ ಪುತ್ರರಾಗಿರುವ ಸೈಯದ್ ಶಾಹ ಖಮೀಸ್ ಅಲ್ ಖಾದ್ರಿಯವರು ಸೈಯದ್ ಅಬ್ದುಲ್ ಖಾದಿರ್ ಜಿಲಾನಿಯವರ ಸಂತತಿಯಿಂದಿರುವರು. ಇವರು ತಮ್ಮ ಸೇವಕರ ಜೊತೆಯಾಗಿ ರಾಯಚೂರಿನಿಂದ ೧೦ ಕಿ.ಮೀ ದೂರದಲ್ಲಿರುವ ಕಾಡಲೋರ ಗ್ರಾಮದಲ್ಲಿ ಆಗಮಿಸಿದರು. ತಮ್ಮ ಪವಾಡದ ಪ್ರಭಾವ ಬೀರುತ್ತ ಅಲ್ಲಿಯ ದೇವಾಲಯದ ಬಳಿ ಇರತೊಡಗಿದರು. ಇವರ ಸಮಾಧಿಯು ಒಂದು ದಿಬ್ಬದ ಮೇಲೆ ಸ್ಥಿತವಿರುವುದು. ಇವರ ಜೀವನ ಚರಿತ್ರೆ ಹಾಗೂ ನಿಧನ ದಿನಾಂಕ ಲಭ್ಯವಾಗಿಲ್ಲ. ಆದರೆ ೨೨ನೇ ಮೊಹರ್ರಂದಂದು ಉರುಸು ಜರುಗುತ್ತದೆ. ಅಲ್ಲಿಯ ಪೀಠಾಧಿಪತಿಗಳಾದ ಜನಾಬ್ ಸೈಯದ್ ಶಾಹ ಮುಹಿಯುದ್ದೀನ್ ಖಾದ್ರಿ ರಾಯಚೂರಿನಲ್ಲಿ ಇರುವರು.

■

೩೩. ಹಜ್ರತ್ ಸೈಯದ್ ಶಾಹ್ ಮೀರಾಂ ಖಾದ್ರಿ (ಖ)

ಇವರು ಸೈಯದ್ ಶಾಹ್ ಮಾಅರೂಫ ಖಮಿಸಿಯಲ್ ಖಾದ್ರಿಯವರ ಸುಪುತ್ರರಾಗಿರುವರು ಹಾಗೂ ಅಲ್ಲಿಯೇ ಅವರ ತಂದೆಯವರ ಪಾದದಡಿಯಲ್ಲಿ ಸಮಾಧಿಸ್ಥರಾಗಿರುವರು. ಷವ್ವಾಲ್ ತಿಂಗಳ ೪ನೆಯ ದಿನಾಂಕದಂದು ಉರುಸ್ ಜರುಗುವುದು.

■

೩೪. ಸೈಯದ್ ಶಾಹ್ ಅಲಿ ಖಾದ್ರಿ (ಖು)

ಇವರು ಸೈಯದ್ ಶಾಹ ಮೀರಾಂ ಖಾದ್ರಿಯವರ ಸುಪುತ್ರರಾಗಿರುವರು. ಇವರ ಸಮಾಧಿಯು ಅದೇ ಬೆಟ್ಟದ ಕೆಳಗೆ ಸ್ಥಿತವಿರುವುದು. ಸಫರ್ ತಿಂಗಳ ೪ನೆಯ ದಿನಾಂಕದಂದು ನಿಧನರಾದರು.

■

೩೫. ಹಜ್ರತ್ ಶಾಹ್ ಖಮೀಸ್ ಖಾದ್ರಿ (ಖು)

ಇವರು ಸೈಯದ್ ಶಾಹ್ ಮೀರಾಂಖಾದ್ರಿಯವರ ಪುತ್ರರಾಗಿರುವರು. ಇವರ ಸಮಾಧಿಯೂ ಸಹ ಅದೇ ಬೆಟ್ಟದ ಕೆಳಗಡೆ ಇರುವುದು. ೨೨ ರಬ್ಬಿಯುಸ್ಸಾನಿಯಂದು ನಿಧನರಾಗಿರುವರು.

■

೩೬. ಸೈಯದ್ ಶಾಹ್ ಮಾಅರೂಫ್ ಖಾದ್ರಿ(ಖು)

ಇವರು ಸೈಯದ್ ಶಾಹ್ ಅಲಿ ಖಾದ್ರಿಯವರ ಸುಪುತ್ರರಾಗಿದ್ದಾರೆ. ಇವರು ಕಾಡಲೂರ ಗ್ರಾಮದಿಂದ ರಾಯಚೂರಕ್ಕೆ ಆಗಮಿಸಿದರು. ಇಲ್ಲಿ ಹಲವಾರು ಜನ ಅಮೀರರು ಹಾಗೂ ನಗರದ ಗಣ್ಯಮಾನ್ಯರು ಹಜ್ರತ್‌ರ ಅನುಯಾಯಿಗಳಾಗಿದ್ದರು.

ಇವರ ಸಮಾಧಿಯು ರಾಯಚೂರಿನ ಪೂರ್ವದಿಕ್ಕಿಗೆ ಒಂದು ಬೆಟ್ಟದ ಮೇಲೆ ಇರುವುದು. ಇವರ ಸಮಾಧಿಯನ್ನು ಹಿಜ್ರಿಶಕೆ ೧೧೬೬ರಲ್ಲಿ ನಿಜಾಮ ಸರ್ಕಾರದಲ್ಲಿ ಸೇವೆಯಲ್ಲಿದ್ದ ನೂರ್ ಮುಹಮ್ಮದ್ ಸಾಹೇಬರು ನಿರ್ಮಿಸಿದರು.

ಇವರ ನಿಧನವು ೨೨ನೇ ಜಿಲ್ ಹಜ್ಜಾ ೧೧೬೫ರಲ್ಲಿ ಆಯಿತು. ಇವರ ಮರಣ ದಿನಾಂಕವನ್ನು ಹೀಗೆ ಬರೆಯಲಾಗಿದೆ.'ಅಸದುಲ್ಲಾಹ್ ಗಾಲಿಬ್' ೧೧೬೫ ಎಂದಾಗುವುದು.

■

೩೭. ಹಜ್ರತ್ ಶಾಹ ಖಮೀಸ್ ಖಾದ್ರಿ (ಖ)

ಇವರು ಸೈಯದ್ ಶಾಹ ಮಾಅರೂಫ್ ಖಾದ್ರಿಯವರ ಜ್ಯೇಷ್ಠಪುತ್ರರು ಹಾಗೂ ಪೀಠಾಧಿಕಾರಿಗಳೂ ಆಗಿರುವರು. ಇವರಿಗೆ ಜೀವನೋಪಾಯಕ್ಕಾಗಿ 'ಯಾಪಲದನಿ' ಜಾಗೀರವು ಆ ಅವಧಿಯ ಆಡಳಿತಗಾರನಿಂದ ಲಭಿಸಿವೆ.

ಇವರ ಸಮಾಧಿಯು ರಾಯಚೂರಿನ ಅದೇ ಬೆಟ್ಟದಲ್ಲಿ ಇವರ ತಂದೆಯವರ ಬಲಮಗ್ಗುಲಲ್ಲಿ ಪೀಠದ ಮೇಲೆ ಸ್ಥಿತವಿದೆ. ಇವರ ನಿಧನವು ಜಮಾದಿಲ್ ಅವ್ವಲದ ೧೪ನೆಯ ದಿನಾಂಕ ಹಿಜ್ರಿಶಕೆ ೧೧೮೬ರಲ್ಲಿ ಆಯಿತು. ಇವರ ಮರಣದ ದಿನಾಂಕವನ್ನು 'ಜಹಿಆಫ್ತಾಬ್‌ರಫ್ತ್' (ಸೂರ್ಯನು ಅಸ್ತನಾದನು) ೧೧೮೬ ಎಂದು ಬರೆಯಲಾಗಿದೆ.

■

೩೮. ಹಜ್ರತ್ ಶಾಹ್ ಮುಹಮ್ಮದ್ ಖಾದ್ರಿ (ಖ)

ಇವರು ಶಾಹ್ ಖಮೀಸ್ ಖಾದ್ರಿಯವರ ಪುತ್ರರಾಗಿರುತ್ತಾರೆ. ಇವರ ಪವಾಡಗಳು ಬಾಲ್ಯದಿಂದಲೇ ಪ್ರಕಟಣೆಗೊಳ್ಳತೊಡಗಿದ್ದವು. ಅವರು ತಮ್ಮ ಸಾಕುಬೆಕ್ಕನ್ನು ಅದು ಮೃತವಾದಾಗ ಮರಳಿ ಜೀವ ತುಂಬಿದ್ದರು. ಅವರು ಒಮ್ಮೆ ದೇಶದಲ್ಲಿ ಬೆಂಕಿಯುರಿಸಿದರು. ಆಗ ಅವರ ತಂದೆಯವರಾದ ಶಾಹ್ ಖಮೀಸ್ ಖಾದ್ರಿಯವರು ಹೀಗೆಂದರು 'ದೀಪದ ಎದುರು ದೀವಟಿಗೆ ಉರಿಸುವಿರಾ? ಮತ್ತೇನಿತ್ತು. ತಮ್ಮ ೧೩ನೆಯ ವಯಸ್ಸಿನಲ್ಲಿಯೇ ಇವರು ಇಹಲೋಕವನ್ನು ತ್ಯಜಿಸಿದರು.

ನಿಧನ ದಿನಾಂಕ ಲಭ್ಯವಾಗಿಲ್ಲ. ೪ನೆಯ ರಜ್ಜಬ್‌ದಂದು ಇವರ ಫತೇಹಾ ಜರುಗುವುದು.

ಇವರ ಸಮಾಧಿಯು ಅದೇ ಬೆಟ್ಟದಲ್ಲಿ, ಇವರ ಅಜ್ಜಿಯವರ ಅಂದರೆ ಹಜ್ರತ್‌ಶಾಹ್ ಮಾ ಅರೂಫ್ ಖಾದ್ರಿಯವರ ಪತ್ನಿಯವರ ಮಗ್ಗುಲಲ್ಲಿ ಸಮಾಧಿಸ್ಥರಾಗಿರುವರು.

■

೩೯. ಹಜ್ರತ್ ಸೈಯದ್ ಶಾಹ ಅಬ್ದುಲ್ ರಜಾಕ್ ಖಾದ್ರಿ(ಖ)

ಇವರೂ ಸಹ ಸೈಯದ್ ಶಾಹ ಮಾಅರೂಫ್ ಖಾದ್ರಿಯವರ ಸುಪುತ್ರರಾಗಿರುವರು. ಇವರ ಸಮಾಧಿಯೂ ಸಹ ಅದೇ ಬೆಟ್ಟದ ಮೇಲೆ ಇವರ ಸಹೋದರರಾದ ಸೈಯದ್ ಶಾಹ್ ಖಾಸಿಂ ಖಾದ್ರಿಯವರ ಬಲ ಮಗ್ಗುಲಲ್ಲಿ ಪಶ್ಚಿಮದಲ್ಲಿರುವ ಪೀಠದ ಮೇಲೆ ಸ್ಥಿತವಿರುವುದು. ಇವರ ನಿಧನದ ದಿನಾಂಕವು ೧೧ ಜಮಾದಿಲ್‌ಅವ್ವಲ್ ಇರುವುದು.

■

೪೦. ಹಜ್ರತ್ ಸೈಯದ್ ಶಾಹ್ ಹಜ್ರತ್ ಖಾದ್ರಿ (ಖ)

ಇವರೂ ಸಹ ಸೈಯದ್ ಶಾಹ್ ಮಾಅರೂಪ್ ಖಾದ್ರಿಯವರ ಸುಪುತ್ರರು. ಇವರ ಸಮಾಧಿಯು ಕಾಡಲೂರು ಗ್ರಾಮದಲ್ಲಿ ಸೈಯದ್ ಶಾಹ್ ಮಾಅರೂಫ್ ಖಾದ್ರಿಯವರ ಬೆಟ್ಟದ ಕೆಳಗೆ ಸ್ಥಿತವಿರುವುದು. ನಿಧನದ ದಿನಾಂಕವು ಲಭ್ಯವಾಗಿಲ್ಲ.

■

೪೧. ಹಜ್ರತ್ ಸೈಯದ್ ಶಾಹ್ ಖಮೀಸ್ ಮುಹಿಯುದ್ದೀನ್ ಖಾದ್ರಿ(ಖ)

ಇವರು 'ಆಜಮುಲ್ ಫುಖ್ರಾ' ಎಂಬ ಬಿರುದಿನಿಂದ ಪ್ರಸಿದ್ಧರಾಗಿದ್ದರು. ಇವರು ಸೈಯದ್ ಶಾಹ್‌ಖಮೀಸ್ ಖಾದ್ರಿಯವರ ಪೀಠಾಧಿಕಾರಿ ಹಾಗೂ ಪುತ್ರರಾಗಿರುವರು. ಇವರ ನಿಧನವು ಸಫರ್ ತಿಂಗಳ ೯ನೆಯ ದಿನಾಂಕ ಹಿಜ್ರಶಕೆ ೧೨೩೮ ರಂದು ಆಯಿತು. ಇವರ ಮರಣದ ದಿನಾಂಕವನ್ನು 'ಫಿಖ್ದಾ ಗುಮ್‌ಶುದ್ ಜ ಆಜಮುಲ್ ಫುಖ್ರಾ' ಎಂದು ಆಗುವುದು. ಇವರ ಸಮಾಧಿಯು ರಾಯಚೂರಿನ ಬೆಟ್ಟದ ಮೇಲೆ ಹಜ್ರತ್ ಸೈಯ್ಯದ್ ಅಬ್ದುಲ್ ರಜಾಕ ಖಾದ್ರಿಯವರ ಸಮಾಧಿಯ ಬಲಮಗ್ಗುಲಲ್ಲಿ ಇರುವದು.

■

೪೨. ಹಜ್ರತ್ ಸೈಯದ್ ಚಾಂದಪೀರ್ ಖಾದ್ರಿ(ಖು)

ಇವರು ಸೈಯದ್ ಶಾಹ್ ಅಬ್ದುಲ್ ರಜಾಕ್ ಖಾದ್ರಿಯವರ ಸುಪುತ್ರರಾಗಿರುವರು. ಇವರ ಸಮಾಧಿಯು ರಾಯಚೂರಿನ ಬೆಟ್ಟದ ಮೇಲೆ ಸೈಯದ್ ಶಾಹ್ ಮುಹಮ್ಮದ್ ಖಾದ್ರಿಯವರ ಸಮಾಧಿಯ ಪಕ್ಕದಲ್ಲಿ ಪೂರ್ವದಿಕ್ಕಿನೆಡೆಗೆ ಇರುವುದು. ನಿಧನ ದಿನಾಂಕವು ಲಭ್ಯವಾಗಿಲ್ಲ.

ಇವರ ಸುಪುತ್ರರಾದ ಸೈಯದ್ ಶಾಹ ಮಾಅರೂಫ್ ಖಾದ್ರಿಯವರು ಗದ್ವಾಲ್‌ದಲ್ಲಿ ಸಮಾಧಿಸ್ಥರಾಗಿರುವರು. ಹಾಗೂ ಅವರ ಸುಪುತ್ರರಾದ ಹಜ್ರತ್ ಸೈಯದ್ ಶಾಹ್ ಚಾಂದಪೀರ್ ಖಾದ್ರಿ ಹಾಗೂ ಅವರ ಸಹೋದರರ ಪುತ್ರರಾದ ಸೈಯದ್ ಶಾಹ್ ಅಬ್ದುಲ್ ಖಾದಿರ್ ಸಾಹೇಬ್ ಖಾದ್ರಿ ಇರುವರು.

ಇವರಿಗೆ ಡೋಂಗರ್‌ರಾಂಪೂರದ ಜಾಗೀರು, ನಿಜಾಮ್ ಸರ್ಕಾರದ ವತಿಯಿಂದ ಲಭಿಸಿದೆ.

■

೪೩. ಹಜ್ರತ್ ಸೈಯದ್ ಶಾಹ್ ಹಬೀಬುಲ್ಲಾಹ್ ಖಾದ್ರಿ(ಖು)

ಇವರು ಸೈಯದ್ ಶಾಹ್ ಅಬ್ದುಲ್ ರಜಾಕ್ ಖಾದ್ರಿಯವರ ಸುಪುತ್ರರಾಗಿರುವರು. ಇವರ ಸಮಾಧಿಯು ರಾಯಚೂರಿನಲ್ಲಿಯ ಬೆಟ್ಟದ ಮೇಲೆ, ಅವರ ಸಹೋದರರಾದ ಸೈಯದ್ ಚಾಂದಪೀರ್ ಸಾಹೇಬರ ಎಡಪಕ್ಕದಲ್ಲಿ ಪೂರ್ವದಿಕ್ಕಿಗೆ ಇರುವುದು. ನಿಧನದ ದಿನಾಂಕವು ತಿಳಿದು ಬಂದಿಲ್ಲ.

■

೪೪. ಸೈಯದ್ ಶಾಹ್ ನಬೀ ಪೀರ್ ಖಾದ್ರಿ (ಖು)

ಇವರು ಸೈಯದ್ ಶಾಹ್ ಖಮೀಸ್ ಬಿನ್ ಮುಹಿಯುದ್ದೀನ್ ಖಾದ್ರಿಯವರ ಪುತ್ರರು ಹಾಗೂ ಪೀಠಾಧಿಪತಿಗಳೂ ಆಗಿರುವರು.

ಇವರ ನಿಧನವು ರಬ್ಬಿವುಲ್ ಅವ್ವಲ್ ೧೨೮೩ ಹಿಜ್ರಶಕೆಯಂದು ಇರುವದು.

ಇವರ ಸಮಾಧಿಯೂ ಸಹ ರಾಯಚೂರಿನ ಬೆಟ್ಟದ ಮೇಲೆ ದ್ವಾರದ ಬಳಿಯಲ್ಲಿ ಪೂರ್ವದಿಕ್ಕಿಗೆ ಇರುವದು. ಇವರ ಪುತ್ರ ಹಾಗೂ ಪೀಠಾಧಿಪತಿಗಳಾದ ಸೈಯದ್ ಶಾಹ್ ಮಾಅರೂಫ್ ಪೀರ್ ಸಾಹೇಬ್ ಖಾದ್ರಿ ಹಾಗೂ ಇವರ ಪುತ್ರರಾದ ಸೈಯದ್ ಶಾಹ ಹುಸೈನ್ ಸಾಹೇಬ್ ಖಾದ್ರಿ ಉರ್ಫ್ ಸಾಹೇಬ್ ಹುಸೈನ್ ಸಾಹೇಬ್ ಖಾದ್ರಿ ಇರುವರು.

ನಿಜಾಂನ ಸರ್ಕಾರದಿಂದ 'ಯಾಪಲದಿನ್ನಿ' ಗ್ರಾಮದ ಜಾಗೀರು ಲಭಿಸಿದೆ. ಹಜ್ರತ್ ಸೈಯದ್ ಶಾಹ ಮಾಅರೂಫ್ ಪೀರ್ ಖಾದ್ರಿಯವರ ಇನ್ನೋರ್ವ ಪುತ್ರರು. ಓರ್ವರು ಸೈಯದ್ ಖಮೀಸ್ ಪೀರ್‌ಖಾದ್ರಿ ಜಿಲ್‌ಹಜ್ಜಾ ಹಿ.ಶ. ೧೩೧೦ರಂದು ನಿಧನರಾದರು. ಇವರ ಸಮಾಧಿಯು ಅದೇ ಬೆಟ್ಟದ ಮೇಲೆ ತಮ್ಮ ಅಜ್ಜಂದಿರ ಪಾದದಡಿಯಲ್ಲಿ ಇರುವದು.

ಎರಡನೆಯ ಪುತ್ರರಾದ ಸೈಯದ್ ನಬಿ ಪೀರ್ ಖಾದ್ರಿಯವರು ೧೭ನೇ ಜಮಾದಿಸ್ಸಾನಿ ತಿಂಗಳ ಹಿ.ಶ. ೧೩೦೦ರಲ್ಲಿ ನಿಧನರಾದರು.

ಇವರ ಸಮಾಧಿಯು ಅದೇ ಬೆಟ್ಟದ ಕೆಳಗೆ ಇರುವದು. ಅಲ್ಲಿಯೇ ಇನ್ನೊಂದು ಸಮಾಧಿ ಇರುವದು. ಇದನ್ನು ಸೈಯದ್ ಇಮಾಮ್ ಅಲಿಖಾನ್ ಸೈಯದ್ ಶಾಹ ಖಾಸಿಂ ಖಾದ್ರಿಯವರ ಪತ್ನಿಯವರಿಗಾಗಿ ೧೨೧೪ರಲ್ಲಿ ಸಿದ್ಧಗೊಳಿಸಲಾಯಿತು ಹಾಗೂ ಈಗಲೂ ಬೀಬೀಸಾಹೇಬರ ಮಕ್ಬರಾ ಎಂದು ಪ್ರಸಿದ್ಧವಿದೆ.

■

೪೫. ಹಜ್ರತ್ ಸೈಯದ್ ಅಬ್ದುಲ್ ರಹೀಂ ಖಾದ್ರಿ (ಖ)

ಇವರು ಸೈಯದ್ ಶಾಹ್ ಖಮೀಸ್ ಬಿನ್ ಸೈಯದ್ ಶಾಹ್ ಮೀರಾಂ ಖಾದ್ರಿಯವರ ಸಂತತಿಯಿಂದಿರುವರು. ಇವರ ನಿಧನವು ೨೬ ಜಿಲ್‌ಹಜ್ಜಾಕ್ಕೆ ಆಯಿತು. ಇವರ ಸಮಾಧಿಯು ರಾಯಚುರಿನಲ್ಲಿ ಶಾಹ್ ಮಾಅರೂಫ್ ಖಾದ್ರಿಯವರ ಸಮಾಧಿಯ ಕೆಳಗೆ ಪಜ್ರತ್ ಬೀಬಿ ಸಾಹೇಬಾರ ಮಕ್ಬರಾದಲ್ಲಿ ಇರುವುದು.

■

೪೬. ಸೈಯದ್ ಹಜ್ರತ್ ಹುಸೈನಿ ಸಾಹೇಬ್ ಖಾದ್ರಿ (ಖು)

ಇವರು ಹಜ್ರತ್ ಅಬ್ದುಲ್ ರಹಿಂ ಖಾದ್ರಿಯವರ 'ತಮ್ಮ' ಆಗಿದ್ದಾರೆ. ಇವರ ನಿಧನವು ೨೫, ಜಮಾದಿಲ್ ಅವ್ವಲಕ್ಕೆ ಇರುವುದು. ಇವರು ಹಜ್ರತ್ ಬೀಬೀ ಸಾಹೇಬರ ಮಕ್ಬರಾದಲ್ಲಿ ತಮ್ಮ ಸಹೋದರರಾದ ಸೈಯದ್ ಅಬ್ದುಲ್ ರಹೀಂ ಖಾದ್ರಿಯವರ ಪಕ್ಕದಲ್ಲಿ ಇರುವುದು. ಇವರಿಗೆ ಮೂರು ಪುತ್ರರು ಇರುವರು. ಓರ್ವರು ಸೈಯದ್ ಅಬುಲ್‌ಹಯಾತ್ ಸಾಹೇಬ್ ನಿಜಾಮ ಸರ್ಕಾರದ ಸೇವೆಯಲ್ಲಿದ್ದರು. ತಮ್ಮ ಸೇವಾಸ್ಥಳದಲ್ಲಿಯೇ ನಿಧನರಾದರು.

ಇವರಿಗೆ ನಾಲ್ವರು ಪುತ್ರರು ಇರುವರು.

೧. ಸೈಯದ್ ಅಬ್ದುಲ್ ರಹೀಂ ಸಾಹೇಬ್ ಖಾದ್ರಿ

೨. ಸೈಯದ್ ಅಬ್ದುಲ್ ಖಾದಿರ್ ಸಾಹೇಬ್ ಖಾದ್ರಿ

೩. ಸೈಯದ್ ಶಾಹ್ ಸಾಹೇಬ್ ಮುಹಿಯುದ್ದೀನ್ ಸಾಹೇಬ್ ಖಾದ್ರಿ, ಕಾಡಲೂರಿನ ದರ್ಗಾದ ಪೀಠಾಧಿಪತಿಗಳು

೪. ಸೈಯದ್ ಅಬುಲೈಸ್ ಸಾಹೇಬ್ ಖಾದ್ರಿ ಇರುವರು.

ಎರಡನೆಯವರಾದ ಸೈಯದ್ ಸಾಹೇಬ್ ಮುಹಿಯುದ್ದೀನ್ ಖಾದ್ರಿ ಇವರ ನಿಧನವು ೧೦ ರಬ್ಬಿಯುಸ್ಸಾನಿಯಂದು ಆಯಿತು. ಇವರ ಸಮಾಧಿಯು ಸೈಯದ್ ಅಬ್ದುಲ್ ರಹಿಂಸಾಹೇಬ್ ಖಾದ್ರಿಯವರ ಸಮಾಧಿಯ ಪಕ್ಕದಲ್ಲಿ ಇರುವದು.

ಮೂರನೆಯವರಾದ ಸೈಯದ್ ವಹಾಬ್ ಪೀರ್ ಖಾದ್ರಿ, ಇವರು ಶಾಹನಬೀ ಪೀರ್ ಖಾದ್ರಿಯವರ ಶಿಷ್ಯ ಹಾಗೂ ಖಲೀಫಾ ಆಗಿರುವರು.

ಹಿಜ್ರಿಶಕೆ ೧೩೧೨ರಲ್ಲಿ ಮೊಹರ್‍ರಂ ತಿಂಗಳ ೪ನೆಯ ದಿನಾಂಕದಂದು ಮರಣ ಹೊಂದಿದರು.

ಇವರ ಸಮಾಧಿಯು ಶಾಹ ಮಾಅರೂಫ್ ಖಾದ್ರಿಯವರ ಮಕ್‌ಬರಾದಲ್ಲಿ ಮುರ್ಶಿದ್‌ರ ಪಾದದಡಿಯಲ್ಲಿ ಇರುವದು.

ಇಲ್ಲಿಗೆ ಖಮೀಸ್ ವಂಶಸ್ಥರ ವಿವರವು ಮುಕ್ತಾಯಗೊಂಡಿತು.

■

೪೭. ಹಜ್ರತ್ ಶಂಶುದೀನ್ ಸೈಯದ್ ಶಾಹ್ ಹುಸೈನ್ ಖಾದ್ರಿ (ಖ)

ಇವರು ತಮ್ಮ ಸ್ವದೇಶವಾದ ಬಸ್ರಾದಿಂದ ಮೊದಲು ಬಿಜಾಪುರಕ್ಕೆ ಆಗಮಿಸಿದರು. ಯಾವಾಗ ಬಾದಶಹ ಆಲಂಗೀರನು ಬಿಜಾಪುರವನ್ನು ಗೆದ್ದುಕೊಂಡನು. ಆಗ ಅಲ್ಲಿಂದ ಹೊರಟು ರಾಯಚೂರಕ್ಕೆ ಆಗಮಿಸಿದರು. ಹೊಸೂರದಲ್ಲಿ ಬಾದಶಹನಿಂದ ಜಾಗೀರನ್ನು ಪಡೆದರು. ಈ ಹೊಸೂರವು ರಾಯಚೂರಿನಿಂದ ಒಂದು ಕಿ.ಮಿ. ದೂರದಲ್ಲಿದೆ. ರಾಯಚೂರಿನವರು ಹಜ್ರತ್‌ರ ಆರಾಧನೆಗೆಂದು ಒಂದು ಕೋಣೆಯನ್ನು ನಿರ್ಮಿಸಿಕೊಟ್ಟರು. ಅಲ್ಲಿಯೇ ಹಜ್ರತ್‌ರು ಸದಾಕಾಲ ಅಲ್ಲಾಹುವಿನ ಸ್ಮರಣೆಯಲ್ಲಿ ಆರಾಧನೆಯಲ್ಲಿ ತೊಡಗಿರುತ್ತಿದ್ದರು. ಇವರ ಶಿಷ್ಯನಾದ ಅಫ್ಜಲ್ ಖಾನ್‌ನು ಕೋಟೆಯ ನವರಂಗ್ ದ್ವಾರದ ಒಳಗಡೆ 'ಕೋಟತಲಾ' ಪ್ರದೇಶವನ್ನು ಹಜ್ರತ್‌ರ ವಾಸಕ್ಕೆ ಅನುಕೂಲ ಮಾಡಿಕೊಟ್ಟನು. ಹಜ್ರತ್‌ರು ಅಲ್ಲಿಯೇ ವಾಸಿಸತೊಡಗಿದರು.

ಇವರ ನಿಧನವು ೧೧ನೇ ರಜ್ಜಬದಂದು ಆಯಿತು. ಇವರ ಸಮಾಧಿಯು ಹೊಸೂರಿನ ಒಂದು ಮಕ್‌ಬರಾದಲ್ಲಿ ಇರುವದು. ಅಲ್ಲಿ ಒಂದು ಮಸೀದೆಯೂ ಇದೆ.

■

೪೮. ಸೈಯದ್ ಶಾಹ್ ಮುಹಿಯುದ್ದೀನ್ ಖಾದ್ರಿ (ಖ)

ಇವರು ಸೈಯದ್ ಶಾಹ್ ಹುಸೈನ್ ಸಾಹೇಬ್ ಖಾದ್ರಿಯವರ ಪುತ್ರರಾಗಿರುವರು. ೯ನೆಯ ಷವ್ವಾಲ್ ತಿಂಗಳಲ್ಲಿ ನಿಧನರಾದರು. ಇವರ ಸಮಾಧಿಯು ರಾಯಚೂರಿನಲ್ಲಿ ಅಫ್ಜಲ್‌ಖಾನ್ ವಜೀರರ ಮಸೀದೆಯ ಹಿಂದೆ ಒಂದು ದಿಬ್ಬದ ಮೇಲೆ ಪೀಠದ ಮೇಲೆ ಇರುವದು.

■

೪೯. ಹಜ್ರತ್ ಸೈಯದ್ ಶಾಹ್ ಹಾಫೀಜ್ ಹುಸೈನ್ (ಖ) ಉರ್ಫ್ ಶಾ ಸಾಹೇಬ್ ಖಾದ್ರಿ

ಇವರು ಸೈಯದ್ ಶಾಹ್ ಮುಹಿಯುದ್ದೀನ್ ಖಾದ್ರಿಯವರ ಪುತ್ರರಾಗಿರುವರು. ೭ನೆಯ ರಂಜಾನ್‌ದಂದು ಇವರು ಇಹಲೋಕವನ್ನು ತ್ಯಜಿಸಿದರು. ಇವರ ಸಮಾಧಿಯು ಅದೇ ದಿಬ್ಬದ ಪೂರ್ವದೆಡೆಗೆ ಮಸೀದೆಯ ಪಕ್ಕದಲ್ಲಿ ಒಂದು ಪುಟ್ಟ ಗುಂಬಜ್‌ದಲ್ಲಿ ಇರುವದು. ಈ ಗುಮ್ಮಟವನ್ನು ಅಫ್ಜಲ್‌ಖಾನ್ ವಜೀರನು ತಮ್ಮ ಗುರುವಾದ

ಸೈಯದ್ ಶಾಹ್ ಹುಸೈನ್‌ರಿಗಾಗಿ ಸಿದ್ಧಗೊಳಿಸಿದ್ದನು. ಆದರೆ ಮೊದಲು ಇವರ ಮೃತ್ಯುವಾದುದರಿಂದ ಇವರನ್ನು ದಫನ್‌ಗೊಳಿಸಲಾಯಿತು.

■

೫೦. ಸೈಯದ್ ಅಬ್ದುಲ್ ಖಾದಿರ್ ಸಬ್ಜಪೋಷ್

ಇವರು ಸೈಯದ್ ಮುಹಿಯುದ್ದೀನ್ ಖಾದ್ರಿಯವರ ಸುಪುತ್ರರಾಗಿದ್ದಾರೆ ಹಾಗೂ ಸೈಯದ್ ಶಾಹ್ ಹಾಫೀಜ್ ಹುಸೈನೀ ಖಾದ್ರಿಯವರ ಸಹೋದರರಾಗಿರುವರು. ಇವರ ನಿಧನವು ೭ ರಬ್ಬಿವುಸ್ಸಾನಿಯಂದು ಆಯಿತು. ಇವರ ಸಮಾಧಿಯು ಅದೇ ದಿಬ್ಬದ ಮೇಲೆ ಇವರ ತಂದೆಯವರ ಸಮಾಧಿಯ ಎಡಪಕ್ಕದಲ್ಲಿ ಸ್ಥಿತವಿರುವದು.

■

೫೧. ಹಜ್ರತ್ ಸೈಯದ್ ಹುಸೈನ್ ಉರ್ಫ್ ಫಖ್ರುಲ್ಲಾಹ ಖಾದ್ರಿ (ಖು)

ಇವರು ಶಾಹ ಹಾಫೀಜ್ ಹುಸೈನಿಯವರ ಪುತ್ರರು. ಇವರ ನಿಧನವು ೫, ರಬ್ಬಿವುಲ್ ಅವ್ವಲ್‌ದಂದು ಆಯಿತು. ಇವರ ಸಮಾಧಿಯು ದಿಬ್ಬದ ಮೇಲೆ ತಮ್ಮ ಚಿಕ್ಕಪ್ಪನವರಾದ ಸೈಯದ್ ಅಬ್ದುಲ್ ಖಾದಿರ್ ಸಬ್ಜಪೋಶ್‌ರ ಸಮಾಧಿಯ ಎಡಭಾಗಕ್ಕೆ ಇರುವದು.

ಇವರಿಗೆ ಓರ್ವ ಪುತ್ರ ಸೈಯದ್ ಖ್ವಾಜಾ ಮುಹಿಯುದ್ದೀನ್ ಖಾದ್ರಿ ಹಾಗೂ ಅವರ ಪುತ್ರರಾದ ಸೈಯದ್ ಫುಖರುಲ್ಲಾಹ್ ಖಾದ್ರಿಯವರ ಸಮಾಧಿಗಳೂ 'ಅವಪ್ಪಲ್ ಪಾಡ'ದಲ್ಲಿ ಇರುವವು. ಸೈಯದ್ ಫುಖರುಲ್ಲಾಹ್‌ರ ಸುಪುತ್ರರಾದ ಸೈಯದ್ ಶಾಹ್ ನಬಿ ಮುಹಿಯುದ್ದೀನ್ ಖಾದ್ರಿ ಸಾಹೇಬ್ ಹಾಗೂ ಅವರ ಈರ್ವರು ಪುತ್ರರು ಇರುವರು. ಮೊದಲನೆಯವರು ಸೈಯದ್ ಶಾಹ್ ಮುಹಮ್ಮದ್ ಖಾದ್ರಿ. ಎರಡನೆಯವರು ಸೈಯದ್ ಹಸನ್ ಪೀರ್ ಖಾದ್ರಿ ರಾಯಚೂರಿನಲ್ಲಿ ಇರುವರು. ಇವರು 'ಹಜ್ರತ್ ಅವಪ್ಪಲ್‌ಪಾಡ' ದವರು ಎಂದು ಪ್ರಸಿದ್ಧರು.

■

೫೨. ಹಜ್ರತ್ ಸೈಯದ್ ಶಾಹ್ ಹಾಫೀಜ್ ನಬೀ ಮುಹಿಯುದ್ದೀನ್ ಖಾದ್ರಿ (ಖ)

ಇವರು ಸೈಯದ್ ಶಾಹ್ ಘುಖರುಲ್ಲಾಹ್ ಖಾದ್ರಿಯವರ ಪುತ್ರರಾಗಿರುವರು. ಇವರ ನಿಧನವು ೧೧ನೇ ರಬ್ಬಿಯುಸ್ಸಾನಿಯಂದು ಆಯಿತು. ಇವರ ಸಮಾಧಿಯು ಅದೇ ದಿಬ್ಬದ ಮೇಲೆ ಸೈಯದ್ ಮುಹಿಯುದ್ದೀನ್ ಖಾದ್ರಿಯವರ ಬಲಭಾಗದಲ್ಲಿ ಉಪಸ್ಥಿತವಿರುವದು.

■

೫೩. ಸೈಯದ್ ಶಾಹ್ ಮುಹಮ್ಮದ್ ಖಾದ್ರಿ (ಖ)

ಇವರು ಸೈಯದ್ ಶಾಹ್ ಹಾಫೀಜ್ ನಬಿ ಮುಹಿಯುದ್ದೀನ್ ಖಾದ್ರಿಯವರ ಪುತ್ರರಾಗಿರುವರು. ಇವರ ನಿಧನವು ಮೊಹರ್ರಂ ತಿಂಗಳ ೭ನೆಯ ದಿನಾಂಕದಂದು ಆಯಿತು ಹಾಗೂ ಇವರ ಸಮಾಧಿಯು ಅಫ್ಜಲ್‌ಖಾನ್ ಮಸೀದೆಯ ಪಕ್ಕದಲ್ಲಿ ಹಾಗೂ ಸೈಯದ್ ಶಾಹ್ ಹಾಫೀಜ್ ಹುಸೈನ್ ಖಾದ್ರಿಯವರ ಗುಂಬಜಿನ ಎದುರಲ್ಲಿ ಸ್ಥಿತವಿರುವದು.

■

೫೪. ಹಜ್ರತ್ ಸೈಯದ್ ಶಾಹ್ ಮುಹಿಯುದ್ದೀನ್ ಉರ್ಫ್ ನಬೀಶಾಸಾಹೇಬ್ ಖಾದ್ರಿ (ಖ)

ಇವರು ಸೈಯದ್ ಶಾಹ ಮುಹಮ್ಮದ ಖಾದ್ರಿಯವರ ಸುಪುತ್ರರಾಗಿರುವರು. ಇವರ ನಿಧನವು ಸಫರ್ ತಿಂಗಳ ೧೦ನೆಯ ದಿನಾಂಕದಂದು ಆಯಿತು ಹಾಗೂ ಇವರ ಸಮಾಧಿಯು ಸೈಯದ್ ಶಾಹ್ ಹಾಫೀಜ್ ಮುಹಿಯುದ್ದೀನ್ ಖಾದ್ರಿಯವರ ಪಾದದಡಿಯಲ್ಲಿ ಸ್ಥಿತವಿರುವದು.

■

೫೫. ಹಜ್ರತ್ ಸೈಯದ್ ಹುಸೈನಿ ಪೀರ್ ಖಾದ್ರಿ

ಇವರು ನಬೀಶಾ ಸಾಹೇಬರ ಪುತ್ರರಾಗಿರುವರು, ಸಫರ್ ತಿಂಗಳ ೧೩ನೆಯ ದಿನಾಂಕದಂದು ನಿಧನ ಹೊದಿದರು. ತಮ್ಮ ತಂದೆಯವರ ಪಾದದಡಿಯಲ್ಲಿ ಸಮಾಧಿಸ್ಥರಾಗಿರುವರು. ಇವರಿಗೆ ಮೂವರು ಪುತ್ರರು.

೧. ಸೈಯದ್ ಶಾಹ ಮುಹಮ್ಮದ್ ಖಾದ್ರಿ, ಪೀಠಾಧಿಕಾರಿಗಳು

೨. ಖಾದಿರ್ ಬಾದಶಹ ಖಾದ್ರಿ

೩. ಸೈಯದ್ ಮುಹಿಯುದ್ದೀನ್ ಖಾದ್ರಿ ಇರುವರು.

■

೫೬. ಸೈಯದ್ ಶಾಹ ಮುಹಮ್ಮದ್ ಖಾದ್ರಿ ಉರ್ಫ್ ಮುಹಮ್ಮದ್ ಅಲಿ ಸಾಹೇಬ್ (ಖ)

ಇವರು ಸೈಯದ್ ಅಬ್ದುಲ್ ಖಾದಿರ್ ಸಬ್ಜಪೋಶ್ ಇವರ ಮೊಮ್ಮಗರಾಗಿರುವರು. ಇವರ ನಿಧನದ ದಿನಾಂಕವು ತಿಳಿದು ಬಂದಿಲ್ಲ. ಇವರ ಸಮಾಧಿಯೂ ಸಹ ದಿಬ್ಬದ ಮೇಲೆ ಸೈಯದ್ ಫಖ್ರುಲ್ಲಾಹ್ ಸಾಹೇಬ್ ಖಾದ್ರಿಯವರ ಪಾದದಡಿಯಲ್ಲಿ ಇರುವದು.

■

೫೭. ಹಜ್ರತ್ ಶಾಹ್ ಬಡೇ ಸಾಹೇಬ್ (ಖ)

ಇವರು ಸೈಯದ್ ಶಾಹ್ ಮುಹಮ್ಮದ್ ಖಾದ್ರಿ ಉರ್ಫ್ ಮುಹಮ್ಮದ ಅಲಿ ಸಾಹೇಬರ ಪುತ್ರರಾಗಿರುವರು. ಇವರ ನಿಧನದ ದಿನಾಂಕವೂ ಸಹ ಲಭ್ಯವಾಗಿಲ್ಲ. ಇವರ ತಂದೆಯವರ ಸಮಾಧಿಯ ಬಲಭಾಗದಲ್ಲಿ ಸಮಾಧಿಸ್ಥರಾಗಿರುವರು. ಈಗ ಇವರ ಸಂತತಿಯು ಕರ್ನೂಲದಲ್ಲಿ ವಾಸವಾಗಿರುವುದು.

ಕೋಟ ತಲಾರ್‌ದ ಸೂಫಿಗಳು ಹಾಗೂ ಓಪಲಪಾಡ್‌ದ ಸೂಫಿಗಳೂ ಒಂದೇ ವಂಶದವರಾಗಿರುವರು. ಇಲ್ಲಿಗೆ ಕೋಟತಲಾರ್‌ದ ವಂಶದ ವಿವರವು ಮುಕ್ತಾಯಗೊಂಡಿತು.

■

೫೮. ಹಜ್ರತ್ ಸೈಯದ್ ಶಾಹ್ ಮುಹಮ್ಮದ್ ಖಾದ್ರಿ(ಖ)'ನೂರ್ ದರಿಯಾ' ಬಿರುದಾಂಕಿತರು

ಇವರ ಸ್ವದೇಶವು ತಿಳಿದುಬಂದಿಲ್ಲ. ಬಹುಶಃ ಬಿಜಾಪುರವೇ ಆಗಿರಬಹುದು. ಏಕೆಂದರೆ ಇವರು ಚಿಷ್ತಿಯಾಪಂಥದ ಸೂಫಿವರ್ಯರಾಗಿರುವರು. ಇವರು ಹಜ್ರತ್ ಅಮೀನುದ್ದೀನ ಆಲಾ ಬಿಜಾಪುರಿ(ಖ)ರಿಂದ ಖಿಲಾಫತ್ ಪಡೆದರು. ಹಜ್ರತ್‌ರ ನಿಧನವು ಹಿಜ್ರಶಕೆ ೧೦೮೦ರಲ್ಲಿ ಆಯಿತು. ಖಾದ್ರಿಯಾ ಪಂಥದಲ್ಲಿ ಸೈಯದ್ ಫರಿದುದ್ದೀನ್ ಖಾದ್ರಿಯವರಿಂದ ಖಿಲಾಫತ್ ಪಡೆದರು. ಇವರು 'ನೂರ್ ದರಿಯಾ' ಎಂದು ಪ್ರಸಿದ್ಧರಾಗಲು ಕಾರಣವೇನೆಂದರೆ ಇವರು ಯಾವಾಗಲೂ ಅಲ್ಲಾಹುವಿನ ಸ್ಮರಣೆಯಲ್ಲಿ ಏಕಾಗ್ರಚಿತ್ತರಾಗಿ ಧ್ಯಾನಸ್ಥರಾಗಿರುತ್ತಿದ್ದರು. ಒಂದು ದಿನ ತಮ್ಮ ಕೋಣೆಯಲ್ಲಿ ಜಾನಿಮಾಜ್ ಮೇಲೆ ಕುಳಿತುಕೊಂಡಿರುವಾಗ ರೂಢಿ ತಪ್ಪಿಸಿ ಜಾನಿಮಾಜ್‌ದ ಮೂಲೆಯನ್ನು ಗಟ್ಟಿಯಾಗಿ ಹಿಡಿದರು ಹಾಗೂ ಸ್ವಲ್ಪ ಸಮಯದ ನಂತರ ಬಿಟ್ಟುಕೊಟ್ಟಾಗ ಅವರ ಬಟ್ಟೆಗಳು ನೀರಿನಲ್ಲಿ ತೊಯ್ದಿದ್ದವು. ಸೇವಕರು ಕೇಳಿದರು. ದಸ್ತಗೀರರೇ ಇಂದು ರೂಢಿ ತಪ್ಪಿ ಈ ಘಟನೆ ಜರುಗಿದೆ. ಆಗ ಹಜ್ರತ್‌ರು ಹೇಳಿದರು, ನಿಮ್ಮ ಸಹೋದರನ ಹಡಗು ಮುಳುಗುತ್ತಲಿತ್ತು. ಆತನು ನಮಗೆ ಸ್ಮರಿಸಿದನು. ಆ ಕಾರಣಕ್ಕೆ ಹಡಗಿನಲ್ಲಿ ಉಂಟಾದ ರಂಧ್ರವನ್ನು ಜಾನಿಮಾಜ್‌ದ ಕೊನೆಯಿಂದ ಒತ್ತಿ ಹಿಡಿದೆನು. ಹಾಗೂ ಆ ಹಡಗು ಅಪಾಯದಿಂದ ಉಳಿಯಿತು. ಯಾವಾಗ ಹಜ್ರತ್‌ರ ಬಟ್ಟೆಯ ನೀರನ್ನು ಹಿಂಡಿ ನೋಡಿದಾಗ ಅದು ಸಮುದ್ರದ ಉಪ್ಪು ನೀರಾಗಿತ್ತು.

ಒಂದು ಅವಧಿಯ ನಂತರ ಆ ಸೇವಕನು ಬಂದು ಸ್ವತಃ ಈ ಘಟನೆಯನ್ನು ವಿವರಿಸಿದಾಗ ಈ ಪವಾಡದ ನಿಖರತೆಯು ಸ್ಪಷ್ಟವಾಯಿತು. ಆಗಿನಿಂದ ಇವರನ್ನು 'ನೂರ್ ದರಿಯಾ' ಎಂದು ಕರೆಯತೊಡಗಿದರು. ಹಾಗೂ, ಹೀಗೂ ಹೇಳಲಾಗುತ್ತದೆ. ಈ ಘಟನೆಯ ಕಾರಣದಿಂದ ಸ್ವಪ್ನಾವಸ್ಥೆಯಲ್ಲಿ ಹಜ್ರತ್‌ಮುಹಮ್ಮದ್ (ಸ)ರು ಪ್ರೀತಿಯಿಂದ 'ನೂರ್‌ದರಿಯಾ' ಎಂದು ಕರೆದರು ಎಂಬ ಪ್ರತೀತಿಯೂ ಇದೆ. ವಲ್ಲಹ ಆಲಮ್ ದೇವನೇ ಬಲ್ಲನು.

ಇವರ ನಿಧನದ ದಿನಾಂಕವು ಜಿಲ್‌ಹಜ್ಜಾ ತಿಂಗಳ ೧೧ನೆಯ ದಿನಾಂಕವಿರುವುದು. ಇವರ ಸಮಾಧಿಯು ರಾಯಚೂರಿನ ಅಯ್ಯಾಭಾವಿಯ ಬಳಿ ಒಂದು ರಕ್ಷಣಾ ಗೋಡೆಯ ನಡುವೆ ಪೀಠದ ಮೇಲೆ ಸ್ಥಿತವಿರುವುದು. ಹಾಗೂ ಇವರ ಸಂಬಂಧಿಕರ ಆಪ್ತರ ಹಲವಾರು ಸಮಾಧಿಗಳು ಇಲ್ಲಿ ಇರುವವು.

೫೯. ಹಜ್ರತ್ ಸೈಯದ್ ಶಾಹ್ ಮುಹಮ್ಮದ್ ಖಾದ್ರಿ ನೂರ್ ದಯಾರ್ (ಖು)

ಇವರ ಸಮಾಧಿಯು ಇವರ ಸಹೋದರರಾದ ಸೈಯದ್ ಅಮೀನುದ್ದೀನ್ ಖಾದ್ರಿಯವರ ಎಡಭಾಗದಲ್ಲಿ ಬೇರೆಯದೇ ಪೀಠದ ಮೇಲೆ ಸ್ಥಿತವಿರುವುದು. ಇವರಿಗೆ ಸಂತಾನವಿರುವುದಿಲ್ಲ.

■

೬೦. ಸೈಯದ್ ಶಾಹ್ ಅಮೀನುದ್ದೀನ್ ಖಾದ್ರಿ ನೂರ್‌ದಯಾರ್ (ಖು)

ಇವರು ಸೈಯದ್ ಶಾಹ ಮುಹಮ್ಮದ್‌ಖಾದ್ರಿ ನೂರ್‌ದಯಾರ್(ಖು)ರ ನೂರದಯಾರ್‌ರ ಎರಡನೆಯ ಪುತ್ರರಾಗಿರುವರು. ಸಫರ್ ತಿಂಗಳ ೧೧ನೆಯ ದಿನಾಂಕದಂದು ನಿಧನ ಹೊಂದಿದರು. ಇವರ ಸಮಾಧಿಯು ಇವರ ತಂದೆಯವರ ಸಮಾಧಿಯ ಎಡಭಾಗದಲ್ಲಿ ಪೂರ್ವದಿಕ್ಕಿಗೆ ಒಂದೇ ಪೀಠದ ಮೇಲೆ ಇರುವದು. ಇವರಿಗೂ ಸಂತಾನವಿರುವದಿಲ್ಲ.

■

೬೧. ಸೈಯದ್ ಶಾಹ್ ಸುಲ್ತಾನ ಪೀರ್‌ಖಾದ್ರಿ ನೂರ್‌ದಯಾರ್ (ಖು)

ಇವರು ಹಜ್ರತ್‌ರ ಕಿರಿಯ ಪುತ್ರಾಗಿರುವರು. ಇವರ ನಿಧನ ದಿನಾಂಕ ತಿಳಿದುಬಂದಿಲ್ಲ, ಇವರ ಸಮಾಧಿಯು ತಮ್ಮ ತಂದೆಯವರ ಸಮಾಧಿಯ ಬಲಭಾಗದಲ್ಲಿ ಬೇರೆಯದೇ ಪೀಠದ ಮೇಲೆ ಸ್ಥಿತವಿರುವದು.

■

೬೨. ಹಜ್ರತ್ ಸೈಯದ್ ಶಾಹ್ ಮುಹಮ್ಮದ್ ಖಾದ್ರಿ ಮುತ್‌ವಕ್ಕಲಿ ನೂರ್ ದಯಾರ್(ಖು)

ಇವರು ಸೈಯದ್ ಸುಲ್ತಾನ್ ಪೀರ್ ಖಾದ್ರಿ(ಖು)ರವರ ಸುಪುತ್ರರಾಗಿರುವರು. ಇವರು ರಜ್ಜಬ್ ತಿಂಗಳ ೨೧ನೆಯ ದಿನಾಂಕದಂದು ನಿಧನ ಹೊಂದಿದರು. ಇವರ

ಸಮಾಧಿಯು ತಮ್ಮ ದೊಡ್ಡಪ್ಪನವರಾದ ಸೈಯದ್ ಮುಹಮ್ಮದ್ ಖಾದ್ರಿಯವರ ಪಾದದಡಿಯಲ್ಲಿ ಬೇರೆಯದೇ ಪೀಠದ ಮೇಲೆ ಇರುವದು.

■

೬೩. ಹಜ್ರತ್ ಸೈಯದ್ ಶಾಹ್ ಮುಹಿಯುದ್ದೀನ್ ಪೀರ್ ಖಾದ್ರಿ

ಇವರು ಸೈಯದ್ ಶಾಹ್ ಮುಹಮ್ಮದ್ ಮುತ್‌ವಕ್ಕಲಿಯವರ ಪುತ್ರರಾಗಿರುವರು. ಹಾಗೂ ಸೈಯದ್ ಇದ್ರೂಸ್‌ಖಾದ್ರಿ ಜಹಾಗೀರದಾರರ ನಿಂಗಮ್‌ವನೆಯವರ ಅಳಿಯರಾಗಿರುವರು. ಇವರು ಮೊಹರಂ ತಿಂಗಳ ೧೨ನೆಯ ದಿನಾಂಕದಂದು ನಿಧನರಾದರು. ಇವರ ಸಮಾಧಿಯು ತಮ್ಮ ತಂದೆಯವರ ಪಾದದಡಿಯಲ್ಲಿ ಉಪಸ್ಥಿತವಿರುವದು.

ಇವರೂ ಸಹ ಹಜ್ರತ್ ಸೈಯದ್ ಶಾಹ್ ಮುಹಮ್ಮದ್ ಮುತ್‌ವಕ್ಕಲಿಯವರ ಸುಪುತ್ರರಾಗಿರುವರು. ೨೬ನೆಯ ರಂಜಾನದಂದು ನಿಧನರಾದರು. ಇವರು ತಮ್ಮ ತಂದೆಯವರ ಸಮಾಧಿಯ ಎಡಪಕ್ಕದಲ್ಲಿ ಎರಡು ಸಮಾಧಿಗಳನ್ನು ಬಿಟ್ಟು ಮೂರನೆಯ ಸಮಾಧಿಯ ಸ್ಥಳದಲ್ಲಿ ಸಮಾಧಿಸ್ಥರಾಗಿರುವರು.

■

೬೫. ಸೈಯದ್ ಅಮೀನ್ ಪೀರ್ ಖಾದ್ರಿ ನೂರ್ದಯಾರ್ (ಖ)

ಇವರು ಸೈಯದ್ ಶಾಹ್ ಖಾದಿರ್ ಪೀರ್‌ಖಾದ್ರಿಯವರ ಪುತ್ರರಾಗಿರುವರು. ನಿಧನದ ದಿನಾಂಕವು ತಿಳಿದುಬಂದಿಲ್ಲ. ಇವರು ತಮ್ಮ ತಂದೆಯವರ ಸಮಾಧಿಯ ಬಲಭಾಗದಲ್ಲಿ ಸ್ವಲ್ಪದೂರದಲ್ಲಿ ಸಮಾಧಿಸ್ಥರಾಗಿರುವರು. ಇವರ ಪುತ್ರರಾದ ಸೈಯದ್ ಮುಹಿಯುದ್ದೀನ್ ಪೀರ್ ಖಾದ್ರಿ ಗೆಹಟ್ ಗ್ರಾಮ ಗದ್ವಾಲ ತಾಲೂಕಿನಲ್ಲಿ ಸಮಾಧಿಸ್ಥರಾಗಿದ್ದಾರೆ. ಹಾಗೂ ಅವರ ಪುತ್ರರಾದ ಸೈಯದ್ ಹೈದರ್‌ಖಾದ್ರಿ ನೂರ್ ದಯಾರ್‌ರು ಅಧೋನಿಯಲ್ಲಿ ಇರುವರು.

■

೬೬. ಹಜ್ರತ್ ಸೈಯದ್ ಶಾಹ್ ವಲಿ ಪೀರ್ ಖಾದ್ರಿ ನೂರ್‌ದಯಾರ್ (ಖ)

ಇವರು ಸೈಯದ್ ಪೀರ್ ಮುಹಿಯುದ್ದೀನ್ ಪೀರ್‌ಖಾದ್ರಿಯವರ ಪುತ್ರರಾಗಿರುವರು. ಇವರಿಗೆ ಯಾವುದೇ ಸಂತಾನವಿರುವುದಿಲ್ಲ. ಇವರು ರಬ್ಬಿಯುಸ್ಸಾನಿ ತಿಂಗಳ ೯ನೆಯ ದಿನಾಂಕದಂದು ಹಿಜ್ರಿಶಕೆ ೧೨೩೬ರಲ್ಲಿ ಮರಣವನ್ನಪ್ಪಿದರು. ಇವರ ಸಮಾಧಿಯು ಇವರ ತಂದೆಯವರ ಎಡಪಕ್ಕದಲ್ಲಿ ಪೂರ್ವದಿಕ್ಕಿಗೆ ಇರುವುದು.

■

೬೭. ಹಜ್ರತ್ ಸೈಯದ್ ಶಾಹ್ ಇಮಾಮ್ ಪೀರ್ ಖಾದ್ರಿ ನೂರ್‌ದಯಾರ್ (ಖ)

ಇವರು ಸೈಯದ್ ಮುಹಿಯುದ್ದೀನ್ ಪೀರ್‌ಖಾದ್ರಿಯವರ ಪುತ್ರರಾಗಿರುವರು ಹಾಗೂ ಸೈಯದ್ ಇದ್ರೂಸ್ ಖಾದ್ರಿ ಜಹಗೀರದಾರರ ಮೊಮ್ಮಗರಾಗಿರುವರು. ಇವರ ಸಮಾಧಿಯು ಸೈಯದ್ ಸುಲ್ತಾನ್‌ಪೀರ್ ಖಾದ್ರಿಯವರ ಸಮಾಧಿಯ ಬಲಭಾಗದಲ್ಲಿ ಕೊನೆಯ ಪೀಠದ ಮೇಲೆ ಸ್ಥಿತವಿರುವದು. ಇವರ ಸುಪುತ್ರರಾದ ಸೈಯದ್‌ಶಾಹ್ ಮುಹಿಯುದ್ದೀನ್ ಖಾದ್ರಿ ನೂರ್‌ದಯಾರ್‌ರಿರುವರು. ಇವರ ಸಮಾಧಿಯು ಅಥೋನಿಯಲ್ಲಿರುವದು. ಈಗ ಇವರ ಸುಪುತ್ರರಾದ ಸೈಯದ್ ಶಾಹ್ ಮುಹಮ್ಮದ ಸಾಹೇಬಖಾದ್ರಿ ನೂರ್‌ದಯಾರ್‌ರು ಪೀಠಾಧಿಪತಿಯಿರುವರು. ಹಾಗೂ ಅವರಿಗೆ ಓರ್ವ ಪುತ್ರರಿರುವರು. ಸೈಯದ್ ವಲಿ ಮುಹಿಯುದ್ದೀನ್ ಖಾದ್ರಿ ಎಂದು ಹೆಸರಿರುವದು. ಅವರು ರಾಯಚೂರಿನಲ್ಲಿರುವರು.

■

೬೮. ಹಜ್ರತ್ ಸೈಯದ್ ಶಾಹ್ ಹಾದಿನದೀಮ್ ಖಾದ್ರಿ (ಖ)

ಇವರು ಸೈಯದ್ ಹಾದಿನದೀಮ್ ಖಾದ್ರಿಯವರ ಸಹೋದರರಾಗಿರುವರು ಹಾಗೂ ಸೈಯದ್ ಶಾಹ್ ಮಾಅರೂಫ್ ಖಮೀಸ್ ಅಲ್‌ಖಾದ್ರಿಯವರ ತಾತರಾಗಿರುವರು.

ಸಫರ್ ತಿಂಗಳ ೧೧ನೆಯ ದಿನಾಂಕದಂದು ನಿಧನರಾದರು. ಇವರ ಸಮಾಧಿಯು ಇವರ ಸಹೋದರರ ಪುತ್ರರಾದ ಶಾಹ್ ಬಡೆಸಾಹೇಬ್‌ರ ಗುಂಬಜಿನಲ್ಲಿ ಇರುತ್ತದೆ.

■

೭೯. ಹಜ್ರತ್ ಸೈಯದ್ ಶಾಹ್ ಬಡೇಸಾಹೇಬ್ ಖಾದ್ರಿ (ಖ)

ಇವರು ಸೈಯದ್ ಶಾಹ್ ಮುಹಮ್ಮದ್ ಖಾದ್ರಿ ನೂರ್‌ದಯಾರ್‌ರ ಸಹೋದರರ ಪುತ್ರರಾಗಿರುವರು. ಇವರು ಮೊಹರಂ ತಿಂಗಳ ಮೊದಲನೆಯ ದಿನಾಂಕ ಚಂದ್ರದರ್ಶನದಂದು ನಿಧನರಾದರು. ಇವರ ಸಮಾಧಿಯು ರಾಯಚೂರಿನ ಪೂರ್ವದಿಕ್ಕಿಗೆ ಇರುವ ಕಬರಸ್ತಾನದಲ್ಲಿ ಇರುವುದು. ತಮ್ಮ ಚಿಕ್ಕಪ್ಪನವರಾದ ಸೈಯದ್ ಶಾಹ್ ಹಾದಿ ನದೀಮ್‌ಖಾದ್ರಿ (ಖ)ರವರ ಸಮಾಧಿಯ ಪಕ್ಕದಲ್ಲಿ ಇರುವುದು. ಈ ಕಬರಸ್ತಾನವು 'ಶಾಹ ಬಡೇಸಾಹೇಬ್ ರೋಜಾ' ಎಂದು ಪ್ರಸಿದ್ಧವಾಗಿದೆ. ಈ ರೋಜಾ ಸೈಯದ್ ಶಾಹ್ ಹಾದಿ ನದೀಮ್ ಖಾದ್ರಿಯವರ ಮೊಮ್ಮಗರಾದ ಸೈಯದ್ ಶಾಹ್ ಮಾಅರೂಫ್ ಖಮಿಸುಲ್ ಖಾದ್ರಿಯವರ ಸಂತಾನದಲ್ಲಿದ್ದ ಸೈಯದ್ ಶಾಹ ಮಾಅರೂಫ್ ಪೀರ್ ಖಾದ್ರಿಯವರ ಕಣ್ಗಾವಲಿನಲ್ಲಿ ಇದೆ. ಇವರ ಅನುಮತಿಯಿಲ್ಲದೇ ಅಲ್ಲಿ ಯಾರೂ ದಫನ್ ಆಗುವಂತಿಲ್ಲ.

■

೭೦. ಸೈಯದ್ ಶಾಹ್ ಮೀರಾಂ ಖಾದ್ರಿ (ಖ)

ಇವರೂ ಸಹ ಸೈಯದ್ ಶಾಹ್ ಮುಹಮ್ಮದ್ ಖಾದ್ರಿ ನೂರ್ ದಯಾರ್‌ರ ಸಂಬಂಧಿಗಳಲ್ಲಿ ಇರುವರು. ಇವರಿಗೆ ಸದಾಕಾಲ ಕಾಯಿಪಲ್ಲೆ ಹಾಗೂ ರೊಟ್ಟಿಯು ಬಹಳ ಹಿಡಿಸುತ್ತಿತ್ತು. ಅದಕ್ಕಾಗಿ ಇವರು 'ಸಾಗರೋಟಿ ಪೀರ್' ಎಂದು ಪ್ರಸಿದ್ಧಿ ಹೊಂದಿದರು ನಿಧನದ ದಿನಾಂಕವು ಲಭ್ಯವಾಗಿಲ್ಲ. ಇವರ ಸಮಾಧಿಯು ಭಾವಿಕಟ್ಟಿ ಓಣಿಯಲ್ಲಿ ಆಶೂರ್‌ಖಾನಾದ ಬಳಿಯಲ್ಲಿ ಇರುವದು.

■

೭೧. ಹಜ್ರತ್ ಸೈಯದ್ ಶಾಹ್ ಮುಹಿಯುದ್ದೀನ್ ಖಾದ್ರಿ ಮಾರಿಫತ್ ನೂರ್‌ದಯಾರ್ (ಖು)

ಇವರ ಹೆಸರಿನಲ್ಲಿ ಮಾರಿಫತ್ ನೂರ್‌ದಯಾರ್ ಶಬ್ದವು ಇವರಿಗೆ ನೂರ್‌ದಯಾರ್ ವಂಶದಿಂದ ಖಿಲಾಫತ್ ಲಭಿಸಿದೆ. ಶಾಬಾನ್ ತಿಂಗಳ ೨೫ರಂದು ನಿಧನರಾದರು. ಇವರ ಸಮಾಧಿಯು ಹಜ್ರಾಮೊಹಲ್ಲಾದಲ್ಲಿರುವ ಕಟ್‌ಕಾಲ್ವಾ ಮಸೀದೆಯ ಅಂಗಳದಲ್ಲಿರುವದು ಹಾಗೂ ಅಲ್ಲಿಯೇ ಇವರ ಸೇವಕರ ಸಮಾಧಿಗಳೂ ಇರುವವು. ಇವರ ಸಹೋದರರಾದ ಸೈಯದ್ ಖಾದಿರ್ ಬಾಷಾರವರ ಸಮಾಧಿಯು ರಾಯಚೂರಿನ ದಕ್ಷಿಣ ಭಾಗದಲ್ಲಿ ಕೊತ್‌ತಾಲಾರ್ ಸಮಾಧಿಗಳ ದಿಬ್ಬದ ಮೇಲೆ ಒಂದು ಕಡೆ ಇದೆ ಇದಕ್ಕೆ ಖಾದರ್ ಗುಂಡ ಎನ್ನುವರು. ಇವರ ನಿಧನದ ದಿನಾಂಕವು ೨೧ ರಜ್ಜಬ್ ಇರುವುದು ಹಾಗೂ ಇವರ ಸಂತತಿಯಲ್ಲಿ ಸೈಯದ್ ಮುಹಿಯುದ್ದೀನ್ ಖಾದ್ರಿ, ಶಿಷ್ಯ ಹಾಗೂ ಖಲೀಫಾರಾದ ಸೈಯದ್ ಶಾಹ ಮುಹಮ್ಮದ್ ಸಾಹೇಬ್ ಖಾದ್ರಿ ನೂರ್ದಯಾರ್‌ರು ರಾಯಚೂರಿನಲ್ಲಿ ಇರುವರು.

■

೭೨. ಹಜ್ರತ್ ಸೈಯದ್ ಇದ್ರುಸ್ ಖಾದ್ರಿ (ಖು)

ಇವರು ಸೈಯದ್ ಶಾಹ್ ಮುಹಿಯುದ್ದೀನ್ ಪೀರ್ ಖಾದ್ರಿ ನೂರ್‌ದಯಾರ್ (ಖು)ರ ಮಾವಂದಿರಾಗಿರುವರು. ಇವರಿಗೆ ಒಂದು ಜಾಗೀರು 'ನಿಂಗಮ್‌ವನೆ' ತಾಲೂಕಾ ಪತ್ತೆಕಂಡಾ ಜಿಲ್ಲಾ ಕರ್ನೂಲ್‌ನಲ್ಲಿ ಇರುವದು. ಈಗ ಆ ಜಾಗೀರು ಇವರ ಮೊಮ್ಮಗರಾದ ಸೈಯದ್ ಇಮಾಮ್ ಪೀರ್ ಖಾದ್ರಿಯವರ ಮೊಮ್ಮಗರಾದ ಸೈಯದ್ ಶಾಹ್ ಮುಹಮ್ಮದ್ ಸಾಹೇಬ ಖಾದ್ರಿ ನೂರ್‌ದಯಾರ್‌ರ ವಶದಲ್ಲಿದೆ. ಇವರ ವಾರ್ಷಿಕ ಉರೂಸುತ್ಸವವು ೨೧ ರಜ್ಜಬದಂದು ಆಗುವದು. ಇವರ ಸಮಾಧಿಯು ಶೇಖ ಜಲಾಲ ಸಾಹೇಬರ ಬೆಟ್ಟದ ಪಕ್ಕದಲ್ಲಿ ಪಶ್ಚಿಮ ದಿಶೆಯಲ್ಲಿ ಒಂದು ಗುಡ್ಡದ ಮೇಲೆ ಸ್ಥಿತವಿರುವುದು ಹಾಗೂ ಅಲ್ಲಿ ತಮ್ಮ ಮಗಳಾದ ಬಾನು ಬೀಬೀ ಸಾಹೇಬಾ ಅಂದರೆ ಸೈಯದ್ ಶಾಹ್ ಮುಹಿಯುದ್ದೀನ್ ಪೀರ್‌ಖಾದ್ರಿಯವರ ಪತ್ನಿಯವರ ಸಮಾಧಿ ಇರುವದು.

ಇಲ್ಲಿಗೆ ನೂರ್‌ದಯಾರ್ ವಂಶಸ್ಥರ ವಿವರವು ಕೊನೆಗೊಂಡಿತು.

■

೭೩. ಹಜ್ರತ್ ಸೈಯದ್ ಶಾಹ ಹಸನ್ ಪೀರ್ ಖಾದ್ರಿ ಸಿಬ್ಗತಲ್ಲಾಹಿ

ಇವರು ಸೈಯದ್ ಕರೀಂ ಮುಹಮ್ಮದ್ ಸಾನಿ ಉರ್ಫ್ ಪಾದಶಾಹ ಸಾಹೇಬ್ ಖಾದ್ರಿಯವರ ಪುತ್ರರಾಗಿರುವರು ಉಲ್ಲೇಖವಿದೆ. ಮೊದಲು ಇವರು ಬಿಜಾಪುರದಿಂದ ರಾಯಚೂರಕ್ಕೆ ಆಗಮಿಸಿ ಪಂಚ್‌ಬೀಬೀ ಬೆಟ್ಟದ ದಕ್ಷಿಣದೆಡೆಗೆ ಒಂದು ಬೇರೆಯ ಬೆಟ್ಟದ ಮೇಲೆ ಅಲ್ಲಿ ಹಜ್ರತ್ ಕಂಬಲ್ ಪೋಶ್(ಖು)ರ ಸಮಾಧಿಯಿದೆ. ಅಲ್ಲಿಯ ಒಂದು ಗವಿಯಲ್ಲಿ ವಾಸಿಸತೊಡಗಿದರು. ಆ ಅವಧಿಯು ಬಸಾಲತ್ ಜಂಗಬಹಾದ್ದೂರನ ಆಡಳಿತಾವಧಿಯಾಗಿತ್ತು. ಇರುಳಿನಲ್ಲಿ ನವಾಬರಿಗೆ ಸ್ವಪ್ನಾವಸ್ಥೆಯಲ್ಲಿ ಹಜ್ರತ್ ಬಳಿ ಹೋಗಲು ಸಂಜ್ಞೆಯಾಯಿತು. ನವಾಬ್‌ಸಾಹೇಬನು ಸ್ವತಃ ಹೋಗಿ ಹಜ್ರತ್‌ರನ್ನು ಕರೆತಂದನು ಹಾಗೂ ಏಳು ಗ್ರಾಮಗಳನ್ನು ಅಂದರೆ

೧. ದುಮ್ತೆ

೨. ಪನ್ನೂರ್

೩. ಖಾನಾಪೂರ್

೪. ಜಂಬಲದಿನ್ನಿ

೫. ನಂಗನ್‌ಖಾನ್

೬. ವಡ್ಡಿ ಕೋಟಕನೂರ್

೭. ಕೋಟಾಗಡ್ಡಾಗಳನ್ನು ಜಾಗೀರು ರೂಪದಲ್ಲಿ ನೀಡಿದನು. ಇವರು ಅಂದ್ರೂನಿ ಅರ್ಕಕಿಲ್ಲೆಯಲ್ಲಿ ಆಸಾರಷರೀಫದ ಓಣಿಯಲ್ಲಿ ಇರತೊಡಗಿದರು.

ನವಾಬನು ಪ್ರಾಚೀನ ಆಸಾರ ಷರೀಫದಲ್ಲಿಯೂ ಒಂದು ಮನೆಯನ್ನು ಹಿಜ್ರಿಶಕೆ ೧೨೨೭ರಲ್ಲಿ ನಿರ್ಮಾಣಗೊಳಿಸಿ ಇಟ್ಟನು. ಅದಕ್ಕಾಗಿ ಈ ಆಸಾರ್ ಷರೀಫನ್ನು ಪ್ರಾಚೀನ ಆಸಾರ್ ಷರೀಫ ಎಂತಲೂ ಕರೆಯುವರು. ಇದರ ದ್ವಾರದ ಮೇಲ್ಗಡೆ ಈ ವಿವರಗಳುಳ್ಳ ಫಲಕವಿದೆ.

ಬಿಸ್ಮಿಲ್ಲಾಹ್ ಹಿರ್ರಹಮಾ ನಿರ್ರಹೀಮ್ (ಪರಮದಯಾಮಯಿಯೂ, ಕರುಣಾಳುವೂ ಆದ ಅಲ್ಲಾಹುವಿನ ನಾಮದೊಂದಿಗೆ)

೧೨೨೭ ಹಿಜ್ರಿಶಕೆ, ಇನ್ನಾ ಫತ್‌ಹಾನಾ ಲಕಾಫತಾನಮುಬೀನ್ 'ಲಾ ಇಲಾಹ್ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹ್' ಸಿಬ್ಗತ್‌ಲ್ಲಾಹಿ ನಾಯಬೇ ರಸೂಲಲ್ಲಾಹ್ ಎಂದು ಬರೆಯುಲಾಗಿದೆ. ಈಗ ಆಸಾರ್‌ಷರೀಫ್‌ದ ಈ ಕೋಣೆಯು ಜೀರ್ಣಾವಸ್ಥೆಯಲ್ಲಿದೆ.

ಬೈಗನ್‌ಪಲ್ಲಿಯ ನವಾಬ್‌ನ ಪತ್ನಿಯು ಇವರ ಶಿಷ್ಯಳಾಗಿದ್ದಳು. ಇವರ ನಿಧನದ ನಂತರ ಅವಳು ಇವರ ಮಕಬರಾವನ್ನು ನಿರ್ಮಿಸಿದಳು. ಆಗ ಮಕಬರಾದ ಉತ್ತರ ದಿಕ್ಕಿನಲ್ಲಿ ಗೋಡೆಗಾಗಿ ಬುನಾದಿಯನ್ನು ಅಗೆಯಲಾಗಲು ಅಲ್ಲಿ ಒಂದು ಸಮಾಧಿಯು ಕಂಡುಬಂದಿತು. ಅದರಲ್ಲಿ ಒಂದು ಶವವು ಕಫನ್‌ದೊಂದಿಗೆ ಇಂದೇ ದಫನ್‌ಗೊಳಿಸಲಾಗಿದೆಯೇನೋ ಎಂಬಂತಿತ್ತು. 'ಇಸ್ತೆಖಾರಾ' ದಿಂದ ತಿಳಿದು ಬಂದದ್ದೇನೆಂದರೆ ಇವರ ಹೆಸರು ಸೈಯದ್ ಅಹ್ಮದ್ ಸಾಹೇಬ್ ಖಾದ್ರಿ(ಋ) ಎಂದು ಇರುವುದು.

ರಾಯಚೂರಿನಲ್ಲಿ ಇವರ ನಾಲ್ಕು ಖಲೀಫಾಗಳು ಪ್ರಸಿದ್ಧರಾಗಿರುವರು.

೧. ಖಾಜಿ ಮುಹಮ್ಮದ ಗೌಸ್‌ಖಾದ್ರಿ ಸಿಬ್ಗತ್‌ಲ್ಲಾಹಿ

೨. ಖತೀಬ್ ಮುಹಮ್ಮದ್ ಸುಲ್ತಾನ್ ಖಾದ್ರಿ ಸಿಬ್ಗತ್‌ಲ್ಲಾಹಿ

೩. ಆಶೂರ್ ಬೇಖಾದ್ರಿ ಸಿಬ್ಗತ್‌ಲ್ಲಾಹಿ

೪. ಆರೀಫ್ ಅಲಿ ಶಾಖಾದ್ರಿ ಸಿಬ್ಗತ್‌ಲ್ಲಾಹಿ

ಇವರಿಗೆ ಪುತ್ರರಿರುವದಿಲ್ಲ. ಈರ್ವರು ಪುತ್ರಿಯರು ಇದ್ದರು. ಇವರ ನಿಧನದ ದಿನಾಂಕವು ೨೧ ರಬ್ಬಿವುಲ್ ಅವ್ವಲ್‌ದಂದು ಇರುವದು. ಹೈದರಾಬಾದ್‌ದಿಂದ ಮರಳುತ್ತಿರುವಾಗ ಹಾದಿಯಲ್ಲಿ ಇವರ ನಿಧನವಾಯಿತು. ಅಲ್ಲಿ ಇವರ ಶವವನ್ನು ಆಚ್ಛಾದಿಸಿ ರಾಯಚೂರಕ್ಕೆ ತರಲಾಯಿತು. ಅರ್ಕಕಿಲ್ಲೆಯ ಒಳಗಡೆ ಪ್ರಾಚೀನ ಆಸಾರಷರೀಫದ ದಕ್ಷಿಣ ಭಾಗದಲ್ಲಿ ಹಜ್ರತ್ ಶೇಖ ಯುನೂಸ್‌ಸಾಹೇಬ್ ಬಕ್ಷಿ ಔಲಿಯಾರವರ ಪಾದದಡಿಯಲ್ಲಿ ದಫನ್ ಮಾಡಲಾಯಿತು. ಹಾಗೂ ಅಲ್ಲಿ ಇವರ ಆಪ್ತರ ಸಮಾಧಿಗಳೂ ಇರುವವು.

■

೭೪. ಹಜ್ರತ್ ಖಾಜಿ ಮುಹಮ್ಮದ್ ಗೌಸ್ ಖಾದ್ರಿ ಸಿಬ್ಗತ್‌ಲ್ಲಾಹಿ (ಋ)

ಇವರು ರಾಯಚೂರಿನ ಖಾಜಿ ಗುಲಾಂ ಹುಸೈನ್ ಸಾಹೇಬರು ಒಂದೇ ವಂಶಸ್ಥರು ಹಾಗೂ ಸೈಯದ್ ಹುಸೈನ್ ಪೀರ್ ಸಾಹೇಬ್ ಖಾದ್ರಿಯವರ ಖಲೀಫಾ ಆಗಿರುವರು. ಇವರ ನಿಧನದ ದಿನಾಂಕವು ತಿಳಿದು ಬಂದಿಲ್ಲ. ಇವರ ಸಮಾಧಿಯು ಅಂದ್ರೂನಿ ಅರ್ಕಕಿಲ್ಲಾದ ಜಾಮಿಯಾ ಮಸೀದಿಯ ಅಂಗಳದಲ್ಲಿ ಪೂರ್ವದಿಕ್ಕಿಗೆ ಇರುವದು. ಇವರ ಪುತ್ರರು ಹಾಗೂ ಖಲೀಫಾರಾದ ಪಾದಶಹ ಹುಸೈನಿ ಸಾಹೇಬ್

ಖಾದ್ರಿ ಸಿಬ್ಗತ್‌ಲ್ಲಾಹಿ, ಇವರ ಸಮಾಧಿಯು ಹೈದರಾಬಾದ್‌ನಲ್ಲಿ ಇರುವದು. ಇವರ ನಾಲ್ವರು ಖಲೀಫಾಗಳಿರುವರು.

೧. ಹಾಫೀಜ್ ರಸೂಲ್ ಸಾಹೇಬ್‌ಖಾದ್ರಿ ಸಿಬ್ಗತ್‌ಲ್ಲಾಹಿ

೨. ಗೌಸ್ ಸಾಹೇಬ್ ಖಾದ್ರಿ ಸಿಬ್ಗತ್‌ಲ್ಲಾಹಿ

೩. ಮೆಹರ್ ಅಲಿ ಶಾಹ್ ಖಾದ್ರಿ ಸಿಬ್ಗತ್‌ಲ್ಲಾಹಿ

ಈ ಮೂವರು ಜನರ ಸಮಾಧಿಗಳು ಹೈದರಾಬಾದ್‌ನಲ್ಲಿವೆ. ಮೆಹರ್ ಅಲಿ ಶಾಹ್ ಖಾದ್ರಿಯವರ ಖಲೀಫಾರಾದ ಹಜ್ರತ್ ನಬಿ ಶಾಹ್ ಸಾಹೇಬ್ ಸಿದ್ದೀಖಿ ಅಲ್ ಖಾದ್ರಿ ಸಿಬ್ಗತ್‌ಲ್ಲಾಹಿ ಕಂಬಲ್‌ಪೋಶ್ ಹೈದರಾಬಾದ್‌ದಲ್ಲಿ ಇರುವರು.

೪. ಸೈಯದ್ ಇಮಾಮುದ್ದೀನ್ ಖಾದ್ರಿ ಸಿಬ್ಗತ್‌ಲ್ಲಾಹಿ ಇವರ ಸಮಾಧಿಯು ದೇವನ್‌ಪಲ್ಲಿ ಗ್ರಾಮದಲ್ಲಿದೆ. ಇವರು ಖತೀಬ್ ಮುಹಮ್ಮದ್ ಜಮಾಲುದ್ದೀನ್ ಖಾದ್ರಿ ಸಿಬ್ಗತ್‌ಲ್ಲಾಹಿಯವರ ಅಳಿಯರಾಗಿರುವರು. ಹಾಗೂ ಅವರ ಪುತ್ರರಾದ ಸೈಯದ್ ಅಹ್ಮದ್ ಸಾಬ್‌ರು ದೇವನ್‌ಪಲ್ಲಿಯಲ್ಲಿ ಇರುವರು. ಇವರ ಪೂರ್ವಜರು ಅಧೋನಿಯ ಗಣ್ಯಮಾನ್ಯ ವ್ಯಕ್ತಿಗಳಾಗಿದ್ದರು.

■

೭೫. ಹಜ್ರತ್ ಖತೀಬ್ ಮುಹಮ್ಮದ್ ಸುಲ್ತಾನ್ ಖಾದ್ರಿ ಸಿಬ್ಗತ್‌ಲ್ಲಾಹಿ (ಖು)

ಇವರು ಸೈಯ್ಯದ್ ಹಸನ್ ಹಸನ್‌ಪೀರ್ ಖಾದ್ರಿ (ಖು)ರ ಖಲೀಫಾರಾಗಿರುವರು. ಇವರ ನಿಧನದ ದಿನಾಂಕ ಲಭ್ಯವಾಗಿಲ್ಲ. ಸಮಾಧಿಯು ರಾಯಚೂರಿನ ಜಾಮಿಯಾ ಮಸೀದಿ ಅಂಗಳದಲ್ಲಿದೆ. ಇವರ ಸುಪುತ್ರ ಹಾಗೂ ಖಲೀಫಾರಾದ ಖತೀಬ್ ಮುಹಮ್ಮದ್ ಜಮಾಲುದ್ದೀನ್ ಖಾದ್ರಿ ಸಿಬ್ಗತ್‌ಲ್ಲಾಹಿಯುವರು ದೇವನ್‌ಪಲ್ಲಿಯು ಜಹಾಗೀರದಾರರಾಗಿರುವರು. ಹಾಗೂ ಸುಲ್ತಾನ ಸಾಹೇಬ್‌ಖಾದ್ರಿಯುವರ ವಂಶಸ್ಥರಾಗಿರುವರು. ಇವರ ಸಮಾಧಿಯು ಅರ್ಕಕಿಲ್ಲೆಯ ಒಳಗೆ ಮೀರ್ ಹಸನ್ ಹಾಗೂ ಮೀರ್ ಹುಸೈನ್‌ರ ಸಮಾಧಿಯ ಬಳಿಯಲ್ಲಿ ಇರುವದು.

■

೭೬. ಹಜ್ರತ್ ಆಶೂರ್‌ಬೇಗ್ ಖಾದ್ರಿ ಸಿಬ್ಗತ್‌ಲ್ಲಾಹಿ (ಖು)

ಇವರು ಸೈಯ್ಯದ್ ಹಸನ್ ಪೀರ್ ಖಾದ್ರಿಯವರ ಖಲೀಫಾರಾಗಿರುವರು. ನಿಧನದ ದಿನಾಂಕ ತಿಳಿದುಬಂದಿಲ್ಲ. ಇವರ ಸಮಾಧಿಯು ಅರ್ಕಕಿಲ್ಲಾದ ಒಳಗೆ ಮಿಂಯಾ ಸಾಹೇಬ್ (ಖು)ರ ದರ್ಗಾ ಹಾಗೂ ಮಸೀದೆಯ ಕೆಳಗೆ ಇರುವ ತಲಾರ್ ಭಾವಿಯ ಬಳಿ ಇರುವದು.

■

೭೭. ಹಜ್ರತ್ ಆರೀಫ್ ಅಲಿಶಾಹ್ ಖಾದ್ರಿ ಸಿಬ್ಗತ್‌ಲ್ಲಾಹಿ (ಖು)

ಇವರೂ ಸಹ ಸೈಯ್ಯದ್ ಹಸನ್‌ಪೀರ್ ಖಾದ್ರಿಯವರ ಖಲೀಫಾರಾಗಿರುವರು. ಇವರು ಸದಾಕಾಲ ಮುರ್ಷಿದ್‌ರ ಸೇವೆಯಲ್ಲಿ ನಿರತರಾಗಿದ್ದರು. ಇವರ ಸಹೋದರರ ಪುತ್ರರಾದ ಗುಲ್ಜಾರ್ ಅಲಿಶಾಹ ಖಾದ್ರಿ ಹಾಗೂ ಅವರ ಪುತ್ರರಾದ ಬಹಾರ್ ಅಲಿಶಾಹ ಖಾದ್ರಿ ಸಿಬ್ಗತ್‌ಲ್ಲಾಹಿ ಈ ಈರ್ವರೂ ಇವರ ಪಾದದಡಿಯಲ್ಲಿ ಸಮಾಧಿಸ್ಥರಾಗಿರುವರು. ಇವರ ನಿಧನದ ದಿನಾಂಕವು ರಜ್ಜಬ ತಿಂಗಳ ೧೧ನೆಯ ದಿನವಾಗಿದೆ. ಇವರ ಸಮಾಧಿಯು ಕಿಲ್ಲಾದ ಹೊರಗಡೆ ಉತ್ತರ ದಿಕ್ಕಿಗೆ ತಹಸಿಲ್ದಾರರ ಹೊಸ ಕಚೇರಿಯ ಹಾದಿಯಲ್ಲಿ, ಒಂದು ಪೀಠದ ಮೇಲೆ ಇರುವದು.

■

೭೮. ಹಜ್ರತ್ ಸೈಯದ್ ಶಾಹ್ ವಲಿಯಲ್ಲಾಹ್ ಖಾದ್ರಿ ಸಿಬ್ಗತ್‌ಲ್ಲಾಹಿ (ಖು)

ಇವರು ಸೈಯದ್ ಹಸನ್ ಪೀರ್ ಖಾದ್ರಿಯವರ ಅಜ್ಜರಾಗಿರುವರು ಹಾಗೂ ಸೈಯದ್ ಶಾಹ್ ಜೈನುದ್ದೀನ್ ಖಾದ್ರಿಯವರ ಸಂತಾನದಿಂದಿರುವರು.

ಸೈಯದ್ ಹಸನ್‌ಪೀರ್ ಖಾದ್ರಿಯವರು ಇವರಿಗೆ ತರಬೇತಿಗೈದು ಖಿಲಾಫತ್ ನೀಡಿದರು. ಹಾಗೂ ಅವರ ನಿಧನದ ನಂತರ ಸೈಯದ್ ಹಸನ್ ಪೀರ್ ಖಾದ್ರಿಯವರ ಜಾಗೀರಿನ ಒಡೆಯರಾಗಿರುವರು. ನಿಧನದ ದಿನಾಂಕ ತಿಳಿದುಬಂದಿಲ್ಲ. ಇವರ ಸಮಾಧಿಯು ಅರ್ಕಕಿಲ್ಲಾದ ಒಳಗಡೆ ಆಸಾರ್ ಷರೀಫದ ಅಂಗಳದಲ್ಲಿ ಹಜ್ರತ್ ಶೇಖ ಯುಸೂಫ್ ಸಾಹೇಬ್ ಬಕ್ಷಿ ಔಲಿಯಾರ ಪಕ್ಕದಲ್ಲಿ ಸ್ವಲ್ಪ ದೂರದಲ್ಲಿ ಇರುವದು.

ಇವರ ಸುಪುತ್ರರಾದ ಸೈಯದ್ ಹಸನ್ ಊರ್ಫ್ ಮುರ್ಷೀದ್ ಪೀರಾಂ

ಖಾದ್ರಿ ಸಿಬ್ಗತ್‌ಲ್ಲಾಹಿಯವರ ನಿಧನವು ಪುತ್ತೂರಿನಲ್ಲಾಯಿತು. ಅಲ್ಲಿಯೇ ಅವರ ಸಮಾಧಿ ಇರುವದು. ಮುರ್ಷಿದ್ ಪೀರಾಂ ಸಾಹೇಬರಿಗೆ ಈರ್ವರು ಪುತ್ರರಿದ್ದು, ಓರ್ವ ಸೈಯದ್ ಖಾದಿರ್‌ಬಾಷಾ ಹಾಗೂ ಇನ್ನೋರ್ವರು ಸೈಯದ್ ಕರೀಮುಲ್ಲಾಹ ಸಾಹೇಬ್ ಖಾದ್ರಿ ಇರುವರು.

■

೭೯. ಹಜ್ರತ್ ಸೈಯದ್ ನೂರುದ್ದೀನ್ ಹುಸೈನಿ (ಖು)

ಇವರು ಹಜ್ರತ್ ಸೈಯದ್ ಅಶ್ರಫ್ ಜಹಾಂಗೀರ್ ಸಮ್‌ನಾನಿಯವರ ಸಂತಾನದಿಂದಿರುವರು. ಇವರ ಪೂರ್ವಜರು ಸೈಯದ್ ಶಾಹ್ ಹಾಫೀಜ್ ಹುಸೈನಿ ಹಾಗೂ ಅವರ ಪುತ್ರರಾದ ಸೈಯದ್ ಶಾಹ್ ಹಂಝಾ ಹುಸೈನಿ ಇರುವರು. ಇವರು ಬಿಜಾಪುರದಿಂದ ರಾಯಚೂರಕ್ಕೆ ಆಗಮಿಸಿದರು. ಇವರ ನಿಧನ ದಿನಾಂಕವು ಲಭ್ಯವಾಗಿಲ್ಲ. ಇವರ ಸಮಾಧಿಯು ರಾಯಚೂರಿನ ದಕ್ಷಿಣದಿಕ್ಕಿನೆಡೆಗೆ ಯರಗರಾದ ರಸ್ತೆಯಲ್ಲಿರುವ ಕೆರೆಯ ಬಳಿ ಇರುವುದು.

■

೮೦. ಹಜ್ರತ್ ಸೈಯದ್ ಬದ್ರುದ್ದೀನ್ ಹುಸೈನೀ (ಖು)

ಇವರು ನೂರುದ್ದೀನ್ ಹುಸೈನೀ(ಖು)ರ ಸುಪುತ್ರರಾಗಿರುವರು. ಇವರ ನಿಧನ ದಿನಾಂಕವು ಲಭ್ಯವಾಗಿಲ್ಲ. ಇವರ ಸಮಾಧಿಯು ಇವರ ತಂದೆಯವರ ಸಮಾಧಿಯ ಪಕ್ಕದಲ್ಲಿರುವದು.

■

೮೧. ಹಜ್ರತ್ ಸೈಯದ್ ಹಂಝಾ ಹುಸೈನಿ ಉರ್ಫ್ ಹುಸೈನಿ ಪೀರ್ (ಖು)

ಇವರು ಸೈಯದ್ ಬದ್ರುದ್ದೀನ್ ಹುಸೈನೀಯವರ ಪುತ್ರರಾಗಿರುವರು ಹಾಗೂ ಸೈಯದ್ ಶಾಹ ಚಾಂದಪೀರ್ ಖಾದ್ರಿ ಇಬ್ನ ಸೈಯದ್ ಶಾಹ್ ಮಾಅರೂಫ್

ಖಾದ್ರಿ ಗದ್ವಾಲರ ತಾತನಾಗಿರುವರು. ಇವರ ನಿಧನದ ದಿನಾಂಕವು ತಿಳಿದುಬಂದಿಲ್ಲ. ಇವರ ಸಮಾಧಿಯೂ ಸಹ ಇವರ ತಂದೆಯವರ ಸಮಾಧಿಯ ಪಾದದಡಿಯಲ್ಲಿ ಇರುವದು.

■

೮೨. ಅಬ್ದುಲ್ಲಾ ಶಾಹ್ ಸಾಹೇಬ್ (ಖು)

ಇವರು ಮಹಾಪುರುಷರಾಗಿದ್ದರು. ಹಾಗೂ ಧರ್ಮ ಪ್ರಸಾರಗಳಲ್ಲಿ ಸದಾ ನಿರತರಾಗಿದ್ದರು. ಧರ್ಮಬೋಧನೆಯಲ್ಲಿ ತಮ್ಮ ಇಡೀ ಜೀವಮಾನವನ್ನೇ ವ್ಯಯಿಸಿದರು. ಇವರ ಸಮಾಧಿಯು ಗಹಟಾಲೂಡಿ ಓಣಿಯಲ್ಲಿರುವ ಮಸೀದೆಯಲ್ಲಿ ಇರುವದು.

■

೮೩. ಹಜ್ರತ್ ಬಗ್ದಾದಿ ಸಾಹೇಬ್ (ಖು)

ಇವರ ಸ್ವದೇಶವು ತಿಳಿದುಬಂದಿಲ್ಲ. ಆದರೆ ಬಗ್ದಾದ್ ಇರಬಹುದೆಂದು ಊಹಿಸಬಹುದಾಗಿದೆ. ಇವರು ತಮ್ಮ ಪುತ್ರಿಯೊಂದಿಗೆ ರಾಯಚೂರಕ್ಕೆ ಆಗಮಿಸಿದರು. ಹಾಗೂ ಸೈಯ್ಯದ್‌ಶಾಹ್ ಖಮೀಸ್ ಖಾದ್ರಿಯವರ ಮನೆಗೆ ಬಂದು ತಮ್ಮ ಪುತ್ರಿಯನ್ನು ಹಜ್ರತ್‌ರ ಪತ್ನಿಯವರ ಬಳಿ ಇರಲೆಂದು ಬಯಸಿ ಅವರ ಒಳಮನೆಯಲ್ಲಿ ಕಳಿಸಿದರು. ಹಾಗೂ ತಾವು ಸ್ವತಃ ಹಜ್ರತ್‌ರ ದಿವಾನ್‌ಖಾನೆಯಲ್ಲಿ ಉಳಿದರು. ಹಾಗೂ ತಾವು ಬರುವಾಗ ತಮ್ಮ ಜೊತೆಗೆ ತಂದ ಕೆಲವು ಚಿನ್ನದ ನಾಣ್ಯಗಳನ್ನು ಹಜ್ರತ್‌ರ ಪತ್ನಿಯವರಿಗೆ ತಲುಪಿಸಿ ಇವು ನನ್ನ ಪುತ್ರಿಯ ವಿವಾಹಕ್ಕೆಂದು ಹೇಳಿದರು. ಈ ಅವಧಿಯಲ್ಲಿಯೇ ಹಜ್ರತ್‌ರ ನಿಧನವಾಯಿತು. ಇವರ ನಿಧನದ ದಿನಾಂಕವು ತಿಳಿದುಬಂದಿಲ್ಲ. ಇವರ ಸಮಾಧಿಯು ಅಯ್ಯಾಭಾವಿಯ ಪಶ್ಚಿಮ ದಿಕ್ಕಿಗೆ ಇರುವದು. ಇವರ ಪುತ್ರಿಯೂ ಸಹ ನಿಧನ ಹೊಂದಿದರು ಹಾಗೂ ಅವರನ್ನು ಸಹ ಅವರ ತಂದೆಯವರ ಪಕ್ಕದಲ್ಲಿ ಸಮಾಧಿಗೊಳಿಸಲಾಯಿತು. ಬೀಬೀ ಸಾಹೇಬಾರವರು ಆ ಚಿನ್ನದ ನಾಣ್ಯಗಳಿಂದ ಒಂದು ಮಕಬರಾವನ್ನು ನಿರ್ಮಿಸಿದರು. ಅದು ಈಗಲೂ ಸಹ ಇರುವದು.

■

೮೪. ಹಜ್ರತ್ ಸೈಯದ್ ಮುಸ್ತಫಾ ಖಾದ್ರಿ (ಖ)

ಇವರು ಗುಲ್ಬರ್ಗಾ ಷರೀಫ್‌ದಿಂದ ರಾಯಚೂರಕ್ಕೆ ಆಗಮಿಸಿದರು. ಹಾಗೂ 'ಸಬ್ಜಪೋಶ್' ಎಂದು ಪ್ರಸಿದ್ಧರಾಗಿರುವರು. ಇವರಿಗೆ ಇಲ್ಲಿಯ ಆಡಳಿತಗಾರರಿಂದ ಜಾಗೀರಾಗಿ ಜಮೀನು ಲಭಿಸಿತು. ಅವುಗಳು ಇಂದಿಗೂ ಇವೆ.

ಇವರ ಸಂತಾನವು ಸೈಯದ್ ಸಾಹೇಬ್ ಹಸನ್ ಸಾಹೇಬ್ ಇಬ್ನ್ ಸೈಯದ್ ಕರೀಂ ಸಾಹೇಬ್ ಇಬ್ನ ಸೈಯದ್ ಹಕ್ಕಲ್ಲಾಹ್ ಶಾಹ್ ಸಾಹೇಬ್ ಇಬ್ನ ಸೈಯದ್ ಮುಸ್ತಫಾ ಖಾದ್ರಿ ಉಪರೋಕ್ತ ಹಾಗೂ ಅವರ ಪುತ್ರರಾದ ಸೈಯದ್ ಮುಹಿಯುದ್ದೀನ್ ಖಾದ್ರಿ ಮುರೀದ್ ಹಾಗೂ ಖಲೀಫಾ ಸೈಯದ್ ಶಾಹ್ ಮುಹಮ್ಮದ್ ಖಾದ್ರಿ ನೂರ್ ದರಿಯಾ ರಾಯಚೂರಿನಲ್ಲಿ ಇರುವರು.

ಇವರ ನಿಧನದ ದಿನಾಂಕವು ಲಭ್ಯವಾಗಿಲ್ಲ. ಸಮಾಧಿಯು ರಾಯಚೂರಿನ ಉತ್ತರದಿಕ್ಕಿಗೆ ಹಜ್ರತ್ ಸೈಯದ್ ಶಂಸ ಆಲಂ ಹುಸೈನಿ (ಖ) ದರ್ಗಾದ ಎದುರಿಗೆ ಪೂರ್ವದಿಕ್ಕಿಗೆ ಇರುವುದು.

■

೮೫. ಹಜ್ರತ್ ಸೈಯದ್ ಕರೀಂ ಸಾಹೇಬ್ ಖಾದ್ರಿ (ಖ)

ಇವರು ಹಾಗೂ ಸಾಲಗೊಂಡಾದ ಸೂಫಿವಂಶಸ್ಥರ ಅಜ್ಜ ಓರ್ವರೇ ಆಗಿರುವರು. ನವಾಬ್ ಬಸಾಲತ್ ಜಂಗ್ ಬಹಾದ್ದೂರರ ಅವಧಿಯಲ್ಲಿ ರಾಯಚೂರಕ್ಕೆ ಆಗಮಿಸಿ ಕಿಲ್ಲಾದ ನವರಂಗ ದ್ವಾರದ ಬಳಿಯ ಒಂದು ಮನೆಯಲ್ಲಿ ವಾಸಿಸತೊಡಗಿದರು. ಇವರು ಮಹಾಪುರುಷರಾಗಿದ್ದರು. ಹಾಗೂ ಧರ್ಮಬೋಧನೆ, ಧರ್ಮಪ್ರಚಾರಗಳಲ್ಲಿ ತೊಡಗಿದ್ದರು. ಹಲವಾರು ಆಡಳಿಗಾರರು ಹಜ್ರತ್‌ರ ಅನುಯಾಯಿಗಳಾಗಿದ್ದರು. ರಾಯಚೂರಿನ ಯರಗರಾ ರಸ್ತೆಯ ಸಮೀಪ ಒಂದು ಉದ್ಯಾನವಿದೆ. ಆ ಉದ್ಯಾನವು ಹಜ್ರತ್‌ರ ಹೆಸರಿನಿಂದಲೇ ಪ್ರಸಿದ್ಧವಿದೆ. ಇವರು ಹುತಾತ್ಮರಾಗಿರುವರು. ಹುತಾತ್ಮರಾದ ಘಟನೆಯು ಹೀಗೆ ವಿವರಿಸಲ್ಪಟ್ಟಿದೆ. ರಾಯಚೂರಿನಲ್ಲಿ ಪೂರ್ವದಿಕ್ಕಿಗಿರುವ ಒಂದು ಮಸೀದೆಯಿತ್ತು. ಅಲ್ಲಿ ರಂಜಾನಿನ ತಿಂಗಳಿನಲ್ಲಿ "ತರಾವಿಹ್‌ನಮಾಜ್" ಜರುಗುತ್ತಿತ್ತು. ಅಲ್ಲಿ ಮಸೀದೆಯ ಸುತ್ತಲೂ ಮೆಹದ್ವಿ ಪಠಾಣರ ಮನೆಗಳಿದ್ದವು. ಅವರಿಗೆ ತರಾವಿಹ ನಮಾಜಿನ ತಸ್ಬಿಯ ಧ್ವನಿಯು ಹಿಡಿಸುತ್ತಿರಲಿಲ್ಲ. ಈ ಕಾರಣಕ್ಕೆ ಗುಂಪು ಘರ್ಷಣೆ ಉಂಟಾಯಿತು. ಮುಸ್ಲಿಮ್‌ರು ಇವರಿಗೆ ನಾಯಕತ್ವ ವಹಿಸಿದರು. ಆಗ ಹಜ್ರತ್‌ರು

ಓಣಿಯು ಜನರೊಂದಿಗೆ ಅಲ್ಲಿ ಹೋದರು. ಆದರೆ ಅಲ್ಲಿ ಪರಿಸ್ಥಿತಿಯು ಉದ್ರೇಕಮಯವಾಗಿ ರಕ್ತಪಾತವಾಯಿತು. ಓಣಿಯ ೬೦ ಮುಸ್ಲಿಮ್‌ರು ಹಾಗೂ ಹಲವಾರು ಪಠಾಣರು ಹತರಾದರು ಹಾಗೂ ಹಜ್ರತ್‌ರೂ ಹುತಾತ್ಮರಾದರು. ನವಾಬ್ ಬಹಾದ್ದೂರರ ಸೈನಿಕರ ಆಗಮನದಿಂದ ಪರಿಸ್ಥಿತಿಯು ನಿಯಂತ್ರಣಕ್ಕೆ ಬಂದಿತು.

ಹುತಾತ್ಮರೆಲ್ಲರಿಗೂ ಹಜ್ರತ್‌ರ ಹೆಸರಿನ ಉದ್ಯಾನದಲ್ಲಿ ಹಜ್ರತ್‌ರೊಂದಿಗೆಯೇ ದಫನ್ ಮಾಡಲಾಯಿತು. ಹಜ್ರತ್‌ರ ಸಮಾಧಿಯು ಪೀಠದ ಮೇಲೆ ಇರುವದು ಹಾಗೂ ಪಠಾಣರಿಗೆ ಕೆರೆಯ ಬಳಿ ಸಮಾಧಿಸ್ಥಗೊಳಿಸಲಾಯಿತು. ಹಜ್ರತ್‌ರ ಸಂಬಂಧಿಕರು ಸಾಲಗೊಂಡಾ, ಹೈದರಾಬಾದ್ ಹಾಗೂ ರಾಯಚೂರಿನಲ್ಲಿ ಇರುವರು.

■

೮೬. ಹಜ್ರತ್ ಸಿಕಂದರ್ ಬಾದಶಹ (ಖ)

ಇವರು ಮಹಾಪುರುಷರಾಗಿದ್ದರು. ಮರಣದ ದಿನಾಂಕವು ತಿಳಿದುಬಂದಿಲ್ಲ. ಓಣಿಯವರು ಷವ್ವಾಲಿನ ಒಂದನೆಯ ದಿನಾಂಕದಂದು ಉರುಸುತ್ಸವ ಆಚರಿಸುವರು.

ಹಜ್ರತ್‌ರ ಸಮಾಧಿಯು ರಾಯಚೂರಿನ ಪೂರ್ವದಿಕ್ಕಿಗೆ ಖ್ವಾಜಾ ಗೌಡಾ ಮಸ್ತಾಜರ್‌ರ ದೊಡ್ಡ ಮನೆಯ ಬಳಿ ರಸ್ತೆಯ ಬದಿಯಲ್ಲಿ ಇರುವದು.

ಆ ಅವಧಿಯ ಆಡಳಿತಗಾರರು ಆಡಳಿತಗಾರರು ಸೂಫಿವರ್ಯರ ಶೃದ್ಧಾಳುಗಳಾಗಿದ್ದರು. ಅವರ ಹೆಸರುಗಳು ಹೀಗಿವೆ.

೧. ನವಾಬ್ ತಾಲಿಬ್ ಮುಹಿಯುದ್ದೀನ್‌ಖಾನ್ ಬಹಾದ್ದೂರ್

೨. ನವಾಬ್ ಹಿದಾಯತಲ್ಲಾಹ್‌ಖಾನ್ ಬಹಾದ್ದೂರ್

೩. ನವಾಬ್ ಮುಹಮ್ಮದ್ ಹುಸೈನ್‌ಖಾನ್ ಬಹಾದ್ದೂರ್ ಗಹಟಲಾ ಹಾಗೂ

೪. ನೂರ್ ಮುಹಮ್ಮದ್ ಸಾಹೇಬ್ ಇರುವರು.

ಈ ವಿಧವಾಗಿ ರಾಯಚೂರಿನ ಹಲವಾರು ಸೂಫಿಗಳ ಮಾಹಿತಿ ಇರುವದು.

'ರೌಜತುಲ್ ಔಲಿಯಾ'ವು ಇಲ್ಲಿ ಸಮಾಪ್ತಗೊಳ್ಳುತ್ತದೆ. ಬಿಜಾಪುರದ ಸೂಫಿಗಳ ವಿವರವು ಇಲ್ಲಿ ಅಧಿಕೃತವಾಗಿ ಸಂಗ್ರಹಿಸಲ್ಪಟ್ಟಿದೆ. ಇದಕ್ಕೆ ಕಾರಣರಾದ ಮುಹಮ್ಮದ್ ಇಬ್ರಾಹಿಂ ಜುಬೇರಿಯವರ ಪ್ರಯತ್ನವಿಲ್ಲಿ ಶ್ಲಾಘನೀಯ.

ಈ ಗ್ರಂಥದಲ್ಲಿ ಆದಿಲ್‌ಶಾಹಿ ಪೂರ್ವಕಾಲದಲ್ಲಿ ಪ್ರಾರಂಭದಿಂದ ಹಿಡಿದು ಬಿಜಾಪುರಕ್ಕೆ ಆಗಮಿಸಿದ ಸೂಫಿಗಳ ವಿವರವು ಹಾಗೂ ಆದಿಲ್‌ಶಾಹಿ ಕಾಲದಲ್ಲಿ ಆಗಮಿಸಿ ನಗರವನ್ನು ದಿವ್ಯಪ್ರೇಮದಿಂದ ಉಜ್ವಲಗೊಳಿಸಿದ ಸೂಫಿವರ್ಯರ ಹಾಗೂ ಮಹಿಳಾ ಸೂಫಿಗಳ ವಿವರವಿಲ್ಲಿ ಲಭ್ಯವಿರುವದು ವಿಶೇಷ.

ಇತಿಹಾಸದ ಈ ಸಮೃದ್ಧ ಅವಧಿಯ ಬೆಳಕು, ದೀರ್ಘಾವಧಿಯ ಕಾಲಚಕ್ರದ ಕೆಳಗೆ ಸಿಕ್ಕು ಅಪ್ಪಚ್ಚಿಯಾಗಿ ಹೇಳಹೆಸರಿಲ್ಲದಂತಾಗಬಹುದಾದ ಮಹಾಪುರುಷರ ವಿವರಗಳು, ಅವರ ಸಮಾಧಿಸ್ಥಳಗಳು, ನಿಧನದ ದಿನಾಂಕ, ಹಿಜರಿ, ಉರುಸುತ್ಸವದ ವಿಶೇಷ ಮಾಹಿತಿ ಇಲ್ಲಿ ಸಂಗ್ರಹಿಸಲ್ಪಟ್ಟು ವರ್ತಮಾನದವರೆಗೂ ವಿಶೇಷವಾಗಿ ಉಳಿದು ಬಂದು, ಈಗ ಕನ್ನಡಕ್ಕೆ ಅನುವಾದಗೊಂಡು ಲಭ್ಯವಾಗುತ್ತಿರುವದು ನಮ್ಮ ನಿಮ್ಮೆಲ್ಲರ ಭಾಗ್ಯವೇ ಸರಿ.

ಅಸಂಖ್ಯ ಔಲಿಯಾಗಳಿಲ್ಲಿ ಸಮಾಧಿಸ್ಥರಾಗಿರುವರು 'ರೌಜತುಲ್ ಔಲಿಯಾಯೇ ಬಿಜಾಪುರ ಗ್ರಂಥದ ಉರ್ದು ಅನುವಾದದ ಕೊನೆಯಲ್ಲಿ ನೀಡಿದ ಔಲಿಯಾಗಳ ಹೆಸರಿನ ಪಟ್ಟಿಯು ಮುನ್ನೂರಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ವಿವರವಿದೆ.

ಹಿಜರಿ ೧೩೧೪ರಲ್ಲಿ ಈ ಪಟ್ಟಿಯನ್ನು ಸಿದ್ಧಗೊಳಿಸಲಾಗಿತ್ತು. ಆದರೆ ತದನಂತರ ಅದೆಷ್ಟು ಔಲಿಯಾಗಳು ಇಲ್ಲಿ ಆಗಮಿಸಿದ್ದಾರೋ ಲೆಕ್ಕವಿಲ್ಲ. ವಿವಿರಗಳು ಲಭ್ಯವಿಲ್ಲ. ಅದರೆ ಸೂಫಿ ಪರಂಪರೆಗಳಾದ ಚಿಷ್ತೀಯಾ, ಖಾದ್ರಿಯಾ ಹಾಗೂ ಶತ್ತಾರಿಯಾಗಳು ಪ್ರಮುಖವಾಗಿ ನೆಲೆಸಿದ್ದು ಕಂಡುಬರುತ್ತದೆ.

ಇಬ್ರಾಹಿಂ ಆದಿಲ್‌ಶಾಹಿ ದ್ವಿತೀಯನ ಅವಧಿಯಲ್ಲಿ ಸೂಫಿಗಳ ವಿದ್ವಾಂಸರ ಆಗಮನವು ಬಹುಸಂಖ್ಯೆಯಲ್ಲಿ ಆಯಿತು. ಅದಕ್ಕೆ ಒಂದು ಕಾರಣ– ಆ ಕಾಲದಲ್ಲಿ ರಾಜಕೀಯದಲ್ಲಿ ಉದ್ಭವಿಸಿದ ಇರಾನಿನ ಅಶಾಂತ ವಾತಾವರಣ, ಗುಜರಾತ್ ಹಾಗೂ ಬೀದರ್ ಮೇಲೆ ಮೊಘಲರ ದಾಳಿ, ಏಕಾಂತಕ್ಕೆ ಭಂಗ ತಂದು ನೆಲೆ ತಪ್ಪಿಸಿದ್ದು ಹಾಗೂ ಅದೇ ಬಿಜಾಪುರ ಶಾಂತಿ, ಸಮೃದ್ಧಿಯ ನೆಲೆವೀಡಾಗಿ ಪರಿವರ್ತಿತವಾಗಿದ್ದು ಸ್ವತಃ ದೊರೆಯೇ ತುಂಬು ಗೌರವಾದರಗಳೊಂದಿಗೆ ಮಹಾಪುರುಷರನ್ನು ಆಹ್ವಾನಿಸಿ ಬರಮಾಡಿಕೊಂಡಿದ್ದು ಹಾಗೂ ಇಲ್ಲಿ ಖಾನಖಾಹ್, ಮದ್ರಸಾಗಳಿಗೂ ಸಹಾಯ ಹಸ್ತ ನೀಡಿದನು. ಹೀಗಾಗಿ ಬಿಜಾಪುರ ಪ್ರದೇಶ ಸೂಫಿಗಳ ನಗರವಾಯಿತಲ್ಲದೇ ಇದಕ್ಕೆ 'ಮದೀನತಲ್ ಔಲಿಯಾ' ಎಂಬ ಹೆಸರೂ ಪ್ರಸಿದ್ಧಗೊಂಡಿತು.

■

*

ಪ್ರಸಿದ್ಧ ಪುಸ್ತಕಗಳ ವಿವರವು

ಮುಕ್ತೂಬಾತೆ ರೆಹ್ಮಾನಿ : ಇದರ ಲೇಖಕರು–ಹಜ್ರತ್ ಸುಲ್ತಾನ್ ಅಬ್ದುಲ್ ರೆಹಮಾನ್ ಅಲ್ ಹುಸೈನಿ ಅಲ್ ಖಾದ್ರಿ ಅಲ್ ಶತ್ತಾರಿ ಸಿಬಗತುಲ್ಲಾಹೀ ಇರುವರು.

ಈ ಪ್ರಸ್ತಕದಲ್ಲಿ ನಾಲ್ಕು ಲೇಖನಗಳಿರುವವು.

೧) 'ಆತ್ಮ'ದ ಕುರಿತು ವಿವರಣೆ ಇದೆ.

೨) 'ಹೃದಯ'ದ ಬಗ್ಗೆ ವಿಶದ ವಿವರಣೆ ಇದೆ.

೩) 'ನಮಾಜ್'ದ ಮಹತ್ವ ಅರುಹಲಾಗಿದೆ.

೪) 'ಮುಹಮ್ಮದ್(ಸ)' ಪ್ರವಾದಿಯವರ ವಿವರವಿದೆ.

ಹಾಗೂ ಇವರದೇ ಇನ್ನೊಂದು ಗ್ರಂಥವಾದ 'ನಫ್ಸೇ–ರೆಹ್ಮಾನಿ' ಇರುವದು.

ಬಹರುಲ್ ಹಯಾತ್ : ಲೇಖಕರು–ಶೇಖ ಮುಹಮ್ಮದ್ ಗೌಸ್ ಗವಾಲಿಯಾರಿ, ಇವರಲ್ಲಿ ಮುನ್ನುಡಿ ಹಾಗೂ ೧೦ ಅಧ್ಯಾಯಗಳಿರುವವರು. ಇವರದೇ ಇನ್ನೊಂದು ಗ್ರಂಥವಾದ 'ಜಾರಾದೆ ಗೌಸಿಯಾ' ಇರುವದು.

ಮದೀನತುಲ್ ಮಖಾಸಿದ್' : ಮುಹಮ್ಮದ್(ಸ)ರ ಪ್ರಶಂಸೆಯ ವಿವರವಿದೆ. ಇದು 'ಕಸೀದಯೇ ಬುರ್ದಾ ಷರೀಫ್'ದ ಅನುವಾದವಾಗಿದೆ. ಇದನ್ನು ಹಜ್ರತ್ ಮೌಲಾನಾ ಹಾಜಿ ಷಾ ಬಾಖಿ ಸಾಹೇಬ ಖಾದ್ರಿ ಅಲ್‌ಶತ್ತಾರಿ ಸಿಬಗತುಲ್ಲಾಹಿ ಇರುವರು.

ಮಜ್ಮೂಯೇ ನಾತ್ : ಇದರ ಲೇಖಕರು ಗುಲಾಂ ಜನಾಬ ಮೌಲ್ವಿ ಮೀರ್ ಅಹ್ಮದ್ ಅಲಿ ಸಾಹೇಬ್ ಖಾದ್ರಿ ಇರುವರು.

■

*

ಅನುಬಂಧಗಳು

ಅನುಬಂಧ–೧

ಸೂಫಿಗಳ ಉರುಸುತ್ಸವ, ದಿನಾಂಕ ಮತ್ತು ಸಮಾಧಿಗಳ ವಿವರ

ಕ್ರಮ ಸಂಖ್ಯೆ	ಹೆಸರುಗಳು	ಮರಣ ದಿನ	ಸಮಾಧಿ ಸ್ಥಳ	ವಿವರಣೆ
೧	ಶೇಖ ಮಹಾಬರಿ ಖಿಂಡಾಯತ್	ರಜ್ಜಬ್ ತಿಂಗಳ ೨೧ನೆಯ ದಿನಾಂಕ	ಆರ್ಕಕಿಲ್ಲಾ ಆನಂದ ಮಹಲ್	ಪ್ರಾಂಗಣವು ಕಟ್ಟೆಗೆಯಿಂದ ನಿರ್ಮಿಸಲ್ಪಟ್ಟಿದೆ
೨	ಮಗ್ದೂಮ್ ಶೇಕ ಐನುದ್ದೀನ್ ಗಂಜುಲ್ ಉಲೂಮ್	೨೭, ಜಮಾದಿಲ್ ಅವ್ವಲ ೭೯೫ ಹಿಜ್ರಿ ಶಕೆ	ಫತೇಹ ದ್ವಾರದ ಹತ್ತಿರ	ಸಮಾಧಿಯ ಮೇಲೆ ಗುಂಬಜ್ ಇರುವದು
೩	ಸುಲ್ತಾನ್ ಶೇಕ ಜಿಯಾವುದ್ದೀನ್ ಗಜ್ನವಿ	೨೨ ಶಾಬಾನ್	ಹಜ್ರತ್ ಗಂಜುಲ್ ಉಲೂಮ್(ಖ) ದರ್ಗಾದ ಹತ್ತಿರ	ಸಮಾಧಿಯ ಮೇಲೆ ಗುಂಬಜ್ ಇರುವದು
೪	ಶಾಹ್ ಹಾಫೀಜ್ ಹುಸೈನಿ	೧೩ ಸಫರ್	ಆಸಾರ್ ಷರೀಫ್ ಹತ್ತಿರ	ಸಮಾಧಿಯ ಮೇಲೆ ಗುಂಬಜ್ ಇರುವದು
೫	ಶಾಹ್ ಹಂಝಾ ಹುಸೈನಿ	೮ ಶಾಬಾನ್	ಆಸಾರ್ ಷರೀಫ್ ಹತ್ತಿರ	ಸಮಾಧಿಯ ಮೇಲೆ ಗುಂಬಜ್ ಇರುವದು
೬	ಹಾಜಿ ರೂಮಿ	೨೨ ಜಿಲ್ಕದಾ, ೫೫೫ ಹಿಜ್ರಿಶಕೆ	ಶಹಾಪೇಟ ಹತ್ತಿರ	ಪ್ರಾಂಗಣವು ಕಟ್ಟೆಗೆಯಿಂದ ನಿರ್ಮಿಸಲ್ಪಟ್ಟಿದೆ
೭	ಪೀರ್ ನಸ್ರುಲ್ಲಾಹ್ ವಲಿ	೨೪ ರಜ್ಜಬ್	ಹಜ್ರತ್ ನಯೀಮಲ್ಲಾಹ್(ಖ)ರ ಸಮಾಧಿಯ ಹತ್ತಿರ ಶಾಹಪುರ ದರವಾಜಾ	ಸಮಾಧಿಯ ಮೇಲೆ ಗುಂಬಜ್ ಇರುವದು
೮	ಶಾಪ್ ಹೈದರ್	–	–	–
೯	ಸೈಯದ್ ಅಲಿ ಬಂಗಾಲಿ	–	–	–
೧೦	ಖಲಂದರ್ ಅಲಿ	–	–	–
೧೧	ಶಾಹ್ ಕಾಸಿಂ ಖಾದ್ರಿ	೨೭. ಮೊಹರ್ರಂ	ಹೈದರ್ ಖಾನ್ ಮಸೀದೆ ಹತ್ತಿರ (ಗಚ್ಚಿ ಮಹಲ್ ಎದುರಿಗೆ)	ಗುಂಬಜ್ ಇರುವದು
೧೨	ಶಾಹ್ ಹಾಷಿಂ ಹುಸೈನಿ ಅಲ್ವಿ	೯ ರಂಜಾನ್	ಪಾದಶಹಪುರ (ರೇಲ್ವೆ ಸ್ಟೇಷನ್ ರಸ್ತೆ)	ಗುಂಬಜ್ ಇರುವದು
೧೩	ಶಾಹ್ ಬುರ್ಹಾನುದ್ದೀನ್ ಹುಸೈನಿ	೭ ಜಿಲ್‌ಖದಾ	ತಮ್ಮ ಅಜ್ಜಂದಿರಾದ ಹಾಷಿಂಪೀರ್‌ರ ಗುಂಬಜಿನಲ್ಲಿ	ಗುಂಬಜ್ ಇರುವದು
೧೪	ಮಿಂಯಾ ಅಬ್ದುಲ್ ಫತಹ ಆಶಿಕ್	–	–	–
೧೫	ಪೀರ್ ಮಕ್ಸೂದ್	೬. ರಂಜಾನ್	ಅಲ್ಲಾಪುರ ದರವಾಜಾದ ಬಳಿ	ಪಾಂಗ್ರಣವಿದೆ

೧೬	ಪೀರ್ ಬಡಬಡ	–	ಫೈಸಲ್ ದರವಾಜಾ, ಪಾಶಾಪುರ	–
೧೭	ಶೇಖ ಮುಹಮ್ಮದ್ ಶಿರಾಜ್ ಜುನೈದಿ	–	ಜಾಮಿಯಾ ಮಸೀದೆ ಹತ್ತಿರ	–
೧೮	ಶಾಹ್ ಹಜ್ರತ್ ಹುಸೈನಿ	೨೭ ರಂಜಾನ್	ಅಬುತುರಾಬ್ ಬರ್ಖಾರ್	ಸಮಾಧಿಯ ಮೇಲೆ ಗುಂಬಜ್ ಇದೆ
೧೯	ಖ್ವಾಜಾ ಮೊಯಿನ್	–	–	–
೨೦	ಪೀರ್ ಮಿಠ್ಠೆ	೧೧ ರಜ್ಜಬ್	ನಗರದ ಹೊರಗಡೆ ಪೂರ್ವದಿಕ್ಕಿಗೆ ಫತೇಹಪುರದಲ್ಲಿ ಇರುವದು	ಪಾಂಗ್ರಣವಿದೆ
೨೧	ಶಾಹ ಅಬ್ದುಸ್ಸಲಾಮ್ ಶತ್ತಾರಿ	–	ನವಾಯತ್ ಮಸೀದೆ ಅನಾಹೊಸೂರರ ಹವೇಲಿ, ಬಿಜಾಪುರ	ಪಾಂಗ್ರಣವಿದೆ
೨೨	ಶೇಖ ಅಬ್ದುಲ್ ಸಮದ್ ಖುರ್ದ್	೫ ಮೊಹರ್ರಂ	ಶೇಖ ಅಹ್ಮದ್ ಸಾಹೇಬ್‌ರ ಗುಂಬಜಿನ ಒಳಗೆ	–
೨೩	ಸೈಯದ್ ಮುಸ್ತಫಾ ಸಜ್ಜಾದಾ	–	ಶೇಖ ಹಮೀದ್‌ಸಾಬ ದರ್ಗಾದಲ್ಲಿ	–
೨೪	ಫರೀದ್ ಶಾಹ್	–	–	–
೨೫	ಶಾಹ್ ಅಬ್ದುಲ್ ರಜಾಕ್	೨೨ ರಜ್ಜಬ್ ಸಾನಿ	ಮಕ್ಕಾ ದರವಾಜಾದ ಹತ್ತಿರ	ಗುಮ್ಮಟವಿದೆ(ಜೋಡಗುವ ್ಮಟವೆಂದು ಪ್ರಸಿದ್ಧ)
೨೬	ಖ್ವಾಜಾ ಅಬ್ದುಲ್ ರಹೀಂ	–	ನವಾಯತ ಮಸೀದೆ– ಶಾಹ್ ಅಬ್ದುಸ್ಸಲಾಮ್ ಶತ್ತಾರಿಯವರ ಸಮಾಧಿಯ ಪಕ್ಕದಲ್ಲಿ	–
೨೭	ಶೇಖ ಕಮಾಲ್ ಖಾದ್ರಿ	–	–	–
೨೮	ಶೇಖ ಹಮೀದುದ್ದೀನ್	೨೨ ಜಿಲ್‌ಹಜ್ಜಾ	ನೌಬಾಗದಲ್ಲಿ	ಗುಮ್ಮಟವಿದೆ
೨೯	ಶೇಖ ಲುತ್‌ಫುಲ್ಲಾಹ್	೧೨, ರಜ್ಜಬ್ ಸಾನಿ	ನೌಬಾಗದಲ್ಲಿ	ಗುಮ್ಮಟವಿದೆ
೩೦	ಶೇಖ ಅಬ್ದುಸ್ಸಮದ್ – ಬುಜುರ್ಗ	–	–	–
೩೧	ಸೈಯದ್ ಅಹ್ಮದ್ ಖಾದ್ರಿ ಅರಬ್	–	–	–
೩೨	ಶೇಖ ಅಹ್ಮದ್ ಬುರ್ಖಾಪೋಷ್	೧೦, ರಜ್ಜಬ್	ಶಹಾಪುರ ಗೇಟ್ ಹತ್ತಿರ	ಪ್ರಾಂಗಣವಿದೆ
೩೩	ಸೈಯದ್ ಅಬ್ದುಲ್ಲಾ ಗುಜ್ರಾತಿ	–	–	–
೩೪	ಸೈಯದ್ ಜಾಫರ್ ಸಕಾಫ್ ಅರಬ್	೨೦ ಜಿಲಖಿದಾ	ನೌಬಾಗ್ ಹತ್ತಿರ	ಪ್ರಾಂಗಣವಿದೆ
೩೫	ಸೈಯದ್ ಜಾಫರ್	–	–	–
೩೬	ಬಡೇಶಾಹ್	–	–	–
೩೭	ಸೈಯದ್ ಮುಹಮ್ಮದ್ ತಾಜೀಮ್ ತರಕ್	೧೧ ಜಿಲ್ಹಜ್ಜಾ	ಮಕ್ಕಾದ್ವಾರದ ಹತ್ತಿರ	ಬೆಳ್ಳಿಯ ಪ್ರಾಂಗಣವಿದೆ
೩೮	ಸೈಯದ್ ಮಗರಬಿ	–	–	–
೩೯	ಅಬದ್ ಅಲಿ ಮಶಾಯಕ್	೧೧, ರಬ್ಬಿವುಲ್ ಅವ್ವಲ್	ಖಾಜಿ ಇಬ್ರಾಹಿಂ ದರ್ಗಾದ ಹತ್ತಿರ	–

೪೦	ಸೈಯದ್ ಮಂಜನ್ ಬುಖಾರಿ	೧೪ ಮೊಹರಂ	ಮಾಸಾಬಾವಿಯ ಹತ್ತಿರ, ಸ್ಟೇಷನ್ ಬ್ಯಾಕ್ ರೋಡ್	ಪ್ರಾಂಗಣವಿದೆ, 'ಪಾಂಚೋರಿ'ಯವರು ಇದರ ವಂಶಸ್ಥರು
೪೧	ಶೇಖ ಅಬ್ದುಲ್ ಅಲಾ	–	–	–
೪೨	ಶೇಖ ಅಬುಲ್‌ಮಾಲೆ ಜೋನ್‌ಪುರಿ	–	–	–
೪೩	ಹಾಜಿ ಫತೆಯುಲ್ಲಾಹ್ ನೂರಿ	–	–	–
೪೪	ಶೇಖ ಅಬ್ದುಲ್‌ತೀಫ್	–	–	–
೪೫	ಸೈಯದ್ ಮುಹಮ್ಮದ್ ತವಕ್ಕಲ್	–	–	–
೪೬	ಸೈಯದ್ ಅಬುಬಕರ್ ಅರಬ್	೨೨ ಶಾಬಾನ್	ಆಸಾರ ಮಹಲ್ ಹತ್ತಿರ	ಪ್ರಾಂಗಣವಿದೆ
೪೭	ಶಾಹ್ ಅಬ್ದುಲ್ ಅಜೀಜ್‌ಖಾದ್ರಿ	–	–	–
೪೮	ಶೇಖ ಜೈನುದ್ದೀನ್	–	–	–
೪೯	ಪೀರ್ ಜಮ್ನಾ	೨೭, ಶಾಬಾನ್	ನವಾಬ್ ಮುಸ್ತಫಾಖಾನ್‌ನ ಹವೇಲಿಯ ಪೂರ್ವದಿಕ್ಕಿಗೆ ಇದೆ.	ಪ್ರಾಂಗಣವಿದೆ
೫೦	ಪೀರ್ ಬೂದ	–	ಬಕ್ಷಿ ಪವೇಲಿಯಲ್ಲಿ ಹತ್ತಿರ	ಪ್ರಾಂಗಣವಿದೆ
೫೧	ಪೀರ್ ಬಾಲ	–	–	–
೫೨	ಶಾಹ್‌ನೂರುದ್ದೀನ್ ಸಫವಿ	–	–	–
೫೩	ಶೇಖ ಜಮಾಲ್ ಮುಹಮ್ಮದ್ ಖಾದ್ರಿ	–	ಆಲಿಬಾಗ್‌ದಲ್ಲಿದೆ	–
೫೪	ಸೈಯದ್ ಮುಹಮ್ಮದ್ ಬುಖಾರಿ	ಹಿಜ್ರಿಶಕ ೧೧೯೭	ಅಲಿಬಾಗದಲ್ಲಿದೆ	ಪ್ರಾಂಗಣವಿದೆ
೫೫	ಸೈಯದ್ ಅಲಿ ಬುಖಾರಿ	–	–	–
೫೬	ಶಹಬಾಜ್ ಹುಸೈನಿ	೧೭ ಜಿಲ್‌ಖಿದ್	ಶಹಾಪೇಟ	ಪ್ರಾಂಗಣವಿದೆ
೫೭	ಮುಲ್ಲಾ ಯೂಸುಫ ಮಜಜೂಬ್	–	–	–
೫೮	ಶಾಹ್ ಇಸ್ಮಾಯಿಲ್ ಮಜಜೂಬ್	–	–	–
೫೯	ಮೀರ್ ಬಗ್ದಲ್ ಮಜಜೂಬ್	–	–	–
೬೦	ಲಾಲ್‌ಖಾನ್ ಲಕಡ್ ಮಜಜೂಬ್	–	–	–
೬೧	ಸೈಯದ್ ಮಹಮೂದ್ ಬುಖಾರಿ	–	–	–
೬೨	ಶಾಹ್ ಮಹಮೂದ್ ಮಜಜೂಬ್	–	ನಯಾಬಾಗ್ ಶಾ ಭಾಯಿಯವರ ಸಮಾಧಿಯ ಹತ್ತಿರ	–
೬೩	ಆಲಂಗಿ ಮಜಜೂಬ್	೧೯ ಮೊಹರಂ	ಫತೇ ದರವಾಜಾದ ಬಳಿಯಲ್ಲಿ	ಪ್ರಾಂಗಣವಿದೆ
೬೪	ಶಾಹನಂಗೆ ಮಜಜೂಬ್	೨೨ ಸಫರ್	ಅರ್ಕಕಿಲ್ಲಾದ ಬಳಿ	ಗುಮ್ಮಟವಿದೆ
೬೫	ಶಾಹ್ ತವಕ್ಕಲ್ ಮಜಜೂಬ್	–	–	–

೬೫	ಶಾಹ್ ತವಕ್ಕಲ್ ಮಜಜೂಬ್	–	–	–
೬೬	ಶಾಹ್ ಅಬ್ದುಲ್ ಮುಹಮ್ಮದ್ ಮಜಜೂಬ್	–	–	–
೬೭	ಶಾಹ್ ಲಾಡ್ ಮುಹಮ್ಮದ್ ಮಜಜೂಬ್	–	–	–
೬೮	ಶಾಹ್ ಉಸ್ಮಾನ್ ಮಜಜೂಬ್	೨೪ ಸಫರ್	ಶಾಹಪುರ ದ್ವಾರದ ಬಳಿ	ಕಟ್ಟೆಗೆಯಲ್ಲಿ ಪ್ರಾಂಗಣ ನಿರ್ಮಿಸಲ್ಪಟ್ಟಿದೆ
೬೯	ಸೈಯದ್ ಅಲಿ ಶಹೀದ್	–	ಸಫಾ ಬರ್ಝಾರದಲ್ಲಿದೆ	ಕಟ್ಟೆಗೆಯಲ್ಲಿ ಪ್ರಾಂಗಣ ನಿರ್ಮಿಸಲ್ಪಟ್ಟಿದೆ
೭೦	ಪೀರ್ ಬಾಬಾಜಿ ಶಹೀದ್	–	ಸಫಾ ಬರ್ಝಾರದಲ್ಲಿದೆ	ಕಟ್ಟೆಗೆಯಿಂದ ಪ್ರಾಂಗಣ ನಿರ್ಮಿಸಲ್ಪಟ್ಟಿದೆ
೭೧	ಶೇಖ ಮಿಯಾಂ ಶಹೀದ್	–	ಸಫಾ ಬರ್ಝಾರದಲ್ಲಿದೆ	–
೭೨	ಹಫ್ತ್ ಶಹೀದ್	–	ಆರ್ಕಕಿಲ್ಲಾ ಹತ್ತಿರ	ಪ್ರಾಂಗಣದ ಮೇಲೆ ೭ ಸಮಾಧಿಗಳು ಇರುವವು
೭೩	ಮಿಯಾಂ ದಾವಲ್‌ಜಿ	–	–	–
೭೪	ಮುಲ್ಲಾ ಮುಹಮ್ಮದ್ ಜುಬೇರಿ	೨೩ ಶವ್ವಾಲ್	ಗತಹಾಲ್ ಬಾವಿ	ಪ್ರಾಂಗಣವಿದೆ
೭೫	ಖಾಜಿ ಇಬ್ರಾಹಿಂ ಜುಬೈರಿ	೧೨ ರಜ್ಜಬ್	ರಂಗೀನ್ ಮಸೀದೆಯ ಬಳಿ ಪೂರ್ವದಿಕ್ಕಿಗೆ	ಪ್ರಾಂಗಣವಿದೆ
೭೬	ಖಾಜಿ ಅಸ್ಕರಿ	–	–	–
೭೭	ಖಾಜಿ ಸೈಯದ್ ಸೈಫುಲ್ಲಾಹ್	–	–	–
೭೮	ಶಾಹ್ ಬಾವಾಜಿ	–	–	–
೭೯	ಸೈಯದ್ ಮುಹಮ್ಮದ್	–	–	–
೮೦	ಸೈಯದ್ ಕುತುಬ್	–	–	–
೮೧	ಸೈಯದ್ ಉತಾಲೆ	–	ಕಿಲ್ಲಾದ ದ್ವಾರದ ಎದುರಿಗೆ ಮಸೀದೆಯ ಬಳಿ	ಪ್ರಾಂಗಣವಿದೆ
೮೨	ಸೈಯದ್ ಮುಂತಜಿಬ್	–	–	–
೮೩	ಶೇಖ್ ಮನ್ಸೂರ್	–	ನಗೀನಾಬಾಗ್(ಗವರ್ನಮೆಂಟ್ ಹೈಸ್ಕೂಲ್) ಅಬ್ದುಲ್ ರಜಾಕ್ ಖಾದ್ರಿಯವರ ದರ್ಗಾದ ಹತ್ತಿರ	ಪ್ರಾಂಗಣವಿದೆ
೮೪	ಸೈಯದ್ ಅಬ್ದುಲ್ ರೆಹಮಾನ್ ಇದ್ರುಸ್	–	ಆಸಾರ್ ಷರೀಫ್ ಹತ್ತಿರ,	ಪ್ರಾಂಗಣವಿದೆ
೮೫	ಸೈಯದ್ ಮುನಮ್ ಉರ್ಫ್ ಹಜ್ರತ್	–	–	–
೮೬	ಬೀಬಿ ಖಾದ್ರಿಯಾ	–	–	–
೮೭	ಜಚ್ಚಾ ಬೀಬಿ	–	ಫತೇಹ ದರ್‌ವಾಜಾದ ಒಳಭಾಗದಲ್ಲಿ	ಪ್ರಾಂಗಣವಿದೆ
೮೮	ಬೀಬಿ ಸಾಹಬಾ	–	–	–
೮೯	ಚಾಹ್‌ಬೀಬಿ	–	–	–
೯೦	ಶಾಹ್ ಅಲಂಗಿಯವರ ಸಹೋದರಿ	–	ಫತಹ್ ದರವಾಜಾದ ಹತ್ತಿರ	ಪ್ರಾಂಗಣವಿದೆ
೯೧	ಸಾಹೇಬ್‌ಜಾನಿ ಸಾಹೇಬಾ	–	–	–
೯೨	ಆಮೀರ್ ಸಾಹೇಬಾ	–	–	–

೯೨	ಅಮೀರ್ ಸಾಹೇಬಾ	–	–	–
೯೩	ಸುಲ್ತಾನ್ ಮುಹಮ್ಮದ್ ಆದಿಲ್‌ಶಾಹಿ	೨೬, ಮೊಹರ್ರಂ	ಪಾದಶಹಾಪುರ (ಗೋಲಗುಂಬಜ್)	ಸಮಾಧಿಯ ಮೇಲೆ ಗುಮ್ಮಟವಿದೆ, ಕಟ್ಟೆಗೆಯ ಪ್ರಾಂಗಣವಿದೆ.
೯೪	ಖಾನ್ ಮುಹಮ್ಮದ್ ವಜೀರ್, ಶಹೀದ್	–	ಮಕ್ಕಾ ದರವಾಜಾದ ಬಳಿ	ಜೋಡಗುಮ್ಮಟ್‌ವೆಂದು ಪ್ರಸಿದ್ಧಿ
೯೫	ಅಲಿ ಆದಿಲ್‌ಶಾಹ್ ಬುಜರುಗ್	೯೮೮ ಹಿಜ್ರಿಶಕ	ನೌಬಾಗದಲ್ಲಿದ	ಪ್ರಾಂಗಣವಿದ
೯೬	ಅಲಿ ಆದಿಲ್‌ಶಾಹ್ ಖುರ್ದ್	೧೩ ಷವ್ವಾಲ ೧೦೮೩ ಹಿಜ್ರಿಶಕೆ	ಶಹಾಪೇಟದಲ್ಲಿದೆ (ಬಾರಾಕಮಾನ್)	ಪ್ರಾಂಗಣವಿದೆ
೯೭	ಇಬ್ರಾಹಿಂ ಬಹರ್‌ಖಾನ್	–	–	–
೯೮	ಮಿರ್ಜಾ ಫತಾವುಲ್‌ಮುಲ್ಕ್	–	–	–
೯೯	ಮಲೀಕ್ ಯಾಕೂತ್ ದಾಬೋಲಿ	–	ಆಸಾರ್ ಷರೀಫ್ ಹತ್ತಿರ	–
೧೦೦	ಮೀರ್ ಖಾಸಿಂ ಗಾರ್ಖು ತರ್ಪಾರಿ	೧೭, ರಂಜಾನ್	ಜಾಮಿಯಾ ಮಸೀದೆ ಹತ್ತಿರ	ಪ್ರಾಂಗಣವಿದ
೧೦೧	ಶಾಹ್ ದಾವೂದ್ ಖಾಖಾನಿ	–	–	–
೧೦೨	ಗಾಲಿಬ್ ಶಾಹ್	–	–	–
೧೦೩	ಹಜ್ರತ್ ಶಾಹ್	–	–	–
೧೦೪	ಪಿದ್ಮ ರಸೂಲ್	–	ಜೋಹರಾಪುರ ದರವಾಜಾದ ಹೊರಗಡೆ,	–
೧೦೫	ಶಾಹ್ ಅಬ್ದುಲ್ವಾಹಿದ್ ಚಿಷ್ತಿ	–	–	–
೧೦೬	ಬಬ್ಬರ್ ಶಾಹ್	–	–	–
೧೦೭	ಅಲಿ ಶಾಹ್	–	–	–
೧೦೮	ಹಬೀಬುಲ್ಲಾಹ್ ಶಾಹ್	–	–	–
೧೦೯	ಹಿದಯತಲ್ಲಾಹ್ ಹುಸೈನಿ	–	ಇಬ್ರಾಹಿಂ ಆದಿಲ್‌ಶಾಹನ ಸಮಾಧಿಯ ಬಳಿ ಪಶ್ಚಿಮ ದಿಕ್ಕಿನೆಡೆಗೆ	ಗುಂಬಜ್ ಇದ
೧೧೦	ಶಾಹ್ ನೂರುಲ್ಲಾಹ್	೧೦೬೭ ಹಿಜ್ರಿಶಕೆ	ಮೌಲಾನಾ ಹಬೀಬುಲ್ಲಾಹ್‌ರ ದರ್ಗಾ ಬಳಿ ಇದೆ (ಮೋತಿ ಗುಂಬಜ್)	ಪ್ರಾಂಗಣವಿದ
೧೧೧	ಶಾಹ್ ಅಬ್ದುಲ್ ಲತೀಫ್ ಖಾದ್ರಿ	೧೦೮೩ ಹಿಜ್ರಿಶಕೆ	ಮೌಲಾನಾ ಹಬೀಬುಲ್ಲಾಹ್‌ರ ದರ್ಗಾ ಬಳಿ ಇದೆ (ಮೋತಿ ಗುಂಬಜ್)	ಪ್ರಾಂಗಣವಿದ
೧೧೨	ಶಾಹ್ ಅತೀಖುಲ್ಲಾಹ್ ಖಾದ್ರಿ	೧೦೨೩ ಹಿಜ್ರಿಶಕೆ	ಮೌಲಾನಾ ಹಬೀಬುಲ್ಲಾಹ್‌ರ ದರ್ಗಾ ಬಳಿ ಇದೆ (ಮೋತಿ ಗುಂಬಜ್)	ಪ್ರಾಂಗಣವಿದ

೧೧೩	ಮಿಯಾಂ ಶೇಖ ಇಸ್ಹಾಕ್	–	–	–
೧೧೪	ಹಾಜಿ ನ್ಯಾಮ ತಲ್ಲಾಹ್	–	–	–
೧೧೫	ಶಾಹ್ ಹಸನ್	–	–	–
೧೧೬	ಮೌಲಾನಾ ಹಬೀಬುಲ್ಲಾಹ್ ಸಿಬ್ಗತಲ್ಲಾಹಿ	೧೦, ಶಾಬಾನ್ ೧೦೪೧ ಹಿಜ್ರಿಶಕೆ	ಇಬ್ರಾಹಿಂ ಆದಿಲ್‌ಶಾಹನ ಸಮಾಧಿಯ ಪಶ್ಚಿಮ ದಿಕ್ಕಿನಲ್ಲಿದೆ. ಪ್ರಸ್ತುತ ಸರಕಾರಿ (ಅತುಟ ಇಥರಿಣಚಿಟ) ಬಳಿ ಇದೆ	ಗುಂಬಜ್ ಇದೆ (ಮೋತಿ ಗುಂಬಜ್ ಎಂದು ಪ್ರಸಿದ್ಧಿ)
೧೧೭	ಮಿಯಾಂ ತಾಜ್ ಮುಹಮ್ಮದ್	–	–	–
೧೧೮	ಸೈಯದ್ ಆಬಿದ್	–	–	–
೧೧೯	ಸೈಯದ್ ಅಬ್ದುಲ್‌ರೆಹಮಾನ್ ಖಾದ್ರಿ	–	–	–
೧೨೦	ಶಾಹ್ ಅಬ್ದುಲ್‌ಗನಿ ಖಾದ್ರಿ	–	–	–
೧೨೧	ಶಾಹ್ ಅಲಾವುಲ್ ಹಕ್	೧೦೩೧ ಹಿಜ್ರಿಶಕೆ	ಜೋಹರಾಪುರದಲ್ಲಿದೆ	
೧೨೨	ಮಿಯಾಂ ಷರೀಫ್ ಅವ್ವಲ್ ವ ಜುನೈದ್ ಸಾನಿ	–	ದರ್ಗಾ ಶಂಸಾ ಸಾಹೇಬಾರ ಹತ್ತಿರವಿದೆ	–
೧೨೩	ಶೇಖ ನಿಜಾಮ್ ನಾರ್ನೂಲಿ	–	ದರ್ಗಾ ಶಂಸಾ ಸಾಹೇಬಾರ ಹತ್ತಿರವಿದೆ	ಪ್ರಾಂಗಣವಿದೆ
೧೨೪	ಸೈಯದ್ ಅಹ್ಮದ್ ಖಾದ್ರಿ	–	–	–
೧೨೫	ಬೀಬೀ ಶಂಸಾ ಬಿನ್ತ್ ಅಬ್ದುಲ್ ಅವ್ವಲ್	೧೬ ರಜ್ಜಬ್	ಜೋಹರಾಪುರದಲ್ಲಿ 'ಬೀಬೀ ಶಂಸಾ'ವೆಂದು ಪ್ರಸಿದ್ಧ ದರ್ಗಾ ಇದೆ	ಸಮಾಧಿಯ ಮೇಲೆ ಗುಮ್ಮಟವಿದೆ
೧೨೬	ಶಾಹ್ ಮಹಮೂದ್	–	–	–
೧೨೭	ಶಾಹ್ ಹಸನ್ ಫಖರಾಬಾದಿ	–	ಜೋಹರಾಪುರದಲ್ಲಿ ಇದೆ	–
೧೨೮	ಸೈಯದ್ ಅಹ್ಮದ್ ಕರ್ಜಲಾಯಿ	–	–	–
೧೨೯	ಶೇಖ ಅಬ್ದುಸ್ಸತ್ತಾರ್	–	–	–
೧೩೦	ಮಿಯಾಂ ರಹೀಂ ಮುಹಮ್ಮದ್	–	ಶಾಹನವಾಜ್‌ಖಾನ್‌ನ ಗುಂಬಜಿನ ಬಳಿ	–
೧೩೧	ಶಾಹ್ ಮುರ್ತುಜಾ ಬಿನ್ ಶಾಹ್ ಹಾಷಿಂ ಅಲಿ	೯ ಜಿಲ್‌ಹಜ್ಜಾ	ಶಂಸಾ ಮಾಸಾಬಾ ಇವರ ಗುಂಬಜ್‌ದ ಬಳಿ ಉತ್ತರ ದಿಕ್ಕಿನಲ್ಲಿದೆ.	ಪ್ರಾಂಗಣವಿದೆ.
೧೩೨	ಶಾಹ್ ಅಬುತಾಲೀಬ್ ಹುಸ್ಸೈನಿ	–	–	–
೧೩೩	ಸೈಯದ್ ಅಲಿ ಮುಹಮ್ಮದ್ ಬಾವಲೆ		–	–
೧೩೪	ಸೈಯದ್ ಅಲಿ ಶಾಹ್ ಚಂದಾಹುಸೈನಿಯವರ ವಂಶದಿಂದ	–	–	–
೧೩೫	ಶಾಹ್ ಬಡೆ	–	–	–
೧೩೬	ಶಾಹ್ ನೂರುದ್ದೀನ್ ಮುಹಮ್ಮದ್	–	–	–

೧೩೭	ಷರ್ಫ ಮೌಜುದ್	–	–	–
೧೩೮	ಶೇಖ ಇಸ್ಮಾಯಿಲ್ ಮುಹದ್ದೀಸ್ ಖಾದ್ರಿ	–	ಮೌಲಾನಾ ಹಬೀಬುಲ್ಲಾಹ್‌ರ ದರ್ಗಾದ ಹತ್ತಿರ	ಪ್ರಾಂಗಣವಿದೆ
೧೩೯	ಶೇಖ ಯೂಸುಫ್	–	–	–
೧೪೦	ಮುಹಮ್ಮದ್ ಶರೀಫ್	–	ಜಾಮಿಯಾ ಮಸೀದೆಯ ಹತ್ತಿರ	
೧೪೧	ಮಿಯಾಂ ಭೋಲಾಫಕೀರ	–	ಆದಿಲಶಾಹ್‌ನ ಸಮಾಧಿಯ ಬಳಿಯಲ್ಲಿ ಪೂರ್ವದಿಕ್ಕಿನಲ್ಲಿ ಇದೆ	–
೧೪೨	ಬಾವಾ ಢಡಂಗ್	–	–	–
೧೪೩	ಶಾಹ್ ಚಂಗಿ	–	ತಕಿಯಾ(ಟಕ್ಕೆ) ಮುಹಮ್ಮದ್ ಅಫ್ಜಲ್‌ಪುರ ತಕ್ಕೆ	ಪ್ರಾಂಗಣವಿದೆ
೧೪೪	ಫತೇಹ್‌ಖಾನ್ ಮಜಜೂಬ್	–	–	–
೧೪೫	ರಾಜಿ ಲೌಶತಿ	–	ಮೌಲಾನಾ ಹಬೀಬುಲ್ಲಾಹ್ ದರ್ಗಾ (ಮೋತಿಗುಂಬಜ್) ಪಶ್ಚಿಮ ದಿಕ್ಕಿಗೆ	–
೧೪೬	ಅಮೀನಾ ಶಾಹ್	–	–	–
೧೪೭	ವಾಲಿದ್ ಖಾಜಿ ಅಲಿ	–	–	–
೧೪೮	ಖಾಜಿ ಜೈನುಲಾಬ್ದಿನ್	–	–	–
೧೪೯	ಖಾಜಿ ಮುಹಮ್ಮದ್ ಅಮೀನ್	–	–	–
೧೫೦	ಮುಹಮ್ಮದ್ ಹುಸೈನ್ ಖತೀಬ್ ಬಾದಶಹಪುರ	–	–	–
೧೫೧	ಮುಲ್ಲಾ ಅಬ್ದುಲ್ ರೆಹಮಾನ್ ಬಹುನರಾ	–	–	–
೧೫೨	ಇಬ್ರಾಹಿಂ ಆದಿಲಶಾಹ್	೧೧ನೇ ಮೊಹರ್ರಂ, ಹಿಜ್ರಿಶಕೆ ೧೦೬೩	ಇಬ್ರಾಹಿಂ ರೋಜಾ	ಸಮಾಧಿಯ ಮೇಲೆ ಗುಮ್ಮಟವಿದೆ
೧೫೩	ಅಬು ಮುಹಮ್ಮದ್	–	–	–
೧೫೪	ನವಾಬ್ ಮುಸ್ತಫಾಖಾನ್	–	ದರ್ಗಾಜೈಲಿನ ಒಳಗಡೆ	ಸಮಾಧಿಯ ಮೇಲೆ ಪ್ರಾಂಗಣವಿದೆ
೧೫೫	ನ್ಯಾಮತಖಾನ್ ಥಾನೇದಾರ್	–	–	–
೧೫೬	ಅಜೀಜ್‌ಖಾನ್ ಸರಸರೆ ನೌಬತ್	–	–	–
೧೫೭	ಮುಹಮ್ಮದ್‌ಖಾನ್ ವೆಲ್ಲೂರ್	–	–	–
೧೫೮	ಅಲಿಖಾನ್ ಆಸಾರಿ	–	–	–
೧೫೯	ಏಯತೆಬಾರ್‌ಖಾನ್ ಸರ್‌ಸರ ನೌಬತ್	–	ಮೋತಿಗುಂಬಜ್‌ದ ಬಳಿ, ದಕ್ಷಿಣ ದಿಕ್ಕಿಗೆ	ಸಮಾಧಿಯ ಮೇಲೆ ಗುಮ್ಮಟವಿದೆ
೧೬೦	ಶಾಹ್ ಸಫೀಯುಲ್ಲಾಹ್ ಉರ್ಫ್ ಶಾಹ್ ಬಂದಗಿ ಹುಸೈನ್	–	–	–
೧೬೧	ಸೈಯದ್ ಮುಸ್ತಫಾ ಸಾಹೇಬ್	–	–	–

೧೬೨	ಶಾಹ್ ಮೀರಾಂಜಿ ಶಂಶುಲ್ ಉಶಾಕ್	–	ಶಾಹಪುರ ದಿಬ್ಬದ ಮೇಲೆ ಇರುವದು (ಖ್ವಾಜಾ ಅಮೀನುದ್ದೀನ್ ದರ್ಗಾದ ಹತ್ತಿರ)	ಗುಮ್ಮಟವಿದೆ
೧೬೩	ಶಾಹ್ ಬುರ್ಹಾನುದ್ದೀನ್ ಜಾನಂ	೧೦, ಜಮಾದಿಸ್ಸಾನಿ	ಶಾಹಪುರ ದಿಬ್ಬದ ಮೇಲೆ ಇರುವದು (ಖ್ವಾಜಾ ಅಮೀನುದ್ದೀನ್ ದರ್ಗಾದ ಹತ್ತಿರ)	ಗುಮ್ಮಟವಿದೆ
೧೬೪	ಶಾಹ್ ಅಮೀನುದ್ದೀನ್ ಆಲಾ	೨೪, ರಂಜಾನ್	ಖ್ವಾಜಾ ಅಮೀನುದ್ದೀನ್ ದರ್ಗಾ	ಗುಮ್ಮಟವಿದೆ
೧೬೫	ಶೇಖ ಮಹಮೂದ್ ಖುಶದಹಾನ್	–	ಖ್ವಾಜಾ ಅಮೀನುದ್ದೀನ್ ದರ್ಗಾದಲ್ಲಿ	ಗುಮ್ಮಟವಿದೆ
೧೬೬	ಶಾಹ್ ಗನಿ	–	ಶಹಾಪುರದ ಕೆರೆಯ ಬಳಿ ಪಶ್ಚಿಮದ ಕಡೆ	–
೧೬೭	ಶಾಹ್ ಶರೀಫ್ ರಂಗರೇಜಾ	೧ ನೇ ರಂಜಾನ್	ಖ್ವಾಜಾ ಅಮೀನುದ್ದೀನ್ ದರ್ಗಾದ ಬಳಿ	ಗುಮ್ಮಟವಿದೆ
೧೬೮	ಸೈಯದ್ ನೂರ್ ಮುಹಮ್ಮದ್ ಖಾಜಿ ಅರ್ಜರಂಗ್	–	–	–
೧೬೯	ಶಾಹ್ ಅಲಿ ಹಕ್ಕಾನಿ	–	–	–
೧೭೦	ಮಿಂಯಾ ಸೈಯದ್ ಮಜಜೂಬ್	–	–	–
೧೭೧	ಮಿಯಾ ಬಂಗಾಲೆ ಮಜಜೂಬ್	–	–	–
೧೭೨	ಮಿಂಯಾ ಖಾಕಸಾರ್	–	ಬೆಹಲೂಲ್‌ಪುರದಲ್ಲಿದೆ	ಗುಮ್ಮಟವಿದೆ
೧೭೩	ಮಿಂಯಾ ದಾವೂದ್	–	–	–
೧೭೪	ಮಿಂಯಾ ಶಾಹ್ ಮೊಹಬ್ಬತ್	–	–	–
೧೭೫	ಮಿಂಯಾ ಮೆಹಮೂದ್	–	–	–
೧೭೬	ಮಿಂಯಾ ಬಂಗಾಲೆ ಫಕೀರ್	–	–	–
೧೭೭	ಸೈಯದ್ ಮೀರಾಂ ಶಹೀದ್	–	–	–
೧೭೮	ಮಸ್ತ ಅಲಿ	–	–	–
೧೭೯	ಗುಲಾಂ ಅಲಿ	–	–	–
೧೮೦	ಶಾಹ ಮುಹಮ್ಮದ್ ಮಕ್ಕಿ ಖತೀಬ್, ಜಾಮಿಯಾ ಮಸೀದೆ	–	–	–
೧೮೧	ಖಾಜಿ ಸಯೀದ್	–	–	–
೧೮೨	ಮುಲ್ಲಾ ಮಲೀಕ್	–	–	–
೧೮೩	ಮುಲ್ಲಾ ಜಹೂರಿ	–	ಇಬ್ರಾಹಿಂ ರೋಜಾದಲ್ಲಿ ರಕ್ಷಣಾ ಗೋಡೆಯ ಒಳಗಡೆ	ಸಮಾಧಿಯ ನೆಲಹಾಸಿನಲ್ಲಿ ಇದೆ
೧೮೪	ಬಹಲೂಲ್‌ಖಾನ್	–	–	–
೧೮೫	ಮೂಸಾ ಖಾನ್	–	–	–
೧೮೬	ಮುಲ್ಲಾ ಇನಾಯತ್	–	–	–
೧೮೭	ಶಾಹ್ ನವಾಜ್‌ಖಾನ್	–	ಶಹಾಪುರದ್ವಾರದ ಹೊರಗಡೆ ಖ್ವಾಜಾ ಅಮೀನುದ್ದೀನ ದರ್ಗಾ ರಸ್ತೆಯಲ್ಲಿ	ಸಮಾಧಿಯ ಮೇಲೆ ಗುಮ್ಮಟವಿದೆ

೧೮೮	ದಿಯಾನತ್ ಉಲ್ ಮುಲ್ಕ ಶಾಹ್ ನವಾಜ್‌ಖಾನ್	–	–	–
೧೮೯	ನೂರುದ್ದೀನ್ ಮುಹಮ್ಮದ್‌ಶಾಹ್ ನವಾಜ್ ಖಾನ್	–	–	–
೧೯೦	ಅಹ್ಮದ್ ಖಾನ್ ಸರಸರನೌಬತ್	–	–	–
೧೯೧	ಫತಾಹ್‌ಖಾನ್ ರಾಸ್ತಗೋ	–	–	–
೧೯೨	ಶಾಹಬಾಜ್‌ಖಾನ್	–	–	–
೧೯೩	ಸೈಯದ್ ಮುಹಮ್ಮದ್ ಬುಖಾರಿ	–	–	–
೧೯೪	ಸೈಯದ್ ಅಜ್ಮತ್ ಪಠಾಣ	–	–	–
೧೯೫	ಶಾಹ್ ಹಾಷಿಂ ಅಲ್ವಿಯವರ ಪುತ್ರರಾದ ಶಾಹ್ ಮುಸ್ತಫಾ	೧೧, ಶಾಬಾನ್	ಶಾಹ್‌ರಾಜುವಿನ ಗುಮ್ಮಟಿನ ಬಳಿಯಲ್ಲಿ	–
೧೯೬	ಶಾಹ್ ಹಬೀಬ್ ನೌಶಾಹ್-ಬಾಜ್‌ವಾಲಾ	–	–	–
೧೯೭	ಮಿಯಾಂ ಮುಹಮ್ಮದ್ ರಾಜಿ	–	–	–
೧೯೮	ಶಾಹ ಜಮಾಲಲ್ಲಾ	–	–	–
೧೯೯	ಶೇಖ್ ಅಲಿ	–	–	–
೨೦೦	ಸೈಯದ್ ಅಹ್ಮದ್ ಜೈನ್	–	ಆಸಾರ್‌ಷರೀಫಿನ ಹತ್ತಿರ, ಉತ್ತರ ದಿಕ್ಕಿನಲ್ಲಿ	ಪ್ರಾಂಗಣವಿದೆ
೨೦೧	ಶಾಹ್ ಬಾಖರ್ ಜಾಕೀರ್	–	–	–
೨೦೨	ಮೌಲಾನಾ ಮುಹಮ್ಮದ್ ಜುಬೇರಿ	೧೪ ಸಫರ್	ಖಾಸಿಂಕೆರೆಯ ಬಳಿ	ಪ್ರಾಂಗಣವಿದೆ
೨೦೩	ಶೇಖ ಇಬ್ರಾಹಿಂ ಸಂಕಾನಿ	೧೪ ಮೊಹರ್‍ರಂ, ಹಿಜ್ರಿಶಕೆ ೭೫೩	ಉತ್ತರದಿಕ್ಕಿನಲ್ಲಿರುವ ಕಬರ್‌ಸ್ತಾನ್‌ದಲ್ಲಿತ್ತು (೨೦೦ ವರ್ಷಗಳ ನಂತರ ಅಲ್ಲಿಂದ ಸ್ಥಳಾಂತರಿಸಿ ಅರಕೇರಿಯಲ್ಲಿ ದಫನ್ ಮಾಡಲಾಯಿತು)	–
೨೦೪	ಜಾಮದಾರ್ ಖಾನ್	–	–	–
೨೦೫	ಮೀರಾಂ ಖಾನ್	–	–	–
೨೦೬	ಬಡೇ ಮಲ್ಲಿಕ್	–	–	–
೨೦೭	ಮಕ್ದೂಮ್ ಖಾನ್	–	–	–
೨೦೮	ಯೂಸುಫ್ ಖಾನ್	–	–	–
೨೦೯	ಶಾಹ ಅಬುಲ್ ಹಸನ್ ಖಾದ್ರಿ	೧೪ ರಬ್ಬಿವುಸ್ಸಾನಿ	ಆಗಾಪುರದ ಹತ್ತಿರ	ಪ್ರಾಂಗಣವಿದೆ, ಉರುಸು ಜರುಗುತ್ತಿದೆ
೨೧೦	ಶಾಹ್ ಮುಸ್ತಫಾ ಖಾದ್ರಿ	೧೫, ಶಾಬಾನ್	ಅಬುಲ್‌ಹರ್ಸ್ ಖಾದ್ರಿಯವರ ದರ್ಗಾದಲ್ಲಿ ಬೇರೆಯ ಕಟ್ಟೆಯ ಮೇಲೆ	ಪ್ರಾಂಗಣವಿದೆ, ಉರುಸು ಜರುಗುತ್ತಿದೆ
೨೧೧	ಸೈಯದ್ ಮೀರಾಂ	–	ಅಬುಲ್‌ಹಸನ್ ಖಾದ್ರಿಯವರ ದರ್ಗಾದ ಹೊರಭಾಗದಲ್ಲಿದೆ	ಪ್ರಾಂಗಣವಿದೆ, ಉರುಸು ಜರುಗುತ್ತಿದೆ
೨೧೨	ಸೈಯದ್ ಅಲಿ ಮುಹಮ್ಮದ್	–	ಅಬುಲ್‌ಹಸನ್ ಖಾದ್ರಿಯವರ ದರ್ಗಾದ ಹೊರಭಾಗದಲ್ಲಿದೆ	ಪ್ರಾಂಗಣವಿದೆ, ಉರುಸು ಜರುಗುತ್ತಿದೆ

೨೧೩	ಶಾಹ್ ಅಬ್ದುಲ್‌ಖಾದಿರ್ ಖಾದ್ರಿ	–	ಅಬುಲ್‌ಹಸನ್ ಖಾದ್ರಿಯವರ ದರ್ಗಾದ ಹೊರಭಾಗದಲ್ಲಿದೆ	ಪ್ರಾಂಗಣವಿದೆ, ಉರುಸು ಜರುಗುತ್ತಿದೆ
೨೧೪	ಶಾಹ್ ನ್ಯಾಮತ್‌ಅಲ್ಲಾಹ್ ಖಾದ್ರಿ	–	ಅಬುಲ್‌ಹಸನ್ ಖಾದ್ರಿಯವರ ದರ್ಗಾದ ಹೊರಭಾಗದಲ್ಲಿದೆ	ಪ್ರಾಂಗಣವಿದೆ, ಉರುಸು ಜರುಗುತ್ತಿದೆ
೨೧೫	ಸೈಯದ್ ಮೀರಾಂ ಖ್ವಾಂದ್ ಔಲಿಯಾ	–	–	–
೨೧೬	ಖಾಜ ಸೈಯದ್ ಅಲಿ	–	–	–
೨೧೭	ರಾಜಾ ಹಷಮಾ	–	–	–
೨೧೮	ಶಾಹ್ ಅಬುಲ್ ಖಾಸಿಂ	–	–	–
೨೧೯	ಶಾಹ್ ಮುಹಮ್ಮದ್	–	–	–
೨೨೦	ಶಾಹ್ ಮುಹಿಯುದ್ದೀನ್	–	–	–
೨೨೧	ಶಾಹ್ ನೂರುಲ್ಲಾಹ್	–	–	–
೨೨೨	ಸೈಯದ್ ಅಹ್ಮದ್	–	–	–
೨೨೩	ಸೈಯದ್ ಇಸ್ಮಾಯಿಲ್	–	–	–
೨೨೪	ಸೈಯದ್ ಲುತ್ಫ್	–	–	–
೨೨೫	ಸೈಯದ್ ಮಹಮೂದ್	–	–	–
೨೨೬	ಸೈಯದ್ ಜಾಫರ್ ಖಾದ್ರಿ	–	–	–
೨೨೭	ಶೇಖ ಇಲ್ಮುಲ್ಲಾಹ್ ಮುಹದ್ದೀಸ್	೧೧ ಜಿಲ್ಹಜ್ಜಾ, ೧೦೨೪ ಹಿಜ್ರಿಶಕೆ	ಅಲ್ಲಾಪುರ ದ್ವಾರದ ಕಡೆಗೆ, ಮುರಾರಿಬಾಗ್‌ದ ದಿಬ್ಬದ ಮೇಲೆ	–
೨೨೮	ಶೇಖ ಅಬುಲ್ ಮಾಲೆ	–	ಶೇಖ್ ಇಲ್ಮುಲ್ಲಾಹ್ ಮುಹದ್ದಿಸರ ಸಮಾಧಿಯ ಬಳಿ	–
೨೨೯	ಶೇಖ ಅಬುತುರಾಬ್ ಮುದರ್‍ರಿಸ್	೨೦ ಸಫರ್ ೧೦೮೬ ಹಿಜ್ರಿಶಕೆ	ಶೇಖ್ ಇಲ್ಮುಲ್ಲಾಹ್ ಮುಹದ್ದಿಸರ (ಅಜ್ಜನವರ)ಸಮಾಧಿಯ ಬಳಿ	–
೨೩೦	ಮಿಯಾ ಫಯೂಜ್	–	–	–
೨೩೧	ಶಾಹ್ ಮೂಸಾ ಖಾದ್ರಿ	–	ಅಲಾಪುರ ದ್ವಾರದ ಹೊರಗಡೆ	ಕಟ್ಟೆಯ ಮೇಲೆ ಸಮಾಧಿ ಇರುವದು
೨೩೨	ಸೈಯದ್ ಲತೀಫ್	–	–	–
೨೩೩	ಖುತುಬ್ ಶಾಹ್	–	–	–
೨೩೪	ಶೇಖ ಯೂಸುಫ್	–	–	–
೨೩೫	ಶೇಖ ಹುಸೈನ್ ಫಕೀರ್	–	–	–
೨೩೬	ಹಾಫೀಜ್ ಅಲಿ	–	–	–
೨೩೭	ಶಾಹ್‌ಲಾಲ್ ಶಹೀದ್‌ಖೀಲ್	–	–	–
೨೩೮	ಸಿದ್ದಿ ಅಂಬರ್ ಮಜಜೂಬ್	–	–	–
೨೩೯	ಬಾದಶಾಹ್‌ಸಾಹೇಬ್ ಮಜಜೂಬ್	–	–	–
೨೪೦	ಶಾಹ್ ಬಹಾಯಿ	–	–	–
೨೪೧	ಮಕ್ದೂಮ್ ಸಾಹೇಬ್	–	–	–
೨೪೨	ಶಾಹ್ ಖಾಸಿಂ ಮಜಜೂಬ್	–	–	–
೨೪೩	ಶೇಖ ಸುಲ್ತಾನ್ ಖುಶ್ನವಿ	–	–	–

೨೪೪	ಮೀರ ಸೌದಾಗರ್	–	–	–
೨೪೫	ಸಿದ್ಧಿ ಅಂಬರ್ ಜಹೇಜಿ	–	–	–
೨೪೬	ಸಾಹೇಬಾ ರಾಜಾ	–	–	–
೨೪೭	ಅಮ್ತುಸ್ಸಲಾಮ್	–	–	–
೨೪೮	ಅಮ್ತುಲ್ ಹಫೀಜ್	–	–	–
೨೪೯	ಅಮ್ತಲ್ ಮಜೀದ್	–	–	–
೨೫೦	ಅಚ್‌ಹೂ ಸಾಹೇಬಾ	–	–	–
೨೫೧	ಬೀಬಿ ಆಯಿಷಾ	–	–	–
೨೫೨	ರಾಜಿ ಸಾಹೇಬಾ	–	–	–
೨೫೩	ಬಡೇ ಬೀಬೀ ಸಾಹೇಬಾ	–	–	–
೨೫೪	ಶಾಹ್ ಮುರ್ತುಜಾ ಖಾದ್ರಿ	ಜಮಾದುಸ್ಸಾನಿ	ಫತೇಹದರವಾಜಾ (ಮನಗೂಳಿ ಅಗಸಿಯ) ಹೊರಭಾಗದಲ್ಲಿ	ಸಮಾಧಿಯ ಮೇಲೆ ಗುಮ್ಮಟವಿದೆ, ಉರುಸುತ್ಸವ ಜರುಗುತ್ತದೆ.
೨೫೫	ಶಾಹ್ ಸೂಫಿ	–	ಶಾಹ್ ಮುರ್ತುಜಾಖಾದ್ರಿಯವರ ಗುಂಬಜಿನ ಒಳಭಾಗದಲ್ಲಿ ಇರುವದು	ಸಮಾಧಿಯ ಮೇಲೆ ಗುಮ್ಮಟವಿದೆ, ಉರುಸುತ್ಸವ ಜರುಗುತ್ತದೆ.
೨೫೬	ಮುರ್ತುಜಾ ಖಾದ್ರಿಯವರ ಅಳಿಯಂದಿರಾದ ಶಾಹ್ ತವಕ್ಕಲ್	–	ಶಾಹ್ ಮುರ್ತುಜಾಖಾದ್ರಿಯವರ ಗುಂಬಜಿನ ಹೊರಗಡೆ	ಕಟ್ಟೆಯ ಮೇಲೆ ಸಮಾಧಿ ಇದೆ
೨೫೭	ಶಾಹ್ ಹುಸೈನ್	–	ಶಾಹ್ ಮುರ್ತುಜಾಖಾದ್ರಿಯವರ ಗುಂಬಜಿನ ಹೊರಗಡೆ	ಕಟ್ಟೆಯ ಮೇಲೆ ಸಮಾಧಿ ಇದೆ
೨೫೮	ಶಾಹ್ ಹಫೀಜ್ ಅಬ್ದುಲ್ ಖಾದಿರ್ ಖಲೀಫಾ	–	ಶಾಹ್ ಮುರ್ತುಜಾಖಾದ್ರಿಯವರ ಗುಂಬಜಿನ ಹೊರಗಡೆ	ಕಟ್ಟೆಯ ಮೇಲೆ ಸಮಾಧಿ ಇದೆ
೨೫೯	ಮೀರ್ ಜೈನುದ್ದೀನ್	–	–	–
೨೬೦	ಅಲಿ ಮಿಯಾಂ	–	–	–
೨೬೧	ಹಾಜಿ ಜಾಕೀರ್	–	ಶಾಹ್ ಮುರ್ತುಜಾಖಾದ್ರಿಯವರ ಗುಂಬಜಿನ ಎದುರಿಗೆ	–
೨೬೨	ಮೀರ್ ಆಸಾರ್	–	–	–
೨೬೩	ಸೈಯದ್ ಅಮಾದ್	–	–	–
೨೬೪	ಹಾಲ್ತ ಮಿಯಾಂ	–	–	–
೨೬೫	ಖೂಬ್ ಮುಹಮ್ಮದ್	–	–	–
೨೬೬	ಸೈಯದ್ ಫರೀದ್	–	–	–
೨೬೭	ಮಿಯಾಂ ಬಾ ಮಶಾಯಕ್	–	–	–
೨೬೮	ಶೇಖ ಮುಹಿಯುದ್ದೀನ್ ವಾಯಿಜ್	–	–	–

೨೬೯	ಮೌಲ್ವಿ ಅಬ್ದುಲ್ ರೆಹಮಾನ್ ಮುತ್ತಖಿ	–	ಶಾಹ್ ಮುರ್ತುಜಾಖಾದ್ರಿಯವರ ಗುಂಬಜಿನ ಹೊರಭಾಗದಲ್ಲಿ, ಕಂಪೌಂಡ್ ಗೋಡೆಯ ಒಳಗಡೆ	–
೨೭೦	ಶೇಖ ಅಹ್ಮದ್ ಮುದರ್ರಿಸ್	–	–	–
೨೭೧	ಸೈಯದ್ ಅಬ್ದುಲ್ ರೆಹಮಾನ್	–	ಮನಗೂಳಿ ಅಗಸಿಯ ಹೊರಗಡೆ	ಕಟ್ಟೆಯ ಮೇಲ್ಗಡೆ ಸಮಾಧಿ ಇದೆ
೨೭೨	ಸೈಯದ್ ಮುಹಮ್ಮದ್	–	ಇವರು ಸೈಯದ್ ಅಬ್ದುಲ್ ರೆಹಮಾನ್‌ರ ಪುತ್ರರಾಗಿರುವರು	–
೨೭೩	ಶಾಹ್ ಹಿದಾಯತಲ್ಲಾಹ್ ಸೂಫಿ	–	–	–
೨೭೪	ಶಾಹ್ ಹಂಝಾ ಫಕೀರ್	–	–	–
೨೭೫	ಶಾಹ್ ಬಹಾದ್ದೂರ್	–	–	–
೨೭೬	ಹಾಜಿ ಸೈಯದ್	–	–	–
೨೭೭	ಶೇಖ್ ಸಲಾಹ್	–	–	–
೨೭೮	ಸೈಯದ್ ವಜೀಹ್ ಜಾಕೀರ್	–	–	–
೨೭೯	ಮಿಯಾಂ ಅಬ್ದುಲ್ ರಹೀಂ ಜಾಕೀರ್	–	–	–
೨೮೦	ಅಜೀಜ್ ಶಾಹ್	–	–	–
೨೮೧	ಶೇಖ ಸುಲೈಮಾನ್	–	–	–
೨೮೨	ಖಾಜಿ ಅಬ್ದುಲ್ಲಾಹ್	–	–	–
೨೮೩	ಬಾವಾ ಇಮ್ಲಾಖ್ ಮಜಬೂಬ್	–	–	–
೨೮೪	ಶಾಹ್ ಸಿಬ್ಗತಲ್ಲಾಹ್ ಮಜಬೂಬ್	–	–	–
೨೮೫	ಸಿತ್ತಿ ಹುರೈರಾ	–	–	–
೨೮೬	ಮಿರ್ಜಾ ಇನಾಯತಲ್ಲಾಹ್	–	–	–
೨೮೭	ಹೈದರ್ ಆಖಾ	–	–	–
೨೮೮	ಮಕ್ಸೂದ್ ಆಖಾ	–	–	–
೨೮೯	ಇಖ್ಲಾಸ್‌ಖಾನ್	–	ಶಾಹ್ ಮುರ್ತುಜಾಖಾದ್ರಿಯವರ ಗುಂಬಜಿನ ಬಳಿ	ಸಮಾಧಿಯ ಮೇಲೆ ಗುಮ್ಮಟವಿದೆ. ಅರ್ಧ ಗುಮ್ಮಟ ಉಳಿದಿದೆ.
೨೯೦	ಇಬ್ರಾಹಿಂಖಾನ್	–	–	–
೨೯೧	ಅಲ್ಲಾಬಕ್ಷ	–	–	–
೨೯೨	ಶೇಖ ಹಸನ್ ರಜಾ ಸರ್‌ಮಸ್ತ್	–	–	–
೨೯೩	ಶೇಖ ಅಬು ಅಲೂಫಾ ಸರ್‌ಮಸ್ತ್	–	–	ಸಾರವಾಡದ್ವಾರದ ಹೊರಗಡೆ ಸಮಾಧಿಗಳು ಇರುವವು
೨೯೪	ಶೇಖ ಅಬುಲ್ ಖಾಸಿಂ ಸರ್‌ಮಸ್ತ್	–	–	–
೨೯೫	ಶೇಖ ಅಬ್ದುಲ್ ಅಜೀಜ್ ಸರಮಸ್ತ್	–	–	–
೨೯೬	ಶೇಖ ಅಹ್ಮದ್ ಸಿಪಾ ಅಂಗೇಜ	–	–	–
೨೯೭	ಶೇಖ ಅಬ್ದುಲ್ ಖಾದಿರ್ ಸರ್‌ಮಸ್ತ್	–	–	–

೨೯೮	ಶೇಖ ಅಹ್ಮದ್ ನಜೀರ್	–	ಸಾರವಾಡದ್ವಾರದ ಬಳಿ ಇದೆ	ಕಟ್ಟೆಯ ಮೇಲೆ ಸಮಾಧಿ ಇದೆ
೨೯೯	ಸೈಯದ್ ಅಹ್ಮದ್ ಇದ್ರೂಸ್	–	–	–
೩೦೦	ಜಮಿ ಸಾದಾತ್ ಅರಬ್	–	–	–
೩೦೧	ಶೇಖ ಅಹ್ಮದ್ ಬರ್ವಿ	–	ಬಹಮನಿ ದ್ವಾರದ ಒಳಗಡೆ ಉದ್ಯಾನದಲ್ಲಿದೆ	ಕಟ್ಟೆಯ ಮೇಲೆ ಸಮಾಧಿ ಇರುವದು
೩೦೨	ಮಿಯಾಂ ಅಬ್ದುಲ್ ರಹಮಾನ್ ಮುತ್ತಖಿ	–	–	–
೩೦೩	ಶಾಹ್ ಅಬುಲ್ ಆಲಾ ಉರ್ಫ್ ಮಂಜೇಶಾ ಬುಜುರ್ಗ್	–	–	–
೩೦೪	ಶಾಹ್ ಮೀರ್ ನಾಬೀನಾ	–	–	–
೩೦೫	ಶಾಹ್ ಇಬ್ರಾಹಿಂ ಬುಜುರ್ಗ್	–	–	–
೩೦೬	ಶಾಹ್ ಹಜ್ರತ್ ಥಾನಾದಾರ್	–	–	–
೩೦೭	ವಫಾಖಾನ್	–	–	–
೩೦೮	ಹಸನ್ ರೂಮಿಖಾನ್	–	–	–
೩೦೯	ಸಿದ್ದಿ ನಸ್ಲಾಖಾದಿಮ್ ಆಸಾರ್ ಷರೀಫ್	–	–	–
೩೧೦	ಶಾಹ್ ಮುರ್ತುಜಾ ಹುಸೈನಿ ಅಲ್ವಿ	೧೬, ಷವ್ವಾಲ ಹಿಜ್ರಿಶಕೆ, ೧೧೬೧	ಹಾಷಿಂಪೀರ್ ದರ್ಗಾದ ಒಳಭಾಗದಲ್ಲಿ	–
೩೧೧	ಶಾಹ್ ಹಾಷಿಂ ಹುಸೈನಿ ಅಲ್ವಿ	೧೬, ಜಮಾದುಸ್ಸಾನಿ. ಹಿ.ಶ. ೧೧೫೭	ಹಾಷಿಂಪೀರ್ ದರ್ಗಾದ ಒಳಭಾಗದಲ್ಲಿ	–
೩೧೨	ಶಾಹ್ ವಜೀಯುದ್ದೀನ್ ಹುಸೈನು ಅಲ್ವಿ	೭. ಜಮಾದುಸ್ಸಾನಿ. ಹಿ.ಶ. ೧೧೮೨ ಹಿ.ಶ.	ಹಾಷಿಂಪೀರ್ ದರ್ಗಾದ ಒಳಭಾಗದಲ್ಲಿ	–
೩೧೩	ಶಾಹ್ ಮುಹಮ್ಮದ್ ಗೌಸ್ ಹುಸೈನಿ ಅಲ್ವಿ	೨೯, ಸಫರ್, ೧೧೮೫ ಹಿ.ಶ.	ಹಾಷಿಂಪೀರ್ ದರ್ಗಾದ ಒಳಭಾಗದಲ್ಲಿ	–
೩೧೪	ಶಾಹ್ ಅಬ್ದುಲ್ಲಾಹ್ ಹುಸೈನಿ ಅಲ್ವಿ	೨೮, ಜಮಾದುಲ್ ಅವ್ವಲ್ ೧೨೪೬ ಹಿ.ಶ.	ಹಾಷಿಂಪೀರ್ ದರ್ಗಾದ ಎದುರಲ್ಲಿ	–
೩೧೫	ಶಾಹ್ ವಜೀಯುದ್ದೀನ್ ಸಾನಿ ಅಲ್ವಿ	೯ ರಬ್ಬಿವುಲ್ ಅವ್ವಲ್	ಹಾಷಿಂಪೀರ್‌ದರ್ಗಾದ ರಕ್ಷಣಾಗೋಡೆಯ ಒಳಗಡೆ ಇರುವದು	–
೩೧೬	ಶಾಹ್ ನಯೀಮುಲ್ಲಾಹ್ ಖಾದ್ರಿ	–	ದರನ್‌ಬಾರ್ಖಾರ್	ಸಮಾಧಿಯ ಮೇಲೆ ಗುಂಬಜ್ ಇರುವದು
೩೧೭	ಶಾಹ್ ಖುತುಬುದ್ದೀನ್ ಸಫದಿ	–	ಹಜ್ರತ್ ಹಾಷಿಂಪೀರ್‌ದ ದರ್ಗಾದ ಎದುರಿಗೆ, ಕಂಪೌಂಡಿನ ಒಳಗಡೆ	–
೩೧೮	ಶಾಹ್ ಹಜ್ರತ್ ಖಾದ್ರಿ	೧೪, ಮೊಹರ್ರಂ	ಜಾಮಿಯಾ ಮಸೀದೆಯ ಹಿಂದುಗಡೆ, ಅನಾಹೊಸೂರರ ಮನೆಯ ಪ್ರಾಂಗಣದಲ್ಲಿ	ಗುಮ್ಮಟವಿದೆ ಹಾಗೂ ಉರುಸುತ್ಸವವು ಜರುಗುತ್ತದೆ

೩೧೮	ಶಾಹ್ ಹಜ್ರತ್ ಖಾದ್ರಿ	೧೪, ಮೊಹರ್ರಂ	ಜಾಮಿಯಾ ಮಸೀದೆಯ ಹಿಂದುಗಡೆ, ಅನಾಹೊಸೂರರ ಮನೆಯ ಪ್ರಾಂಗಣದಲ್ಲಿ	ಗುಮ್ಮಟವಿದೆ ಹಾಗೂ ಉರುಸುತ್ಸವವು ಜರುಗುತ್ತದೆ
೩೧೯	ಶಾಹ್ ಕರೀಮುಲ್ಲಾಹ್ ಖಾದ್ರಿ	–	–	ಪ್ರಾಂಗಣವಿದೆ
೩೨೦	ಶಾಹ್ ರಜವಿ	–	–	–
೩೨೧	ಸೈಯದ್ ಅಬ್ದುಲ್‌ರೆಹಮಾನ್ ಹುಸೈನಿ ಚಾದ್ರಿ	೧೧, ರಬ್ಬುವುಸ್ಸಾನಿ ೧೧೨೦ ಹಿ.ಶ.	ಜಾಮಿಯಾ ಮಸೀದೆಯ ಹತ್ತಿರ	ಗುಮ್ಮಟವಿದೆ
೩೨೨	ಸೈಯದ್ ಕರೀಂ ಮುಹಮ್ಮದ್ ಹುಸೈನಿ ಚಾದ್ರಿ	೨೪, ಜಮಾದುಸ್ಸಾನಿ, ೧೧೦೫ ಹಿ.ಶ.	ಜಾಮಿಯಾ ಮಸೀದೆಯ ಹತ್ತಿರ	ಗುಮ್ಮಟವಿದೆ
೩೨೩	ಸೈಯದ್ ಹಾಜಿ ಹಸನ್ ಖಾದ್ರಿ	೧೮, ರಜ್ಜಬ್	ಸೀ ಬರ್ಝಾರ್‌ದಲ್ಲಿದೆ	ಗುಮ್ಮಟವಿದೆ
೩೨೪	ಶಾಹ್ ಇಬ್ರಾಹಿಂ ಬಗ್ದಾದಿ	೧೭, ರಂಜಾನ್	ಜಕಾತಿ–ಬರ್ಝಾರ್, ಜಾಮಿಯಾ ಮಸೀದೆ ಹತ್ತಿರ	ಗುಮ್ಮಟವಿದೆ
೩೨೫	ಸೈಯದ್ ಅಬೂಬಕರ್ ಚಾಫಕಿಯವರ ತಂದೆಯವರಾದ ಸೈಯದ್ ಅಬ್ದುಲ್‌ರೆಹಮಾನ್	–	ಅರಬ್‌ವಾಡಿ, ಆಸಾರ್‌ಷರೀಫ್ ಹತ್ತಿರ	ಕಟ್ಟೆಯ ಮೇಲೆ ಸಮಾಧಿ ಇದೆ
೩೨೬	ಸೈಯದ್ ಜೈನ್ ಮುಕ್ಬಿಲ್	–	ಶಾಹಪೇಟದಲ್ಲಿರುವದು.	ಕಟ್ಟೆಯ ಮೇಲೆ ಸಮಾಧಿ ಇದೆ
೩೨೭	ಸೈಯದ್ ಅಬ್ದುಲ್ಲಾಹ್ ಮುಕ್ಬಿಲ್	–	ಶಾಹಪೇಟದಲ್ಲಿ	ಕಟ್ಟೆಯ ಮೇಲೆ ಸಮಾಧಿ ಇದೆ
೩೨೮	ಸೈಯದ್ ಅಲ್ವಿ ಬುರೂಮ್	–	ಸಕಾಫರೋಜಾ ಲಂಗರ್ ಬರ್ಝಾರದಲ್ಲಿದೆ	ಕಟ್ಟೆಯ ಮೇಲೆ ಸಮಾಧಿ ಇದೆ
೩೨೯	ಮೌಲಾನಾ ಸಿದ್ದು ಅಬ್ದುಲ್ ರಹಿಂ	–	ಅರಬ್‌ವಾಡಿ ಅಸಾರ್‌ಷರೀಫಹತ್ತಿರ	ಕಟ್ಟೆಯ ಮೇಲೆ ಸಮಾಧಿ ಇದೆ
೩೩೦	ಮೌಲ್ವಿ ಖಲೀಲುರ್‌ರಹಿಮಾನ್	–	ಸೀ ಬಾರ್ಝಾರದಲ್ಲಿ ಷಾ.	ಕಟ್ಟೆಯ ಮೇಲೆ ಸಮಾಧಿ
೩೩೧	ಮುಹಮ್ಮದ್ ಅಕ್ರಂ, ಸದರ್	–	ಸೀ ಬಾರ್ಝಾರನಲ್ಲಿ ಶಾಹ್ ಖಾಸಿಂ ಖಾದ್ರಿಯವರ ಎದುರಲ್ಲಿ	ಕಟ್ಟೆಯ ಮೇಲೆ ಸಮಾಧಿ ಇದೆ
೩೩೨	ಸಿಕಂದರ್ ಆದಿಲ್‌ಶಾಹ್	೧೧೧೧ ಹಿಜ್ರಿಶಕೆ	ನೌಬಾರ್ಝಾರ್ (ಛೋಟಾ ಆಸಾರ್) ಹಜ್ರತ್ ಶಾಹ್ ನಯೀಮುಲ್ಲಾಹ್ ಖಾದ್ರಿಯವರ ದರ್ಗಾದ ಎದುರುಗಡೆ	ಕಟ್ಟೆಯ ಮೇಲೆ ಸಮಾಧಿ ಇದೆ
೩೩೩	ಮುಹಮ್ಮದ್ ಅಕ್ಬರ್	–	ಸೀ ಬಾರ್ಝಾರ್‌ನಲ್ಲಿ ಶಾಹ್ ಖಾಸಿಂ ಖಾದ್ರಿಯವರ ದರ್ಗಾದ ಎದುರಲ್ಲಿ	ಕಟ್ಟೆಯ ಮೇಲೆ ಸಮಾಧಿ ಇದೆ
೩೩೪	ಶೇಖ್ ಮುಹಮ್ಮದ ಅರಬ್	–	–	–

೩೩೪	ಶೇಖ್ ಮುಹಮ್ಮದ ಅರಬ್	–	–	–
೩೩೫	ಶೇಖ ಅರಬ್‌ರ ಪುತ್ರರಾದ ಶೇಖ ಇಬ್ರಾಹಿಂ	–	–	–
೩೩೬	ಸ್ಯೆಯದ್ ಅಬ್ದುಲ್ಲಾಹ್ ಇದ್ರೂಸ್	–	ಆಸಾರ್ ಷರೀಫದ ಹತ್ತಿರ ಶಾಹ್‌ಗಂಜ್‌ಬಾಗ್‌ದಲ್ಲಿ	–
೩೩೭	ಶಂಷುಜ್ಜುಹಾ ಸೂಫಿ	೧೧, ರಬ್ಬಿವುಸ್ಸಾನಿ ದೌಲತ್ ಕೋಟೆ	–	ಸಮಾಧಿಯ ಮೇಲೆ ಗುಮ್ಮಟವಿದೆ
೩೩೮	ಸ್ಯೆಯದ್ ಅಬುತುರಾಬ್	೨೦, ಮೊಹರಂ	ಸೀ ಬಾಝಾರನಲ್ಲಿ ಶಾಹ್‌ಖಾಸಿಂ ಖಾದ್ರಿಯವರ ದರ್ಗಾದ ಎದುರಲ್ಲಿ	ಸಮಾಧಿಯ ಮೇಲೆ ಚೌಖಂಡಿ ಇರುವುದು.

*

ಅನುಬಂಧ – ೨

ಪಾರಿಭಾಷಿಕ ಶಬ್ದಗಳು ಪರಿಭಾಷೆ

ಆದಾಬ್	–	ಅದಬ್‌ದ ಬಹುವಚನ, ಸ್ವಸ್ತಿ ವಚನ, ಗೌರವ ಸೂಚಕ, ಸದ್ವರ್ತನೆ
ಆಲಿಮ್	–	ಧಾರ್ಮಿಕ ಪಂಡಿತ, ಉಲ್ಮಾ, ಆಲಿಮ್‌ದಬಹುವಚನ, ವರ್ಗದ ಸದಸ್ಯ
ಆರಿಫ್	–	ಅಂತರ್ಜ್ಞಾನಿ, ಮರ್ಮಜ್ಞಾನಿ
ಆಶಿಕ್	–	ಪ್ರೇಮಿ
ಆಶೂರಾ	–	ಮೊಹರ್ರಂ ತಿಂಗಳ ೧೦ನೆಯ ದಿನ, ಇಮಾಮ್ ಹುಸೈನರು ಹುತಾತ್ಮರಾದ ದಿನ, ಹುತಾತ್ಮ ದಿನಾಚರಣೆ
ಆಶೂರಖಾನಾ	–	ಶಿಯಾಪಂಥದವರು ಅಲಂ ಇಡುವ ಸ್ಥಳ
ಅಸ್ನಾಯೇ ಅಶ್ರಾ	–	ಶಿಯಾ ಪಂಥದವರ ಒಂದು ಗುಂಪು, ಇದು ಬಾರಾಇಮಾಮ್‌ರಲ್ಲಿ ಅಸ್ಥೆ ಇಡುತ್ತದೆ. ಇದಕ್ಕೆ ಇಮಾಮಿಯಾ ಫಿರ್ಕಾ ಎನ್ನುವರು.
ಅಬ್ದ	–	ಸೇವಕ, ದಾಸ
ಅಬ್ದಾಲ	–	ಬದಲಿ ತರುವುದು, ಪರ್ಯಾಯ, ಸೂಫೀಗಳಲ್ಲಿ ಔಲಿಯಾಗಳ ಗುಂಪು ಯಾವುದರ ಕೈಯಲ್ಲಿ ಪ್ರಕೃತಿಯ ಮೇಲೆ ಹಿಡಿತವಿದೆಯೋ ಹಾಗೂ ಔಲಿಯಾಗಳ ಹತ್ತು ಹಂತಗಳಲ್ಲಿ ಇದುಐದನೆಯ ಹಂತ

ಆಬಿದ್	–	ಆರಾಧನೆಗೈಯ್ಯುವವ
ಆಬಿದಾ	–	ಆಗಾಧನೆಗೈಯುವವಳು
ಅಬ್ರಾರ್	–	ದೇವನಿಷ್ಠ, ನೇರಮಾರ್ಗದಲ್ಲಿ ಸಾಗುವವನು, ಸೂಫಿಗಳ ಒಂದು ಶಾಖೆ
ಅದಬ್	–	ಸದ್ವರ್ತನೆ
ಅದಲ್	–	ನ್ಯಾಯ
ಅಹ್ದ	–	ಪ್ರಮಾಣ
ಅಹ್ಲೆ	–	ಮನೆಯವರು, ವಿಶೇಷವಾಗಿ ಮುಹಮ್ಮದ್(ಸ) ಪ್ರವಾದಿಗಳ ಮನೆಯವರು, ಹಜ್ರತ್ ಅಲಿ, (ರ) ಫಾತಿಮುತುಜ್ಜಹ್ರಾ, (ರ) ಇಮಾಮ್ ಹಸನ್ (ರ) ಹಾಗೂ ಇಮಾಮ್ ಹುಸ್ಯೆನ್
ಅಹ್ಲೆ ಸಿಲ್‌ಸಿಲಾ	–	ಒಂದು ಪರಂಪರೆಯೊಂದಿಗೆ ಸಂಬಂಧವುಳ್ಳವರು
ಅಹ್ಲೆ ಮಾರಿಫಾ	–	ಧರ್ಮಜ್ಞಾನಿ
ಅಹ್ಲೆ ದುನಿಯಾ	–	ಲೌಕಿಕರು
ಐನುಲ್ ಯಖೀನ್	–	ಪ್ರತ್ಯಕ್ಷ ಕಂಡರೂ ಪ್ರಮಾಣಿಸುವದು
ಅಹ್ಲೆ ಸುಫಾ	–	ಪ್ರವಾದಿ ಸಂಗಾತಿಗಳ ಒಂದು ಗುಂಪು
ಅಹ್‌ವಾಲ್	–	ಕ್ಷೇಮ ಕುಶಲ, ಅಲ್ಲಾಹುವಿನ ಸಹಾಯದೊಂದಿಗೆ ರಹಸ್ಯವಿದ್ಯೆಯಲ್ಲಿ ಉನ್ನತ ದರ್ಜೆಗೆ ತಲುಪುವ ಹಂತ
ಹಾಲ್	–	(ಹಾಲ್‌ನಿಂದ ಅಹವಾಲ್) ದೈವೀ ಪರವಶತೆ, ಭಾವ ಸಮಾಧಿ
ಅಜಲ್	–	ಅಲ್ಲಾಹುವಿನಿಂದ ನಿರ್ದಿಷ್ಟಗೊಂಡ ಸಾವಿನ ಸಮಯ
ಅಖ್ಫಿ	–	ಚಿದಂಬರ ರಹಸ್ಯ
ಅಖ್ಬಾರ	–	ಸುದ್ದಿ, ಸಂದೇಶ, ಮಾಹಿತಿ
ಅಖಿ	–	ಸಹೋದರ

ಆಖಿರಾ, ಆಖಿರತ್ – ಪರಲೋಕ, ಸಾವಿನ ನಂತರ ಮನುಷ್ಯನ ಆತ್ಮವು ಈ ಲೋಕಕ್ಕೆ ವಿದಾಯ ಹೇಳಿ ಅಂದರೆ ಪರಲೋಕಕ್ಕೆ ಹೋಗುವುದು

ಅಖ್ಲಾಖ – ಚಾರಿತ್ರ್ಯ, ಸದ್ವರ್ತನೆ

ಅಖಿಯಾರ್ – ಪವಿತ್ರ ಜನರು, ಆಯ್ಕೆಗೊಂಡವರು, ಸೂಫಿಗಳ ಒಂದು ಶಾಖೆ

ಆಲಂ – ಜಗತ್ತು

ಆಲಮುಲ್‌ಗೈಬ್ – ಅದೃಶ್ಯಲೋಕ

ಆಲಿಮ್ – ಧಾರ್ಮಿಕ ವಿದ್ವಾಂಸ, ಮೌಲ್ವಿ

ಅಲ್ಲಾಹ್ – ಅಲ್ಲಾಹುವಿನ ೯೯ ನಾಮಗಳಲ್ಲಿ ಒಂದು

ಅಮಲ್ – ಆಚರಣೆ

ಆಮಾಲಲ್ ಹಸ್ನಾ – ಉತ್ತಮ ಕಾರ್ಯಗಳು

ಅಮಾನ್ – ಅಲ್ಲಾಹುವಿನಲ್ಲಿ ಧೃಢ ವಿಶ್ವಾಸ

ಅಮೀನ್ – ವಿಶ್ವಸ್ಥ, ಪ್ರಾಮಾಣಿಕ

ಅಲ್‌ಅಮೀನ್ – ಮುಹಮ್ಮದ್(ಸ)ರಿಗೆ ಅವರ ಯೌವನಾವಸ್ಥೆಯಲ್ಲಿ ಅವರ ಸದ್ಗುಣಕ್ಕೆ ಮರುಳಾಗಿ ಮಕ್ಕಾದ ಜನರು ನೀಡಿದ ಬಿರುದು ಇದರ ಅರ್ಥ ಅತ್ಯಂತ ಪ್ರಾಮಾಣಿಕ, ವಿಶ್ವಸ್ಥ, ಅಮಾನತ್ತುದಾರ, ಅತ್ಯಂತ ವಿಶ್ವಾಸಿಕ ಎಂದಾಗುತ್ತದೆ.

ಅಮೀರ್ – ನಾಯಕ, ಆಡಳಿತಗಾರ

ಅಮರ್ – ಶಾಶ್ವತ

ಅಖ್ಲ – ಬುದ್ಧಿ

ಅಖ್ತಾಬ್ – ಖುತುಬ್‌ದ ಬಹುವಚನ, ಸೂಫಿಗಳ ಒಂದು ಶಾಖೆ, ಖುತುಬ್ ಎಂದರೆ ಆ ಸೂಫಿಯರ ವಶದಲ್ಲಿ ಒಂದು ಪ್ರದೇಶವಿರುವುದು

ಅಸಹಾಬ್	–	ಪ್ರವಾದಿ ಸಂಗಾತಿಗಳು
ಅಸ್ಮಾ ಅಲ್ ಹುಸ್ನಾ	–	ಅಲ್ಲಾಹುವಿನ ಅಪಾರ ಅರ್ಥವುಳ್ಳ ಸುಂದರ ೯೯ ನಾಮಗಳು
ಅವರೂದ್	–	ವಿರ್ದ್‌ದ ಬಹುವಚನ, ಸ್ಮರಣೆಯ ಸೂತ್ರವೆಂದರ್ಥ. ಒಂದು ಜಪ ಕಾರ್ಯ ಒಂದು ದಿನವೂ ತಪ್ಪದೇ ನಿರಂತರವಾಗಿ ಗೈಯುವುದು, ರೂಢಿ, ವಜೀಫಾ
ಬಖಾ	–	ಶಾಶ್ವತ, ಅಮರ, ಅಲ್ಲಾಹುವಿನ ಸ್ಮರಣೆಯಲ್ಲಿ ನಿರಂತರ ನಿಮಗ್ನರಾಗುವಿಕೆ
ಬರ್ಕತ್	–	ಸಮೃದ್ಧಿ
ಬರ್ಜಖ್	–	ಸೇತುವೆ, ಮರಣೋತ್ತರದಿಂದ ಕಯಾಮತ್ (ಪ್ರಳಯ)ದ ವರೆಗಿನ ಸ್ಥಿತಿ
ಬಶಾರತ್	–	ಸಂತಸದ ಸುದ್ದಿ, ಅದೃಶ್ಯ ಧ್ವನಿ, ಆಕಾಶವಾಣಿ
ಬಾತಿನ್	–	ಅಂತರಂಗ
ಬೈಅತ್	–	೧. ವಚನ ಕೊಡುವುದು ೨.ಆಜ್ಞಾಪಾಲನೆಯ ಪ್ರತಿಜ್ಞೆ ಮಾಡುವುದು ೩. ವಚನ ಬದ್ಧರಾಗುವದು ೪. ಸೂಫಿದೀಕ್ಷೆ ೫. ಮುರ್ಷದ್‌ರ ಎದುರಲ್ಲಿ ಪ್ರಮಾಣಗೈಯುವದು, ಅನುಯಾಯಿಯಾಗುವುದು, ಮರೀದ್(ಶಿಷ್ಯ)ನಾಗಿ ಪರಿವರ್ತಿತನಾಗುವದು ಹಾಗೂ ಸೂಫಿಪಂಥದ ಒಂದು ಪರಂಪರೆಯಲ್ಲಿ ದಾಖಲಿಸಿಕೊಳ್ಳುವ ಪ್ರಕ್ರಿಯೆ
ಬೇಖುದಿ	–	ಸಂಜ್ಞಾಹೀನತೆ, ನಿಮಗ್ನತೆ
ಚಿಲ್ಲಾ	–	ನಿಮಗ್ನ, ನಲ್ವತ್ತು ದಿನಗಳವರೆಗೆ ಒಂದೆಡೆ ಕುಳಿತು ಧ್ಯಾನ, ಜಪದಲ್ಲಿ ನಿಮಗ್ನನಾಗುವುದು
ದರ್ಗಾ	–	ಗುಂಬಜವುಳ್ಳ ಸೂಫಿ ಸಮಾಧಿ
ದರ್ವೇಶ್	–	ಮಾರಿಫತ್ ಜ್ಞಾನದಲ್ಲಿ ಪಾರಂಗತ, ಫಕೀರ, ಭಾವ ಸಮಾಧಿಗೆ ಹೆಚ್ಚು ಮಹತ್ವ ನೀಡುವವರು

ಜಿಕ್ರ	–	ಅಲ್ಲಾಹುವಿನ ಸ್ಮರಣೆ ಹಾಗೂ ಅಲ್ಲಾಹುವಿನ ನಾಮಗಳ ಜಪ. ನಾಲಿಗೆ ಹಾಗೂ ಮನಃಪೂರ್ವಕ ಅಲ್ಲಾಹುವನ್ನು ಸ್ಮರಿಸುವದು
ಜಿಕ್ರೆ ಜಾಲಿ	–	ಅಲ್ಲಾಹುವಿನ ನಾಮಸ್ಮರಣೆಯನ್ನು ಉಚ್ಚಧ್ವನಿಯಲ್ಲಿ ಜಪಿಸುವುದು
ಜಿಕ್ರೆ ಖಫಿ	–	ನಿಶ್ಯಬ್ದವಾಗಿ ಅಲ್ಲಾಹುವಿನ ನಾಮ ಜಪಿಸುವುದು. ಇದಕ್ಕೆ ಜಿಕ್ರೆ ಖಲ್ಬಿ ಎಂದರೆ ಹೃದ್ಗತವೆಂತಲೂ ಕರೆಯುವರು
ದೀನ್	–	ಧರ್ಮ
ಫಖ್ರ	–	ಹೆಮ್ಮೆ
ಫಕೀರ	–	ದರ್ವೀಶ್, ಸೂಫಿ, ಅಲ್ಲಾಹುವಿನ ಆರಾಧಕ, ಪರಾವಲಂಬಿ, ಇಸ್ಲಾಮಿನ ಷರಿಯತ್ತಿನಂತೆ ಯಾವ ವ್ಯಕ್ತಿಯ ಬಳಿ ಕೇವಲ ಒಂದು ಹೊತ್ತಿನ ಊಟ ಮಾತ್ರವಿರುವದೋ ಆ ವ್ಯಕ್ತಿಗೆ ಫಕೀರ ಎನ್ನುವರು.
ಫನಾ	–	ನಿರ್ವಾಣ, ಶೂನ್ಯ, ನಾಶ
ಫನಾ ಫಿದ್ದುನಿಯಾ	–	ಲೌಕಿಕ ಪ್ರೇಮದಲ್ಲಿ ಮುಳುಗುವಿಕೆ
ಫನಾ ಅಲ್ ಫನಾ	–	ಜೀವನ್ಮುಕ್ತಿ
ಫನಾ ಫಿಲ್ಲಾಹ	–	ಅಲ್ಲಾಹುವಿನ ಪ್ರೇಮದಲ್ಲಿ ಲಯವಾಗುವದು
ಫನಾ ಫಿ ರಸೂಲ್	–	ಮುಹಮ್ಮದ್(ಸ)ರ ವ್ಯಕ್ತಿತ್ವಕ್ಕೆ ಮರುಳಾಗಿ ಸಂಪೂರ್ಣ ಸಮರ್ಪಣಗೈಯುವುದು
ಫನಾಫಿ ಶೇಖ್	–	ಗುರುಪ್ರೇಮದಲ್ಲಿ ಲಯವಾಗುವದು
ಫಖಾ	–	ಷರೀಯತ್ತಿನ ಕಾನೂನನ್ನು ಬಲ್ಲವನು
ಫಖಿ	–	ಕಾನೂನು ತಜ್ಞ, ಮುಫ್ತಿ
ಫಾತೆಹಾ	–	೧.ಪ್ರಾರಂಭ ೨.ಕುರ್‌ಆನಿನ ಮೊದಲನೆಯ ಅಧ್ಯಾಯ ೩. ಆತ್ಮಕ್ಕೆ ತೃಪ್ತಿಯೊದಗಿಸುವ ಮನದಿಂದ ಕುರ್‌ಆನಿನ ಮೊದಲನೆಯ ಅಧ್ಯಾಯ ಓದುವದು ೪.ಕಾಣಿಕೆ

ಫರ್ಮಾನ್	–	ರಾಜಾಜ್ಞೆ, ಹುಕುಂನಾಮಾ, ಸನದು
ಫತ್ವಾ	–	ಇಸ್ಲಾಮಿನ ಕಾನೂನಿನನ್ವಯ ಮುಫ್ತಿ ನೀಡುವ ತೀರ್ಮಾನ
ಗಂಜ್	–	ಖಜಾನೆ, ಭಂಡಾರ
ಗಾಜಿ	–	ಯೋಧ, ಧರ್ಮಕ್ಕಾಗಿ ಹೋರಾಡುವವ
ಗೀಬತ್	–	ನಿಂದೆ
ಗುಸೂಲ್	–	ಸ್ನಾನ
ಗುಸ್ಸಾಲ್	–	ಶವಸ್ನಾನಗೈಯ್ಯುವವನು
ಗೌಸ್	–	ಪರಮಾಪ್ತ, ಒಂದು ಸೂಫಿ ಹಂತ,
ಗಿಲಾಫ್	–	ಸೂಫಿ ಸಮಾಧಿಯ ಮೇಲೆ ಹೊದಿಸುವ ವಸ್ತ್ರ
ಗೋದಡಿ	–	ಸೂಫಿ ಗುರುಗಳ ಉಣ್ಣೆಯ ನಿಲುವಂಗಿ
ಹದೀಸ್	–	ಪ್ರವಾದಿ ಮುಹಮ್ಮದ(ಸ)ರ ನಡೆನುಡಿಯ ದಾಖಲೆ, ಪ್ರವಾದಿಯವರ ವಚನ ಸಂಗ್ರಹ
ಹಕಮ್	–	ತೀರ್ಮಾನ ಕೊಡುವವ
ಹಜ್	–	ಇಚ್ಛೆ ಮಾಡುವುದು, ಇಸ್ಲಾಂ ಧರ್ಮದ ಐದು ಮೂಲಸ್ತಂಭಗಳಲ್ಲಿ ಒಂದು, ಒಂದು ನಿರ್ದಿಷ್ಟವಾದ ಸಮಯದಲ್ಲಿ ಅಂದರೆ ಹಜ್ ತಿಂಗಳಲ್ಲಿ ಮಕ್ಕಾ–ಮದೀನಾಕ್ಕೆ ಯಾತ್ರೆಗೆ ಹೋಗಿ ಅದರ ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು
ಹಾಲ್	–	ದೈವೀ ಪರವಶತೆ; ಭಾವ ಸಮಾಧಿ
ಹಲ್ಕಾ	–	ಗುಂಪು, ಸೂಫಿ ಗುರುವಿನ ಸುತ್ತಲೂ ಜಪಕ್ಕಾಗಿ ಕೂಡ್ರುವುದು
ಹಕೀಕತ್	–	ಪರಮ ಸತ್ಯ, ಸೂಫಿ ಪಂಥದ ಮೂರನೆಯ ಹಂತ ಮೊದಲೆರಡು ಷರೀಯತ್ ಹಾಗೂ ತರೀಖತ್
ಹಕ್	–	ಸತ್ಯ, ಅಲ್ಲಾಹು, ಸೂಫಿಗಳಲ್ಲಿ ಅಲ್ಲಾಹುವಿಗಾಗಿ ಬಳಸುವ ಶಬ್ದ

ಹಕ್ಕುಲ್ ಯಕೀನ್	–	ಅಲ್ಲಾಹುವನ್ನು ದಿಟದ ದೃಷ್ಟಿಯಿಂದ ಕಾಣುವುದು, ಅಲ್ಲಾಹುವನ್ನು ಸಂಪೂರ್ಣವಾಗಿ ನಂಬುವದು
ಹರಮ್	–	ಆದರಣೀಯವಾದ ಸ್ಥಳ, ಪ್ರತಿಷ್ಠಿತ ಸ್ಥಾನ, ಮಕ್ಕಾ ನಗರದಿಂದ ಆಚೆ ಹರಡಿರುವ ವಿಶಾಲ ಭೂಭಾಗಕ್ಕೆ 'ಹರಮ್' ಎಂಬ ಹೆಸರಿದೆ
ಹಲಾಲ್	–	ಶಾಸ್ತ್ರ ಸಮ್ಮತವಾದುದು
ಹರಾಂ	–	ವರ್ಜ್ಯ, ನಿಷಿದ್ಧವಾದುದು
ಹಿಜಾಬ್	–	ಪರ್ದಾ
ಹಜ್ರತ್	–	ಸನ್ಮಾನ್ಯ
ಹುನ್	–	ದಖ್ಖನ್ನಿನ ಚಿನ್ನದ ನಾಣ್ಯ
ಇಬಾದತ್	–	ಆರಾಧನೆ
ಇಜ್ತಿಹಾದ್	–	ಇಸ್ಲಾಮಿನ ಕಾನೂನನ್ನು ಪಾಲಿಸಿ ಕುರ್‌ಆನ್ ಹಾಗೂ ಹದೀಸ್‌ನ್ನು ಪ್ರಮಾಣವಾಗಿರಿಸಿಕೊಂಡು, ನಾಲ್ಕೂ ನಿಟ್ಟಿನಿಂದ ವಿಚಾರಿಸಿ ಧಾರ್ಮಿಕ ಸಮಸ್ಯೆಗಳನ್ನು ಪರಿಹರಿಸುವದು
ಎಹಸಾನ್	–	ಸದ್ವರ್ತನೆ, ಸತ್ಕರ್ಮ, ಉಪಕಾರ
ಇಲ್ಹಾಮ್	–	ಅರಿವು, ಅಲ್ಲಾಹುವಿನಿಂದ ಹೃದಯದಲ್ಲಿ ಒಡಮೂಡಿದ ಮಾತು
ಇಲ್ಮ್	–	ಜ್ಞಾನ, ಆಧ್ಯಾತ್ಮ ವಿದ್ಯೆ
ಇಲ್ಮೆ ಲದುನಿ	–	ಗುರುವಿನ ಮಧ್ಯಸ್ಥಿಕೆ ಇಲ್ಲದೆಯೇ ಅಲ್ಲಾಹುವಿನಿಂದ ನೇರವಾಗಿ ಲಭಿಸುವ ಜ್ಞಾನ
ಇಲ್ಮೆ ಕಸ್ಬಿ	–	ಪರಿಶ್ರಮದಿಂದ ಲಭಿಸುವ ಜ್ಞಾನ
ಇಲ್ಮುಲ್ ಯಕೀನ್	–	ಯಾವುದೇ ವಸ್ತುವಿನ ಕುರಿತು ಸಂಪೂರ್ಣವಾಗಿ ಅರಿಯುವುದು
ಇಮಾಮ್	–	ಸಾಮೂಹಿಕ ನಮಾಜಿನ ನೇತೃತ್ವ ವಹಿಸುವವನು, ಆಧ್ಯಾತ್ಮಿಕ ನಾಯಕ

ಇಮಾನ್	–	ಸತ್ಯ ವಿಶ್ವಾಸ, ಆಸ್ಥೆ, ಶ್ರದ್ಧೆ, ಧಾರ್ಮಿಕ ನಂಬಿಕೆ
ಇನಾಮ್	–	ಕಾಣಿಕೆ, ಕೊಡುಗೆ, ಬಹುಮಾನ ಸರಕಾರದಿಂದ ತೆರಿಗೆರಹಿತ ಭೂಮಿಯನ್ನು ವ್ಯಕ್ತಿಗೆ ಅಥವಾ ಸಂಸ್ಥೆಗೆ ನೀಡುವದು
ಇನಾಂದಾರ	–	ಇನಾಮಿನ ಜಮೀನನ್ನು ಪಡೆದವನು
ಇಬ್ಲಿಸ್	–	ಅಲ್ಲಾಹುವಿನ ಆಜ್ಞೆಯನ್ನು ಉಲ್ಲಂಘಿಸಿದ ದೇವಚರ
ಇರಾದಾ	–	ಇಚ್ಛೆ, ಬಯಕೆ, ಅಲ್ಲಾಹುವಿನ ಪಥದಲ್ಲಿ ಆತ್ಮದ ಯಾತ್ರೆಗೈಯ್ಯುವ ಮರೀದರ ಅದಮ್ಯ ಇಚ್ಛೆ
ಇರ್ಫಾನ್	–	ಅಲ್ಲಾಹುವಿನ ಅರಿಯುವಿಕೆ, ಆಧ್ಯಾತ್ಮಿಕ ರಹಸ್ಯವಿದ್ಯೆಯನ್ನು ಅರಿತವನು, ಜ್ಞಾನಿ
ಇರ್ಷಾದಾತ್	–	ಉಪದೇಶ, ಆಜ್ಞೆ, ಹೇಳಿಕೆ
ಇಷಾರಾ	–	ಸಂಜ್ಞೆ
ಇಷ್ಕೆ–ಹಕೀಕಿ	–	ಅಲ್ಲಾಹುವಿನಲ್ಲಿ ಪ್ರೇಮ
ಇಷ್ಕೆ–ಮಜಾಜಿ	–	ಲೌಕಿಕ ಪ್ರೇಮ, ಡಾಂಭಿಕ ಪ್ರೇಮ
ಇಸ್ಲಾಹ್	–	ಮನಃಪರಿವರ್ತನೆ, ಅಮೂಲಾಗ್ರ ಪರಿವರ್ತನೆ
ಇಸ್ಲಾಮ್	–	ಅಲ್ಲಾಹುವಿಗೆ ಸಮರ್ಪಿಸಿಕೊಳ್ಳುವದು, ಶಾಂತಿ, ಮುಸ್ಲಿಂರ ಧರ್ಮ, ಅಲ್ಲಾಹುವಿನ ಆಜ್ಞೆಯನ್ನು ಶಿರಸಾ ಪಾಲಿಸುವದು
ಇಸ್ತಿಗರ್ಕ್	–	ಅಲ್ಲಾಹುವಿನ ಸ್ಮರಣೆಯಲ್ಲಿ ತಲ್ಲೀನವಾಗುವಿಕೆ
ಇತ್ಬಾ	–	ಅನುಸರಿಸುವದು
ಇತ್ಮಿನಾನ್	–	ಸಂತೃಪ್ತಿ, ಸಾಂತ್ವನ
ಜಜ್ಬಾ	–	ಸೆಳೆವು, ಹುರುಪು, ಹುಮ್ಮಸ್ಸು
ಜಿಹಾದ್	–	ದೃಢ ಮನಸ್ಸಿನ ಹೋರಾಟ, ಸೂಫಿಗಳು ಲೌಕಿಕ ಆಕರ್ಷಣೆಯ ವಿರುದ್ಧ ಹೋರಾಡುವಿಕೆ, ಇಂದ್ರಿಯ ನಿಗ್ರಹಕ್ಕಾಗಿ ನಿರಂತರ ನಡೆಸುವ ಆತ್ಮಿಕ ಹೋರಾಟ

ಜಿನ್	–	ಯಕ್ಷ, ಹಟವಾದಿ ಗುಣವುಳ್ಳ ಜೀವಿ, ಅಗ್ನಿಯಿಂದ ಉದ್ಭವಿಸಿದ ಜೀವಿ, ಅದೃಶ್ಯ ಜೀವಿ
ಕಲ್ಮಾ	–	ಮುಸ್ಲಿಮ್‌ರು ದೃಢವಾಗಿ ನಂಬುವ ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುರ್ರ ಸೂಲುಲ್ಲಾಹ್ ಅಂದರೆ ಅಲ್ಲಾಹುವಿನ ಹೊರತಾಗಿ ಅನ್ಯ ದೇವನಿಲ್ಲ. ಮುಹಮ್ಮದರು ಅಲ್ಲಾಹುವಿನ ಸಂದೇಶವಾಹಕರು
ಕಾಮಿಲ್	–	ಉನ್ನತದರ್ಜೆಗೆ ತಲುಪಿದ, ಪರಿಪೂರ್ಣ ಪರಿಣಿತ
ಕರಾಮತ್	–	ಸೂಫಿಗಳಿಂದ ಜರುಗುವ ಪವಾಡ
ಕಷ್ಫ	–	ಜಾಹೀರುಗೊಳಿಸುವದು
ಖಲೀಫಾ	–	ಆಧ್ಯಾತ್ಮಿಕ ಉತ್ತರಾಧಿಕಾರಿ, ಅಲ್ಲಾಹುವಿನ ಪ್ರತಿನಿಧಿ, ಆಧ್ಯಾತ್ಮಿಕ ಗುರುವಿನಿಂದ ಖಿಲಾಫತ್ ಪಡೆದುಕೊಂಡು, ಬೇರೆಯವರಿಂದ ಆ ಪಂಥದಲ್ಲಿ ದಾಖಲಿಸಿಕೊಳ್ಳುವವ, ಆಧ್ಯಾತ್ಮಿಕ ಗುರುವು ಓರ್ವ ಅಥವಾ ಬಹಳಷ್ಟು ಖಲೀಫಾರನ್ನು ಹೊಂದಿರಬಹುದು
ಖಾನ್‌ಖಾಹ್	–	ಸೂಫಿ ವಂಶಸ್ಥರು ವಾಸಿಸುವ ಸ್ಥಳ, ಆಧ್ಯಾತ್ಮಿಕ ಗುರುವು ತಮ್ಮ ಶಿಷ್ಯೋತ್ತಮರಿಗೆ ವಿದ್ಯೆ ನೀಡುವ ಸ್ಥಳ
ಖತೀಬ್	–	ಖುತ್ಬಾ ನೀಡುವವ, ಉಪದೇಶಕ
ಖಿಲಾಫತ್	–	ಉತ್ತರಾಧಿಕಾರಿ, ಆಧ್ಯಾತ್ಮಿಕ ಗುರುವಿನಿಂದ ಅನುಮತಿ ಪಡೆದು ಬೇರೆಯವರಿಂದ ಆಯಾ ಪಂಥದೊಳಗೆ ದಾಖಲಿಸಿಕೊಳ್ಳುವದು
ಖಿಲಾಫತ್ ನಾಮಾ	–	ಖಿಲಾಫತ್ ನೀಡಿದ ಪ್ರಮಾಣ ಪತ್ರ
ಖಿರ್ಖಾ	–	ಗುದಡಿ, ದರವೇಶಿಗಳ ವಸ್ತ್ರ, ತೇಪೆ ಹಚ್ಚಿದ ವಸ್ತ್ರ, ಸೂಫಿಗಳ ಉಣ್ಣೆಯ ನಿಲುವಂಗಿ, ಅಹಂ ಮುರಿಯಲು ತೇಪೆ ಹಚ್ಚಿದ ಬಟ್ಟೆ ಉಡುವದು, ಆಗಾಗ ಆಧ್ಯಾತ್ಮಿಕ ಗುರುಗಳಿಂದ ತಮ್ಮ ಉತ್ತರಾಧಿಕಾರಿಗಳಿಗೆ ಸಾಂಕೇತಿಕವಾಗಿ ನೀಡುವ ವಸ್ತ್ರ

ಖ್ವಾಜಾ	–	ಗೌರವಾನ್ವಿತ ಬಿರುದು, ಉನ್ನತ ದರ್ಜೆಯ ವ್ಯಕ್ತಿಗಳಿಗೆ ಸಲ್ಲಿಸುವ ಗೌರವಪದ
ಖಾಜಿ	–	ನ್ಯಾಯಾಧೀಶ
ಲಂಗರ್‌ಖಾನಾ	–	ಬಡವರಿಗೆ, ದೀನರಿಗೆ, ಫಕೀರರಿಗೆ ದಿನನಿತ್ಯ ಅನ್ನ ವಿತರಿಸುವ ಸ್ಥಳ
ಲಾಹುತ್	–	ಅಲ್ಲಾಹುವಿನ ಆ ವಿಶೇಷ ಸ್ಥಾನ, ಎಲ್ಲಿ ಸಾಧಕನಿಗೆ 'ಫನಾಫಿಲ್ಲಾಹ್' ಲಭಿಸುವದು
ಮದಾರ್	–	ಒಂದು ಸೂಫಿ ಪಂಥ
ಮಜ್ಲಿಸ್	–	ಆಧ್ಯಾತ್ಮಿಕ ಸಭೆ
ಮಆಶ್	–	ನಿತ್ಯ ಜೀವನೋಪಯೋಗಿ ಆಧಾರ ರೂಪದಲ್ಲಿ ಗ್ರಾಮಗಳನ್ನು ದಯಪಾಲಿಸುವದು. ಇವು ಒಂದು ತೆರನಾಗಿ 'ಇನಾಮು' ಜಮೀನುಗಳಿದ್ದ ಹಾಗೆ
ಮೆಹದಿ	–	ಮಾರ್ಗದರ್ಶಕ, ನಾಯಕ, ಮುಸ್ಲಿಮ್‌ರ ಹನ್ನೆರಡನೆಯ ಇಮಾಮ್ ಇವರ ಅಸ್ತಿತ್ವವು ಪ್ರಳಯ ಕಾಲಕ್ಕೆ ಪ್ರಕಟವಾಗುವದು.
ಮಜಜೂಬ್	–	ಆಕರ್ಷಣೆಗೊಳಗಾದವ, ಸೆಳವಿಗೊಳಗಾದವ, ಅಲ್ಲಾಹುವಿನ ಪ್ರೇಮದಲ್ಲಿ ಲೀನನಾದವ, ಸ್ವಂತ ಪರಿಶ್ರಮ ಅಥವಾ ಗುರುವಿನಮಾರ್ಗದರ್ಶನ ವಿಲ್ಲದೆಯೇ ನೇರವಾಗಿ ಅಲ್ಲಾಹುವಿನ ಆಕರ್ಷಣೆಗೊಳಗಾದವ
ಮಲಕುತ್	–	ಅಲ್ಲಾಹುವಿನ ದೊರೆತನ, ದೇವಚರರ ಪ್ರಪಂಚ, ಸೂಫಿಗಳ ಬಳಿ 'ಆತ್ಮ'ಗಳ ಜಗತ್ತಿಗೆ ಅನ್ನುವರು.
ಮಲ್ಫುಜಾತ್	–	ಹೇಳಿಕೆಗಳು, ಪೀರ್‌ರಿಂದ ಹೇಳಲ್ಪಟ್ಟ ನುಡಿಗಳನ್ನು ಅವರ ಮುರೀದ್‌ರಿಂದ ದಾಖಲಿಸಿಕೊಳ್ಳುವದು ಹಾಗೂ ಸಂಗ್ರಹಿಸಿ ಪ್ರಚುರಪಡಿಸುವದು
ಮಖಾಮ್	–	ಹಂತ, ಆಜ್ಞೆ, ಸೂಫಿಗಳ ಪಥದಲ್ಲಿಯ ಒಂದು ಹಂತ, 'ಹಾಲ್'ಗಿಂತ ಭಿನ್ನವಾದುದು. ಸೂಫಿಗಳ ಸ್ವಯಂ

ಪ್ರಯತ್ನದಿಂದ ಈ ಹಂತವು ಸಿದ್ಧಿಸುವದು. ಆದರೆ 'ಹಾಲ್' ಅಲ್ಲಾಹುವಿನ ದೇಣಿಗೆಯಾಗಿದೆ.

ಮಖಾಮೆ ಕುರ್ಬ್ – ಸನಿಹದ ಸ್ಥಾನ, ಚಿಷ್ತಿಯಾ ಪಂಥದ ಸೂಫಿಗಳ ಹೆಗ್ಗುರಿ, ಅಲ್ಲಾಹುವಿನೊಂದಿಗೆ ಸ್ನೇಹ, ಅಥವಾ ಐಕ್ಯ ಅಥವಾ ಸಾಮಿಪ್ಯ, ಇದು ಸೂಫಿಗಳ ಸಾಧನೆಯನ್ನು ಅವಲಂಬಿಸಿದೆ.

ಮಾರಿಫತ್ – ಅಲ್ಲಾಹುವಿನ ಕುರಿತ ರಹಸ್ಯ ಜ್ಞಾನ, ಆಧ್ಯಾತ್ಮಿಕ ಜ್ಞಾನ, ಪಾರಲೌಕಿಕ ವಿದ್ಯೆ, ಸೂಫಿಪಥದ ನಾಲ್ಕನೆಯ ಹಂತ ಉಳಿದ ಮೂರು ಹಂತಗಳೆಂದರೆ ಕ್ರಮವಾಗಿ–ಷರೀಯತ್, ತರೀಖತ್ ಹಾಗೂ ಹಕೀಕತ್

ಮೌಜಾ – ಗ್ರಾಮ, ಹಳ್ಳಿ

ಮಜಾರ್ – ಸಮಾಧಿ, ದರ್ಗಾ, ಜಿಯಾರತ್‌ಗೈಯುವ ಸ್ಥಳ

ಮೌಜಿಜಾ – ಪೈಗಂಬರರಿಂದ ಪ್ರಕಟವಾಗುವ ಪವಾಡಗಳು

ಮುಆಮಲಾ – ಜಿಲ್ಲೆ

ಮಿರಾಜ್ – ಹಜ್ರತ್ ಮುಹಮ್ಮದ್ (ಸ) ಪೈಗಂಬರರು ಆಕಾಶಗಾಮಿಯಾಗಿ ಅಲ್ಲಾಹುವಿನ ದರ್ಶನಗೈದುದು

ಮೋಮಿನ್ – ಸತ್ಯವಿಶ್ವಾಸಿಕ, ಅಲ್ಲಾಹುವಿನ ಮೇಲೆ ದೃಢವಿಶ್ವಾಸವಿಟ್ಟವನು

ಮುಆಮುಲಾತ್ – ಮಾನವೀಯ ಸಂಬಂಧ, ಇಸ್ಲಾಮಿನ ಕಾನೂನಲ್ಲಿ ಬರುವ ಸಾಮಾಜಿಕ ಸಂಬಂಧಗಳು, ಸೂಫಿಗಳಲ್ಲಿ ಅವರ ದಿನನಿತ್ಯ ಕಾರ್ಯಚಟುವಟಿಕೆಗಳು

ಮುಫ್ತಿ – ಧಾರ್ಮಿಕ ವಿದ್ವಾಂಸ ಹಾಗೂ ಇಸ್ಲಾಮೀ ಕಾನೂನಿನ ಪಂಡಿತ, ಫತ್ವಾ ನೀಡುವ ಅಧಿಕಾರವುಳ್ಳವನು

ಮುಬ್ತದಿ – ಪ್ರಾರಂಭಿಸುವವ

ಮುಜದ್ದಿದ್ – ಪುನರುದ್ಧಾರಕ

ಮುಜಾಹಿದ್ – ಲೌಕಿಕ ಪ್ರೇರಣೆಗಳನ್ನು ತಡೆಯಲು ನಿರಣತರವಾಗಿ

		ಪ್ರಯತ್ನಿಸುವವ, ಇಂದ್ರಿಯನಿಗ್ರಹಗೈಯ್ಯುವವ, ಅಲ್ಲಾಹುವಿನ ಸಂಪ್ರೀತಿಗಾಗಿ ಹೋರಾಡುವವ
ಮುಕಾಶಫಾ	–	ಪ್ರಕಟಗೊಂಡ
ಮುನಾಫಿಕ್	–	ವಂಚಕ, ಕಪಟಿ, ಬಹಿರಂಗವಾಗಿ ಅಲ್ಲಾಹುವನ್ನು ಆರಾಧಿಸುವ ಏಕದೇವಾರಾಧಕ ಮುಸ್ಲಿಮ್‌ನಂತೆ ಕಂಡುಬರುವ ಆದರೆ ಅಂತರಂಗದಲ್ಲಿ ಅಲ್ಲಾಹುವನ್ನು ನಿರಾಕರಿಸುವವ, ಡಾಂಭಿಕ
ಮುರಾಖಬಾ	–	ಏಕಾಗ್ರಚಿತ್ತದೊಂದಿಗೆ ಅಲ್ಲಾಹುವನ್ನು ಸ್ಮರಿಸುವದು, ಧ್ಯಾನ ಮುರಾಖಬತ್ ಆಧ್ಯಾತ್ಮಿಕ ಸಂವಹನ
ಮುರೀದ್	–	ಇಚ್ಛುಕ, ಆಸ್ಥೆಯುಳ್ಳವ, ವಿಧೇಯ, ಶಿಷ್ಯ, ಅನುಯಾಯಿ, ಶೃದ್ಧಾಳು, ಮುರೀದ್ ಎಂದರೆ ಪೀರ್‌ರಿಂದ ಅಥವಾ ಮುರ್ಷಿದ್‌ರಿಂದ ಬೈಯತ್ ಹೊಂದಿ ಆಯಾ ಪರಂಪರೆಯಲ್ಲಿ ಪರಿಗಣಿಸಲ್ಪಡುವವ, ಆದರೆ ಮುರೀದನು ಬೇರೆಯವರಿಗೆ ಬೈಯತ್ ನೀಡುವ ಅಧಿಕಾರ ಹೊಂದಿರುವದಿಲ್ಲ
ಮುರ್ಷಿದ್	–	ಉಪದೇಶಕ, ನೇರವಮಾರ್ಗ ತೋರುವವ, ಮಾರ್ಗದರ್ಶಕ, ಸತ್ಯಮಾರ್ಗದಲ್ಲಿ ನಡೆಸುವವ, ಆಧ್ಯಾತ್ಮಿಕ ಗುರು, ಮುರ್ಷಿದ್ ಎಂದರೆ ಖಾನಖಾಹ್‌ದ ಮುಖ್ಯಸ್ಥ ಅಥವಾ ಪೀರ್, ಮುರೀದ್‌ರ ಮಾರ್ಗದರ್ಶಕ
ಮುನಾಜಾತ್	–	ಪ್ರಾರ್ಥನೆ, ಕೋರಿಕೆ, ಅಲ್ಲಾಹುವಿನ ಸ್ತುತಿ–ಗೀತೆ ಹಾಗೂ ಇದರಲ್ಲಿ ಅಲ್ಲಾಹುವಿನ ದಾಸನು ವಿನಮ್ರನಾಗಿ ಬೇಡಿಕೊಳ್ಳುವದು, ಅಲ್ಲಾಹುವಿಗೆ ಮೊರೆಹೋಗುವದು
ಮುಷಾಹದಾ	–	ದರ್ಶನ, ಅಲ್ಲಾಹುವಿನ ಪ್ರಕಾಶದ ದರ್ಶನಗೈಯುವಿಕೆ, ಅಲ್ಲಾಹು ಹಾಗೂ ಆತನ ದಾಸನ ಮಧ್ಯೆ ಬಹಳಷ್ಟು ತಡೆಗೋಡೆಗಳಿವೆ, ಅಲ್ಲಾಹುವಿನ ದಾಸನು ಧೃಢವಿಶ್ವಾಸದೊಂದಿಗೆ ಲೋಕದ ಆಕರ್ಷಣೆಗಳನ್ನು ತಡೆದು ಅಲ್ಲಾಹುವಿನತ್ತ ಏಕಾಗ್ರಚಿತ್ತನಾಗಿ ಅಲ್ಲಾಹುವಿನ

		ಸಾಮಿಪ್ಯ ಬಯಸಿ ಅವನ ಸ್ಮರಣೆಯಲ್ಲಿ ತಲ್ಲೀನನಾದಾಗ ಅಲ್ಲಾಹುವು ಒಂದೊಂದೇ ತಡೆಯನ್ನು ದೂರಿಕರಿಸುವನು ಹಾಗೂ ಅಲ್ಲಾಹುವಿನ ಪ್ರಕಾಶವು ದಾಸನ ಪರಿಶುದ್ಧ ಹೃದಯದಲ್ಲಿ ಪ್ರಕಟಗೊಳ್ಳುವದು.
ಮುಸ್ಲಿಮ್	–	ಅಲ್ಲಾಹುವಿನ ವಿಧೇಯದಾಸ, ಇಸ್ಲಾಮ್ ಧರ್ಮದ ಅನುಯಾಯಿ
ಮುತ್ತಖಿ	–	ಪಾಪದಿಂದ ದೂರವಿರುವವ, ದೇವಭೀರು
ಮುತುವಕ್ಕಿಲ್	–	ಸಂಪೂರ್ಣವಾಗಿ ಅಲ್ಲಾಹುವಿಗೆ ಸಮರ್ಪಿಸಿಕೊಂಡವ, ಅಲ್ಲಾಹುವಿಗೆ ಸಂಪೂರ್ಣವಾಗಿ ನಂಬುವವ
ನಫ್ಸ್	–	ಅಹಂ, ಇಂದ್ರಿಯ
ಇಲ್ಮೇ ನುಜೂಮ್	–	ಜ್ಯೋತಿರ್ವಿದ್ಯೆ
ನಫ್ಸೆ ಅಮ್ಮಾರಾ	–	ಕೆಡುಕಿನೆಡೆಗೆ ಸೆಳೆಯುವ ಮನಸ್ಸು, ಮನುಷ್ಯನ ಮೇಲೆ ಅಧಿಕಾರ ಸ್ಥಾಪಿಸಿದ ಮನಸ್ಸು
ನಫ್ಸೆ ಲವಾಮಾ	–	ಅಪರಾಧಗೈದ ನಂತರ ಪಶ್ಚಾತ್ತಾಪಪಡುವದು, ಪಾಪಪ್ರಜ್ಞೆ
ನಫ್ಸೆ ಮುತ್ಮಯಿನಾ	–	ಅಲ್ಲಾಹುವಿನ ಆಜ್ಞೆಯನ್ನು ಶಿರಸಾ ಪಾಲಿಸುವ ಅಂತಃಪ್ರಜ್ಞೆ, ಸಂತೃಪ್ತ ಆತ್ಮ
ನಸಬ್	–	ವಂಶಾವಳಿ, ಆಧ್ಯಾತ್ಮಿಕ ಪರಂಪರೆ
ನಜ್ರ್	–	ಕುರ್‌ಆನಿನಲ್ಲಿ ಕೇವಲ ಅಲ್ಲಾಹುವಿಗೆ ಅರ್ಪಿಸುವ ವಸ್ತುವಿಗೆ 'ನಜ್ರ' ಎಂಬ ಶಬ್ದ ಬಳಸಲಾಗಿದೆ, ಕಾಣಿಕೆ, ಸೂಫಿಗಳ ದರ್ಗಾಕ್ಕೆ ಶ್ರದ್ಧಾಪೂರ್ವಕವಾಗಿ ಸಲ್ಲಿಸುವ ಕಾಣಿಕೆಗಳು
ನಿಸ್ಬತ್	–	ಆಧ್ಯಾತ್ಮಿಕ ಸಂಬಂಧ, ಸಂಲಗ್ನ
ನೂರ್	–	ಪ್ರಕಾಶ
ನೂರ್ ಏ ಮುಹಮ್ಮದಿ	–	ಆದಿಯಲ್ಲಿ ಪ್ರಪ್ರಥಮವಾಗಿ ಮುಹಮ್ಮದ್(ಸ)ರ ಪ್ರಕಾಶವು ಅಲ್ಲಾಹುವಿನಿಂದ ಪ್ರಕಟಣೆಗೊಂಡಿತು.

ಅವರ ಪ್ರಕಾಶದಿಂದ ಇಹಲೋಕ ಹಾಗೂ ಪರಲೋಕಗಳು ಅಸ್ತಿತ್ವಕ್ಕೆ ಬಂದವು. ಅವರ ಪ್ರಕಾಶನದಿಂದಲೇ ದೇವಚರರು, ಪ್ರವಾದಿವರ್ಯರು, ಸೂಫಿವರ್ಯರು ಹಾಗೂ ಸಾರ್ವಜನಿಕರು ಅಸ್ತಿತ್ವಕ್ಕೆ ಬಂದರು.

ನಖ್ಲ	–	ಹೇಳಿಕೆ, ಉಲ್ಲೇಖ, ಉದಾಹರಣೆ: ಮೌಖಿಕ ಅಥವಾ ಬರೆಯಲ್ಪಟ್ಟ ಜೀವನಚರಿತ್ರೆ ವಿಶೇಷವಾಗಿ ಸೂಫಿಗಳ ಪವಾಡಗಳು
ನವಾಬ್	–	ಮೊಘಲರು ನೀಡಿದ ಒಂದು ಬಿರುದು, ಒಂದು ಪ್ರದೇಶದ ಅಧಿಕಾರಿ, ಆಡಳಿತಗಾರ
ಪರಗಣಾ	–	ರಾಜ್ಯದ ಒಂದುಭಾಗ, ಜಿಲ್ಲೆ, ಹತ್ತರಿಂದ ಎರಡುನೂರು ಗ್ರಾಮಗಳುಳ್ಳ ಪ್ರದೇಶ
ಪೀರ್	–	ವೃದ್ಧ, ಆಧ್ಯಾತ್ಮಿಕ ಗುರು, ಮುರ್ಷಿದ್, ಮಾರ್ಗದರ್ಶಕ
ಪೀರ್‌ಜಾದಾ	–	ಪೀರ್‌ರ ಪುತ್ರ ಅಥವಾ ವಂಶಸ್ಥ ಉತ್ತರಾಧಿಕಾರಿ
ಕುಫ್ರ್	–	ಕೃತಘ್ನತೆ, ಅಧರ್ಮ, ಅಲ್ಲಾಹುವನ್ನು ನಿರಾಕರಿಸುವದು
ಕಸ್ಬಾ	–	ಹಳ್ಳಿಗಿಂತ ದೊಡ್ಡದಾದ ಪ್ರದೇಶ
ಖಾಜಿ	–	ನ್ಯಾಯಾಧೀಶ, ಇಸ್ಲಾಮಿನ ಕಾನೂನಿನಂತೆ ತೀರ್ಮಾನಗೈಯ್ಯುವವ
ಖಲಂದರ್	–	ಫಕೀರರಲ್ಲಿ 'ಸ್ವತಂತ್ರ ಪ್ರವೃತ್ತಿ'ಯುಳ್ಳ ವ್ಯಕ್ತಿ
ಖಲ್ಬ	–	ಹೃದಯ, ಆತ್ಮಸಾಕ್ಷಿ
ಖನಾತ್	–	ಅಲ್ಪದರಲ್ಲಿಯೇ ತೃಪ್ತನಾಗಿ ಸಂತಸದಿಂದಿರುವ
ಖೌಲ	–	ಹೇಳಿಕೆ
ಖವ್ವಾಲ್	–	ಸೂಫಿಗಳ ಹೇಳಿಕೆಗಳನ್ನು ಗೀತೆಯನ್ನಾಗಿ ಹಾಡುವವ
ಖಿಬ್ಲಾ	–	ನಮಾಜು ಮಾಡುವಾಗ ಮುಖ ಮಾಡುವ ದಿಕ್ಕು
ಖುಬಾ	–	ಗುಮ್ಮಟ

ರಕ್ಸ್	–	ಸೂಫಿಗಳ ಅನುಭಾವಿ ನೃತ್ಯ
ರಿಸಾಲಾ	–	ಪತ್ರಿಕೆ
ರೂಯತ್	–	ಮುಖದರ್ಶನ
ಸಫಾ	–	ಪರಿಶುದ್ಧ, ನಿರ್ಮಲ, ಪವಿತ್ರ
ಸಫರ್	–	ಯಾತ್ರೆ, ಇಸ್ಲಾಮಿನ ಒಂದು ತಿಂಗಳ ಹೆಸರು
ಸಯ್ಯಿದ್	–	ಮುಹಮ್ಮದ್(ಸ) ಪ್ರವಾದಿಯವರ ಪುತ್ರಿಯ ಸಂತಾನ
ಸಜ್ಜಾದಾ ನಶೀನ್	–	ಖಾನಖಾಹ್ ಅಥವಾ ದರ್ಗಾದ ಉತ್ತರಾಧಿಕಾರಿ
ಸಾಹಿಬ್	–	ಸಂಗಾತಿ, ಸ್ನೇಹಿತ, ಜೊತೆಗಾರ
ಸಲ್ಫ್	–	ಪೂರ್ವಜರು, ಮುಸ್ಲಿಮ್ ಸಮುದಾಯದ ಪ್ರಥಮರು
ಸಾಲಿಕ್	–	ಇಸ್ಲಾಮಿನ ಆಧ್ಯಾತ್ಮಿಕ ಪಥದಲ್ಲಿ ಸಾಗುವವ, ಅರಬ್ಬಿಯ 'ಸುಲೂಕ' ಎಂಬ ಪದದಿಂದ ನಿಷ್ಪತ್ತಿಯಾಗಿದೆ. ಇದರ ಅರ್ಥ– ಅಲ್ಲಾಹುವಿನತ್ತ ಪಯಣಿಸುವ ಅಧ್ಯಾತ್ಮಿಕ ಹಾದಿ, ಸಾಲಿಕ್ ಆಗಬೇಕೆಂದರೆ ಕಡ್ಡಾಯವಾಗಿ ಷರೀಯತ್ ನಿಯಮಗಳನ್ನು ಹಾಗೂ ಹಕೀಕತ್ ಎಂದರೆ ಅಲ್ಲಾಹುವಿನೊಂದಿಗೆ ಆತ್ಮ ಸಂಗಾತ– ಪಾಲಿಸುವವ, ಸಾಲಿಕ್‌ನಿಗೆ ಮುರೀದ್ ಎಂತಲೂ ಕರೆಯುವರು. ಆಧ್ಯಾತ್ಮಿಕ ಗುರುವಿನ ಶಿಷ್ಯತ್ವ ಪ್ರಾಪ್ತಿಯಾದಾಗ ಸಾಲಿಕ್ ಮುರೀದ್‌ನಾಗುವನು. ಲೌಕಿಕ ಹಾಗೂ ಪಾರಲೌಕಿಕ ಪ್ರೇಮವುಳ್ಳವ
ಸಮಾಅ	–	ಸೂಫಿ ಸಂಗೀತ, ಆಧ್ಯಾತ್ಮಿಕ ಪರಾಕಾಷ್ಠೆಗೆ ತಲುಪಲು, ದೈವಿಪರವಶತೆ ಹೊಂದಲು ಆಧ್ಯಾತ್ಮಿಕ ಗೀತೆಗಳಲ್ಲಿ ತಲ್ಲೀನರಾಗಿ ಸೂಫಿ ಸಂಗೀತದ ಸಾಂಗತ್ಯದೊಂದಿಗೆ ತನ್ಮಯರಾಗುವದು, ಕೂಟ
ಶಗ್ಲ	–	ಆಧ್ಯಾತ್ಮಿಕ ಪರಿಶ್ರಮ, ಧ್ಯಾನದಲ್ಲಿಯ ಏಕಾಗ್ರಚಿತ್ತತೆ
ಸನದ	–	ರಾಜದತ್ತಿ
ಶೇಖ್	–	ಸೂಫಿಗಳಿಗೆ ಹಾಗೂ ಹಿರಿಯರಿಗೆ ಸಲ್ಲಿಸುವ

		ಗೌರವಪದ, ಅರಬ್ ಪ್ರದೇಶದಿಂದ ಆಗಮಿಸಿದ ಮುಸ್ಲಿಂ, ಪೀರ್, ಮುರ್ಷಿದ್ ಖಾನಖಾಹ್‌ದ ಮುಖ್ಯಸ್ಥ
ಶಹೀದ್	–	ಹುತಾತ್ಮ
ಷರಿಯಾ, ಷರಿಯತ್	–	ಅಲ್ಲಾಹುವಿನ ಕಾನೂನು, ಇಸ್ಲಾಮಿನ ಕಾನೂನಿನಂತೆ
ಶಿಜ್ರಾ	–	ವಂಶಾವಳಿ
ಶಿರ್ಕ್	–	ಅಲ್ಲಾಹುವಿನೊಂದಿಗೆ ಸಹಭಾಗಿಗಳಾಗಿಸುವದು, ಅಲ್ಲಾಹುವಿನೊಂದಿಗೆ ಅನ್ಯದೈವಗಳನ್ನು ಆರಾಧಿಸುವದು, ಬಹುದೇವೋಪಾಸನೆ
ಸಿಲ್‌ಸಿಲಾ	–	ಸರಪಳಿ, ಸೂಫಿ ತಾತ್ವಿಕ ಪರಂಪರೆ
ಸಿರ್	–	ರಹಸ್ಯ
ಸೂಫಿ	–	ಆಧ್ಯಾತ್ಮಿಕ ಹಾದಿಯಲ್ಲಿ ಸಾಗುವವ, 'ತೌಹೀದ್'(ಏಕದೇವವಾದ) ಅನುಸರಿಸುವವ
ಸುಲೂಕ್	–	ನಿಯಮ, ಅಲ್ಲಾಹುವಿನ ಸಾಮಿಪ್ಯ ಬಯಸುವದು
ಸುನ್ನಾಹ್	–	ಅಲ್ಲಾಹುವಿನ ಪ್ರವಾದಿ ಮುಹಮ್ಮದ್(ಸ)ರ 'ನಡೆನುಡಿ'
ತಬರ್‍ರುಕ್	–	ಪ್ರಸಾದ
ತಫ್ಸಿರ್	–	ಕುರ್‌ಆನಿನ ವ್ಯಾಖ್ಯಾನ
ತಫ್ವಿಜ್	–	ತನ್ನನ್ನು ತಾನು ಸಮರ್ಪಣಭಾವದೊಂದಿಗೆ ಅಲ್ಲಾಹುವಿಗೆ ಅರ್ಪಿಸಿಕೊಳ್ಳುವದು
ತಾಇಫಾ	–	ಸಮುದಾಯ, ಸಂಸ್ಥೆ, ಸೂಫಿ ಪರಂಪರೆ
ತಜಲ್ಲಿ	–	ದಿವ್ಯಪ್ರಭೆ, ರಹಸ್ಯಭೇದ, ಪ್ರಕಾಶಮಯವಾಗುವದು, ಸೂಫಿಗಳ ದೃಷ್ಟಿಯಲ್ಲಿ ಮನುಷ್ಯನಲ್ಲಿಯ ತಮೋಗುಣಗಳ ಮೋಡಗಳನ್ನು ಭೇದಿಸಿ ಸತ್ಯದ ಸೂರ್ಯನು ಉದಯಿಸುವನು
ತಜ್‌ರಿದ್	–	ಏಕಾಂತಪ್ರಿಯ, ಗುಂಪು–ಗದ್ದಲಗಳಲ್ಲಿಯೂ ಏಕಾಂಗಿಯಾಗಿರಲು ಬಯಸುವದು

ತಕಿಯಾ – ಸೂಫಿಗಳ ವಾಸಸ್ಥಳ

ತಾಲಿಬ್ – ಹುಡುಕುವವ, ಕುತೂಹಲಿ, ಉಮೇದುವಾರ

ತಲ್ಖೀನ್ – ಕಲಿಸುವದು, ಉಪದೇಶಿಸುವದು, ಶಿಕ್ಷಣ ಹಾಗೂ ತರಬೇತಿ, ಸೂಫಿಗಳ ಪ್ರಾರಂಭಿಕ ಶಿಕ್ಷಣ ಇದರಲ್ಲಿ ಆಧ್ಯಾತ್ಮಿಕ ಗುರುಗಳು ಹಲವಾರು ರಹಸ್ಯಗಳನ್ನು ಕಲಿಸಿಕೊಡುವರು

ತಖ್ವಾ – ಅಲ್ಲಾಹುವಿನ ಭಯವಿಡುವದು, ತನ್ನನ್ನು ತಾನು ಪಾಪಗಳನ್ನು ಮಾಡದಂತೆ ಉಳಿಯುವದು ಧರ್ಮನಿಷ್ಠೆ

ತರೀಖಾ – ಅಲ್ಲಾಹುವನ್ನು ಸೇರುವ ಆಧ್ಯಾತ್ಮಿಕ ಪಥ, ಮಾರ್ಗ, ಹಾದಿ, ಸೂಫಿ ಜ್ಞಾನಶಾಖೆಯ ಒಂದು ಮಾರ್ಗ

ತರ್ಕ್ – ತ್ಯಜಿಸುವದು, ಇಂದ್ರಿಯನಿಗ್ರಹಕ್ಕಾಗಿ ಇಂದ್ರಿಯಲೋಲು ಪತನ ಬಿಟ್ಟುಕೊಡುವದು, ವಿರಕ್ತಿ, ವೈರಾಗ್ಯ

ತರೀಖತ್ – ಹೃದಯ ಶುದ್ಧಿ, ಸೂಫಿಗಳ ಈ ವಿಧಾನದಿಂದ ಆತ್ಮಕ್ಕೆ ಬಲ ಸಿಗುತ್ತದೆ, ಸೂಫಿ ಸೌಹಾರ್ದ

ತೌಹೀದ್ – 'ಅಲ್ಲಾಹು' ಒಬ್ಬನೇ ದೇವನು, ಏಕದೇವೋಪಾಸನೆ ಅಲ್ಲಾಹುವಿನ ಹೊರತಾಗಿ ಅನ್ಯದೇವನಿಲ್ಲ ಎಂಬುದರ ಮೇಲೆ ಧೃಢನಂಬಿಕೆ, ಅಚಲ ವಿಶ್ವಾಸ, ಏಕದೇವವಾದ,

ತಸವ್ವುಫ್ – ಮಾರಿಫತ್‌ದ ಜ್ಞಾನ, ಹೃದಯದಿಂದ ಬಯಕೆಗಳನ್ನು ನಿಯಂತ್ರಿಸಿ ಅಲ್ಲಾಹುವಿನತ್ತ ಏಕಾಗ್ರಚಿತ್ತನಾಗಿ ಗಮನಹರಿಸುವದು, ಸ್ವಶೋಧನೆ

ತವಜ್ಜುಹ್ – ಮುಖಾಮುಖಿಯಾಗಿ ಗಮನಹರಿಸುವದು

ತೌಬಾ – ಪಶ್ಚಾತ್ತಾಪ, ಲಜ್ಜಿತಗೊಳ್ಳುವದು, ವಿಷಾದಗೊಳ್ಳುವದು, ಕ್ಷಮೆಯಾಚಿಸುವದು, ಪಾಪ ಹಾಗೂ ಅನುಚಿತ ಕರ್ಮಗಳನ್ನು ಭವಿಷ್ಯದಲ್ಲಿ ಮಾಡುವದಿಲ್ಲ ಎಂದು ಧೃಢ ಪ್ರತಿಜ್ಞೆ ಮಾಡುವದು

ತವಕ್ಕುಲ್ – ಅಲ್ಲಾಹುವಿನ ಮೇಲೆ ಸಂಪೂರ್ಣ ಭರವಸೆ ಇಡುವದು

ತಾವೀಜ್ – ರಕ್ಷಣೆ ನೀಡುವದು, ತಾಮ್ರ ಅಥವಾ ಕಾಗದದ ಮೇಲೆ ಸಂಖ್ಯೆ ಅಥವಾ ಅಲ್ಲಾಹುವಿನ ನಾಮಗಳಿಂದ ಭರ್ತಿ ಮಾಡಿ ತಮ್ಮ ಇಚ್ಛೆಪೂರ್ತಿಗಾಗಿ ಕೊರಳಲ್ಲಿ ಧರಿಸುವದು, ಸೂಫಿಗಳ ದೃಷ್ಟಿಯಲ್ಲಿ ಮುರಿದ್‌ನಿಗೆ ನೀಡುವ ಯಾವುದೇ ಕಾಣಿಕೆ, ಅಥವಾ ಬರೆಯಲ್ಪಟ್ಟ ಜಪಗಳನ್ನು ತನ್ನ ಅನುಯಾಯಿಗಳಿಗೆ ಸ್ಮರಿಸಲು ನೀಡುವದು

ತಜ್ಕಿರಾ – ಹೇಳಿಕೆ, ಮೌಖಿಕಪರಂಪರೆ ಅಥವಾ ಬರೆಯಲ್ಪಟ್ಟ ಜೀವನ ಚರಿತ್ರೆಯನ್ನು ಸಂಗ್ರಹಿಸುವದು

ತಜ್ಕಿಯಾಯೇನಫ್ಸ್ – ಇಂದ್ರಿಯಶುದ್ಧಿ, ಅಹಂಭಾವವನ್ನು ಹೋಗಲಾಡಿಸುವದು, ಅಹಂಭಾವದ ಲಕ್ಷಣಗಳಿಂದ ಮುಕ್ತನಾಗುವದು, ಅಸೂಯೆ, ಮದ, ಮೋಹ, ಮತ್ಸರ, ಲೋಭ, ಕಾಮ ಕ್ರೋಧಾದಿ ಅರಿಷಡ್ವರ್ಗಗಳನ್ನು ನಿಯಂತ್ರಿಸುವದು. ಮೋಸ, ವಂಚನೆ, ದಗಲ್ಬಾಜಿತನ, ಮಾಡದಿರುವಿಕೆ, ಸುಳ್ಳು ಹೇಳದಿರುವಿಕೆ ಮುಂತಾದವುಗಳಿಂದ ಮನಸ್ಸನ್ನು ಶುದ್ಧೀಕರಿಸುವದು

ಉಲ್ಮಾ – ಧಾರ್ಮಿಕ ವಿದ್ವಾಂಸರು

ಉರೂಸ್ – ವಧು, ಮುರ್ಷಿದ್ ಅಥವಾ ಮಹಾಪುರುಷರ ನಿಧನದ ದಿನಾಂಕದಂದು ಜರುಗುವ ವಾರ್ಷಿಕ ಸಮಾರಂಭ

ವಹಿ – ದಿವ್ಯವಾಣಿ, ಪೈಗಂಬರರ ಮೇಲೆ ಅಲ್ಲಾಹುವಿನ ಸಂದೇಶ ಅವತೀರ್ಣಗೊಳ್ಳುವದು

ವಜ್ದ್ – ನಿಮಗ್ನತೆ, ಆಧ್ಯಾತ್ಮಿಕ ದೈವಿಪರವಶತೆ, ಅಲ್ಲಾಹುವನ್ನು ಹೊಂದಲು ಸಂಪೂರ್ಣವಾಗಿ ನಿಮಗ್ನರಾಗುವದು, ಆತ್ಮಾನಂದ

ವಲಿ – (ಬಹುವಚನ–ಔಲಿಯಾ) ಅಲ್ಲಾಹುವಿನ ಸಾಮಿಪ್ಯ ಹೊಂದಿದವ, ಸೂಫಿ, ಸಂರಕ್ಷಕ, ಅಲ್ಲಾಹುವಿನ ಸ್ನೇಹಿತ

ಯೌಮಿಯಾ – ಸರಕಾರ ನೀಡುವ ದಿನನಿತ್ಯದ ಖರ್ಚು

ವಸ್ಲ್	–	ಮಿಲನ, ಪ್ರೇಮಿಯನ್ನು ಸಂಧಿಸುವದು
ವಸೀಲಾ	–	ಮಾಧ್ಯಮ
ಎಕ್ಸೂಯಿ	–	ಏಕಾಗ್ರತೆ
ಜಾಹಿದ್	–	ದೇವಭೀರು, ಪಾಪಗಳಿಂದ ಲೋಕವಿಮುಖ, ಉಳಿಯುವವನು, ವಿರಕ್ತ
ಜಂದಿಖ್	–	ಏಕದೇವವಾದವನ್ನು ನಂಬದವ, ಸ್ವೇಚ್ಛಾಚಾರಿ
ಜಿಕ್ರ್	–	ಕುರ್‌ಆನ್ ಪಠಣ, ನಾಲಿಗೆಯಿಂದ, ಹೃನ್ಮನಗಳಿಂದ ಅಲ್ಲಾಹುವನ್ನು ಸ್ಮರಿಸುವದು, ಸೂಫಿಗಳಲ್ಲಿ 'ಹಕ್' 'ಹಕ್' ಎಂಬ ಧ್ವನಿ ಕಂಠದಿಂದ ಹೊರಡುವ ಜಪದ ಒಂದು ಪ್ರಕಾರ, ಈ ಜಿಕ್ರ್‌ದಿಂದಾಗುವ ಲಾಭವೆಂದರೆ ಅಲ್ಲಾಹುವಿನ ಪರಿಚಯವಾಗುವದು, ಸಾಂಗತ್ಯ ಬೆಳೆಯುವದು.
ಜಿಯಾರಾಹ್/ಜಿಯಾರತ್	–	ಮಹಾಪುರುಷರ ಸಮಾಧಿಗೆ ಭೇಟಿ ನೀಡುವದು, ದರ್ಶನ ಪಡೆಯುವುದು
ಜುಲ್ಮತ್	–	ಅಂಧಕಾರ, ಅಲ್ಲಾಹುವಿನ ಸ್ಮರಣೆಯಿಲ್ಲದ ಬದುಕು

(ಸ) ಸ್ವಲ್ಲಲ್ಲಾಹು ಅಲೈಹಿ ವ ಸ್ವಲ್ಲಮ್

(ಖು) ಖುದ್ದಿಸ್ಸಿರ್ರೂಹ್, –ಖುದ್ದುಸಲ್ಲಾಹ್, –ಸಿರ್ರಲ್ಲ್‌ಜೀಜ್, ಪವಿತ್ರಗೊಂಡಿತು ಆ ಆತ್ಮ, ಈ ಸ್ವಸ್ತಿವಚನವನ್ನು ಮಹಾಪುರುಷರ ಹೆಸರಿನೊಂದಿಗೆ ಗೌರವಪೂರ್ವಕವಾಗಿ ಬರೆಯಲಾಗುತ್ತದೆ.

(ರ) ರಜಿಯಲ್ಲಾಹ್ ಅನ್‌ಹು. ಅಲ್ಲಾಹುವು ಅವರಿಂದ ಸಂಪ್ರೀತನಾದನು. ಪ್ರವಾದಿ ಸಂಗಾತಿಗಳಿಗೆ ಮೀಸಲಿರುವ ಸ್ವಸ್ತಿವಚನ

(ರ) ರಹ್ಮತ್‌ಲ್ಲಾಹ್ ಅಲೈ ಅವರ ಮೇಲೆ ಅಲ್ಲಾಹುವಿನ ಕರುಣೆ ವರ್ಷಿಸಲಿ, ಅಲೈಹಿಮ್– 'ಅಲೈ'ದರ ಬಹುವಚನ, ಇಬ್ಬರು ಮಹಾಪುರುಷರಿದ್ದರೆ– 'ಅಲೈಹಮಾ' ಎಂದಾಗುವದು.– ಮಹಿಳೆಯರಿಗೆ –ಅಲೈಹಾ ಎಂದೆನ್ನುವರು.

(ದಾ) ದಾಮತ್ ಬರಕಾತಹು

ಬಾರಾ ಇಮಾಮ್ : ಇಸ್ಲಾಮಿನ ಇಮಾಮಿಯಾ ಪಂಥದ ಬಾರಾ ಇಮಾಮ್=

ಹನ್ನೆರಡು ನಾಯಕರು. ಇವರು ಹಜ್ರತ್ ಮುಹಮ್ಮದ್ (ಸ) ರ ಅಹಲೆಬೈತ್ ಅಂದರೆ ಮುಹಮ್ಮದ್(ಸ) ಹಜ್ರತ್ ಅಲಿ, ಫಾತಿಮುಜ್ಜಹರಾ, (ರ) ಇಮಾಮ್ ಹಸನ್(ರ) ಹಾಗೂ ಇಮಾಮ್ ಹುಸೈನ(ರ)ರಿಂದ ಇರುವರು.

ಇವರು– ಬಾರಾ ಇಮಾಮ್ ಆಗಿರುವರು.

೧. ಹಜ್ರತ್ ಅಲಿ (ರ)

೨. ಹಜ್ರತ್ ಇಮಾಮ್ ಹಸನ್ (ರ)

೩. ಹಜ್ರತ್ ಇಮಾಮ್ ಹುಸೈನ್ (ರ)

೪. ಹಜ್ರತ್ ಇಮಾಮ್ ಜೈನುಲಾಬ್ದಿನ್ (ರ)

೫. ಹಜ್ರತ್ ಇಮಾಮ್ ಬಾಖರ್ (ರ)

೬. ಹಜ್ರತ್ ಇಮಾಮ್ ಜಾಫರ್ ಸಾದಿಕ (ರ)

೭. ಹಜ್ರತ್ ಇಮಾಮ್ ಮೂಸಾ ಕಾಜಿಮ್ (ರ)

೮. -----

೯. ಹಜ್ರತ್ ಇಮಾಮ್ ಮುಹಮ್ಮದ್ ನಖಿ (ರ)

೧೦. ಹಜ್ರತ್ ಇಮಾಮ್ ಮುಹಮ್ಮದ್ ತಖಿ (ರ)

೧೧. ಹಜ್ರತ್ ಇಮಾಮ್ ಹಸನ್ ಅಸ್ಕರಿ (ರ)

೧೨. ಹಜ್ರತ್ ಇಮಾಮ್ ಮೆಹದಿ (ರ) (ಪ್ರಳಯ ಕಾಲದ ಸಮೀಪ ಆಗಮಿಸುವ ಇಮಾಮ್)

ಅಲ್ಲಾಹ್ – ಜಗದೊಡೆಯು ಪಾಲನಕರ್ತ, ಸರ್ವೋಚ್ಚ. ಇಲಾಹ್‌ದಿಂದ ಅಲ್ಲಾಹ್ ಬಂದಿದೆ. ಇಲಾಹ್ ಎಂದರೆ ಆರಾಧ್ಯ, ಪೂಜ್ಯ ಎಂದರ್ಥ. ಸಮಸ್ತ ಗುಣಗಳ ಮತ್ತು ವಿಶೇಷತೆಗಳ ಆಗರಕ್ಕೆ 'ಅಲ್ಲಾಹ್' ಎಂದು ಕರೆಯಬಹುದು.

ಹಮ್ದ್ ವ ಸನಾ – ಗುಣಗಾನ, ಪ್ರಶಂಸೆ, ಅಲ್ಲಾಹುವಿನ ಹೊಗಳಿಕೆ, ಕೃತಜ್ಞತೆಯ ಅಭಿವ್ಯಕ್ತಿ

ನಾತ್	–	ಶ್ಲಾಘನೆ, ಪ್ರಮುಖವಾಗಿ ಮುಹಮ್ಮದ್(ಸ)ರ ಗುಣಗಾನಗೈಯುವದು
ತಸಬಿಹ್	–	ಪರಿಶುದ್ಧ ಮನದಿಂದ ಅಲ್ಲಾಹುವನ್ನು ಸ್ಮರಿಸುವದು, ಅಲ್ಲಾಹನ ಮಹಾನತೆಯ ವರ್ಣನೆ, ಜಪಮಾಲೆ, ಜಪಮಣಿ, ತಲೆಬಾಗಿ ದಂಡವತ (ಸಜ್ದಾ) ಮಾಡುವುದೆಂಬ ಅರ್ಥ ಈ ಶಬ್ದದಲ್ಲಿದೆ. ಜಗತ್ತಿನ ಎಲ್ಲಾ ವಸ್ತುಗಳು 'ತಸಬೇಹ' ಮಾಡುತ್ತಿವೆ. ಎಂದು ಕುರ್‌ಆನ್‌ನಿಂದ ತಿಳಿಯುತ್ತದೆ. ಈ ಜಗತ್ತಿನಲ್ಲಿರುವ ಎಲ್ಲಾ ವಸ್ತುಗಳು ಅಲ್ಲಾಹುವಿನ ಮಹಾನತೆಯ ಸಾಕ್ಷಿಯಾಗಿವೆ. ಅವನ ಆಜ್ಞೆ ಹಾಗೂ ಶಾಸನದ ಮುಂದೆ ತಲೆಬಾಗಿವೆ.
ತಹಜ್ಜೂದ್	–	ನಿದ್ದೆ ಬಿಟ್ಟು ಏಳುವದು. ರಾತ್ರಿ ಮಲಗಿ ಒಂದು ಹೊತ್ತಿನ ನಂತರ ಎಚ್ಚರಗೊಂಡು ಮಾಡುವ 'ನಮಾಜಿಗೆ' ತಹಜ್ಜುದ್ ಎಂಬ ಹೆಸರಿದೆ. ಇದರಿಂದ ಆತ್ಮವಿಶ್ವಾಸ ಹಾಗೂ ಚಾರಿತ್ರ್ಯದ ನಿರ್ಮಾಣವಾಗುತ್ತದೆ.
ಮರ್ಸಿಯಾ	–	ಮೃತನ ಗುಣಗಾನ ಕಾವ್ಯದ ರೂಪದಲ್ಲಿ ಕೇಳುಗರಿಗೆ ಕರುಣೆ, ಅನುಕಂಪ, ಮೂಡುವಂತೆ ಪ್ರಸ್ತುತಪಡಿಸುವದು
ಜಕಾತ್	–	೧. ಶುದ್ಧವಾಗುವುದು ೨. ಪವಿತ್ರಗೊಳ್ಳುವುದು ೩. ಬೆಳೆಯುವುದು ೪. ವಿಕಾಸಗೊಳ್ಳುವುದು ಈ ಅರ್ಥದಲ್ಲಿ ಜಕಾತ್ ಶಬ್ದ ಅರಬ್ಬಿ ಭಾಷೆಯಲ್ಲಿ ಬರುತ್ತದೆ. ತಮ್ಮ ದುಡಿಮೆ ಅಥವಾ ಐಶ್ವರ್ಯದಿಂದ ನಿಶ್ಚಿತಮೊತ್ತವನ್ನು ತೆಗೆದು ಅಲ್ಲಾಹ್‌ನ ಆದೇಶಾನುಸಾರ ವ್ಯಯ ಮಾಡುವದಕ್ಕೆ ಪಾರಿಭಾಷಿಕ ಶಬ್ದ 'ಜಕಾತ್' ಆಗಿದೆ. ಯಾತ್ರಿಕರ, ಬಡವರ, ದುಃಖಿಗಳ ಸೇವೆ ಮಾಡುವದು. ಸಾಲವುಳ್ಳ ವ್ಯಕ್ತಿಗಳ ಸಾಲ ತೀರಿಸುವದು.

ಅಲ್ಲಾಹನ ಧರ್ಮಕ್ಕಾಗಿ ವೆಚ್ಚ ಮಾಡುವದು. ಇದರಿಂದ ಮನುಷ್ಯನ ಆತ್ಮಶುದ್ಧಿಯಾಗುತ್ತದೆ.

ಜನ್ನತ್ – ಸ್ವರ್ಗ, ಸ್ವರ್ಗೋದ್ಯಾನ, ಆಖಿರತ್‌ನ ನಂತರ ಅಲ್ಲಾಹನು ತನ್ನ ಆಜ್ಞಾಕಾರಿ ದಾಸರಿಗೆ ಕೊಡುವಂತಹ ಸ್ಥಾನ, ನಿರಂತರ ಸುಖ ಮತ್ತು ನಿತ್ಯಾನಂದ

ಸೌಮ್ (ರೋಜಾ)– ಉಪವಾಸ ವ್ರತ, ಉಪವಾಸ ವ್ರತದಲ್ಲಿದ್ದಾಗ ಮನುಷ್ಯನು ಅರುಣೋದಯಕ್ಕೆ ಮುಂಚಿನ ಕಾಲದಿಂದ ಹಿಡಿದು ಸೂರ್ಯಾಸ್ತದವರೆಗೂ ಅನ್ನ, ನೀರು, ಸ್ತ್ರೀಪ್ರಸಂಗ ಇತ್ಯಾದಿಯಿಂದ ದೂರವಿರುತ್ತಾನೆ. ಹೃದಯ ಮತ್ತು ಆತ್ಮಶುದ್ಧಿ ಹಾಗೂ ಆಧ್ಯಾತ್ಮಿಕ ಮತ್ತು ನೈತಿಕ ವಿಕಾಸಕ್ಕೋಸ್ಕರ ಉಪವಾಸವ್ರತ ಇಡುವದು ಅತ್ಯಾವಶ್ಯಕ. ಇದರಿಂದ ಮನುಷ್ಯನಲ್ಲಿ ಸಂಯಮ. ಧರ್ಮ ಪಾರಾಯಣತೆ ಮತ್ತು ಅಲ್ಲಾಹ್‌ನ ಭಯ ಬಂದುಬಿಡುತ್ತದೆ. ಹೀಗಾಗಿ ಅವನು ಅಲ್ಲಾಹ್‌ನ ಆಜ್ಞೋಲ್ಲಂಘನೆ ಮಾಡುವದಿಲ್ಲ.

ಹಿಜ್ರತ್ – ಸ್ವದೇಶ ತ್ಯಾಗ, ಅಲ್ಲಾಹನಿಗೋಸ್ಕರ ತಮ್ಮ ಮನೆ ಮಠವನ್ನು ಬಿಡುವದು. ಪ್ರವಾದಿ ಮುಹಮ್ಮದ್ (ಸ.ಅ.ಸ)ರವರು ಮಕ್ಕಾ ತ್ಯಜಿಸಿ ಮದೀನಾಕ್ಕೆ ಹೋದದ್ದು

ಅರ್ಶ್ – ದೈವೀ ಸಿಂಹಾಸನ, ಅಲ್ಲಾಹನು ಅರ್ಶ್ ಮೇಲೆ ರಾರಾಜಿಸುವನು

ಅಜಾಬ್ – ಯಾತನೆ, ದಂಡನೆ, ಶಿಕ್ಷೆ, ದುಃಖ, ಸಂಕಟ, ಅಲ್ಲಾಹನ ಆಜ್ಞೋಲ್ಲಂಘನೆ ಮಾಡಿದವರ ಮೇಲೆ ಈ ಲೋಕದಲ್ಲಿ ಹಾಗೂ ಪರಲೋಕದಲ್ಲಿ ಬರುವಂತಹ ವಿನಾಶ

ಆಖೀರತ್ – ಪರಲೋಕ, ಪಾರಲೌಕಿಕ ಜೀವನ

ಕಾಬಾ – ಮಕ್ಕಾದಲ್ಲಿರುವ ಅಲ್ಲಾಹ್‌ನ ಪವಿತ್ರ ಗೃಹ

ಕಿಬ್ಲಾ – ನಮಾಜು ಮಾಡುವಾಗ ಮುಖ ಮಾಡುವ ದಿಕ್ಕು

ದೀನ್ – ಧರ್ಮ, ಜೀವನಕ್ರಮ

ರಸೂಲ್ – ಸಂದೇಶವಾಹಕ, ಪೈಗಂಬರ್, ನಬಿ, 'ರಸೂಲ್' ಹಾಗೂ 'ನಬಿ'ಯಲ್ಲಿ ಸ್ವಲ್ಪ ವ್ಯತ್ಯಾಸವಿದೆ. ದಿವ್ಯಗ್ರಂಥ ದೊರಕಿದ ಪ್ರವಾದಿಗಳಿಗೆ 'ರಸೂಲ್' ಎಂದು ಕರೆಯುತ್ತೇವೆ.

ವುಜೂ – ನಮಾಜು ಮಾಡುವದಕ್ಕಿಂತ ಮುಂಚೆ ಬಾಹ್ಯಶುದ್ಧಿಗಾಗಿ ಕೈಕಾಲು-ಮುಖ ತೊಳೆದುಕೊಳ್ಳುವದು

ಸಹೀಫಾ – ಬರೆದಿರುವ ಪರ್ಣ, ಪುಟ, ಅಥವಾ ಪತ್ರ

ಹಿಕ್ಮತ್ – ವಿವೇಕ, ಬುದ್ಧಿವಂತಿಕೆ, ತತ್ವಜ್ಞಾನ, ವಾಸ್ತವಿಕವಾಗಿ ಹಿಕ್ ಮತ್ತು ಈವಾನ್ ಹಾಗೂ ಕರ್ಮದ ಧೃಢಾಧಾರದ ಹೆಸರಾಗಿತ್ತು

ಕೀಮಿಯಾ – ರಸವಿದ್ಯೆ

ತರಾವಿಹ್ – ಐದು ಹೊತ್ತಿನ ಕಡ್ಡಾಯ ನಮಾಜ್ ಹೊರತುಪಡಿಸಿ ರಂಜಾನ್ ತಿಂಗಳಲ್ಲಿ ರಾತ್ರಿಯಲ್ಲಿ ವಿಶೇಷವಾಗಿ ಸಲ್ಲಿಸುವ ನಮಾಜ್

■ ■

ಆದಿಲಶಾಹಿ ಅರಸು ಮನೆತನ ವಿಜಾಪುರದವರಾದ ನಮಗೆಲ್ಲ ಒಂದು ಹೆಮ್ಮೆ. ರಾಜಕೀಯ ಇತ್ಯಾದಿಗಳನ್ನು ಬಿಟ್ಟರೂ ಶಿಲ್ಪ-ಸಾಹಿತ್ಯಕ್ಷೇತ್ರಗಳಿಗೆ ಅದು ನೀಡಿದ ಕೊಡುಗೆ ಲೋಕಮಾನ್ಯವಾದುದು. ಈ ಕೊಡುಗೆಗಳಲ್ಲಿ ಶಿಲ್ಪದ ಬಗ್ಗೆ ಆಗಾಗ ಆಸಕ್ತಿ ವಹಿಸಿದ ನಾವು, ಸಾಹಿತ್ಯವನ್ನು ಅಲಕ್ಷಿಸುತ್ತ ಬಂದಿದ್ದೇವೆ. ಇದಕ್ಕೆ ಕಾರಣ, ಈ ಸಾಹಿತ್ಯ ದಖಣಿ ಉರ್ದು, ಪರ್ಶಿಯನ್‌ಗಳೆಂಬ ಅಪರಿಚಿತ ಭಾಷೆಗಳಲ್ಲಿರುವುದು ಮತ್ತು ಬಹಳಷ್ಟು ಕೃತಿಗಳು ಅಪ್ರಕಟಿತವಾಗಿರುವುದು. ಹೀಗಿದ್ದೂ ನಮ್ಮ ಸಾಂಸ್ಕೃತಿಕ ಆಸ್ತಿಯಾಗಿರುವ ಈ ಸಾಹಿತ್ಯದ ರಕ್ಷಣೆ, ಅನುವಾದ, ಪ್ರಸಾರ ನಮ್ಮ ಕರ್ತವ್ಯವಾಗಿದೆ.

ಇಂತಹ ಕಾರ್ಯಗಳನ್ನು ಪೂರೈಸುತ್ತ ಬಂದ ನಮ್ಮ 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಯ ಮೂಲಕ ಈ ಕರ್ತವ್ಯವನ್ನು ಈಡೇರಿಸಲು ಯೋಚಿಸಿದ ಫಲ 'ಆದಿಲಶಾಹಿ ಸಾಹಿತ್ಯ ಪ್ರಕಟನ ಯೋಜನೆ'. ಈ ಕಾರ್ಯ ಭಾವಿಸಿದಷ್ಟು ಸುಲಭವಲ್ಲ. ಅಲ್ಲಲ್ಲಿ ಚದರಿ ಹೋಗಿರುವ ಪ್ರಕಟಿತ-ಅಪ್ರಕಟಿತ ಕೃತಿಗಳನ್ನು ಶೋಧಿಸುವ, ಸಂಗ್ರಹಿಸುವ, ಅನುವಾದಿಸುವ, ಪರಿಷ್ಕರಿಸಿ ಪ್ರಕಟಿಸುವ ಹಂತಗಳಲ್ಲಿ ವಿದ್ವಾಂಸರು ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಯೋಜಕರಾದ ಡಾ.ಎಂ.ಎಂ.ಕಲಬುರ್ಗಿಯವರು, ಆದಿಲಶಾಹಿ ಅಭ್ಯಾಸಿಗಳಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿಯವರು ಈ ಯೋಜನೆಯ ಹೊಣೆಹೊತ್ತಿದ್ದಾರೆ. ಸಲಹಾಸಮಿತಿಯ ಸದಸ್ಯರು-ಅನುವಾದಕರು ಈ ಕಾರ್ಯದಲ್ಲಿ ಆಸ್ಥೆವಹಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಆಕರ ಸಂಪತ್ತು ಹೊರಬರುತ್ತಲಿರುವುದು ಸಂತೋಷದ ಸಂಗತಿಯಾಗಿದೆ.

ಎಂ. ಬಿ. ಪಾಟೀಲ

ಅಧ್ಯಕ್ಷರು, ಬಿ.ಎಲ್.ಡಿ.ಇ ಸಂಸ್ಥೆ, ಬಿಜಾಪುರ
ಜಲಸಂಪನ್ಮೂಲ ಸಚಿವರು, ಕರ್ನಾಟಕ ಸರಕಾರ

ಮುದ್ರಣ : ಪ್ರಿಂಟ್ ಪಾಯಿಂಟ್, ಮೊ : 97390 67359